॥ ಶ್ರೀ ಲಕ್ಷ್ಮೀನರಸಿಂಹಾಯ ನಮಃ ॥

॥ ಶ್ರೀ ಜಗನ್ನಾಥವಿಠ್ಠಲ ಪ್ರಸನ್ನ ॥

# ಸಂಧಿ (೬)

# "ಪಂಚಮಹಾಯಜ್ಞ ಸಂಧಿ"

**ಸಂಧಿಯ ಸಾರ :–**

ಹಿಂದಿನ ಐದು ಸಂಧಿಗಳಲ್ಲಿ ಅಪರೋಕ್ಷೀಕೃತಶ್ರೀಶರಾದ ಶ್ರೀ ಜಗನ್ನಾಥದಾಸವರ್ಯರು ತಾರತಮ್ಯೋಕ್ತ ಕ್ರಮದಲ್ಲಿ ಈ ಗ್ರಂಥದ ಪ್ರತಿಪಾದ್ಯನಾದ ಶ್ರೀ ಲಕ್ಷ್ಮೀನರಸಿಂಹಾಭಿನ್ನ ಜಗನ್ನಾಥವಿಠ್ಠಲಾತ್ಮಕ ಶ್ರೀಹರಿಯನ್ನು ಸ್ತೋತ್ರಮಾಡಿ, ಅವನ ಕಾರುಣ್ಯಾತಿಶಯವನ್ನು ಅನೇಕ ದೃಷ್ಟಾಂತಗಳಿಂದ ಹೃದಯಂಗಮವಾಗಿ ಕೊಂಡಾಡಿ, ಅಣುರೇಣುತೃಣಕಾಷ್ಠಾದಿ ಸಮಸ್ತ ಪದಾರ್ಥಗಳಲ್ಲಿ ಪರಿಪೂರ್ಣನಾಗಿ ಸರ್ವತ್ರ ವ್ಯಾಪ್ತನಾದ ಶ್ರೀ ಪುರುಷ ನಾಮಕ ಪರಮಾತ್ಮನ ಮಹಿಮಾ ವಿಶೇಷಗಳನ್ನು ನಿರೂಪಿಸಿ, ಭೋಜನ ಯೋಗ್ಯವಾದ ಸಮಸ್ತ ಆಹಾರ ಪದಾರ್ಥಗಳಲ್ಲಿ ಚಿಂತಿಸಬೇಕಾದ ಹಾಗೂ ಭೋಜನಮಾಡತಕ್ಕ ಭೋಕ್ತೃಗಳಲ್ಲಿ ಅಂತರ್ಗತ ಭಗವದ್ರೂಪಗಳ ಖಂಡಾಖಂಡ ರೂಪಗಳ ಸಮಗ್ರ ಚಿತ್ರಣವನ್ನೇ ಸಾಧಕರ ಮುಂದಿಟ್ಟು, ಅಂತಹ ಅಪಾರ ಮಹಿಮಾಸಂಪನ್ನನೂ, ಅಚಿಂತ್ಯಾದ್ಭುತ ಚರಿತ್ರನೂ ಆದ ಶ್ರೀಹರಿಯ ವಿಭೂತಿರೂಪಗಳನ್ನು ವಿಶೇಷಾಧಿಷ್ಠಾನಗಳಲ್ಲಿ ಚಿಂತಿಸಬೇಕಾದ ಕ್ರಮವನ್ನು ತಿಳಿಸಿ, ಪ್ರಸಕ್ತ ಸಂಧಿಯಾದ ಈ ಆರನೆಯ ಸಂಧಿ **ಪಂಚಮಹಾಯಜ್ಞಸಂಧಿಯನ್ನು** ಪ್ರಾರಂಭಿಸುತ್ತಾರೆ.

ತಾಯಿ, ತಂದೆ, ಭೂಮಿ, ನೀರು ಮತ್ತು ಆಕಾಶ–ಈ ಐದು ಅಧಿಷ್ಠಾನಗಳೇ ಪಂಚಾಗ್ನಿಗಳು. ಇವುಗಳಲ್ಲಿ ಅಂತರ್ಗತನಾದ ಶ್ರೀಮನ್ನಾ

ರಾಯಣನ ಮೂವತ್ತು ಭಗವದ್ರೂಪಗಳ ವ್ಯಾಪಾರ ವ್ಯಾಪ್ತಿಗಳನ್ನು ಚಿಂತಿಸುತ್ತಾ, ದಿವಸವೆಂಬ ಕಾಷ್ಠವನ್ನು ಕಾಲಾಂತರ್ಗತ ಪರಮಾತ್ಮನಿಗೆ ಪಂಚಾಗ್ನಿಯಜ್ಞವೆಂಬ ಈ ಮಹಾಪೂಜೆಯಲ್ಲಿ ಅರ್ಪಿಸುತ್ತಾ ಜಗತ್ಪಾವನನಾದ ಆನಂದ ಉದ್ರಿಕ್ತ ವಸ್ತುವಾದ ಆ ಜ್ಞಾನಾನಂದಾತ್ಮನನ್ನು ಮುಕ್ತಿಸುಖಕ್ಕಾಗಿ ಪ್ರಾರ್ಥಿಸು.

ಮುಂದಿನ ಪದ್ಯದಲ್ಲಿ ಆಕಾಶವೆಂಬ ಪ್ರಥಮಾಗ್ನಿಯ ವಿಷಯ ತಿಳಿಸುತ್ತಾರೆ. ಗಗನವೇ ಅಗ್ನಿ. ಸೂರ್ಯನೇ ಸಮಿಧೆ. ಸೂರ್ಯನ ಕಿರಣಾವಳಿಗಳೇ ಧೂಮ. ಹಗಲೆಂಬುದೇ ಜ್ವಾಲೆ. ನಕ್ಷತ್ರಪುಂಜಗಳೇ ಕಿಡಿಗಳು. ಚಂದ್ರನೇ ಕೆಂಡ. ಈ ಅಗ್ನಿಗೆ ಮುಖ್ಯಾಭಿಮಾನಿ ಶ್ರೀಮನ್ನಾರಾಯಣರೂಪಿ ಶ್ರೀ ಪರಮಾತ್ಮ. ಪ್ರಾಣನಾಮಕ ಶ್ರೀವಾಯುದೇವರೇ ಅವಾಂತರಾಭಿಮಾನಿಗಳು. ಗಗನವೆಂಬ ಈ ಅಗ್ನಿಯಲ್ಲಿ ಪ್ರಾಣನಾಮಕ ವಾಯ್ವಂತರ್ಗತ ಅನಿರುದ್ಧಾದಿ ಪಂಚರೂಪಗಳನ್ನು ಚಿಂತಿಸಿ, ಹೋಮಿಸಬೇಕು.

3ನೇ ಪದ್ಯದಿಂದ, ಪರ್ಜನ್ಯ ನಾಮಕ ಮೇಘವೆಂಬುದೇ ಅಗ್ನಿಯು. ಪ್ರವಹ ವಾಯುದೇವರೇ ಸಮಿತ್ತು. ಮೇಘಗಳ ಸಮೂಹವೇ ಧೂಮ. ಕ್ಷಣದಲ್ಲಿ ಮಿಂಚಿ ಮಾಯವಾಗುವ ಮಿಂಚೇ ಜ್ವಾಲೆಯು. ಗುಡುಗೇ ಕಿಡಿಯು. ಸಿಡಿಲೆಂಬುದೇ ಕೆಂಡವು. ಈ ಪರ್ಜನ್ಯಾಗ್ನಿಗೆ ಶ್ರೀವಾಸುದೇವನೇ ಮುಖ್ಯ ಅಭಿಮಾನಿಯು. ಅಪಾನನಾಮಕ ಶ್ರೀ ವಾಯುದೇವರು ಅವಾಂತರಾಭಿಮಾನಿಗಳು. ಈ ಅಗ್ನಿಯಲ್ಲಿ ಕಮಲೋದ್ಭವರಾದ ಚತುರ್ಮುಖ ಬ್ರಹ್ಮದೇವರ ಪಿತನಾದ ಶ್ರೀ ವಾಸುದೇವನಾಮಕ ಶ್ರೀ ಪರಮಾತ್ಮನನ್ನು ಅಪಾನನಾಮಕ ವಾಯುಗೋಳಕದಲ್ಲಿ ಪಂಚರೂಪಾತ್ಮಕನೆಂದು ಚಿಂತಿಸಿ, ಪರಮ ಭಗವದ್ಭಕ್ತಿಯಿಂದ ಹೋಮಿಸಬೇಕು.

ಮುಂದಿನ ಪದ್ಯದಲ್ಲಿ ಭೂಮಿ ಎಂಬುದೇ ಅಗ್ನಿ. ಸಂವತ್ಸರವು ಸಮಿಧೆ. ಆಕಾಶವೇ ಧೂಮವು. ರಾತ್ರಿ ಎಂಬುದೇ ಜ್ವಾಲೆ. ದಿಕ್ಕುಗಳೇ ಕೆಂಡಗಳು. ವಿದಿಕ್ಕುಗಳೇ ಕಿಡಿಗಳು. ವರ್ಷವೆಂಬೋದೇ ಆಹುತಿ. (ಜೀವನು ವ್ರೀಹ್ಯಾದಿ ಧಾನ್ಯಗಳಲ್ಲಿ ಸೂಕ್ಷ್ಮರೂಪದಿಂದಿರುವ ಒಂದು ವರ್ಷಾ

ವಧಿ). ಇಂಥ ಪೃಥಿವ್ಯಾಗ್ನಿಗೆ ಸಂಕರ್ಷಣನಾಮಕ ಪರಮಾತ್ಮನೇ ಮುಖ್ಯ ಕಾಲಾಭಿಮಾನಿಯು. ವ್ಯಾನನಾಮಕ ಶ್ರೀ ವಾಯುದೇವರು ಅವಾಂತರಾಭಿ ಮಾನಿಗಳು, ಇಂತು ಜ್ಞಾನಾನುಸಂಧಾನಪೂರ್ವಕವಾಗಿ ಧರಣಿ ಎಂಬ ಅಧಿಷ್ಠಾನದಲ್ಲಿ ಪಂಚಾಗ್ನಿನಾಮಕನಾದ ಸರ್ವರೂಪಾತ್ಮಕನನ್ನು ಚಿಂತಿಸುತ್ತಾ ಭಗವದನುಗ್ರಹವನ್ನು ಸಂಪಾದಿಸು.

ಐದನೆಯ ಪದ್ಯದಿಂದ ಪುರುಷವಾಚ್ಯನಾದ ತಂದೆಯೇ ಅಗ್ನಿಯು. ಉಚ್ಚರಿಸತಕ್ಕ ಮಾತುಗಳೆಲ್ಲವೂ ಕಾಷ್ಠಗಳು. ಇಂದ್ರಿಯಗಳು ಧೂಮ ಸದೃಶ. ವಾಗೀಂದ್ರಿಯವಾದ ನಾಲಿಗೆಯೇ ಜ್ವಾಲೆಯು. ಎರಡು ಕಿವಿ ಗಳೂ ಕಿಡಿಗಳು. ನೇತ್ರಯುಗ್ಮಗಳು ಕೆಂಡವೆಂದೆನಿಸುವುವು. ಪ್ರದ್ಯುಮ್ನ ನಾಮಕ ಶ್ರೀ ಪರಮಾತ್ಮನೇ ಈ ಅಗ್ನಿಗೆ ಮುಖ್ಯ ಅಭಿಮಾನಿಯು. ಉದಾನ ನಾಮಕ ಶ್ರೀ ವಾಯುದೇವರು ಅವಾಂತರಾಭಿಮಾನಿಗಳು. ಭೋಜನ ಮಾಡುವ ಅನ್ನವು ಪಿತ್ರಂತರ್ಗತ ಶ್ರೀ ಕೃಷ್ಣ ಪರಮಾತ್ಮನಿಗೆ ಆಹುತಿಗಳು ಎಂದು ಭಗವದರ್ಪಣೆ ಮಾಡಲು ಸಂತೋಷದಿಂದ ಸ್ವೀಕರಿಸಿ, ನಮ್ಮನ್ನು ಸಂರಕ್ಷಿಸುವನು.

ಜನನಿ ಎಂಬ ಯೋಷಾಗ್ನಿಯೇ ಐದನೆಯ ಅಗ್ನಿಯು. ಉಪಸ್ಥ ವೆಂಬುದೇ ಸಮಿತ್ತು. ಕಾಮಾಗ್ನಿಯನ್ನು ಜ್ವಲಿಸುವ ಮಾತುಗಳೇ ಧೂಮವು. ಯೋನಿಯೇ ಮಹಾಜ್ವಾಲೆಯು. ಯೋನಿಪ್ರವೇಶವೆಂಬ ಕ್ರಿಯೆಯೇ ಕೆಂಡ ಗಳು. ರೇತೋತ್ಸರ್ಜನವೇ ಕಿಡಿಯು. ಈ ಅಗ್ನಿಯಲ್ಲಿ ಮುಖ್ಯಾಭಿ ಮಾನಿಯು ಅನಿರುದ್ಧನಾಮಕ ಶ್ರೀ ಪರಮಾತ್ಮನು. ಸಮಾನ ನಾಮಕ ವಾಯುವೇ ಅವಾಂತರಾಭಿಮಾನಿಯು. ಇಂತು ಪೂಜಾರೂಪವಾದ ಯಜ್ಞ ಕ್ರಿಯೆಯನ್ನು ಸರ್ವೋತ್ತಮನಾದ ಶ್ರೀಹರಿಗೆ ಆಹುತಿ ಎಂಬ ಅನುಸಂಧಾನ ದಿಂದ ಸಮರ್ಪಿಸಿದರೆ, ಆ ಪೂಜೆಯನ್ನು ಸ್ವೀಕರಿಸಿ. ರಕ್ಷಿಸುತ್ತಾನೆಂದು ಮುಂದಿನ ಪದ್ಯದ ತಾತ್ಪರ್ಯ.

ಇಂತು ಆಕಾಶ, ಮೇಘ, ಭೂಮಿ, ಪಿತ ಮತ್ತು ಮಾತಾ ಎಂಬ ಪಂಚಾಗ್ನಿಗಳಲ್ಲಿ ಅನಿರುದ್ಧಾದಿ ಪಂಚರೂಪಾತ್ಮಕನನ್ನು ಇಪ್ಪತ್ತೈದು ರೂಪ

ಗಳಿಂದ ವಿರಾಜಮಾನನಾಗಿದ್ದಾನೆಂದು ಸ್ಮರಿಸುತ್ತಿರುವ ಸ್ವಭಕ್ತ ಜನರನ್ನು ಪುನಃ ಜನ್ಮಗಳು ಬಾರದಂತೆ, ಜನನ ಮರಣಾಖ್ಯರೂಪವಾದ ಈ ಭವ ಬಂಧನವನ್ನು ಪರಿಹರಿಸಿ, ಸಂರಕ್ಷಿಸುವನು. ಘೋರವಾದ ಕುರುಕ್ಷೇತ್ರವೆಂಬ ರಣರಂಗದಲ್ಲಿ ನಳಿನಾಕ್ಷನಾದ ಶ್ರೀಕೃಷ್ಣನು ತನ್ನ ಮೈದುನನಾದ ಅರ್ಜುನನನ್ನು ಸಲಹಿದೋಪಾದಿಯಲ್ಲಿ ಕಾಪಾಡುವನು. ತನ್ನನ್ನು ವಾಚಾಮಗೋಚರವಾಗಿ ನಿಂದಿಸಿದ ಶಿಶುಪಾಲನಲ್ಲಿ ಜೀವದ್ವಯಾವೇಶಾಯುಕ್ತನಾಗಿದ್ದ ಜಯನಾಮಕ ದ್ವಾರಪಾಲಕನಿಗೆ ಸದ್ಗತಿಯನ್ನಿತ್ತು, ಭಯ ಪರಿಹಾರಕನಾದ ಭಕ್ತವತ್ಸಲನಾದ ಕರುಣಾಮಯಿಯು ಸಂರಕ್ಷಿಸುವನೆಂದು ಈ ಪದ್ಯದಲ್ಲಿ ತಿಳಿಸುತ್ತಾರೆ.

ಮುಂದಿನ ಪದ್ಯದಲ್ಲಿ ಪಂಚನಾರೀ ತುರಗದ ಒಂದು ದೃಷ್ಟಾಂತವನ್ನು ಕೊಡುತ್ತಾರೆ. ಅಂದರೆ ಐದು ಜನ ಸ್ತ್ರೀಯರು ಒಂದು ಕುದುರೆಯ ಆಕಾರ ಬರುವಂತೆ ಜೋಡಣೆಯಾಗುವ ಒಂದು ಕ್ರೀಡೆ. ಅದರಲ್ಲಿ ಐದು ಮಂದಿ ಸ್ತ್ರೀಯರೂ ಸೇರಿರುತ್ತಾರೆ. ಅಖಂಡವಾಗಿ ಕುದುರೆಯ ಸಮಗ್ರ ಚಿತ್ರವು ಬರುವುದು. ಅದರಂತೆ ಅನಿರುದ್ಧಾದಿ ಪಂಚರೂಪಾತ್ಮಕ ಶ್ರೀ ಪರಮಾತ್ಮನು ತಾನು ಒಂದೊಂದು ಅಗ್ನಿಯಲ್ಲಿ ಐದು ರೂಪಗಳು ಮತ್ತು ಆ ಅಗ್ನಿಗತ ಅಭಿಮಾನಿ ರೂಪ ಒಂದು, ಅದರಂತೆ ಆರು ರೂಪಗಳಂತೆ. ಒಟ್ಟು ಮೂವತ್ತು ರೂಪಗಳನ್ನು ಧರಿಸಿ (೬ ರೂಪಗಳು × ಪಂಚಾಗ್ನಿಗಳು=೩೦ ರೂಪಗಳು) ಆಯಾಯಾ ಅಗ್ನ್ಯಂತರ್ಗತ ರೂಪಗಳಿಂದ ಆಯಾಯ ಹೆಸರುಗಳಿಂದಲೇ ಕರೆಯಿಸಿಕೊಳ್ಳುತ್ತಾ, ಪಂಚಾಗ್ನಿಗಳ ದ್ವಾರಾ, ಸತ್ವರಜ ಸ್ತಮೋಗುಣಗಳೆಂಬ ಗುಣ ತ್ರಯಗಳು ಮತ್ತು ಪೃಥ್ವ್ಯಾದಿ ಪಂಚಭೂತಗಳು ಇವುಗಳಿಂದ ನಿರ್ಮಿತವಾದ ದೇಹಗಳನ್ನು ಋಷಿ, ಪಿತೃ, ಗಂಧರ್ವರು, ನೃಪ, ಮಾನುಷೋತ್ತಮರು ಎಂಬ ಪಂಚವಿಧ ಜೀವರಿಗೆ ಕೊಟ್ಟು, ಆಯಾಯಾ ಸ್ಥೂಲದೇಹಗಳಲ್ಲಿ ತಾನು ಸ್ಥಿತನಾಗಿದ್ದು ಕ್ರೀಡಿಸುವನು.

ಬ್ರಹ್ಮ ರುದ್ರಾದಿ ಸಮಸ್ತ ತೃಣಾಂತ ತ್ರಿವಿಧ ಜೀವರ ಹೃತ್ಕಮಲದಲ್ಲಿ ಏಕಮೇವ ಅದ್ವಿತೀಯನೆಂದೆನಿಸಿ, ಮೂಲೇಶನಾಮಕನಾದ ಬಿಂಬನು ಜೀವಾಕಾರನಾಗಿದ್ದು, ಅಚ್ಯುತ, ಅನಂತ, ಗೋವಿಂದ ಎಂಬ ಶಬ್ದಗಳಿಂದ ವಾಚ್ಯ

ನಾಗಿ, ಆದಿ ಭೌತಿಕ (ಸ್ಥೂಲದೇಹ). ಆದಿದೈವಿಕ (ದಶೇಂದ್ರಿಯಗಳು) ಮತ್ತು ಆಧ್ಯಾತ್ಮಿಕ (ಮನೋ ಇಂದ್ರಿಯ) ನಾಮಕನಾಗಿ ಪ್ರಾಣಾದಿ ಪಂಚ ಪ್ರಾಣ ರೂಪಗಳು, ನಾಗಾದಿ ಪಂಚರೂಪಗಳು, ಹೀಗೆ ದಶಪ್ರಾಣರೂಪ ಗಳಿಂದ ವಾಚ್ಯನಾಗಿ, ಆ ದಶವಿಧವಾದ ಪ್ರಾಣದಲ್ಲಿ ತನ್ನಾಮಕನಾಗಿ ಅಂತ ರ್ಭೂತನಾಗಿದ್ದು ವಿರಾಜಿಸುತ್ತಿರುವನು ಎಂಬುದೇ ೬ನೆಯ ಪದ್ಯದ ಸಾರ.

ಮುಂದೆ, ಅಧಿಭೂತ, ಅಧಿದೈವ, ಆಧ್ಯಾತ್ಮ ಮತ್ತು ಹೃದಯಸ್ಥಾನ ಎಂಬ ನಾಲ್ಕು ಸ್ಥಾನಗಳಲ್ಲಿ ೪೩೨೬ ಭಗವದ್ರೂಪಗಳಿಂದ (ಅಚ್ಯುತ, ಅನಂತ ಮತ್ತು ಗೋವಿಂದ ಈ ನಾಮಗಳ ಅಕ್ಷರ ಸಾಂಕೇತ ಒಟ್ಟು ರೂಪಗಳ ಮೊತ್ತ) ವಿರಾಜಮಾನನಾಗಿದ್ದಾನೆಂದು ಜ್ಞಾನಿಗಳು ಚಿಂತಿಸುವರು. ೧೮೧೨೭ ಅಕ್ಷರಸಾಂಕೇತ ರೂಪಗಳಿಂದ (ದಶಪ್ರಾಣರನಾಮವಾಚಕ ಸಂಖ್ಯಾ ರೂಪ ಗಳು) ದಶಮಾರುತರಲ್ಲಿದ್ದು, ಆಯಾಯಾ ಹೆಸರಿನಿಂದಲೇ ತತ್ತಶ್ಶಬ್ದವಾಚ್ಯ ನಾಗಿ ಕರೆಸಿಕೊಳ್ಳುವನು ಎಂದು ತಾತ್ಪರ್ಯ.

೧೦ನೆಯ ಪದ್ಯದಲ್ಲಿ ಆತ್ಮಾದಿರೂಪಗಳು=೪,೩೨೬ ಮತ್ತು ಪ್ರಾಣಾದಿ ರೂಪಗಳು=೧೮,೧೨೭. ಒಟ್ಟು ೪,೩೨೬ + ೧೮,೧೨೭=೨೨,೪೫೩. ಮೇಲೆ ಸ್ಥೂಲದೇಹಗತ ತತ್ವಾಂತರ್ಗತ ೬೦೦೦ ಭಗವದ್ರೂಪಗಳು. ಅಲ್ಲಿಗೆ ಒಟ್ಟು ೨೮,೪೫೩ ಭಾಗವದ್ರೂಪಗಳು ಸಾಧನ ಶರೀರವಾದ ಈ ಸ್ಥೂಲದೇಹ ದಲ್ಲಿ ವಿದ್ಯಮಾನವಾಗಿವೆ ಅಲ್ಲದೆ ದಶೇಂದ್ರಿಯಗಳು+ಅಧಿಭೂತ, ಅಧ್ಯಾತ್ಮ, ಅಧಿದೈವ ಮತ್ತು ಹೃದಯ=೧೪ ಅಥವಾ ದಶಪ್ರಾಣರು ಮತ್ತು ಶತಸ್ಥರ ಪರ್ಯಂತ ದೇವತೆಗಳು, ಕರ್ಮಜರು, ಆಜಾನಜರು=೧೪. ಹೀಗೆ ಹತ್ತು ನಾಲ್ಕರಲ್ಲಿ ಪುರುಷೋತ್ತಮನಾದ ಬಿಂಬನ ರೂಪಗಳನ್ನು ಜ್ಞಾನಾನುಸಂಧಾನ ದಿಂದ ತಿಳಿದು, ಸರ್ವತ್ರ, ಸರ್ವಕಾಲಗಳಲ್ಲಿ ಅವನನ್ನು ಪೂಜಿಸುತ್ತಾ, ಗುಣ ಗಾನ ಮಾಡುತ್ತಿರು ಎಂದು ಸಾರಭೂತವಾದ ತತ್ತ್ವವನ್ನು ನಿರೂಪಿಸಿರುತ್ತಾರೆ.

ಮುಂದೆ, ೧೬,೪೧೬ ರೂಪಗಳಿಂದ ವಿದ್ಯಮಾನನಾಗಿ, ಸರ್ವಚೇತನದ ಸ್ಥೂಲದೇಹದಲ್ಲಿ ಶಬ್ದಾದಿ ಪಂಚತನ್ಮಾತ್ರಾಗುಣಗಳಲ್ಲಿ, ತಮಾದಿ ಅವಿದ್ಯಾ ಪಂಚಕದಲ್ಲಿ. ನಾಗಾದಿ ಪಂಚಪ್ರಾಣರೂಪಗಳಲ್ಲಿ ಅಧಿಷ್ಠಿತನಾಗಿದ್ದು, ತಮೋ

ಗುಣಕ್ಕೆ ಅಭಿಮಾನಿಯಾದ ದುರ್ಗಾದೇವಿಯರ ಪತಿ ರುದ್ರರೂಪೀ ಶ್ರೀ ಪರಮಾತ್ಮನು ಕುತ್ಸಿತವಾದ ಮೋಹಗಳ ದ್ವಾರಾ ಏಕಾದಶೇಂದ್ರಿಯಗಳಿಗೆ ಅಜ್ಞಾನಾದಿಗಳನ್ನು ವ್ಯಕ್ತಮಾಡಿ ಕೊಡುವನು ಎಂದು ಪದ್ಯಗತಸಾರ.

ಮುಂದಿನ ೧೩ನೆಯ ಪದ್ಯದಲ್ಲಿ ಪೂರ್ವೋಕ್ತ ತಮೋಮೋಹಾದಿ ಅವಿದ್ಯಾ ಪಂಚಕಗಳಲ್ಲಿರತಕ್ಕ, ನಾಗಾದಿ ಪಂಚಪ್ರಾಣರ ಅಧಿಷ್ಠಾನಗಳಲ್ಲಿ ರಮಾಪತಿಯಾದ ಶ್ರೀ ಪರಮಾತ್ಮನು ಕೃದ್ಧೋಲ್ಕಾದಿ ಪಂಚರೂಪಗಳನ್ನು ತಾ ಧರಿಸಿ, ಸಚ್ಚೇತನರಿಗೆ ಅಜ್ಞಾನವನ್ನು ಪರಿಹರಿಸುತ್ತಾ, ತಮೋಯೋಗ್ಯ ರಿಗೆ ಅಜ್ಞಾನಾದಿಗಳನ್ನು ಕೊಟ್ಟು, ಅವರವರ ಸಾಧನಗಳನ್ನು ತತ್ವೇಶರ ದ್ವಾರಾ ತಾನು ಮಾಡಿ, ಮಾಡಿಸುವನೆಂದು ತಿಳಿಸುತ್ತಾರೆ,

ಹಸುಗಳಲ್ಲಿ ಉದ್ಗೀಥನಾಮಕನಾಗಿ ಶ್ರೀ ಪರಮಾತ್ಮನು ಪ್ರಥಮ ಯಾಮಕ್ಕೆ ಅನಿರುದ್ಧರೂಪದಿಂದ ಅಭಿಮಾನಿಯಾಗಿದ್ದಾನೆ. ಕುರಿಗಳಲ್ಲಿ ಪ್ರಸ್ತಾವ ನಾಮಕನಾಗಿ, ದ್ವಿತೀಯಯಾಮಕ್ಕೆ ಪ್ರದ್ಯುಮ್ನ ರೂಪದಿಂದ ಅಭಿಮಾನಿಯಾಗಿದ್ದಾನೆ. ಮೇಕೆ, ಹೋತ ಮುಂತಾದ ಪ್ರಾಣಿಗಳಲ್ಲಿ ಹಿಂಕಾರನಾಮಕನಾಗಿ ತೃತೀಯ ಯಾಮಕ್ಕೆ ಸಂಕರ್ಷಣ ರೂಪದಿಂದ ಅಭಿ ಮಾನಿಯಾಗಿದ್ದಾನೆ. ಕುದುರೆಗಳಲ್ಲಿ ಪ್ರತಿಹಾರ ನಾಮಕನಾಗಿ ಚತುರ್ಥ ಯಾಮಕ್ಕೆ ವಾಸುದೇವ ರೂಪದಿಂದ ಅಭಿಮಾನಿಯಾಗಿದ್ದಾನೆ. ಮಾನವರಲ್ಲಿ ನಿಧನನಾಮಕನಾಗಿ, ಪಂಚಮಯಾಮಕ್ಕೆ ನಾರಾಯಣ ರೂಪದಿಂದ ಅಭಿ ಮಾನಿಯಾಗಿದ್ದಾನೆ. ಇಂತು ಪಂಚಸಾಮನ ರೂಪನೆನಿಸುವ ಶ್ರೀಪರಮಾತ್ಮನ ಭಗವದ್ರೂಪಗಳನ್ನು ಆಯಾಯ ಝೂವಗಳಲ್ಲಿ ಸದಾ ಸ್ಮರಿಸುತ್ತಿರುವ ಸ್ವ ಭಕ್ತ ಜನರಿಗೆ ಜನನ ಮರಣಗಳನ್ನು ತಪ್ಪಿಸಿ, ಭವಸಂಸಾರದಿಂದ ಉತ್ತರಿಸಿ, ಮೋಕ್ಷ ಸಾಮ್ರಾಜ್ಯವನ್ನೀಯುವನು ಎಂದು ತಿಳಿಸುತ್ತಾರೆ ಮುಂದಿನ ೧೪ ನೆಯ ಪದ್ಯದಿಂದ.

ಮುಂದಿನ ಪದ್ಯದಲ್ಲಿ ಕೃತಾದಿ ಚತುರ್ಯುಗಗಳಲ್ಲಿ ತಾನು ಯುಗ ಪ್ರವರ್ತಕನೆನಿಸಿ, ಆಯಾಯಾ ಯುಗಧರ್ಮಗಳು. ದೇಶಕಾಲೋಚಿತವಾದ ಕರ್ಮಗಳಿಗೆ ಪ್ರೇರಕನಾಗಿದ್ದು, ವಾಸುದೇವಾದಿ ನಾಲ್ಕು ರೂಪಗಳಿಂದ

ಪ್ರವರ್ತನ ಮಾಡುತ್ತಾ, ಯುಗ ಪ್ರವರ್ತಕ ಮತ್ತು ಯುಗಾಭಿಮಾನಿ ಎಂದೆನಿಸಿ, ಧರ್ಮಸಂಸ್ಥಾಪನೆ ಮಾಡುತ್ತಾ, ಸಾಧಕರಾದವರಿಗೆ ಆಯಾಯ ಯುಗ ಸಂಬಂಧವಾದ ಧರ್ಮ ಮತ್ತು ಕರ್ಮಫಲ ರೂಪವಾದ ಸಂಪತ್ತನ್ನು ಕೊಡುವನೆಂದು ತಾತ್ಪರ್ಯ.

ಇನ್ನು ಮುಂದೆ ಸಮಗ್ರ ಸ್ಥೂಲ ದೇಹಗತ ರೂಪಾದಿಗಳ ಚಿಂತನಾಕ್ರಮ ತಿಳಿಸುತ್ತಾರೆ. ಆಪಾದಮೌಳಿಪರ್ಯಂತವಾಗಿ ಈ ಸ್ಥೂಲ ದೇಹದಲ್ಲಿ ಶ್ರೀಮನ್ನಾರಾಯಣನು ಸಮಗ್ರರೂಪದಿಂದ ಪ್ರಾಪ್ತನಾಗಿದ್ದಾನೆ. ಸೊಂಟದಿಂದ ಕಾಲಿನ ತುದಿಯವರೆಗೆ ಸಂಕರ್ಷಣರೂಪ ಪರಮಾತ್ಮನಿದ್ದಾನೆ. ಶಿರಃ ಪ್ರಾರಂಭಿಸಿ ಟೊಂಕದವರೆಗೆ ವಾಸುದೇವನಾಮಕನಿದ್ದಾನೆ. ದೇವತಾವರ್ಗಕ್ಕೆ ಪ್ರಭುವಾದ ಅನಿರುದ್ಧನು ದೇಹದ ಎಡಪಾರ್ಶ್ವದಲ್ಲಿಯೂ ಪ್ರದ್ಯುಮ್ನನು ಬಲಪಾರ್ಶ್ವದಲ್ಲಿಯೂ ಇದ್ದಾರೆ. ಇಂತು ದೇಹದಲ್ಲಿ ಅಖಂಡ ರೂಪದಿಂದ ವ್ಯಾಪ್ತನಾಗಿರುವ ಈ ಪಂಚರೂಪಗಳನ್ನು ದೇಹದ ತತ್ತ್ವಸ್ಥಾನಗಳಲ್ಲಿ ಸದಾ ಸ್ಮರಿಸುತ್ತಿರುವ ಭಾಗವತೋತ್ತಮರಿಗೆ ಮೈಲಿಗೆ ವಿಧಿನಿಷೇಧಗಳ ಲೇಪವೇ ಇಲ್ಲವೆಂದು ತಾತ್ಪರ್ಯ.

ಮುಂದಿನ ೧೮ನೆಯ ಪದ್ಯದಿಂದ ಆರಂಭಿಸಿ ೨೧ರವರೆಗೆ ೨೪ತತ್ತ್ವಗಳಲ್ಲಿ ಅಂತರ್ಭೂತವಾಗಿದ್ದು, ಆಯಾಮ ತತ್ತ್ವಕಾರ್ಯಗಳನ್ನು ಬಿಂಬಕ್ರಿಯಾ ದ್ವಾರಾ ಮಾಡಿಸುತ್ತಿರುವ ಚತುರ್ವಿಂಶತಿ ಭಗದ್ರೂಪಗಳ ವಿಚಾರ ಹೇಳುತ್ತಾರೆ. ಎರಡು ಹಸ್ತಗಳಲ್ಲಿ ಪದ್ಮನಾಭ ನಾಮಕ ಪರಮಾತ್ಮನಿದ್ದಾನೆ. ಬಾಯಿಯಲ್ಲಿ ಹೃಷೀಕೇಶನೂ, ಮೂಗಿನ ದ್ವಾರದ್ವಯಗಳಲ್ಲಿ ಶ್ರೀಧರನಾಮಕನೂ, ನಾಲಿಗೆಯಲ್ಲಿ ವಾಮನರೂಪೀ ಶ್ರೀ ಪರಮಾತ್ಮನೂ ಇದ್ದಾನೆ. ಮೃದುವಾದ ಚರ್ಮದಲ್ಲಿ ತ್ರಿವಿಕ್ರಮನಾಮಕನೂ, ನೇತ್ರದ್ವಯಗಳಲ್ಲಿ ಮಧುಸೂದನನೂ ಇದ್ದಾನೆ. ಎರಡು ಕಿವಿಗಳಲ್ಲಿ ಶ್ರವಣ ಎಂಬ ಹೆಸರಿನಿಂದ ವಿಷ್ಣು ರೂಪೀ ಪರಮಾತ್ಮನಿರುವನು.

ಗೋವಿಂದನಾಮಕ ಹರಿಯು ಮನಸ್ಸಿನಲ್ಲಿಯೂ, ಕುಬೇರನ ಮಿತ್ರರಾದ ಮಹರುದ್ರದೇವರ ತತ್ತ್ವವಾದ ಅಹಂಕಾರ ತತ್ತ್ವದಲ್ಲಿ ಮಾಧವನಿದ್ದಾನೆ.

ಬ್ರಹ್ಮದೇವರ ಅಭಿಮನ್ಯಮಾನ್ಯವಾದ ಮಹತ್ತ್ವದಲ್ಲಿ ನಾರಾಯಣನೂ. ರಮಾಭಿಮನ್ಯನಾದ ತ್ರಿಗುಣಾತ್ಮಕ ಅವ್ಯಕ್ತತತ್ತ್ವದಲ್ಲಿ ಕೇಶವನಾಮಕನೂ ಇದ್ದಾನೆ. ಇಂತು ಈ ಸ್ಥೂಲದೇಹಗತ ತತ್ತ್ವಾಂತರ್ಗತ ಭಗವದ್ರೂಪಗಳನ್ನು ಸದಾ ಚಿಂತಿಸುತ್ತಿರುವ ಮಹಾತ್ಮರು ದೇವಾಂಶಸಂಭೂತರೇ ಸರಿ. ಅವರು ಸಾಮಾನ್ಯ ಮಾನವರಲ್ಲವೇ ಅಲ್ಲ. ಶ್ರೀಹರಿಯ ಕೃಪಾವಿಶೇಷಕ್ಕೆ ಪೂರ್ಣ ಪಾತ್ರರಾದ ಮಹನೀಯರು ಎಂದು ತಿಳಿಯಬೇಕೆಂದು ಸೂಚಿಸುತ್ತಾರೆ.

೨೦ ನೆಯ ಪದ್ಯದಲ್ಲಿ ಭೂತ ಪಂಚಕಗಳಲ್ಲಿರುವ ಭಗವದ್ರೂಪಗಳ ವಿವರ ಗಳನ್ನು ತಿಳಿಸುತ್ತಾರೆ. ದೇಹಗತ ಭೂತತತ್ತ್ವದಲ್ಲಿ ಕೃಷ್ಣರೂಪದಿಂದ ಪರ ಮಾತ್ಮ ಇದ್ದಾನೆ. ಅಪ್ ತತ್ತ್ವದಲ್ಲಿ ವರುಣಾಂತರ್ಗತನಾಗಿ ಹರಿನಾಮಕ ನಿದ್ದಾನೆ. ತೇಜೋತತ್ತ್ವದಲ್ಲಿ ಅಗ್ನ್ಯಂತರ್ಗತ ಪರಶುರಾಮರೂಪವು (ಉಪೇಂದ್ರನಾಮಕನಾಗಿ) ವಾಯುತತ್ತ್ವದಲ್ಲಿ ಜನಾರ್ದನನೂ, ಆಕಾಶತತ್ತ್ವ ದಲ್ಲಿ ಅಚ್ಯುತರೂಪೀ ಪರಮಾತ್ಮನೂ ಇದ್ದಾನೆ. ಪೃಥ್ವೀತತ್ತ್ವ ತನ್ಮಾತ್ರಾ ಗುಣವಾದ ಗಂಧದಲ್ಲಿ ನರಸಿಂಹದೇವರೂ, ಅಪ್‌ತತ್ತ್ವ ತನ್ಮಾತ್ರೆಯಾದ ರಸ ದಲ್ಲಿ ಅಧೋಕ್ಷಜನು ರಸನಾಮಕವಾಗಿ ರಸಪದವಾಚ್ಯನಾಗಿದ್ದಾನೆ.

ಮುಂದಿನ ಪದ್ಯದಲ್ಲಿ ರೂಪಾದಿ ತನ್ಮಾತ್ರಾಗುಣಗತ ಭಗವದ್ರೂಪಗಳ ಉಪಾಸನಾಕ್ರಮವನ್ನು ತಿಳಿಸುತ್ತಾರೆ. ಪುರುಷೋತ್ತಮ ನಾಮಕನು ಅಗ್ನಿ ತನ್ಮಾತ್ರಾಗುಣವಾದ ರೂಪದಲ್ಲಿ ತದಭಿಮಾನಿ ಸಮಾನ ವಾಯುವಿನಲ್ಲಿ ಅಂತಸ್ಥನಾಗಿದ್ದಾನೆ. ಆಕಾಶತತ್ತ್ವ ತನ್ಮಾತ್ರಾಗುಣವಾದ ಶಬ್ದದಲ್ಲಿ ತದಭಿ ಮಾನಿ ಪ್ರಾಣವಾಯುವಿನಲ್ಲಿ ಪ್ರದ್ಯುಮ್ನ ರೂಪೀ ಪರಮಾತ್ಮನೂ, ವಾಯು ತತ್ತ್ವದ ತನ್ಮಾತ್ರಾಗುಣವಾದ ಸ್ಪರ್ಶದಲ್ಲಿ ಅಪಾನವಾಯ್ವಂತರ್ಗತ ಅನಿರುದ್ಧ ನಾಮಕನಿದ್ದಾನೆ. ಕರ್ಮೇಂದ್ರಿಯವಾದ ಉಪಸ್ಥತತ್ತ್ವದಲ್ಲಿ (ಮೂತ್ರ ವಿಸರ್ಜನಾಂಗ). ತದಭಿಮಾನಿಯಾದ ಸ್ವಾಯಂಭು ಮನುವಿನಲ್ಲಿ ವಾಸು ದೇವನೂ, ಕರ್ಮೇಂದ್ರಿಯವಾದ ವಾಯುತತ್ತ್ವದಲ್ಲಿ (ಮಲವಿಸರ್ಜನಾಂಗ) ತದಭಿಮಾನಿ ಮಿತ್ರನಾಯಮಕ ಸೂರ್ಯಾಂತರ್ಗತವಾಗಿ ಜಯಾರಮಣನಾದ ಸಂಕರ್ಷಣನೂ ಇದ್ದಾರೆ. ಪಾದಗಳಲ್ಲಿ ಜಯಂತನಾಮಕ ತತ್ವೇಶನಲ್ಲಿ ಅಂತ

ರ್ಯಾಮಿಯಾಗಿ ದಾಮೋದರ ರೂಪೀ ಪರಮಾತ್ಮನಿದ್ದು, ಪಾದಗಳ ಆಧಾರ ದಿಂದ ದೇಹವನ್ನು ನಿಲ್ಲುವಂತೆ ಆಧಾರಮಾಡುವನು.

೨೨ನೆಯ ಪದ್ಯದಲ್ಲಿ ಪೂರ್ವೋಕ್ತ ಇಪ್ಪತ್ತುನಾಲಕು ತತ್ತ್ವಗಳಲ್ಲಿ ಶ್ರೀ ನಾಮಕನಾಳ ಲಕ್ಷ್ಮೀದೇವಿಯರ ಪತಿಯಾದ ಪರಮಾತ್ಮನು ಅನಿರುದ್ಧಾದಿ ರೂಪಗಳಿಂದ ಚೇತನರ ಸ್ಥೂಲದೇಹದಲ್ಲಿ ನಖಶಿಖಾದಿಪರ್ಯಂತ ವ್ಯಾಪ್ತ ನಾಗಿದ್ದು ಚಕ್ರದಂತೆ ಸುತ್ತುತ್ತಾ ಪಿತೃ, ಪಿತಾಮಹ, ಪ್ರಪಿತಾಮಹ ಇತ್ಯಾದಿ ಪಿತೃದೇವತೆಗಳಿಗೆ ತೃಪ್ತಿಕೊಡತಕ್ಕವನಾಗಿ, ಅಪಾರಮಹಿಮಾ ಸಂಪನ್ನನಾದ ಬಿಂಬರೂಪೀ ಶ್ರೀಹರಿಯು 'ಷಣ್ಣವತಿ' ಎಂಬ ನಾಮದಿಂದ ೯೬ ರೂಪಗಳಿಂದ ವಿರಾಜಮಾನನಾಗಿದ್ದಾನೆ ಎಂದು ಸಂಧಿಯಸಾರ.

ಜೀವಸ್ಥೂಲ ಶರೀರಗತ ಇಪ್ಪತ್ತುನಾಲಕು ತತ್ತ್ವಗಳಲ್ಲಿಯೂ ಮತ್ತು ಆಯಾಯ ತತ್ತ್ವಗಳಿಗೆ ಅಭಿಮಾನಿಗಳಾದ ಬ್ರಹ್ಮದೇವರೇ ಮೊದಲಾಗಿ ಚತುರ್ವಿಂಶತಿ ತತ್ವೇಶರಲ್ಲಿಯೂ ೧೧೫೨ ರೂಪಗಳಿಂದ ವ್ಯಾಪಿಸಿಕೊಂಡು ಜೀವಕೋಟಿಯನ್ನು ಜೋಪಾನಮಾಡಿ ಸಂರಕ್ಷಿಸುತ್ತಿರುವನು. ಈ ವ್ಯಾಪಾರ ದಿಂದ ಶ್ರೀಪರಮಾತ್ಮನಿಗೆ ಯಾವ ಪ್ರಯೋಜನವೂ ಇಲ್ಲ. ಸ್ವಪ್ರಯೋಜನ ರಹಿತನಾದ ಶ್ರೀಹರಿಯು ಸ್ವರಮಣನೆಂದು ಮುಂದಿನ ಪದ್ಯದ ತಾತ್ಪರ್ಯ.

ಇಂದಿರಾರಮಣನು ಶಕ್ತ್ಯಾದಿ ಹನ್ನೊಂದು ರೂಪಗಳಿಂದ ದೇಹಗತ ಸಮಸ್ತ ಇಂದ್ರಿಯಗಳಲ್ಲಿ (ಏಕಾದಶೇಂದ್ರಿಯಗಳು) ಆವಾಸವಾಗಿದ್ದಾನೆ. ಪುರುಷನಾಮಕನಾದ ಆ ವಾಸುದೇವನ ಪೂರ್ಣಾನಂದ ಜ್ಞಾನಮಯನಾಗಿ ಜೀವರ ಸ್ವರೂಪದೇಹಗಳಲ್ಲಿ ಅರೆಕ್ಷಣವೂ ಬಿಡದೆ ಅವಿಯೋಗಿಯಾಗಿ, ಅನಿಮಿತ್ತ ಬಂಧುವೆಂದೆನಿಸಿ, ಬಿಂಬರೂಪದಿಂದ ಇದ್ದಾನೆ ಎಂಬುದು ಮುಂದಿನ ಪದ್ಯದ ಸಾರಾಂಶ.

೨೫ನೆಯ ಪದ್ಯದಲ್ಲಿ ಷೋಡಶ ಕಲಾತ್ಮಕವಾದ ಲಿಂಗದೇಹದಲ್ಲಿ ಹದಿನಾರು ರೂಪಗಳಿಂದ ಕಲಾತ್ಮಕನಾಗಿದ್ದುಕೊಂಡು, ಪ್ರಥಮಾವರಣನಾದ ಸತ್ವಾವರ್ಕದಲ್ಲಿ ವಿಶ್ವನಾಮಕನಾಗಿದ್ದಾನೆ. ಲಿಂಗದೇಹಗತ ದ್ವಿತೀಯಾವರಣ

ವಾದ ರಜೋ ಆವರ್ಕದಲ್ಲಿ ತೈಜಸ ರೂಪೀ ಪರಮಾತ್ಮನಿದ್ದಾನೆ. ತೃತೀಯಾವರಣವಾದ ತಮೋ ಆವರ್ಕದಲ್ಲಿ ಪ್ರಾಜ್ಞರೂಪೀ ಪರಮಾತ್ಮನಿದ್ದಾನೆ. ಇಂತು ಲಿಂಗದೇಹಗತ ಆವರಣ ತ್ರಯಗಳಲ್ಲಿ ವಿಶ್ವ, ತೈಜಸ ಮತ್ತು ಪ್ರಾಜ್ಞ ನಾಮಕನಾಗಿ, ದಶೇಂದ್ರಿಯಗಳಲ್ಲಿ, ತನ್ಮಾತ್ರ ಪಂಚಕಗಳಲ್ಲಿದ್ದು, ಆಕಾಶ, ವಾಯು, ಅಗ್ನಿ, ಜಲ ಮತ್ತು ಭೂಮಿ ಎಂಬ ಭೂತ ಪಂಚಕಗಳಲ್ಲಿ, ಪೂರ್ವೋಕ್ತ ವಿಶ್ವಾದಿ ನಾಲ್ಕು ರೂಪಗಳು ಮತ್ತು ಆತ್ಮ, ಅಂತರಾತ್ಮ, ಪರಮಾತ್ಮ ಮತ್ತು ಜ್ಞಾನಾತ್ಮ ಎಂಬ ನಾಲ್ಕು ರೂಪಗಳು, ಅಂದರೆ ಎಂಟು ರೂಪಗಳಿಂದ (ಮೂರಯಿದು) ಇದ್ದಾನೆಂದು ಚಿಂತಿಸುತ್ತಿರು ಎಂದು ತಾತ್ಪರ್ಯ.

ಲಿಂಗದೇಹಗತ ಮನೋಗೋಳಕದಲ್ಲಿ ಆತ್ಮ ಶಬ್ದವಾಚ್ಯನಾದ ಶ್ರೀ ಪರಮಾತ್ಮನು, ಅಹಂಕಾರ ತತ್ತ್ವದಲ್ಲಿ ಅಂತರಾತ್ಮನು, ಸಮೀಚೀನವಾದ ಮಹತ್ತತ್ವದಲ್ಲಿ ಪರಮಾತ್ಮನು ಮತ್ತು ಅವ್ಯಕ್ತತತ್ತ್ವದಲ್ಲಿ ಜ್ಞಾನಾತ್ಮನು ಹೀಗೆ ತತ್ತ್ವ ಚತುಷ್ಟಯಗಳಲ್ಲಿ ನಾಲ್ಕು ರೂಪಗಳಿಂದ ವಿರಾಜಮಾನನಾಗಿದ್ದಾನೆ ಎಂದು ಚಿಂತಿಸಬೇಕು. ಅಕಾರಾದಿ ಳಕಾರಾಂತ ಐವತ್ತು ಅಕ್ಷರಗಳಲ್ಲಿ ಅಜಾದಿ ಐವತ್ತು ರೂಪಗಳಿಂದ ವರ್ಣವಾಚ್ಯನಾಗಿರುವನೆಂದು ಯಾವಾಗಲೂ ತನುಚತುಷ್ಟಯಗಳಲ್ಲಿ ತಿಳಿದು ಪೂಜಿಸುತ್ತಿರು ಎಂದು ಹೇಳುತ್ತಾರೆ.

ಇಪ್ಪತ್ತನಾಲ್ಕು ತತ್ತ್ವಗಳಲ್ಲಿ ಮತ್ತು ಆ ತತ್ತ್ವಗಳಿಗೆ ಅಧಿಪತಿಗಳಾದ ಬ್ರಹ್ಮದೇವರೇ ಮೊದಲಾದ ತತ್ವಾಭಿಮಾನಿ ದೇವತೆಗಳಲ್ಲಿ ೧೩೮೨೪ ರೂಪಗಳಿಂದ ವ್ಯಾಪಕವಾಗಿದ್ದು, ಅವರಲ್ಲಿಯೂ ಮತ್ತು ಸಮಸ್ತ ಜೀವರಾಶಿಗಳಲ್ಲಿಯೂ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಮತ್ತು ನಾರಾಯಣ ಎಂಬ ವ್ಯೂಹರೂಪಗಳಿಂದ ಪಂಚರೂಪಾತ್ಮಕನಾಗಿದ್ದು, ಸಾಮಾನ್ಯ ಪ್ರಾಕೃತ ಜನರಂತೆ. ಆಯಾಯಾ ಜೀವರ ಯೋಗ್ಯತೆ ಮತ್ತು ಕರ್ಮಾನುಸಾರ. ಕ್ರೀಡಿಸುವನು ಎಂಬುದೇ ಮುಂದಿನ ಪದ್ಯಗತ ಸಾರ.

ಚೈತ್ರಾದಿ ಫಾಲ್ಗುಣಾಂತದವರೆಗೆ ಇರುವ ೧೨ ಮಾಸಗಳಲ್ಲಿ ಕೇಶವಾದಿ ೧೨ ಸಂಖ್ಯಾಕವಾದ ಭಗವನ್ಮೂರ್ತಿಗಳನ್ನು ಧ್ಯಾನಿಸಬೇಕು. ಶ್ರೀ ಪರಮಾತ್ಮನ ಆವಾಸಮಂದಿರವೆಂದೆನಿಸುವ ಈ ಶರೀರಕ್ಕೆ ಅಲಂಕಾರ ಪ್ರಾಯ

ವಾಗಿ ಧರಿಸುವ ದ್ವಾದಶ ನಾಮಗಳಲ್ಲಿ ಕೇಶವಾದಿ ೧೨ ಭಗವದ್ರೂಪಗಳನ್ನು ಪೂರ್ವೋಕ್ತ ಕ್ರಮದಲ್ಲಿ (ಶುಕ್ಲಪಕ್ಷದಲ್ಲಿ ಕೇಶವಾದಿ ದಾಮೋದರ ಪರ್ಯಂತ ಮತ್ತು ಕೃಷ್ಣಪಕ್ಷದಲ್ಲಿ ಪುರುಷೋತ್ತಮಾದಿ ಅನಿರುದ್ಧ ಪರ್ಯಂತ) ಚಿಂತಿಸ ಬೇಕು. ವಸಂತಾದಿ ಆರು ಋತುಗಳಲ್ಲಿ ಕ್ರಮವಾಗಿ ವೇದವ್ಯಾಸ, ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಮತ್ತು ನಾರಾಯಣ ಎಂಬ ಈ ಆರು ಭಗವದ್ರೂಪಗಳನ್ನು ಸ್ಮರಿಸಬೇಕು. ಇಂತು ಒಂದು ಮಾಸದ ಮೂವತ್ತು ದಿನಗಳಲ್ಲಿ ಪ್ರತಿದಿವಸವೂ ಸಹ ಆಯಾಯಾ ಕಾಲಾಂತರ್ಗತ, ಮಾಸನಿಯಾಮಕ, ಋತುನಿಯಾಮಕ, ಪಕ್ಷ ನಿಯಾಮಕ ಭಗವದ್ರೂಪಗಳನ್ನು ಚಿಂತಿಸುತ್ತಾ, ಸಮೀಚೀನವಾದ ವಿಧ್ಯುಕ್ತವಾದ ಸತ್ಕರ್ಮಾಚರಣೆಯಲ್ಲಿ ನಿಷ್ಠನಾಗಿದ್ದು, ಆ ಕರ್ಮಪತಿಯಾದ ಪರಮಾತ್ಮನ ಕಾರುಣ್ಯ ವಿಶೇಷವನ್ನು ಬೇಡು. ಅವನ ಅನಂತಕಲ್ಯಾಣ ಗುಣಾತ್ಮಕವಾದ ಅಪಾರ ಮಹಿಮಾ ವಿಶೇಷಗಳನ್ನು ನಿತ್ಯವೂ ಕೊಂಡಾಡುತ್ತಿರು ಎಂದು ಸನ್ಮಾರ್ಗತೋರಿದ್ದಾರೆ ದಾಸವರ್ಯರು.

ಮುಂದಿನ ೨೯ನೆಯ ಪದ್ಯದಲ್ಲಿ ಹೆಂಚು, ಬಂಗಾರ, ಕಬ್ಬಿಣ ಇತ್ಯಾದಿ ಲೋಹಗಳು, ಪರ್ವತಗಳಲ್ಲಿರುವ ಶಿಲೆ, ಕಟ್ಟಿಗೆ ಇತ್ಯಾದಿ ಸಮಸ್ತ ಜಡವಸ್ತುಗಳು, ಬ್ರಹ್ಮದೇವರ ಆದಿಯಾಗಿ ತೃಣಾಂತ ಸಮಸ್ತ ತ್ರಿವಿಧ ಜೀವರಾಶಿಗಳು- ಇವುಗಳಲ್ಲಿ ಬಿಂಬರೂಪೀ ಶ್ರೀಪರಮಾತ್ಮನು ಅಧಿಷ್ಠಿತನಾಗಿದ್ದು. ಪ್ರತಿನಿತ್ಯದಲ್ಲಿಯೂ ವ್ಯಾಪಾರಗಳನ್ನು ಮಾಡಿ ಮತ್ತು ಅವರವರ ಯೋಗ್ಯತಾನುಸಾರ ಪ್ರೇರಿಸಿ, ಅವರ ಇಷ್ಟಪ್ರದಾಯಕನಾಗಿದ್ದು, ಇಹದಲ್ಲಿ ಲೌಕೀಕ ಭೋಗ ಭಾಗ್ಯಗಳನ್ನೂ ಪರದಲ್ಲಿ ಮೋಕ್ಷಾನಂದರೂಪವಾದ ಪರಮೈಶ್ವರ್ಯವನ್ನು (ಸಚೇತನರಿಗೆ) ಕೊಟ್ಟು, ಸಂರಕ್ಷಿಸುತ್ತಿರುವನೆಂದು ತಾತ್ಪರ್ಯ.

ಶ್ರೀಪರಮಾತ್ಮನು ವಾಸುದೇವ ಮತ್ತು ಅನಿರುದ್ಧ ಎಂಬ ಎರಡು ರೂಪಗಳಿಂದ ಪುರುಷರ ದೇಹದಲ್ಲಿ ವಿದ್ಯಮಾನನಾಗಿದ್ದಾನೆ. ಸಂಕರ್ಷಣ ಮತ್ತು ಪ್ರದ್ಯುಮ್ನ ಎಂಬ ಎರಡು ರೂಪಗಳಿಂದ ಸ್ತ್ರೀಯರ ಶರೀರದಲ್ಲಿ ವ್ಯಾಪ್ತನಾಗಿದ್ದಾನೆ, "ದ್ವಾಸುಪರ್ಣಾ" ಎಂಬ ಶ್ರುತಿಪ್ರತಿಪಾದ್ಯನಾದ ಹಾಗೂ ಸರ್ವಚೇತನರ ಶರೀರವೆಂಬ ಈ ಸುನಿಲಯದಲ್ಲಿ ಬಿಂಬರೂಪನಾಗಿ ಆವಾಸವಾ

ಗಿರುವ (ಸರ್ವಚೇತನರಲ್ಲಿರುವ ಸಮೀಚೀನರಾದ ಶ್ರೀವಾಯುದೇವರ ಅಂತರ್ಗತನಾಗಿರುವ) ಅಂತರ್ಬಹಿಶ್ಚ ವ್ಯಾಪ್ತನಾಗಿರುವ ನಾರಾಯಣ ನಾಮಕ ಶ್ರೀಪರಮಾತ್ಮನನ್ನು ಸಮೀಚೀನವಾದ ಜ್ಞಾನದಿಂದ ಉಪಾಸನೆ ಮಾಡುವ ಸಚೇತನರು ಜೀವನ್ಮುಕ್ತರೆಂದೆನಿಸುವರು.

ಮುಂದಿನ ೩೧ನೆಯ ಪದ್ಯದಲ್ಲಿ ಕರುಣಾಸಮುದ್ರನಾದ ಶ್ರೀಪರಮಾತ್ಮನು ಬ್ರಹ್ಮದೇವರೇ ಮೊದಲಾಗಿ ಸಮಸ್ತದೇವತೆಗಳಲ್ಲಿ ತನ್ನ ಅನಂತಾನಂತ ರೂಪಗಳಿಂದ ವ್ಯಾಪ್ತನಾಗಿ, ಅವರವರಲ್ಲಿ ಬಿಂಬರೂಪದಿಂದಿದ್ದು, ಬಿಂಬಕ್ರಿಯಾದ್ವಾರಾ ಸಮಸ್ತವಾದ ವ್ಯಾಪಾರಗಳನ್ನು ನಿರಾಯಾಸವಾಗಿ ಮಾಡಿ, ಮಾಡಿಸಿ, ಅವರನ್ನು ಪುಣ್ಯವಂತರನ್ನಾಗಿ ಮಾಡಿ, ಸಕಲ ದೇವತೆಗಳ ಪುಣ್ಯಕರ್ಮಗಳನ್ನು ತಾನು ಸ್ವೀಕರಿಸಿ, (ಅವರ ಅಧಿಷ್ಠಾನದಲ್ಲಿ ತಾವೇ ನಿಂತು ಬಿಂಬಕ್ರಿಯಾದ್ವಾರಾ ಮಾಡಿ ಮಾಡಿಸಿದ ಪುಣ್ಯಕರ್ಮವನ್ನು ತಾನೇ ಇನ್ನೊಂದು ರೂಪದಿಂದ ಸ್ವೀಕರಿಸಿ), ಅವರಿಗೆ ಪುಣ್ಯಕರ್ಮಾಜನ್ಯಫಲವನ್ನು ಅವರಿಗೇ ಕೊಟ್ಟು ಪರಿಪಾಲನೆಮಾಡುವನು.

ಸಮುದ್ರದಲ್ಲಿ ಕಲೆತಿರುವ ಭಿನ್ನಭಿನ್ನವಾದ ನದಿಗಳ ಉದಕದ ವ್ಯತ್ಯಾಸವನ್ನು, ಆಕಾಶದಲ್ಲಿ ಸಂಚಾರಮಾಡುವ ಮೇಘಗಳು ಅರಿಯಬಲ್ಲವು. ನದಿಗಳೆಲ್ಲವೂ ಸಮುದ್ರದಲ್ಲಿ ಒಂದಾಗಿ ಕಲೆತರೂ, ಅವುಗಳ ನೀರಿನ ರುಚಿ ಇತ್ಯಾದಿ ಗುಣಗಳು ಪೃಥಕ್ ಪೃಥಕ್ಕಾಗಿಯೇ ಇರುವುವು. ಈ ವಿಷಯವನ್ನು ಅದೇ ಆಕಾಶದಲ್ಲಿ ಸಂಚರಿಸುವ ಕಾಗೆ, ಗುಬ್ಬಿ ಮುಂತಾದ ಪಕ್ಷಿಗಳು ತಿಳಿಯಲಾರವು. ಸರ್ವಶ್ರೇಷ್ಠರಾದ ಶೇಷದೇವರನ್ನೇ ಪರ್ಯಂಕವಾಗಿ ಉಳ್ಳ ಶೇಷಶಯನನಾದ ಶ್ರೀಪರಮಾತ್ಮನಲ್ಲಿ ತ್ರಿಗುಣಬದ್ಧವಾದ ಈ ಜಗತ್ತು ಆಶ್ರಯವನ್ನು ಹೊಂದಿದೆ ಎಂದು ಶಾಸ್ತ್ರಕೋವಿದರು ತಿಳಿಯಬಲ್ಲರೇ ಹೊರತು, ಅಜ್ಞಾನಿಗಳಿಗೆ ಆಶ್ರಯದಾತನಾದ ಈಶನಿಗೂ, ಆತನಲ್ಲಿ ಆಶ್ರಯವನ್ನು ಹೊಂದಿರುವ ಜಡಚೇತನಾತ್ಮಕವಾದ ಜಗತ್ತಿಗೂ ಇರುವ ಭೇದ ಜ್ಞಾನವು ಎಂದೆಂದಿಗೂ ತಿಳಿಯಲಾರದೆಂದು ತಾತ್ಪರ್ಯ.

ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು, ಪೃಥಿವ್ಯಾದಿ

ಭೂತ ಪಂಚಕಗಳು ಇವುಗಳಲ್ಲಿ ಆಯಾಯಾ ತತ್ತ್ವಗಳಿಗೆ ನಿಯಾಮಕರಾದ ಬ್ರಹ್ಮಾದಿ ತತ್ತ್ವಾಭಿಮಾನಿ ದೇವತೆಗಳಲ್ಲಿ ಅನಿರುದ್ಧ, ಪ್ರದ್ಯುಮ್ನ ಸಂಕರ್ಷಣ ಮತ್ತು ವಾಸುದೇವ ಎಂಬ ಮೂಲರೂಪೀ ನಾರಾಯಣನಿಂದ ಪ್ರಾದುರ್ಭಾವಗಳಾದ ಸ್ವಾಭಿನ್ನ ನಾಲ್ಕು ರೂಪಗಳನ್ನು ಪ್ರತಿನಿತ್ಯದಲ್ಲಿಯೂ, ಸರ್ವಕಾಲ ಮತ್ತು ದೇಶಗಳಲ್ಲಿಯೂ ಧ್ಯಾನಮಾಡುತ್ತಾ, ಆ ವಿಷಯುಗಳನ್ನು ಹೃನ್ಮಂದಿರದಲ್ಲಿ ಸ್ಥಿರಗೊಳಿಸಿಕೊಂಡು ಸಂತೋಷಪಡುತ್ತಾ, ಆನಂದೋದ್ರೇಕದಿಂದ ಪರವಶರಾಗಿ ಕೊಂಡಾಡುತ್ತಿರುವ ಭಗವದ್ಭಕ್ತರಿಗೆ ಬಿಂಬಾಪರೋಕ್ಷರೂಪವಾದ ತನ್ನ ದರ್ಶನ ಭಾಗ್ಯವನ್ನಿತ್ತು, ಅವರನ್ನು ಸಂಸಾರವೆಂಬ ಕರ್ಮ ಬಂಧನದಿಂದ ಬಿಡಿಸಿ, ಸಂರಂಕ್ಷಿಸುವನು ಎಂದು ಮುಂದಿನ ಪದ್ಯದ ಸಾರ.

ಇನ್ನು ಮತ್ಸ್ಯಾದಿ ದಶರೂಪಗಳ ಸ್ಥಾನಗಳನ್ನು ತಿಳಿಸುತ್ತಾರೆ. ಮನಸ್ಸಿನಲ್ಲಿ ಮೂಲರೂಪೀ ನಾರಾಯಣನೂ, ಎರಡು ಕಿವಿಗಳಲ್ಲಿ ಮತ್ಸ್ಯ ನಾಮಕನೂ ಕೂರ್ಮಾವತಾರ ಶ್ರೀಹರಿಯು ಚರ್ಮದಲ್ಲಿಯೂ ರಸನೇಂದ್ರಿಯವಾದ ನಾಲಿಗೆಯಲ್ಲಿ ಕೋಲರೂಪೀ ಶ್ರೀ ವರಹಾಮೂರ್ತಿಯೂ, ಮೂಗಿನ ಹೊಳ್ಳೆಗಳಲ್ಲಿ ನರಸಿಂಹದೇವರು ಇದ್ದಾರೆ. ಬಾಲಬ್ರಹ್ಮಚಾರಿಯಾದ ವಾಮನರೂಪೀ ಶ್ರೀಪರಮಾತ್ಮನು ಬಾಯಿಯಲ್ಲಿದ್ದಾನೆ. ಪರಶುರಾಮಾವತಾರಿ ಶ್ರೀಹರಿಯು ಕೈಗಳಲ್ಲಿಯೂ, ಕಾಲುಗಳಲ್ಲಿ ವಾಲಿಭಂಜನನಾದ ಶ್ರೀ ರಾಮಚಂದ್ರದೇವರೂ ಇದ್ದಾರೆ. ಶ್ರೀಕೃಷ್ಣರೂಪಿ ಪರಮಾತ್ಮನು ನೇತ್ರೇಂದ್ರಿಯಗಳಲ್ಲಿದ್ದಾನೆ ಎಂದು ೩ಳನೆಯ ಪದ್ಯದಿಂದ ತಿಳಿಸುತ್ತಾರೆ.

ಜಿನಕುಲದಲ್ಲಿ ಅವತರಿಸಿ ದುರ್ಜನರ ಮೋಹನಾರ್ಥವಾಗಿ ಬುದ್ಧನೆಂದು ಪ್ರಸಿದ್ಧನಾದ ಶ್ರೀಪರಮಾತ್ಮನು ವಾಯುತತ್ತ್ವದಲ್ಲಿಯೂ, ದೈತ್ಯಕುಲಕುಠಾರನಾದ ಕಲ್ಕ್ಯವತಾರಿ ಶ್ರೀಹರಿಯು ಉಪಸ್ಥದಲ್ಲಿಯೂ ಇದ್ದಾನೆ. ಇಂತು ಮೂಲರೂಪಿಯಾದ ಶ್ರೀಮನ್ನಾರಾಯಣನು ಮತ್ಸ್ಯಾದಿ ದಶರೂಪಗಳಿಂದ ದಶೇಂದ್ರಿಯುಗಳಲ್ಲಿ ಸ್ಥಿತನಾಗಿದ್ದು. ಆಯಾಯಾ ಇಂದ್ರಿಯಗಳ ದ್ವಾರಾ ವಿಷಯುಗಳನ್ನು ಸ್ವೀಕರಿಸಿ, ಆಯಾಯಾ ವಿಷಯಾಂತರ್ಗತ ಭಗವದ್ರೂಪಗಳಲ್ಲಿ ಕ್ರೀಡಿಸಿ, ಬಿಂಬಕ್ರಿಯಾದ್ವಾರಾ ವಿಷಯಾನುಭವಗಳನ್ನು ಜೀವರಿಗೆ ತಂದೀಯುವನು. ಹೀಗೆಂದು ಜ್ಞಾನಾನುಸಂಧಾನ ಪೂರ್ವಕ ತಿಳಿದು, ಸಮಸ್ತ ಕರ್ಮ

ಗಳನ್ನು ಕೃಷ್ಣಾರ್ಪಣ ಬುದ್ಧಿಯಿಂದ ಬಿಂಬನಿಗೆ ಅರ್ಪಿಸಲು, ಪಾಪಪರಿಹಾರಕನಾಗಿ ಜನಾರ್ದನರೂಪೀ, ಸರ್ವೋತ್ತಮನಾದ ಶ್ರೀಜಗನ್ನಾಥವಿಠ್ಠಲನು, ವಿಶ್ವವ್ಯಾಪಕನಾಗಿದ್ದು ಆ ವಿಷಯಗಳನ್ನು ಸ್ವೀಕರಿಸುವನು ಎಂದು ಪ್ರಸಕ್ತ "ಪಂಚಮಹಾಯಜ್ಞ ಸಂಧಿ" ಎಂಬ ಆರನೆಯ ಸಂಧಿಯನ್ನು ಈ ೩೫ನೆಯ ಅಂತ್ಯ ಪದ್ಯದಿಂದ ಉಪಸಂಹಾರ ಮಾಡಿರುತ್ತಾರೆ.

**|| ಇಂತು "ಪಂಚಮಹಾಯಜ್ಞ ಸಂಧಿ"ಯ ಸಂಧಿಸಾರವು ಮುಗಿಯಿತು ||**

|| ಶ್ರೀ ಮಧ್ವೇಶಾರ್ಪಣಮಸ್ತು ||

॥ ಶ್ರೀ ಲಕ್ಷ್ಮೀನರಸಿಂಹಾಯ ನಮಃ ॥

॥ ಶ್ರೀ ಜಗನ್ನಾಥವಿಠ್ಠಲ ಪ್ರಸೀದ ॥

# ಸಂಧಿ (೬)

# ಪಂಚಮಹಾಯಜ್ಞ ಸಂಧಿ

ಮಂಗಳಾಚರಣೆ :

ಹರಿಕಥಾಮೃತಸಾರ ಗುರುಗಳ ।
ಕರುಣದಿಂದಾಪನಿತು ಪೇಳುವೆ ।
ಪರಮ ಭಗವದ್ಭಕ್ತರಿದನಾದರದಿ ಕೇಳುವುದು ॥ ಪ ॥

## ಪದ್ಯ (೧)

ಮೂಲ :

ಜನನಿ ಪಿತ ಭೂ ವಾರಿದಾಂಬರ ।
ವೆನಿಪ ಪಂಚಾಗ್ನಿಯಲಿ ನಾರಾ ।
ಯಣನ ತ್ರಿಂಶತಿ ಮೂರ್ತಿಗಳ ವ್ಯಾಪಾರ ವ್ಯಾಪ್ತಿಗಳ ॥
ನೆನೆದು ದಿವಸಗಳೆಂಬ ಸಮಿಧೆಗ ।
ಳನು ನಿರಂತರ ಹೋಮಿಸುತ ಪಾ ।
ವನಕೆ ಪಾವನನೆನಿಪ ಪರಮನ ಬೇಡು ಪರಮಸುಖ ॥ ೧ ॥

ಅವತರಣಿಕೆ :-

ಪ್ರಸಕ್ತ ಪದ್ಯದಲ್ಲಿ ಪಂಚಾಗ್ನಿಗಳ ವಿಚಾರವನ್ನು ಪರಿಚಯಮಾಡಿಕೊಡುತ್ತಾರೆ ಜ್ಞಾನಿವರ್ಯರಾದ ದಾಸವರೇಣ್ಯರು. ತಾಯಿ, ತಂದೆ, ಭೂಮಿ, ಮೇಘಗಳು ಮತ್ತು ಆಕಾಶ ಎಂಬ ಈ ಐದು ಅಧಿಷ್ಠಾನಗಳೇ ಪಂಚಾಗ್ನಿಗಳು.

ಇವುಗಳಲ್ಲಿ ಪ್ರತಿಯೊಂದು ಅಗ್ನಿಯಲ್ಲಿ ಮೂಲರೂಪೀ ನಾರಾಯಣನು ಅನಿರುದ್ಧಾದಿ ಪಂಚರೂಪಗಳಿಂದ ವ್ಯಾಪ್ತನಾಗಿದ್ದಾನೆ. ಅಲ್ಲಿನ ಪಂಚಾಗ್ನಿಗಳು × ನಾರಾಯಣಾದಿ ಆರು ರೂಪಗಳು, ಅಂದರೆ ಮೂವತ್ತು ರೂಪಗಳಿಂದ ವಿದ್ಯಮಾನನಾಗಿರುವ ಪಂಚಮಹಾಯಜ್ಞಕ್ಕೆ ಮುಖ್ಯ ವಿಷಯನಾದ ಶ್ರೀಪರಮಾತ್ಮನ ವ್ಯಾಪಾರವ್ಯಾಪ್ತಿಗಳನ್ನು ಸ್ಮರಿಸುತ್ತ, ದಿನಗಳೆಂಬ ಸಮಿತ್ತುಗಳನ್ನು ಆಯಾಯಾ ಅಧಿಷ್ಠಾನಗತ ಅಗ್ನ್ಯಂತರ್ಗತ ಭಗವದ್ರೂಪಗಳಲ್ಲಿ ಹೋಮಿಸುತ್ತ, ಪಂಚಾಗ್ನಿಗತ ಶ್ರೀಪರಮಾತ್ಮನನ್ನು ಧ್ಯಾನಿಸುತ್ತಾ, ಜಗತ್ಪಾವನನಾದ ಸರ್ವೋತ್ತಮನಾದ ಪರಮಾತ್ಮನಲ್ಲಿ ಪರಮ ಪುರುಷಾರ್ಥ ರೂಪನಾದ ಮೋಕ್ಷಸುಖವನ್ನು ಬೇಡು ಎಂದು ತಿಳಿಸುತ್ತಾರೆ ಪ್ರಸಕ್ತ ಸಂಧಿಗತ ಈ ಪ್ರಪ್ರಥಮ ಪದ್ಯದಿಂದ ||೧||

**ಪ್ರತಿಪದಾರ್ಥ :-**

**ಜನನಿ**=ತಾಯಿ, **ಪಿತ**=ತಂದೆ, **ಭೂ**=ಭೂಮಿ, **ವಾರಿದ**=ಮೇಘ, **ಅಂಬರ**=ಆಕಾಶ, **ಎನಿಪ**=ಎಂದೆನಿಸುವ, **ಪಂಚಾಗ್ನಿಯಲಿ**=ಐದು ವಿಧವಾದ ಅಗ್ನಿಗಳಲ್ಲಿ, **ನಾರಾಯಣನ**=ಮೂಲರೂಪಿ ನಾರಾಯಣನ, **ತ್ರಿಂಶತಿ ಮೂರ್ತಿಗಳ**=ಮೂವತ್ತು ಸಂಖ್ಯಾಕವಾದ ಭಗವದ್ರೂಪಗಳ **ವ್ಯಾಪಾರ**=ಕ್ರಿಯಾವಿಶೇಷಗಳು, **ವ್ಯಾಪ್ತಿಗಳು**=ವ್ಯಾಪ್ತವಾಗಿರುವ ಅಧಿಷ್ಠಾನಗಳನ್ನು **ನೆನೆದು**=ಸ್ಮರಿಸುತ್ತ, **ದಿವಸಗಳೆಂಬ**=ನಮ್ಮ ಆಯುಷ್ಯಗತವಾದ ದಿವಸಗಳೆಂಬ **ಸಮಿಧೆಗಳನ್ನು**=ಕಾಷ್ಠಗಳನ್ನು **ನಿರಂತರ**=ನಿತ್ಯದಲ್ಲೂ **ಹೋಮಿಸುತ**=ಭಗವದರ್ಪಣ ಬುದ್ಧಿಯಿಂದ ಹೋಮ ಮಾಡುತ್ತಾ, **ಪಾವನಕೆ**=ಪವಿತ್ರ ವಸ್ತುಗಳನ್ನು **ಪಾವನನೆನಿಪ**=ಪವಿತ್ರೀಗೊಳಿಸುವ (ಅಗ್ನಿಯೇ ಪವಿತ್ರ ವಸ್ತುವು. ಅಂತಹ ಅಗ್ನಿಯನ್ನೇ ಪಾವನಗೊಳಿಸುವ) **ಪರಮನ**=ಸರ್ವೋತ್ತಮನಾದ ಶ್ರೀ ಪರಮಾತ್ಮನನ್ನು **ಪರಮ ಸುಖ**=ಪರಮಪುರುಷಾರ್ಥರೂಪವಾದ **ಮೋಕ್ಷದ** ಆನಂದವನ್ನು **ಬೇಡು**=ಪ್ರಾರ್ಥಿಸು || ೧ ||

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

**"ತತ್ರ ನರಕೇ ಕರ್ಮಫಲಂ ಭುಂಕ್ತ್ವಾ, ವೃಷ್ಟಿರೂಪೇಣ ನರಲೋಕಂ ಪ್ರಾಪ್ತೋ ವ್ರೀಹ್ಯಾದೀತರ ಜೀವದೇಹಗತೋ ದೈವಾಧೀನೇನ ಕರ್ಮಣಾ ಶರೀರ ಸ್ವೀಕಾರಾಯ ಪುರುಷಭುಕ್ತಾನ್ನಪರಿಣತ ರೇತೋ ಬಿಂದುಃ ಉದರಂ ಪ್ರವಿಷ್ಟೋ ಭವತಿ"**

—ಇದು ಪಂಚಾಗ್ನಿಗೆ ಪ್ರಮಾಣವು.

**"ದ್ಯುಪರ್ಜನ್ಯಧರಾ ಪುಂಸ್ತ್ರೀ ಕ್ರಮಾತ್ಪಂತಾಗ್ನಯಃ ಸ್ಮೃತಾಃ"** ||

—ಎಂಬ ಪ್ರಮಾಣಾನುಸಾರ, ಭೂಮಿಯಲ್ಲಿ ಜೀವ ಜನಿಸಬೇಕಾದರೆ, ಶ್ಲೋಕೋಕ್ತ ಐದು ಸ್ಥಾನಗಳ ದ್ವಾರಾ ಜನಿಸುತ್ತಾನೆ. ಆ ಐದು ಸ್ಥಾನಗಳಲ್ಲಿ ಆಯಸ್ಸು ಸಹಿತ ಹೋಮ ಕ್ರಮವನ್ನು ಹೇಳುತ್ತಾರೆ. ಜೀವ ಹೋಮವೂ, ಆಯುಷ್ಯ ಹೋಮವೂ, ಕರ್ಮಹೋಮವೂ ಹೇಳುತ್ತಾರೆ.

ಅಂಬರ–ಭೂಮಿಯಲ್ಲಿ ಜನನ ಆಗತಕ್ಕ ಜೀವ ಜನನಾತ್ಪೂರ್ವದಲ್ಲಿ ರಾಹು ಮಂಡಲಕ್ಕೆ ಅಧೋಭಾಗದಲ್ಲಿ ಇರತಕ್ಕ ಅಂತ್ಯಪುಣ್ಯಭೋಗ ಮಾಡತಕ್ಕ ಅಂಬರಗತ ಪಾಡಿ ನಕ್ಷತ್ರ ಮಂಡಲದಲ್ಲಿ ಇರುತ್ತಾನೆ. **"ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ"** ಎಂಬ ಪ್ರಮಾಣಾನುಸಾರ, ಪುಣ್ಯ ಕ್ಷೀಣವಾಗೋಣವೇ ಅಲ್ಲಿಂದ ಯಮದೂತರಿಂದ ನೂಕಲ್ಪಟ್ಟು, ಮರ್ತ್ಯ ಲೋಕ ಪ್ರವೇಶ ಮಾಡುತ್ತಾನೆ. ಭೂಮಿಯಲ್ಲಿ ಜನಿಸುವುದಕ್ಕೆ ಪೂರ್ವ, ವಾರಿದ–ಆ ಪ್ರವೇಶಕಾಲಕ್ಕೆ ಪ್ರಥಮತಃ ಅಲ್ಲಿಂದ ಅಂಬರಗತ ಮೇಘ ಮಂಡಲ ಪ್ರವೇಶ ಮಾಡುತ್ತಾನೆ. ವಾರಿದ ಎಂದರೆ, ಮೇಘ. ಭೂ– ಮೇಘ ಮಂಡಲದಿಂದ ಭೂ ಪ್ರವೇಶ ಮಾಡಿ, ಭೂಮಿಗೆ ಬಂದು, ವ್ರೀಹ್ಯಾದಿಗಳಲ್ಲಿ ಪ್ರವಿಷ್ಟನಾಗಿ ಇರುತ್ತಾನೆ. ಪಿತ–ತದನಂತರ ವ್ರೀಹ್ಯಾದಿ ದ್ವಾರಾ ಪಿತರುದರ ಪ್ರವೇಶಮಾಡಿ, ರೇತಃ ಸ್ಥಾನದಲ್ಲಿ ಇರುತ್ತಾನೆ. ಜನನಿ–

ಅಲ್ಲಿಂದ ಪಿತೃದ್ವಾರಾ ಮಾತೃ ಉದರ ಪ್ರವೇಶ ಮಾಡುತ್ತಾನೆ. ತದನಂತರ ಮಾತೃದ್ವಾರಾ ಶಿಶುತ್ವೇನ ಭೂಮಿಯಲ್ಲಿ ಜನಿಸುತ್ತಾನೆ.

ಈ ಪ್ರಕಾರ ಜನನಕ್ರಮ ಮತ್ತು ಇದರ ವಿವರ :—

(೧) ನಕ್ಷತ್ರಮಂಡಲ ಬಿಡೋಕಾಲಕ್ಕೆ ಅಲ್ಲಿರತಕ್ಕ ದೇಹ, ಅಲ್ಲಿನ ಆಯುಸ್ಸು, ನಕ್ಷತ್ರಗಳು ಆಶ್ರಯಿಸಿ ಇರುವ ಅಂಬರವೆನಿಪ ಅಗ್ನಿಯಲ್ಲಿ ಹೋಮತ್ವೇನ ಅನುಸಂಧಾನಮಾಡಿ, ಹೋಮಮಾಡಬೇಕು.

(೨) ಅಲ್ಲಿಂದ ಮೇಘಮಂಡಲಕ್ಕೆ ಬಂದು, ಪೂರ್ವದ ದೇಹ ಮೇಘ ಮಂಡಲದಲ್ಲಿ ಬಿಟ್ಟು, ದೇಹಾಂತರವನ್ನು ಅಲ್ಲಿ ಹೊಂದಿ, ಕೆಲವುಕಾಲ ಅಲ್ಲಿ ಇರುತ್ತಾನೆ. ಆದ್ದರಿಂದ ಆ ದೇಹ ಅಲ್ಲಿನ ಆಯುಸ್ಸು ವಾರಿದ ಎಂಬ ಅಗ್ನಿಯಲ್ಲಿ ಅನುಸಂಧಾನದಿಂದ ಹೋಮಿಸಬೇಕು.

(೩) ಅಲ್ಲಿಂದ ಭೂಮಿಗೆ ಬಂದು, ಆ ದೇಹವನ್ನು ಭೂಮಿಗೆ ಬಿಟ್ಟು, ವ್ರೀಹ್ಯಾದಿಗಳಲ್ಲಿ ದೇಹ ಧರಿಸಿ ಇರುತ್ತಾನೆ. ಆದ್ದರಿಂದ ಆ ದೇಹದಲ್ಲಿನ ಆಯುಸ್ಸು ಭೂಸಾಂಕೇತವಾದ ಅಗ್ನಿಯಲ್ಲಿ ಅನುಸಂಧಾನದಿಂದ ಹೋಮಿಸಬೇಕು.

(೪) ಅಲ್ಲಿಂದ ಪಿತನ ಉದರವನ್ನು ಭೋಜನ, ಪಾನ ದ್ವಾರಾ ಪ್ರವೇಶ ಮಾಡಿ, ಅಲ್ಲಿ ಪೂರ್ವದ ದೇಹವನ್ನು ಬಿಟ್ಟು, ರೇತೋದೇಹ ಧರಿಸಿ, ಕೆಲವು ಕಾಲ ಅಲ್ಲಿ ಇರುತ್ತಾನೆ. ಆದ್ದರಿಂದ ಆ ದೇಹ ಅಲ್ಲಿನ ಆಯುಸ್ಸು ಪಿತೃ ಸಾಂಕೇತವಾದ ಅಗ್ನಿಯಲ್ಲಿ ಅನುಸಂಧಾನದಿಂದ ಹೋಮಿಸಬೇಕು.

(೫) ಅಲ್ಲಿಂದ ಮಾತೃ ಉದರವನ್ನು ರೇತೋದೇಹ ಸಹಿತವಾಗಿ ಪಿತೃ ದ್ವಾರಾ ಪ್ರವೇಶಮಾಡುತ್ತಾನೆ. ಅಲ್ಲಿ ಪಿತೃಸಂಬಂಧ ರೇತಸ್ಸು, ಮಾತೃ ಸಂಬಂಧ ಶೋಣಿತ ಎರಡೂ ಮೇಳನವಾಗಿ, ಉಭಯ ಮಿಶ್ರ ದೇಹವನ್ನು ಧರಿಸಿ ಕೆಲವು ಕಾಲ ಅಲ್ಲಿ ಇರುತ್ತಾನೆ. ಆದ್ದರಿಂದ ಅಲ್ಲಿನ ಆಯುಸ್ಸು ಆ ದೇಹ ಜನ

ನಾಭ್ಯ ಅಗ್ನಿಯಲ್ಲಿ ಅನುಸಂಧಾನದಿಂದ ಹೋಮಿಸಬೇಕು. ಈ ಪ್ರಕಾರ ಜೀವನಿಗೆ ಸಂಬಂಧಿಸಿದ ಜನನ ಯಜ್ಞ.

ಮಾತೃ ಉದರದಿಂದ ಜನಿಸಿದ ನಂತರ, ಮರಣಾಂತವರಿಗೂ ಈ ದೇಹ, ಅದಕ್ಕೆ ಅನುಸರಿಸಿದ ಆಯಸ್ಸು ದೇಹಾಂತರ್ಗತ ಪಂಚಾಗ್ನಿಯಲ್ಲಿ ಹಾಂಗೆ ಪೂರ್ವಾಧಿಯಲ್ಲಿ ಚತುರ್ದಿಕ್ಕಿನ ಊರ್ಧ್ವ ಭಾಗದಲ್ಲಿ ಅಂತು, ಐದು ದಿಕ್ಕುಗಳಲ್ಲಿ ದಿಕ್ಕು ಒಂದಕ್ಕೆ ಇನ್ನೂರು ಕಿರಣಗಳ ಮೇರೆಗೆ, ಪಂಚವಿಧವಾಗಿ ವ್ಯಾಪಿಸಿದ ಕಿರಣಗಳೆಂಬ ಪಂಚಾಗ್ನಿಯಲ್ಲಿ ಅನುಸಂಧಾನದಿಂದ ಹೋಮಿಸುತ್ತಾ ಇರಬೇಕು. ಇದರಂತೆ ಮರಣ ಯಜ್ಞವು. ಅದರ ವಿವರ ಹ್ಯಾಗೆಂದರೆ:—

(೧) ಮರಣಹೊಂದಿದ ಸ್ಥೂಲಶರೀರ.
(೨) ಮರಣಾನಂತರ ಬರತಕ್ಕ ಪ್ರೇತದೇಹ.
(೩) ದಶ ದಿನಾನಂತರ ಬರತಕ್ಕ ಆಂತರಿಕ ದೇಹ.
(೪) ತದನಂತರ ವೈತರಣೀ ತೀರದಲ್ಲಿ ಬರತಕ್ಕ ಯಾತನಾ ಶರೀರ.
(೫) ಯಮಲೋಕದಿಂದ ನರಕಪ್ರವೇಶ ಕಾಲಕ್ಕೆ ಹೊಂದತಕ್ಕ ಯಾತನಾಶರೀರ.

ಈ ಪ್ರಕಾರ ದೇಹಗಳ, ಅಲ್ಲಿನ ಆಯಸ್ಸುಗಳ ಅಲ್ಲಲ್ಲೇ ಅನುಸಂಧಾನದಿಂದ ಹೋಮಿಸಬೇಕು. ಎನಿಪ-ಜನನಾದ್ಯಾದಿ ಪಂಚ ಎನತಕ್ಕ, ಪಂಚಾಗ್ನಿಯಲ್ಲಿ-ಅಂಬರಾದಿ ಜನನ್ಯಾಂತ ಪಂಚಾಗ್ನಿಯಲ್ಲಿ, ನಾರಾಯಣನ-ಪ್ರಥಮಾಗ್ನಿಯಲ್ಲಿ ನಾರಾಯಣನ (ತದ್ವತ್ ಅವಶಿಷ್ಟಾಗ್ನಿಗಳಲ್ಲಿ ಕ್ರಮಾತ್ ವಾಸುದೇವಾದಿ ಅನಿರುದ್ಧಾಂತ ನಾಲ್ಕು ರೂಪಗಳ) ತ್ರಿಂಶತಿ ಮೂರ್ತಿಗಳ ಯಜ್ಞೋಪಕರಣ ಅನುಸರಿಸಿ ಒಂದೊಂದು ಅಗ್ನಿಗೆ ಆಗತಕ್ಕ ರೂಪಗಳು ಆರು. ಆರು ಮೇರೆಗೆ ಮೂವತ್ತು ಭಗವನ್ಮೂರ್ತಿಗಳ, ವ್ಯಾಪಾರ, ಯಜ್ಞೋಪಕರಣಗಳ ದ್ವಾರಾ, ಆಯಾ ಭಗದ್ರೂಪಗಳಿಂದ ಆಗತಕ್ಕ ವ್ಯಾಪಾರ, ವ್ಯಾಪ್ತಿಗಳ ದಾವ ದಾವ ಭಗವದ್ರೂಪ ದಾವ ದಾವ ಉಪಕರಣಗಳಲ್ಲಿ ವ್ಯಾಪ್ತಿಯೋ, ಆ ವ್ಯಾಪ್ತಿಗಳ ನೆನೆದು, ಅನುಸಂಧಾನದಿಂದ ತಿಳಿದು ಸ್ಮರಿಸಿ. ದಿವಸಗಳೆಂಬ-ದಿವಸಾಂತ್ಯಗಳೆಂಬು

ದರನ್ನು, ಸಮಿಧೆಗಳನ್ನು-ಸಮಿತ್ತುಗಳನ್ನಾಗಿ ಅನುಸಂಧಾನಮಾಡಿ, ನಿರಂತರ ಹೋಮಿಸುತ್ತ, ಪ್ರತಿದಿಸದಲ್ಲೂ ಹೋಮಮಾಡುತ್ತಾ, ಪಾವನಕೆ ಸ್ವರೂಪತಃ ಪಾವನನಾದ ಭಗವದ್ಭಕ್ತನಾದ ಜೀವನ ಲಿಂಗಭಂಗ ಐದಿಸಿ, ಪಾವನನೆನಿಪ, ಪಾವನ ಎನಿಸತಕ್ಕ ಮತ್ತು ಪಾವನ ಸಾಂಕೇತನಾದ ಅಗ್ನಿಯನ್ನು ಪಾವನಮಾಡ ತಕ್ಕ ಶ್ರೀಪರಮಾತ್ಮನ ಪರಮನ ಬೇಡು. ಉತ್ತಮವಾದ ಜ್ಞಾನಭಕ್ತಿ ವೈರಾಗ್ಯಯುಕ್ತವಾದ ಮನಸ್ಸು ಸದಾ ಇರುವಂತೆ ಪ್ರಾರ್ಥಿಸು. ಪರಮ ಸುಖ-ಉತ್ತಮವಾದ ಪದವನ್ನು ಐದೋದಕ್ಕೋಸ್ಕರ ಶ್ರೀಪರಮಾತ್ಮನ ಪ್ರಾರ್ಥನೆಮಾಡು. ಇಹದಲ್ಲೂ ಮಹದೈಶ್ವರ್ಯಾದಿಗಳಿಂದ ಇರುವಂಥಾ ಹರನ್ನು ಬೇಡು ಎಂದು ತಾತ್ಪರ್ಯ.

**ವಿಶೇಷಾರ್ಥ:–**

ಜನನಿ, ಪಿತ, ಭೂ, ವಾರಿದ. ಅಂಬರ ಇವುಗಳಲ್ಲಿ ಐದು ಅಗ್ನಿಗಳು ಚಿಂತಿಸಬೇಕು, ಆ ಐದು ಅಗ್ನಿಗಳು ಯಾವುವೆಂದರೆ;—

(೧) ಜನನಿಯಲ್ಲಿ ಆಹವನೀಯಾಗ್ನಿ.

(೨) ಪಿತನಲ್ಲಿ ಗಾರ್ಹಸ್ಪತ್ಯಾಗ್ನಿ.

(೩) ಭೂಮಿಯಲ್ಲಿ, ಅಂದರೆ,ಭೂ ಸಾಂಕೇತವಾದ ಅನ್ನರೂಪವಾದ ವ್ರೀಹ್ಯಾದಿಗಳಲ್ಲಿ ದಕ್ಷಿಣಾಗ್ನಿ.

(೪) ಮೇಘದಲ್ಲಿ ಸೋಮಾಗ್ನಿ (ಸಭ್ಯಂಚಿತಿ ಎಂದು ಹೆಸರು.)

(೫) ಆಕಾಶದಲ್ಲಿ ಸಾವಸತಿ ಎಂಬ ಅಗ್ನಿ.

ಅಂತು, ಐದು ಅಗ್ನಿಗಳು ಐದರಲ್ಲಿ ಚಿಂತಿಸಬೇಕು.

ತ್ರಿಶಂತಿ ಮೂರ್ತಿಗಳು :—

ಅಂದರೆ ಜನನ್ಯಾದಿ ಪಂಚಾಗ್ನಿಗಳಲ್ಲಿ ಕ್ರಮಾಲಂಕಾರದಿಂದ ಅಭಿವ್ಯಕ್ತ ವಾದ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವ ನಾಲ್ಕು ರೂಪಗಳು. ನಾರಾಯಣ ಮೂಲರೂಪ ಒಂದು. ಅಂತು ಐದು ರೂಪ ಗಳು ತಿಳಿಯಬೇಕು. ಈ ಐದು ರೂಪಗಳೇ ಐದು ಅಗ್ನಿಗಳಲ್ಲಿ ಐದು ರೂಪ ಗಳ ಧರಿಸಿ ಇದ್ದಾರೆ. ಮೂವತ್ತು ಹ್ಯಾಗೆಂದರೆ, ಒಂದೊಂದು ಅಗ್ನಿಯಲ್ಲಿ

ಆರಾರು ರೂಪಗಳು, ದಾವದು ಎಂದರೆ, ಜನನೀಗತ ಅಹವನೀಯಾಗ್ನಿಯಲ್ಲಿ ಅನಿರುದ್ಧರೂಪ ಒಂದು. ಇದರಿಂದ ಅಭಿವ್ಯಕ್ತವಾದದ್ದು ಅನಿರುದ್ಧ ರೂಪದಿಂದ ಅನಿರುದ್ಧ ಪ್ರದ್ಯುಮ್ನ, ಅನಿರುದ್ಧ ಸಂಕರ್ಷಣ, ಅನಿರುದ್ಧ ವಾಸುದೇವ, ಅನಿರುದ್ಧ ನಾರಾಯಣ, ಮೂಲರೂಪ ನಾರಾಯಣ ರೂಪ. ಅಂತು ಆರು ರೂಪಗಳು ಇದೇ ಪ್ರಕಾರ ಒಂದು ಅಗ್ನಿಯಲ್ಲಿ ಆರು ರೂಪ ಗಳ ಪ್ರಕಾರ ಆರು ಐದು ಮೂವತ್ತು ರೂಪಗಳು ಆಯಿತು.

ವ್ಯಾಪಾರ ವ್ಯಾಪ್ತಿಯ ನೆನೆದು- ವ್ಯಾಪಾರ ಎಂದರೆ ಕರ್ಮ. ವ್ಯಾಪ್ತಿಗಳು ಎಂದರೆ, ಅನಿರುದ್ಧಾದಿ ರೂಪಗಳ ವ್ಯಾಪ್ತಿಗಳ ನೆನೆದು ಎಂದು ಅರ್ಥ.

ಮೇಲೆಹೇಳಿದ ಜಡ ಹೋಮದಿಂದ ಪರಮಾತ್ಮನ ಅರ್ಪಣಮಾಡೋದರಿಂದ ದೋಷ ಎಂತಲೂ, **"ಶುಭಂ ಪಿಬತ್ಯಾಸೌ ನಿತ್ಯಂ"** ಎಂಬ ವಚನಾನುಸಾರ ಶುಭಾಶುಭ ಕರ್ಮಗಳೇನು ಪರಮಾತ್ಮಗೆ ಅರ್ಪಿತರೂಪವಾದ ಹೋಮ ಮಾಡೋದರಿಂದ ದೋಷ ಎಂತಾಗಲಿ,ವಿಕಾರವನ್ನೈದತಾನೆ ಎಂತಾಗಲೀ ಶಂಕಿಸಬಾರದು. ಯಾಕೆಂದರೆ ಶ್ರೀಪರಮಾತ್ಮ ಪಾವನಕೆ ಪಾವನ, ಎಂದರೆ ಸರ್ವವೂ ಭಕ್ಷಿಸತಕ್ಕ ಅಗ್ನಿ ಆದರದರ ದೋಷದಿಂದ ಸಂಬಂಧವಾಗದೇ ಅಗ್ನಿಯಲಿ ಕಾಷ್ಠಾದಿ ಕುರುಳುಗಳು ಹಾಕಿದವ ದೋಷಿ ಎಂತ ಎನದೇ, ಪುಣ್ಯ ಫಲವನ್ನು ಯಜ್ಞಯಾಗಾದಿಕ್ರಿಯೆಗಳಿಂದ ಹ್ಯಾಂಗೆ ಫಲ ಲಾಭವನ್ನು ಹೊಂದ ತಾನೋ, ತದ್ವತ್ ಪರಮಾತ್ಮನೆಂದು ತಿಳಿ. ಹ್ಯಾಗೆಂದರೆ, ಸರ್ವವೂ ಭುಜಿಸಿ ಪಾವನನಾಗಿ ಇರತಕ್ಕ ಅಗ್ನಿಯನ್ನು ಪಾವನ ಮಾಡತಕ್ಕ ಪರಮಾತ್ಮನು ಎನಿಸಿದ ಶ್ರೀಪತಿಯಾದವಗೆ ಶುಭಾಶುಭಕರ್ಮಗಳು ಅರ್ಪಿಸೋಣದರಿಂದ ವಿಕಾರವನ್ನೈದೋದಿಲ್ಲ. ಅರ್ಪಿಸಿದವನು ದೋಷಿಯಾಗತಾನಾ ಎಂದರೆ, ಅವನೂ ದೋಷಿಯಾಗೋದಿಲ್ಲ.

ಪರಮಾತ್ಮ ಅರ್ಪಿತಮಾಡಿದ್ದರನ್ನ ಸ್ವೀಕಾರ ಮಾಡುತ್ತಾನೆ. ದಾವದರನ್ನ ಎಂದರೆ–ಅರ್ಪಿತಮಾಡಿದ್ದರಲ್ಲಿ ಅಂತರ್ಗತನಾಗಿ ಇರತಕ್ಕ ತನ್ನ ಸ್ವರೂಪವನ್ನು ತಾನು ಸ್ವೀಕರಿಸಿ, ಮಾಡತಾನೇ ಹೊರ್ತು, ತದನ್ಯ ಸ್ವೀಕಾರ ಮಾಡೋದಿಲ್ಲ ಎಂದು ತಾತ್ಪರ್ಯ.

ಜನನಾಂತರದಲ್ಲಿ ಮರಣಾಂತವೇನು. ಮರಣ ಐದಿದ ನಂತರ ನಕ್ಷತ್ರ ರೂಪನಾಗಿ ಆಕಾಶ ಪ್ರವೇಶವಾಗೋವರಿಗೂ ಹ್ಯಾಂಗೆ ಅರ್ಪಣೆಕ್ರಮ ಎಂದರೆ-

ಮಾತೃಗರ್ಭದಿಂದ ಜನಿಸಿದ ನಂತರ ಮರಣಾಂತದವರೆಗೂ ಪಂಚಾಗ್ನಿ ಹೋಮಕ್ರಮ. ಇದರ ವಿವರ:—

ಪಂಚಾಗ್ನಿದಾವದೆಂದರೆ, ಸೂರ್ಯಕಿರಣಗಳಲ್ಲಿ ಪಂಚಾಗ್ನಿಗಳು ಅವೆ. ಹ್ಯಾಗೆಂದರೆ, ತೇಜೋಗುಣ ಸೂರ್ಯನದು. ಸುಡತಕ್ಕ ಗುಣ ಅಗ್ನಿಯದು. ಹಗಲಲ್ಲಿ ಅಗ್ನಿ ಒಂದಂಶದಿಂದ ಸೂರ್ಯಕಿರಣಗಳಲ್ಲಿ ಪ್ರವಿಷ್ಟನಾಗಿರುತ್ತಾನೆ. ರಾತ್ರಿಯಲ್ಲಿ ಅಗ್ನಿಯಲ್ಲಿ ಸೂರ್ಯಕಿರಣಗಳು ಒಂದಂಶದಿಂದ ಪ್ರವಿಷ್ಟವಾಗಿರುತ್ತವೆ. ದೀಪದಲ್ಲಿ ಪ್ರಕಾಶ ಸೂರ್ಯನದು. ಸುಡೋಣ ಅಗ್ನಿಯದು. ಈ ಪ್ರಕಾರ ನೇಮ. ಆದ್ದರಿಂದ ಸೂರ್ಯಕಿರಣಗಳಲ್ಲಿ ಪಂಚಾಗ್ನಿಗಳು ಇವೆ. ದಾವ ಅಗ್ನಿ ಎಲ್ಲೆಲ್ಲಿ ಇದೆ ಎಂದರೆ—ಸೂರ್ಯಕಿರಣಗಳು ಸಾವಿರ. ಸಾವಿರಕ್ಕೂ ಐದು ದಿಕ್ಕಿನಲ್ಲಿ, ದಿಕ್ಕೂ ಒಂದಕ್ಕೆ ಇನ್ನೂರು ಪ್ರಕಾರ ಐದು ದಿಕ್ಕುಗಳಿಗೆ ಸಾವಿರ ಕಿರಣಗಳು ಆಯಿತು. ದಿಕ್ಕುಗಳು, ದಿಕ್ಕುಗತ ಕಿರಣಗಳು, ಕಿರಣಗತ ಅಗ್ನಿಗಳು, ಅಗ್ನಿಗತ ಭಗವದ್ರೂಪಗಳು. ಈ ವಿವರಗಳನ್ನು ಈ ಕೆಳಗಿನ ಪ್ರಕಾರ ತಿಳಿಯಬೇಕು:—

| ಕ್ರಮ ಸಂಖ್ಯೆ | ದಿಕ್ಕುಗಳು | ಕಿರಣ ವರ್ಣ | ಕಿರಣಗತ ಅಗ್ನಿ | ಅಗ್ನಿಗತ ಭಗವದ್ರೂಪ |
|---|---|---|---|---|
| ೧ | ಪೂರ್ವ ೨೦೦ಕಿರಣಗಳು | ನೀಲವರ್ಣ | ಅಹವನೀಯಾಗ್ನಿ | ಅನಿರುದ್ಧನಾಮಕ ಪರಮಾತ್ಮ |
| ೨ | ದಕ್ಷಿಣ ೨೦೦ ಕಿರಣಗಳು | ಪೀತವರ್ಣ | ಗಾರ್ಹಪತ್ಯ ಅಗ್ನಿ | ಪ್ರದ್ಯುಮ್ನ |
| ೩ | ಪಶ್ಚಿಮ ೨೦೦ ಕಿರಣಗಳು | ಸ್ವರ್ಣವರ್ಣ | ದಕ್ಷಿಣಾಗ್ನಿ | ಸಂಕರ್ಷಣ |

| | | | | |
|---|---|---|---|---|
| ೪ | ಉತ್ತರ ೨೦೦ ಕಿರಣಗಗು | ಶುಭ್ರವರ್ಣ | ಸೋಮಾಗ್ನಿ (ಸಭ್ಯಂಚಿತ) | ವಾಸುದೇವ |
| ೫ | ಊರ್ಧ್ವ ೨೦೦ ಕಿರಣಗಳು | ರಕ್ತವರ್ಣ | ನಾವಸತ್ತಿಅಗ್ನಿ | ನಾರಾಯಣ ನಾಮಕ ಪರಮಾತ್ಮ |

ಈ ಪ್ರಕಾರ ಐದು ವಿಧ ಕಿರಣಗಳಲ್ಲಿ ಐದು ವಿಧ ಅಗ್ನಿ ಇದೆ. ಐದು ಭಗವದ್ರೂಪಗಳು ಪೂರ್ವೋಕ್ತ ಕ್ರಮದಿಂದ ಒಂದೊಂದರಲ್ಲಿ ಆರಾರು ರೂಪಗಳ ಕ್ರಮಕ್ಕೆ ಮೂವತ್ತು ರೂಪಗಳ ಚಿಂತಿಸಿ, ಜನನವಾದ ಸ್ಥೂಲದೇಹ ಸಹಿತ ಜೀವನ ಸ್ಥೂಲದೇಹಗತ ಕರ್ಮಗಳೂ, ಸ್ಥೂಲದೇಹಕ್ಕೆ ಏರ್ಪಟ್ಟು ಇರುವ ಆಯಸ್ಸುಗಳ ಸೂರ್ಯ ಕಿರಣಾಂತರ್ಗತ ಪಂಚಾಗ್ನಿಗಳಲ್ಲಿ ಹೋಮಿಸಬೇಕು. ಜನನಾನಂತರ ಮರಣದವರೆಗೂ ಹೋಮಿಸತಕ್ಕ ಪಂಚಾಗ್ನಿಗಳ ಕ್ರಮವಿದು. ಇದು ಬಹಿಯಲ್ಲಿ ಹೋಮಕ್ರಮ.

ದೇಹದಲ್ಲಿ ದೇಹವನ್ನು ಮತ್ತು ಜೀವನ್ನು ಹೋಮಿಸುವ ಕ್ರಮ :–

ದೇಪದಲ್ಲಿ ಪಂಚಾಗ್ನಿಗಳು ಇವೆ. ಅದರ ಸ್ಥಾನಗಳು ದಾವವೆಂದರೆ – ಮುಖದಲ್ಲಿ ಆಹವನೀಯಾಗ್ನಿ, ಹೃದಯದಲ್ಲಿ ಗಾರ್ಹಪತ್ಯಾಗ್ನಿ, ನಾಭಿಯಲ್ಲಿ ದಕ್ಷಿಣಾಗ್ನಿ, ವಾಮಪಾರ್ಶ್ವ ಕುಕ್ಷಿಯಲ್ಲಿ ಸಭ್ಯಂಚಿತಿ ಅಗ್ನಿ, ಬಲಪಾರ್ಶ್ವಕುಕ್ಷಿಯಲ್ಲಿ ನಾವಸತ್ತಿ ಅಗ್ನಿ. ಈ ಐದರಲ್ಲಿ ಸೂರ್ಯಕಿರಣಗಳು, ಭಗವದ್ರೂಪಗಳು ಮೂವತ್ತು ಇರೋದಾಗಿ ಇದೆ. ಈ ದೇಹಗತ ಪಂಚಾಗ್ನಿಗಳಲ್ಲಿ ಮೂವತ್ತು ರೂಪಗಳ ತಿಳಿದು, ದೇಹವನ್ನ ಜೀಪನ್ನ, ಆಯುಷ್ಯವನ್ನ, ಕರ್ಮಗಳನ್ನ, ಯಾವತ್ತು ಹೋಮಮಾಡಬೇಕು. ಜನನ ಯಜ್ಞ ಒಂದು. ಸ್ಥಿತಿ ಯಜ್ಞ ಒಂದು. ಅಧ್ಯಾತ್ಮ ಯಜ್ಞ ಒಂದು. ಈ ರೀತಿ ಮೂರು ಪ್ರಕಾರವಾಯಿತು. ಮರಣಯಜ್ಞವನ್ನ ಉತ್ತರೋತ್ತರ ಹೇಳುತ್ತಾರೆ. ॥೧॥

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ:–

ಪೂರ್ವಸಂಧಿಯಲ್ಲಿ ಪರಮಾತ್ಮನು ಸುಲಭ ಸಾಧ್ಯನೆಂದು ತೋರಿಸುವುದ

ಕ್ಕಾಗಿ ನಾವು ಸ್ನಾನಮಾಡುವುದು, ಉಂಬುವುದು, ಉಡುವುದೆಲ್ಲವೂ ಭಗವತ್ಪೂಜೆ ಎಂದು ಭಾವಿಸಿದರೆ ಸಾಕು; ಪರಮಾತ್ಮನು ಮೆಚ್ಚುವನು. ವನಕ್ಕೆ ಹೋಗಿ ತಪಸ್ಸು ಮಾಡಿದರೇನೇ ಮುಕ್ತಿ ಆಗುವುದು, ಇಲ್ಲವಾದರೆ ಇಲ್ಲವೆಂದಲ್ಲ ಎಂಬುದೇ ಮೊದಲಾದ ಅರ್ಥವನ್ನು "ವಿಭೂತಿ" ಸಂಧಿಯಲ್ಲಿ ನಿರೂಪಿಸಿದರು. ಈ ಸಂಧಿಯಲ್ಲಿ ಯಾಗಗಳನ್ನು ಮಾಡುವವರು ಅಗ್ನಿಯ ಮುಂದೆ ಕೂತು, ಹೊಗೆಯಿಂದ ಕಣ್ಣು ಇಂಗಿಸಿಕೊಂಡು ಹೋಮಾದಿಗಳನ್ನು ಮಾಡುವುದೇ ಯಾಗವಲ್ಲ. ಅನುಸಂಧಾನಪೂರ್ವಕ ಭಗವಂತನ ವ್ಯಾಪ್ತಿಯನ್ನು ತಿಳಿದು ತಾಯಿ ತಂದೆ ಮೊದಲಾದವರ ಸೇವೆಯೇ ಯಾಗವೆಂದು "ಪಂಚ ಮಹಾ ಯಜ್ಞ" ವೆಂಬ ಈ ಸಂಧಿಯಲ್ಲಿ ಯಾಗಲಕ್ಷಣವನ್ನು ನಿರೂಪಿಸಲಾರಂಭಿಸಿ, ಪ್ರಥಮ ಪದ್ಯದಿಂದ, ಈ ಸಂಧಿಯಲ್ಲಿ ನಿರೂಪಿಸುವ ವಿಷಯಗಳ ಸಂಗ್ರಹವನ್ನು ಸೂಚಿಸುತ್ತಾರೆ. ಅದು ಹೇಗೆಂದರೆ:-

ಅಗ್ನಿ ಎಂದರೆ ಕೇವಲ ಬೆಂಕಿಯೆಂತಲೂ, ಸಮಿಧ ಎಂದರೆ ಕೇವಲ ಕಾಷ್ಠಗಳೆಂದೇ ಅರ್ಥವಲ್ಲ. ತಾಯಿ, ತಂದೆ, ಭೂಮಿ, ಮೇಘ ಮತ್ತು ಆಕಾಶ ಈ ಐದೂ ಅಗ್ನಿಗಳು. ಈ ಪಂಚಾಗ್ನಿಗಳಲ್ಲಿ ನಾರಾಯಣನು ಅನಿರುದ್ಧಾದಿ ಪಂಚರೂಪಗಳಿಂದ ಇರುವನಲ್ಲದೆ, ತಾಯಿ ಮೊದಲಾದ ಒಂದೊಂದು ಅಗ್ನಿಯಲ್ಲಿಯೂ ಅನಿರುದ್ಧಾದಿ ೫ ರೂಪಗಳಿಂದ ವ್ಯಾಪ್ತನಾಗಿರುವನು. ಇದರ ವಿವರ ಹೀಗೆ : –ತಾಯಿ ಎಂಬ ಅಗ್ನಿಯಲ್ಲಿ ಅನಿರುದ್ಧ ರೂಪವಿರುವುದು. ಆ ಅನಿರುದ್ಧನೊಳಗೆ ಅನಿರುದ್ಧ ಅನಿರುದ್ಧ, ಅನಿರುದ್ಧ ಪ್ರದ್ಯುಮ್ನ, ಅನಿರುದ್ಧ ಸಂಕರ್ಷಣ, ಅನಿರುದ್ಧ ವಾಸುದೇವ ಮತ್ತು ಅನಿರುದ್ಧ ನಾರಾಯಣ ಹೀಗೆ ಒಂದು ರೂಪದಲ್ಲಿ ೫ ರೂಪಗಳು. ಇದರಂತೆ ತಂದೆಯಲ್ಲಿ ಪ್ರದ್ಯುಮ್ನ, ಅವನಲ್ಲಿ ಪ್ರದ್ಯುಮ್ನ ಅನಿರುದ್ಧಾದಿ ಐದು ರೂಪಗಳು. ಅಂತು ಒಂದೊಂದು ಅಗ್ನಿಯಲ್ಲಿ ಆರು ರೂಪಗಳಂತೆ, ೫ ಅಗ್ನಿಗಳಲ್ಲಿ ಮೂವತ್ತು ರೂಪಗಳಿಂದ ಇರುವನು. ಅಥವಾ ತಾಯಿ ತಂದೆ ಮೊದಲಾದ ಐವರಲ್ಲಿ ೫ ರೂಪಗಳು. ಒಬ್ಬೊಬ್ಬರಲ್ಲಿ ಅನಿರುದ್ಧಾದಿ ಐದು ರೂಪಗಳು ಅಂತು ೩೦ ರೂಪಗಳಿಂದ ಇರುವನು. ಇವನ ವ್ಯಾಪಾರವೇನೆಂದರೆ, ತಾಯಿಯಲ್ಲಿದ್ದು ಹುಟ್ಟಿಸುವನು. ತಂದೆಯಲ್ಲಿದ್ದು ಬೀಜಭೂತನನ್ನಾಗಿ ಮಾಡು

ವನು. ಭೂಮಿ ಧಾನ್ಯವನ್ನು ಕೊಡುವುದು. ಮೇಘವು ನೀರನ್ನು ಕೊಡುವುದು. ಆಕಾಶವು ಅವಕಾಶವನ್ನು ಕೊಡುವುದು. ಹೀಗೆ ಐದು ಅಗ್ನಿಗಳಲ್ಲಿ ಒಟ್ಟು ಮೂವತ್ತು ರೂಪಗಳಿಂದ ಮಾಡುವ ವ್ಯಾಪಾರಗಳನ್ನು ಈ ಅಗ್ನಿಗಳಲ್ಲಿ ವ್ಯಾಪ್ತಿಯನ್ನು ಸ್ಮರಿಸಿ, ದಿವಸಗಳೆಂಬುದೇ ಕಟ್ಟಿಗೆಗಳು. ಈ ರೀತಿಯಾಗಿ ಪೂಜಾರೂಪವಾದ ಹೋಮಗಳನ್ನು ಮಾಡುತ್ತಾ, ಪಾವನಕೆ ಪಾವನತ್ವವನ್ನು ಉಂಟುಮಾಡುವ ಶ್ರೀಪರಮಾತ್ಮನನ್ನು ಪ್ರಾರ್ಥಿಸಲು, ಪರಮಸುಖಕರವಾದ ಮುಕ್ತಿಯನ್ನು ಕೊಡುವನು. ॥೧॥

(೩) "ಭಾವದರ್ಪಣಟೀಕಾ ವ್ಯಾಖ್ಯಾನ":—

"ದ್ಯುಪರ್ಜನ್ಯ ಧರಾಪುಂಸ್ತ್ರ್ಯಾಖ್ಯ ಪಂಚಾಗ್ನಿ ನಿಷ್ಠಾ ವಾ॥"

ಎಂಬ ಶ್ರುತಿಯೂ

"ದ್ಯು ಪರ್ಜನ್ಯ ಧರಾ ಪುಂ ಸ್ತ್ರೀ ಕ್ರಮಾತ್ಪಂಚಾಗ್ನಯಃ ಸ್ಮೃತಾ॥" ಎಂಬ ಕಾಠಕ ಭಾಷ್ಯೋಕ್ತಿಯನ್ನೂ ಸಹ ದಾಸರಾಯರು ಹೃದಯದಲ್ಲಿಟ್ಟು, ನಿರಂತರ ಈ ಪಂಚಾಗ್ನಿಗಳಲ್ಲಿ ಮಾನಸಿಕ ಯಜ್ಞ ಮಾಡಬೇಕೆಂದು ಅಧಿಕಾರಿಗಳಿಗೆ ತಿಳಿಸೋದಕ್ಕೋಸ್ಕರ "ಪಂಚಮಹಾಯಜ್ಞಸಂಧಿ" ಉಪಕ್ರಮಿಸುತ್ತಾರೆ

ಜನನೀ—ಸ್ತ್ರೀ ಪಿತಾ-ಪುರುಷ ಭೂ—ಭೂಮಿ ವಾರಿದ—ಮೇಘ ಎಂದು ಅರ್ಥವಿದೆ. ಆದಾಗ್ಯೂ ಶ್ರುತಿಸ್ಮೃತಿಗಳಲ್ಲಿ "ಪರ್ಜನ್ಯ" ಎಂದು ಉಕ್ತವಾದ ಪ್ರಯುಕ್ತ ವೃಷ್ಟ್ಯಭಿಮಾನಿಯಾದ ಪರ್ಜನ್ಯಾಖ್ಯ ಸೂರ್ಯನೇ ಸ್ವೀಕಾರಮಾಡಬೇಕು. ಅಂಬರ—ಆಕಾಶ. ಈ ಐದು ಅಗ್ನಿಗಳಲ್ಲಿ ಶ್ರೀನಾರಾಯಣನ ಶ್ರಿಶಂತಿಮೂರ್ತಿ ಎಂದರೆ, ಅನಿರುದ್ಧ ಅನಿರುದ್ಧ-ಅನಿರುದ್ಧ ಪ್ರದ್ಯುಮ್ನ-ಅನಿರುದ್ಧ ಸಂಕರ್ಷಣ—ಅನಿರುದ್ಧ ವಾಸುದೇವ ಮತ್ತು ಅನಿರುದ್ಧ ನಾರಾಯಣ-ಎಂಬ ರೀತ್ಯಾ, ಅನಿರುದ್ಧಾದಿ ಪಂಚಮೂರ್ತಿಗಳಲ್ಲೂ ಇಪ್ಪತ್ತೈದು ಮೂರ್ತಿಗಳನ್ನು ಯೋಜನಮಾಡಿ, ಒಂದೊಂದು ಅಗ್ನಿಯಲ್ಲಿ ಒಂದೊಂದು ರೂಪ ಪ್ರಕಾರ ಐದು ಮೂರ್ತಿಗಳು. ಹೀಗೆ ಮೂವತ್ತು ಮೂರ್ತಿಗಳನ್ನು ಚಿಂತನ ಪೂರ್ವಕ ತಿಳಿಯತಕ್ಕದೆಂದು ಭಾವ ತೋರಿಸಿದ್ದಾರೆ.

ಹೀಗೆ ಪಂಚಾಗ್ನಿಯಲ್ಲೂ ಪರಮನ-ಪರಮಾತ್ಮನ್ನ ಪರಮಸುಖ–ಎಂದರೆ, ಮುಕ್ತಿಬೇಡು ಎಂಬ ತಾತ್ಪರ್ಯ. ॥೧॥

## (೩) ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ

### (ಶ್ರೀಜಂಬುಖಂಡಿ ವಾದಿರಾಜಾಚಾರ್ಯರ ವ್ಯಾಖ್ಯಾನ)
### (ಸಂಸ್ಕೃತ ಮೂಲ) :—

"ಅಭಯಂ ತಿತೀರ್ಷತಾಂ ಪಾರಮ್"–ಇತ್ಯುಕ್ತೇಃ "ಪಂಚಾಗ್ನಯಃ" ಇತ್ಯುಕ್ತ ಪಂಚ ಪಂಚ ರೂಪಾಣಿ ಯಜ್ಞ ಕಲಾಪಸ್ಯ ಷಟ್‌ತ್ವಾತ್ ತ್ರಿಂಶನ್ ವಾಚಕ ತ್ರಿಂಶಚ್ಛಬ್ದ ನಿರ್ವಚನಸ್ಯ ತದನುಸಂಧಾತೃಭಿಃ ಅಹರಹಃ ಭಾವ್ಯಮ್ ತದಭಾವೇ ತ್ರಿಂಶದ್ಧಾಬೋಧಕ ಪದಾನಿವಾ ಪ್ರಪಠಿತಾನಿಸ್ಯುಃ॥ ಏಕಭವೇ ಭಾವಿಭವೇ ವಾ ಉಕ್ತ ವೈಭವ ಲಾಭಃ ಭವೇದಿತ್ಯತಃ ಅಸ್ಯ ಪಂಚಮಹಾ ಯಜ್ಞ ಸಂಧೇಃ ಉಪಕ್ರಮಃ॥

ಯದ್ವಾ "ಓಂ ನಾತಿಚರೇಣ"-ಇತಿ ನಯಾನುಚಿಂತನಾರ್ಥಂ ಯೋಷಿದ್ಗರ್ಭಾನುಗತಿಂ "ರೇತಃ ಸಿಗ್ಯೋಗೋಥ" ಸೂತ್ರೋಕ್ತಾಂ ವದನ್ "ವೈರಾಗ್ಯಾರ್ಥಂ ದ್ಯು ಪರ್ಜನ್ಯ ಪೃಥ್ವೀ ಪುರುಷ ಯೋಷಿದ್ರೂಪ ಪಂಚಾಗ್ನಿ ವಿದ್ಯಾನಿಷ್ಠಾಃ"-ಇತಿ ಶರ್ಕರಾವಕ್ಷ್ಯಮಾಣೋಪ ನಿಷನ್ಮೂಲ ಮೂಲಕೋಽಸ್ಮಾತ್ ಪಂಚಕ್ರತುಃ ಸಂಧಿಃ–ಇತಿಹಾರ್ದಂ ಕೃತ್ವಾ ದಾಸೇಟ್ ವ್ಯತಿಕರಮಾತ್ರಂ ಚರೀಕರೋತಿ॥ ತಸ್ಮಾತ್ ಅತ್ರ ಅಪ್ರತ್ಯಯಾಃ "ಕಿನುನ್ಯೈಃ ಪಶು ಸನ್ನಿಭ್ಯಃ"-ಇತಿ ಟೀಕಾಕೃತಗಾಲೀ ಗೋಚರಾಃ ಉಪೇಕ್ಷ್ಯಾಃ ಏವ ಇತ್ಯದೋವಾ ಆಹ." "ಜನನೀ" ಇತಿ ॥ ೧ ॥

**ಕನ್ನಡಾರ್ಥ :—**

"ಸಂಸಾರವೆಂಬ ಬಂಧನದಿಂದ ಪಾರಾಗಿ, ನಿತ್ಯಾನಂದರೂಪವಾದ ಮೋಕ್ಷವನ್ನು ಪಡೆಯಲು ಅಪೇಕ್ಷಿಸುವ ಸಾಧಕರು ಪಂಚಾಗ್ನಿ ವಿದ್ಯೆಯನ್ನೂ ಚೆನ್ನಾಗಿ ಅರಿತವರಾಗಿರಬೇಕು-ಎಂಬುದು ಉಪನಿಷತ್ತಿನ ವಾಕ್ಯ. ಯಜ್ಞದ

ಸಾಧನ ಸಾಮಗ್ರಿಗಳು ಆರು. ಒಂದೊಂದು ಯಜ್ಞಕ್ಕೆ ಆರರಂತೆ ಐದು ಯಜ್ಞಗಳಿಗೆ ಆಗುವ ಭಗವದ್ರೂಪಗಳು ಮೂವತ್ತು. ಇದರ ಅನುಸಂಧಾನ ನಿತ್ಯಜೀವನದಲ್ಲಿ ಅತ್ಯಗತ್ಯ. ಇಲ್ಲದಿದ್ದರೆ ಮೂವತ್ತು ಭಗವದ್ರೂಪಗಳನ್ನು ತಿಳಿಸುವ ಪದ್ಯಗಳನ್ನಾದರೂ ಪಠಿಸಬೇಕು. ಇದರಿಂದ ಮುಂದಿನ ಜನ್ಮಗಳಲ್ಲಾದರೂ ಪಂಚಾಗ್ನಿ ವಿದ್ಯೋಪಾಸನೆಯು ಪ್ರಾಪ್ತಿಯಾಗುವುದು.

"ಓಂ ನಾತಿಚಿರೇಣ ವಿಶೇಷಾತ್ ಓಂ" ಎಂಬ ಬ್ರಹ್ಮಸೂತ್ರ (ಅಧ್ಯಾಯ-೩, ಪಾದ-೧, ಅಧಿಕರಣ-೧೭, ಸೂತ್ರ-೨೭) ದಂತೆ, ಸಕಾಮ ಕರ್ಮಿಗಳು ಸ್ವರ್ಗದಲ್ಲಿ ಪುಣ್ಯಫಲವನ್ನು ಅನುಭವಿಸಿದ ನಂತರ, ಭೂಮಿಗೆ ಬಂದು ಬ್ರಾಹ್ಮಣ ಯೋನಿಯನ್ನು ಪ್ರವೇಶಿಸುತ್ತಾರೆ. ರೇತಸ್ಸನ್ನು ಇಡುವ ತಂದೆಯ ಸಂಪರ್ಕದ ಮೂಲಕ ಮಾತೃ ಶರೀರವನ್ನು ಪ್ರವೇಶಿಸುತ್ತಾರೆ. ಉಪನಿಷತ್ತುಗಳಲ್ಲಿ ಜೀವರ ಗತಿಗಳನ್ನು ಹೇಳಿರುವ ಮುಖ್ಯ ಗುರಿಯು ಜೀವರಲ್ಲಿ ವೈರಾಗ್ಯ ಪ್ರಾಪ್ತಿಗಾಗಿ. ಇದಕ್ಕಾಗಿ ಪಂಚಾಗ್ನಿ ವಿದ್ಯೆಯ ಉಪಾಸನೆ ಅತ್ಯಗತ್ಯ. ಇದು ಶರ್ಕರಾ ಟಿಪ್ಪಣೀಕಾರರ ಅಭಿಪ್ರಾಯವು. ಈ ಉಪನಿಷದ್ರಹಸ್ಯವನ್ನು ಆಧಿಕಾರವಾಗಿಟ್ಟುಕೊಂಡೇ ದಾಸರಾಯರು ಈ ಸಂಧಿಯನ್ನು ಉಪಕ್ರಮಿಸುತ್ತಾರೆ. ॥೧॥

(ಆ) "ಗುರುಹೃದಯ ಪ್ರಕಾಶಿಕೆ"–ವ್ಯಾಖ್ಯಾನ :–

ಈ ಸಂಧಿಗತ ಆದಿಪದ್ಯದಲ್ಲಿ ಐದು ಯಜ್ಞಗಳ ಹೆಸರುಗಳನ್ನು ಸಂಗ್ರಹಿಸಿ ತಿಳಿಸುತ್ತಾರೆ. ಜನನಿ ಎಂದರೆ, ಮಾತೃ ಮೊದಲಾದ ಸ್ತ್ರೀಯರಲ್ಲಿ ಆಯಾಯಾ ಸ್ತ್ರೀಯರ ಪತಿಗಳು ಅನುಭವಿಸಿದ ಭೋಗರೂಪ ಸೌಖ್ಯವನ್ನು ಯಜ್ಞವನ್ನಾಗಿ ಭಾವಿಸುವುದು, ಪಿತ ಎಂದರೆ, ತಂದೆ ಮೊದಲಾದವರು ಭೋಜನ ವ್ಯಾಪಾರವನ್ನು ಯಜ್ಞವನ್ನಾಗಿ ಭಾವಿಸುವುದು. ಭೂ ಎಂದರೆ ನೆಲದಲ್ಲಾಗುವ ವೃಷ್ಟಿ ಎಂದರೆ, ಮಳೆಯನ್ನು ಯಜ್ಞವನ್ನಾಗಿ ಚಿಂತಿಸುವುದು. ವಾರಿದ ಎಂದರೆ, ಮೇಘಗತ ಗುಡುಗು ಮಿಂಚು, ವೃಷ್ಟಿ ಮೊದಲಾದುವನ್ನು ಯಜ್ಞವನ್ನಾಗಿ ಚಿಂತಿಸುವುದು. ಅಂಬರ ಎಂದರೆ, ಅಂತರಿಕ್ಷದಲ್ಲಿ ಸೂರ್ಯ ಕಿರಣಾದಿಗಳಿಂದ ಚಂದ್ರ ವೃದ್ಧಿಯಾಗುವುದನ್ನು ಯಜ್ಞವನ್ನಾಗಿ ಶ್ರೀಹರಿಗೆ

ಅರ್ಪಿಸುವುದು. ಈ ರೀತಿ ಪಂಚಾಗ್ನಿಗಳಲ್ಲಿ ನಾರಾಯಣಾದಿ ರೂಪಗಳನ್ನು ಒಂದೊಂದರಲ್ಲಿ ಐದರ ಪ್ರಕಾರ ಐದಗ್ನಿಗಳಲ್ಲೂ ಇಪ್ಪತ್ತೈದು ರೂಪಗಳು. ಸ್ತ್ರೀ, ಪುರುಷ, ಭೂಮಿ, ಮೇಘ, ಅಂತರಿಕ್ಷ ಎಂದು ನಾಮವುಳ್ಳ ತದಾಕಾರ ರೂಪಗಳು ಐದು. ಒಟ್ಟು ಮೂವತ್ತು ರೂಪಗಳ ವ್ಯಾಪಾರ, ವ್ಯಾಪ್ತಿ, ಮಹಿಮೆಗಳನ್ನು ಸ್ಮರಿಸಿ, ದಿನಗಳೆಂಬ ಸಮಿತ್ತನ್ನು ದೇವರೆಂಬ ಅಗ್ನಿಯಲ್ಲಿ ಹೋಮವಾಗುವುದೆಂದು ಭಾವಿಸುತ್ತಾ, ಪಾವನವೆಂಬ ಪವಿತ್ರರೂಪ ಇಜ್ಞಾದಿಗಳಿಗೆ ಪರಿಶುದ್ಧ ಫಲಪ್ರದ ದೇವರನ್ನು, ಪರಮಸುಖವೆಂಬ ಮೋಕ್ಷೋದ್ಧಿಶ್ಯವಾಗಿ ಪ್ರಾರ್ಥಿಸು ಎಂದರ್ಥ. ॥೧॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಪಂಚಾಗ್ನಿಗಳ ವಿಚಾರ, ಆ ಅಗ್ನ್ಯಂತರ್ಗತ ಭಗವದ್ರೂಪಗಳ ಚಿಂತನಾಕ್ರಮ ಇತ್ಯಾದಿ ವಿವರಗಳನ್ನು ಪ್ರಸಕ್ತ ಸಂಧಿಯ ಪ್ರಪ್ರಥಮ ಪದ್ಯದಿಂದ ನಿರೂಪಿಸುತ್ತಾರೆ, ಜ್ಞಾನಿವರೇಣ್ಯರಾದ ಶ್ರೀಜಗನ್ನಾಥದಾಸವರ್ಯರು. ಜನನಮರಣಾಖ್ಯವಾದ ಈ ಸಂಸಾರವು ದುಸ್ತರವಾದ ಮಹಾಸಾಗರ. ಕರ್ಮಬಂಧನರೂಪವಾದ ಈ ಭವವೆಂಬ ಅಕ್ಷಯ ಸಾಗರವನ್ನು ದಾಟಲು ಇರುವ ಏಕೈಕ ನಾವೆ ಎಂದರೆ ಶ್ರೀಹರಿಯ ಕಾರುಣ್ಯ ವಿಶೇಷ. ಇಂತಹ ಭಗವದನುಗ್ರಹ ದ್ವಾರಾ ಕರ್ಮ ಬಂಧನ ನಿವೃತ್ತಿ; ತನ್ಮೂಲಕ ಸ್ವರೂಪಾನಂದಾವಿರ್ಭಾವ ರೂಪವಾದ ಮೋಕ್ಷಪ್ರಾಪ್ತಿ. ಪರಮಪುರುಷಾರ್ಥರೂಪವಾದ ಮುಕ್ತಿಯನ್ನು ಹೊಂದಲು ಬಯಸುವ ಸಾಧಕರೆಲ್ಲರಿಗೂ "ಪಂಚಾಗ್ನಿ"ಗಳ ಜ್ಞಾನ ಮತ್ತು ಧ್ಯಾನೋಪಾಸನೆ ಅತ್ಯಗತ್ಯ. ಈ ಸಾರವನ್ನು ತಿಳಿದ ಅಪರೋಕ್ಷೀಕೃತಶ್ರೀಶರಾದ ದಾಸರಾಯರು **ಪಂಚಮಹಾಯಜ್ಞ ಸಂಧಿ** ಎಂಬ ಆರನೆಯ ಸಂಧಿಯನ್ನು ಉಪಕ್ರಮಿಸುತ್ತಾರೆ.

ಇಂತಹ ಅಗ್ನಿಗತ ಅಧಿಷ್ಠಾನಗಳು ಐದು ಇವೆ.

(೧) ತಾಯಿ (ಸ್ತ್ರೀ). (೨) ತಂದೆ (ಪುರುಷ). (೩) ಭೂಮಿ. (೪) ಮೇಘಗಳು (ವಾರಿದ) ಮತ್ತು (೫) ಆಕಾಶ (ಅಂಬರ).

ಈ ಸರಣಿಯಲ್ಲಿ ಜೀವನು ತನ್ನ ಕರ್ಮಫಲಾನುಭವಕ್ಕೆ ವಿವಿಧ ಜನ್ಮಗಳನ್ನು ಹೊಂದುವ ಕ್ರಮವು ಹೃದಯಂಗಮವಾಗಿ ವಿವರಿಸಲ್ಪಡುವುದು. ಈ ಸರಣಿಯನ್ನು ಆಕಾಶವೆಂಬ ಅಗ್ನಿಯಿಂದ ಪ್ರಾರಂಭಿಸೋಣ.

**(೧) ಅಂಬರ (ಆಕಾಶ):–**

ಜೀವನು ಭೂಮಿಯಲ್ಲಿ ಜನ್ಮತಾಳುವುದಕ್ಕಿಂತ ಮುಂಚೆ, ಅಂದರೆ, ಜನನಾತ್ಪೂರ್ವದಲ್ಲಿ ಆಕಾಶದಲ್ಲಿ ಸೂಕ್ಷ್ಮರೂಪದಿಂದಿರುತ್ತಾನೆ. ಈ ಪ್ರದೇಶವು ರಾಹುಮಂಡಲಕ್ಕೆ ಅಧೋಭಾಗದಲ್ಲಿದೆ. ಪುಣ್ಯಜೀವಿಯು ತನ್ನ ಅವಶಿಷ್ಟವಾದ ಪುಣ್ಯವನ್ನು ಭೋಗಿಸುವುದಕ್ಕಾಗಿ ಈ ಅಂಬರಗತ ನಕ್ಷತ್ರಮಂಡಲದಲ್ಲಿ ಇರುತ್ತಾನೆ.

**"ಕ್ಷೀಣೇಪುಣ್ಯೇ ಮರ್ತ್ಯ ಲೋಕಂ ವಿಶಂತಿ"**–ಎಂಬ **ಗೀತಾವಚನಾನುಸಾರ,** ಆ ಪುಣ್ಯವು ಮುಗಿಯುತ್ತಿರಲು, ಯಮದೂತರಿಂದ ಅಂಬರಗತ ಮೇಘಮಂಡಲಕ್ಕೆ ಒಯ್ಯಲ್ಪಡುತ್ತಾನೆ. ಈ ಆಕಾಶವೆಂಬ ಅಗ್ನಿಗೆ ಅಭಿಮಾನಿ **ನಾರಾಯಣನು.** ಮೂಲರೂಪದಿಂದ ನಾರಾಯಣ, ಇನ್ನು ಪಂಚರೂಪಗಳಲ್ಲಿ ಪ್ರವಿಷ್ಟನಾಗಿ ನಾರಾಯಣ–ನಾರಾಯಣ, ನಾರಾಯಣ-ವಾಸುದೇವ, ನಾರಾಯಣ-ಸಂಕರ್ಷಣ, ನಾರಾಯಣ-ಪ್ರದ್ಯುಮ್ನ ಮತ್ತು ನಾರಾಯಣ-ಅನಿರುದ್ಧ ಎಂಬ ಪಂಚರೂಪಗಳು. ಅಂತು ಒಟ್ಟಿನಲ್ಲಿ ಆಕಾಶಗತ ಅಗ್ನ್ಯಂತರ್ಗತ ಭಗವದ್ರೂಪಗಳು ನಾರಾಯಣಾಖ್ಯವಾಗಿ ಆರು.

**(೨) ಮೇಘಮಂಡಲ (ವಾರಿದ) :–**

ಆಕಾಶಗತ ನಕ್ಷತ್ರಮಂಡಲದಿಂದ ಜೀವನು ಮೇಘಮಂಡಲವನ್ನು ಪ್ರವೇಶಿಸುವನು. "ವಾರಿದ" ಎಂದರೆ "ಮೇಘ" ಎಂದರ್ಥ. (ವಾರಿ-ನೀರನ್ನು ದ-ಕೊಡುವುದು.) ಆದರೆ ಈ ಶಬ್ದವು ಮುಖ್ಯತಃ ಪರ್ಜನ್ಯನಾಮಕ ಸೂರ್ಯನನ್ನು ಸೂಚಿಸುವುದು. ಸೂರ್ಯನಿಂದಲೇ ಮೇಘಗಳ ಉತ್ಪತ್ತಿ, ಸೂರ್ಯನ ಸಹಸ್ರ ಕಿರಣಗಳು ಆ ಕಿರಣಗತ ಅಗ್ನಿರೂಪಗಳು.

ಆ ಅಗ್ನಿಗತ ಭಗವದ್ರೂಪಗಳ ವಿವರಗಳನ್ನು ಮುಂದೆ ತಿಳಿಸಲಾಗಿದೆ. ಮೇಘ ಮಂಡಲವೆಂಬುದೇ ದ್ವಿತೀಯಾಗ್ನಿಯು. ಇದಕ್ಕೆ **ವಾಸುದೇವ** ನಾಮಕ ಪರಮಾತ್ಮನೇ ಮುಖ್ಯಾಭಿಮಾನಿಯು. ಈ ಅಗ್ನಿಯಲ್ಲಿ ವಾಸುದೇವನ ಮೂಲರೂಪ, ಪ್ರವಿಷ್ಟ ರೂಪಗಳಾದ ವಾಸುದೇವ-ನಾರಾಯಣ, ವಾಸುದೇವ-ವಾಸುದೇವ, ವಾಸುದೇವ-ಸಂಕರ್ಷಣ, ವಾಸುದೇವ-ಪ್ರದ್ಯುಮ್ನ ಮತ್ತು ವಾಸುದೇವ-ಅನಿರುದ್ಧ ಈ ಪಂಚರೂಪಗಳು, ಅಂತು ಒಟ್ಟು ಆರು ರೂಪಗಳನ್ನು ಪರ್ಜನ್ಯಾಗ್ನಿಯಲ್ಲಿ ಚಿಂತಿಸಬೇಕು.

(೩) ಭೂಮಿ :-

ಮೇಘಮಂಡಲದಲ್ಲಿರತಕ್ಕ ಜೀವನು ಮಳೆಯರೂಪದಲ್ಲಿ (ವರ್ಷರೂಪ) ಭೂಮಿಯನ್ನು ಪ್ರವೇಶಿಸುತ್ತಾನೆ. ಭೂಮಿ ಎಂಬುದೇ ತೃತಿಯಾಗ್ನಿಯು. **ಸಂಕರ್ಷಣ**ನಾಮಕ ಪರಮಾತ್ಮನು ಈ ಅಗ್ನಿಗೆ ಮುಖ್ಯ ನಿಯಮಕನಾಗಿದ್ದಾನೆ. ಈ ಅಗ್ನ್ಯಂತರ್ಗತ ಭಗವದ್ರೂಪಗಳು ಆರು (೧) ಮೂಲ ಸಂಕರ್ಷಣ ರೂಪ. (೨) ಸಂಕರ್ಷಣ-ನಾರಾಯಣ. (೩) ಸಂಕರ್ಷಣ-ವಾಸುದೇವ. (೪) ಸಂಕರ್ಷಣ-ಸಂಕರ್ಷಣ. (೫) ಸಂಕರ್ಷಣ-ಪ್ರದ್ಯುಮ್ನ ಮತ್ತು (೬) ಸಂಕರ್ಷಣ-ಅನಿರುದ್ಧ.

(೪) ತಂದೆ (ಪಿತ)

ಭೂಮಿಯಲ್ಲಿ ಸೇರಿದ ಜೀವನು ಭತ್ತ, ಗೋಧಿ ಮುಂತಾದ ವ್ರೀಹ್ಯಾದ್ರಿಗಳಲ್ಲಿ (ಆಹಾರ ರೂಪವಾದ ಧಾನ್ಯಗಳು) ಸೇರುವನು. ಪುರುಷನಾದ ತಂದೆಯು ಆಹಾರವನ್ನು ಸೇವಿಸುವಾಗ ಧಾನ್ಯಗತ ಜೀವನು ತಂದೆಯ ವೀರ್ಯವನ್ನು (ರೇತಸ್ಸನ್ನು)ಸೇರುವನು. ಪುರುಷನೆಂಬ ತಂದೆಯೇ ಚತುರ್ಥಾಗ್ನಿಯು. ಈ ಅಗ್ನಿಗೆ ಅಭಿಮಾನಿಯು **ಪ್ರದ್ಯುಮ್ನ**ನಾಮಕ ಪರಮಾತ್ಮನು. ಈ ಅಗ್ನಿಯಲ್ಲಿ ಪ್ರದ್ಯುಮ್ನಾಖ್ಯ ಆರು ರೂಪಗಳನ್ನು ಚಿಂತಿಸಬೇಕು. (೧) ಮೂಲ ಪ್ರದ್ಯುಮ್ನ ರೂಪ. (೨) ಪ್ರದ್ಯುಮ್ನ ನಾರಾಯಣ ರೂಪ, (೩)ಪ್ರದ್ಯುಮ್ನ ವಾಸುದೇವ ರೂಪ (೪) ಪ್ರದ್ಯುಮ್ನ-ಸಂಕರ್ಷಣರೂಪ, (೫) ಪ್ರದ್ಯುಮ್ನ

ಪ್ರದ್ಯುಮ್ನರೂಪ ಮತ್ತು (೬) ಪ್ರದ್ಯುಮ್ನ-ಅನಿರುದ್ಧರೂಪ ಹೀಗೆ ಆರು ರೂಪಗಳ ಚಿಂತನೆ.

(೫) ತಾಯಿ (ಜನನಿ-ಸ್ತ್ರೀ)

ಕೊನೆಯ ಪಂಚಾಗ್ನಿ ಎಂದರೆ ಜನನಿಯು. ಪುರುಷನ ರೇತಸ್ಸಿನಲ್ಲಿರುವ ಜೀವನು ಶುಕ್ಲಶೋಣಿತ ಸಂಬಂಧದಿಂದ ಮಾತೃಗರ್ಭವನ್ನು ಪ್ರವೇಶಿಸುವನು. ಅಲ್ಲಿಂದ ಜೀವನ ಉತ್ಪತ್ತಿ. ಜನನಿ ಎಂಬ ಯೋಷಾಗ್ನಿಗೆ ಮುಖ್ಯಾಭಿಮಾನಿಯು ಅನಿರುದ್ಧನಾಮಕ ಪರಮಾತ್ಮನು. ಈ ಅನಿರುದ್ಧಾಖ್ಯ ರೂಪಗಳು ಆರು. (೧) ಅನಿರುದ್ಧ ಮೂಲರೂಪ. (೨) ಅನಿರುದ್ಧ-ನಾರಾಯಣ, (೩) ಅನಿರುದ್ಧ-ವಾಸುದೇವ. (೪) ಅನಿರುದ್ಧ-ಸಂಕರ್ಷಣ. (೫) ಅನಿರುದ್ಧ-ಪ್ರದ್ಯುಮ್ನ ಮತ್ತು (೬) ಅನಿರುದ್ಧ-ಅನಿರುದ್ಧ ರೂಪಗಳೆಂದು ಆರು ರೂಪಗಳ ಚಿಂತನೆ.

ಪೂರ್ವೋಕ್ತ ವಿವರಗಳ ವಿಹಂಗಮ ನೋಟವನ್ನು ಪಟ್ಟಿ ಒಂದರಲ್ಲಿ ಕೊಟ್ಟಿದೆ.

ಇಂತು ಆಕಾಶ, ಮೇಘ, ಭೂಮಿ, ತಂದೆ ಮತ್ತು ತಾಯಿ ಎಂಬ ಪಂಚಾಧಿಷ್ಠಾನಗಳೆಂಬ ಪಂಚಾಗ್ನಿಗಳಲ್ಲಿ ಶ್ರೀಪರಮಾತ್ಮನು ಕ್ರಮವಾಗಿ, ನಾರಾಯಣ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ಎಂಬ ಮೂಲರೂಪಗಳಿಂದ. ಪ್ರತಿಯೊಂದು ಅಗ್ನಿಯಲ್ಲಿಯೂ ಆರುರೂಪಗಳಿಂದ ಇದ್ದು, ಒಟ್ಟು ಪಂಚಾಗ್ನಿಗಳಲ್ಲಿ ೫ × ೬ = ೩೦ ರೂಪಗಳಿಂದ ವಿದ್ಯಾಮಾನನಾಗಿದ್ದಾನೆ. ಹೀಗೆ ಮೂವತ್ತು ರೂಪಗಳಿಂದ (ತ್ರಿಂಶಂತಿ ರೂಪಗಳ)ಪಂಚಾಗ್ನಿಗತ ನಾರಾಯಣನ ಕ್ರಿಯಾ ವಿಶೇಷಗಳು ಮತ್ತು ವ್ಯಾಪ್ತಿಗಳನ್ನು ನಿರಂತರದಲ್ಲೂ ಚಿಂತಿಸುತ್ತಾ, ಧ್ಯಾನಕ್ಕೆ ವಿಷಯವನ್ನಾಗಿ ಮಾಡಿ, ಉಪಾಸನೆ ಮಾಡುತ್ತಿರಬೇಕು.

ಮಾತೃಗರ್ಭದಿಂದ ಜನಿಸಿದ ಜೀವನು ತನ್ನ ಮರಣಪರ್ಯಂತ ಇರುವ ಆಯುಸ್ಸಿನ ಅವಧಿಯಲ್ಲಿ ದಿವಸಗಳೆಂಬ ಕಾಷ್ಠವನ್ನು ಈ ಪಂಚಾಗ್ನಿಗಳಲ್ಲಿ ಅನು

## ಪಟ್ಟಿ (೧)

| ಕ್ರಮ ಸಂಖ್ಯೆ | ಪಂಚಾಗ್ನಿಗಳು | ಸ್ಥಾನ | ಭಗವದ್ರೂಪ | ರೂಪಗಳ ಚಿಂತನೆ |
|---|---|---|---|---|
| ೧ | ಆಕಾಶ<br>ಅಂಬರಾಗ್ನಿ | ರಾಹುಮಂಡಲದ<br>ಅಧೋಭಾಗ ಪಾಡಿ<br>ನಕ್ಷತ್ರ ಮಂಡಲ | ನಾರಾಯಣ | ನಾರಾಯಣ<br>ನಾರಾಯಣ-ನಾರಾಯಣ<br>ನಾರಾಯಣ-ವಾಸುದೇವ<br>ನಾರಾಯಣ-ಸಂಕರ್ಷಣ<br>ನಾರಾಯಣ-ಪ್ರದ್ಯುಮ್ನ<br>ನಾರಾಯಣ-ಅನಿರುದ್ಧ |
| ೨ | ಮೇಘ<br>(ಪರ್ಜನ್ಯ)<br>(ಪರ್ಜನ್ಯಾಗ್ನಿ) | ಮೇಘಮಂಡಲದಲ್ಲಿ | ವಾಸುದೇವ | ವಾಸುದೇವ<br>ವಾಸುದೇವ-ನಾರಾಯಣ<br>ವಾಸುದೇವ-ವಾಸುದೇವ<br>ವಾಸುದೇವ-ಸಂಕರ್ಷಣ<br>ವಾಸುದೇವ-ಪ್ರದ್ಯುಮ್ನ<br>ವಾಸುದೇವ-ಅನಿರುದ್ಧ |
| ೩ | ಭೂಮಿ<br>(ಪೃಥ್ವ್ಯಗ್ನಿ) | ಮೇಘಮಂಡಲದಿಂದ<br>ಮಳೆಯ ದ್ವಾರಾ<br>ಭೂಮಿಯ ಪ್ರವೇಶ | ಸಂಕರ್ಷಣ | ಸಂಕರ್ಷಣ<br>ಸಂಕರ್ಷಣ-ನಾರಾಯಣ<br>ಸಂಕರ್ಷಣ-ವಾಸುದೇವ<br>ಸಂಕರ್ಷಣ-ಸಂಕರ್ಷಣ<br>ಸಂಕರ್ಷಣ-ಪ್ರದ್ಯುಮ್ನ<br>ಸಂಕರ್ಷಣ-ಅನಿರುದ್ಧ |

| | | | | |
|---|---|---|---|---|
| ೪ | ತಂಡೆ<br>(ಪುರುಷಾಗ್ನಿ) | ಧಾನ್ಯಗತ ಜೀವನು<br>ಪಿತನ ರೇತಸ್ಸನ್ನು<br>ಸೇರುವನು | **ಪ್ರದ್ಯುಮ್ನ** | ಪ್ರದ್ಯುಮ್ನ<br>ಪ್ರದ್ಯುಮ್ನ-ನಾರಾಯಣ<br>ಪ್ರದ್ಯುಮ್ನ-ವಾಸುದೇವ<br>ಪ್ರದ್ಯುಮ್ನ-ಸಂಕರ್ಷಣ<br>ಪ್ರದ್ಯುಮ್ನ-ಪ್ರದ್ಯುಮ್ನ<br>ಪ್ರದ್ಯುಮ್ನ-ಅನಿರುದ್ಧ |
| ೫ | ಜನನಿ<br>(ಯೋಷಾಗ್ನಿ) | ತಂದೆಯ ರೇತಸ್ಸಿನಿಂದ<br>ಮಾತೃಗರ್ಭ ಪ್ರವೇಶ<br>ಅಲ್ಲಿಂದ ಜೀವನ<br>ಉತ್ಪತ್ತಿ | **ಅನಿರುದ್ಧ** | ಅನಿರುದ್ಧ<br>ಅನಿರುದ್ಧ-ನಾರಾಯಣ<br>ಅನಿರುದ್ಧ-ವಾಸುದೇವ<br>ಅನಿರುದ್ಧ-ಸಂಕರ್ಷಣ<br>ಅನಿರುದ್ಧ-ಪ್ರದ್ಯುಮ್ನ<br>ಅನಿರುದ್ಧ-ಅನಿರುದ್ಧ |

ಸಂಧಾನಪೂರ್ವಕವಾಗಿ ಹೋಮಿಸಬೇಕೆಂದು ತಿಳಿಸುತ್ತಾರೆ. ಪೂರ್ವೋಕ್ತ ಪಂಚಾಧಿಷ್ಠಾನಗಳೇ ಐದು ವಿಧವಾದ ಅಗ್ನಿಗಳು. ಈ ಅಗ್ನಿಗೆ ಹಾಕುವ ಸಮಿತ್ತು ಅಂದರೆ, ಕಾಷ್ಠಗಳೇ ಜೀವನ ಆಯುಸ್ಸೆಂಬ ದಿವಸಗಳು. ಆಯುಸ್ಸು ಕ್ಷೀಣಿಸುವುದೆಂದರೆ, ದಿವಸಗಳೆಂಬ ಸಮಿತ್ತು ಈ ಪಂಚಾಗ್ನಿಗಳಲ್ಲಿ ದಹನ ಹೊಂದುವುದು.

ಸೂರ್ಯನ ಸಂಚಾರದಿಂದ ಹಗಲು ಮತ್ತು ರಾತ್ರಿಗಳೆಂಬ ಕಾಲಮಾನದ ಅಳತೆ. ದಿವಸಗಳೇ ಸಮಿತ್ತುಗಳೆಂದಮೇಲೆ, ಪರ್ಜನ್ಯನಾಮಕನಾದ ಸೂರ್ಯನ ಸಹಸ್ರ ಕಿರಣಗಳಲ್ಲಿ ಈ ಪಂಚಾಗ್ನಿಗಳು ವ್ಯಾಪಕವಾಗಿರುವ ವಿವರಗಳನ್ನು ಈ ಕೆಳಗಿನ ಪಟ್ಟಿಯಿಂದ ತಿಳಿಯಬಹುದು:-

ಪಟ್ಟಿ (೨)

| ಕ್ರಮ ಸಂಖ್ಯೆ | ದಿಕ್ಕು | ಕಿರಣಗಳ ಸಂಖ್ಯೆ | ಕಿರಣವರ್ಣ | ಕಿರಣಗತ ಅಗ್ನಿ | ಅಗ್ನಿಗತ ಭಗವದ್ರೂಪ | ಅಧಿಷ್ಠಾನ |
|---|---|---|---|---|---|---|
| ೧ | ಪೂರ್ವ | ೨೦೦ | ನೀಲ | ಆವಹನೀಯಾಗ್ನಿ | ಅನಿರುದ್ಧ | ಜನನಿ |
| ೨ | ದಕ್ಷಿಣ | ೨೦೦ | ಪೀತ | ಗಾರ್ಹಪತ್ಯಅಗ್ನಿ | ಪ್ರದ್ಯುಮ್ನ | ಪಿತ |
| ೩ | ಪಶ್ಚಿಮ | ೨೦೦ | ಸ್ವರ್ಣ | ದಕ್ಷಿಣಾಗ್ನಿ | ಸಂಕರ್ಷಣ | ಭೂಮಿ |
| ೪ | ಉತ್ತರ | ೨೦೦ | ಶುಭ್ರವರ್ಣ | ಸಭ್ಯಂಚಿತ್ | ವಾಸುದೇವ | ಮೇಘ |
| ೫ | ಊರ್ಧ್ವ | ೨೦೦ | ರಕ್ತವರ್ಣ | ನಾವಸತ್ತಿ ಅಗ್ನಿ | ನಾರಾಯಣ | ಆಕಾಶ |

ಒಟ್ಟು ೧೦೦೦ ಕಿರಣಗಳು — ಮೂವತ್ತು ರೂಪಗಳು

ಇಂತು ಸೂರ್ಯನ ಸಹಸ್ರಕಿರಣಗಳಲ್ಲಿ ಪಂಚಾಗ್ನಿಗಳಿವೆ. ಈ ಅಗ್ನಿಗತ ಭಗವದ್ರೂಪಗಳ ಒಟ್ಟು ಸಂಖ್ಯಾ ಮೂವತ್ತು. ಈ ಭಗವದ್ರೂಪಗಳನ್ನು ಆಯಾಯಾ ಅಧಿಷ್ಠಾನಗತ ಅಗ್ನಿಗಳಲ್ಲಿ ಚಿಂತಿಸುತ್ತಾ, ದಿವಸಗಳೆಂಬ ಕಾಷ್ಠಗಳನ್ನು ಆಯುಃಕರ್ಮವೆಂಬ ಈ ಮಹಾಯಜ್ಞದಲ್ಲಿ ಸೂರ್ಯಾಂತರ್ಗತ ಪಂಚಾಗ್ನ್ಯಂತರ್ಗತ ನಾರಾಯಣಾದಿ ಮೂವತ್ತು ರೂಪಗಳಿಗೆ ಬಿಂಬೈಕ್ಯ ಚಿಂತನಾಪೂರ್ವಕ ಹೋಮಿಸಬೇಕು.

ಇನ್ನು ಪಾಂಚಭೌತಿಕವಾದ ನಮ್ಮ ಸ್ಥೂಲಶರೀರದಲ್ಲಿ ಪಂಚಾಗ್ನಿಗಳ ವಿವರ ಹೀಗಿದೆ:–

೧) ಮುಖದಲ್ಲಿ ಆಹವನೀಯಾಗ್ನಿ. ಅನಿರುದ್ಧಾಖ್ಯ ಆರು ರೂಪಗಳು.

೨) ಹೃದಯಲ್ಲಿ ಗಾರ್ಹಪತ್ಯಾಗ್ನಿ. ಪ್ರದ್ಯುಮ್ನಾಖ್ಯ ಆರು ರೂಪಗಳು.

೩) ನಾಭಿಯಲ್ಲಿ ದಕ್ಷಿಣಾಗ್ನಿ. ಸಂಕರ್ಷಣಾಖ್ಯ ಆರು ರೂಪಗಳು.

೪) ವಾಮಪಾರ್ಶ್ವಕುಕ್ಷಿಯಲ್ಲಿ ಸಂಭೃಚಿತಾಗ್ನಿ. ವಾಸುದೇವಾಖ್ಯ ಆರು ರೂಪಗಳು.

೫) ದಕ್ಷಿಣಪಾರ್ಶ್ವಕುಕ್ಷಿಯಲ್ಲಿ ನಾವಸತ್ತಿ ಅಗ್ನಿ. ನಾರಾಯಣಾಖ್ಯ ಆರು ರೂಪಳಳು,

| ಪಂಚ ಸ್ಥಾನಗಳು | ಪಂಚಾಗ್ನಿಗಳು | ಒಟ್ಟು ಮೂವತ್ತು ಭಗವದ್ರೂಪಗಳು |
|---|---|---|

ಹೀಗೆ ಪ್ರತಿನಿತ್ಯದಲ್ಲಿಯಹ ಜನನಾರಾಭ್ಯ ಮರಣಪರ್ಯಂತ ಯಜ್ಞದ್ವಾರಾ ಭಗವದರ್ಪಣೆ ಮಾಡುತ್ತಾ, ಸಾರ್ಥಕವಾದ ಈ ಮಾನವ ಜನ್ಮವನ್ನು ಕಳೆಯಬೇಕೆಂದು ಈ ಪದ್ಯದ ಸಾರಾಂಶ. ಅಗ್ನಿಯು ಪವಿತ್ರವಸ್ತು. ತನಗೆ ಅರ್ಪಿಸಿದ ಸಮಸ್ತ ವಸ್ತುಗಳನ್ನೂ ದಹಿಸಿ, ತಾನು ಮಾತ್ರ ತತ್ಸಂಬಂಧವಾದ ಗುಣದೋಷಗಳಿಂದ ನಿರ್ಲಿಪ್ತವಾಗಿರುವುದು. ಅಂತಹ ಪಾವನನೆನಿಸುವ ಅಗ್ನಿಗೆ ಪಾವನತ್ವವನು ಕೊಡುವನು ಅಗ್ನ್ಯಂತರ್ಗತ ಶ್ರೀಪರಮಾತ್ಮನು. ಅಲ್ಲದೆ ಮುಕ್ತಿ ಯೋಗ್ಯ ಚೇತನರು ಪವಿತ್ರ ಸ್ವರೂಪರು. ಮಂಗಳಾತ್ಮರು,

ಆದರೆ ತ್ರಿಗುಣಗಳೆಂಬ ಕರ್ಮಬಂಧನದಿಂದ ದೋಷಯುಕ್ತರಾಗಿರುತ್ತಾರೆ. ಜಗವತ್ಪಾವನನಾದ ಪರಮಾತ್ಮನು ತನ್ನ ಕಾರುಣ್ಯವೆಂಬ ಪರಮ ಪ್ರಸಾದದಿಂದ ಅವರ ಕರ್ಮಬಂಧವನ್ನು ನಿವಾರಿಸಿ, ಲಿಂಗಭಂಗಾನಂತರ, ಸ್ವರೂಪಾನಂದ ರೂಪವಾದ ಮುಕ್ತಿಯನ್ನು ದಯಪಾಲಿಸುವನು. ಇದರಿಂದಲೇ ಪಾವನಕೆ ಪಾವನನೆನಿಸುವ ಆ ಪರಮ ಮಂಗಳಮೂರ್ತಿ ಜಗಪತ್ಪಾವನನಾದ ಶ್ರೀಪರಮಾತ್ಮನನ್ನು ಈ ಅಧ್ಯಾತ್ಮ ಯಜ್ಞರೂಪವಾದ ಪಂಚಾಗ್ನಿ ಹೋಮ ವಿಧಾನದಿಂದ ಒಲಿಸಿಕೊಂಡು, ನಿತ್ಯಾನಂದ ಉದ್ರಿಕ್ತನಾದ ಆ ಪರಮನಲ್ಲಿ ಪರಮ ಪುರುಷಾರ್ಥರೂಪವಾದ ಮುಕ್ತಿ ಸುಖವನ್ನು ಬೇಡು ಎಂದು ದಾಸರಾಯರು ಸನ್ಮಾರ್ಗ ತೋರಿದ್ದಾರೆ ॥ ೧ ॥

## ಪದ್ಯ (೨)

ಮೂಲ :–

ಗಗನ ಪಾವಕ ಸಮಿಧೆ ರವಿ ರ ।
ಶ್ಮಿಗಳೆ ಧೂಮವು ಅರ್ಚಿಯನಿಪುದೇ ।
ಹಗಲು ನಕ್ಷತ್ರಗಳೆ ಕಿಡಿಗಳು ಚಂದ್ರಮಾಂಗಾರ ॥
ಮೃಗವರೋದರನೊಳಗೆ ಐದು ರೂ ।
ಪಗಳ ಚಿಂತಿಸಿ ಭಕ್ತರಸ ಮಾ ।
ತುಗಳೆ ಮಂತ್ರವ ಮಾಡಿ ಹೋಮಿಸುವರು ವಿಪಶ್ಚಿತರು ॥ ೨ ॥

ಅವತರಣಿಕೆ :–

ಪ್ರಸಕ್ತ ಪದ್ಯದಲ್ಲಿ ಮೊದಲನೆಯ ಆಕಾಶಾಗ್ನಿಯ ವಿವರಗಳನ್ನು ತಿಳಿಸುತ್ತಾರೆ. ಆಕಾಶವು ಅಗ್ನಿಯು. ನಭೋಮಂಡಲದಲ್ಲಿ ಪ್ರಕಾಶಿಸುತ್ತಿರುವ ಸೂರ್ಯನೇ ಕಾಷ್ಠರೂಪವಾದ ಸಮಿತ್ತು. ಸೂರ್ಯನ ಸಹಸ್ರಕಿರಣಗಳೇ ಹೊಗೆಯು. ಕಿಡಿಗಳು ನಕ್ಷತ್ರ ಮಂಡಲವು. ಚಂದ್ರನೇ ಕೆಂಡ. ಇಂತಹ ಚಂದ್ರನಲ್ಲಿ ಅಂತರ್ಗತವಾಗಿರುವ ನಿಯಾಮಕ ಭಗವದ್ರೂಪವು ನಾರಾಯಣ

ನಾಮಕ ಶ್ರೀ ಪರಮಾತ್ಮನು ಮೂಲರೂಪೀ ನಾರಾಯಣನ ನಾರಾಯಣ-ನಾರಾಯಣ, ನಾರಾಯಣ-ವಾಸುದೇವ, ನಾರಾಯಣ-ಸಂಕರ್ಷಣ-ನಾರಾಯಣ-ಪ್ರದ್ಯುಮ್ನ ಮತ್ತು ನಾರಾಯಣ ಅನಿರುದ್ಧ ಎಂಬ ಪಂಚರೂಪಗಳನ್ನು ಧ್ಯಾನಿಸಬೇಕು. ಭಕ್ತಿರಸದಿಂದ ಪೂರಿತವಾದ ಮಾತುಗಳೆಲ್ಲವೂ ಯಜ್ಞಮಹೋತ್ಸವದಲ್ಲಿ ಹೇಳುವ ಮಂತ್ರಗಳೆಂದು ಅನುಸಂಧಾನಪೂರ್ವಕವಾಗಿ ಭಾವಿಸುತ್ತಾ, ಆಕಾಶಾಗ್ನಿ ಎಂಬ ಪ್ರಥಮಾಗ್ನಿಯಲ್ಲಿ ಹೋಮಮಾಡಿ, ಶ್ರೀಹರಿ ಪೂಜಾರೂಪವಾಗಿ ಭಗವದರ್ಪಣ ಮಾಡಬೇಕೆಂದು ತಿಳಿಸುತ್ತಾರೆ. **"ಗಗನ ಪಾವಕ"**-ಎಂಬ ಪ್ರಸಕ್ತ ಸಂಧಿಗತ ಈ ಪ್ರಥಮ ಪದ್ಯದಿಂದ ॥ ೧ ॥

**ಪ್ರತಿಪದಾರ್ಥ :-**

**ಗಗನ**=ಪಾಡಿ ನಕ್ಷತ್ರಗಳು ಇರತಕ್ಕ ಆಕಾಶವೇ **ಪಾವಕ**=ಹೋಮಯೋಗ್ಯವಾದ ಅಗ್ನಿಯು. **ರವಿ**=ಸೂರ್ಯನು **ಸಮಿಧೆ**=ಅಗ್ನಿಗೆ ಹಾಕತಕ್ಕ ಕಾಷ್ಠವು. **ರಶ್ಮಿಗಳೇ**=ಸೂರ್ಯನ ಸಹಸ್ರಸಂಖ್ಯಾಕವಾದ ಕಿರಣಗಳೇ **ಧೂಮವು**=ಅಗ್ನಿ ಕಾಷ್ಠಗಳ ಸಂಯೋಗದಿಂದ ಉತ್ಪತ್ತಿಯಯಗುವ ಹೊಗೆಯು **ಹಗಲು**=ಸೂರ್ಯೋದಯದಿಂದ ಆಗುವ ಹಗಲೇ **ಅರ್ಚಿ ಎನಿಪುದು**=ಅಗ್ನಿಯಿಂದ ಹೊರಡತಕ್ಕ ಉರಿ ಅಥವಾ ಜ್ವಾಲೆ. **ಚಂದ್ರಮ**=ಚಂದ್ರನು **ಅಂಗಾರ**=ಕೆಂಡಗಳು. **ಮೃಗವರೋದರನೊಳಗೆ**=ಆ ಚಂದ್ರನ ಅಧಿಷ್ಠಾನದಲ್ಲಿ (ಮೃಗ=ಜಿಂಕೆ: ಮೃಗವರ=ಶ್ರೇಷ್ಠವಾದ ಜಿಂಕೆ; ಉದರನೊಳಗೆ=ಯಾವಾತನಲ್ಲಿ ಜಿಂಕೆಯು ಲಾಂಛನವಾಗಿದೆಯೋ ಅಂತಹ ಚಂದ್ರ-ಎಂದರ್ಥ) **ಐದು ರೂಪಗಳ ಚಿಂತಿಸಿ**=ಪೂರ್ವೋಕ್ತ ಮೂಲರೂಪೀ ನಾರಾಯಣನಿಂದ ಅಭಿವ್ಯಕ್ತಗಳಾದ ನಾರಾಯಣಾಖ್ಯ ನಾರಾಯಣ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ಎಂಬ ಪಂಚರೂಪಗಳನ್ನು ಮುಖ್ಯ ಪ್ರಾಣರೂಪಗಳಲ್ಲಿ ಧ್ಯಾನೋಪಾಸನೆ ಮಾಡುತ್ತಾ **ಭಕ್ತಿರಸ ಮಾತುಗಳೇ**=ಭಕ್ತಿ ರಸದಿಂದ ತುಂಬಿರುವ ಮಾತುಗಳನ್ನೇ **ಮಂತ್ರವ ಮಾಡಿ**=ಮಂತ್ರತ್ವೇನ ಅನುಸಂಧಾನ ಮಾಡಿ **ವಿಪಶ್ಚಿತರು**=ಜ್ಞಾನಿಶ್ರೇಷ್ಠರು **ಹೋಮಿಸುವರು**=ಗಗನಾಗ್ನಿಯಲ್ಲಿ ದೇಹ, ಆಯುಸ್ಸು ಇತ್ಯಾದಿಗಳನ್ನು ಭಗವತ್ಪ್ರೀತಿಗಾಗಿ ಹೋಮ ಮಾಡುವರು. ॥ ೨ ॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

ಪಂಚಾಗ್ನಿಗಳಿಗೆ ಯಜ್ಞೋಪಕರಣಗಳು, ಮೂವತ್ತು ರೂಪಕ್ಕೆ ಕೃತ್ಯಗಳು. ಪೂರ್ವೋಕ್ತ ಪಂಚಾಗ್ನಿಗಳಲ್ಲಿ ಅಂಬರ ಸಾಂಕೇತವಾದ ಅಗ್ನಿಯಲ್ಲಿ ಹೋಮಕ್ರಮ ಹೇಳುತ್ತಾರೆ. ಇದು ಪ್ರಥಮ ಹೋಮಾಗ್ನಿ. ಈ ಅಗ್ನಿಗೆ ಪ್ರಾಣನಾಮಕ ವಾಯುದೇವರು (ಅಭಿಮಾನಿ). ನಾರಾಯಣ ನಾಮಕ ಶ್ರೀ ಪರಮಾತ್ಮನೆಂದು ಅನುಸಂಧಾನವನ್ನು ಮಾಡಬೇಕು. ವಿವರ ಹೇಳುತ್ತಾರೆ:-

ಗಗನಪಾವಕ-ಪಾಡಿ ನಕ್ಷತ್ರಗಳು ಇರತಕ್ಕ ಅಕಾಶವೆಂಬೋ ಹೋಮಕ್ಕೆ ಯೋಗ್ಯವಾದ ಅಗ್ನಿ. ಈ ಯಜ್ಞಕ್ಕೆ ಇಂಥದ್ದೇ ಅಗ್ನಿ. ಇದಕ್ಕೆ ಪ್ರಾಣನಾಮಕ ವಾಯುದೇವರು, ಶ್ರೀ ನಾರಾಯಣದೇವರು. ಸಮಿಧೆ ರವಿ-ಇಂಥಾ ಅಗ್ನಿಯಲ್ಲಿ ಹಾಕತಕ್ಕ ಕಾಷ್ಠ ಎಂಬೋದೇ ದ್ವಾದಶಾದಿತ್ಯರು. ಪ್ರಾಣಾಂಶೀ ಪ್ರಾಣನಾಮಕ ವಾಯುದೇವರು-ನಾರಾಯಣ ನಾರಾಯಣ. ರಶ್ಮಿಗಳೇ ಧೂಮವು-ಸೂರ್ಯನಿಂದ ಹೊರಡತಕ್ಕ ರಶ್ಮಿಗಳೆಂಬೋದೇ ಅಗ್ನಿ ಸಂಯೋಗದಿಂದ ಕಾಷ್ಠದಿಂದ ಹೊರಡತಕ್ಕ ಹೊಗೆ. ಪ್ರಾಣಾಂಶ ಅಪಾನನಾಮಕ ವಾಯುದೇವರು. ನಾರಾಯಣ ವಾಸುದೇವ. ಅರ್ಚಿಎನಿಪುದೇ ಹಗಲು ಕಾಷ್ಠ ಸಂಯೋಗದಿಂದ ಅಗ್ನಿಯಿಂದ ಹೊರಡತಕ್ಕ ಉರಿಯು. ಉರಿ ಎಂಬೋದೇ ಸೂರ್ಯೋದಯದಿಂದ ಆದ ಹಗಲು. ಪ್ರಾಣಾಂಶ ವ್ಯಾನ ದೇವರು. ನಾರಾಯಣ ಪ್ರದ್ಯುಮ್ನ ರೂಪ ಚಂದ್ರಮಾಂಗಾರ-ಕಾಷ್ಠ ಸುಡೋಣದರಿಂದ ಆದ ಅಗ್ನಿ ಕೆಂಡಗಳೆಂಬೋದೇ ಚಂದ್ರನು. ಅಂಗಾರವೆಂದರೆ ಕೆಂಡವು. ಪ್ರಾಣನಾಮಕ ಸಮಾನ ವಾಯುದೇವರು. ನಾರಾಯಣ ಅನಿರುದ್ಧ ರೂಪ. ಈ ಪ್ರಥಮಾಗ್ನಿಗೆ ಮೂಲರೂಪಿ ನಾರಾಯಣ ಅಭಿಮಾನಿ, ಅನ್ಯವಾದ ನಾರಾಯಣಾದಿ ಐದು ರೂಪಗಳ ಧರಿಸಿ, ಅಗ್ನಿಯಲ್ಲಿ ಮೂಲರೂಪದಿಂದಲೂ, ಅನ್ಯವಾದ ಐದು ರೂಪಗಳಿಂದ ಕಾಷ್ಠ, ಧೂಮಾದಿ ಉಪಕರಣಗಳಲ್ಲಿ ಇದ್ದಾನೆ. ಪ್ರಥಮ ಶ್ಲೋಕದಲ್ಲಿ "ವ್ಯಾಪಾರ ವ್ಯಾಪ್ತಿಗಳ ನೆನೆದು"-ಎಂದು ಹೇಳಿದ್ದಾರೆ. ಆದ ಕಡಿಯಿಂದ, ಈ ಪ್ರಕಾರ ತಿಳಿದು, ಮೃಗವರೋದರನೊಳಗೆ-ಮೃಗ ಶ್ರೇಷ್ಠನಾದ ಸಿಂಹನೋಪಾದಿಯಲ್ಲಿ ಉದರ

ಅಲ್ಲದೆ. ಕಟಿಯುಳ್ಳ ಮತ್ತು ಮೃಗಗಳೊಳಗೆ ಶ್ರೇಷ್ಠನಾದ ಸಿಂಹನೋಪಾದಿಯಲ್ಲಿ ಜೀವರೊಳಗೆ ಶ್ರೇಷ್ಠರಾದ ಮುಖ್ಯ ಪ್ರಾಣ ದೇವರ ಈ ವಾಯು ದೇವರೊಳಗೆ, ಐದು ರೂಪಗಳ-ಪೂರ್ವೋಕ್ತ ಮೂಲರೂಪ ಒಂದು. ಅನ್ಯವಾದ ಅನಿರುದ್ಧಾದಿಗಳು ಎಂದರೆ, ವಿವರ:-

೧. ಪ್ರಾಣರೂಪದಲ್ಲಿ—ಶ್ರೀ ನಾರಾಯಣ. ಈ ಪ್ರಾಣರೂಪದಿಂದ ಹೊರಟಿರುವ

೨. ಪ್ರಾಣರೂಪದಲ್ಲಿ—ನಾರಾಯಣ ನಾರಾಯಣ.

೩. ಅಪಾನರೂಪದಲ್ಲಿ—ನಾರಾಯಣ ವಾಸುದೇವ.

೪. ವ್ಯಾನರೂಪದಲ್ಲಿ—ನಾರಾಯಣ ಸಂಕರ್ಷಣ.

೫. ಉದಾನ ರೂಪದಲ್ಲಿ—ನಾರಾಯಣ ಪ್ರದ್ಯುಮ್ನ.

೬. ಸಮಾನ ರೂಪದಲ್ಲಿ—ನಾರಾಯಣ ಅನಿರುದ್ಧ.

ಈ ಪ್ರಕಾರ ಐದು ರೂಪಗಳ ಹಾಗೆ, ಮೂಲರೂಪ ಸಹಿತ ಆರು ರೂಪಗಳ ಚಿಂತಿಸಿ-ಅರು ಮುಖ್ಯ ಪ್ರಾಣರೂಪಗಳ ಚಿಂತಿಸಿ, ಭಕ್ತಿರಸ ಮಾತುಗಳೇ ಭಕ್ತಿಯಿಂದ ಯುಕ್ತವಾಗಿ ತಜ್ಜನಿತ ರಸಾಖ್ಯ ಆನಂದದಿಂದ ಅನುಸಂಧಾನ ಪೂರ್ವಕ ಅರ್ಪಿಸತಕ್ಕ ಮಾತುಗಳೇ, ಮಂತ್ರವು ಮಾಡಿ–ಮಂತ್ರತ್ವೇನ ಅನುಸಂಧಾನಮಾಡಿ, ಹೋಮಿಸುವರು–ಗಗನಾಗ್ನಿಯಲ್ಲಿ ಅಲ್ಲಿರುವ ದೇಹವು, ಅಲ್ಲಿನ ಆಯುಸ್ಸು, ಭಗವತ್ಪ್ರೀತಿಗಾಗಿ ಹೋಮಿಸುವರು. ವಿಪಶ್ಚಿತರು–ಜ್ಞಾನಿಗಳು ಎಂತ ಅರ್ಥ.

ಈ ಅನುಸಂಧಾನ ಎಂಬುದು ಭೂಮಿಯಲ್ಲಿ ಜನಿಸಿದ ನಂತರ, ಗುರುಮುಖದಿಂದ ಜ್ಞಾನ ಸಂಪಾದಿಸಿ, ಪತವಾದದ್ದರನ್ನು ವರ್ತಮಾನದಲ್ಲಿ ಅನುಸಂಧಾನ ಮಾಡಿ ಅರ್ಪಿಸೋವನಾಗಬೇಕು ಎಂತ ತಾತ್ಪರ್ಯ. ಉತ್ತರದಲ್ಲಿ ಹೇಳಿರತಕ್ಕದ್ದರಲ್ಲೂ ಇದೇ ರೀತ್ಯಾ ತಿಳಿದು ಅವರ್ತಮಾಡಬೇಕೆಂದು ಅರ್ಥವು. ॥ ೧ ॥

(೨) "ಭಾವಪ್ರಕಾಶಿಕೆ" ವ್ಯಾಖ್ಯಾನ:-

ಮೇಲಿನ ಪದ್ಯದಲ್ಲಿ, ತಾಯಿ, ತಂದೆ ಮೊದಲಾದ ಪಂಚಾಗ್ನಿಗಳಲ್ಲಿ ಅನಿರುದ್ಧಾದಿ ರೂಪಗಳನ್ನೂ, ಒಂದೊಂದರೊಳಗೆ ಮತ್ತೂ ಐದು ರೂಪವನ್ನೂ ಒಟ್ಟು ೩೦ ರೂಪಗಳನ್ನು ಚಿಂತಿಸಬೇಕೆಂದು ಹೇಳಿದರು. ಈಗ ಪಂಚಾಗ್ನಿಗಳನ್ನು ವ್ಯತ್ಕ್ರಮವಾಗಿ ಅಕಾಶ ಮೊದಲು ಮಾಡಿ ಅವುಗಳಲ್ಲಿ ೩೦ ರೂಪಗಳ ವಿವರಗಳನ್ನು ೫ ಪದ್ಯಗಳಿಂದ ಹೇಳುತ್ತಾರೆ:

ಛಾಂದೋಗ್ಯೋಪನಿಷತ್ತು ೫ನೆಯ ಅಧ್ಯಾಯದಲ್ಲಿ ;–

"ಅಸೌವಾವಲೋಕೋ ಗೌತಮಾಗ್ನಿಸ್ತಸ್ಯಾದಿತ್ಯ ಏವ
ಸಮಿದ್ರಶ್ಮಯೋ ಧೂಮೋಹರರ್ಚಿಶ್ಚಂದ್ರಮಾ ಅಂಗಾರಾ
ನಕ್ಷತ್ರಾಣಿ ವಿಸ್ಫುಲಿಂಗಾಸ್ತಸ್ಮಿನ್ನೇ ತಸ್ಮಿನ್ನಗ್ನೌ ದೇವಾಃ
ಶ್ರದ್ಧಾಂ ಜುಹ್ವತಿ ತಸ್ಯಾ ಆಹುತೇಃ ಸೋಮೋ ರಾಜಾ
ಸಂಭವತಿ||"

—ಎಂದು ಹೇಳಿರುವರು. ಇದೇ ಅರ್ಥವನ್ನು ದಾಸರಾಯರು ಈ ಪದ್ಯದಲ್ಲಿ ಹೇಳಿರುವುದರಿಂದ, ಉಪನಿಷದ್ವಾಕ್ಯಗಳಿಗೆ ಪ್ರತ್ಯೇಕ ಅರ್ಥ ಬರೆಯಲಿಲ್ಲ. ಗಗನ ಅಂದರೆ ಆಕಾಶವು. ಪಾವಕ=ಅಗ್ನಿ, ಸೂರ್ಯನು ಕಾಷ್ಠ, ಸೂರ್ಯನ ಕಿರಣಗಳು ಧೂಮ. ಹಗಲು ಜ್ವಾಲೆಯು. ನಕ್ಷತ್ರಗಳು ಕಿಡಿಗಳು. ಚಂದ್ರನು ಕೆಂಡ. ಚಂದ್ರನೊಳಗೆ ಅಂದರೆ, ಚಂದ್ರಾದಿ ಐವರೊಳಗೆ ಅನಿರುದ್ಧಾದಿ ೫ ರೂಪಗಳನ್ನು ಚಿಂತಿಸಿ, ಭಕ್ತಿರಸ ಪೂರ್ಣವಾದ ಮಾತುಗಳೆಂಬ ಹೋಮದ್ರವ್ಯಗಳನ್ನು ಜ್ಞಾನಿಗಳು ಹೋಮ ಮಾಡುವರು. ಅಗ್ನಿ. ಕಾಷ್ಠ, ಧೂಮ, ಜ್ವಾಲೆ, ಕಿಡಿ, ಕೆಂಡಗಳೆಂಬ ಅದರಲ್ಲಿಯೂ ತಚ್ಛಬ್ದವಾಚ್ಯನಾಗಿಯೂ ಆಕಾಶದಲ್ಲಿ ನಾರಾಯಣ, ಸೂರ್ಯನಲ್ಲಿ ನಾರಾಯಣ ನಾರಾಯಣ, ಕಿರಣಗಳಲ್ಲಿ ನಾರಾಯಣ ವಾಸುದೇವ, ಹಗಲುಗಳಲ್ಲಿ ನಾರಾಯಣ ಸಂಕರ್ಷಣ, ನಕ್ಷತ್ರಗಳಲ್ಲಿ ನಾರಾಯಣ ಪ್ರದ್ಯುಮ್ನ, ಚಂದ್ರನಲ್ಲಿ ನಾರಾಯಣ ಅನಿರುದ್ಧ, ಹೀಗೆ ಅಖಂಡವಾದ ಆಕಾಶಾಗ್ನಿಯಲ್ಲಿ ನಾರಾಯಣ ರೂಪವನ್ನೂ, ಉಳಿದ ಕಾಷ್ಠಾ

ದಿಗಳಲ್ಲಿ ನಾರಾಯಣಾದಿ ೫ ರೂಪಗಳನ್ನೂ, ಅಂತು ೬ ರೂಪಗಳನ್ನು ಚಿಂತಿಸ ಬೇಕು.

ಛಾಂದೋಗ್ಯೋಪನಿಷತ್ತಿನ ಭಾಷ್ಯದಲ್ಲಿ :–

"ನಾರಾಯಣಾದಯಃ ಪಂಚಕ್ರಮಾತ್ಪಂಚಾಗ್ನಯಃ ಸ್ಮೃತಾಃ||
ಅದನಾನಂದ ನೇತೃತ್ವಾನಿತ ರಾಮ ಚಲತ್ವತಃ ||
ಸಮೇಧನಾತ್ವಮಿದ್ವಿಷ್ಣುರ್ಧೂಕ್ತಾ ರಾದ್ಧೂಮ ಉಚ್ಯತೇ ||
ಅರಂಚಿದಾದರ್ಚಿಶ್ಚ ಸೋಂಗಾರೋಂಗರತೇ ರಪಿ|
ವಿವಿಧಂ ಸ್ಫುರಣಾಚ್ಛ್ಚ ವಿಸ್ಫುಲಿಂಗ ಇತೀರಿತಃ ||
ಪುನರ್ನಾರಾಯಣಾದ್ಯತ್ಮಾ ಪ್ರತ್ಯೇಕಂ ಪಂಚರೂಪವಾನ್ ||
ಆದಿತ್ಯಃ ಸತಥಾ ದಾನಾದ್ರಶ್ಮೀರತಿ ಶಿರೂಪತಃ |
ತಮಸಾಹನನೀಯತ್ವಾದಹಶ್ಚಂದ್ರಃ ಪರಂ ಸುಖಂ ಅನನ್ಯ
ರಾಜೋ ನಕ್ಷತ್ರಮ್" ||

ಈ ಶ್ಲೋಕದ ಅರ್ಥ:–

ಆಕಾಶ, ಮೇಘ, ಭೂಮಿ, ತಂದೆ(ಪುರುಷ), ತಾಯಿ (ಸ್ತ್ರೀ), ಈ ಪಂಚಾಗ್ನಿಗಳಲ್ಲಿ, ನಾರಾಯಣಾದಿ ಐದು ರೂಪಗಳನ್ನು, ಅಂದರೆ, ನಾರಾಯಣ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧಗಳೆಂಬ ಪಂಚ ರೂಪಗಳನ್ನು ಚಿಂತಿಸಬೇಕು. ಅಗ್ನ್ಯಾದಿ ಹೆಸರು ಪರಮಾತ್ಮನದೆಂದು ತಿಳಿಯಬೇಕು. ಹೇಗೆಂದರೆ. ಆಕಾಶ ಶಬ್ದದಿಂದ ಚೆನ್ನಾಗಿ ಪ್ರಕಾಶಮಾನವಾಗಿ ಇರುವುದರಿಂದ "ಆಕಾಶ"ನೆಂದು ನಾರಾಯಣನಿಗೆ ಹೆಸರು. ಅದೇ ನಾರಾಯಣನು ಅಗ್ನಿನಾಮಕನು. "ಅತ್ತೀತ್ಯಗ್ನಿಃ"–ಪ್ರಪಂಚವನ್ನೆಲ್ಲಾ ಭಕ್ಷಿಸುವುದರಿಂದ ಅಂದರೆ, ತನ್ನ ಉದರಲ್ಲಿ ಪ್ರಳಯದಲ್ಲಿ ಇಟ್ಟುಕೊಂಡಿರುವುದರಿಂದ, ಸರ್ವ ಕಾಲದಲ್ಲಿ ಪರಮಾತ್ಮನ ಉದರದಲ್ಲಿ ಜಗತ್ತು ಇದ್ದೇ ಇರುವುದರಿಂದ ಜಗತ್ತನ್ನು ಭಕ್ಷಿಸುವವನೆಂದು ವ್ಯವಹಾರ. ಅಥವಾ ಅಗ್ನಿರೂಪದಿಂದ ಸರ್ವ ಭಕ್ಷಕನಾದುದರಿಂದಲೂ "ಅಗ್ನಿ" ಎಂದು ನಾರಾಯಣನಿಗೆ ಹೆಸರು.

**"ತಸ್ಯಾದಿತ್ಯ ಏವ ಸಮಿತ್"**-ಎಂಬಂತೆ, ಈ ಆಕಾಶಾಗ್ನಿಗೆ ಆದಿತ್ಯನೇ ಸಮಿತ್ ಎಂದರೆ. ಕಾಷ್ಠವೆಂದು ಹೇಳಿರುವರು. **ಇದರ ಖಂಡಾರ್ಥದಲ್ಲಿ "ಆದಿತ್ಯಃ ಆದತ್ತ ಇತ್ಯಾದಿತ್ಯನಾಮಾ ಆದಿತ್ಯಸ್ಥೋ ನಾರಾಯಣ ನಾರಾಯಣಾತ್ಮಾ"**-ಎಂದರೆ ಸಕಲ ಜನರು ಮಾಡುವ ಪೂಜಾದಿಗಳನ್ನು ಸ್ವೀಕರಿಸುವನು. ಅಥವಾ ಭೂಮಿಯಲ್ಲಿರುವ ಉದಕಗಳನ್ನೆಲ್ಲಾ ತೆಗೆದುಕೊಳ್ಳುವುದರಿಂದ "ಆದಿತ್ಯ"ನೆಂದು ಹೆಸರು. ಇಂತಹ ಆದಿತ್ಯನಾಮಕ ಪರಮಾತ್ಮನು ನಾರಾಯಣ ನಾರಾಯಣ ಸ್ವರೂಪನೆಂದು ತಿಳಿಯಬೇಕು. "ಸಮಿಧ" ವೆಂದರೂ ಪರಮಾತ್ಮನೇ. **"ಸಮಿಂಧನಾತ್ಸಮಿದಿತ್ಯುಚ್ಯತೇ"** ಎಂದರೆ, ಎಲ್ಲರನ್ನೂ ವೃದ್ಧಿಗೊಳಿಸುವುದರಿಂದ "ಸಮಿತ್" ಎಂದು ಪರಮಾತ್ಮನಿಗೆ ಹೆಸರು. **"ರಶ್ಮಯೋ ಧೂಮಃ"** ರಶ್ಮಿಗಳೆಂದರೆ ಕಿರಣಗಳು, ಧೂಮವೆಂದರ್ಥ. **"ರತಿತಂ ರೂಪತ್ವೇನ ರಶ್ಮಿನಾಮಾ. ರಶ್ಮಿಗತೋ ನಾರಾಯಣೋ ವಾಸುದೇವಾತ್ಮಾ ದೂತ್ಕರೋತಿ ನಿರಾಕರೋತೀತ್ಯಜ್ಞಾನಾದೀನಿತಿ ಧೂಮನಾಮೋಚ್ಯತೇ"**-ರತಿಸುಖರೂಪನಾದುದರಿಂದ "ರಶ್ಮಿ" ಎಂದು ಪರಮಾತ್ಮನಿಗೆ ಹೆಸರು. ಈ ರಶ್ಮಿಗತರೂಪ ನಾರಾಯಣ ವಾಸುದೇವ ಸ್ವರೂಪವೆಂದು ತಿಳಿಯಬೇಕು. ಅಜ್ಞಾನಾದಿಗಳನ್ನು ನಿರಾಕರಿಸುವುದರಿಂದ "ಧೂಮ" ನೆಂದು ಪರಮಾತ್ಮನಿಗೆ ಹೆಸರು. "ಅಹರರ್ಚಿಃ" ಹಗಲು ಜ್ವಾಲೆ ಎಂದು ಇದರರ್ಥ. **"ತಮಸಾ ಅಹಸನೀಯತ್ವಾದಹರ್ನಾಮ ಗತೋ ನಾರಾಯಣ ಸಂಕರ್ಷಣಾತ್ಮಾ" "ಅರ್ಚಿಃ ಅರಂಚಿ ತತ್ವೇನಾರ್ಚಿರಿತ್ಯುಚ್ಯತೇ"** ಕತ್ತಲಿನಿಂದ ಹಾನಿಯು ಆಗದಿರುವುದರಿಂದ ಪರಮಾತ್ಮನಿಗೆ "ಅಹಃ" ಅಂದರೆ "ಹಗಲು" ಎಂದು ಹೆಸರು. ಈ ಅಹರ್ಗತ ರೂಪವು ನಾರಾಯಣ ಸಂಕರ್ಷಣ ರೂಪವೆಂದು ತಿಳಿಯಬೇಕು. ವಿಕಾರ ಹೊಂದದೆ ಯಾವಾಗಲೂ ಒಂದೇ ರೀತಿ ಪ್ರಕಾಶಮಾನನಾಗಿ ಇರುವುದರಿಂದ, "ಅರ್ಚಿ" ಎಂದು ಪರಮಾತ್ಮನಿಗೆ ಹೆಸರು. **"ಚಂದ್ರಮಾಂ ಅಂಗಾರಾಃ-"** ಎಂಬ ರೀತ್ಯಾ ಚಂದ್ರನು ಕೆಂಡನೆಂದರ್ಥ. **"ಸುಖರೂಪತ್ವಾಚ್ಚಂದ್ರನಾಮಾ ಚಂದ್ರಗತಃ ನಾರಾಯಣ ಪ್ರದ್ಯುಮ್ನಾತ್ಮಾ|| ಅಂಗಾರಾಃ= ಅಂಗೇಷು ರಮಣ ಹೇತುತ್ವಾದಂಗಾರಾ ಇತ್ಯುಕ್ತಃ-"** ಎಂದರೆ, ಸುಖಸ್ವರೂಪನಾದದ್ದರಿಂದ, "ಚಂದ್ರ"ನೆಂದು ಪರಮಾತ್ಮನಿಗೆ ಹೆಸರು. ಚಂದ್ರಗತರೂಪವು ನಾರಾಯಣ

ಪ್ರದ್ಯುಮ್ನ ಸ್ವರೂಪವು. ಕೆಂಡಕ್ಕೆ ಸಂಸ್ಕೃತದಲ್ಲಿ "ಅಂಗಾರ" ವೆನ್ನುವರು. ಅಂಗಾರ ಎಂದರೆ ಅಂಗಗಳಲ್ಲಿ (ಶರೀರಗಳಲ್ಲಿ) ರಮಿಸುವುದರಿಂದ "ಅಂಗಾರ" ನೆಂದು ಪರಮಾತ್ಮನಿಗೆ ಹೆಸರು. **ನಕ್ಷತ್ರಾಣಿ ವಿಸ್ಫುಲಿಂಗಾಃ**" ನಕ್ಷತ್ರಗಳು ಕಿಡಿಗಳೆಂದು ಹೇಳಿರುವರು. ಇದರರ್ಥ:-

**"ಅನೆನ್ಯ ರಾಜತ್ವೇನ ನಕ್ಷತ್ರನಾಮಾ; ನಕ್ಷತ್ರಗತಃ ನಾರಾಯಣಾ ನಿರುದ್ಧಾತ್ಮಾ, ಮತ್ಸಾದಿ ರೂಪೇಣ ವಿವಿಧಂ ಸ್ಫುರಣಾದ್ವಿಸ್ಫುಲಿಂಗಾ ಇತ್ಯುಕ್ತಃ**"–ಎಂಬುವುದರಿಂದ, ಇವರಿಗಿಂತಲೂ ಮತ್ತೊಬ್ಬ ರಾಜನಿಲ್ಲದುದ ರಿಂದ "ನಕ್ಷತ್ರ" ನೆಂದು ಪರಮಾತ್ಮನಿಗೆ ಹೆಸರು. ನಕ್ಷತ್ರಗತರೂಪವು ನಾರಾ ಯಣ ಅನಿರುದ್ಧರೂಪವು. ಮತ್ಸ್ಯಾದಿರೂಪಗಳಿಂದ ನಾನಾಪ್ರಕಾರ ಸ್ಫುರಣವೆಂದರೆ ಸಾಮಾನ್ಯವಾಗಿ ಮೀನನ್ನು ನೀರಿನಿಂದ ತೆಗೆದು ಮೇಲೆ ಹಾಕಿ ದರೆ, ಹಾರಿಬೀಳುವುದುಂಟು. ಅದಕ್ಕೆ "ಸ್ಫುರಣ" ವೆಂದು ಹೆಸರು. ಪರ ಮಾತ್ಮನು ಮತ್ಸ್ಯಾದಿರೂಪಗಳಿಂದ ವಿಶೇಷವಾಗಿ ಚಲಿಸಿದುದರಿಂದ "ವಿಸ್ಫು ಲಿಂಗ" ನೆಂದು ಹೆಸರು. ಇಂತಹ ಆಕಾಶನಾಮಕ ನಾರಾಯಣಾಗ್ನಿಯಲ್ಲಿ ನಾರಾಯಣ ನಾರಾಯಣಾದಿ ಐದು ರೂಪಗಳಿಂದ ಪ್ರತ್ಯೇಕ ಕೂಡಿದ ಆರು ರೂಪವುಳ್ಳ ಅಗ್ನಿಯಲ್ಲಿ ಯಾವ ಜನರು ಭಕ್ತಿಯಿಂದ ಪರಮಾತ್ಮನನ್ನು ಸ್ತುತಿ ಸುವರೋ, ಅಂತಹವರನ್ನು ದೇವತೆಗಳು ಷಡ್ರೂಪವುಳ್ಳ ನಾರಾಯಣಾಗ್ನಿ ಯಲ್ಲಿ ಆಹುತಿಕೊಡುವರು. ಆ ಆಹುತಿರೂಪವಾದ ಸಜ್ಜನರು ಸೋಮ ರಾಜನನ್ನು ಅಂದರೆ, ಚಂದ್ರನನ್ನು ಸೇರುವರು. ॥೨॥

(೩) **"ಭಾವದರ್ಪಣ ಟೀಕಾ"-ವ್ಯಾಖ್ಯಾನ:—**

**"ಅಸೌವಾವಲೋಕೋ ಗೌತುಮಾಗ್ನಿಸ್ತಸ್ಯಾದಿತ್ಯಸಮಿದ್ರಶ್ಮಿ ಯೋಧೂಮೋಽಹರರ್ಚಿಶ್ಚಂದ್ರಮಂಗಾರ ನಕ್ಷತ್ರಾಣಿ ವಿಸ್ಫುಲಿಂಗಾ ಸ್ತಸ್ಮಿನ್ನಗ್ನೌ ದೇವಾಃ ಶ್ರದ್ಧಾಂ ಜುಹ್ವತಿ ತಸ್ಯಾಹುತೇಃ ಸೋಮೋ ರಾಜಾ ಸಂಭವತಿ॥" ಎಂಬಂಥ ಛಾಂದೋಗ್ಯೋಪನಿಷದ್ವಾಕ್ಯವನ್ನೇ** ಇಲ್ಲಿ ಪ್ರಯೋಗಿಸಿದ್ದಾರೆ. "ಗಗನೇತಿ"। ಆಕಾಶವೇ ಅಗ್ನಿ - ಸೂರ್ಯನೇ ಸಮಿತ್ತು-ಕಿರಣಗಳೇ ಧೂಮ- ಅಹರಸ್ಸು ಅರ್ಚಿ ಎಂದರೆ, ಅಗ್ನಿಜ್ವಾಲಾ

ಎಂಬರ್ಥ. ನಕ್ಷತ್ರಗಳೇ ಕಿಡಿಗಳು. ಚಂದ್ರನೇ ಅಂಗಾರ, ಎಂದರೆ ಕೆಂಡ. ಮೃಗವರೋದರ=ಚಂದ್ರ. ಈತನಲ್ಲಿ ಐದು ರೂಪಗಳ ಚಿಂತಿಸಿ, ವಿಪಶ್ಚಿತರು (ಜ್ಞಾನಿಗಳು) ಭಕ್ತರಸವನ್ನು ಮಾತೆಂಬ ಮಂತ್ರಗಳಿಂದ ಹೋಮಿಸುವರೆಂದು ಪದ್ಯಾರ್ಥ. ॥೨॥

(೪) ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ:—

ತತ್ರಾದ್ಯಾಗ್ನಿಂ ನಿರ್ದಿಶತಿ ಅನುವದತಿ ಚ ತತ್ಕಲಾಪಮ್ ಗಗನೇತಿ॥ ಪಂಚಮೇ ಛಾಂದೋಗ್ಯ ಖಂಡೇ ಚ ಉಕ್ತಮೇತತ್॥ ತಥಾಹಿ ಅಸೌವಾವ ಲೋಕೇ ಗೌತಮಾಗ್ನಿಃ। ತಸ್ಯಾದಿತ್ಯ ಏವಸಮಿತ್। ರಶ್ಮಯಃ ಧೂಮಃ। ಅಹರರ್ಚಿಃ। ಚಂದ್ರಮಾಂಗಾರಃ। ನಕ್ಷತ್ರಾಣಿ ವಿಸ್ಫುಲಿಂಗಾಃ। ತಸ್ಮಿನ್ ಏತಸ್ಮಿನ್ ಅಗ್ನೌದೇವಾಃ ಶ್ರದ್ಧಾಂ ಜುಹ್ವತಿ। ತಸ್ಯಾ ಆಹುತೇಃ ಸೋಮೋರಾಜಾ ಸಂಭವತಿ॥ ಏತದ್ಭಾಷ್ಯಮ್॥ ನಾರಾಯಣಾದಯಃ॥ ಪಂಚಕ್ರಮಾತ್ ಪಂಚಾಗ್ನಯಃ ಸ್ಮೃತಾಃ॥ ಆದನಾತ್ ಅಂಗನೇತೃತ್ವಾತ್ ನಿತರಾಂ ಅಚಲತ್ವತಃ॥ ಆರಂಚಿತತ್ವಾತ್ ಅರ್ಚಿಶ್ಚಸೋಂಗಾರೋಂಗರತೇರಪಿ॥ ವಿವಿಧಂ ಸ್ಫುರಣಾಚ್ಚೈವ ವಿಸ್ಫುಲಿಂಗ ಇತೀರಿತಃ॥ ಮೃಗವರೋದರಃ ಚಂದ್ರಃ॥ ಸೋಮೋರಾಜಾ ಇತ್ಯುಕ್ತೇಃ॥ ಐರೂಪೇತಿ॥ ನಾರಾಯಣ ನಾರಾಯಣ ಕ್ರಮೇಣ। ಏತಚ್ಚ ವಕ್ಷ್ಯಾಮಃ॥ ಹೋಮಿಸುವವರು-ಹುತೋಭವಿಷ್ಯತೀತಿ ಚಿಂತನಮ್॥ ಲಯಚಿಂತನವತ್॥ ಮಾನಂತು "ಪುನರ್ನಾರಾಯಣಾದ್ಯಾತ್ಮಾ ಪ್ರತ್ಯೇಕಂ ಪಂಚರೂಪವಾನ್॥ ರವಿಃ ರಶ್ಮಯಃ ಇತ್ಯತ್ರ" ಆದಿತ್ಯಃ ಸತಥ್ಯಾಽದಾನಾತ್ ರಶ್ಮೀ ರಶಿತ ರೂಪತಃ॥ ತಮಸಾ ಅಹನೀಯತ್ವಾತ್ ಅಹಃ॥ ಚಂದ್ರಃ ಪರಂ ಸುಖಮ್॥ ಅನನ್ಯ ರಾಜೋ ನಕ್ಷತ್ರಮ್ ॥೨॥

**ಕನ್ನಡಾರ್ಥ :—**

ಪಂಚಾಗ್ನಿಗಳ ಪೈಕಿ ಪ್ರಥಮಾಗ್ನಿಯನ್ನು ನಿರ್ದೇಶಿಸುತ್ತಾರೆ. "ಗಗನ" ಎಂಬ ಈ ಪದ್ಯದಿಂದ.

ಪಂಚಾಗ್ನಿ ವಿದ್ಯೆಯು ಛಾಂದೋಗ್ಯೋಪನಿಷತ್ತಿನ ಐದನೆಯ ಖಂಡದಲ್ಲಿ

ಉಕ್ತವಾಗಿದೆ. ಇದಕ್ಕೆ ಉಪಷ್ಟಂಭಕ ರೂಪವಾಗಿ ಉಪನಿಷತ್ತಿನ ಒಂದು ಕಥೆ ಇದೆ.

ಶ್ವೇತಕೇತುವು ಅರಣಿಯ ಪುತ್ರನು. ಅವನು ಒಮ್ಮೆ ಪಾಂಚಾಲ ರಾಜನ ಸಭೆಗೆ ಆಗಮಿಸಿದನು. ಆ ಸಭೆಯಲ್ಲಿ ಉಪಸ್ಥಿತನಿದ್ದ ಜಾಬಾಲಿಯ ಮಗನಾದ ಪ್ರವಾಹಣನೆಂಬ ರಾಜನು ಶ್ವೇತಕೇತುವು ತಂದೆಯಿಂದ ಕಲಿತ ವಿದ್ಯೆಯ ಬಗ್ಗೆ ಪ್ರಸ್ತಾಪಿಸಿದನು. ಪ್ರವಾಹಣನು ಶ್ವೇತಕೇತುವಿಗೆ ಐದು ಪ್ರಶ್ನೆಗಳನ್ನು ಕೇಳಿದನು. ಶ್ವೇತಕೇತುವು ಅವುಗಳನ್ನು ಉತ್ತರಿಸಲು ಸಮರ್ಥನಾಗದೇ, ತನ್ನ ತಂದೆಯನ್ನು ಸಾರಿ, ಉತ್ತರಗಳ ವಿವರಗಳನ್ನು ಕೇಳಿದನು. ತಂದೆಯೂ ಸಹ ಅಸಮರ್ಥನಾಗಿ ಪ್ರವಾಹಣ ರಾಜನ ಬಳಿಗೆ ಬರುತ್ತಾನೆ. ಉಪನಿಷತ್ತಿನಲ್ಲಿ ಶ್ವೇತಕೇತುವಿನ ತಂದೆಗೆ "ಗೌತಮ" ಎಂಬ ಸಂಭೋಧನೆ ಇದೆ. ಗೌತಮನಿಗೆ ಉಚಿತ ಸತ್ಕಾರಗಳನ್ನು ಮಾಡಿ, ರಾಜನು ಕಾಣಿಕೆಯ ರೂಪದಲ್ಲಿ ದ್ರವ್ಯವನ್ನು ಕೊಡುತ್ತಾನೆ, ಸಂವತ್ಸರದ ವ್ರತವು ಮುಗಿದ ನಂತರ ರಾಜನು ಆ ಪ್ರಶ್ನೆಗಳಿಗೆ ಏಳು ಖಂಡಗಳಿಂದ ಉತ್ತರ ಕೊಡುತ್ತಾನೆ.

ಪ್ರಶ್ನೆ ಒಂದು:-

"ದ್ಯುಪರ್ಜನ್ಯ ಭೂಮಿ ಪುರುಷ ಸ್ತ್ರೀ" ಎಂಬ ಆಹುತಿಗೆ ಆಧಾರಸ್ಥಾನಗಳಾದ ಪಂಚಾಗ್ನಿಗಳ ಮಧ್ಯದಲ್ಲಿ ಕೊನೆಯದಾದ "ಸ್ತ್ರೀ" ಎಂಬ ಅಗ್ನಿಯಲ್ಲಿ ರೇತಸ್ಸೆಂಬ ಹವಿರಾಹುತಿಯನ್ನು ಹಾಕಲು ಜಲಸಂಬಂಧ. ಅಂದರೆ, ಪಂಚಮಹಾಭೂತಬದ್ಧನಾದ ಜೀವನು ದೇಹವನ್ನು ಹೊಂದಿ, ಪುರುಷನಾಮಕನಾಗಿ ಯಾವ ಕ್ರಮದಿಂದ ಆಗುತ್ತಾನೆ?

ಈ ಜೀವನು ಯೋಷಿದಗ್ನಿಯಲ್ಲಿ ರೇತೋಮಾರ್ಗವಾಗಿ ಬಿದ್ದು, ದೇಹ ಹೊಂದಿ, ಪುರುಷನೆಂಬ ನಾಮ ಪಡೆಯುವ ಕ್ರಮಗಳನ್ನು ಬಲ್ಲೆಯಾ?

ಪ್ರಶ್ನೆಗೆ ಉತ್ತರ ರಾಜ ಹೇಳಿದುದು:-

"ಅಸೌವಾವ"-ಎಂಬ ಉಪನಿಷದ್ವಾಕ್ಯದಿಂದ, ದ್ಯುಲೋಕ (ಆಕಾಶ) ದಲ್ಲಿರುವ ನಾರಾಯಣನು "ಅಸೌಲೋಕ" ಎನ್ನಿಸಿಕೊಳ್ಳುತ್ತಾನೆ. ಅಸುಗಳಲ್ಲಿ

(ಪ್ರಾಣಿಗಳಲ್ಲಿ) ಜೀವರಲ್ಲಿ ಇರುವುದರಿಂದಲೂ, ಪ್ರಕಾಶರೂಪನಾದ್ದರಿಂದಲೂ ನಾರಾಯಣನಿಗೆ "ದ್ಯು" ಎಂತಲೂ, "ಅಸೌಲೋಕ" ಎಂತಲೂ ಹೆಸರು. ಈ ನಾರಾಯಣನು "ದ್ಯು" ಶಬ್ದನಾಮಕ ಅಗ್ನಿಯು. ಜಗತ್ತನ್ನು "ಅದನ" ಅಂದರೆ, ಭಕ್ಷಿಸುವುದರಿಂದಲೂ, ಅಂಗಗಳನ್ನು ಪ್ರೇರಿಸುವುದರಿಂದಲೂ, ನಾರಾಯಣನೇ ಅಗ್ನಿಶಬ್ದಕ್ಕೆ ಮುಖ್ಯವಾಚ್ಯನು. ಆ ನಾರಾಯಣನು "ಆ" ದಾನ ಮಾಡುವವನು ಅಂದರೆ, ಸರ್ವವನ್ನು ಸ್ವೀಕರಿಸುವವನು ಎಂದರ್ಥ. ಆದಿತ್ಯ ನಾಮಕನಾದ ಆದಿತ್ಯನಲ್ಲಿ ನಾರಾಯಣ–ನಾರಾಣಯನು "ಸಮಿತ್" ಸಮ್ ಯಾವಾಗಲೂ ಅಧಿಕವಾಗಿ ವೃದ್ಧಿಸುವವನು. ಆದುದರಿಂದ "ಸಮಿಧೆ" ಎಂದು ಹೆಸರು. "ದ್ಯು" ಎಂಬ ಅಗ್ನಿಗೆ ರಶ್ಮಿಗಳು ಹೊಗೆಗಳು. ರತಿ ಹಾಗೂ ಸುಖಸ್ವರೂಪನಾದ್ದರಿಂದ ನಾರಾಯಣ ವಾಸುದೇವನು "ರಶ್ಮಿ"ಶಬ್ದ ವಾಚ್ಯನು. ಅವನೇ "ಧೂಮ" ಶಬ್ದವಾಚ್ಯನು. ಅಜ್ಞಾನ ಮುಂತಾದ ದೋಷಗಳನ್ನು ಧೂತ್ಕರಿಸುವುದರಿಂದ (ನಿವಾರಿಸುವುದರಿಂದ) "ಧೂಮ" ನಾಮಕನು. ತಮಸ್ಸಿನಿಂದ ಅಪ್ರತಿಹತನಾಗಿರುವುದರಿಂದ (ದೂರೋಪಾಸ್ತ) "ಅಹಃ" ಶಬ್ದವಾಚ್ಯನಾದ ನಾರಾಯಣ ಸಂಕರ್ಷಣನು "ಅರ್ಚಿಃ" (ಜ್ವಾಲಾ) ಅಂದರೆ. ಅರಂಚಿತನಾದ್ದುದರಿಂದ ನಿರ್ವಿಕಾರ ತೇಜೋರೂಪನಾದುದರಿಂದ "ಅರ್ಚಿ" ಶಬ್ದವಾಚ್ಯನಾಗಿ ಜ್ವಾಲೆಯಲ್ಲಿರುತ್ತಾನೆ. "ದ್ಯು" ಎಂಬ ಅಗ್ನಿಗೆ ಚಂದ್ರನು ಅಂಗಾರ ಎಂದರೆ ಕೆಂಡ ಎಂದರ್ಥ. ಸುಖಮಯಸ್ವರೂಪನಾದ್ದರಿಂದ ನಾರಾಯಣ-ಪ್ರದ್ಯುಮ್ನನು "ಚಂದ್ರ" ಶಬ್ದವಾಚ್ಯನು. "ಅಂಗಾರ" ಎಂದರೆ ಅಂಗ=ಅಂಗಗಳಲ್ಲಿ, ರ=ರಮಿಸುವನಾದ ಕಾರಣದಿಂದ "ಅಂಗಾರ" ಶಬ್ದವಾಚ್ಯನು ಅನ್ಯ ನಿಯಾಮಕರಿಲ್ಲದೆ ತನಗೆ ತಾನೇ ರಾಜನಾಗಿರುವ ಕಾರಣ "ನಕ್ಷತ್ರ" ಶಬ್ದವಾಚ್ಯನಾದ ನಾರಾಯಣಾನಿರುದ್ಧನು "ವಿಸ್ಫುಲಿಂಗನು"ಅಂದರೆ ಮತ್ಸ್ಯ ಮೊದಲಾದ ಸ್ವಾಭಿನ್ನರೂಪಗಳಿಂದ ಪ್ರಕಾಶಿಸುವನು.

ಇಂತಹ "ದ್ಯು" ಲೋಕಸ್ಥ ಅಂದರೆ ಗಗನವೆಂಬ ಪ್ರದೇಶದಲ್ಲಿ "ದ್ಯು" ನಾಮಕನಾದ ನಾರಾಯಣ ರೂಪೀ ಅಗ್ನಿಯಲ್ಲಿ ದೇವತೆಗಳು ಶ್ರದ್ಧಾಪೂರ್ವಕವಾಗಿ ಯಜ್ಞಮಾಡುವ ಯಜಮಾನನನ್ನು ಭೂ, ಜಲ, ತೇಜೋ ಮುಂತಾದರಲ್ಲಿ ಪಂಚಭೂತಯುತ್ತನಾದ ಜೀವನನ್ನು ಹಾಕುತ್ತಾರೆ ಅಂದರೆ ಹೋಮಿಸು

ತ್ತಾರೆ. (ಇಡುತ್ತಾರೆ). ದ್ಯುಲೋಕಾಗ್ನಿ ಎಂದು ಪ್ರಸಿದ್ಧನಾಮಕನಾಗಿರುವ ದ್ಯುಲೋಕಸ್ಥ ನಾರಾಯಣನ ದೆಶೆಯಿಂದ ಆಜೀವರೂಪ ಆಹುತಿಯನ್ನು ದ್ಯುಲೋಕದಿಂದ ಸೋಮನ (ಚಂದ್ರನ) ಬಳಿಗೆ ಕಳುಹಿಸುತ್ತಾರೆ.

ಛಾಂದೋಗ್ಯೋಪನಿಷತ್ತಿನ ಭಾಷ್ಯದಲ್ಲಿಯೂ ಸಹ ಇದೇ ವಿಷಯವು ವಿವರಿಸಲ್ಪಟ್ಟಿದೆ. ನಾರಾಯಣನಿಂದ ಆರಂಭಿಸಿದ ಐದು ರೂಪಗಳು ಕ್ರಮವಾಗಿ "ಪಂಚಾಗ್ನಿ"ಗಳೆಂದು ಎನಿಸಿದೆ.

೧ ಅದನ ಜಗತ್ತನ್ನು ಭಕ್ಷಿಸುವುದು (ಸಂಹಾರಕ್ರಿಯೆ)-ಅಗ್ನಿವಾಚ್ಯನು.

೨ ಅವಯವಗಳಿಗೆ ಪ್ರೇಕನಾಗಿರುವುದರಿಂದ ಅಗ್ನಿನಾಮಕನು.

೩ ಅತಿಶಯ ಅಚಲನಾದುದರಿಂದ ನಾರಾಯಣನು "ಆಗ್ನಿ"ವಾಚಕನಾಗಿದ್ದಾನೆ

೪ ನಿತ್ಯಾತಿವೃದ್ಧನಾದುದರಿಂದ "ಸಮಿತ್" ಶಬ್ದವಾಚ್ಯನು.

೫ ಅಜ್ಞಾನಾದಿಗಳನ್ನು ಧೂತ್ಕರಿಸುವುದರಿಂದ "ಧೂಮ" ವಾಚ್ಯನು.

೬ ಅರಂಚಿತನಾಗಿ ನಿರ್ವಿಕಾರ ತೇಜೋರೂಪನಾಗಿರುವುದರಿಂದ "ಅರ್ಚಿ" ವಾಚ್ಯನು.

೭ ಅಂಗಗಳಲ್ಲಿ ರಮಿಸಿ ರತಿಗೆ (ಸುಖಪ್ರಾಪ್ತಿಗೆ) ಕಾರಣನಾಗಿರುವುದರಿಂದ "ಅಂಗಾರ" ನಾಮಕನು.

೮ ವಿವಿಧ ರೂಪಗಳಿಂದ ಸ್ಫುರಿತನಾಗುವುದರಿಂದ "ಸ್ಫುಲಿಂಗ" ಶಬ್ದವಾಚ್ಯನು.

ಈ ಶಬ್ದಾರ್ಥಗಳೆಲ್ಲವೂ ಭಾಷ್ಯದ ವಾಕ್ಯಗಳು. ಸೋಮನು(ಚಂದ್ರನು) ರಾಜನೆಂದು ಹೇಳಿರುವುದರಿಂದ ಮೃಗವರೋರನು ಚಂದ್ರನು. ಲಯ ಚಿಂತನೆಯನ್ನು ಮಾಡುವಂತೆ "ಹುತೋ ಭವತಿ" ಎಂಬ ಚಿಂತನಾಕ್ರಮವನ್ನು "ಹೋಮಿಸುವರು" ಎಂಬರ್ಥದಲ್ಲಿ ಹೇಳಿರುತ್ತಾರೆ. ॥೨॥

೫ **"ಗುರುಹೃದಯ ಪ್ರಕಾಶಿಕೆ"-ವ್ಯಾಖ್ಯಾನ :—**

ಮೇಲೆ ಹೇಳಿದ ಐದು ಯಜ್ಞಗಳನ್ನು ವ್ಯುತ್ಕ್ರಮವಾಗಿ ವಿವರಿಸುತ್ತಾರೆ.

ಗಗನಪಾವಕ ಎಂದರೆ, ಅಂತರಿಕ್ಷಗತ ತನ್ನಾನಂದ ತಾನು ಅನುಭವಿಸುವುದರಿಂದ ದೇವರು ಅಂತರಿಕ್ಷವೆಂಬ ಅಗ್ನಿನಾಮಕನಾಗಿ ಆಕಾಶದಲ್ಲಿದ್ದಾನೆಂದು ತಿಳಿದು, ರವಿ ಸಮಿಧೆ ಎಂದರೆ, ನಿತ್ಯಾಭಿವೃದ್ಧಿರೂಪನಾದ್ದರಿಂದ ಸಮಿತ್ತೆಂದು ಹೆಸರುಳ್ಳ ಸ್ವಾಮಿ ಸರ್ವವನ್ನೂ ಸ್ವೀಕರಿಸುವುದರಿಂದ ಆದಿತ್ಯಶಬ್ದವಾಚ್ಯನಾಗಿ ಸೂರ್ಯನಲ್ಲಿದ್ದು, ಗಗನಾಗ್ನಿ ಎಂಬ ತನ್ನಲ್ಲಿ ತಾನೇ ಹೋಮರೂಪನಾಗುವನೆಂದು ಭಾವಿಸಿ, ರಶ್ಮಿಗಳೆಂಬ ಸೂರ್ಯಕಿರಣಗಳನ್ನೇ ಗಗನಾಗ್ನಿಗೆ ಧೂಮವೆಂಬ ಹೊಗೆ ಎಂದರಿದು, ಎಂದರೆ, ಜ್ಞಾನಾನಂದರೂಪನಾದ್ದರಿಂದ ರಶ್ಮಿಶಬ್ದವಾಚ್ಯನಾಗಿ, ಸರ್ವನಿರಾಕರಣಶಕ್ತನಾದ್ದರಿಂದ ಧೂಮನಾಮಕನಾಗಿದ್ದನೆಂದು ಭಾವಿಸಿ, ಗಗನಾಗ್ನಿಗೆ ಹಗಲೆಂಬುದೇ ಜ್ವಾಲೆ. ಎಂದರೆ ಅಚಲನಾದ್ದರಿಂದ ಅರ್ಚಿ ಎಂಬ ಜ್ವಾಲೆ ಎಂದು ಹೆಸರುಳ್ಳವನಾಗಿ, ತಮಸ್ಸಿನಿಂದ ಅಹನ್ಯಮಾನನಾದ್ದರಿಂದ ಅಹಸ್ಸೆಂಬ ಹಗಲೆಂದು ಕರೆಸುವನೆಂದು ಚಿಂತಿಸಿ, ಗಗನಾಗ್ನಿಗೆ ನಕ್ಷತ್ರಗಳೇ ಕಿಡಿಗಳು, ಎಂದರೆ ಅನನ್ಯರಾಜನಾದ್ದರಿಂದ ನಕ್ಷತ್ರಶಬ್ದವಾಚ್ಯನಾಗಿ, ದೇವರು ನಕ್ಷತ್ರಗಳಲ್ಲಿ ಕಿಡಿಗಳೆಂದು ಹೆಸರುಳ್ಳವಾಗಿರುವನೆಂದು ಚಿಂತಿಸಿ, ಗಗನಾಗ್ನಿಗೆ ಚಂದ್ರನೇ ಕೆಂಡ ಎಂದರೆ ಪರಮಸುಖರೂಪನಾದ್ದರಿಂದ ಶಶಿಶಬ್ದವಾಚ್ಯನಾಗಿ, ಚಂದ್ರನಲ್ಲಿದ್ದು ಆನಂದ ಶರೀರವಾದ್ದರಿಂದ ಅಂಗಾರ ಶಬ್ದವಾಚ್ಯ ಎಂದು ಭಾವಿಸಿ, ಗಗನಾಗ್ನಿಗೆ ನಕ್ಷತ್ರಗಳು ವಿಸ್ಫುಲಿಂಗವೆಂಬ ಕಿಡಿಗಳು ಎಂದರೆ, ಸ್ಫುರದ್ರೂಪನಾದ್ದರಿಂದ ವಿಸ್ಫುಲಿಂಗವೆಂದು ಕರೆಸುವನೆಂದು ಚಿಂತಿಸಿ, ಮೃಗವರೋದರನೆಂಬ ಚಂದ್ರನಲ್ಲಿ ನಾರಾಯಣಾದಿ ಐದುರೂಪ ಸ್ಮರಿಸಿ, ಭಕ್ತಿರಸ ಮಾತುಗಳೇ ಮಂತ್ರವಮಾಡಿ ಎಂದರೆ, ತತ್ತದ್ಗುಣಸ್ತುತಿರೂಪ ವಾಕ್ಯಗಳನ್ನೇ ಮಂತ್ರವೆಂದೆಣಿಸಿ ವಿಪಶ್ಚಿತರು ಹೋಮಿಸುವರು ಎಂದರೆ, ಚಂದ್ರಾಸ್ತಮಯ ಸೂರ್ಯಾಸ್ತಮಯ ದಿವಸ ಪೂರ್ತಿಯಾಗುವುದೂ ಸಹ ಅಂತರಿಕ್ಷಾಗ್ನಿ ಎಂಬ ದೇವರಿಗೆ ಹೋಮವೆಂದು ಜ್ಞಾನಿಗಳು ಭಾವಿಸುವರೆಂದರ್ಥ. ಇದಕ್ಕೆ ಪ್ರಮಾಣ ಶ್ರುತಿವಾಕ್ಯಗಳು:—

(೧) "ಅಸೌ ವಾವಲೋಕೋ ಗೌತಮಾಗ್ನಿಸ್ತಸ್ಯಾದಿತ್ಯ ಏವ ।
ಸಮಿದ್ರಶ್ಮಯೋ ಧೂಮಾಶ್ಚಂದ್ರಮಾಂಗಾರಾ ॥
ನಕ್ಷತ್ರಾಣಿ ವಿಸ್ಫುಲಿಂಗಾಸ್ತಸ್ಮಿನ್ನೇತಸ್ಮಿನ್ ಅಗ್ನೌ ದೇವಾಶ್ಶ್ರದ್ಧಾಂ ಜುಹ್ವತೀತಿ॥

ತಸ್ಯಾ ಆಹುತೇ ಸ್ಸೋಮೋರಾಜಾ ಸಂಭವತಿ ॥
ಎಂಬ ಛಾಂದೋಗೋಪನಿಷತ್ತಿನ ವಾಕ್ಯಪ್ರಮಾಣವೂ

(೨) "ನಾರಾಯಣಾದಯಃ ಪಂಚಕ್ರಮಾತ್ಪಂಚಾಗ್ನಯಸ್ಮೃತಾಃ।
ಆದನಾದಂಗೇನೇ ತೃತ್ವಾನ್ನಿತರಾಮುಚಲತ್ವತಃ ॥
ಸವೇಧನಾತ್ಸಮಿದ್ವಿಷ್ಣುಃ ಧೂತ್ಕಾರಾದ್ಧೂಮ ಉಚ್ಯತೇ ॥
ಅರಚಿತತ್ವಾದರ್ಚಿಶ್ಚಸೋಂಗಾರೋಽಂಗರತೇರಪಿ ॥
ವಿವಿಧಂ ಸ್ಫುರಣಾಚ್ಛೈವ ವಿಸ್ಫುಲಿಂಗ ಇತೀರಿತಃ ।
ಪುನರ್ನಾರಾಯಣಾದ್ಯಾತ್ಮಾ ಪ್ರತ್ಯೇಕಂ ಪಂಚರೂಪವಾನ್ ॥
ಆದಿತ್ಯಸ್ಸತತಾದಾನಾ ದ್ರಶ್ಮೀ ರತಿಶಿರೂಪತಃ ।
ತಮುಸಾಹನನೀಯತ್ವಾದಹಶ್ಚಂದ್ರಃ ಪರಂ ಸುಖಂ ॥
ಅನನ್ಯರಾಜಾ ನಕ್ಷತ್ರಮ್" ॥

–ಎಂಬ ಛಾಂದೋಗ್ಯೋಪನಿಷತ್ತಿನ ಭಾಷ್ಯ ವಾಕ್ಯ–ಇವುಗಳ ಅರ್ಥಗಳು ನಿರೂಪಿಸಲ್ಪಟ್ಟವು. ॥೨॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಪಂಚಾಗ್ನಿಗಳಲ್ಲಿ ವ್ಯುತ್ಕ್ರಮ ರೀತಿಯಲ್ಲಿ ಮೊದಲನೆಯದಾದ "ಗಗನ" ವೆಂಬ ಅಂತರಿಕ್ಷಾಗ್ನಿಯ ವಿವರಗಳನ್ನು ತಿಳಿಸುತ್ತಾರೆ. **"ಗಗನಪಾಪಕ"** ಎಂಬ ಪ್ರಸಕ್ತ ಸಂಧಿಗತ ೨ ನೆಯ ಈ ಪದ್ಯದಿಂದ. ಭಗವತ್ಪೂಜಾರೂಪ ವಾಗಿ ಭಗವತ್ಪ್ರೀತಿಗೋಸುಗ ನಡೆಯುವ ಸಮಸ್ತ ಕ್ರಿಯಾಕಲಾಪಗಳೆಲ್ಲವೂ "ಯಜ್ಞ" ವೆಂದೆನಿಸುವುವು. ಇಂತಹ ಯಜ್ಞಗಳ ಅಂಗಭೂತಗಳಾದ ಅಧಿಷ್ಠಾನಗಳು ಆರು ಪ್ರಕಾರ ಇವೆ:–

(೧) ಅಗ್ನಿ. (೨) ಸಮಿತ್ತು. (೩) ಧೂಮ. (೪) ಜ್ವಾಲೆ. (೫) ಕಿಡಿಗಳು ಮತ್ತು (೬) ಕೆಂಡಗಳು.

ಇವುಗಳವಿವಕ್ಷಯಾ ಪ್ರಥಮಾಗ್ನಿಯಾದ"ಗಗನ"ವನ್ನು ವಿವರಿಸುತ್ತಾರೆ.

**(1)ಗಗನ:-**

(೧) ರಾಹುಮಂಡಲದ ಕೆಳಗೆ ಪಾಡಿ ನಕ್ಷತ್ರಗಳು ಇರುವ ಆಕಾಶಗತ ಪ್ರದೇಶವೇ "ಗಗನ" ವೆಂಬ ಪ್ರಥಮಾಗ್ನಿಯು.

(೨) **ಶ್ರೀಮನ್ನಾರಾಯಣನಾಮಕ** ಪರಮಾತ್ಮನೇ ಈ ಅಗ್ನಿಗೆ ಮುಖ್ಯಾಭಿಮಾನಿಯು. ಈ ಅಗ್ನಿಯಲ್ಲಿ ಹೋಮಿಸತಕ್ಕ ಸಮಸ್ತ ದ್ರವ್ಯಗಳೂ ಶ್ರೀಮನ್ನಾನಾಯಣನಿಗೆ ಆಹುತಿಗಳು.

**(೩) ಪ್ರಾಣನಾಮಕ ವಾಯುದೇವರು** ಈ ಅಗ್ನಿಗೆ ಅವಾಂತರಾಭಿಮಾನಿಗಳು.

(೪) ತೇಜೋರೂಪದಿಂದ ಚೆನ್ನಾಗಿ ಪ್ರಕಾಶಮಾನನಾಗಿರುವುದರಿಂದ ನಾರಾಯಣನು "**ಆಕಾಶ**" ಶಬ್ದವಾಚ್ಯನು.

(೫) "ಅತ್ತೀತ್ಯಗ್ನಿಃ" ಎಂಬ ಶಬ್ದ ನಿರ್ವಚನದಂತೆ, "ಅದನ"ಅಂದರೆ ಭಕ್ಷಿಸುವುದು. ಜಗತ್ತನ್ನು ಭಕ್ಷಿಸಿ. ಅಂದರೆ, ಲಯಕ್ರಮದಲ್ಲಿ ಸಂಹಾರಗೈದು ತನ್ನ ಉದರದಲ್ಲಿಟ್ಟುಕೊಳ್ಳುವುದಂಂಬ ಶ್ರೀಮನ್ನಾರಾಯಣನು ಅಗ್ನಿನಾಮಕನು.

(೬) ಸಮಸ್ತ ಅವಯುವಗಳಿಗೆ ಪ್ರೇರಕವಾದ್ದರಿಂದ ಅಗ್ನಿವಾಚ್ಯನು.

(೭) ಅಂತರಿಕ್ಷಗತನಾಗಿದ್ದು ಸ್ವಾನಂದರೂಪಿಯಾಗಿ ಅತಿಶಯವಾಗಿ ಅಚಲನಾಗಿರುವುದರಿಂದ ಅಗ್ನಿ ಶಬ್ದವಾಚ್ಯನು.

**(2)** ಸಮಿತ್ತು (ರವಿ) :—

(೧) ಇಂತಹ ಗಗನಾಗ್ನಿಗೆ ಕಾಷ್ಠರೂಪದಲ್ಲಿರುವುದೇ ಆಕಾಶದಲ್ಲಿ ದೇದೀಪ್ಯಮಾನನಾಗಿ ಬೆಳಗುತ್ತಿರುವ **ಸೂರ್ಯನು.** ಆ ಸೂರ್ಯನೇ ಅಂತರಿಕ್ಷಾಗ್ನಿಗೆ ಸಮಿಧೆ ಎಂದೆನಿಸಿಕೊಳ್ಳುವನು.

(೨) ಸೂರ್ಯನೆಂಬ ಸಮಿತ್ತಿನ ಅಧಿಷ್ಠಾನಗತರೂಪ ಮೂಲರೂಪ ನಾರಾಯಣನಿಂದ ಹೊರಟ **ನಾರಾಯಣ-ನಾರಾಯಣನು** ಮುಖ್ಯ ನಿಯಾಮಕನು.

(೩) ಪ್ರಾಣರೂಪದಿಂದ ಅಭಿವ್ಯಕ್ತವಾದ **ಪ್ರಾಣರೂಪೀ ವಾಯು ದೇವರು** ಅವಾಂತರಾಭಿಮಾನಿಗಳು.

(೪) ಸೂರ್ಯಾಂತರ್ಗತ ಪ್ರಾಣರೂಪೀ ವಾಯ್ವಂತರ್ಗತ ಆದಿತ್ಯ ಶಬ್ದವಾಚ್ಯ ಶ್ರೀನಾರಾಯಣ-ನಾರಾಯಣಾರ್ಪಣಮಸ್ತು ಎಂದು ಪೂಜಾಕ್ರಮ.

(೫) ನಿತ್ಯಾಭಿವೃದ್ಧಿರೂಪನಾಗಿರುವುದರಿಂದ ಈ ಭಗವದ್ರೂಪಕ್ಕೆ **"ಸಮಿತ್"** ಎಂದು ಹೆಸರು.

(೬) **"ತಸ್ಯಾದಿತ್ಯ ಏವ ಸಮಿತ್"**-ಎಂಬ ಛಾಂದೋಗ್ಯೋಪನಿಷತ್ತಿನ ವಾಕ್ಯದಂತೆ, ಈ ಆಕಾಶಾಗ್ನಿಗೆ ಆದಿತ್ಯ. ಅಂದರೆ, ರವಿಯೇ ಕಾಷ್ಠ (ಸಮಿತ್ತು)ವೆಂದು ಹೇಳಿದೆ.

(೭) ಕಾಷ್ಠವು ಹೇಗೆ ಪ್ರಜ್ವಲಿಸಿ, ಪ್ರಕಾಶವನ್ನು ಕೊಡುವುದೋ, ಹಾಗೆಯೇ ಹಗಲಿನಲ್ಲಿ ದಿವಾಭಿಮಾನಿಯಾದ ಸೂರ್ಯನಲ್ಲಿ ಅಂತರ್ಗತನಾಗಿದ್ದು, ಆದಿತ್ಯಶಬ್ದವಾಚ್ಯನಾದ ಸೂರ್ಯ ನಾರಾಯಣ ರೂಪೀ "ಘೃಣೀ" ನಾಮಕ ಪರಮಾತ್ಮನು ಜಗತ್ತಿಗೆ ಪ್ರಕಾಶಪ್ರದನಾಗಿದ್ದಾನೆ.

(೮) ಸಕಲ ಜನರು ಮಾಡುವ ಪೂಜಾದಿಗಳನ್ನು ಸ್ವೀಕರಿಸುವನು. ಭೂಮಿಯಲ್ಲಿರುವ ಉದಕಗಳನ್ನೆಲ್ಲಾ ತೆಗೆದುಕೊಳ್ಳುವನು. ಇದರಿಂದ ಆದಿತ್ಯ ನಾಮಕನು.

**"ಆದಿತ್ಯ: ಆದತ್ತ ಇತ್ಯಾದಿನಾಮಾ ಆದಿತ್ಯಸ್ಥೋ ನಾರಾಯಣ ನಾರಾಯಣಾತ್ಮಾ"** -ಎಂಬ ಉಪನಿಷದ್ವಾಕ್ಯವೇ ಇದಕ್ಕೆ ಪ್ರಮಾಣ (ಛಾಂದೋಗ್ಯ ಖಂಡಾರ್ಥ)

**(3) ಧೂಮ (ರಶ್ಮಿಗಳು) :–**

(೧) ಆಕಾಶವೆಂಬೋ ಗಗನಾಗ್ನಿ ಮತ್ತು ಸೂರ್ಯನೆಂಬೋ ಸಮಿತ್ತು ಇವುಗಳ ಸಂಯೋಗದಿಂದ ಉತ್ಪತ್ತಿಯಾಗುವ ಹೊಗೆಯೇ ಸೂರ್ಯನ ಕಿರಣ ಗಳು. ಸೂರ್ಯನ ಸಹಸ್ರಕಿರಣಗಳ ರೂಪದಲ್ಲಿರುವ ರಶ್ಮಿಗಳು **ಧೂಮ** ವೆಂದೆನಿಸುವುದು.

(೨) ಇದಕ್ಕೆ **ನಾರಾಯಣ–ವಾಸುದೇವ**ರೂಪೀ ಶ್ರೀಪರಮಾತ್ಮನೇ ಮುಖ್ಯಾಭಿಮಾನಿ.

(೩) ಪ್ರಾಣಾಂಶ **ಅಪಾನನಾಮಕ** ಶ್ರೀವಾಯುದೇವರು ಅವಾಂತ ರಾಭಿಮಾನಿಗಳು.

(೪) ರತಿಸುಖರೂಪನಾಗಿರುವುದರಿಂದ ಪರಮಾತ್ಮನಿಗೆ **"ರಶ್ಮಿ"** ಎಂದು ಹೆಸರು.

(೫) ಅಜ್ಞಾನಾದಿ ದೋಷಗಳನ್ನು ಧೂತ್ಕರಿಸುವುದರಿಂದ ಈ ಭಗವ ದ್ರೂಪಕ್ಕೆ **"ಧೂಮ"** ಎಂದು ಹೆಸರು.

(೬) ಜ್ಞಾನಾನಂದ ರೂಪಿಯಾಗಿ ರಶ್ಮಿಶಬ್ದವಾಚ್ಯನಾಗಿದ್ದು ಸರ್ವ ನಿರಾಕರಣ ಶಕ್ತನಾಗಿ ಧೂಮನಾಮಕನಾಗಿರುವ ಶ್ರೀನಾರಾಯಣ–ವಾಸುದೇವ ಭಗವದ್ರೂಪವನ್ನು ಸೂರ್ಯನ ಕಿರಣಗಳೆಂಬ ಈ ಧೂಮಾಧಿಷ್ಠಾನದಲ್ಲಿ ಚಿಂತಿಸಬೇಕು.

(೭) **"ರತಿತಂ ರೂಪತ್ವೇನ ರಶ್ಮಿನಾಮಾ ।
ರಶ್ಮಿಗತೋ ನಾರಾಯಣೋ ವಾಸುದೇವಾತ್ಮಾ ಧೂತ್ಕರೋತಿ
ನಿರಾಕರೋತೀತ್ಯಜ್ಞಾನಾ ದೀದಿತಿ ಧೂಮನಾಮೋಚ್ಯತೇ" ॥**

ಎಂಬ ಛಾಂದೋಗ್ಯೋಪನಿಷತ್ತಿನ ವಾಕ್ಯವೇ ಇದಕ್ಕೆ ಪ್ರಮಾಣ.

**(4) ಅರ್ಚಿ (ಹಗಲು) :–**

(೧) ಗಗನಾಗ್ನಿ ಎಂಬೋ ಪಾವಕ ಮತ್ತು ರವಿ ಎಂಬೋ ಕಾಷ್ಠ. ಇವು

ಗಳ ಸಂಯೋಗದಿಂದ ಏಳುವ ಉರಿಯೇ (ಜ್ವಾಲೆ) **ಹಗಲು.** **ಸೂರ್ಯನ** ತೇಜಸ್ಸಿನಿಂದ ಉಂಟಾಗುವ ಹಗಲೆಂಬುದೇ ಅಗ್ನಿಜ್ವಾಲೆಯು. ಅಂದರೆ ಆರ್ಚಿಯು.

(೨) ಇದಕ್ಕೆ ನಿಯಾಮಕ ಭಗವದ್ರೂಪವು **ನಾರಾಯಣ–ಸಂಕರ್ಷಣರೂಪ.**

(೩) ಪ್ರಾಣಾಂಶಯುಕ್ತ ವ್ಯಾನನಾಮಕ ಶ್ರೀ ವಾಯುದೇವರು ಅವಾಂತರಾಭಿಮಾನಿಗಳು.

(೪) ಗಗನದಲ್ಲಿ ಸೂರ್ಯ. ಸೂರ್ಯನ ಕಿರಣಗಳ ಪ್ರಸಾರದಿಂದ ತೇಜಸ್ಸು. ಈ ತೇಜಸ್ಸೇ ಹಗಲೆಂಬ ಜ್ವಾಲೆಗೆ ಕಾರಣ.

(೫) ತಮಸ್ಸಿನ ರೂಪವಾದ ಕತ್ತಲಿನಿಂದ ಹಾನಿಯಾಗದಿರುವುದರಿಂದ ಪರಮಾತ್ಮನಿಗೆ "ಅಹಃ" ಎಂದರೆ "**ಹಗಲು**" ಎಂದು ಹೆಸರು.

(೬) ವಿಕಾರವನ್ನು ಹೊಂದದೇ ಶಶ್ವದೇಕ ಪ್ರಕಾರನಾಗಿ ಇರುವುದರಿಂದ ಈ ನಾರಾಯಣ-ಸಂಕರ್ಷಣ ಭಗವದ್ರೂಪವು ಅರ್ಚಿ ಶಬ್ದವಾಚ್ಯವು. ಇಂತು ಆಹರ್ಗತ ನಾರಾಯಣ–ಸಂಕರ್ಷಣ ರೂಪೀ ಪರಮಾತ್ಮನು ಅರ್ಚಿಶಬ್ದ ವಾಚ್ಯನಾಗಿ ಹಗಲೆಂಬ ಜ್ವಾಲೆಯಲ್ಲಿ ವಿದ್ಯಮಾನನಾಗಿರುವನೆಂದು ಧ್ಯಾನಿಸಬೇಕು.

**(5) ಕಿಡಿಗಳು (ನಕ್ಷತ್ರಗಳು) :–**

(೧) ಅಗ್ನಿ ಮತ್ತು ಕಾಷ್ಠಗಳ ಸಂಬಂಧದಿಂದ ಜ್ವಾಲೆಯುಂಟಾಗುವುದು. ಜ್ವಾಲೆಯು ಮೇಲಕ್ಕೆ ಎದ್ದಾಗ ಕಿಡಿಗಳು ಹೊರಬರುವುವು. ಆಕಾಶಗತ **ನಕ್ಷತ್ರಗಳೇ ಕಿಡಿಗಳು** ಎಂದೆನಿಸುವವು.

(೨) **ನಾರಾಯಣ-ಪ್ರದ್ಯುಮ್ನ** ರೂಪೀ ಶ್ರೀಪರಮಾತ್ಮನು ನಕ್ಷತ್ರಗಳೆಂಬ ಕಿಡಿಗಳಿಗೆ ಮುಖ್ಯನಿಯಾಮಕನು.

(೩) ಪ್ರಾಣಾಂಶಯುಕ್ತ **ಉದಾನನಾಮಕ** ಶ್ರೀವಾಯುದೇವರು ಅವಾಂತರಾಭಿಮಾನಿಗಳು.

(೪) ಮತ್ಸ್ಯಾದಿ ವಿವಿಧ ರೂಪಗಳಿಂದ ಸ್ಫುರಿತನಾಗುವುದರಿಂದ ಪರಮಾತ್ಮನಿಗೆ **"ಸ್ಫುಲಿಂಗ"** ನೆಂದು ಹೆಸರು. ಸ್ಫುಲಿಂಗವೆಂದರೆ ಕಿಡಿಗಳು ಸ್ಫುಲಿಂಗ ಶಬ್ದವಾಚ್ಯನಾದ ಉದಾನನಾಮಕ ವಾಯ್ವಂತರ್ಗತ ನಾರಾಯಣ-ಪ್ರದ್ಯುಮ್ನ ರೂಪವು ಕಿಡಿಗಳೆಂಬ ನಕ್ಷತ್ರಮಂಡಲದಲ್ಲಿ ವಿದ್ಯಮಾನವಾಗಿದೆ.

(೫) **"ನಕ್ಷತ್ರಾಣಿ ವಿಸ್ಫುಲಿಂಗಾಃ"**:– ಎಂಬ ಉಪನಿಷದ್ವಾಕ್ಯವೇ ಇದಕ್ಕೆ ಆಧಾರ.

**(6) ಕೆಂಡ (ಚಂದ್ರನು) :–**

(೧) ಕಾಷ್ಠವು ಅಗ್ನಿಯಲ್ಲಿ ಉರಿದು ಕೆಂಡವಾಗಿ ಪರಿಣಮಿಸುವುದು. **ಚಂದ್ರನೇ ಅಂಗಾರ** ಎಂದರೆ ಕೆಂಡವೆನಿಸುವನು.

(೨) **ನಾರಾಯಣ–ಅನಿರುದ್ಧ**ರೂಪೀ ಶ್ರೀಪರಮಾತ್ಮನು ಚಂದ್ರನಲ್ಲಿ ವಿದ್ಯಮಾನನಾಗಿದ್ದು "ಅಂಗಾರ" ಶಬ್ದವಾಚ್ಯನಾಗಿರುವನು.

(೩) ಪ್ರಾಣಾಂಶಯುಕ್ತ **ಸಮಾನನಾಮಕ** ವಾಯುದೇವರು ಅವಾಂತರಾಭಿಮಾನಿಗಳು.

(೪) ಆನಂದ ಸ್ವರೂಪನಾಗಿರುವುದರಿಂದ ಪರಮಾತ್ಮನಿಗೆ "ಚಂದ್ರ" ಎಂದು ಹೆಸರು.

(೫) "ಅಂಗ" ಅಂದರೆ ಅವಯವಗಳಲ್ಲಿ "ರ" ಎಂದರೆ ರಮಿಸುವುದರಿಂದ (ಕ್ರೀಡಿಸುವುದರಿಂದ) ಪರಮಾತ್ಮನು "ಅಂಗಾರ" ಶಬ್ದವಾಚ್ಯನು.

ಇಂತು ಚಂದ್ರನಾಮಕನಾಗಿ ಅಂಗಾರ ಶಬ್ದವಾಚ್ಯನಾಗಿ ನಾರಾಯಣ–ಅನಿರುದ್ಧರೂಪೀ ಪರಮಾತ್ಮನು ಅಂಗಾರ (ಕೆಂಡ) ಎಂದೆನಿಪ ಚಂದ್ರನಲ್ಲಿ ವಿದ್ಯಮಾನನಾಗಿರುವನು ಎಂದು ಉಪಾಸನೆಮಾಡಬೇಕು.

ಪ್ರಥಮಾಗ್ನಿಯಾದ ಆಕಾಶಗತಾಗ್ನಿಯಲ್ಲಿ ಚಿಂತಿಸಬೇಕಾದ ಪರಮಾತ್ಮನ ಆರು ರೂಪಗಳ ವಿವರಗಳನ್ನು ಈ ಕೆಳಗಿನ ಪಟ್ಟಿಯಿಂದ ಸುಲಭವಾಗಿ ತಿಳಿಯಬಹುದು.

| ಕ್ರಮ ಸಂಖ್ಯೆ | ಅಂಗಗಳು | ಅಧಿಷ್ಠಾನ | ನಾಮ | ಭಗವದ್ರೂಪ | ವಾಯುರೂಪ | ವಿವರಗಳು |
|---|---|---|---|---|---|---|
| ೧ | ಅಗ್ನಿ | ಆಕಾಶ | ಆಕಾಶಾಗ್ನಿ | ಮೂಲ ನಾರಾಯಣ | ಪ್ರಾಣ | ತೇಜೋರೂಪಿಯಾದ ಪರಮಾತ್ಮನು ಅಗ್ನಿ ಶಬ್ದ ವಾಚ್ಯನು. |
| ೨ | ಸಮಿತ್ತು | ಸೂರ್ಯ | ಸಮಿತ್ ಶಬ್ದ ವಾಚ್ಯನು | ನಾರಾಯಣ-ನಾರಾಯಣ | ಪ್ರಾಣ-ಪ್ರಾಣ | ನಿತ್ಯಾಭಿವೃದ್ಧಿರೂಪನಾದ್ದರಿಂದ ಸಮಿತ್ ನಾಮಕನು |
| ೩ | ಧೂಮ | ಸೂರ್ಯನ ಕಿರಣಗಳು | ಧೂಮ ಶಬ್ದ ವಾಚ್ಯನು | ನಾರಾಯಣ-ವಾಸುದೇವ | ಪ್ರಾಣ-ಅಪಾನ ನಾಮಕ | ರತಿ ಸುಖ ಸ್ವರೂಪನಾದ್ದರಿಂದ ರಶ್ಮಿಶಬ್ದ ವಾಚ್ಯನು. ಅಜ್ಞಾನ ನಿರಾಕರಣನು ಧೂಮ ಶಬ್ದ ವಾಚ್ಯನು. ೧ |

| | | | | | | |
|---|---|---|---|---|---|---|
| ೪ | ಅರ್ಚಿ | ಹಗಲು | ಅರ್ಚಿ ಶಬ್ದ ವಾಚ್ಯನು | ನಾರಾಯಣ-ಸಂಕರ್ಷಣ | ಪ್ರಾಣ-ವ್ಯಾನ ನಾಮಕ | ನಿರ್ವಿಕಾರನಾಗಿ ಶಶ್ವದೇಕ ಪ್ರಕಾರನಾಗಿರುವುದರಿಂದ ಅರ್ಚಿಶಬ್ದ ವಾಚ್ಯನು |
| ೫ | ಕಿಡಿಗಳು | ನಕ್ಷತ್ರಗಳು | ನಕ್ಷತ್ರ ವಾಚ್ಯನು | ನಾರಾಯಣ-ಪ್ರದ್ಯುಮ್ನ | ಪ್ರಾಣ-ಉದಾನ ನಾಮಕ | ಸ್ಫುರಣ ಮಾಡುವುದರಿಂದ "ಸ್ಫುಲಿಂಗ" ಶಬ್ದ ವಾಚ್ಯನು. |
| ೬ | ಕೆಂಡ | ಚಂದ್ರ | ಅಂಗಾರ ನಾಮಕ | ನಾರಾಯಣ-ಅನಿರುದ್ಧ | ಪ್ರಾಣ-ಸಮಾನ ನಾಮಕ | ಅವಯವಗಳಲ್ಲಿ ರಮಿಸುವುದರಿಂದ ಅಂಗಾರ ಶಬ್ದ ವಾಚ್ಯನು. |

**ವಿಶೇಷಾಂಶ :–**

"ಮೃಗವರೋದರ" ಎಂಬ ಶಬ್ದಕ್ಕೆ ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿ ಜೀವೋತ್ತಮರಾದ ವಾಯುದೇವರು. ಅವರ ಅಂತರ್ಗತನಾಗಿ ಶ್ರೀಪರಮಾತ್ಮನು ಪಂಚಾಗ್ನಿಗತನಾಗಿ ವ್ಯಾಪಾರಗಳನ್ನು ಮಾಡುವನು ಎಂದು ಹೇಳಿದ್ದಾರೆ. ಉಳಿದ ಎಲ್ಲಾ ವ್ಯಾಖ್ಯಾನಗಳಲ್ಲಿಯೂ,"ಚಂದ್ರ" ಎಂದು ವಿವರಿಸಲ್ಪಟ್ಟಿದೆ. "ಮೃಗ" ಎಂದರೆ ಜಿಂಕೆ. "ಮೃಗವರ" ಎಂದರೆ ಶ್ರೇಷ್ಠವಾದ ಜಿಂಕೆ. "ಮೃಗವರೋದರ" ಎಂದರೆ ಅಂತಹ ಶ್ರೇಷ್ಠವಾದ ಜಿಂಕೆಯ ಲಾಂಛನವನ್ನು ತನ್ನಲ್ಲಿ (ಉದರಲ್ಲಿ) ಧರಿಸಿರುವ "ಚಂದ್ರ" ಎಂಬ ಅರ್ಥ ಸುಸ್ಪಷ್ಟ. ಇದಲ್ಲದೆ, **ಛಾಂದೋಗ್ಯೋಪನಿಷತ್ತಿನ ೫ ನೆಯ ಅಧ್ಯಾಯದಲ್ಲಿ:**

**"ತಸ್ಮಿನ್ನಗ್ನೌ ದೇವಾಃ ಶ್ರದ್ಧಾಂ ಜುಹ್ವತಿ ತಸ್ಯಾ ಆಹುತೇಃ ಸೋಮೋ ರಾಜಾ ಸಂಭವತಿ"** -ಎಂಬ ಪ್ರಮಾಣ ವಾಕ್ಯಾನುಸಾರ ಅಂತಹ ಗಗನಾಗ್ನಿಯಲ್ಲಿ ದೇವತೆಗಳು ಶ್ರದ್ಧಾಭಕ್ತಿಗಳಿಂದ ಹೋಮಮಾಡಿ, ಹುತನಾದ ಜೀವನನ್ನು ಚಂದ್ರಮಂಡಲದಲ್ಲಿ ಸೇರಿಸುವರು. (ಸೋಮೋರಾಜಾ). ನಕ್ಷತ್ರಗಳೇ ಕಿಡಿಗಳು. ಇಂತಹ ನಕ್ಷತ್ರಗಳಿಗೆ ಅಧಿಪತಿಯಾದ ಚಂದ್ರನೇ ಅಂಗಾರನೆಂದೆನಿಸುವನು. ಸೋಮ ಅಂದರೆ ಚಂದ್ರನೇ ರಾಜನು. ಇತರ್ಯಾರೂ ತನಗೆ ಪ್ರಭುಗಳು ಇಲ್ಲವಾದ್ದರಿಂದ ಶ್ರೀಪರಮಾತ್ಮನೇ ಚಂದ್ರಶಬ್ದ ವಾಚ್ಯನು. ಇದರಿಂದ "ಮೃಗವರೋದರನೊಳಗೆ" –ಎಂಬ ಶಬ್ದಕ್ಕೆ "ಚಂದ್ರವಲ್ಲ" ಎಂದು ಅರ್ಥಮಾಡುವುದು ಸೂಕ್ತ. ಸಮನ್ವಯ ಕ್ರಮದಿಂದ ಅಂತಹ ಚಂದ್ರಾಂತರ್ಗತ ಜೀವೋತ್ತಮ ಸಮಾನನಾಮಕವಾಯ್ವಂತರ್ಗತ ನಾರಾಯಣಾನಿರುದ್ಧ ರೂಪವೆಂದು ಚಿಂತಿಸಬಹುದು.

# ಪದ್ಯ (೩)

**ಮೂಲ :–**

**ಪಾವಕನು ಪರ್ಜನ್ಯ ಸಮಿಧೆಯು ।**
**ಪ್ರಾವಹೀಪತಿ ಧೂಮಗಳೀ ಮೇ ।**
**ಘಾವಳಿಗಳರ್ಚಿ ಕ್ಷಣಪ್ರಭೆ ಗರ್ಜನವೆ ಕಿಡಿಯು ॥**
**ಭಾವಿಸುವುದಂಗಾರ ಸಿಡಿಲೆಂ ।**
**ದೀ ವಿಧಾಗ್ನಿಯೊಳಬ್ಧಿ ಜಾತನ ।**
**ಕೋವಿದರು ಹೋಮಿಸುವರನುದಿನ ಪರಮ ಭಕುತಿಯಲಿ॥೩॥**

**ಅವತರಣಿಕೆ :–**

ಪಂಚಾಗ್ನಿಗಳಲ್ಲಿ ಎರಡನೆಯದಾದ ಪರ್ಜನ್ಯಾಗ್ನಿ ಮತ್ತು ಅದಕ್ಕೆ ಸಂಬಂಧಿಸಿದ ವಿವರಗಳನ್ನು ಪ್ರಸಕ್ತ ಪದ್ಯದಲ್ಲಿ ತಿಳಿಸುತ್ತಾರೆ. ಮೇಘಗಳೇ ಅಗ್ನಿಯು. ಪ್ರವಾಹವಾಯುವೇ (ಬೀಸುವ ಮಾರುತ) ಕಾಷ್ಠರೂಪವಾದ ಸಮಿಧೆ. ಮೇಘಮಾಲೆಗಳೇ ಧೂಮವು. ಕಣ್ಣಿಗೆ ಕಾಣಿಸಿಕೊಂಡು ಕ್ಷಣದಲ್ಲಿ ಮಾಯವಾಗುವ ಮಿಂಚಿನ ಮಾಯೆಯೇ ಅಗ್ನಿಜ್ವಾಲೆಯು. ಗುಡುಗೇ ಕಿಡಿಗಳೆನಿಸುವುವು. ಶಬ್ದ ಘರ್ಜನೆಯಿಂದ ಮೊಳಗುವ ಸಿಡಿಲೆಂಬುದೇ ಕೆಂಡವು. ಇಂತು, ದ್ವಿತೀಯಾಗ್ನಿಯಲ್ಲಿ ವಿದ್ಯಮಾನವಾಗಿರುವ ವಾಸುದೇವನ ಆ ರೂಪಗಳನ್ನು ಅನುಸಂಧಾನ ಪೂರ್ವಕ, ಆಯಾಯಾ ಅಂಗಭೂತಾಧಿಷ್ಠಾನಗಳಲ್ಲಿ ಚಿಂತಿಸುತ್ತಾ ಸದ್ಭಕ್ತಿಪೂರ್ವಕ ಈ ಪರ್ಜನ್ಯಾಗ್ನಿಯಲ್ಲಿ ಜ್ಞಾನಿಶ್ರೇಷ್ಠರು ಭಗವದರ್ಪಣ ರೂಪವಾಗಿ ಹೋಮಿಸುವರು ಎಂದು ಹೇಳುತ್ತಾರೆ. "**ಪಾವಕನು ಪರ್ಜನ್ಯ**" ಎಂಬ ಪ್ರಸಕ್ತ ಸಂಧಿಗತ ಈ ೩ ನೆಯ ಪದ್ಯದಿಂದ ॥೩॥

**ಪ್ರತಿಪದಾರ್ಥ :––**

**ಪಾವಕನು**=ಅಗ್ನಿಯು **ಪರ್ಜನ್ಯ**=ಮೇಘಾಭಿಮಾನಿಯು **ಸಮಿ**

**ಧೆಯು**=ಈ ಮೇಘಾಗ್ನಿಗೆ ಸಮಿತ್ತಿನ ಸಾಂಕೇತವಾದ ಕಾಷ್ಠವು. **ಪ್ರಾವಹೀಪತಿ**=ಪ್ರಾವಹೀ ಎಂಬ ದೇವತೆಯು ಪತಿಯಾದ ಪ್ರವಾಹ ವಾಯುವು. **ಧೂಮಗಳೆ**=ಅಗ್ನಿ ಮತ್ತು ಕಾಷ್ಠಗಳ ಸಂಬಂಧದಿಂದ ಹೊರಡತಕ್ಕ ಹೊಗೆಯು. **ಮೇಘಾವಳಿಗಳು**=ಆಕಾಶಮಾರ್ಗದಲ್ಲಿ ಸಂಚರಿಸುವ ಮೇಘಗಳ ಸಮೂಹ. **ಅರ್ಚಿ**=ಆ ಅಗ್ನಿಯಿಂದ ಮೇಲಕ್ಕೇಳುವ ಉರಿಯು. (ಜ್ವಾಲೆ) **ಕ್ಷಣಪ್ರಭೆಯು**=ಕಣ್ಣಿಗೆ ಗೋಚರವಾಗಿ ತಕ್ಷಣದಲ್ಲಿಯೇ ಮಾಯವಾಗುವ ಮಿಂಚು. **ಗರ್ಜನನೆ**=ಗುಡುಗೆಂಬುದೇ (ಮೇಘಗರ್ಜನೆ) **ಕಿಡಿಗಳು**=ಉರಿಯಿಂದ ಹೊರಡತಕ್ಕ ಕಿಡಿಗಳು **ಅಂಗಾರ**=ಕೆಂಡವು. **ಸಿಡಿಲೆಂದು**=ಛಟಛಟಾರನೆ ಮಹಾಶಬ್ದವನ್ನುಂಟುಮಾಡುವ ಸಿಡಿಲೆಂಬುದಾಗಿ **ಭಾವಿಸುವುದು**=ಅನುಸಂಧಾನ ಪೂರ್ವಕ ಚಿಂತಿಸಬೇಕು. **ಈ ವಿಧ ಅಗ್ನಿಯೊಳು**=ಈ ಪ್ರಕಾರ ಪರ್ಜನ್ಯಾಗ್ನಿಯಲ್ಲಿ **ಅಬ್ಧಿಜಾತನ**=ಚಂದ್ರನಲ್ಲಿ ಚಂದ್ರಗತ ಜೀವನನ್ನು (ಅಬ್ಧಿ=ಸಮುದ್ರ; ಜಾತ=ಅದರಲ್ಲಿ ಉತ್ಪನ್ನವಾದ ಚಂದ್ರನೆಂದರ್ಥ) **ಕೋವಿದರು**=ಜ್ಞಾನಿಶ್ರೇಷ್ಠರು. **ಅನುದಿನ**=ಪ್ರತಿ ದಿವಸದಲ್ಲಿಯೂ **ಪರಮಭಕ್ತಿಯಲ್ಲಿ**=ಶುದ್ಧಭಕ್ತಿಭಾವದಿಂದ. **ಹೋಮಿಸುವರು**=ಇಂತಹ ಮೇಘಾಖ್ಯಾಗ್ನಿಯಲ್ಲಿ ಹೋಮಮಾಡುತ್ತಾರೆ. ॥೩॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ:–

ದ್ವಿತೀಯಾಗ್ನಿಯಾದ ವಾರಿದ ಎಂಬ ಮೇಘಾಗ್ನಿಯಲ್ಲಿ ಹೋಮಕ್ರಮ ಹೇಳುತ್ತಾರೆ. ಈ ಅಗ್ನಿಗೆ ಅಪಾನನಾಮಕ ವಾಯುದೇವರು ವಾಸುದೇವ ನಾಮಕ ಪರಮಾತ್ಮ.

ಪಾವಕನು ಪರ್ಜನ್ಯ-ಪರ್ಜನ್ಯ ನಾಮಕ ಮೇಘವೆಂಬೋದೇ ಅಗ್ನಿ. ಈ ಅಗ್ನಿಯಲ್ಲಿ ಅಪಾನನಾಮಕ ವಾಯುದೇವರು ವಾಸುದೇವರೂಪೀ ಪರಮಾತ್ಮ. ಸಮಿಧೆಯು ಪ್ರಾವಹೀಪತಿ- ಮೇಘಾಖ್ಯ ಅಗ್ನಿಗೆ ಸಮಿಧೆ ಸಾಂಕೇತವಾದಕಾಷ್ಠ. ಪ್ರಾವಹೀಪತಿ ಪ್ರವಹ ವಾಯದೇವರು ಅಪಾನನಾಮಕ ಪ್ರಾಣದೇವರು,

ವಾಸುದೇವಾಖ್ಯನಾರಾಯಣ, ಧೂಮಗಳೇ ಮೇಘಾವಳಿಗಳು– ಅಗ್ನಿ ಸಂಯೋಗದಿಂದ ಕಾಷ್ಠದಿಂದ ಹೊರಡತಕ್ಕ ಹೊಗೆ ಎಂಬುದೇ ಸಂಚಾರಮಾಡ ತಕ್ಕ ಮೇಘಪಂಕ್ತಿಗಳು. (ಇದಕ್ಕೆ ಅಪಾನನಾಮಕ ವಾಯುದೇವರು ವಾಸು ದೇವ ವಾಸುದೇವ), ಅರ್ಚಿ ಕ್ಷಣಪ್ರಭೆ–ಕಾಷ್ಠಸಂಯೋಗದಿಂದ ಅಗ್ನಿಯಿಂದ ಹೊರಡತಕ್ಕ ಅಗ್ನಿ ಎಂಬ ಉರಿಯೇ, ಕಾಂತಿ ತೋರಿಸಿ ತಕ್ಷಣದಲ್ಲಿಯೇ ಆ ಕಾಂತಿ ಲುಪ್ತವಾಗತಕ್ಕ ಮಿಂಚು. (ಅಪಾನನಾಮಕ ವ್ಯಾನ ವಾಯು ದೇವರು, ವಾಸುದೇವ ಸಂಕರ್ಷಣ) ಗರ್ಜನೆಯು ಕಿಡಿಯು. ಇಂಥ ಉರಿಯಿಂದ ಹೊರಡತಕ್ಕ ಕಿಡಿಗಳು ಎಂಬುದೇ ಮೇಘಘರ್ಜನೆಯು. ಇದೆಂಬುದೇ ಕಿಡಿಗಳು (ಅಪಾನನಾಮಕ ಉದಾನ ವಾಯುದೇವರು) (ವಾಸುದೇವ ಅನಿರುದ್ಧ)ಎಂದು ಈ ಪ್ರಕಾರ ವಾಯುದೇವರು ಶ್ರೀಪರಮಾತ್ಮ ಇದ್ದಾರೆಂದು ಭಾವಿಸುವುದು. ಅನುಸಂಧಾನದಿಂದ ಭಾವನಾ ಮಾಡುವುದು. ಈ ವಿಧ ಅಗ್ನಿಯೊಳು–ಏತಾ ದೃಶವಾದ ಮೇಘಾಗ್ನಿಯಲ್ಲಿ ಅಬ್ಧಿಜಾತನ "ಅಬ್ಧಿ" ಎಂದರೆ ಸಮುದ್ರ ಎಂತ ಅರ್ಥವಾಗುತ್ತದೆ. ಪ್ರಕೃತ ಅಬ್ಧಿ ಶಬ್ದ ಸಮುದ್ರಕ್ಕೆ ಪರಮಾಡಿದರೆ ಅರ್ಥ ಸಮನ್ವಯವಾಗಲಾರದು. ಅಬ್ಧಿ ಶಬ್ದಕ್ಕೆ ಲಕ್ಷಣಾ ಕಲ್ಪನಾಮಾಡಿ,ಆ ಲಕ್ಷಣಕ್ಕೆ ಸಾದೃಶವನ್ನು ತೆಗೆದುಕೊಂಡು ಅರ್ಥ ಹೇಳಿದರೆ ಅರ್ಥವ್ಯತ್ಯಾಸವಾಗಲಾರದು ಆದ್ದರಿಂದ ಅಬ್ಧಿ ಎಂದರೆ ಅಪ್ಪಿಗೆ ದೊಡ್ಡದಾಗಿ ಆಶ್ರಯವಾಗಿರುವ ದಾವದೋ ಅದು ಅಬ್ಧಿ ಎಂತ ಲಕ್ಷಣ. ಈ ಲಕ್ಷಣಾದಿಂದ ವರ್ಷ ಸುರಿಸತಕ್ಕ ಉದರಕ್ಕೆ ಆಶ್ರಯವಾದದ್ದು. ಮೇಘವಾದ್ದರಿಂದ ಅಬ್ಧಿಶಬ್ದವನ್ನ ಮೇಘ ವಾಚಕಮಾಡಿಕೊಳ್ಳಬೇಕು. (ಪಾಠಾಂತರ ಅಭ್ರಜಾತ ಎಂತಲೂ ಅದೆ. ಅಭ್ರ ಮೇಘದಿಂದ ಜ-ವರ್ಷರೂಪದಿಂದ ಉತ್ಪನ್ನವಾಗತಕ್ಕದ್ದು ಉದಕ-ಎಂತ ತಾತ್ಪರ್ಯ). ಅದಕಾರಣ ನಕ್ಷತ್ರಮಂಡಲದಿಂದ ಪತನವಾಗಿ ಮೇಘಮಂಡಲ ದಲ್ಲಿ ಜನಿಸಿದ ಜೀವನ್ನ, ಹೋಮಿಸುವವರು ಮೇಘಗತ ಜೀವನ್ನ. ಅಲ್ಲಿನ ಆಯಸ್ಸನ್ನ ಮೇಘಾಗ್ನಿಯಲ್ಲಿ ಹೋಮಿಸುವರಾಗತ್ತಾರೆ. ಅನುದಿನ ಕೋವಿದರು ಪ್ರತಿದಿನದಲ್ಲೂ ಜ್ಞಾನಿಗಳಾದವರು, ಪರಮ ಭಕುತಿಯಲಿ ಅತ್ಯಂತ ಭಕ್ತಿ ಯಿಂದ ಮಾತುಗಳ ಯಾವತ್ತು ಮಂತ್ರತ್ವೇನ ಅನುಸಂಧಾನ ಮಾಡುತ್ತಾರೆ. ಅದರಂತೆ ಗತವಾದದ್ದರನ್ನ ಅಸ್ಮದಾದಿಗಳು ವರ್ತಮಾನದಲ್ಲಿ ಅರ್ಪಿಸಬೇಕೆಂತ ತಾತ್ಪರ್ಯ. ॥೩॥

(೨) **"ಭಾವಪ್ರಕಾಶಿಕೆ"—ವ್ಯಾಖ್ಯಾನ :-**

ಮೇಘಾಗ್ನಿಯಲ್ಲಿ ಹೋಮಕ್ರಮವನ್ನೂ ಮತ್ತು ಅಲ್ಲಿನ ಭಗವದ್ರೂಪಗಳು ಆರನ್ನು ಹೇಳುತ್ತಾರೆ :-

**ಛಾಂದೋಗ್ಯೋಪನಿಷದ್ವಾಕ್ಯ :-**

**"ಪರ್ಜನ್ಯೋವಾವ ಗೌತಮಾಗ್ನಿಸ್ತಸ್ಯ ವಾಯುರೇವ**
**ಸಮಿಥ ಭ್ರಂಧೂಮೋ ವಿದ್ಯುದರ್ಚಿರಶನಿರಂಗಾರಾ**
**ಹ್ರಾದುನಯೋ ವಿಸ್ಫುಲಿಂಗಾಃ ॥**
**ತಸ್ಮಿನ್ನೇ ತಸ್ಮಿನ್ನಾಗ್ನೌ ದೇವಾಸ್ಸೋವಾಂ ರಾಜಾನಂ**
**ಜುಹ್ವತಿ ತಸ್ಯಾ ಆಹುತೇರ್ವರ್ಷ ಸಂಭವತಿ ॥**

ಇದರರ್ಥ :-

"ಎಲೈ ಗೌತಮ! **"ವಾವೇತ್ಯಧಾರಣೆ"**-ಎಂಬ ನ್ಯಾಯದಿಂದ "ಪರ್ಜನ್ಯ ಏವ" ಅಂದರೆ ಮೇಘಚಕ್ರವೇ ಅಗ್ನಿ ಎಂದರ್ಥ. **"ಪರ್ಜನ್ಯಃ ಪರಮಸ್ಯ ಜನ್ಯ ಮಸ್ತೀತಿ ಪರ್ಜನ್ಯಃ"**- ಜನನವಾಗುವ ಪದಾರ್ಥಕ್ಕೆ ಜನ್ಯವೆಂದು ಹೆಸರು. ಪರಮನ ಸೇವಾರ್ಥ ಹುಟ್ಟುವ ಪದಾರ್ಥಗಳ್ಳುಳವನಿಗೆ "ಪರ್ಜನ್ಯ" ನೆಂದು ಹೆಸರು. (ಪರಮಾತ್ಮವಾಚಕ) ಈ ಪರ್ಜನ್ಯಗತರೂಪವು ವಾಸುದೇವನು. ಇಂತಹ ವಾಸುದೇವನು ಅಗ್ನಿಸ್ಥಾನೀಯನು. ಅಗ್ನಿ ಮೊದಲಾದ ಶಬ್ದಗಳಿಗೆ ಅರ್ಥವನ್ನು ಮೇಲಿನ ಪದ್ಯದಲ್ಲಿ ಬರೆದಿರುತ್ತೆ. ಇಂತಹ ಪರ್ಜನ್ಯಗತ ವಾಸುದೇವಾಗ್ನಿಗೆ **"ವಾಯುದೇವ ಸಮಿತ್"**-ವಾಯುವೇ ಕಾಷ್ಠವು. ಜ್ಞಾನರೂಪಿಯಾದುದರಿಂದಲೂ, "ವಾಯು" ಎಂದು ಹೆಸರು. ವಾಯುಗತ ಭಗವದ್ರೂಪವು ವಾಸುದೇವ ನಾರಾಯಣ ಸ್ವರೂಪವು. **"ಅಭ್ರಂ ಧೂಮಃ"** ಮೇಘಪಂಕ್ತಿಗಳೇ ಧೂಮವು. **"ಅಪಾಂಭರಣಾದ ಭ್ರನಾಮಾs ಭ್ರಗತೋ ವಾಸುದೇವ ವಾಸುದೇವಾತ್ಮಾ ಧೂಮಃ"** ಉದಕಗಳನ್ನು ತುಂಬಿಕೊಂಡು ರಕ್ಷಣಮಾಡುವುದರಿಂದ "ಅಭ್ರ" ನೆಂದು ಮೇಘಪಂಕ್ತಿಗತ ಪರಮಾತ್ಮನಿಗೆ ಹೆಸರು. ಅಭ್ರಗತ ಭಗವದ್ರೂಪವು ವಾಸುದೇವ

ವಾಸುದೇವರೂಪವು. ಇದೇ ಹೊಗೆಯು. ಪೂರ್ವೋಕ್ತ ಪ್ರಕಾರ ಧೂಮಶಬ್ದ ವಾಚ್ಯನಾದ ಪರಮಾತ್ಮನೆಂದರ್ಥ. **"ವಿದ್ಯುದರ್ಚಿಃ ವಿದ್ಯೋತನಾದ್ವಿದ್ಯುನ್ನಾಮಾ ವಿದ್ಯುದ್ಗತಃ ವಾಸುದೇವ ಸಂಕರ್ಷಣನಾಮಾsರ್ಚಿಃ"**– ವಿಶೇಷವಾದ ಕಾಂತಿಯುಳ್ಳವನಾದ್ದರಿಂದ ವಿದ್ಯುತ್ (ಮಿಂಚು) ಎಂದು ಪರಮಾತ್ಮನಿಗೆ ಹೆಸರು. ವಿದ್ಯುದ್ಗತ ಭಗವದ್ರೂಪವಾದ ವಾಸುದೇವ ಸಂಕರ್ಷಣ ಸ್ವರೂಪವೇ "ಅರ್ಚಿ" ಅಂದರೆ ಜ್ವಾಲೆಯು. **"ಅಶನಿರಂಗಾಃ"**:-ಸಿಡಿಲೇ ಕೆಂಡವು. **"ಅಶನಿಃಅಶನಾದಶನಿನಾಮೋsಶಿನಗತೋ ವಾಸುದೇವ ಪ್ರದ್ಯುಮ್ನಾತ್ಮಾ ಅಂಗಾರಾಃ"**–ಅನ್ನಭೂತನಾದುದರಿಂದ ಅಶನಿ ನಾಮಕನು. ಅಶನಿಗತ ಭಗವದ್ರೂಪವಾದ ವಾಸುದೇವ ಪ್ರದ್ಯುಮ್ನನೇ ಕೆಂಡಗಳು. **"ಹ್ರಾದುನಯೋ ವಿಸ್ಫುಲಿಂಗಾಃ"**–ಮೇಘಗರ್ಜನನೇ ಕಿಡಿಗಳು. **"ನಿರ್ಹ್ರಾದನಾತ್ ಹ್ರಾದುನಿನಾಮಾ ಹ್ರಾದುನಿ ಶಬ್ದಿತಮೇಘನಾದಗತೋ ವಾಸುದೇವಾನಿರುದ್ಧಾತ್ಮಾ ವಿಸ್ಫುಲಿಂಗಾಃ"**– ಭಯಂಕರವಾದ ಶಬ್ದಮಾಡುವುದರಿಂದ ಮೇಘಧ್ವನಿಗೆ **"ಹ್ರಾದುನಿ"** ಎಂದು ಹೆಸರು. ತದ್ಗತ ವಾಸುದೇವಾನಿರುದ್ಧ ರೂಪವೇ ಕಿಡಿಗಳು, ಹೀಗೆ ವಾಯು ಮೊದಲಾದವರಲ್ಲಿ ನಾರಾಯಣಾದಿ ಐದು ರೂಪಗಳಿಂದ ಇರುವ ಪರ್ಜನ್ಯಾಗ್ನಿಗತ ವಾಸುದೇವರಲ್ಲಿ ಪೂರ್ವಪದ್ಯದಲ್ಲಿ ಹೇಳಿದ ಆಕಾಶಗತ ನಾರಾಯಣನಲ್ಲಿ ಹೋಮಮಾಡಿ ಸೋಮರಾಜನನ್ನು ಹೊಂದಿದ ಸೋಮ (ಚಂದ್ರ) ನೆಂಬ ಹೆಸರುಳ್ಳ ಜೀವನನ್ನು ದೇವತೆಗಳು ಆಹುತಿಕೊಡುವರು. ಆ ಆಹುತಿಯ ದೆಶೆಯಿಂದ ಮೇಘ ಚಕ್ರಸ್ಥಾನದಿಂದ ಮಳೆ ಬಿಂದುಗಳಲ್ಲಿ ಸೇರಿಸುವರು ಎಂದು ಉಪನಿಷದ್ವಾಕ್ಯದ ಅರ್ಥ. ಇದೇ ಅರ್ಥವನ್ನೇ ದಾಸರಾಯರು ಹೇಳಿರುವುದರಿಂದ ಪದ್ಯದ ತಾತ್ಪರ್ಯವನ್ನು ಪ್ರತ್ಯೇಕವಾಗಿ ಬರೆಯುಲಿಲ್ಲ. ಆದರೆ ಉಪನಿಷತ್ತಿನಲ್ಲಿ ಹೇಳಿದ ಪಂಚಮಹಾಯಜ್ಞ ಪ್ರಕರಣಕ್ಕೂ ದಾಸರಾಯರು ಹೇಳಿದ ಸಂದರ್ಭಗಳಿಗೂ ಪ್ರಕರಣ ಭೇದದಿಂದ ಭಿನ್ನಾಭಿಪ್ರಾಯವು ಬರುವುದು. ಉಪನಿಷತ್ತಿನಲ್ಲಿ ಪ್ರವಹನೆಂಬ ರಾಜನು ಗೌತಮರನ್ನು ಕುರಿತು ಕೇಳಿದುದು. ಜೀವನು ಭೂಮಿಯಲ್ಲಿ ಯೋಗ್ಯನಾಗಿ, ಭಗವದ್ಭಕ್ತನಾಗಿ ಹುಟ್ಟುವ ಪ್ರಕಾರ ಹೇಗೆಂಬ ಪ್ರವಹನೆಂಬ ರಾಜನ ಪ್ರಶ್ನೆಗೆ ಗೌತಮರು ಉತ್ತರವನ್ನು ಹೇಳಿರುವರು. ಶ್ರದ್ಧೆಯಿಂದ ಯಾಗಾದಿಗಳನ್ನು ಮಾಡುವ "ಜೀವನಿಗೆ ಶ್ರದ್ಧಾ" ಎಂದು ಹೆಸರು. ಅಂತಹ

ಶ್ರದ್ಧಾನಾಮಕ ಜೀವನನ್ನು ಆಕಾಶಾಗ್ನಿಯಲ್ಲಿ ದೇವತೆಗಳು ಹೋಮ ಮಾಡು ವರು. ಆ ಜೀವನು ಚಂದ್ರನನ್ನು ಹೊಂದುವನು. ಆ ಚಂದ್ರಗತ ಜೀವನನ್ನು ಮೇಘಾಗ್ನಿಯಲ್ಲಿ ಹೋಮಮಾಡುವರು. ಆ ಜೀವನು ವೃಷ್ಟಿಗತನಾಗುವನು. ಆ ವೃಷ್ಟಿಗತ ಜೀವನನ್ನು ಪುರುಷಾಗ್ನಿಯಲ್ಲಿ ಹೋಮಿಸುವರು. ಅವನು ರೇತಸ್ಸಾಗುವನು. ಆ ರೇತೋರೂಪ ಜೀವನನ್ನು ಸ್ತ್ರೀ ನಾಮಾಗ್ನಿಯಲ್ಲಿ ಹೋಮಮಾಡುವರು. ಅವನು ಭೂಮಿಯಲ್ಲಿ ಹುಟ್ಟುವನು. ಈ ಪಂಚಾ ಹುತಿ ವಿದ್ಯೆಯನ್ನು ಯಾರು ತಿಳಿಯುತ್ತಾರೋ,ಅವರು ಬ್ರಹ್ಮನನ್ನು ಹೊಂದು ವರೆಂದು ಹೇಳಿರುವರು.

ಇಲ್ಲಿ ದಾಸರಾಯರು ಪಂಚಮಹಾಯಜ್ಞ ಪ್ರಕರಣವಾಗಿ ಹೇಳಿದುದರಿಂದ ಹೀಗೆ ಆಕಾಶಾದಿ ಅಗ್ನಿಗಳಲ್ಲಿ ಮೂವತ್ತು ಭಗವದ್ರೂಪಗಳನ್ನು ಆಯಾ ಸ್ಥಾನಗತ ಭಗವದ್ರೂಪಗಳನ್ನೂ ಚಿಂತಿಸುವುದೇ ಮುಕ್ತಿಸಾಧನವೆಂದು ಹೇಳಿ ರುವರು. ಈ ಪ್ರಕರಣ ಭೇದದಿಂದ ಕೊನೆಗೆ ಫಲಿತಾಂಶದಲ್ಲಿ ಉಪನಿಷದ್ವಾ ಕ್ಯಕ್ಕೂ, ದಾಸರಾಯರ ವಾಕ್ಯಕ್ಕೂ ವ್ಯತ್ಯಾಸ ಕಾಣುವುದೆಂದು ತಾತ್ಪರ್ಯ. ಪ್ರಕೃತ ಈ ಪದ್ಯದಲ್ಲಿ ದಾಸರಾಯರು "ಅಬ್ಧಿಜಾತನ ಹೋಮಿಸುವರು" ಎಂಬ ಪದದಿಂದ ಚಂದ್ರನೇ ಹೋಮ ದ್ರವ್ಯವೆಂದು ವಾಯ್ವಾದಿ ಕಾಷ್ಠಾದಿಗಳಿಂದ ಕೂಡಿದ ಪರ್ಜನ್ಯಾಗ್ನಿಯಲ್ಲಿ ಚಂದ್ರನನ್ನೇ ಆಹುತಿ ಕೊಡುವರೆಂದು ಹೇಳಿರು ವರು. ಆ ಘಟ್ಟವು ಜೀವನ ಉತ್ಪತ್ತಿ ಘಟ್ಟವು. ಆದುದರಿಂದ ಪರಸ್ಪರ ವಿರೋಧವಿಲ್ಲವೆಂದು ತಿಳಿಯಬೇಕು. ॥೩॥

(೩) "ಭಾವದರ್ಪಣಟೀಕಾ"-ವ್ಯಾಖ್ಯಾನ :-

ಈಗ ದ್ವಿತೀಯಾಗ್ನಿಯ ಕ್ರಮ ಹೇಳುತ್ತದೆ:-

**ಪರ್ಜನ್ಯೋ ವಾವ ಗೌತಮಾಗ್ನಿಸ್ತಸ್ಯ ವಾಯುರೇವ**
**ಸಮಿದಭ್ರಂ ಧೂಮೋ ವಿದ್ಯುದರ್ಚಿ ರಶನೀಂಗಾರ ಹ್ರಾದುನಯೋ॥**
**ವಿಸ್ಫುಲಿಂಗಾಸ್ತಸ್ಮಿನ್ನೇ ತಸ್ಮಿನ್ನಗ್ನೌ ದೇವಾಃ**
**ಸೋಮೋರಾಜಾ ಜುಹ್ವತಿ ತಸ್ಯಾಹುತೇರ್ವರ್ಷಂ ಸಂಭವತಿ॥**

ಎಂಬಂಥ ಛಾಂದೋಗ್ಯೋಪನಿಷದ್ರೀತ್ಯಾ ಇಲ್ಲಿ ಹೇಳುತ್ತಾರೆ–"ಪಾವಕೇತಿ"॥ ಪರ್ಜನ್ಯವೇ ಅಗ್ನಿ. "ಕೃಶಾನುಃ ಪಾವಕೋಽನಲ" ಇತ್ಯಮರಃ॥ ಪ್ರಾವಹೀಪತಿ–ಪ್ರವಹ ಮಾರುತನೇ ಸಮಿತ್ತು. ಮೇಘಸಮೂಹವೇ ಧೂಮ. ಕ್ಷಣಪ್ರಭಾ-ಎಂದರೆ, ಮಿಂಚು, ಇದೇವೇ ಅರ್ಚಿ. ಮೇಘ ಗರ್ಜನೆಯೇ ಕಿಡಿಯು. ಸಿಡಿಲೆಂಬೋದೇ ಅಂಗಾರ, ಎಂದರೆ, ಕೆಂಡ. ಅಬ್ಧಿಜಾತ-ಚಂದ್ರ ಈತನನ್ನೇ ಹೋಮಿಸುತ್ತಾರೆಂದು ಪದ್ಯಾರ್ಥ ॥೩॥

(೪) ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ):—

ಪಾವಕೇತಿ ॥ ಪರ್ಜನ್ಯೋವಾವ ಗೌತಮಾಗ್ನಿಃ ॥ ತಸ್ಯ ವಾಯುರೇವ ಸಮಿತ್ ॥ ಅಭ್ರಂ ಧೂಮಃ ॥ ವಿದ್ಯುದರ್ಚಿಃ ॥ ಅಶನಿರಂಗಾರಾ ಹ್ರಾದುನಯೋ ವಿಸ್ಫುಲಿಂಗಾಃ ॥ ತಸ್ಮಿನ್ ಏತಸ್ಮಿನ್ ಅಗ್ನೌ ಸೋಮಂ ॥ ರಾಜಾನಂ ಜುಹ್ವತಿ ॥ ತಸ್ಯ ಆಹುತೇಃ ವರ್ಷಃ ಸಂಭವತಿ ॥ [(ಛಾಂದೋಗ್ಯ ಖಂಡಾರ್ಥ ೫, ೭ (೨–೫)] ಶ್ರೀಭಗವತ್ಪಾದಾಶ್ಚ "ವಾಯುಜ್ಞಾನಾಯ ರೂಪತಃ ॥ ಅಭ್ರಮುದ್ಭರಣಾತ್ ವಿಷ್ಣುಃ ವಿದ್ಯುತ್ ವಿದ್ಯೋತನಾದಪಿ॥ ಅಶನಾತ್ ಅಶನಿಶ್ಚೈವ ನಿಹ್ರಾದಾತ್ ಹ್ರಾದುನಿಃ ತಥಾ॥ ಪ್ರಾವಹೀಪತಿಃ ಪ್ರವಹ ವಾಯುಃ॥ ಕ್ಷಣಪ್ರಭಾ ವಿದ್ಯುತ್ ॥ ಅಬ್ಧಿಜಾತಃ ಸೋಮಃ"॥ ॥೩॥

**ಕನ್ನಡಾರ್ಥ :**

ವಾಸುದೇವನು ಪರ್ಜನ್ಯನಾಮಕನಾಗಿ ಮೇಘಸಮೂಹದಲ್ಲಿರುವನು. ಎಲ್ಲವೂ ಆ ವಾಸುದೇವನ ಸೇವಾರ್ಥವಾಗಿ ಸೃಷ್ಟಿಯಾಗಿರುವುದರಿಂದ, ಪರಮಾತ್ಮನಿಗೆ "ಪರ್ಜನ್ಯ" ನೆಂದು ಹೆಸರು. ಅಲ್ಲದೆ ಯಾವಾತನ ದೆಶೆಯಿಂದ ಉತ್ತಮರಾದ ಬ್ರಹ್ಮಾದಿಗಳು ಸೃಷ್ಟರಾಗುವರೋ, ಆತನೇ "ಪರ್ಜನ್ಯ" ನಾಮಕನು.

ಹೇ ಗೌತಮನೇ, ಪರ್ಜನ್ಯಗತ ಪರ್ಜನ್ಯಶಬ್ದವಾಚ್ಯನಾದ ವಾಸುದೇವನೇ ಅಗ್ನಿಯು. ಅಂದರೆ, ಹೋಮಾಧಾರನು. ಈ ಪರ್ಜನ್ಯಾಗ್ನಿಗೆ ಸಮಿತ್ತು (ಕಾಷ್ಠ) ವಾಯುವು, ಜ್ಞಾನರೂಪನಾದ್ದರಿಂದಲೂ ಮತ್ತು ಲೋಕ ಚೇಷ್ಟಕನಾದ್ದರಿಂದಲೂ ವಾಸುದೇವ ನಾರಾಯಣನು "ವಾಯು"

ಶಬ್ದವಾಚ್ಯನು. ಆತನೇ "ಸಮಿತ್" ನಾಮಕನು. ನೀರನ್ನು ಪೂರೈಸಿ ತುಂಬು ವುದರಿಂದಲೂ (ಧರಿಸಿರುವುದರಿಂದಲೂ) "ಅಭ್ರ" ಶಬ್ದವಾಚ್ಯನಾದ ವಾಸು ದೇವ ವಾಸುದೇವನು "ಧೂಮ"ನೆನಿಸುವನು. ಅತಿಶಯವಾಗಿ ಪ್ರಕಾಶಿಸುವು ದರಿಂದ "ವಿದ್ಯುತ್" ನಾಮಕನಾದ ವಿದ್ಯುತ್ತಿನಲ್ಲಿ (ಮಿಂಚು) ವಿದ್ಯಮಾನ ನಾಗಿರುವ ವಾಸುದೇವ ಸಂಕರ್ಷಣನು "ಅರ್ಚಿ"(ಜ್ವಾಲೆ) ಎನಿಸುತ್ತಾನೆ. ಸಮಸ್ತವನ್ನು ನುಂಗುವುದರಿಂದ (ಅಶನಾತ್) "ಅಶನಿ" ನಾಮಕನಾದ ವಾಸುದೇವ ಪ್ರದ್ಯುಮ್ನನು ಸಿಡಿಲಿನಲ್ಲಿರುವನು. ಅತಿಶಯ ಶಬ್ದಮಾಡುವು ದರಿಂದ, "ಹ್ರಾದುನಿ" ಶಬ್ದವಾಚ್ಯನಾದ ವಾಸುದೇವ ಅನಿರುದ್ಧಾಖ್ಯನು ಮೇಘನಾದದಲ್ಲಿದ್ದು ಕಿಡಿಗಳೆನಿಸುವನು. ಹೀಗೆ ನಾರಾಯಣಾದಿ ಆರು ರೂಪಗಳಿಂದ ವಾಯು ಮುಂತಾದವರಲ್ಲಿರುವ ಪರ್ಜನ್ಯಗತ ವಾಸುದೇವಾಖ್ಯ ಪರಮಾತ್ಮನಲ್ಲಿ ಚಂದ್ರನನ್ನು ಕುರಿತು ಬಂದಿರುವ "ಶ್ರದ್ಧಾ" ಎಂಬ ಹೆಸರಿನ ಜೀವನನ್ನು ಆಹುತಿಯಾಗಿ ಹೋಮಿಸುವರು. ಅದರಿಂದ ದೇವತೆಗಳು ಜೀವ ನನ್ನು ವೃಷ್ಟಿಯಲ್ಲಿ (ಮಳೆಯ ಧಾರಾ)ಸೇರಿಸುತ್ತಾರೆ.

ಶ್ರೀಮನ್ಮಧ್ವಮುನಿಗಳು ಛಾಂದೋಗ್ಯ ಭಾಷ್ಯದಲ್ಲಿ ನಿರೂಪಿಸಿದಂತೆ, ಉಪನಿಷತ್ತಿನ ಅಂತರಾರ್ಥವನ್ನು ಸಂಗ್ರಹಿಸಿ,ದಾಸರಾಯರು ಈ ಪದ್ಯದಲ್ಲಿಟ್ಟಿ ರುತ್ತಾರೆ. ಪ್ರಾವಹೀಪತಿ=ವಾಯುವು (ಪ್ರವಹ). ಕ್ಷಣಪ್ರಭಾ=ವಿದ್ಯುತ್ (ಮಿಂಚು). ಅಬ್ಧಿಜಾತ=ಸೋಮ (ಚಂದ್ರ). ಈ ವಿಷಯ ಬೃಹದಾರಣ್ಯ ದಲ್ಲಿ ಉಕ್ತವಾಗಿದೆ.॥ ॥೩॥

## (ಆ) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ

ಪಾವಕನು ಪರ್ಜನ್ಯ ಎಂದರೆ, ಮೇಘಾಭಿಮಾನಿ ದೇವತೆಗಳಲ್ಲಿ ಪರ್ಜನ್ಯ ನಾಮಕ ದೇವರೇ ಅಗ್ನಿ ಎಂದು ತಿಳಿದು, ಪ್ರವಹ ವಾಯುವೇ ಸಮಿತ್ತೆಂದು ತಿಳಿದು ಎಂದರೆ, ಜ್ಞಾನಾತ್ಮಕಾಯ ಸ್ವರೂಪನಾದ್ದರಿಂದ ವಾಯು ಶಬ್ದ ವಾಚ್ಯನಾಗಿ ಪ್ರವಹ ವಾಯುವಿನಲ್ಲಿದ್ದು, ದೇವರು ಪರ್ಜನ್ಯಾಗ್ನಿಗೆ ಸಮಿತ್ತೆಂದು ಕರೆಸುವನೆಂದು ಚಿಂತಿಸಿ, ಮೇಘಾವಳಿಗಳು ಧೂಮಗಳು ಎಂದರೆ, ಅಪ್ಪು ಎಂಬ ಉದಕಕ್ಕೆ ಆಧಾರನಾದ್ದರಿಂದ ಅಭ್ರಶಬ್ದವಾಚ್ಯದೇವರು ಮೇಘಗಳಲ್ಲಿದ್ದು,

ಪರ್ಜನ್ಯನೆಂಬ ಸ್ವಾಗ್ನಿಗೆ ಧೂಮವೆಂಬ ಹೊಗೆ ಎಂದು ಭಾವಿಸಿ, ಕ್ಷಣಪ್ರಭ ಎಂಬ ಮಿಂಚೇ ಅರ್ಚಿ ಎಂಬ ಜ್ವಾಲೆ, ಎಂದರೆ ವಿಶೇಷ ಪ್ರಕಾಶನಾದ್ದರಿಂದ ವಿದ್ಯುತ್ ಎಂಬ ಹೆಸರುಳ್ಳ ದೇವರೇ ಮಿಂಚಿನಲ್ಲಿದ್ದು ಪರ್ಜನ್ಯಾಗ್ನಿಗೆ ಜ್ವಾಲೆಯಾಗಿರುವನೆಂದು ತಿಳಿದು ಗರ್ಜನವೆಂಬ ಗುಡುಗೇ ಕಿಡಿಯು ಎಂದರೆ,ಅತಿಶಬ್ದ ಪ್ರದನಾದ್ದರಿಂದ ಹ್ರಾದಶಬ್ದವಾಚ್ಯನಾಗಿ ಶ್ರೀಹರಿ ಗುಡುಗಿನಲ್ಲಿದ್ದು, ಪರ್ಜನ್ಯಾಗ್ನಿಗೆ ಕಿಡಿ ಎಂದು ಕರೆಯಿಸುವನೆಂದು ಭಾವಿಸಿ, ಸಿಡಿಲೇ ಅಂಗಾರವೆಂಬ ಕೆಂಡ. ಎಂದರೆ ಸರ್ವಾಶನಕರ್ತನಾದ್ದರಿಂದ ದೇವರು ಅಶನಿ ಶಬ್ದವಾಚ್ಯನಾಗಿ ಅಶನಿ ಎಂಬ ಸಿಡಿಲಿನಲ್ಲಿದ್ದು ಪರ್ಜನ್ಯಾಗ್ನಿಗೆ ಕೆಂಡವೆಂದು ಭಾವಿಸಿ, ಕೋವಿದರೆಂಬ ಜ್ಞಾನಿಕುಶಲರಾದ ದೇವತೆಗಳು ಈ ವಿಧಾಗ್ನಿಯೊಳು, ಎಂದರೆ, ಮೇಲೆ ಹೇಳಿದ ಗುಣಗಳುಳ್ಳ ಪರ್ಜನ್ಯಾಗ್ನಿಯಲ್ಲಿ ಅಬ್ಧಿಜಾತನೆಂದು ಸಮುದ್ರೋತ್ಪನ್ನ ಚಂದ್ರನನ್ನು ಅನುದಿನ ಎಂದರೆ, ನಿರಂತರ ಭಕ್ತಿಯಿಂದ ಹೋಮಿಸುವರು. ಎಂದರೆ ಚಂದ್ರನು ಅಮಾವಾಸ್ಯೆಯಲ್ಲಿ ಸೂರ್ಯನ ಸಂಗಡ ಸೇರುವುದೇ ಹೋಮವೆಂದು ಭಾವಿಸುವರೆಂದರ್ಥ.

ಪ್ರಮಾಣಶ್ರುತಿ ಹೇಳುತ್ತಾರೆ.–

(೧) **"ಪರ್ಜನ್ಯೋವಾವ ಗೌತಮಾಗ್ನಿಸ್ತಸ್ಯವಾಯುರೇವ ಸಮಿದಭ್ರಂ ಧೂಮೋ**
**ವಿದ್ಯುದರ್ಚಿರಶನಿರಂಗಾರಾಹ್ರಾದನಯೋ ವಿಸ್ಫುಲಿಂಗಾಸ್ತಸ್ಮಿನ್ನೇ**
**ತಸ್ಮಿನ್ನಗ್ನೌ ದೇವಾಸ್ಸೋಮಂ ರಾಜಾನಂ ಜುಹ್ವತಿ ॥**
**ತಸ್ಯ ಆಹುತೇರ್ವರ್ಷಂ ಸಂಭವತಿ ॥॥೧॥**
**–ಛಾಂದೋಗ್ಯೋಪನಿಷತ್ತು ॥"**

(೨) **ಛಾಂದೋಗ್ಯ ಭಾಷ್ಯ:-**
**"ವಾಯುರ್ಜನಾಯು ರೂಪತಃ ।**
**ಅಭ್ರರಭ್ರಮಣಾ ದ್ವಿಷ್ಣುರ್ವಿದ್ಯು ದ್ವಿದ್ಯೋತನಾದಪಿ ।**
**ಅಶನಾದಶನಿಶ್ಚೈವ ಹ್ರಾದನಾ ದ್ಧ್ರಾದನಿಸ್ತಥಾ ॥೨॥**

–ಎಂಬ ಶೃತಿ ಮತ್ತು ಭಾಷ್ಯಾರ್ಥಗಳು ವಿವರಿಸಲ್ಪಟ್ಟವು. ॥೩॥

# ಸರ್ವವ್ಯಾಖ್ಯಾನಸಾರಸಂಗ್ರಹ

ಪಂಚಾಗ್ನಿಗಳಲ್ಲಿ ದ್ವಿತಿಯಾಗ್ನಿಯಾದ ಪರ್ಜನ್ಯಾಗ್ನಿ (ಮೇಘಾಗ್ನಿ) ಯ ವಿವರಗಳನ್ನು ತದಂತರ್ಗತ ಭಗವದ್ರೂಪಗಳ ವ್ಯಾಪಾರ ವಿಶೇಷಗಳನ್ನು ಪ್ರಸಕ್ತ ಪದ್ಯದಿಂದ ತಿಳಿಸುತ್ತಾರೆ ಜ್ಞಾನಿವರೇಣ್ಯದಾಸರಾಯರು.

(೧) ಮೇಘಾಭಿಮಾನಿ ದೇವತೆಗಳಿಗೆ "**ಪರ್ಜನ್ಯ**" ಎಂದು ಹೆಸರು. ಈ ದೇವತಾ ಸಮೂಹವು ಸುರಾಧಿಪತಿಯಾದ ಇಂದ್ರದೇವರ ನಿಯಂತ್ರಣದಲ್ಲಿದ್ದಾರೆ. ಆಕಾಶಪಥದಲ್ಲಿ ಚಲಿಸುವ ಮೇಘಸಮೂಹಗಳೇ (ಮೇಘಾವಳಿ) ದ್ವಿತಿಯಾಗ್ನಿಯಾದ "**ಪರ್ಜನ್ಯಾಗ್ನಿ**" ಎಂದೆನಿಸುವವು.

(೨) ಇದಕ್ಕೆ **ವಾಸುದೇವ** ರೂಪೀ ಪರಮಾತ್ಮನೇ ಮುಖ್ಯಾಭಿಮಾನಿಯು. ಜನನವಾಗುವ ಪದಾರ್ಥಕ್ಕೆ "ಜನ್ಯ"ವೆಂದು ಹೆಸರು. ಪರಮಾತ್ಮನ ಸೇವಾರ್ಥ ಉತ್ಪತ್ತಿಯಾಗುವ ವಸ್ತುಗಳುಳ್ಳವನಿಗೆ "ಪರ್ಜನ್ಯ"ನೆಂದು ಹೆಸರು. ಇಂತಹ ಪರ್ಜನ್ಯಶಬ್ದವಾಚ್ಯನಾದ ಪರ್ಜನ್ಯಗತ ಭಗವದ್ರೂಪವು ವಾಸುದೇವಾಖ್ಯ ಪರಮಾತ್ಮನೇ. ಇಂತಹ ವಾಸುದೇವನಾಮಕನೇ ಪರ್ಜನ್ಯಾಗ್ನಿಸ್ಥಾನೀಯನು.

**"ಪರ್ಜನ್ಯಃ ಪರಮಸ್ಯ ಜನ್ಯ ಮಸ್ತೀತಿ ಪರ್ಜನ್ಯಃ"**

-ಎಂದು ಶಬ್ದನಿರ್ವಚನ ಕ್ರಮ. ಆ ವಾಸುದೇವನಾಮಕನೇ ಹೋಮಾಧಾರನು. ಮೇಘಾಭಿಮಾನಿದೇವತೆಗಳ ಅಂತರ್ಯಾಮಿಯಾಗಿರುವುದರಿಂದ ವಾಸುದೇವಾಖ್ಯ ಪರಮಾತ್ಮನು **ಪರ್ಜನ್ಯ ಶಬ್ದವಾಚ್ಯನು.**

(೩) ಈ ಪರ್ಜನ್ಯಾಗ್ನಿಗೆ **ಅಪಾನ** ನಾಮಕ ವಾಯುದೇವರು ಅವಾಂತರಾಭಿಮಾನಿಗಳು. ಇಂತಹ **ಅಪಾನ**ನಾಮಕ ವಾಯ್ವಂತರ್ಗತ ಮೇಘಾಭಿಮಾನೀ ದೇವಾಂತರ್ಗತನಾಗಿ ಪರ್ಜನ್ಯಶಬ್ದವಾಚ್ಯನಾಗಿ ಶ್ರೀವಾಸುದೇವ ರೂಪೀ ಶ್ರೀಪರಮಾತ್ಮನು ಈ ಅಗ್ನಿಯಲ್ಲಿದ್ದು, ಮೇಘಗಳಿಂದ ಮಳೆಯನ್ನು ಸುರಿಸುವನು.

(೪) ಪೂರ್ವೋಕ್ತ ಮೇಘಗಳೆಂಬ ಪರ್ಜನ್ಯಾಗ್ನಿಗೆ ಕಾಷ್ಠರೂಪದಲ್ಲಿರುವುದು **ಪ್ರವಹ ವಾಯುವು.** ಭೂತ ಪಂಚಕಗಳಲ್ಲಿ ಒಂದಾದ ವಾಯುವಿನಲ್ಲಿ ಪ್ರವಹ ತತ್ತ್ವಾಭಿಮಾನಿಯಾಗಿದ್ದಾನೆ. ಈ ವಾಯುವಿನ ಚಲನೆದಿಂದಲೇ ಮೇಘಗಳ ಸಮೂಹವು ಆಕಾಶಪಥದಲ್ಲಿ ಸಂಚರಿಸುವುದು.

(೨) ಪರ್ಜನ್ಯಾಗ್ನಿಗೆ ಸಮಿತ್ತಿನ ರೂಪದಲ್ಲಿರುವ (ಕಾಷ್ಠ) ಈ ಯಜ್ಞೋಪಕರಣಕ್ಕೆ **ವಾಸುದೇವ ನಾರಾಯಣ** ರೂಪೀ ಶ್ರೀಪರಮಾತ್ಮನು ಮುಖ್ಯಾಭಿಮಾನಿಯು.

(೩) ಜ್ಞಾನರೂಪಿಯಾಗಿರುವುದರಿಂದ, ಪರಮಾತ್ಮನು **ವಾಯುಶಬ್ದವಾಚ್ಯನು.** ಲೋಕಚೇಷ್ಟಕನಾಗಿರುವುದರಿಂದಲೂ ವಾಯು ನಾಮಕನಾಗಿದ್ದಾನೆ.

**"ವಾಯುರೇವ ಸಮಿತ್"**-ಎಂಬ ಛಾಂದೋಗ್ಯೋಪನಿಷತ್ತಿನ ವಾಕ್ಯವೇ ಇದಕ್ಕೆ ಪ್ರಮಾಣ.

(೪) ಈ ಸಮಿತ್ತಿಗೆ **ಅಪಾನ-ಪ್ರಾಣ** ನಾಮಕ ವಾಯುದೇವರು ಅವಾಂತರಾಭಿಮಾನಿಗಳು.

(೫) ಇಂತು, ಪ್ರವಹವಾಯುವಿನ ಅಧಿಷ್ಠಾನದಲ್ಲಿ ಅಪಾನ-ಪ್ರಾಣ ನಾಮಕ ವಾಯ್ವಂತರ್ಗತನಾಗಿ ವಾಸುದೇವ ನಾರಾಯಣರೂಪೀ ಶ್ರೀ ಪರಮಾತ್ಮನು ಪರ್ಜನ್ಯಾಗ್ನಿಗೆ ಕಾಷ್ಠರೂಪದಲ್ಲಿ "ಸಮಿತ್ತೆ" ಂದು ಶಬ್ದವಾಚ್ಯದ್ದಾನೆ..

ಇನ್ನು ಮುಂದೆ ಪರ್ಜನ್ಯಾಗ್ನಿ ಮತ್ತು ಪ್ರವಹವಾಯ್ವಾಖ್ಯ ಸಮಿತ್ತು ಇವುಗಳ ಸಂಯೋಗದಿಂದ ಉತ್ಪತ್ತಿಯಾಗುವ ಧೂಮದ ವಿವರಗಳನ್ನು ತಿಳಿಸುತ್ತಾರೆ:-

(೧) ಆಕಾಶಪಥದಲ್ಲಿ ವಾಯುವಿನಿಂದ ಚಲಿಸಲ್ಪಡುವ ಮೇಘಗಳ ಸಮೂಹವೇ "ಧೂಮ" ವೆನಿಸುವುದು.

(೨) ಪರ್ಜನ್ಯಾಗ್ನಿ ಮತ್ತು ಪ್ರವಹ ವಾಯು ಎಂಬ ಕಾಷ್ಠಸಂಯೋಗದಿಂದ ಏಳುವ ಈ ಹೊಗೆಗೆ **ವಾಸುದೇವ ವಾಸುದೇವ** ರೂಪೀ ಪರಮಾತ್ಮನು ಮುಖ್ಯಾಭಿಮಾನಿಯಾಗಿದ್ದು ಧೂಮವಾಚ್ಯನಾಗಿದ್ದಾನೆ.

(೩) ನೀರನ್ನು ತುಂಬಿಕೊಂಡು ವರ್ಷರೂಪದಲ್ಲಿ ಉದಕವನ್ನು ಭೂಮಿಗೆ ಕೊಡುವ ಮೇಘಗಳಿಗೆ "ವಾರಿದ" ಅಥವಾ "ಅಭ್ರ" ಎಂದು ಹೆಸರು. ಇಂತು, ಅಭ್ರಶಬ್ದವಾಚ್ಯನಾದ ವಾಸುದೇವ ವಾಸುದೇವನು ಧೂಮನಾಮಕನಾಗಿದ್ದಾನೆ.

(೪) ಈ ಧೂಮಕ್ಕೆ **ಅಪಾನ ಅಪಾನ** ನಾಮಕ ವಾಯುದೇವರು ಅವಾಂತರಾಭಿಮಾನಿಗಳು.

(೫) ಇಂತು, ಮೇಘಪಂಕ್ತಿಗಳಲ್ಲಿ ಅಪಾನ ನಾಮಕ ವಾಯ್ವಂತರ್ಗನಾಗಿ ವಾಸುದೇವ ವಾಸುದೇವ ರೂಪೀ ಶ್ರೀಪರಮಾತ್ಮನು ವಿದ್ಯಮಾನನಾಗಿದ್ದು, ಧೂಮನಾಮಕನಾಗಿ ಅಭ್ರಶಬ್ದವಾಚ್ಯನೆಂದೆನಿಸಿ, ಮೇಘಗಳಿಂದ ಮಳೆಯನ್ನು ಸುರಿಸುವನು.

ನಂತರ ಅಗ್ನಿ ಮತ್ತು ಕಾಷ್ಠಗಳ ಸಂಯೋಗದಿಂದ ಏಳುವ ಉರಿ ಅಥವಾ ಜ್ವಾಲೆ(ಅರ್ಚಿಯ ವಿವರಗಳನ್ನು) ತಿಳಿಸುತ್ತಾರೆ:-

(೧) ಪರ್ಜನ್ಯಾಖ್ಯ ಅಗ್ನಿ ಮತ್ತು ಪ್ರವಹವಾಯುವೆಂಬ ಸಮಿತ್ತಿನ ಸಂಯೋಗದಿಂದ ಮೇಲೇಳುವ ಬೆಂಕಿಯ ಜ್ವಾಲೆಯೇ ಆಕಾಶದಲ್ಲಿ ಕ್ಷಣಕಾಲ ಗೋಚರವಾಗಿ ಮಾಯವಾಗುವ ಮಿಂಚು ಎಂಬುದು. ಇದಕ್ಕೆ "ಕ್ಷಣಪ್ರಭೆ" ಎಂದು ಹೆಸರು.

(೨) ಇಂತಹ ಮಿಂಚು ಎಂಬ ಆರ್ಚಿಯಲ್ಲಿ ವಿದ್ಯಮಾನನಾಗಿರುವ ಭಗವದ್ರೂಪವು **ವಾಸುದೇವ ಸಂಕರ್ಷಣನು.**

(೩) ವಿಶೇಷ ಕಾಂತಿಸಂಪನ್ನನಾಗಿ ತೇಜೋಮಯರೂಪವುಳ್ಳವನಾದ್ದರಿಂದ ಪರಮಾತ್ಮನಿಗೆ "ವಿದ್ಯುತ್" ಎಂದು ಹೆಸರು. ಇಂತಹ ವಿದ್ಯು

ದ್ಗತ (ಮಿಂಚಿನಲ್ಲಿ ವಿದ್ಯಮಾನನಾಗಿರುವ) ಭಗವದ್ರೂಪವೇ ವಾಸುದೇವ ಸಂಕರ್ಷಣ ರೂಪವು. ಅವನು ವಿದ್ಯುನ್ನಾಮಕನಾಗಿ "ಅರ್ಚಿ" ಶಬ್ದವಾಚ್ಯನಾಗಿನ್ನಾನೆ.

(೪) ಮಿಂಚೆಂಬ ಜ್ವಾಲೆಗೆ **ಅಪಾನ ವ್ಯಾನ** ನಾಮಕ ಶ್ರೀವಾಯು ದೇವರು ಅವಾಂತರಾಭಿಮಾನಿಗಳು.

(೫) ಇಂತು, ಪರ್ಜನ್ಯವೆಂಬ ಅಗ್ನಿ ಮತ್ತು ಪ್ರವಹ ವಾಯು ಎಂಬ ಕಾಷ್ಠಗಳ ಸಂಯೋಗದಿಂದ ಏಳುವ ಮಿಂಚು ಎಂಬ ಜ್ವಾಲೆಯಲ್ಲಿ ಅಪಾನ ವ್ಯಾನ ನಾಮಕ ವಾಯ್ವಂತರ್ಗತನಾಗಿ ವಿದ್ಯುನ್ನಾಮಕನಾದ ವಾಸುದೇವ ಸಂಕರ್ಷಣರೂಪೀ ಶ್ರೀ ಪರಮಾತ್ಮನು ಅರ್ಚಿಶಬ್ದವಾಚ್ಯನಾಗಿದ್ದಾನೆಂದು ಉಪಾಸನೆ ಮಾಡಬೇಕು.

**"ವಿದ್ಯುದರ್ಚಿಃ ವಿದ್ಯೋತನಾದ್ವಿದ್ಯುನ್ನಾಮಾ ವಿದ್ಯುದ್ಗತಃ ವಾಸುದೇವ ಸಂಕರ್ಷಣ ನಾಮಾಽರ್ಚಿಃ"** ॥
-ಎಂಬ **ಛಾಂದೋಗ್ಯದ** ವಾಕ್ಯವೇ ಪ್ರಮಾಣವು.

ಇನ್ನು ಮುಂದೆ ಜ್ವಾಲೆಯಿಂದ ಹೊರಡುವ ಕಿಡಿಗಳ ವಿವರಗಳನ್ನು ತಿಳಿಸುತ್ತಾರೆ.

(೧) ಮಳೆಗಾಲದಲ್ಲಿ ಬೆಳಕಿನ ರೂಪದಲ್ಲಿ ಮಿಂಚು ಕಾಣಿಸಿಕೊಳ್ಳುವುದು. ನಂತರ ಶಬ್ದರೂಪದಲ್ಲಿ ಗುಡುಗು ಕೇಳಿಬರುವುದು. ಗುಡುಗೆಂಬುದೇ ಮೇಘಗರ್ಜನೆಯು. ಈ ಗರ್ಜನೆಯೇ ಮಿಂಚೆಂಬ ಜ್ವಾಲೆಯಿಂದ ಹೊರಡುವ ಕಿಡಿಗಳು. ಈ ಮೇಘಗರ್ಜನೆಗೆ "**ಹ್ರಾದುನಿ**" ಎಂದು ಹೆಸರು.
**"ಹ್ರಾದುನಯೋ ವಿಸ್ಫುಲಿಂಗಾಃ"**-ಎಂಬ ಉಪನಿಷತ್ತಿನ ವಚನವೇ ಇದಕ್ಕೆ ಆಧಾರ.

(೨) ಗುಡುಗೆಂಬ ಮೇಘಗರ್ಜನೆಯಲ್ಲಿ ವಿದ್ಯಮಾನನಾಗಿರುವ ಭಗವದ್ರೂಪವು **ವಾಸುದೇವ ಪ್ರದ್ಯುಮ್ನ**.

(೩) ಮೇಘಗರ್ಜನವೆಂಬ ಕಿಡಿಗಳಿಗೆ ಅವಾಂತರಾಭಿಮಾನಿಯು **ಅಪಾನ ಉದಾನ**ನಾಮಕ ವಾಯುದೇವರು.

(೪) ಇಂತು, ಗುಡುಗೆಂಬ ಮೇಘಗರ್ಜನೆಯಲ್ಲಿ ಹ್ರಾದುನಿನಾಮಕನಾಗಿ ಅಪಾನ ಉದಾನನಾಮಕ ವಾಯುದೇವರಲ್ಲಿ ಶ್ರೀವಾಸುದೇವ ಪ್ರದ್ಯುಮ್ನ ರೂಪದಿಂದ ಶ್ರೀಪರಮಾತ್ಮನು ವಿಸ್ಫುಲಿಂಗ ಶಬ್ದವಾಚ್ಯನಾಗಿ ಶಬ್ದವನ್ನು ಅಭಿವ್ಯಕ್ತಮಾಡುವನೆಂದು ಪರ್ಜನ್ಯಾಗ್ನಿಯಲ್ಲಿ ಚಿಂತಿಸಬೇಕು.

ಕೊನೆಯದಾಗಿ ಕೆಂಡ (ಅಂಗಾರ) ದ ವಿವರಗಳನ್ನು ತಿಳಿಸುತ್ತಾರೆ:–

(೧) ಸಿಡಿಲು ಎಂಬುದೇ ಕೆಂಡವು.

(೨) ಸಿಡಿಲಿಗೆ "ಅಶನಿ" ಎಂದು ಹೆಸರು. ತನ್ನಿಂದ ಸೃಷ್ಟವಾದ ಸಮಸ್ತ ಜಗತ್ತನ್ನು ನುಂಗುವುದರಿಂದ (ಅಶನಾತ್). ಪರಮಾತ್ಮನಿಗೆ "ಅಶನಿ" ಎಂದು ಹೆಸರು. ಈ ಅಂಗಕ್ಕೆ **ವಾಸುದೇವ ಅನಿರುದ್ಧ** ನಾಮಕ ಪರಮಾತ್ಮನು ಮುಖ್ಯಾಭಿಮಾನಿಯು. ಇಂತು, ವಾಸುದೇವ ಅನಿರುದ್ಧ ರೂಪೀ ಪರಮಾತ್ಮನು ಅಶನಿ ಶಬ್ದವಾಚ್ಯನಾಗಿ ಸಿಡಿಲಿನಲ್ಲಿರುವನು. ಈ ರೂಪವೇ ಸರ್ವಾಶನಕರ್ತರೂಪವು.

(೩) ಸಿಡಿಲೆಂಬ ಅಂಗಾರಕ್ಕೆ **ಅಪಾನ ಸಮಾನ** ನಾಮಕ ವಾಯುದೇವರು ಅವಾಂತರಾಭಿಮಾನಿಗಳು.

## ಪರ್ಜನ್ಯಾಗ್ನಿಯ ವಿವರಗಳ ಪಟ್ಟಿ

| ಕ್ರಮ ಸಂಖ್ಯೆ | ಅಂಗಗಳು | ಅಧಿಷ್ಠಾನ | ಭಗವದ್ರೂಪ | ವಾಯುರೂಪ | ವಿವರಗಳು |
|---|---|---|---|---|---|
| ೧ | ಅಗ್ನಿ | ಪರ್ಜನ್ಯಾಗ್ನಿ | ವಾಸುದೇವ | ಅಪಾನ | ಮೇಘಾಭಿಮಾನಿ ದೇವತಾಂರ್ಗತರೂಪ |
| ೨ | ಸಮಿತ್ತು | ಪ್ರವಹ ವಾಯು | ವಾಸುದೇವ-ನಾರಾಯಣ | ಅಪಾನ-ಪ್ರಾಣ | ಜ್ಞಾನಾನಂದ ಸ್ವರೂಪನು. ಲೋಕಚೇಷ್ಟಕನು. ವಾಯುಶಬ್ದ ವಾಚ್ಯನು. |
| ೩ | ಧೂಮ | ಮೇಘಪಂಕ್ತಿಗಳು | ವಾಸುದೇವ-ವಾಸುದೇವ | ಅಪಾನ-ಅಪಾನ | ಅಭ್ರವಾಚ್ಯ ಪರಮಾತ್ಮನ ರೂಪಚಿಂತನೆ |

| | | | | | |
|---|---|---|---|---|---|
| ೪ | ಅರ್ಚಿ | ಮಿಂಚು | ವಾಸುದೇವ-ಸಂಕರ್ಷಣ | ಅಪಾನ-ವ್ಯಾನ | ವಿದ್ಯುನ್ನಾಮಕನು, ಅರ್ಚಿ ಶಬ್ದ ವಾಚ್ಯನು |
| ೫ | ಕಿಡಿಗಳು | ಗುಡುಗು | ವಾಸುದೇವ-ಪ್ರದ್ಯುಮ್ನ | ಅಪಾನ-ಉದಾನ | ಹ್ರಾದುನಿ ಶಬ್ದವಾಚ್ಯ ಭಗವದ್ರೂಪ |
| ೬ | ಕೆಂಡ (ಅಂಗಾರ) | ಸಿಡಿಲು | ವಾಸುದೇವ-ಅನಿರುದ್ಧ | ಅಪಾನ-ಸಮಾನ | ಜಗದ್ಭಕ್ ಅಗಿರುವುದ ರಿಂದ ಅಶನಿ ನಾಮಕನು |

## ಪದ್ಯ (೪)

ಮೂಲ :–

ಧರಣಿಯೆಂಬುದೆ ಅಗ್ನಿ ಸಂವ ।
ತ್ಸರವೆ ಸಮಿಧೆ ವಿಹಾಯಸವೆ ಹೊಗೆ ।
ಇರುಳುರಿ ದಿಶಾಂಗಾರವಾಂತರ ದಿಗ್ವಿಲಯ ಕಿಡಿಯು ॥
ವರುಷವೆಂಬಾಹುತಿಗಳಿಂದಲಿ ।
ಹರಿಯ ಮೆಚ್ಚಿಸಿ ಸಕಲರೊಳಗ ।
ಧ್ವರಿಯುನಾಗಿರು ಸರ್ವರೂಪಾತ್ಮಕನ ಚಿಂತಿಸುತ ॥ ॥೪॥

ಅವತರಣಿಕೆ :—

ಪಂಚಾಗ್ನಿಗಳ ಪೈಕಿ ತೃತೀಯಾಗ್ನಿಯಾದ "ಧರಣಿ" ಎಂಬ ಅಗ್ನಿಯ. ವಿವರಗಳನ್ನು ಪ್ರಸಕ್ತ ಪದ್ಯದಿಂದ ತಿಳಿಸುತ್ತಾರೆ. ಭೂಮಿಯೇ ಅಗ್ನಿಯು. ವರ್ಷಗಳೇ ಕಾಷ್ಠರೂಪವಾದ ಸಮಿಧೆಗಳು. ಸರ್ವತ್ರವ್ಯಾಪ್ತವಾದ ಆಕಾಶವೇ ಧೂಮವು. ರಾತ್ರಿ ಎಂಬುದೇ ಜ್ವಾಲೆಯು. ಪೂರ್ವಾದಿ ಚತುರ್ದಿಕ್ಕುಗಳೇ ಕೆಂಡವೆನಿಸುವುವು. ಆಗ್ನೇಯಾದಿ ಉಪದಿಕ್ಕುಗಳೇ ಕಿಡಿಗಳು. ಇಂತು, ಪೃಥ್ವೀ ಎಂಬ ಅಗ್ನಿಯಲ್ಲಿ ಸಂವತ್ಸರವೆಂಬ ಕಾಲಮಾನವು (ಮೇಘಮಂಡಲದಿಂದ ಭೂಮಿಯನ್ನು ಸೇರಿ ವ್ರೀಹ್ಯಾದಿ ದೇಹದಲ್ಲಿದ್ದ ಒಂದು ಸಂವತ್ಸರದ ಕಾಲ) ವನ್ನು ಆಹುತಿರೂಪದಲ್ಲಿ ಈ ಅಗ್ನಿಗೆ ಅಭಿಮಾನಿಯಾದ ಸಂಕರ್ಷಣನಾಮಕ ಶ್ರೀಪರಮಾತ್ಮನೆಗೆ ಅರ್ಪಿಸುತ್ತಾ, ಅವನ ಒಲುಮೆಯನ್ನು ಪಡೆದು, ಸಮಸ್ತವಾದ ಚರಾಚರವಸ್ತುಗಳಲ್ಲಿ ತದಾಕಾರರೂಪದಿಂದ ಪ್ರಚುರನಾದ ಶ್ರೀ ಪರಮಾತ್ಮನನ್ನು ಸಕಲ ಠಾವಿನಲ್ಲಿ ಚಿಂತಿಸುತ್ತಾ, ಮಹಾಯಜ್ಞ ಮಾಡಿದ ಯಜಮಾನನಾಗಿರು ಎಂದು ನಿರೂಪಿಸುತ್ತಾರೆ. "ಧರಣಿಯೆಂಬುದೇ" ಎಂಬ ಪ್ರಸಕ್ತ ಸಂಧಿಗತ ಈ ೪ನೆಯ ಪದ್ಯದಿಂದ ॥೪॥

**ಪ್ರತಿಪದಾರ್ಥ :-**

**ಧರಣಿಯೆಂಬುದೆ**=ಭೂಮಿ ಎನ್ನುವುದೇ **ಅಗ್ನಿ**=ಅಗ್ನಿಯು. **ಸಂವತ್ಸರವೆ**=ಪ್ರಭವಾದಿ ಸಂವತ್ಸರಗಳಲ್ಲಿ ದಾವ ವರ್ಷದಲ್ಲಿ ಮೇಘಮಂಡಲದಿಂದ ಭೂಮಿಯಲ್ಲಿ ಪ್ರವೇಶಮಾಡಿ ವ್ರೀಹ್ಯಾದಿಗಳಲ್ಲಿ ಇರುತ್ತಾನೋ ಆ ವರ್ಷವೆಂಬೊದೇ **ಸಮಿಧೆ**=ಅಗ್ನಿಯಲ್ಲಿ ಹಾಕತಕ್ಕ ಕಾಷ್ಠವು. **ವಿಹಾಯಸವೆ**=ಆಕಾಶವೇ. **ಹೊಗೆ**=ಧೂಮವೆನಿಸುವುದು. **ಇರುಳು**=**ರಾತ್ರಿ** ಎಂಬುದೇ **ಉರಿ**=ಜ್ವಾಲೆಯು. **ದಿಶಾ**=ಪೂರ್ವಾದಿ ನಾಲ್ಕು ದಿಕ್ಕುಗಳು. **ಅಂಗಾರ**=ಕೆಂಡಗಳು. **ಅವಾಂತರ ದಿಗ್ವಿಲಯು**=ಆಗ್ನೇಯಾದಿ ವಿದಿಕ್ಕುಗಳು. **ಕಿಡಿಯು**=ಕಿಡಿಗಳೆಂದೆನಿಸುವುವು. **ವರುಷವೆಂಬ**=ಸುರಿಯುವ ಮಳೆಎಂಬುದನ್ನೇ **ಆಹುತಿಗಳಿಂದಲಿ**=ಆಹುತಿ ರೂಪದಿಂದ ಹೋಮಮಾಡಿ. **ಹರಿಯು**=ಸಮಸ್ತ ಪಾಪಪರಿಹಾರಕನಾದ ಬಿಂಬರೂಪಿಯಾದ ಶ್ರೀಪರಮಾತ್ಮನನ್ನು **ಮೆಚ್ಚಿಸಿ**=ಒಲಿಸಿಕೊಂಡು (ಅವನ ಅನುಗ್ರಹವನ್ನು ಸಂಪಾದಿಸಿ) **ಸರ್ವರೂಪಾತ್ಮಕನ**=ಸಂಕರ್ಷಣ,ಸಂಕರ್ಷಣ ನಾರಾಯಣಾದಿ ಆರು ರೂಪಗಳಿಂದ ಈ ಅಗ್ನಿಯಲ್ಲಿ ವಿದ್ಯಮಾನನಾಗಿರುವ ಶ್ರೀಪರಮಾತ್ಮನನ್ನು (ಸಮಸ್ತ ಚರಾಚರ ವಸ್ತುಗಳಲ್ಲಿ ತದಾಕಾರ ರೂಪದಿಂದ ಪ್ರಚುರನಾದ ಶ್ರೀಪರಮಾತ್ಮನನ್ನು) **ಚಿಂತಿಸುತ**=ಧ್ಯಾನೋಪಾಸನೆ ಮಾಡುತ್ತಾ. **ಸಕಲರೊಳಗೆ**=ಎಲ್ಲಾ ಜನರ ಮಧ್ಯದಲ್ಲಿ. **ಅಧ್ವರಿಯುನಾಗಿರು**=ಮಹಾಯಜ್ಞಮಾಡಿದ ಯಜಮಾನನಂತೆ (ಆಧ್ಯಕ್ಷ) ಇರುವವನಾಗು. ॥೪॥

## ವ್ಯಾಖ್ಯಾನಗಳು

### (೧) ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ತೃತೀಯಾಗ್ನಿಯಾದ ಭೂಮಿ ಎಂಬ ಅಗ್ನಿಯಲ್ಲಿ ಹೋಮಕ್ರಮ ಹೇಳುತ್ತಾರೆ. ಇದಕ್ಕೆ ವ್ಯಾನನಾಮಕ ವಾಯುದೇವರು. ಸಂಕರ್ಷಣರೂಪಿ ಪರಮಾತ್ಮ.

ಧರಣಿ ಎಂಬುದೇ ಅಗ್ನಿ-ಭೂಮಿ ಎನತಕ್ಕದ್ದೇ ಅಗ್ನಿ. ಈ ಅಗ್ನಿಯಲ್ಲಿ

ವ್ಯಾನನಾಮಕ ವಾಯುದೇವರು ಸಂಕರ್ಷಣರೂಪಿ ಪರಮಾತ್ಮ. ಸಂವತ್ಸರವೆ ಸಮಿಧೆ-ಪ್ರಭವಾದಿ ವರುಷಗಳೊಳಗೆ ದಾವ ವರುಷದಲ್ಲಿ ಅಂದರೆ ಮೇಘ ಮಂಡಲದಿಂದ ಭೂಮಿಯಲ್ಲಿ ಪ್ರವೇಶಮಾಡಿ ವ್ರೀಹ್ಯಾದಿಗಳಲ್ಲಿ ಇರುತ್ತಾನೋ ಆ ವರ್ಷ ಎಂಬುದೇ ಅಗ್ನಿ ಒಳಗೆ ಹಾಕತಕ್ಕ ಕಾಷ್ಠ. ಸಂವತ್ಸರ ಎಂದರೆ,ವರ್ಷ ಇದಕ್ಕೆ ವ್ಯಾನನಾಮಕ ವಾಯುದೇವರು, ಸಂಕರ್ಷಣ ನಾರಾಯಣ. ವಿಹಾಯ ಸವೆ ಹೊಗೆ-ಅಗ್ನಿಗೆ ಕಾಷ್ಠ ಸಂಯೋಗದಿಂದ ಹೊರಡತಕ್ಕ ಹೊಗೆ ಎಂಬುದೇ ವಿಹಾಯಸ ಎಂದರೆ, ಆಕಾಶ. ಈ ಆಕಾಶ ಎಂಬುದೇ ಹೊಗೆ. ಇದರಲ್ಲಿ ವ್ಯಾನ ನಾಮಕ ಅಪಾನ ವಾಯುದೇವರು, ಸಂಕರ್ಷಣಾಖ್ಯ ವಾಸುದೇವ. ಇರುಳುರಿ-ಇರುಳು ಎಂದರೆ ರಾತ್ರಿ. ರಾತ್ರಿ ಎನತಕ್ಕದ್ದೇ ಉರಿ. ಇದರಲ್ಲಿ ವ್ಯಾನ ನಾಮಕ ವಾಯುದೇವರು, ಸಂಕರ್ಷಣರೂಪಿ ಪರಮಾತ್ಮನಿಂದ ಹೊರಟ ಸಂಕ ರ್ಷಣರೂಪಿ ಪರಮಾತ್ಮ. ದಿಶಾಂಗಾರ-ಪೂರ್ವಾದಿ ನಾಲ್ಕು ದಿಕ್ಕುಗಳು ಅಗ್ನಿ ಕೆಂಡಗಳು. ಇದರಲ್ಲಿ ವ್ಯಾನನಾಮಕ ಉದಾನವಾಯುದೇವರು, ಸಂಕರ್ಷಣ ಪ್ರದ್ಯುಮ್ನ. ಅವಾಂತರ ದಿಗ್ವಿಲಯ ಕಿಡಿಯು-ಅಗ್ನಿ ಕಾಷ್ಠ ಸಂಯೋಗ ದಿಂದ ಹೊರಟ ಉರಿಯಿಂದ ವ್ಯಕ್ತವಾದ ಕಿಡಿಗಳೇ ಆಗ್ನೇಯಾದಿ ವಿದಿಕ್ಕುಗಳು ಇದರಲ್ಲಿ ವ್ಯಾನಾಖ್ಯ ಸಮಾನ ವಾಯುದೇವರು, ಸಂಕರ್ಷಣಾಖ್ಯ ಅನಿರುದ್ಧ. ವರುಷವೆಂಬಾಹುತಿಗಳಿಂದಲಿ-ದಾವ ವರುಷದಲ್ಲಿ ಪ್ರವೇಶ ಮಾಡಿದನೋ, ತದಾರಭ್ಯ ವ್ರೀಹ್ಯಾದಿ ದೇಹಗಳಲ್ಲಿ ಇದ್ದ ಒಂದು ವರುಷಕಾಲ ವರ್ಷಗತಕಾಲ ಆಯುಸ್ಸು ಆ ವ್ರೀಹಿ ದೇಹವನ್ನು ಧರಣಿ ಎಂಬ ಅಗ್ನಿಯಲ್ಲಿ ಆಹುತಿರೂಪ ದಿಂದ ಹೋಮಿಸಿ, ಇಂಥಾ ಆಹುತಿಗಳಿಂದ ಹರಿಯ ಮೆಚ್ಚಿಸಿ-ಬಿಂಬರೂಪಿ ಪರ ಮಾತ್ಮನ ತನ್ನ ಸ್ವಾಖ್ಯ ರೂಪಗಳಿಂದ ಮೆಚ್ಚಿಸಿ, ಸಕಲರೊಳಗೆ-ಸಮಸ್ತ ಪ್ರಾಣಿಗಳ ಮಧ್ಯದಲ್ಲಿ ಸಂಚಾರ ಮಾಡುತ್ತಾ, ಸರ್ವರೂಪಾತ್ಮಕನ–ಸಮಸ್ತ ವಾದ ಚರಾಚರಗಳಲ್ಲಿ ತದಾಕಾರ ರೂಪದಿಂದ ಪ್ರಚುರನಾದ ಶ್ರೀಪರಮಾತ್ಮನ ಚಿಂತಿಸುತ್ತ-ಅನುಸಂಧಾನ ಮಾಡುತ್ತಾ ಅಧ್ವರಿಯನಾಗಿರು-ಅಧ್ಯಕ್ಷನಾಗಿರು. ಮಹಾಯಜ್ಞ ಮಾಡಿದವನು ಎಂತ ಎನಿಸೋವನಾಗು. ಅಧ್ವರ್ಯಕಾರ್ಯ ಲೋಪಗಳು ಬಾರದಂತೆ ಮಾಡುವ ಕಾರ್ಯವಾದ್ದರಿಂದ, ಲೋಪಗಳು ಬಾರ ದಂತೆ ಸಂಚರಿಸು ಎಂತ ತಾತ್ಪರ್ಯ.

ವಿಶೇಷಾರ್ಥ :—

ಸಂವತ್ಸರವೇ ಸಮಿಧೆ. ವರುಷವೆಂಬಾಹುತಿ ಎಂತ ಹೇಳುತ್ತಾರೆ. ಪುನರುಕ್ತಿ ಆಗುತ್ತದೆ ಎಂದಲ್ಲಿ, ಸಂವತ್ಸರ ಎಂದರೆ, ೩೬೦ ದಿನ ಸೇರಿದ ಒಂದು ವರುಷಕ್ಕೆ ಸಮೂಹ ಸಾಂಕೇತನಾಮ. ವತ್ಸರ ಎಂಬುವುದಕ್ಕೆ ದಿನಗಳ ವಿವಕ್ಷಯಾ ವರುಷ ಎಂತ ಸಾಂಕೇತ. ೩೬೦ ದಿನಗಳ ಆಹುತಿ ಎಂತ ಆಹುತಿ ಶಬ್ದಕ್ಕೆ ತಾತ್ಪರ್ಯ. ॥೪॥

(೨) "ಭಾವಪ್ರಕಾಶಿಕೆ"--ವ್ಯಾಖ್ಯಾನ:—

ಈಗ ಮೂರನೆಯ ಪೃಥಿವೀ ಅಗ್ನಿಯಲ್ಲಿ ಹೋಮಿಸುವ ಪ್ರಕಾರವನ್ನು ಹೇಳುತ್ತಾರೆ :—

ಮೇಲಿನ ಎರಡು ಪದ್ಯಗಳಂತೆ, ಮುಂದಿನ ಮೂರು ಪದ್ಯಗಳಿಗೂ ಉಪನಿಷದ್ವಾಕ್ಯಗಳಿರುವುವು. ಅದರ ಅಭಿಪ್ರಾಯವು ಮಾತ್ರ ಇಲ್ಲಿ ಹೇಳಲ್ಪಡುತ್ತೆ. ಗ್ರಂಥವಿಸ್ತಾರಭಯದಿಂದ ಉಪನಿಷದ್ವಾಕ್ಯಗಳನ್ನು ಉದ್ಧರಿಸಲಿಲ್ಲ. ಭೂಮಿಯು ಅಗ್ನಿ ಎಂದರೆ, "**ಪೃಥಿತತ್ವಾತ್ಪೃಥಿವೀನಾಮ ಪೃಥಿವೀಸ್ಥಃ ಸಂಕರ್ಷಣಃ ಅಗ್ನಿಃ**"-ಎಂಬಂತೆ ಲೋಕದಲ್ಲಿ ಪ್ರಖ್ಯಾತನಾದುದರಿಂದ ಪರಮಾತ್ಮನಿಗೆ "ಪೃಥಿವೀ" ಎಂದು ಹೆಸರು. ಪೃಥಿವೀಗತ ಸಂಕರ್ಷಣನು ಅಗ್ನಿಯು. ಎಲ್ಲರನ್ನೂ ತನ್ನಲ್ಲಿ ವಾಸಮಾಡಿಸುವನಾದ್ದರಿಂದ "ಸಂವತ್ಸರ"ನೆಂದು ಹೆಸರುಳ್ಳ ಸಂವತ್ಸರಗತನಾದ ಸಂಕರ್ಷಣ ನಾರಾಯಣ ಸ್ವರೂಪನು ಕಾಷ್ಠವು. ಚೆನ್ನಾಗಿ ಪ್ರಕಾಶವುಳ್ಳವನಾದ್ದರಿಂದ "**ಸಮ್ಯಕ್ ಪ್ರಕಾಶನಾತ್ ಅಕಾಶನಾಮಾ**"–ಅಂದರೆ, ಚೆನ್ನಾಗಿ ಪ್ರಕಾಶವನ್ನು ಮಾಡುವವನಾದ್ದರಿಂದ ಪರಮಾತ್ಮನಿಗೆ "ಆಕಾಶ" ಎಂದು ಹೆಸರು. ಈ ಅಕಾಶಗತ ಸಂಕರ್ಷಣ ವಾಸುದೇವರೂಪನು ಹೊಗೆ. "**ರತಿದಾನಾದ್ರಾತ್ರಿಃ**" -ಎಂಬ ವಾಕ್ಯದಿಂದ ರತಿಪ್ರದನಾದುದರಿಂದ "ರಾತ್ರಿ" ಎಂದು ಪರಮಾತ್ಮನಿಗೆ ಹೆಸರು. ರಾತ್ರಿಗತ ಸಂಕರ್ಷಣ ಸಂಕರ್ಷಣ ರೂಪವೇ ಜ್ವಾಲೆಯು. ಜ್ಞಾನವನ್ನು ತೋರಿಸುವವನಾದುದರಿಂದ "**ದಿಶತೀತಿ ದಿಕ್**"-ಎಂಬ ನಿರ್ವಚನದಂತೆ "ದಿರ್ಜ" ನಾಮಕನು

ಪರಮಾತ್ಮನು. ದಿಕ್ಕುಗಳಲ್ಲಿರುವ ಸಂಕರ್ಷಣ ಪ್ರದ್ಯುಮ್ನ ಸ್ವರೂಪನು ಕೆಂಡಗಳು. "ಅವಾಂತರಂದಿಶತೀತಿ ಅವಾಂತರ ದಿಕ್"-ಎಂಬ ನಿರ್ವಚನಾನುಸಾರ, ಅವಾಂತರ ಜ್ಞಾನವನ್ನು ತೋರಿಸುವವನಾದ್ದರಿಂದ "ಅವಾಂತರ ದಿಕ್ಕು" ಎಂದು ಪರಮಾತ್ಮನಿಗೆ ಹೆಸರು. ಅವಾಂತರ ದಿಕ್ಕುಗಳಲ್ಲಿರುವ ಸಂಕರ್ಷಣಾನಿರುದ್ಧನು ಕಿಡಿಗಳು. ಮಳೆ ಬಿಂದುಗಳನ್ನೇ ಆಹುತಿಯನ್ನಾಗಿ ಮಾಡಿ ಹರಿಯನ್ನು ಮೆಚ್ಚಿಸಿ, ಮೇಲೆ ಹೇಳಿದ ಕಾಷ್ಠಾದಿಗತ ಸಕಲ ರೂಪಗಳನ್ನು ಚಿಂತಿಸುತ್ತ, ಎಲ್ಲರಿಗಿಂತಲೂ ಅಧಿಕನಾಗಿರು. ಹೀಗೆ ಚಿಂತಿಸಿದರೆ, ಸ್ವಾಮಿಯು ನಮ್ಮನ್ನು ಸಜಾತೀಯರಲ್ಲಿ ಎಲ್ಲರಿಗಿಂತಲೂ ಅಧಿಕರನ್ನಾಗಿ ಮಾಡಿ ಉದ್ಧರಿಸುವನು ಎಂದು ತಾತ್ಪರ್ಯ. ॥೪॥

(೩) "ಭಾವದರ್ಪಣಟೀಕಾ"ವ್ಯಾಖ್ಯಾನ:-

ಈಗ ತೃತೀಯಾಗ್ನಿಕ್ರಮ ಹೇಳುತ್ತಾರೆ :-

**"ಓಂ ಪೃಥ್ವೀವಾವ ಗೌತಮಾಗ್ನಿಸ್ತಸ್ಯ ಸಂವತ್ಸರ ಏವ ಸಮಿಧಾಕಾಶೋ ಧೂಮೋ ರಾತ್ರಿರರ್ಚಿರ್ದಿಶೋಂಗಾರಾವಾಂತರದಿಶೋ ವಿಸ್ಫುಲಿಂಗಾಸ್ತಸ್ಮಿನ್ನೇತಸ್ಮಿನ್ನಗ್ನೌ ದೇವಾಃ ವರ್ಷಂ ಜುಹ್ವತಿ ತಸ್ಯಾಹುತೇರನ್ನಂ ಸಂಭವತಿ" ॥**

**ಎಂಬ ಛಾಂದೋಗ್ಯೋಪನಿಷತ್ತಿನ** ಭಾವವೇ ಇಲ್ಲಿ ವಿವರಿಸುತ್ತಾರೆ.- **"ಧರಣೀತಿ"** ॥

ಧರಣಿಯೆ ಅಗ್ನಿ. ಸಂವತ್ಸರವೇ ಸಮಿತ್ತು. ವಿಹಾಯಸ ಎಂದರೆ, ಆಕಾಶ ಎಂಬರ್ಥ. **"ಪುಂಸ್ಯಾಕಾಶವಿಹಾಯಸೀತ್ಯಮರಃ"** ರಾತ್ರಿಯೇ ಉರಿ. ದಿಕ್ಕುಗಳೇ ಕೆಂಡ. ಅವಾಂತರ ದಿಕ್ಕುಗಳೇ ಕಿಡಿಗಳು. ಎಂತ ತಿಳಿದು, ಅನುಸಂಧಾನದಿಂದ "ಮಳೆ" ಎಂಬಂಥ ಆಹುತಿಯನ್ನು ಕೊಟ್ಟಲ್ಲಿ ಅಂತರ್ಯಾಮಿ ಶ್ರೀಹರಿಯು ಸಂತೋಷನಾಗುವನೆಂದರ್ಥ. ॥೪॥

## (೪) ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ)-

"ಧರಣೀತಿ" ॥ "ಪೃಥಿವೀ ವಾವ ಗೌತಮ ಅಗ್ನಿಃ । ತಸ್ಯಾಃ ಸಂವತ್ಸರ ಏವ ಸಮಿತ್ । ಆಕಾಶೋಧೂಮಃ । ರಾತ್ರಿಃ ಅರ್ಚಿಃ । ದಿಶೋ ರಂಗಾರಾಃ । ಅವಾಂತರ ದಿಶೋ ವಿಸ್ಫುಲಿಂಗಾಃ । ತಸ್ಮಿನ್ ಏತಸ್ಮಿನ್ ಅಗ್ನೌ ದೇವಾಃ ವರ್ಷಂ ಜುಹ್ವತಿ । ತಸ್ಯಾಃ ಆಹುತೇಃ ಅನ್ನಂ ಸಂಭವತಿ ।" (ಛಾಂದೋಗ್ಯ ಖಂಡಾರ್ಥ ೫, ೭, ೨, ೬ ) ಇರುಳು = ರಾತ್ರಿ । ಇದಮೇವ ಪಂಚರೂಪಂ ಗುರು ಮಧ್ವರಾಟ್ ನಿಜಗ್ರಂಥೇ । "ಸಂವತ್ಸರೋ ವಾಸನಾಚ್ಚ ಸ ಆಕಾಶಃ ಪ್ರಕಾಶನಾತ್ ॥ ರಾತ್ರಿಶ್ಚ ರತಿದಾನಾತ್ ಸಃ ದಿಶತೀತಿ ದಿಶಃ ಸ್ಮೃತಃ ॥ ಅವಾಂತರಂ ದಿಶೇತ್ ಯಸ್ಮಾತ್ ಅವಾಂತರ ದಿಗುಚ್ಯತೇ॥ ॥೪॥

### ಕನ್ನಡಾರ್ಥ :—

ಪೃಥಿವಿಯಲ್ಲಿ ಪೃಥಿವೀ ಶಬ್ದವಾಚ್ಯನಾಗಿ ಸಂಕರ್ಷಣನಿರುವನು. ಇವನೇ ಹೋಮಾಹುತ್ಯಾಧಾರನಾದ ಅಗ್ನಿಯು. ಪೃಥಿವೀಸ್ಥ ಸಂಕರ್ಷನಿಗೆ "ಎಲ್ಲೆಲ್ಲಿಯೂ ವಾಸವಾಗಿರುವವನು. ಸರ್ವತ್ರ ವ್ಯಾಪಿಸಿರುವವನು"ಎಂಬ ಅರ್ಥದಲ್ಲಿ ತಾತ್ಪರ್ಯವಿದೆ. "ಸಂವತ್ಸರ" ಶಬ್ದವಾಚ್ಯನಾದ ಸಂವತ್ಸರಗತನಾದ ಸಂಕರ್ಷಣ ನಾರಾಯಣನು "ಸಮಿತ್" ಎನಿಸುತ್ತಾನೆ. ಸುತ್ತಲೂ ಪ್ರಕಾಶಿಸುವುದರಿಂದ ಆಕಾಶಗತ "ಆಕಾಶ" ಶಬ್ದವಾಚ್ಯನಾದ ಸಂಕರ್ಷಣ ವಾಸುದೇವನು "ಧೂಮ"ನೆನಿಸುವನು. ರತಿ (ಪ್ರೇಮ) ವನ್ನು ಕೊಡುವುದರಿಂದ "ರಾತ್ರಿ" ಶಬ್ದವಾಚ್ಯನಾದ ರಾತ್ರಿಗತ ಸಂಕರ್ಷಣ ಸಂಕರ್ಷಣನು "ಅರ್ಚಿ" ಎನಿಸಿಕೊಳ್ಳುವನು. ಅಪೇಕ್ಷಿತಗಳನ್ನು ಕೊಡುವುದರಿಂದ "ದಿಶ" ಶಬ್ದವಾಚ್ಯನಾದ "ದಿಕ್ಕಿನಲ್ಲಿರುವ" ಸಂಕರ್ಷಣ ಪ್ರದ್ಯುಮ್ನನು "ಅಂಗಾರ" (ಕೆಂಡ) ನಾಮಕನು. ಅವಾಂತರ ಫಲಗಳನ್ನು ಕೊಡುವುದರಿಂದ, "ಅವಾಂತರ ದಿಕ್" ಎಂಬ ಅಭಿಧಾನದಿಂದ ಸಂಕರ್ಷಣಾನಿರುದ್ಧನು "ಕಿಡಿ" ಎಂದೆನಿಸುವನು. ಇಂತು ಪೃಥಿವೀ ಸಂವತ್ಸರಾದಿಗಳಲ್ಲಿ ಪಂಚರೂಪಾತ್ಮಕನಾಗಿ ನಾರಾಯಣಾದಿ ರೂಪಗಳಿಂದ ಇರುವ ಸಂಕರ್ಷಣನಲ್ಲಿ ವೃಷ್ಟಿ (ಮಳೆ) ಯಲ್ಲಿ ಇಡಲ್ಪಟ್ಟ ಜೀವನನ್ನು ದೇವತೆ

ಗಳು ಹೋಮಿಸುತ್ತಾರೆ. ಆ ಆಹುತಿಯಿಂದ ಪೃಥಿವಿಯಿಂದ ಜೀವನನ್ನು ಅನ್ನ ಮುಂತಾದ ತಿನ್ನುವ ಪದಾರ್ಥಗಳಲ್ಲಿ ದೇವತೆಗಳು ಸ್ಥಾಪಿಸುತ್ತಾರೆ. ಶ್ರೀ ಗುರು ಮಧ್ವಮುನಿಗಳು ತಮ್ಮ ಭಾಷ್ಯದಲ್ಲಿ ಇದಕ್ಕೆ ಪ್ರಮಾಣಗಳನ್ನು ಬರೆದಿರುತ್ತಾರೆ. ॥೪॥

(ಊ) "ಗುರುಹೃದಯ ಪ್ರಕಾಶಿಕೆ"-ವ್ಯಾಖ್ಯಾನ :—

ಧಾರಕವಾದ್ದರಿಂದ, "ಧರಣಿ"ಎಂಬ ಭೂಮಿಯಲ್ಲಿರುವ ದೇವರೇ ಅಗ್ನಿ. ಸರ್ವರಲ್ಲಿ ಆವಾಸ ಮಾಡುವುದರಿಂದ "ಸಂವತ್ಸರ"ನಾಮಕ ವರ್ಷಗತ ದೇವರು ಭೂಮ್ಯಗ್ನಿಗೆ ಸಮಿತ್ತೆಂದು ತಿಳಿದು, ಪ್ರಕಾಶರೂಪನಾದ್ದರಿಂದ "ಆಕಾಶ"ಶಬ್ದ ವಾಚ್ಯದೇವರು ವಿಹಾಯಸವೆಂಬ ಆಕಾಶದಲ್ಲಿದ್ದು, ಭೂಮ್ಯಗ್ನಿಗೆ ಧೂಮನೆನಿಸುವನೆಂದರಿತು, ಸಂತೋಷಪ್ರದನಾದ್ದರಿಂದ "ರಾತ್ರಿ" ಶಬ್ದವಾಚ್ಯ ರಾತ್ರಿಯೊಳಗಿದ್ದು, ಭೂಮ್ಯಗ್ನಿಗೆ ಜ್ವಾಲೆ ಎಂದೆನಿಸಿ, ಮುಖ್ಯ ಆಜ್ಞಾಪಕನಾದ್ದರಿಂದ "ದಿಶಾ" ಶಬ್ದವಾಚ್ಯನು ನಾಲ್ಕು ದಿಕ್ಕುಗಳಲ್ಲಿದ್ದು, ಭೂಮ್ಯಗ್ನಿಗೆ ಕೆಂಡಗಳೆಂದೆನಿಸಿ, ಅಮುಖ್ಯರಲ್ಲೂ ಇದ್ದು ಆಜ್ಞಾಪಕನಾದ್ದರಿಂದ, ಅವಾಂತರ ದಿಗ್ವಿಲಯವೆಂಬ ವಿದಿಕ್ಕುಗಳಲ್ಲಿದ್ದು ತಚ್ಛಬ್ದವಾಚ್ಯನಾಗಿ ಭೂಮ್ಯಗ್ನಿಗೆ ಕಿಡಿಯಾಗಿರುವನೆಂದು ಭಾವಿಸಿ, ವೃಷ್ಟಿಯಲ್ಲಿ ಸನ್ನಿಹಿತನಾದ್ದರಿಂದ "ವರ್ಷ" ಶಬ್ದವಾಚ್ಯ ದೇವರು ಮಳೆಯಲ್ಲಿದ್ದು, ಭೂಮ್ಯಗ್ನಿಗೆ ಆಹುತಿಯಾಗುವನೆಂದು ಅರ್ಪಿಸಿ, ಪೂರ್ವೋಕ್ತ ಸರ್ವರೂಪಾತ್ಮಕನನ್ನು ಧ್ಯಾನಿಸುತ್ತಾ ಉಕ್ತ ಸಕಲ ಯಜ್ಞದಲ್ಲೂ "ಅಧ್ವರ್ಯ"-ಎಂಬ ಋತ್ವಿಕ್ಕಾಗಿ ದೇವತೆಗಳಿರುವರೆಂದು ಭಾವಿಸು.

ಪ್ರಮಾಣಶ್ರುತಿ (ಛಾಂದೋಗ್ಯೋಪನಿಷತ್ತು) :—

"ಪೃಥಿವೀವಾವ ಗೌತಮಾಗ್ನಿಸ್ತಸ್ಯ ಸಂವತ್ಸರ ಏವ ಸಮಿಧಾ
ಕಾಶೋಧೂಮೋ ।
ರಾತ್ರಿರರ್ಚಿರ್ದಿಶೋಂಗಾರಾಃ ಅವಾಂತರ ದಿಶ ವಿಸ್ಫುಲಿಂಗಾಃ ॥
ತಸ್ಮಿನ್ನೇತಸ್ಮಿನ್ನಗ್ನೌ ದೇವಾವರ್ಷಂ ಜುಹ್ವತಿ ।
ತಸ್ಯಾ ಹುತೇರನ್ನಂ ಭವತೀತಿ" ॥

ಛಾಂದೋಗ್ಯ ಭಾಷ್ಯ :—
"ಸಂವತ್ಸರೋ ವಾಸನಾಚ್ಚ ಸ ಆಕಾಶಃ ಪ್ರಕಾಶನಾತ್ ।
ರಾತ್ರಿಶ್ಚ ರತಿ ದಾನಾತ್ಸದಿಶತೀತಿ ದಿಶಸ್ಮೃತಃ ॥
ಅವಾಂತರಂ ದಿಶೇದ್ಯಸ್ಮಾ ದವಾಂತರದಿಗುಚ್ಯತೇ" ॥
-ಎಂಬರ್ಥ ವಿವರಿಸಿತು. ॥೪॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಪ್ರಸಕ್ತ ಪದ್ಯದಿಂದ ಜ್ಞಾನಿವರೇಣ್ಯರಾದ ದಾಸರಾಯರು ಪಂಚಾಗ್ನಿಗಳ ಪೈಕಿ, ತೃತೀಯಾಗ್ನಿ ಎಂದೆನಿಸುವ "ಪೃಥವೀ" ಎಂಬ ಭೂಮ್ಯಗ್ನಿಯಲ್ಲಿ ಹೋಮಮಾಡುವ ಕ್ರಮದ ವಿವರಗಳನ್ನು ತಿಳಿಸುತ್ತಾರೆ.

(೧) **ಧರಣಿ** (ಭೂಮಿ, ಪೃಥವೀ) ಎಂಬುದೇ **ಅಗ್ನಿಯ** ಅಧಿಷ್ಠಾನವು.

(೨) ಈ ಅಗ್ನಿಯಲ್ಲಿ **ಸಂಕರ್ಷರೂಪಿ** ಪರಮಾತ್ಮನು ಮುಖ್ಯಾಭಿಮಾನಿಯು.

(೩) ಲೋಕದಲ್ಲಿ ಪ್ರಖ್ಯಾತನಾಗಿರುವುದರಿಂದ ಪರಮಾತ್ಮನಿಗೆ **ಪೃಥವೀ** ಎಂದು ಹೆಸರು.

(೪) ಎಲ್ಲೆಲ್ಲಿಯೂ ವಾಸವಾಗಿರುವವನು, ಸರ್ವತ್ರ ವ್ಯಾಪ್ತನು ಎಂಬರ್ಥದಲ್ಲಿ ಸರ್ವರಲ್ಲಿ ಆವಾಸಮಾಡುವ ಸರ್ವಕ್ಕೂ ಧಾರಕನಾದ್ದರಿಂದ **ಧರಣಿ** ಶಬ್ದವಾಚ್ಯನಾದ ಸಂಕರ್ಷಣ ನಾಮಕ ಶ್ರೀಪರಮಾತ್ಮನೇ ಪೃಥವೀಗತ ಅಗ್ನಿ ಎನಿಸುವನು.

(೫) ಈ ಅಗ್ನಿಗೆ **ವ್ಯಾನ ನಾಮಕ ವಾಯುದೇವರು** ಅವಾಂತರಾಭಿಮಾನಿಗಳು.

(೬) ಇಂತಹ ಭೂಮ್ಯಗ್ನಿಗೆ **ಸಂವತ್ಸರವೇ** ಕಾಷ್ಠವೆನಿಸುವುದು.

(೭) ಸಂವತ್ಸರಗತನಾದ ಸಂವತ್ಸರ ಶಬ್ದವಾಚ್ಯನಾದ **ಸಂಕರ್ಷಣ ನಾರಾಯಣ** ರೂಪಿ ಪರಮಾತ್ಮನೇ ಇದಕ್ಕೆ ಅಭಿಮಾನಿಯು.

(೮) ಪ್ರಭವಾದಿ ೬೦ ಸಂವತ್ಸರಗಳ ಪೈಕಿ ಮೇಘ ಮಂಡಲದಿಂದ ಭೂಮಿಯನ್ನೇ ಪ್ರವೇಶಮಾಡಿ ಅಲ್ಲಿ ವ್ರೀಹ್ಯಾದಿಗಳಲ್ಲಿ ಜೀವನು ಇರುತ್ತಾನೋ, ಆ ಸಂವತ್ಸರವೇ ಸಮಿತ್ತೆಂದೆನಿಸುವುದು. ಇಂತಹ ಕಾಷ್ಠಗತ ಭಗವದ್ರೂಪವು ಸಂಕರ್ಷಣ ನಾರಾಯಣನು.

(೯) ಸಂವತ್ಸರವೆಂಬ ಈ ಕಾಷ್ಠಾಧಿಷ್ಠಾನಕ್ಕೆ ವ್ಯಾನಾಖ್ಯ ಪ್ರಾಣ ನಾಮಕ ವಾಯುದೇವರು ಅವಾಂತರಾಭಿಮಾನಿಗಳು.

(೧೦) ಭೂಮ್ಯಗ್ನಿ ಮತ್ತು ಸಂವತ್ಸರವೆಂಬ ಕಾಷ್ಠಗಳ ಸಂಯೋಗದಿಂದ ಉತ್ಪತ್ತಿಯಾಗತಕ್ಕ ಧೂಮವೇ ಸರ್ವತ್ರ ವ್ಯಾಪಿಸಿರುವ ಆಕಾಶವು. (ವಿಹಾಯಸ) ಆಕಾಶವೇ ಹೊಗೆ ಎಂದೆನಿಸುವುದು.

(೧೧) ಈ ಧೂಮಗತ ಭಗವದ್ರೂಪವು ಸಂಕರ್ಷಣಾಖ್ಯ ವಾಸುದೇವ ನಾಮಕ ಶ್ರೀಪರಮಾತ್ಮನು.

(೧೨) ಚೆನ್ನಾಗಿ ಪ್ರಕಾಶಿಸುವುದರಿಂದ ಪರಮಾತ್ಮನು "ಆಕಾಶ" ಶಬ್ದವಾಚ್ಯನಾಗಿದ್ದಾನೆ.

"ಸಮ್ಯಕ್ ಪ್ರಕಾಶನಾತ್ ಆಕಾಶನಮಾ"
–ಎಂಬ ಛಾಂದೋಗ್ಯಭಾಷ್ಯದ ವಾಕ್ಯವೇ ಇದಕ್ಕೆ ಪ್ರಮಾಣವು.

(೧೩) ಈ ಧೂಮಾಧಿಷ್ಠಾನಕ್ಕೆ ವ್ಯಾನಾಖ್ಯ ಅಪಾನ ನಾಮಕ ವಾಯುದೇವರು ಅವಾಂತರಾಭಿಮಾನಿಗಳು.

(೧೪) ಇಂತು, ಪ್ರಕಾಶಪ್ರದನಾದ ಸಂಕರ್ಷಣಾಖ್ಯ ವಾಸುದೇವನಾಮಕ ಪರಮಾತ್ಮನು ಆಕಾಶ ಶಬ್ದವಾಚ್ಯನಾಗಿ, ವಿಹಾಯಸವೆಂಬ ಧೂಮದಲ್ಲಿ ವ್ಯಾನಾಖ್ಯ ಅಪಾನನಾಮಕ ವಾಯ್ವಂತರ್ಗತನಾಗಿ ವಿದ್ಯಮಾನನಾಗಿದ್ದಾನೆ.

(೧೫) ರಾತ್ರಿ (ಇರುಳು) ಎಂಬುದೇ ಜ್ವಾಲೆಯು.

(೧೬) ರತಿಪ್ರದನಾದ ಪರಮಾತ್ಮನಿಗೆ "ರಾತ್ರಿ" ಎಂದು ಹೆಸರು. ಇಂತಹ ರಾತ್ರಿಶಬ್ದವಾಚ್ಯನಾದ ಸಂಕರ್ಷಣಾಖ್ಯ ಸಂಕರ್ಷಣ ರೂಪಿ ಪರ

ಮಾತ್ಮನು ಭೂಮ್ಯಗ್ನಿ ಮತ್ತು ಸಂವತ್ಸರಗಳೆಂಬ ಕಾಷ್ಠಗಳ ಸಂಯೋಗದಿಂದ **ಹೊರಡತಕ್ಕ** ಅಗ್ನಿಜ್ವಾಲೆ (ಉರಿ) ಯಲ್ಲಿ ಅಂತರ್ಗತನಾಗಿದ್ದು ಮುಖ್ಯಾಭಿಮಾನಿಯಾಗಿರುವನು.

(೧೭) ಇಂತಹ ಇರುಳೆಂಬ ಜ್ವಾಲಾಧಿಷ್ಠಾನಕ್ಕೆ ವ್ಯಾನಾಖ್ಯವ್ಯಾನ **ನಾಮಕ ವಾಯುದೇವರು** ಅವಾಂತರಾಭಿಮಾನಿಗಳು.

(೧೮) ಇಂತು, ರತಿಪ್ರದನಾಗಿ ರಾತ್ರಿಶಬ್ದವಾಚ್ಯನಾದ ಸಂಕರ್ಷಣಾಖ್ಯ ಸಂಕರ್ಷಣರೂಪಿ ಪರಮಾತ್ಮನು ರಾತ್ರಿ ಎಂಬ ಅರ್ಚಿಯಲ್ಲಿ ವ್ಯಾನಾಖ್ಯ ವ್ಯಾನನಾಮಕ ವಾಯ್ವಂತರ್ಗತನಾಗಿ ಅರ್ಚಿ ಎಂದೆನಿಸಿದ್ದಾನೆ.

**"ರತಿದಾನಾದ್ರಾತ್ರೀ"** –ಎಂಬ ಛಾಂದೋಗ್ಯಭಾಷ್ಯದ ವಾಕ್ಯವೇ ಇದಕ್ಕೆ ಆಧಾರ.

(೧೯) ಪೂರ್ವಾದಿ ನಾಲ್ಕು ದಿಕ್ಕುಗಳೇ ಅಂದರೆ **ದಿಶಾ**, ಭೂಮ್ಯಗ್ನಿಯಿಂದ ಉತ್ಪನ್ನವಾಗುವ **ಕೆಂಡ (ಅಂಗಾರ)** ವೆನಿಸುವುವು.

(೨೦) ಜೀವರಿಗೆ ಮುಖ್ಯಾಪೇಕ್ಷಿತ ಫಲಪ್ರದನಾದಿರುವುದರಿಂದಲೂ, ಮುಖ್ಯ ಆಜ್ಞಾಪಕನಾದ್ದರಿಂದಲೂ ಪರಮಾತ್ಮನಿಗೆ **"ದಿಶಾ"** ಎಂದು ಹೆಸರು.

(೨೧) ಇಂತಹ ದಿಜಕ್‌ಶಬ್ದವಾಚ್ಯನಾದ **ಸಂಕರ್ಷಾಖ್ಯ ಪ್ರದ್ಯುಮ್ನ** ನಾಮಕ ಪರಮಾತ್ಮನೇ ಈ ಚತುರ್ದಿಕ್ಕುಗಳಲ್ಲಿ ವಿದ್ಯಮಾನನಾಗಿ ಮುಖ್ಯ ಅಭಿಮಾನಿಯಾಗಿದ್ದಾನೆ,

(೨೨) ದಿಶಾ ಎಂಬ ಈ ಅಂಗಾರಾಧಿಷ್ಠಾನಕ್ಕೆ **ವ್ಯಾನಾಖ್ಯ ಉದಾನ ನಾಮಕ ವಾಯುದೇವರು** ಅವಾಂತರಾಭಿಮಾನಿಗಳು.

(೨೩) ಆಗ್ನೇಯಾದಿ ವಿದಿಕ್ಕುಗಳೇ **ಅವಾಂತರ ದಿಗ್ವಿಲಯುಗಳು.** ಈ ವಿದಿಕ್ಕುಗಳೇ ಭೂಮ್ಯಗ್ನಿ ಮತ್ತು ಸಂವತ್ಸರಗಳೆಂಬ ಕಾಷ್ಠ ಸಂಯೋಗದಿಂದ ಹೊರಡುವ ಇರುಳು ಎಂಬ ಉರಿಯಿಂದ ಸಿಡಿಯುವ **ಕಿಡಿಗಳು.**

(೨೪) ಅಮುಖ್ಯರಲ್ಲಿ ಆಜ್ಞಾಪನಾಗಿರುವುದರಿಂದಲೂ, ಅವಾಂತರ

ಜ್ಞಾನದರ್ಶಕನಾದ್ದರಿಂದಲೂ ಪರಮಾತ್ಮನಿಗೆ "ಅವಾಂತರ ದಿಶಾ" ಎಂದು ಹೆಸರು. ಇಂತು, ಅವಾಂತರ ದಿಶಾ ಶಬ್ದವಾಚ್ಯನಾದ **ಸಂಕರ್ಷಣಾಖ್ಯ ಅನಿರುದ್ಧನಾಮಕ** ಪರಮಾತ್ಮನು. ಅವಾಂತರ ದಿಗ್ವಿಲಯಗಳೆಂಬ ಕಿಡಿಗಳೆಲ್ಲಿದ್ದು ವಿಸ್ಫುಲಿಂಗವಾಚ್ಯನಾಗಿ ಮುಖ್ಯಾಭಿಮಾನಿಯಾಗಿದ್ದಾನೆ.

(೨೫) ಈ ಕಿಡಿಗಳೆಂಬ ಅಧಿಷ್ಠಾನಕ್ಕೆ **ವ್ಯಾನಾಖ್ಯ ಸಮಾನನಾಮಕ ವಾಯುದೇವರು** ಅವಾಂತರಾಭಿಮಾನಿಗಳು.

**"ಅವಾಂತರಂ ದಿಶತೀತಿ ಅವಾಂತರ ದಿಕ್"**

–ಎಂಬ ಛಾಂದೋಗ್ಯಭಾಷ್ಯದ ವಾಕ್ಯವೇ ಇದಕ್ಕೆ ಪ್ರಮಾಣ.

ಇಂತು, ದೇವತೆಗಳು **ವರ್ಷ**. ಅಂದರೆ ಧಾರಾರೂಪವಾದ ಮಳೆಯಲ್ಲಿ ಜೀವನನ್ನು ಸೇರಿಸಿ, ಪೃಥಿವೀ ಎಂಬ ತೃತೀಯಾಗ್ನಿಯಲ್ಲಿ ಅಂತರ್ಗತ ರೂಪದಿಂದಿರುವ ಸಂಕರ್ಷಣಾಖ್ಯ ಪರಮಾತ್ಮನಲ್ಲಿ ಆಹುತಿಯನ್ನಾಗಿ ಕೊಟ್ಟು ಹೋಮ ಮಾಡುವರು. ಮಳೆಯಿಂದ ಜೀವನು ಭೂಮಿಯನ್ನು ಪ್ರವೇಶಿಸಿ, ವ್ರೀಹ್ಯಾದಿಗಳಲ್ಲಿ ಸೇರಿಕೊಂಡು ಅನ್ನ ರೂಪದಲ್ಲಿರುವನು.

**"ತಸ್ಮಿನ್ ಅಗ್ನೌ ದೇವಾಃ ವರ್ಷಂ ಜುಹ್ವತಿ |**
**ತಸ್ಯಾಹುತೀರನ್ನ ಸಂಭವತಿ" ||**

**-ಛಾಂದೋಗ್ಯೋಪನಿಷತ್ತಿನ ಪ್ರಮಾಣ.**

ಇಂತಹ ಮಹಿಮೋಪೇತನಾದ ಸಂಕರ್ಷಣನಾಮಕ ಪರಮಾತ್ಮನನ್ನು ಒಲಿಸಿಕೊಂಡು, ಅವನ ಅನುಗ್ರಹವನ್ನು ಸಂಪಾದಿಸಿ, ಪೃಥಿವ್ಯಾದಿ ದಿಗ್ವಿಲಯಾಂತ ಅಧಿಷ್ಠಾನಗಳಲ್ಲಿ ಆರು ರೂಪಗಳಿಂದ ವಿದ್ಯಮಾನನಾಗಿರುವ ಯಜ್ಞನಾಮಕ ಪರಮಾತ್ಮನನ್ನು ಧ್ಯಾನಿಸುತ್ತಾ, ಮಹಾಯಜ್ಞವನ್ನು ಮಾಡಿದ ಫಲವನ್ನು ಹೊಂದುವ ಯಜಮಾನನಂತೆ (ಅಧ್ವರಿ) ವಿರಾಜಮಾನನಾಗಿರು ಎಂದು ಪದ್ಯದ ತಾತ್ಪರ್ಯ.

## ಪೃಥವೀ ಎಂಬ ಆಗ್ನಿಯಲ್ಲಿ ಸಂಕರ್ಷಣಾಖ್ಯ ಭಗವದ್ರೂಪಗಳ ವಿವರಗಳ ಪಟ್ಟಿ

| ಕ್ರಮ ಸಂಖ್ಯೆ | ಅಂಗಗಳು | ಅಧಿಷ್ಠಾನ | ಭಗವದ್ರೂಪ | ವಾಯುರೂಪ | ವಿವರಗಳು |
|---|---|---|---|---|---|
| ೧ | ಅಗ್ನಿ | ಭೂಮಿ | ಸಂಕರ್ಷಣ | ವ್ಯಾನ | ಸರ್ವಾಧಾರಕ ಮತ್ತು ಲೋಕ ಪ್ರಖ್ಯಾತನಾದ್ದರಿಂದ "ಪೃಥವೀ" ಶಬ್ದ ವಾಚ್ಯನು |
| ೨ | ಸಮಿಧೆ | ಸಂವತ್ಸರ | ಸಂಕರ್ಷಣ -ನಾರಾಯಣ | ವ್ಯಾನ- -ಪ್ರಾಣ | ಸರ್ವತ್ರ ವ್ಯಾಪ್ತನಾದ್ದರಿಂದ (ಆವಾಸ) "ಸಂವತ್ಸರ" ಶಬ್ದ ವಾಚ್ಯನು. |
| ೩ | ಆಕಾಶ | ಧೂಮ | ಸಂಕರ್ಷಣ ವಾಸುದೇವ | ವ್ಯಾನಾಖ್ಯ ಅಪಾನರೂಪ | ಚೆನ್ನಾಗಿ ಪ್ರಕಾಶಮಾನವಾಗಿರುವುದರಿಂದ "ಆಕಾಶ" ಶಬ್ದ ವಾಚ್ಯನು |

| | | | | | |
|---|---|---|---|---|---|
| ೪ | ರಾತ್ರಿ | ಜ್ವಾಲೆ | -ಸಂಕರ್ಷಣ ಸಂಕರ್ಷಣ | ವ್ಯಾನರೂಪ ವ್ಯಾನಾಖ್ಯ | ರತಿಪ್ರದ (ಸಂತೋಷವನ್ನು ಉಂಟು ಮಾಡುವವನು) ನಾದ್ದರಿಂದ "ರಾತ್ರಿ" ಶಬ್ದವಾಚ್ಯನು. |
| ೫ | ದಿಕ್ಕುಗಳು | ಕೆಂಡ | ಸಂಕರ್ಷಣ -ಪ್ರದ್ಯುಮ್ನ | ವ್ಯಾನಾಖ್ಯ ಉದಾನರೂಪ | ಜೀವರಿಗೆ ಅಪೇಕ್ಷಿತಪ್ರದನೂ, ಮುಖ್ಯ ಆಜ್ಞಾಪಕನೂ ಆದ್ದರಿಂದ "ದಿಶಾ" ಶಬ್ದ ವಾಚ್ಯನು. |
| ೬ | ವಿದಿಕ್ಕುಗಳು | ಕಿಡಿಗಳು | ಸಂಕರ್ಷಣ -ಅನಿರುದ್ಧ | ವ್ಯಾನಾಖ್ಯ ಸಮಾನರೂಪ | ಅವಾಂತರ ಜ್ಞಾನದರ್ಶಕನಾದ್ದರಿಂದ ತಚ್ಛಬ್ದ ವಾಚ್ಯನು |

## ಪದ್ಯ (೫)

**ಮೂಲ :-**

**ಪುರುಷ ಶಿಖಿ ವಾಕ್ಸಮಿಧೆ ಧೂಮವು ।**
**ಕರಣವರ್ಚಿಯು ಜಿಂಹ್ವೆ ಶ್ರೋತ್ರಗ ।**
**ಳೆರೆಡು ಕಿಡಿಗಳು ಲೋಚನಗಳಂಗಾವೆನಿಸುವುವು ॥**
**ನಿರುತ ಭುಂಜಿಸುವನ್ನ ಯದುಕುಲ ।**
**ವರನಿಗವದಾನಗಳು ಎಂದೀ ।**
**ಪರಿ ಸಮರ್ಪಣೆಗೈಯೆ ಕೈಗೊಂಡನುದಿನದಿ ಪೊರೆವ ॥ ॥೫॥**

**ಅವತರಣಿಕೆ :-**

ಪ್ರಸಕ್ತ ಪದ್ಯದಲ್ಲಿ ಚತುರ್ಥಾಗ್ನಿಯಾದ ಪುರುಷಾಗ್ನಿಯ ವಿವರಗಳನ್ನು ತಿಳಿಸುತ್ತಾರೆ. ಪುರುಷನೇ (ಪಿತ) ಅಗ್ನಿ. ಮಾತುಗಳೇ ಸಮಿಧೆಯು. ಇಂದ್ರಿಯಗಳು ಧೂಮವು. ನಾಲಿಗೆಯೇ ಜ್ವಾಲೆಯು. ಎರಡು ಕಿವಿಗಳು ಕಿಡಿಗಳು. ನೇತ್ರದ್ವಯಗಳೇ ಕೆಂಡಗಳು. ಪುರುಷಾಗ್ನಿ ಎಂಬ ಈ ಅಧಿಷ್ಠಾನ ದಲ್ಲಿ ಪ್ರದ್ಯುಮ್ನರೂಪಿ ಪರಮಾತ್ಮನು ವಿದ್ಯಮಾನನಾಗಿದ್ದು ಮುಖ್ಯಾಭಿ ಮಾನಿ ಎನಿಸುವನು. ಉದಾನನಾಮಕ ವಾಯುದೇವರು ಅವಾಂತರಾಭಿಮಾನಿ ಗಳು. ಭೂಮಿಯನ್ನು ಪ್ರವೇಶಿಸಿದ ನಂತರ ವ್ರೀಹ್ಯಾದಿಗಳಲ್ಲಿ ಸೂಕ್ಷ್ಮ ರೂಪದಿಂದ ಸೇರಿರುವ ಜೀವನು ಅನ್ನದ್ವಾರಾ (ಭೋಜನಕ್ರಿಯಾದ್ವಾರಾ) ಪುರುಷನ ರೇತಸ್ಸನ್ನು ಸೇರುವನು. ಈ ಪ್ರಕಾರ ಅನ್ನರೂಪದಿಂದ ಯದು ಕುಲಲಲಾಮನಾದ ಶ್ರೀಕೃಷ್ಣನಿಗೆ ಆಹುತಿಗಳೆಂಬ ಅನುಸಂಧಾನದಿಂದ ಕೊಟ್ಟರೆ, ಹಾಗೆ ಪುರುಷಾಖ್ಯ ಅಗ್ನಿಯಲ್ಲಿ ಅನ್ನದ್ವಾರಾ ಕೊಟ್ಟ ಆಹುತಿ ಯನ್ನು ಶ್ರೀಪರಮಾತ್ಮನು ಆದರದಿಂದ ಸ್ವೀಕರಿಸಿ, ಆ ಯಜ್ಞಫಲವನ್ನು ಕೊಟ್ಟು, ನಿರಂತರದಲ್ಲಿಯೂ ಸಂರಕ್ಷಿಸುವನೆಂದು ಹೇಳುತ್ತಾರೆ. "**ಪುರುಷ ಶಿಖಿ**"–ಎಂಬ ಪ್ರಸಕ್ತ ಸಂಧಿಗತ ೫ನೆಯ ಈ ಪದ್ಯದಿಂದ ॥೫॥

ಪ್ರತಿಪದಾರ್ಥ :—

**ಪುರುಷ**=ಪುರುಷನು (ತಂದೆಯು). **ಶಿಖಿ**=ಅಗ್ನಿಯು. **ವಾಕ್**= ವಾಗಿಂದ್ರಿಯುವೇ (ಅದರಿಂದ ಉಚ್ಚರಿಸತಕ್ಕ ಮಾತುಗಳು) **ಸಮಿಧೆ**= ಕಾಷ್ಠವು. **ಕರಣ**=ನಾಲಿಗೆ, ಕಿವಿ, ಕಣ್ಣು, ವಾಗಿಂದ್ರಿಯ ಇವುಗಳ ವ್ಯತಿರಿಕ್ತ ಇತರ ಇಂದ್ರಿಯಗಳು. (ಪರಣ-ಎಂದು ಕೆಲವು ಪುಸ್ತಕಗಳಲ್ಲಿ ಪಾಠಾಂತರವಿದೆ. ಪರಣ ಎಂದರೆ ಪ್ರಾಣೇಂದ್ರಿಯ ಎಂದರ್ಥ.) **ಧೂಮವು**= ಹೊಗೆ ಎಂದೆನಿಸುವುವು. **ಜಿಂಹ್ವೆ**=ನಾಲಿಗೆಯು. **ಅರ್ಚಿಯು**=ಜ್ವಾಲೆಯು. **ಶೋತ್ರಗಳೆರೆಡು**=ಎರಡು ಕಿವಿಗಳೂ **ಕಿಡಿಗಳು**=ಕಿಡಿಗಳೆಂದೆನಿಸುವುವು. **ಲೋಚನಗಳು**=ಎರಡು ಕಣ್ಣುಗಳು **ಅಂಗಾರವೆನಿಸುವುವು**=ಕೆಂಡಗಳೆಂದು ಕರೆಯಿಸುವುವು. **ನಿರುತ**=ಪ್ರತಿನಿತ್ಯದಲ್ಲಿಯೂ **ಭುಂಜಿಸುವ**=ನಾವು ತಿನ್ನುವ **ಅನ್ನ**=ಆಹಾರರೂಪವಾದ ಅನ್ನವು **ಯದುಕುಲವರನಿಗೆ**=ಯಾದವರ ಕುಲದಲ್ಲಿ ಶ್ರೇಷ್ಠನಾದ ಕೃಷ್ಣರೂಪಿ ಪರಮಾತ್ಮನಿಗೆ **ಅವದಾನಗಳು**= ಸಮರ್ಪಿಸುವ ಆಹುತಿಗಳು **ಎಂದೀಪರಿ**=ಎಂಬ ಅನುಸಂಧಾನಪೂರ್ವಕ ಈ ಕ್ರಮದಲ್ಲಿ **ಅರ್ಪಣೆಗೈಯೆ**=ಅಲ್ಲಿನ ಆಯುಸ್ಸು ದೇಹ ಇವುಗಳನ್ನು ಪುರುಷಾಗ್ನಿಯಲ್ಲಿ ಹೋಮತ್ವೇನ ಕೊಟ್ಟರೆ **ಕೈಗೊಂಡು**=ಆ ಆಹುತಿಯನ್ನು ತಾನು ಸ್ವೀಕರಿಸಿ **ಅನುದಿನದಿ**=ಪ್ರತಿದಿವಸದಲ್ಲಿಯೂ **ಪೊರೆವ**=ಸಂರಕ್ಷಿಸುತ್ತಾನೆ. ॥೫॥

## ವ್ಯಾಖ್ಯಾನಗಳು

### (೧) ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :–

ಚತುರ್ಥಾಗ್ನಿಯಾದ ಪುರುಷಾಗ್ನಿಯಲ್ಲಿ ಹೋಮಕ್ರಮ ಹೇಳುತ್ತಾರೆ. ಈ ಅಗ್ನಿಯಲ್ಲಿ ಉದಾನ ನಾಮಕ ವಾಯುದೇವರು, ಪ್ರದ್ಯುಮ್ನರೂಪಿ ಶ್ರೀಪರಮಾತ್ಮ ಅನುಸಂಧಾನಮಾಡಬೇಕೆಂದು ಹೇಳುತ್ತಾರೆ.

ಪುರುಷಶಿಖಿ–ಪುರುಷ ಎಂಬುವನೇ ಅಗ್ನಿ. ಇವನೇ ತಂದೆ ಎಂತ ಅರ್ಥ. ಇದರಲ್ಲಿ ಉದಾನಾಖ್ಯವಾಯುದೇವರು ಮತ್ತು ಪ್ರದ್ಯುಮ್ನರೂಪಿ ಪರಮಾತ್ಮ ವಾಕ್ಸಮಿಧೆ-ವಾಗಿಂದ್ರಿಯದಿಂದ ಉಚ್ಚರಿಸತಕ್ಕ ಮಾತುಗಳೇ ಕಾಷ್ಠರೂಪ

ಸಮಿತ್ತು. ಇದರಲ್ಲಿ ಉದಾನನಾಮಕ ಪ್ರಾಣವಾಯುದೇವರು ಮತ್ತು ಪ್ರದ್ಯುಮ್ನಾಖ್ಯ ನಾರಾಯಣ. ಧೂಮವು ಕಿರಣ–ಹೊಗೆ ಎನತಕ್ಕದೇ ಇಂದ್ರಿಯಗಳು. ಜಿಹ್ವೆ, ಶ್ರೋತ್ರ, ಲೋಚನ, ವಾಗಿಂದ್ರಿಯ ಇವುಗಳ ವ್ಯತಿರಿಕ್ತ ತ್ವಗಿಂದ್ರಿಯ, ಪಾಣಿ ಪಾದಗಳು ಇವು ಧೂಮಸ್ಥಾನಾಪನ್ನಗಳು. ಇದರಲ್ಲಿ ಉದಾನಾಖ್ಯ ವ್ಯಾನ ವಾಯುದೇವರು. ಪ್ರದ್ಯುಮ್ನ ವಾಸುದೇವ ಅರ್ಚಿಯು. ಜಿಂಹ್ವೆ–ಉರಿಎನತಕ್ಕದೇ ನಾಲಿಗೆ. ಇದರಲ್ಲಿ ಉದಾನಾಖ್ಯ ಉದಾನವಾಯುದೇವರು. ಪ್ರದ್ಯುಮ್ನಾಖ್ಯ ಪ್ರದ್ಯುಮ್ನ. ಲೋಚನಗಳಂಗಾರ-ಎರಡು ಕಣ್ಣುಗಳು ಬೆಂಕಿ ಕೆಂಡಗಳು. ಇದರಲ್ಲಿ ಉದಾನಾಖ್ಯ ಸಮಾನವಾಯುದೇವರು. ಪ್ರದ್ಯುಮ್ನ ಅನಿರುದ್ಧ. ಎನಿಸುವುವು-ಪೂರ್ವೋಕ್ತಗಳು ಈ ಪ್ರಕಾರ ಎನಿಸೋದಾಗತವೆ. ನಿರುತ ಭುಂಜಿಸುವನ್ನ-ನಿರುತ ಭೋಜನಮಾಡತಕ್ಕ ಅನ್ನ ಎಂದರೆ ವ್ರೀಹ್ಯಾದಿಗಳಲ್ಲಿ ಪ್ರವೇಶಮಾಡಿದ ಜೀವ ಪುರುಷನ ಉದರ ಪ್ರವೇಶವಾಗಬೇಕಾದರೆ, ಭಕ್ಷಣ ಪದಾರ್ಥ ದ್ವಾರಾ ಉದರ ಪ್ರವೇಶಮಾಡಬೇಕು. ಭಕ್ಷಣಕ್ಕೆ ಯೋಗ್ಯವಾದ ಪದಾರ್ಥಗಳಲ್ಲಿ ದಾವ ಪದಾರ್ಥ ಆಶ್ರಯಿಸಿ ಇರುತ್ತಾನೋ ತಿಳಿಯದು. ಆದ್ದರಿಂದ ತನ್ನ ತಂದೆ ನಿರಂತರ ಭೋಜನಮಾಡಿದ ಪದಾರ್ಥಗಳ ಅನುಸಂಧಾನದಿಂದ ಯದುಕುಲವರನಿಗೆ–ಶ್ರೀಕೃಷ್ಣರೂಪಿ ಪರಮಾತ್ಮನಿಗೆ ಅವದಾನಗಳು ಎಂದು–ಆಹುತಿಗಳು ಎಂತ ಈ ಪರಿ ಸಮರ್ಪಣೆ ಗೈಯೆ-ಈ ಪ್ರಕಾರ ಅನುಸಂಧಾನದಿಂದ ಸಮರ್ಪಣೆ ಮಾಡಿದರೆ, ಪುರುಷಾಖ್ಯ ಅಗ್ನಿಯಲ್ಲಿ ಅನ್ನದ್ವಾರಾ ಆಹುತಿ ಕೊಟ್ಟಂತೆ ಆಯಿತು. ತನ್ನ ಪಿತನ ಉದರ ಪ್ರವೇಶವಾಗಿ ಅಲ್ಲಿ ಕೆಲವು ಕಾಲ ಇರುತ್ತಾನೆ. ಆದ್ದರಿಂದ ಅಲ್ಲಿನ ಆಯಸ್ಸು, ಅಲ್ಲಿನ ದೇಹ, ಪುರುಷಾಖ್ಯ ಅಗ್ನಿಯಲ್ಲಿ ಹೋಮತ್ವೇನ ಅರ್ಪಿಸಿದರೆ, ಕೈಕೊಂಡು-ಇಂಥಾ ಅನುಸಂಧಾನ ಯಜ್ಞವನ್ನು ಸ್ವೀಕಾರಮಾಡಿ, ಅನುದಿನದಿ ಪೊರೆವ-ಅರ್ಪಿಸತಕ್ಕ ಅಧಿಕಾರಿಯನ್ನು ದೇವರು ಸಂರಕ್ಷಣೆ ಮಾಡುತ್ತಾನೆ ಎಂತ ತಾತ್ಪರ್ಯ. ॥೫॥

(೩) "ಭಾವಪ್ರಕಾಶಿಕೆ"-ವ್ಯಾಖ್ಯಾನ :-

ಪುರುಷಾಗ್ನಿಯ ಲಕ್ಷಣವನ್ನು ಹೇಳುತ್ತಾರೆ.

**"ಪುರುತ್ವಾತ್ಪೂರ್ಣತ್ವಾತ್ಪುರುಷ ನಾಮಾ"**— ಎಂಬ ವಾಕ್ಯದಂತೆ

ಅನಂತನಾದುದರಿಂದಲೂ, ಪೂರ್ಣನಾದುದರಿಂದಲೂ "ಪುರುಷ" ನೆಂದು ಪರಮಾತ್ಮನಿಗೆ ಹೆಸರು. ಈ ಪುರುಷನಲ್ಲಿರುವ ಪ್ರದ್ಯುಮ್ನರೂಪಿಯು ಅಗ್ನಿಯು.

**"ತಸ್ಯಪುಂಗತಸ್ಯ ಪ್ರದ್ಯುಮ್ನಸ್ಯ ವಕ್ತೃತ್ವಾದ್ವಾಕ್‌ನಾಮಾವಾಚಿಸ್ಥಿತಃ ಪ್ರದ್ಯುಮ್ನ ನಾರಾಯಣಾತ್ಮ ಸಮಿತ್"**-ಎಂಬ ಪ್ರಮಾಣ ರೀತ್ಯಾ ಎಲ್ಲರಲ್ಲಿಯೂ ಇದ್ದು, ಮಾತನಾಡುವವನಾದ್ದರಿಂದ "ವಾಕ್"-ಎಂದು ಪರಮಾತ್ಮನಿಗೆ ಹೆಸರು. ಈ ಪುರುಷನಾಮಕನಾದ ಪ್ರದ್ಯುಮ್ನರೂಪಿ ಅಗ್ನಿಗೆ ವಾಕ್ಯಸ್ಥಿತ ಪ್ರದ್ಯುಮ್ನ ನಾರಾಯಣನು ಕಾಷ್ಠನು. ಚಲನಮಾಡಿಸುವುದರಿಂದ ಪ್ರಾಣನಾಮಕನು. ಈ ಪ್ರಾಣಸ್ಥ ಪ್ರದ್ಯುಮ್ನ ವಾಸುದೇವ ಸ್ವರೂಪನು ಹೊಗೆಯು.

**"ಹೂಯತೇ ಅದ್ಯತೇ ಅಶನೇತಿ ಜಿಹ್ವಾನಾಮಾ ಜಿಹ್ವಾಗತ ಪ್ರದ್ಯುಮ್ನ ಸಂಕರ್ಷಣಾತ್ಮಾ ಅರ್ಚಿಃ"**

–ಎಂಬಂತೆ, ಹೋಮಮಾಡಿಸಿಕೊಳ್ಳಲ್ಪಡುವವನೂ, ಭಕ್ಷಿಸುವವನೂ ಆದುದರಿಂದ ಜಿಹ್ವಾನಾಮಕನು ಹರಿಯು. ನಾಲಿಗೆಯಲ್ಲಿರುವ ಪ್ರದ್ಯುಮ್ನ ಸಂಕರ್ಷಣ ರೂಪವೇ ಜ್ವಾಲೆಯು.

**"ಚಷ್ಟೇ ಪಶ್ಯತಿ ಸರ್ವಮಿತಿ ಚಕ್ಷುರ್ನಾಮಾ ಚಕ್ಷುಸ್ಥ ಪ್ರದ್ಯುಮ್ನ ಪ್ರದ್ಯುಮ್ನಾತ್ಮಾ ಅಂಗಾರಾಃ"**

-ಎಂಬ ವಾಕ್ಯರೀತ್ಯಾ ಸರ್ವವನ್ನು ಕಣ್ಣಲ್ಲಿಟ್ಟು ನೋಡುವವನಾದ್ದರಿಂದ "ಚಕ್ಷುಸ್"- ಎಂದು ಪರಮಾತ್ಮನಿಗೆ ಹೆಸರು. ಕಣ್ಣುಗಳೊಳಗಿರುವವನು ಪ್ರದ್ಯುಮ್ನ ಕೆಂಡಗಳು. ಕೇಳುವುದರಿಂದ ಪರಮಾತ್ಮನಿಗೆ "ಶ್ರೋತ್ರ" ನೆಂದು ಹೆಸರು. ಕಿವಿಗಳಲ್ಲಿರುವ ಪ್ರದ್ಯುಮ್ನಾನಿರುದ್ಧ ರೂಪವು ಕಿಡಿಗಳು. ಇಂತಹ ಪುರುಷನಾಮಕ ಪ್ರದ್ಯುಮ್ನಾಗ್ನಿಯಲ್ಲಿ ನಾರಾಯಣಾದಿ ೫ ರೂಪಗಳನ್ನು ತಿಳಿದು, ಷಡ್ರೂಪಿಯಾದ ಯದುಕುಲೋತ್ತಮನಾದ ಶ್ರೀಪರಮಾತ್ಮನ ಉದ್ದೇಶ್ಯವಾಗಿ ಪ್ರತಿದಿವಸವೂ ನಾವು ಭುಂಜಿಸುವ ಅನ್ನವೇ ಆಹುತಿಗಳೆಂದು ಸಮರ್ಪಣೆ ಮಾಡಿದರೆ ಸ್ವೀಕರಿಸಿ, ಉತ್ತಮ ಗತಿಯನ್ನಿತ್ತು ರಕ್ಷಿಸುವನು.

"ಪುರುಷ್ಯೋವಾವ ಗೌತಮಾಗ್ನಿಸ್ತಸ್ಯ ವಾಗೇವ ಸಮಿತ್"

-ಇತ್ಯಾದಿ ಉಪನಿಷದ್ವಾಕ್ಯಗಳೇ ಇವುಗಳಿಗೆ ಆಧಾರವು. ಉಪನಿಷದ್ವಾಕ್ಯವನ್ನೂ ಉಪನಿಷತ್ತಿನ ಖಂಡಾರ್ಥವನ್ನೂ ಅನುಸರಿಸಿ, ಈ ಪದ್ಯಗಳಿಗೆ ಅರ್ಥವು ಬರೆಯಲ್ಪಟ್ಟಿದೆ. ॥೫॥

(೨) "ಭಾವದರ್ಪಣಟೀಕಾ" ವ್ಯಾಖ್ಯಾನ:—

ಈಗ ಚತುರ್ಥಾಗ್ನಿಕ್ರಮ ಹೇಳುತ್ತದೆ :—

**"ಓಂ ಪುರುಷೋವಾವ ಗೌತಮಾಗ್ನಿಸ್ತಸ್ಯ ವಾಗೇವ ಸಮಿಧೋ ಪ್ರಾಣೋ ಧೂಮಃ ಜಿಹ್ವಾರ್ಚಿಃ ಚಕ್ಷುರಂಗಾರಃ ಶ್ರೋತ್ರ ವಿಸ್ಫುಲಿಂಗಾಃ ತಸ್ಮಿನ್ ತಸ್ಮಿನ್ನಗ್ನೌ ದೇವಾಃ ಅನ್ನಂ ಜುಹ್ವತಿ। ತಸ್ಯಾಹುತೇಃ ರೇತಸ್ಸಂಭವತಿ ॥"**

—ಎಂಬ ಛಾಂದೋಗ್ಯೋಪನಿಷದ್ವಾಕ್ಯವನ್ನು ವಿವರ ಮಾಡುತ್ತಾರೆ- "ಪುರುಷೇತಿ"॥ ಪುರುಷ ಶಿಖಿ ಅಂದರೆ, ಅಗ್ನಿ. ವಾಕ್ಯವೇ ಸಮಿತ್ತು. ಉಪಕರಣಗಳೇ ಧೂಮ. ಜಿಂಹ್ವೆಯೇ ಅರ್ಚಿ. ಕಿವಿಗಳೇ ಕಿಡಿಗಳು. ನೇತ್ರಗಳೇ ಕೆಂಡ. ಹೀಗೆ ಯಜ್ಞಸಾಮಗ್ರಿ ತಿಳಿದು, ನಿರಂತರ ಭೋಜನಮಾಡತಕ್ಕ ಅನ್ನವೇ ಆಹುತಿ ಕೊಟ್ಟರೆ ಸ್ವೀಕಾರಮಾಡಿ, ನಿನ್ನನ್ನು ಸಂರಕ್ಷಿಸುವನೆಂದು ತಾತ್ಪರ್ಯ. ॥೫॥

(೪) ಶ್ರೀ ವ್ಯಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ):—

"ಪುರುಷೇತಿ"॥ ಪುರುಷೋವಾವ ಗೌತಮ ಅಗ್ನಿಃ॥ತಸ್ಯವಾಗೇವ ಸಮಿತ್ ಪ್ರಾಣೋ ಧೂಮಃ ॥ ಜಿಹ್ವಾ ಅರ್ಚಿಃ॥ ಚಕ್ಷುರಂಗಾರಾಃ ॥ ಶ್ರೋತ್ರಂ ವಿಸ್ಫುಲಿಂಗಾಃ ॥ ತಸ್ಮಿನ್ ಏತಸ್ಮಿನ್ ಅಗ್ನೌ ದೇವಾಃ ಅನ್ನಂ ಜುಹ್ವತಿ ॥ ತಸ್ಯಾಃ ಆಹುತೇಃ ರೇತಃ ಸಂಭವತಿ ॥ ಶಬ್ದಪಂಚಕಂ ಟಿಪ್ಪಿಕೇ (ಟಿಟಿಕೇ)ಅಲವಬೋಧವರ್ಯಃ ॥ ವಚನಾತ್ ವಾಕ್ ತಥಾ ಪ್ರಾಣಃ ತ್ವನನಾತ್ ಚಕ್ಷುಃ

ಉಚ್ಯತೇ ॥ ದರ್ಶನಾತ್ ಶ್ರವಣಾತ್ ಶ್ರೋತ್ರಂ ಜಿಹ್ವಾವೈ ಹೋಮತಃ ಸ್ಮೃತಃ ॥ ॥೫॥

**ಕನ್ನಡಾರ್ಥ :—**

ಪೂರ್ಣನಾದುದರಿಂದ ಶ್ರೀ ಪರಮಾತ್ಮನು "ಪುರುಷ" ಶಬ್ದವಾಚ್ಯನು. ಪುರುಷನಲ್ಲಿರುವ ಪ್ರದ್ಯುಮ್ನನು ಹೋಮಾಧಾರನು (ಅಗ್ನಿಯು). ಈ ಪುರುಷಾಗ್ನಿಗೆ ಮಾತನಾಡುವ ಶಕ್ತಿ ಇದೆ. ಇದರಿಂದ "ವಾಕ್"ಶಬ್ದವಾಚ್ಯನು. ಅಂತಹ ವಾಕ್‌ನಲ್ಲಿರುವ ಪ್ರದ್ಯುಮ್ನ ನಾರಾಯಣನು ಸಮಿಧೆ (ಕಾಷ್ಠ) ಎನಿಸುತ್ತಾನೆ. ಚೇಷ್ಟಾ (ಕ್ರಿಯಾ) ಪ್ರವರ್ತಕನಾದ್ದರಿಂದ "ಪ್ರಾಣ" ಶಬ್ದವಾಚ್ಯನು. ಪ್ರಾಣದಲ್ಲಿರುವ ಪ್ರದ್ಯುಮ್ನ ವಾಸುದೇವನು "ಧೂಮ" ನೆನಿಸುತ್ತಾನೆ. ಕರೆಯುವುದರಿಂದಲೂ (ಸಂಬೋಧನಾಕ್ರಿಯೆ) ಮತ್ತು ತಿನ್ನುವುದಕ್ಕೆ ಮುಖ್ಯ ಕಾರಣನಾದ್ದರಿಂದ "ಜಿಹ್ವಾ" ಶಬ್ದವಾಚ್ಯನು. ಜಿಹ್ವೆಯಲ್ಲಿರುವ ಪ್ರದ್ಯುಮ್ನ ಸಂಕರ್ಷಣನು "ಅರ್ಚಿ" (ಜ್ವಾಲೆ) ಎಂದೆನಿಸುತ್ತಾನೆ. ಸರ್ವವನ್ನು ನೋಡುವನಾದ್ದರಿಂದ "ಚಕ್ಷುಃ" ಶಬ್ದವಾಚ್ಯನಾದ ಚಕ್ಷುಸ್ಸಿನಲ್ಲಿರುವ ಪ್ರದ್ಯುಮ್ನ ಪ್ರದ್ಯುಮ್ನನು "ಅಂಗಾರ" (ಕೆಂಡ) ಎನಿಸುವನು. ಸರ್ವವನ್ನು ಕೇಳುವುದರಿಂದ "ಶ್ರೋತ್ರ" ಶಬ್ದವಾಚ್ಯನಾದ ಪ್ರದ್ಯುಮ್ನಾನಿರುದ್ಧನು ಕಿಡಿ (ವಿಸ್ಫುಲಿಂಗ) ಎನಿಸುವನು. ನಾರಾಯಣಾದಿ ರೂಪಗಳಿಂದ ಪುರುಷನ ವಾಕ್ ಮುಂತಾದುವುಗಳಲ್ಲಿರುವ ಪ್ರದ್ಯುಮ್ನನೆಂಬ ಪುರುಷಗತ ಅಗ್ನಿಯಲ್ಲಿ ಅನ್ನ (ತಿನ್ನುವ ವಸ್ತು)ದಲ್ಲಿರುವ ಜೀವನನ್ನು ಹೋಮಿಸುವರು. ಈ ಆಹುತಿಯಿಂದ ಪುರುಷಸ್ಥಾನದಿಂದ ದೇವತೆಗಳು ಜೀವನನ್ನು ರೇತಸ್ಸಿನಲ್ಲಿ ಸ್ಥಾಪಿಸುತ್ತಾರೆ. ವಾಕ್–ಪ್ರಾಣ, ಜಿಹ್ವಾ, ಚಕ್ಷು, ಶ್ರೋತ್ರ–ಈ ಶಬ್ದಗಳಿಗೆ ಶ್ರೀಪೂರ್ಣಪ್ರಜ್ಞ ಗುರುವರ್ಯರು ವ್ಯಾಖ್ಯಾನವನ್ನು ಭಾಷ್ಯದಲ್ಲಿ ಮಾಡಿರುತ್ತಾರೆ. ಅದರಂತೆ ಈ ಉಪನಿಷತ್ಪದಗಳ ಅರ್ಥ ತಿಳಿಯಬೇಕು. ॥೫॥

**(೫) "ಗುರುಹೃದಯಪ್ರಕಾಶಿಕೆ"–ವ್ಯಾಖ್ಯಾನ :-**

ಪುರುಷನೆಂಬ ತಂದೆಯಲ್ಲಿ ತಚ್ಛಬ್ದವಾಚ್ಯದೇವರು ಶಿಖಿ ಎಂಬ ಅಗ್ನಿ

ಎಂದು ತಿಳಿದು, ವಚನದಲ್ಲಿದ್ದು ತಚ್ಛಬ್ದವಾಚ್ಯ ಹರಿಯು ಪುರುಷಾಗ್ನಿಗೆ ಸಮಿತ್ತೆಂದು ತಿಳಿದು, ಚೇಷ್ಟಾಪ್ರದನಾದ್ದರಿಂದ ಪ್ರಾಣಶಬ್ದವಾಚ್ಯ ಸ್ವಾಮಿಯು ಜ್ಞಾನ ಕರ್ಮೇಂದ್ರಿಯಗಳೆಂಬ ಕರಣಗಳಲ್ಲಿದ್ದು, ಪುರುಷಾಗ್ನಿಗೆ ಧೂಮನೆನಿಸುವನು. ಹೋಮಕ್ಕೆ ಮುಖ್ಯ ಕರ್ತನಾದ್ದರಿಂದ ಜಿಹ್ವಾ ಶಬ್ದವಾಚ್ಯ ದೇವರು ನಾಲಿಗೆಯಲ್ಲಿದ್ದು, ಪುರುಷಾಗ್ನಿಗೆ ಜ್ವಾಲೆಯಾಗಿರುವನೆಂದು ತಿಳಿದು, ಮುಖ್ಯ ಶ್ರವಣಕರ್ತನಾದ್ದರಿಂದ, ಶ್ರೋತ್ರ ಶಬ್ದವಾಚ್ಯ ದೇವರು, ಕಿವಿಯಲ್ಲಿದ್ದು, ಪುರುಷಾಗ್ನಿಗೆ ಕಿಡಿಗಳೆನಿಸುವನು ಎಂದು ಭಾವಿಸಿ, ದರ್ಶನಶಕ್ತಿಪ್ರದನಾದ್ದರಿಂದ ಲೋಚನ ಶಬ್ದವಾಚ್ಯ ದೇವರು ಕಣ್ಣುಗಳಲ್ಲಿದ್ದು, ಪುರುಷಾಗ್ನಿಗೆ ಕೆಂಡಗಳೆಂದು ಕರೆಸುವನೆಂದು ಚಿಂತಿಸಿ, ನಿತ್ಯದಲ್ಲೂ ಭೋಜನಮಾಡುವ ಅನ್ನವನ್ನು ದೇವರಿಗೆ ಅವದಾನವೆಂಬ ಆಹುತಿಯೆಂದು ಸಮರ್ಪಿಸುವ ದೇವತೆಗಳಿಂದ ಅಂಗೀಕರಿಸಿ, ಅನುಗ್ರಹಿಸಿ, ರಕ್ಷಿಸುವವನೆಂದು ಭಾವಿಸಬೇಕೆಂದರ್ಥ.

## ಪ್ರಮಾಣ ಶ್ರುತಿ

(೧) ಛಾಂದೋಗ್ಯೋಪನಿಷತ್ತು :—

"ಪುರುಷೋವಾವಗೌತಮಾಗ್ನಿಸ್ತಸ್ಯವಾಗೇವ ಸಮಿತ್
ಪ್ರಾಣೋ ಧೂಮೋ ।
ಜಿಹ್ವಾರ್ಚಿಶ್ಚಕ್ಷುರಂಗಾರೋ । ಶ್ರೋತ್ರಂ ಸ್ಫುಲಿಂಗಾಸ್ತಸ್ಮಿನ್ನೇ
ತಸ್ಮಿನ್ನಗ್ನೌದೇವಾಃ ಅನ್ನಂ ಜುಹ್ವತಿ ॥
ತಸ್ಯಾಹುತೇರ್ರೇತಸ್ಸಂಭವತಿ" ॥

(೨) ಛಾಂದೋಗ್ಯಭಾಷ್ಯ : —

ವಚನಾದ್ವಾಕ್ತಥಾ ಪ್ರಾಣಸ್ತ್ವಶನಾಚ್ಚಕ್ಷುರುಚ್ಯತೇ ।
ದರ್ಶನಾತ್ ।
ಶ್ರವಣಾಚ್ಛ್ರೋತ್ರಂ ಜಿಹ್ವಾನ್ಯೇ ಹೋಮ ತಸ್ಸ್ಮೃತಃ ॥

ಇತ್ಯಾರ್ಥವು ಇದರಿಂದ ಹೇಳಲ್ಪಟ್ಟವು.

# ಸರ್ವವ್ಯಾಖ್ಯಾನಸಾರಸಂಗ್ರಹ

ಪಂಚಾಗ್ನಿಗಳ ಪೈಕಿ, ಚತುರ್ಥಾಗ್ನಿಯಾದ ಪುರುಷಾಗ್ನಿಯ ವಿವರಗಳನ್ನು ತಿಳಿಸುತ್ತಾರೆ ಪ್ರಸಕ್ತ ಪದ್ಯದಿಂದ.

(೧) ಪುರುಷ ಎಂದರೆ ತಂದೆಯೇ ಅಗ್ನಿಯು.

(೨) ಅನಂತನಾದುದರಿಂದಲೂ, ಪೂರ್ಣನಾದುದರಿಂದಲೂ ಪರಮಾತ್ಮನಿಗೆ "**ಪುರುಷ**" ಎಂದು ಹೆಸರು.

"**ಪುರುತ್ವಾತ್ಪೂರ್ಣತ್ವಾತ್ಪುರುಷ ನಾಮಕಾ**"-ಎಂಬ ಉಪನಿಷದ್ವಾಕ್ಯವೇ ಇದಕ್ಕೆ ಪ್ರಮಾಣವು.

(೩) ಪುರುಷ ಶಬ್ದವಾಚ್ಯನಾದ **ಪ್ರದ್ಯುಮ್ನ** ರೂಪಿ ಪರಮಾತ್ಮನೇ ಈ ಪುರುಷಾಗ್ನಿಗೆ ಮುಖ್ಯಾಭಿಮಾನಿಯು.

(೪) ಈ ಪುರುಷಾಗ್ನಿಗೆ **ಉದಾನ** ನಾಮಕ ವಾಯುದೇವರು ಅವಾಂತರಾಭಿಮಾನಿಗಳು.

(೫) ಜೀವನು ಮೇಘಮಂಡಲದಿಂದ ಭೂಮಿಯನ್ನು ಸೇರಿ ತನ್ಮೂಲಕ ವ್ರೀಹ್ಯಾದಿಗಳಲ್ಲಿದ್ದು, ಅನ್ನದ್ವಾರಾ ಅಂದರೆ, ಭೋಜನ ಕ್ರಿಯಾದ್ವಾರಾ ಪುರುಷನ ರೇತಸ್ಸನ್ನು ಸೇರುವನು,

**"ತಸ್ಮಿನ್ನಗ್ನೌ ದೇವಾಃ ಅನ್ನಂ ಜುಹ್ವತಿ ।**
**ತಸ್ಯಾಹುತೇರ್ರೇತಸ್ಸಂಭವತಿ" ।**

-ಎಂಬ **ಛಾಂದೋಗ್ಯೋಪನಿಷತ್ತಿನ ವಾಕ್ಯರೀತ್ಯಾ** ದೇವತೆಗಳು ಪ್ರದ್ಯುಮ್ನನೆಂಬ ಪುರುಷಗತ ಅಗ್ನಿಯಲ್ಲಿ ಅನ್ನದಲ್ಲಿರುವ ಜೀವನನ್ನು ಹೋಮಿಸುವರು. ಆ ಆಹುತಿಯಿಂದ ಪುರುಷಸ್ಥಾನದಿಂದ ದೇವತೆಗಳು ಜೀವನನ್ನು ತಂದೆಯ ರೇತಸ್ಸಿನಲ್ಲಿ ಸ್ಥಾಪಿಸುತ್ತಾರೆ.

(೬) ವಾಗಿಂದ್ರಿಯವೇ ಅಂದರೆ, ವಾಗಿಂದ್ರಿಯದಿಂದ ಉಚ್ಚರಿಸತಕ್ಕ ಮಾತುಗಳೇ ಸಮಿಧೆಯು. (ಕಾಷ್ಠ).

(೭) ಸರ್ವರಲ್ಲಿಯೂ ಇದ್ದು ಮಾತನಾಡುವನಾದ್ದರಿಂದ ಪರಮಾತ್ಮ ನಿಗೆ "**ವಾಕ್**" ಎಂದು ಹೆಸರು.

(೮) ಹೀಗೆ **ವಾಕ್**ಶಬ್ದವಾಚ್ಯನಾದ **ಪ್ರದ್ಯುಮ್ನಾಖ್ಯ** ನಾರಾಯಣ ರೂಪಿ ಪರಮಾತ್ಮನು ವಾಕ್‌ನಲ್ಲಿದ್ದು ಪುರುಷಾಗ್ನಿಗೆ ಸಮಿತ್ತೆನಿಸುವನು.

**"ತಸ್ಯ ಪುಂಗತಸ್ಯ ಪ್ರದ್ಯುಮ್ನಸ್ಯ ವಕ್ತೃತ್ವಾದ್ವಾಕ್‌ನಾಮಾ ವಾಚಿ ಸ್ಥಿತಃ ಪ್ರದ್ಯುಮ್ನನಾರಾಯಣಾತ್ಮಾ ಸಮಿತ್"**-ಎಂಬ ಪ್ರಮಾಣಾ ನುಸಾರ ಪುರುಷನೆಂಬ ತಂದೆಯಲ್ಲಿರುವ ಪ್ರದ್ಯುಮ್ನನು ವಾಕ್‌ಶಕ್ತಿ ಉಳ್ಳವ ನಾದ್ದರಿಂದ ವಾಕ್ ನಾಮಕನಾಗಿ ವಾಗಿಂದ್ರಿಯದಲ್ಲಿದ್ದು ಪ್ರದ್ಯುಮ್ನ ನಾರಾ ಯಣನು ಸಮಿತ್ತೆಂದು ಕರೆಯಿಸುತ್ತಾನೆ.-ಎಂಬುದೇ ಈ ಪ್ರಮಾಣದ ಭಾವಾ ರ್ಥವು.

(೯) ಪುರುಷಾಗ್ನಿಯಲ್ಲಿ ಹಾಕತಕ್ಕ ವಾಕ್ ಎಂಬ ಸಮಿಧೆಗೆ **ಉದಾ ನಾಖ್ಯ ಪ್ರಾಣವಾಯುವು** ಅವಾಂತರಾಭಿಮಾನಿಯು.

(೧೦) ಚೇಷ್ಟಾ (ಕ್ರಿಯಾ) ಪ್ರವರ್ತಕನಾಗಿರುವುದರಿಂದ ಪರಮಾತ್ಮ ನಿಗೆ "**ಪ್ರಾಣ**" ಎಂದು ಹೆಸರು.

(೧೧) ಈ ಪ್ರಾಣನಾಮಕ **ಪ್ರದ್ಯುಮ್ನ ವಾಸುದೇವ** ರೂಪವೇ ಅಗ್ನಿ ಮತ್ತು ಕಾಷ್ಠಗಳ ಸಂಬಂಧದಿಂದ ಉತ್ಪತ್ತಿಯಾಗುವ **ಧೂಮವು**. ಈ ಪ್ರಾಣವನ್ನೇ **ಕರಣಗಳು** ಎಂದು ದಾಸರಾಯರು ತಿಳಿಸಿರುತ್ತಾರೆ.

(೧೨) ಈ ಧೂಮವೆಂಬ ಅಧಿಷ್ಠಾನಕ್ಕೆ **ಉದಾನಾಖ್ಯ** ಅಪಾನ **ವಾಯುದೇವರು** ಅವಾಂತರಾಭಿಮಾನಿಗಳು.

(೧೩) ಹೋಮಾಧಾರನೂ ಮತ್ತು ಭಕ್ಷಿಸುವವನೂ ಆಗಿರುವುದರಿಂದ ಪರಮಾತ್ಮನಿಗೆ "**ಜಿಂಹ್ವೆ**" ಎಂದು ಹೆಸರು. ನಾಲಿಗೆಯೇ ಅಗ್ನಿ ಮತ್ತು ಕಾಷ್ಠಗಳ ಸಂಯೋಗದಿಂದ ಮೇಲಕ್ಕೆ ಏಳುವ ಜ್ವಾಲೆ ಎನಿಸುವುದು.

(೧೪) ಜಿಹ್ವಾಶಬ್ದವಾಚ್ಯನಾದ **ಪ್ರದ್ಯುಮ್ನಾಖ್ಯ ಸಂಕರ್ಷಣನು** ನಾಲಿಗೆಯಲ್ಲಿದ್ದು, **ಅರ್ಚಿ** (ಜ್ವಾಲೆ ಅಥವಾ ಉರಿ) ಎನಿಸುವನು.

**"ಹೊಯತೇ ಆದ್ಯತೇ ಅಶನೇತಿ ಜಿಹ್ವಾನಾಮಾ ಜಿಹ್ವಾಗತ ಪ್ರದ್ಯುಮ್ನ ಸಂಕರ್ಷಣಾತ್ಮಾ"**-ಎಂಬ ವಾಕ್ಯವೇ ಇದಕ್ಕೆ ಆಧಾರವು.

(೧೫) ನಾಲಿಗೆ ಎಂಬ ಜ್ವಾಲೆಗೆ **ಉದಾನಾಖ್ಯ ವ್ಯಾನವಾಯು ದೇವರು** ಅವಾಂತರಾಭಿಮಾನಿಗಳು.

(೧೬) ಎರಡು ಕಿವಿಗಳು ಕಿಡಿಗಳೆನಿಸುವುವು.

(೧೭) ಸರ್ವವನ್ನು ಕೇಳುವನಾದ್ದರಿಂದ ಪರಮಾತ್ಮನಿಗೆ **"ಶ್ರೋತ್ರ"** ಎಂದು ಹೆಸರು.

(೧೮) ಶ್ರೋತ್ರಶಬ್ದವಾಚ್ಯನಾದ **ಪ್ರದ್ಯುಮ್ನಾಖ್ಯಅನಿರುದ್ಧ** ರೂಪಿ ಪರಮಾತ್ಮನು ಕಿವಿಗಳಲ್ಲಿದ್ದು, **ವಿಸ್ಫುಲಿಂಗ** (ಕಿಡಿಗಳು) ಎನಿಸುವನು,

**"ಶ್ರೋತ್ರಂ ಸ್ಫುಲಿಂಗಾತ್"**ಎಂಬ ಛಾಂದೋಗ್ಯೋಪನಿಷತ್ತು ಇದಕ್ಕೆ ಪ್ರಮಾಣವು.

(೧೯) ಈ ಅಧಿಷ್ಠಾನಕ್ಕೆ **ಉದಾನಾಖ್ಯ ಸಮಾನ ವಾಯುದೇವರು** ಅವಾಂತರಾಭಿಮಾನಿಗಳು.

(೨೦) ಎರಡು ಕಣ್ಣುಗಳು ಕೆಂಡಗಳೆನಿಸುವುವು.

(೨೧) ದರ್ಶನಶಕ್ತಿಪ್ರದನಾದ್ದರಿಂದ ಪರಮಾತ್ಮನಿಗೆ **"ಚಕ್ಷುಸ್"** ಎಂದು ಹೆಸರು.

(೨೨) ಹೀಗೆ ಚಕ್ಷುಶಬ್ದವಾಚ್ಯನಾದ **ಪ್ರದುಮ್ನಾಖ್ಯ ಪ್ರದ್ಯುಮ್ನ** ಪರಮಾತ್ಮನು ಕಣ್ಣುಗಳಲ್ಲಿದ್ದು **ಅಂಗಾರ** (ಬೆಂಕಿಯ ಕೆಂಡ) ಎಂದೆನಿಸುವನು.

**"ಚಷ್ಟೇ ಪಶ್ಯತಿ ಸರ್ವಮಿತಿ ಚಕ್ಷುರ್ನಾಮಾ ಚಕ್ಷುಸ್ಥ ಪ್ರದ್ಯುಮ್ನ ಪ್ರದ್ಯುಮ್ನಾತ್ಮಾ ಅಂಗಾರಾಃ"**- ಎಂಬುದೇ ಇದಕ್ಕೆ ಆಧಾರವು.

(೨೩) ಇದಕ್ಕೆ **ಉದಾನಾಖ್ಯ ಉದಾನವಾಯುದೇವರು** ಅವಾಂತರಾಭಿಮಾನಿಗಳು.

ಈ ರೀತಿಯಲ್ಲಿ ಪ್ರದ್ಯುಮ್ನಾಖ್ಯ ಆರು ರೂಪಗಳನ್ನು ಪುರುಷಾಗ್ನಿ ಮತ್ತು ತತ್ಸಂಬಂಧವಾದ ಯಜ್ಞೋಪಕರಣಗಳಲ್ಲಿ ಧ್ಯಾನಿಸುತ್ತಾ. ಅನ್ನದ್ವಾರಾ ಪಿತನ ರೇತಸ್ಸನ್ನು ಸೇರುವ ಈ ಪುರುಷಾಗ್ನಿಯಲ್ಲಿ ನಾವು ಪ್ರತಿದಿವಸದಲ್ಲೂ ತಿನ್ನುವ ಅನ್ನವನ್ನೇ ಯಾದವಕುಲಲಲಾಮನಾದ ಶ್ರೀಕೃಷ್ಣರೂಪಿ ಪರಮಾತ್ಮನಿಗೆ ಆಹುತಿಗಳೆಂದು (ಅವಧಾನ) ಸಮರ್ಪಣೆ ಮಾಡಬೇಕು. ಆಗ ಪುರುಷಾಗ್ನಿಗತ ಪ್ರದ್ಯುಮ್ನ ನಾಮಕ ಪರಮಾತ್ಮನು ಆ ಆಹುತಿಗಳನ್ನು ಸ್ವೀಕಾರಮಾಡಿ, ನಮ್ಮನ್ನು ನಿರಂತರದಲ್ಲಿ ಸಂರಕ್ಷಿಸುವನು ಎಂದು ಈ ಪದ್ಯದ ಸಾರಾಂಶವು.

**ವಿಶೇಷ ವಿಷಯ :-**

ಇಲ್ಲಿ "ಯದುಕುಲವರ" ನಿಗೆ ಅವಧಾನಗಳು-ಎಂದು ಪದ ಪ್ರಯೋಗ ಮಾಡಿದ್ದಾರೆ ದಾಸರಾಯರು. ಯದುಕುಲದಲ್ಲಿ ಶ್ರೇಷ್ಠವಾದ ಕೃಷ್ಣನೆಂದರ್ಥ ವೃಷ್ಣಕುಲಶೇಖರನಾದ ಕೃಷ್ಣನು ಭೂತತ್ತ್ವದಲ್ಲಿ ವಿದ್ಯಮಾನನಾಗಿದ್ದಾನೆ. (ನೆಲದಲಿಪ್ಪನು ಕೃಷ್ಣರೂಪದಿ-ಎಂದು ಇದೇ ಹರಿಕಥಾಮೃತಸಾರದ ವಚನ.) ಭೂಮಿಯಿಂದ ವ್ರೀಹ್ಯಾದಿಗಳ ಉತ್ಪತ್ತಿ. ತದ್ವಾರಾ ಅನ್ನದಲ್ಲಿದ್ದು ಪಿತನ ರೇತಸ್ಸನ್ನು ಜೀವನು ಸೇರುವನು. ಇದರಿಂದ ಈ ಶಬ್ದಪ್ರಯೋಗ ಅತ್ಯಂತ ಸಮಂಜಸವಾಗಿದೆ.

## ಪುರುಷಾಗ್ನಿಯಲ್ಲಿ ಪ್ರದ್ಯುಮ್ನನಾಮಕ ಭಗವದ್ರೂಪಗಳ ವಿವರಗಳು

| ಕ್ರಮ ಸಂಖ್ಯೆ | ಅಂಗಗಳು | ಅಧಿಷ್ಠಾನ | ಭಗವದ್ರೂಪ | ವಾಯುರೂಪ | ವಿವರಗಳು |
|---|---|---|---|---|---|
| ೧ | ತಂದೆ | ಅಗ್ನಿ | ಪ್ರದ್ಯುಮ್ನ | ಉದಾನ | ಅನಂತ ಮತ್ತು ಪೂರ್ಣನಾಗಿರುವುದರಿಂದ "ಪುರುಷ" ವಾಚ್ಯನು. |
| ೨ | ವಾಗಿಂದ್ರಿಯ | ಸಮಿಧೆ | ಪ್ರದ್ಯುಮ್ನಾಖ್ಯ ನಾರಾಯಣ | ಉದಾನಾಖ್ಯ ಪ್ರಾಣ | ವಾಕ್‌ಶಕ್ತಿ ಪ್ರದನಾದ್ದರಿಂದ ವಾಕ್‌ಶಬ್ದ ವಾಚ್ಯನು. |
| ೩ | ಕರಣಗಳು | ಧೂಮ | ಪ್ರದ್ಯುಮ್ನಾಖ್ಯ ವಾಸುದೇವ | ಉದಾನಾಖ್ಯ ಅಪಾನ | ಚೇಷ್ಟಾಪ್ರವರ್ತಕನಾದ್ದರಿಂದ "ಪ್ರಾಣ" ಅಂದರೆ "ಕರಣ" ಶಬ್ದ ವಾಚ್ಯನು. |

| | | | | | |
|---|---|---|---|---|---|
| ೪ | ಜಿಂಹ್ವೆ | ಆರ್ಚಿ | ಪ್ರದ್ಯುಮ್ನ ಸಂಕರ್ಷಣ | ಉದಾನಾಖ್ಯ ವ್ಯಾನ | ಹೋಮಧಾರನೂ, ಸರ್ವವನ್ನೂ ಭಕ್ಷಿಸುವವನೂ ಆದ್ದರಿಂದ ಜಿಂಹ್ವಾ ಶಬ್ದ ವಾಚ್ಯನು. |
| ೫ | ಎರಡು ಕಣ್ಣುಗಳು | ಕೆಂಡ | ಪ್ರದ್ಯುಮ್ನಾಖ್ಯ ಪ್ರದ್ಯುಮ್ನ | ಉದಾನಾಖ್ಯ ಉದಾನ | ದರ್ಶನಶಕ್ತಿ ಪ್ರದನಾಗಿರುವುದರಿಂದ ಚಕ್ಷು ಶಬ್ದ ವಾಚ್ಯನು |
| ೬ | ಎರಡು ಕಿವಿಗಳು | ಕಿಡಿ | ಪ್ರದ್ಯುಮ್ನಾಖ್ಯ ಅನಿರುದ್ಧ | ಉದಾನಾಖ್ಯ ಸಮಾನ | ಸರ್ವವನ್ನೂ ಕೇಳುವನಾದ್ದರಿಂದ "ಶ್ರೋತ್ರ" ಶಬ್ದ ವಾಚ್ಯನು. |

## ಪದ್ಯ (೬)

ಮೂಲ :-

ಮತ್ತೆ ಯೋಷಾಗ್ನಿಯೊಳು ತಿಳಿವದು ।
ಪಸ್ಥ ತತ್ತ್ವವೆ ಸಮಿಧೆ ಕಾಮೋ ।
ತ್ಪತ್ತಿ ಪರಮಾತುಗಳೇ ಧೂಮವು ಯೋನಿ ಮಹದರ್ಚಿ ॥
ತತ್ಪ್ರವೇಶಾಂಗಾರ ಕಿಡಿಗಳು ।
ಉತ್ಸಹಗಳುತ್ಸರ್ಜನವು ಪುರು ।
ಷೋತ್ತಮನಿಗೆವದಾನವೆನೆ ಕೈಗೊಂಡು ಮನ್ನಿಸುವ ॥೬॥

ಅವತರಣಿಕೆ :-

ಪ್ರಸಕ್ತಪದ್ಯದಲ್ಲಿ ಪಂಚಾಗ್ನಿಗಳಲ್ಲಿ ಐದನೆಯದಾದ ಯೋಷಾಗ್ನಿ (ಜನನೀ) ಯ ವಿವರಗಳನ್ನು ಅಲ್ಲಿ ಹೋಮ ವಿಧಾನವನ್ನೂ ತಿಳಿಸುತ್ತಾರೆ. ತಾಯಿ ಎಂಬುದೇ ಯೋಷಾಗ್ನಿಯು. ಈ ಅಗ್ನಿಗೇ ಉಪಸ್ಥ ಇಂದ್ರಿಯವೇ ಸಮಿಧೆಯು. ಅಗ್ನಿ ಮತ್ತು ಕಾಷ್ಠಗಳ ಸಂಯೋಗದಿಂದ ಹೊರಡುವ ಧೂಮವೇ ಕಾಮೋದ್ರೇಕವನ್ನುಂಟುಮಾಡುವ ಮಾತುಗಳು. ಆ ಬೆಂಕಿಯಿಂದ ಏಳುವ ಜ್ವಾಲೆಯೇ ಯೋನಿಯು. ಯೋನಿಪ್ರವೇಶವೇ ಕೆಂಡ. ರೇತೋತ್ಸರ್ಜನವೇ ಕಿಡಿಗಳು. ಇಂತು ಯೋಷಾಗ್ನಿಯಲ್ಲಿ ಅಂತರ್ಗತನಾಗಿರುವ ಅನಿರುದ್ಧರೂಪಿ ಪರಮಾತ್ಮನಿಗೆ ಸರ್ವೋತ್ತಮನೆಂಬ ಜ್ಞಾನಾನುಸಂಧಾನದಿಂದ ಯೋಷಾಗ್ನಿಯಲ್ಲಿ ರೇತಸ್ಸನ್ನು ಆಹುತಿ ಎಂದು ಹೋಮಮಾಡಿದರೆ, ಅದನ್ನು ಸ್ವೀಕಾರಮಾಡಿ ಅನುಗ್ರಹಿಸುವವನು ಎಂದು "**ಮತ್ತೆ ಯೋಷಾಗ್ನಿಯಲಿ**"ಎಂಬಪ್ರಸಕ್ತ ಸಂಧಿಗತ ೬ನೆಯ ಈ ಪದ್ಯದಿಂದ ವಿವರಿಸುತ್ತಾರೆ ॥೬॥

**ಪ್ರತಿಪದಾರ್ಥ :-**

**ಮತ್ತೆ ಯೋಷಾಗ್ನಿಯೊಳು**=ಪುನಃ (ತದನಂತರ) ಪಿತೃಗತನಾದ ಜೀವನ ಯೋಷಾ ಎಂದರೆ ಸ್ತ್ರೀ. ತಾಯಿಯೆನಿಸತಕ್ಕ ಮಾತೃ ಶರೀರವೆಂಬ ಅಗ್ನಿಯಲ್ಲಿ. **ತಿಳಿವದು**=ಹೋಮಿಸುವ ಕ್ರಮವನ್ನು ತಿಳಿಯತಕ್ಕದ್ದು. ಅದರ ವಿವರಗಳು ಹ್ಯಾಗೆಂದರೆ,-**ಉಪಸ್ಥತತ್ತ್ವವೇ**=ಉಪಸ್ಥ ಎಂಬ

ಕರ್ಮೇಂದ್ರಿಯವೇ. **ಸಮಿಧೆ**=ಕಾಷ್ಠವು. **ಕಾಮೋತ್ಪತ್ತಿ**=ರತಿಕ್ರೀಡಾ ಸಮಯದಲ್ಲಿ ಕಾಮಾತುರನಾಗಿ **ಪರಮಾತುಗಳೇ**=ತತ್ಸಂಬಂಧವಾದ ಕಾಮೋದ್ರಿಕ್ತ ಮಾತುಗಳೇ **ಧೂಮವು**=ಯೋಷಾಗ್ನಿ ಮತ್ತು ಉಪಸ್ಥ ತತ್ತ್ವವೆಂಬ ಕಾಷ್ಠಸಂಯೋಗದಿಂದ ಉತ್ಪತ್ತಿಯಾಗುವ ಹೊಗೆಯು. **ಯೋನಿ**=ಉಪಸ್ಥತತ್ತ್ವ ಗೋಳಕಗತ ಸ್ತ್ರೀಯ ಜನನೇಂದ್ರಿಯವೇ **ಮಹ ದರ್ಚಿ**=ದೊಡ್ಡ ಜ್ವಾಲೆಯು. **ತತ್ಪ್ರವೇಶ**=ಯೋನಿಪ್ರವೇಶವೇ. **ಅಂಗಾರ**=ಕೆಂಡಗಳು. **ಉತ್ಸಹಗಳು**=ರತಿಕ್ರೀಡಾಸಮಯದಲ್ಲಿ ವ್ಯಕ್ತ ವಾಗುವ ಉತ್ಸಾಹಭರಿತವಾದ ಆನಂದವೇ. **ಕಿಡಿಗಳು**=ಉರಿಯಿಂದ ಸಿಡಿ ಯುವ ಕಿಡಿಗಳು. **ಉತ್ಸರ್ಜನವು**=ಪುರುಷನ ರೇತೋತ್ಸರ್ಜನವೇ **ಪುರು ಷೋತ್ತಮನಿಗೆ**=ಸರ್ವೋತ್ತಮನಾದ ಅನಿರುದ್ಧರೂಪಿ ಪರಮಾತ್ಮನಿಗೆ **ಅವದಾನವೆನೆ**=ಆಹುತಿಗಳು ಎಂಬ ಅನುಸಂಧಾನದಿಂದ ಅರ್ಪಿಸಿದರೆ. **ಕೈಕೊಂಡು**=ಅಂತಹ ಯಜ್ಞಾಹುತಿಗಳನ್ನು ಸ್ವೀಕರಿಸಿ, **ಮನ್ನಿಸುವ**= ನಮ್ಮ ಸರ್ವಾಪರಾಧಗಳನ್ನು ಕ್ಷಮಿಸಿ, ಅಜ್ಞಾನಾದಿ ದೋಷಗಳನ್ನು ನಾಶ ಮಾಡಿ ಜ್ಞಾನಾಭಿವೃದ್ಧಿಗೈಸಿ, ಸಂರಕ್ಷಣೆಮಾಡುವನು. ॥೬॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ:-

ಐದನೇ ಅಗ್ನಿ ಜನನಿ. ಇವಳಲ್ಲಿ ಹೋಮಕ್ರಮವನ್ನು ಹೇಳುತ್ತಾರೆ. ಇದಕ್ಕೆ ಸಮಾನ ವಾಯುದೇವರು, ಅನಿರುದ್ಧ ರೂಪಿ ಪರಮಾತ್ಮ.

ಮತ್ತೆ ಯೋಷಾಗ್ನಿಯೊಳು-ಪುನಶ್ಚ ಪಿತೃಗತನಾದ ಜೀವನ ಯೋಷಾ ಎಂದರೆ, ಸ್ತ್ರೀ. ಸ್ತ್ರೀ ಎನತಕ್ಕ ತನ್ನ ಮಾತೃಶರೀರವೆಂಬ ಅಗ್ನಿಯಲ್ಲಿ, ತಿಳಿ ವದು. ಹೋಮಮಾಡತಕ್ಕ ಕ್ರಮ ತಿಳಿಯಬೇಕು. ಹ್ಯಾಗೆಂದರೆ :-ತನ್ನ ಜನನಿ ಎಂಬುದೇ ಅಗ್ನಿ, ಇದರಲ್ಲಿ ಸಮಾನ ವಾಯು, ಅನಿರುದ್ಧ ಪರಮಾತ್ಮ. ಉಪಸ್ಥತತ್ತ್ವವೇ ಸಮಿಧೆ-ಉಪಸ್ಥ ಎನತಕ್ಕ ಮರ್ಮಸ್ಥಾನ ಎಂಬೋದೇ ಸಮಿತ್ತು ಕಾಷ್ಠ. ಸಮಾನ ಪ್ರಾಣವಾಯುದೇವರು, ಅನಿರುದ್ಧನಾರಾಯಣ.

ಕಾಮೋತ್ಪತ್ತಿ-ಪುರುಷನ ಸಂಗಡ ಕ್ರೀಡಾಮಾಡೋದಕ್ಕೆ ಕಾಮವನ್ನು ಉತ್ಪತ್ತಿ ಮಾಡಿ ಕೊಡತಕ್ಕ ಪರಮಾತುಗಳೇ-ತತ್ಸಂಬಧವಾದ ಮಾತುಗಳೇ ಧೂಮವು-ಕಾಷ್ಠಾಗ್ನಿಗಳ ಸಂಬಂಧದಿಂದ ಹೊರಡತಕ್ಕ ಹೊಗೆಯು. ಸಮಾನ ವಾಯು ದೇವರು (ಅಪಾನ), ಅನಿರುದ್ಧ ವಾಸುದೇವ. ಯೋನಿ ಮಹದರ್ಚಿ-ಉಪಸ್ಥಗತ ಭಾಗ ರೇತಸ್ಸು ಪ್ರವೇಶ ಮಾಡುವ ಮಾರ್ಗವೆನಿಸತಕ್ಕದ್ದೇ ದೊಡ್ಡದಾದ ಉರಿ. ಅರ್ಚಿ ಎಂದರೆ ಉರಿ. ಇದಕ್ಕೆ ಸಮಾನ ವ್ಯಾನವಾಯುದೇವರು. ಅನಿರುದ್ಧ ಸಂಕರ್ಷಣ. ತತ್ಪ್ರವೇಶಾಂಗಾರ-ಈ ಭಾಗದಲ್ಲಿ ಶಿಶ್ನ ಪ್ರವೇಶ ಎಂಬುದೇ ಕಾಷ್ಠ ದಹಿಸದ ಅಂಗಾರ ಎಂದರೆ ಕೆಂಡಗಳು. ಸಮಾನ ಉದಾನ ವಾಯುದೇವರು. ಅನಿರುದ್ಧನ ಅಂಶ ಪ್ರದ್ಯುಮ್ನರೂಪಿ ಪರಮಾತ್ಮ. ಉತ್ಸರ್ಜನ ರತಿಕ್ರೀಡಾದಲ್ಲಿ ವ್ಯಕ್ತಗಳಾದ, ಉತ್ಸಹಗಳು-ಆನಂದಗಳೆಂಬುದೇ, ಕಿಡಿಗಳು-ಉರಿಯಿಂದ ಹೊರಡತಕ್ಕ ಕಿಡಿಗಳು. ಇದರಲ್ಲಿ ಸಮಾನಾಂಶ ಸಮಾನ ವಾಯುದೇವರು. ಅನಿರುದ್ಧಾಂಶ ಅನಿರುದ್ಧ. ಪುರುಷೋತ್ತಮನಿಗವದಾನವೆನೆ -ಪುರುಷಶ್ರೇಷ್ಠನಾದ ಶ್ರೀಪರಮಾತ್ಮನಿಗೆ ಅಲ್ಲಿನ ದೇಹ, ಅಲ್ಲಿನ ಆಯುಸ್ಸು, ಆಹುತಿ ಎಂದರೇ ಕೈಗೊಂಡು ಇಂಥ ಯಜ್ಞವನ್ನು ಸ್ವೀಕಾರಮಾಡಿ. ಮನ್ನಿಸುವ-ಅಜ್ಞಾನಾದಿಗಳ ದೋಷಗಳ ನಾಶಮಾಡುತ್ತಾ, ಜ್ಞಾನಾಭಿವೃದ್ಧಿ ಮಾಡಿ ರಕ್ಷಿಸುತ್ತಾನೆ.

ಈ ಶ್ಲೋಕದಲ್ಲಿ ಹೇಳಿದ ಕ್ರಮವನ್ನು ಮಾತಾಪಿತೃಗಳ ಕಾರ್ಯವೆಂದು ತಿಳಿಯಬೇಕು. ಈ ಪ್ರಕಾರ ಅಗ್ನಿ ಕಾಷ್ಠಾದಿ ಸಾಂಕೇತಗಳಾದ ಅಧಿಷ್ಠಾನಗಳು, ಆರರಲ್ಲಿ ಅಂತರ್ಗತ ಭಗದ್ರೂಪಗಳು ತಿಳಿದು,ಭಗವದ್ರೂಪಗಳಿಂದ ಭಗವದ್ರೂಪಗಳಿಗೆ ಹೋಮತ್ತ್ವೇನ ಅರ್ಪಿಸೋವನಾಗಬೇಕೆಂದು ತಾತ್ಪರ್ಯ ॥೬॥

(೨) "ಭಾವಪ್ರಕಾಶಿಕೆ"-ವ್ಯಾಖ್ಯಾನ :-

ಸ್ತ್ರೀ ಎಂಬುವದೇ ಅಗ್ನಿ ಎಂತಲೂ, ಅದಕ್ಕೆ ಕಾಷ್ಠಾದಿಗಳನ್ನು ಹೇಳುತ್ತಾರೆ. ಸಕಲರಿಗೆ ಬೇಕಾದವನಾದುದರಿಂದ ಪರಮಾತ್ಮನು "ಯೋಷಾ" ನಾಮಕನು. ಸ್ತ್ರೀಯರಲ್ಲಿ ಅನಿರುದ್ಧರೂಪವನ್ನು ಚಿಂತಿಸಬೇಕು.

"ಸ್ತ್ರೀಗತೋನಿರುದ್ಧೋಽಗ್ನಿಃ"
-ಎಂಬ ವಾಕ್ಯಾನುಸಾರ ಸ್ತ್ರೀಯರೊಳಗಿರುವ ಅಗ್ನಿಯು ಅನಿರುದ್ಧನು.

**"ತಸ್ಯಾಃ ಯೋಷಿದ್ಗತಾನಿರುದ್ಧಾಖ್ಯಾಗ್ನೇಃ ಉಪ್ಥಃ ಸಃ ಉಪಸ್ಥಿತೇಃ ಉಪಸ್ಥಾನಾಮಾ ಉಪಸ್ಥಗತಃ ಅನಿರುದ್ಧ ನಾರಾಯಣಾತ್ಮಾ ಸಮಿತ್"**
–ಎಂಬ ಪ್ರಮಾಣಾನುಸಾರ, ಸಮೀಪದಲ್ಲಿ ವಾಸಮಾಡುವುದರಿಂದ "ಉಪಸ್ಥ" ನೆಂದು ಪರಮಾತ್ಮನಿಗೆ ಹೆಸರು. ಸ್ತ್ರೀಗತಾನಿರುದ್ಧಾಗ್ನಿಗೆ ಉಪಸ್ಥನಾಮಕ ನಾದ ಉಪಸ್ಥಗತನಾದ ಅನಿರುದ್ಧ ನಾರಾಯಣರೂಪನು ಕಾಷ್ಠವು.

**"ಉಪಮಂತ್ರಯತೇ, ರತ್ಯರ್ಥ ಸಂಭಾಷತೇ ಇತಿಯತ್ ಸಃ ತತ್ರತ್ಯಃ ಅನಿರುದ್ಧವಾಸುದೇವಾತ್ಮೋಪಮಂತ್ರಣ ನಾಮಾ ಧೂಮಃ"**

–ಎಂಬ ವಾಕ್ಯರೀತ್ಯಾ, ರತ್ಯರ್ಥವಾಗಿ ರಹಸ್ಯ ಸಂಭಾಷಣೆಗಳನ್ನು ಪುರುಷನೊಳಗಿದ್ದು ಮಾಡುವವನಾದ್ದರಿಂದ "ಉಪಮಂತ್ರಣ"-ಎಂದು ಪರ ಮಾತ್ಮನಿಗೆ ಹೆಸರು. ಅಲ್ಲಿರುವವನು ಅನಿರುದ್ಧ ವಾಸುದೇವರೂಪನು ಧೂಮವು.

**"ಯುನಕ್ತಿ ಮಿಶ್ರೀಕರೋತೀತಿ ಯೋನಿನಾಮಾ ಯೋಽನಿಸ್ಥೋಽ ನಿರುದ್ಧ ಸಂಕರ್ಷಣಾತ್ಮಾರ್ಚಿಃ"**

-ಎಂಬಂತೆ ಮಿಶ್ರಮಾಡುವವನಾದ್ದರಿಂದ "ಯೋನಿ" ಎಂದು ಹೆಸರು. ಯೋನಿಗತ ಅನಿರುದ್ಧ ಸಂಕರ್ಷಣರೂಪಿ ಪರಮಾತ್ಮನು ಜ್ವಾಲೆಯು. ಅಂತಃ ಪ್ರವೇಶಮಾಡಿಸುವ ಕ್ರಿಯಾಗತನಾದ ಅನಿರುದ್ಧ ಪ್ರದ್ಯುಮ್ನರೂಪನು ಕೆಂಡ ಗಳು.

**"ಅಭಿನಂದತೀತ್ಯಭಿನಂದನಾಮಾ ಅಭಿನಂದಗತೋಽನಿರುದ್ಧಾನಿರು ದ್ಧಾತ್ಮಾ ವಿಸ್ಫುಲಿಂಗಾಃ"**

-ಎಂಬ ಪ್ರಮಾಣರೀತ್ಯಾ ರತಿಯಲ್ಲಿ ಉತ್ಸಾಹವನ್ನು ಕೊಡಿಸುವ "ಅಭಿ ನಂದ" ನಾಮಕದಲ್ಲಿರುವ ಅನಿರುದ್ಧಾನಿರುದ್ಧರೂಪವೇ ಕಿಡಿಗಳು. ಪುರು ಷೋತ್ತಮನಾದ ಶ್ರೀಪರಮಾತ್ಮನಿಗೆ ರೇತೋತ್ಸರ್ಜನವೇ ಆಹುತಿಗಳೆಂದು ಭಾವಿಸಿ, ಭಗವದ್ಪೂಜಾತ್ವೇನ ಸಮರ್ಪಿಸಲು, ಪೂಜೆಯನ್ನಾಗಿ ಸ್ವೀಕರಿಸಿ, ನಮ್ಮ ಅಪರಾಧಗಳನ್ನೆಲ್ಲಾ ಮನ್ನಿಸುವನು.

**"ಯೋಷಾವಾವ ಗೌತಮಾಗ್ನಿಸ್ತಸ್ಯಾ ಉಪಸ್ಥ ಏವ ಸಮಿತ್"**— ಇತ್ಯಾದಿ **ಉಪನಿಷದ್ವಾಕ್ಯಗಳೇ** ಇವುಗಳಿಗೆ ಆಧಾರಗಳು. ||೬||

**(೩) "ಭಾವದರ್ಪಣ ಟೀಕಾ"--ವ್ಯಾಖ್ಯಾನ :—**

ಈಗ ಐದನೇ ಅಗ್ನಿಕ್ರಮ ಹೇಳುತ್ತಾರೆ :—

**"ಓಂ ಯೋಷಾವೇವ ಗೌತುಮಾಗ್ನಿಸ್ತಸ್ಯಾಃ ಉಪಸ್ಥ ಏವ ಸಮಿದೋ ಯದುಪಮಂತ್ರಯತೇ ಸ ಧೂಮಃ ಯೋನಿಮುಹದರ್ಚಿಯು ದಂತಃ ಕರೋತಿ ತೇಂಗಾರಃ ಅಭಿನಂದಾ ವಿಸ್ಫುಲಿಂಗಾಃ ತಸ್ಮಿನ್ನೇತಸ್ಮಿನ್ನ ಗ್ನೌ ದೇವಾಃ ರೇತೋ ಜುಹ್ವತಿ । ತಸ್ಯಾಹುತೇಃ ಗರ್ಭಂ ಸಂಭವತಿ" ||**

–ಎಂಬಂಥ ಛಾಂದೋಗ್ಯ ಖಂಡವನ್ನೇ ವಿವರ ಮಾಡುತ್ತಾರೆ- "ಮತ್ತಿಯೋಷ್ಯತಿ"|| ಯೋಷಾ–ಸ್ತ್ರೀ ಎಂಬರ್ಥ.

**"ಸ್ತ್ರೀಯೋಷಿದಬಲಾ ಯೋಷಾ ಇತ್ಯಮರಃ"**

ಉಪಸ್ಥ ಎಂದರೆ, ಭಗಕ್ಕೆ ಅರ್ಥ. ಉತ್ಸರ್ಜನ ಎಂದರೆ, ರೇತೋತ್ಸರ್ಜನ ಎಂಬರ್ಥ. ಇದನ್ನೇ ಆಹುತಿ ಕೊಟ್ಟರೆ, ಗರ್ಭೋತ್ಪತ್ತಿ ಎಂಥ ತಾತ್ಪರ್ಯ.

**(೪) ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ)**

ಉತ್ಸಹಾಃ ಅಭಿನಂದಾಃ । ಉತ್ಸರ್ಜನಾಃ ವಿಸ್ಫುಲಿಂಗಾಃ । ಯೋಷಾವಾವ ಗೌತಮ ಅಗ್ನಿಃ । ತಸ್ಯಾಃ ಉಪಸ್ಥ ಏವ ಸಮಿತ್ । ಉಪಮಂತ್ರಯತೇ ಸ ಧೂಮಃ । ಯೋನಿಃ ಅರ್ಚಿಃ ॥ ಯದಂತಃ ಕರೋತಿ ತೇ ಅಂಗಾರಾಃ। ಅಭಿನಂದಾಃ ವಿಸ್ಫುಲಿಂಗಾಃ। ತಸ್ಮಿನ್ ಏತಸ್ಮಿನ್ ಅಗ್ನೌ ದೇವಾಃ ರೇತಃ ಜುಹ್ವತಿ । ತಸ್ಯಾಃ ಆಹುತೇಃ ಗರ್ಭಃ ಸಂಭವತಿ ॥(ಛಾ, ಖ.೫-೨-೮) ಶ್ರೀಮದಾನಂದತೀರ್ಥರಾಟ್ ಪಂಚರತ್ನಂ ಆತ್ಮಮಂಜೂಷಾಯೂಂ ಬರೀಭರೀತಿ ॥ ಉಪಸ್ಥಿತೇಃ ಉಪಸ್ಥಃ ಸಃ ಉಪಮಂತ್ರ ಕೃತ್ ಏವ ಸಃ ॥ ಯೋನಿಃ ಯುನಕ್ತಿ ಯಸ್ಮಾತ್ ಸಃ ಸರ್ವಾಂತಃ ಕೃಚ್ಛನಂದನಃ ॥ ಲೋಕ ಪದೋಕ್ತಿ ದ್ವ್ಯಾದೀನಾಂ ವೃತ್ತಿಂ ವಕ್ತಿ ॥ ಅಸೌಲೋಕಃ ಪ್ರಕಾಶತ್ವಾತ್

ಪ್ರಾಣಸ್ಥತ್ವಾಚ್ಚ ಕೇಶವಃ ॥ ಪರ್ಜನ್ಯೋ ಜನಕಃ ಯಸ್ಮಾತ್ ಪೃಥಿವೀ ಪೃಥಿತತ್ವತಃ ॥ ಪುರುಷಃ ಪುರು ಯಸ್ಮಾತ್ ಸಃ ಯೋಷಾ ಚೋಷ್ಯೋ ಯತೋಽಖಿಲೈಃ ॥ ಇತಿ ಸಾಮಸಂಹಿತಾಯಾಮ್ ॥ ಪುರುಷೋತ್ತಮಃ ಸಹಸ್ರ ನಾಮಗವಮ್ ॥ ಓಂ ಪ್ರಾಣೋ ದೇವಾ ಅತಿರೋದಾ ಸವೋಜಃ ಪತಿಂವೋ ಅಘ್ನಾನಾಮ್ ॥ ಪ್ರಜಾಯೈ ತ್ವಸ್ಯೈ ಯದಶಿಕ್ಷ ಇಂದ್ರಧೇನೂನಾಮಿಷು ಧ್ಯಸೌ ಓಂ ॥ ನಷ್ಟಭಕ್ತಶಕ್ತ್ಯಾದೀನಿ ಪುರೂಣಿ ಪುರುಷಾರ್ಥ ಜಾತಾನಿ ಪುರುಭ್ಯಾಃ ಉತ್ಕೃಷ್ಟೇಭ್ಯಃ ದೇವಾದಿಭ್ಯಃ ಸನೋತಿ ಇತಿ ಪುರುಷಃ ॥ ಸಚಾಸೌ ಉತ್ತಮಶ್ಚ ಇತಿ ಸ ತಥೋಕ್ತಃ ॥ ಪುಣ್ಯಲೋಕೋ ಭವತಿ ಯ ಏವಂ ವೇದ -ಯ ಏವಂ ವೇದ ॥೬॥

ಕನ್ನಡಾರ್ಥ :—

"ಯೋಷಾಗ್ನಿ ವಿದ್ಯೆ" ಯ ವಿಷಯವು ಛಾಂದೋಗ್ಯೋಪನಿಷತ್ತು ಹಾಗೂ ಭಾಷ್ಯಗಳಲ್ಲಿ ಉಕ್ತವಾಗಿದೆ. "ಎಲೈ ಗೌತಮನೆ! ಇವನು ಸರ್ವ ರಿಂದಲೂ ಸೇವ್ಯಮಾನನಾಗಿರುವುದರಿಂದ, ಅಗ್ನಿಯು "ಯೋಷ" ಶಬ್ದವಾಚ್ಯ ನಾದ ಅನಿರುದ್ಧನು. ಇವನೇ ಹೋಮಾಧಾರನು. ಯೋಷಿತ್ (ಸ್ತ್ರೀ) ನಲ್ಲಿ ರುವ ಅನಿರುದ್ಧನೆಂಬ ಅಗ್ನಿಗೆ ಆ ಉಪಸ್ಥವು ಸರ್ವದಾ ಸಮೀಪವಾಗಿರುವುದ ರಿಂದ "ಉಪಸ್ಥ" ಶಬ್ದವಾಚ್ಯನು. ಉಪಸ್ಥೇಂದ್ರಿಯದಲ್ಲಿ ಅನಿರುದ್ಧನಾರಾ ಯಣನು "ಸಮಿತ್" ಸಮಿಧೆಗಳೆಂದೆನಿಸುವನು. ರತಿಯ ಸಲುವಾಗಿ ಆಡುವ ಮಾತುಗಳು ಅಂದರೆ, ಉಪಮಂತ್ರಿಸುವುದರಿಂದ, "ಉಪಮಂತ್ರಣ" (ಸಂಭಾ ಷಣ) ಶಬ್ದವಾಚ್ಯನಾದ ಅನಿರುದ್ಧ ವಾಸುದೇವನು"ಧೂಮ" ಶಬ್ದವಾಚ್ಯನು. ಸಂಯೋಜನ ಮಾಡುವುದರಿಂದ, "ಯೋನಿ" ಶಬ್ದವಾಚ್ಯನಾಗಿ ಯೋನಿಸ್ಥ ಅನಿರುದ್ಧ ಸಂಕರ್ಷಣನು ಅರ್ಚಿ (ಜ್ವಾಲೆ) ಎನಿಸುವನು. ಯೋನಿಯೊಳಗೆ ಅಂತಸ್ಥನಾಗಿ ಕ್ರಿಯೆಮಾಡುವುದರಿಂದ, ಅನಿರುದ್ಧ ಪ್ರದ್ಯುಮ್ನನು"ಅಂಗಾರಾ" ನಾಮಕನು. ಅದರಿಂದ ಆಗುವ ಅಭಿನಂದ ಅಂದರೆ, ಆನಂದವೇ ವಿಸ್ಫು ಲಿಂಗ (ಕಿಡಿ). ಸ್ವತಃ ಎಲ್ಲರನ್ನೂ ಅಭಿನಂದಿಸುವುದರಿಂದ ಅಭಿನಂದ ಶಬ್ದ ವಾಚ್ಯನಾದ ಅನಿರುದ್ಧಾನಿರುದ್ಧನು "ವಿಸ್ಫುಲಿಂಗ ನಾಮಕನು." ಹೀಗೆ

ನಾರಾಯಣಾದಿರೂಪಗಳಿಂದ ಆರು ರೀತಿಯಾಗಿ ಯೋಷಿತ್ತಿನಲ್ಲಿರುವ ಅನಿರುದ್ಧನೆಂಬ ಅಗ್ನಿಯಲ್ಲಿ ರೇತಸ್ಸಿನಲ್ಲಿ ಸೇರಿಕೊಂಡಿರುವ ಜೀವನನ್ನು ತತ್ವಾಭಿಮಾನಿ ದೇವತೆಗಳು ಯೋನಿದ್ವಾರಾ ಹೋಮಿಸುತ್ತಾರೆ. ಯೋಷಿದಗ್ನಿಯಲ್ಲಿ ಹೋಮಿಸಿದ ಈ ಆಹುತಿಯಿಂದ ಗರ್ಭಧಾರಣೆಯಾಗುವುದು. "ಯೋನೇಃಶರೀರಂ" ಎಂಬ ಬ್ರಹ್ಮಸೂತ್ರದಲ್ಲಿ ಇದರಂತೆ ನಿರೂಪಿತವಾಗಿದೆ.

ಶ್ರೀಮದಾನಂದತೀರ್ಥ ಭಗವತ್ಪಾದರು ತಮ್ಮ ಭಾಷ್ಯದಲ್ಲಿ ಈ ಪ್ರಮೇಯಗಳನ್ನು ವಿವರಿಸುತ್ತಾರೆ :— (೧) ಉಪಸ್ಥಿತನಾಗುವುದರಿಂದ ಹರಿಗೆ "ಉಪಸ್ಥ" ಎಂದು ಹೆಸರು. (೨) ಉಪಮಂತ್ರ (ಸಂಭಾಷಣೆ) ಮಾಡುವುದರಿಂದ "ಉಪಮಂತ್ರ" ನಾಮಕನು. (೩) ಸಂಗಮಿಸುವುದರಿಂದ "ಯೋನಿ" ಶಬ್ದವಾಚ್ಯನು. (೪) ಯೋನಿಗಳೊಳಗೆ ಕ್ರಿಯಾಕರ್ತನಾಗಿ ಅಭಿನಂದಿಸುವುದರಿಂದ "ಅಭಿನಂದ" ನಾಮಕನು. (೫) ಪ್ರಕಾಶರೂಪನಾದುದರಿಂದಲೂ ಪ್ರಾಣನಲ್ಲಿರುವುದರಿಂದಲೂ ಹರಿಯು "ಅಸೌಲೋಕ" ಎಂದೆನಿಸುತ್ತಾನೆ. (೬) ಜನಕನಾದುದರಿಂದ "ಪರ್ಜನ್ಯನು". (೭) ಪ್ರಸಿದ್ಧನಾಗಿರುವುದರಿಂದ "ಪೃಥ್ವೀ" ಎಂದೆನಿಸುವನು. (೮) ಬಹುರೂಪನಾದ್ದರಿಂದ "ಪುರುಷ" ವಾಚ್ಯನು. (೯) ಎಲ್ಲರಿಂದ ಸೇವಿತನಾದ್ದರಿಂದ "ಯೋಷಾ" ಎಂದೆನಿಸುವನು. ಈ ವಿವರಗಳು **ನಾಮಸಂಹಿತೆ** ಯಲ್ಲಿ ಉಕ್ತವಾಗಿವೆ.

"ಪುರುಷೋತ್ತಮ" ಈ ನಾಮವು ಶ್ರೀವಿಷ್ಣುಸಹಸ್ರನಾಮಗಳಲ್ಲಿ ಒಂದು ಇದರ ಅರ್ಥವನ್ನು **ಬೃಹತೀ ಋಙ್ಮಂತ್ರವು "ಪ್ರಾವೋ"** ಎಂದು ವಿವರಿಸುತ್ತದೆ. "ಪುರೂಣಿ" -ತಿರೋಹಿತವಾದ (ನಷ್ಟವಾದ) ಭಕ್ತರ ಶಕ್ತಿ ಇತ್ಯಾದಿ ಪುರುಷಾರ್ಥ ಸಾಧನ ಸಾಮಗ್ರಿಗಳನ್ನು ಉತ್ಕೃಷ್ಟವಾದ ದೇವತೆಗಳಿಗೆ ಕೊಡವವನಾದ್ದರಿಂದ "ಪುರುಷ" ಶಬ್ದವಾಚ್ಯನು. ಪುರುಷನೂ, ಉತ್ತಮನೂ ಆದ್ದರಿಂದ **ಪುರುಷೋತ್ತಮ** ಎಂದು ಶ್ರೀಹರಿಗೆ ಹೆಸರು. ॥೫॥

### (೫) "ಗುರುಹೃದಯ ಪ್ರಕಾಶಿಕೆ"–ವ್ಯಾಖ್ಯಾನ :—

ಮತ್ತೆ ಎಂದರೆ, ಪುನಃ ಜನನಿಯಾಗಿ ತಾಯಿ ಎಂಬ ಯೋಷಾಖ್ಯ ಸ್ತ್ರೀ

ಯಲ್ಲಿರುವ ತಚ್ಛಬ್ದವಾಚ್ಯ ದೇವರನ್ನು ಅಗ್ನಿ ಎಂದು ತಿಳಿದು, ಸಮೀಪವಾಸಿಯಾದ್ದರಿಂದ ದೇವರು ಉಪಸ್ಥಿತ ಶಬ್ದವಾಚ್ಯ ಉಪಸ್ಥವೆಂಬ ಗುಹ್ಯೇಂದ್ರಿಯದಲ್ಲಿದ್ದು ಸ್ತ್ರೀ ಎಂಬ ಅಗ್ನಿಗೆ ಸಮಿತ್ತಾಗುವನೆಂದು ತಿಳಿದು, ಸ್ತ್ರೀ ಭೋಗೋಪಯುಕ್ತ ಮಾತುಗಳನ್ನಾಡಿಸುವುದರಿಂದ, ಉಪಮಂತ್ರ ಶಬ್ದವಾಚ್ಯ ದೇವರು ಕಾಮುಕರ ಮಾತುಗಳಲ್ಲಿದ್ದು, ಯೋಷಿದಗ್ನಿಗೆ ಧೂಮನೆಂದು ತಿಳಿದು, ಸರ್ವವನ್ನೂ ಹೊಂದಿಸುವನಾದ್ದರಿಂದ, ಯೋನಿಶಬ್ದ ವಾಚ್ಯದೇವರು ಗುಹ್ಯಗೋಳಕದಲ್ಲಿದ್ದು, ಸ್ತ್ರೀ ಎಂಬ ಅಗ್ನಿಗೆ ಜ್ವಾಲೆ ಎಂದು ಭಾವಿಸಿ, ಅಂತರಪ್ರವೇಶದಲ್ಲಿರುವುದರಿಂದ, ದೇವರು ಅಂತರಪ್ರವೇಶ ಶಬ್ದವಾಚ್ಯನಾಗಿ, ತತ್ಪ್ರವೇಶದಲ್ಲಿದ್ದು, ಯೋಷಿದಗ್ನಿಗೆ ಕೆಂಡವೆಂದು ಭಾವಿಸಿ, ಆನಂದಪ್ರದ ಆನಂದಶಬ್ದ ವಾಚ್ಯದೇವರು ಸ್ತ್ರೀಪುರುಷರ ಉತ್ಸಾಹವೆಂಬ ಸಂತೋಷದಲ್ಲಿದ್ದು, ಯೋಷಿದಗ್ನಿ ಕಿಡಿಗಳೆಂದು ತಿಳಿದು, ಉತ್ಸರ್ಜನವೆಂಬ ರೇತಸ್ಸೇಚನೆಯೇ ಪುರುಷೋತ್ತಮನಾದ ದೇವರಿಗೆ ಅವದಾನವೆಂಬಾಹುತಿಯಾಗಿ ಆ ಯಜ್ಞದಲ್ಲಿ ದೇವತೆಗಳು ಭಾವಿಸಿದ್ದರಿಂದ ದೇವರು ಅಂಗೀಕರಿಸಿ, ಮನ್ನಿಸಿ, ಜೀವರಿಗೆ ಗರ್ಭಪ್ರಾಪ್ತಿ ಮಾಡಿಸಿದನೆಂದು ಸ್ಮರಿಸಬೇಕೆಂದರ್ಥ.

ಪ್ರಮಾಣ ಶೃತಿ (ಛಾಂದೋಗ್ಯೋಪನಿಷತ್ತು)

"ಯೋಷಾವಾವ ಗೌತಮಾಗ್ನಿಸ್ತಸ್ಯಾ ಉಪಸ್ಥ ।
ಏವ ಸಮಿದ್ಯದುಪಮಂತ್ರಯತೇ ಸ ಧೂಮೋ ॥
ಯೋನಿರರ್ಚಿರ್ಯದಂತಃ ಕರೋತಿ ತೇಂಗಾರಾಃ ।
ಅಭಿನಂದಾವಿಸ್ಫುಲಿಂಗಾಸ್ತಸ್ಮಿನ್ನೇತಸ್ಮಿನ್ನ ಗ್ನೌದೇವಾರೇತೋ ಜುಹ್ವತಿ ।"
ತಸ್ಯಾ ಆಹುತೇರ್ಗರ್ಭಸ್ಸಂಭವತಿ ॥"

(೨) ಛಾಂದೋಗ್ಯಭಾಷ್ಯ ಪ್ರಮಾಣ :—

"ಉಪಸ್ಥಿತೇರುಪಸ್ಥಸ್ಸ ಉಪಮಂತ್ರಕೃದೇವಸಹಃ ।
ಯೋನಿರ್ಯುನಕ್ತಯುಸ್ಮಾತ್ಸಸರ್ವಾಂತಃ ಕೃಚ್ಛನಂದನಃ ॥"

—ಇತ್ಯಾರ್ಥಗಳು ವಿವರಿಸಲ್ಪಟ್ಟವು ॥೬॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಪ್ರಸಕ್ತ ಪದ್ಯದಲ್ಲಿ ಜ್ಞಾನಿವರೇಣ್ಯರಾದ ದಾಸರಾಯರು ಪಂಚಾಗ್ನಿಗಳಲ್ಲಿ ಕೊನೆಯದೂ ಹಾಗೂ ಐದನೆಯದಾದ **ಯೋಷಾಗ್ನಿಯಲ್ಲಿ** ಹೋಮ ಮಾಡುವ ಕ್ರಮದ ವಿವರಗಳನ್ನು ತಿಳಿಸುತ್ತಾರೆ.

(೧) "ಯೋಷಾ" ಎಂದರೆ ಸ್ತ್ರೀ ಎಂದರ್ಥ. ಅಂತಹ ಜನನಿ ಅಥವಾ ತಾಯಿಯಲ್ಲಿ ಅಧಿಷ್ಠಿತನಾಗಿರುವ ಪರಮಾತ್ಮನೇ ಯೋಷಾಗ್ನಿ ನಾಮಕನು.

(೨) ಈ ಯೋಷಾಗ್ನಿಯಲ್ಲಿ **ಅನಿರುದ್ಧ** ನಾಮಕ ಪರಮಾತ್ಮನು ಯಜ್ಞಾಭಿಮಾನಿಯಾಗಿದ್ದಾನೆ.

(೩) ಸರ್ವರಿಂದಲೂ ಸೇವ್ಯಮಾನನಾಗಿರುವುದರಿಂದ ಪರಮಾತ್ಮನಿಗೆ **ಯೋಷ** ಎಂದು ಹೆಸರು. ಇಂತಹ **ಯೋಷ**ಶಬ್ದವಾಚ್ಯನಾದ ಅನಿರುದ್ಧನು ಯೋಷಾಗ್ನಿ ಎಂದೆನಿಸುವನು.

(೪) ಇದಕ್ಕೆ **ಸಮಾನ** ನಾಮಕ ವಾಯುದೇವರು ಅವಾಂತರಾಭಿ ಮಾನಿಗಳು.

(೫) **"ಸ್ತ್ರೀಗತೋನಿರುದ್ಧೋಗ್ನಿಃ"** –ಎಂಬ ಉಪನಿಷದ್ವಾಕ್ಯವೇ ಇದಕ್ಕೆ ಪ್ರಮಾಣ.

(೬) ಉಪಸ್ಥ ತತ್ತ್ವವೇ ಸಮಿತ್ತು ಎಂದೆನಿಸುವುದು. ಸ್ತ್ರೀಯರಲ್ಲಿ ಗುಹೇಂದ್ರಿಯವಾದ ಉಪಸ್ಥವೆಂಬ ಕರ್ಮೇಂದ್ರಿಯವೇ ಯೋಷಾಗ್ನಿಗೆ ಕಾಷ್ಠ ರೂಪದಲ್ಲಿರುವುದು.

**ತಸ್ಯಾಃ ಯೋಷಿದ್ಗತಾನಿರುದ್ಧಾಖ್ಯಾಗ್ನೇಃ ಉಪಸ್ಥಃ ಉಪಸ್ಥಿತೇಃ ಉಪಸ್ಥನಾಮಾ ಉಪಸ್ಥಗತಃ ಅನಿರುದ್ಧನಾರಾಯಣಾತ್ಮಾ ಸಮಿತ್** –ಎಂಬ ವಾಕ್ಯವೇ ಇದಕ್ಕೆ ಪ್ರಮಾಣವು.

(೭) ಸಮೀಪದಲ್ಲಿ ವಾಸಮಾಡುವುದರಿಂದ ಪರಮಾತ್ಮನಿಗೆ **"ಉಪಸ್ಥ"**

ಎಂದು ಹೆಸರು. ಇಂತು, ಉಪಸ್ಥತಗತನಾದ ಉಪಸ್ಥಶಬ್ದವಾಚ್ಯನಾದ **ಅನಿರುದ್ಧಾಖ್ಯನಾರಾಯಣನೇ** ಈ ಯೋಷಾಗ್ನಿಗೆ ಸಮಿತ್ತು ಎಂದೆನಿಸುವನು.

(೮) ಇದಕ್ಕೆ **ಸಮಾನಾಖ್ಯ ಪ್ರಾಣನಾಮಕ** ವಾಯುದೇವರು ಅವಾಂತರಾಭಿಮಾನಿಗಳು.

(೯) ರತಿಕ್ರೀಡಾ ಸಮಯದಲ್ಲಿ ಆಡುವ ಕಾಮೋತ್ಪತ್ತಿ ಮಾತುಗಳೇ ಯೋಷಾಗ್ನಿ ಮತ್ತು ಉಪಸ್ಥವೆಂಬ ಸಮಿತ್ತುಗಳ ಸಂಬಂಧದಿಂದ ಉತ್ಪತ್ತಿಯಾಗುವ ಧೂಮವು.

(೧೦) ರತ್ಯರ್ಥವಾಗಿ, ಕಾಮವನ್ನು ಉತ್ಪತ್ತಿ ಮಾಡುವ ಮಾತುಗಳನ್ನು ಪುರುಷನೊಳಗೆ ಸ್ಥಿತನಾಗಿದ್ದು ಮಾಡುವುದರಿಂದ ಪರಮಾತ್ಮನಿಗೆ **"ಉಪಮಂತ್ರಣ"** ಎಂದು ಅಭಿಧಾನವು. ಉಪಮಂತ್ರಣ ಎಂದರೆ, "ಸಂಭಾಷಣೆ" ಎಂದರ್ಥ

**"ಉಪಮಂತ್ರಯತೇ ರತ್ಯರ್ಥ ಸಂಭಾಷಣೇ ಇತಿಯತ್ ಸಃ ತತ್ರತ್ಯಃ ಅನಿರುದ್ಧವಾಸುದೇವಾತ್ಮೋಪಮಂತ್ರಣ ಧೂಮಾ ನಾಮಾ"** ॥

—ಎಂಬ ಪ್ರಮಾಣವಾಕ್ಯವು ಇದಕ್ಕೆ ಆಧಾರವು.

(೧೧) ಇಂತು, ಉಪಮಂತ್ರಣ ಶಬ್ದವಾಚ್ಯನಾದ **ಅನಿರುದ್ಧಾಖ್ಯ ವಾಸುದೇವ** ನಾಮಕ ಪರಮಾತ್ಮನು ಯೋಷಾಗ್ನಿ ಮತ್ತು ಉಪಸ್ಥವೆಂಬ ಸಮಿತ್ತೆಂಬ ಕಾಷ್ಠಗಳ ಸಂಯೋಗದಿಂದ ಹೊರಡುವ ಧೂಮನೆನಿಸುವನು.

(೧೨) ಇದಕ್ಕೆ **ಸಮಾನಾಖ್ಯ ಅಪಾನ** ನಾಮಕ ವಾಯುದೇವರು ಅವಾಂತರಾಭಿಮಾನಿಗಳು.

(೧೩) ಸ್ತ್ರೀಯ ಜನನೇಂದ್ರಿಯವಾದ ಯೋನಿಯೇ ಯೋಷಾಗ್ನಿಯಿಂದ ಹೊರಡತಕ್ಕ ಮಹಾಜ್ವಾಲೆಯು.

(೧೪) ಸಂಗಮಮಾಡುವುದರಿಂದ (ಮಿಶ್ರಣ ಮಾಡುವುದರಿಂದ) ಪರಮಾತ್ಮನು "**ಯೋನಿ**" ಶಬ್ದವಾಚ್ಯನು.

**"ಯುಸಕ್ತ ಮಿಶ್ರೀಕರೋತೀತಿ ಯೋನಿನಾಮಾ ಯೋನಿಸ್ಥೋ ಅನಿರುದ್ಧ ಸಂಕರ್ಷಣಾತ್ಮಾರ್ಚಿಃ"**

–ಎಂಬ ಪ್ರಮಾಣರೀತ್ಯಾ, ಯೋನಿನಾಮಕನಾಗಿ. ಯೋನಿಸ್ಥನಾಗಿರುವ ಅನಿ**ರುದ್ಧಾಖ್ಯ ಸಂಕರ್ಷಣ** ನಾಮಕ ಪರಮಾತ್ಮನೇ ಮಹಾಜ್ವಾಲೆ ಎಂದೆನಿಸುವನು.

(೧೫) ಇದಕ್ಕೆ **ಸಮಾನಾಖ್ಯ ವ್ಯಾನ** ನಾಮಕ ಪ್ರಾಣದೇವರು ಅವಾಂತರಾಭಿಮಾನಿಗಳು.

(೧೬) ಯೋನಿಯಲ್ಲಿ ಪ್ರವೇಶ ಕ್ರಿಯೆಯೇ ಕೆಂಡವೆಂದೆನಿಸುವುದು.

(೧೭) ಅಂತಸ್ಥನಾಗಿ ಕ್ರಿಯಾ ನಡೆಸುವುದರಿಂದ, ಪರಮಾತ್ಮನಿಗೆ "ಅಂಗಾರ" ಎಂದು ಹೆರರು. ಇಂತು ಅಂಗಾರ ಶಬ್ದವಾಚ್ಯನಾದ **ಅನಿರುದ್ಧಾಖ್ಯ ಪ್ರದ್ಯುಮ್ನ** ನಾಮಕ ಪರಮಾತ್ಮನೇ ಕೆಂಡವೆಂದೆನಿಸುವನು.

"**ಅಂತಃ ಕರೋತಿ ತೇಂಗಾರಾಃ**"–ಎಂಬ ಛಾಂದೋಗ್ಯ ಉಪನಿಷದ್ವಾಕ್ಯವೇ ಇದಕ್ಕೆ ಪ್ರಮಾಣವು.

(೧೮) ಇದಕ್ಕೆ **ಸಮಾನಾಖ್ಯ ಉದಾನ** ನಾಮಕ ವಾಯುದೇವರು ಅವಾಂತರಾಭಿಮಾನಿಗಳು.

(೧೯) ರತಿಕ್ರೀಡೆಯಿಂದ ಉಂಟಾಗುವ ಆನಂದವೇ (ಉತ್ಸಹ) ಕಿಡಿಗಳು,

(೨೦) ರತಿಯಲ್ಲಿ ಉತ್ಸಾಹ (ಆನಂದ) ವನ್ನು ಕೊಡಿಸುವನಾದ್ದರಿಂದ ಪರಮಾತ್ಮನಿಗೆ "**ಅಭಿನಂದ**" ಎಂದು ಹೆಸರು.

**"ಅಭಿನಂದತೀತ್ಯಭಿನಂದನಾಮಾ ಅಭಿನಂದನೆಶೋ ಅನಿರುದ್ಧಾನಿರುದ್ಧಾತ್ಮಾ ವಿಸ್ಫುಲಿಂಗಾಃ"**

-ಎಂಬ ಪ್ರಮಾಣರೀತ್ಯಾ. ಆನಂದಪ್ರದನಾದ ಅಭಿನಂದ ಶಬ್ದವಾಚ್ಯನಾದ **ಅನಿರುದ್ಧಾಖ್ಯ ಅನಿರುದ್ಧ** ರೂಪಿ ಪರಮಾತ್ಮನು ರತಿಕ್ರೀಡೆಯಲ್ಲಿ ಕಿಡಿ ಎಂದೆನಿಸುತ್ತಾನೆ.

(೨೧) ಇದಕ್ಕೆ ಸಮಾನಾಖ್ಯ ಸಮಾನ ನಾಮಕ ವಾಯುದೇವರು ಅವಾಂತರಾಭಿಮಾನಿಗಳು.

ಹೀಗೆ,ಸ್ತ್ರೀ ಎಂಬ ಯೋಷಾಗ್ನಿಯಲ್ಲಿ ಉಪಸ್ಥ ತತ್ತ್ವವೆಂಬ ಸಮಿತ್ತನ್ನು ಹಾಕಿ, ಕಾಮೋತ್ಪತ್ತಿ ಪರವಾದ ಮಾತುಗಳೇ ಧೂಮವಾಗಿ, ಯೋನಿಯೇ ಮಹದರ್ಚಿಯಾಗಿ, ಯೋನಿಪ್ರವೇಶರೂಪವಾದ ಕ್ರಿಯೆಯು ಕೆಂಡವೆಂದೆನಿಸಿ, ಆ ರತಿಕ್ರೀಡೆಯಿಂದ ಉತ್ಪನ್ನವಾದ ಉತ್ಸಹ ರೂಪವಾದ ಆನಂದಾನುಭವವೇ ಕಿಡಿಗಳೆಂದೆನಿಸಿರುವ ಇಂತಹ ಯೋಷಾಗ್ನಿಯಲ್ಲಿ ದೇವತೆಗಳು ಪುರುಷನ ರೇತಸ್ಸೆಂಬ ಆಹುತಿಯನ್ನು (ಅವದಾನ) ಕೊಡುವರು. ಆ ಯಜ್ಞಾಹುತಿಯ ಫಲವಾಗಿ ಗರ್ಭೋತ್ಪತ್ತಿಯಾಗುವುದು.

**"ತಸ್ಮಿನ್ ಅಗ್ನೌ ದೇವಾಃ ರೇತೋ ಜುಹ್ವತಿ ।**
**ತಸ್ಯಾಹುತೇಃ ಗರ್ಭಂ ಸಂಭವತಿ ॥"**

-ಎಂಬ **ಛಾಂದೋಗ್ಯೋಪನಿಷದ್ವಾಕ್ಯವೇ** ಇದಕ್ಕೆ ಪ್ರಮಾಣ.

ಪುರುಷನಾಮಕನಾಗಿರುವುದರಿಂದಲೂ, ಸರ್ವೋತ್ತಮನಾಗಿರುವುದರಿಂದಲೂ ಪರಮಾತ್ಮನಿಗೆ **ಪುರುಷೋತ್ತಮ** ನೆಂದು ಹೆಸರು. ಇಂತಹ ಪುರುಷೋತ್ತಮನಾದ ಯಜ್ಞಾಭಿಮಾನಿ ಅನಿರುದ್ಧರೂಪಿ ಪರಮಾತ್ಮನಿಗೆ ಇಂತಹ ಯೋಷಾಗ್ನಿಯಲ್ಲಿ ಆಹುತಿಗಳನ್ನು ಕೊಡುವುದರಿಂದ, ಅದರಿಂದ ಸಂತುಷ್ಟನಾಗಿ ಆ ಪೂಜಾರೂಪವಾದ ಯಜ್ಞವನ್ನು ಸ್ವೀಕಾರಮಾಡಿ, ನಮ್ಮ ಕಾಮಸಂಬಂಧವಾದ ಸಮಸ್ತ ಅಪರಾಧಗಳನ್ನು ಮನ್ನಿಸಿ ಸಂರಕ್ಷಣೆ ಮಾಡುವನೆಂದು ತಾತ್ಪರ್ಯ. ॥೬॥

## ಯೋಷಾಗ್ನಿಯ ವಿವರಗಳನ್ನು ಸೂಚಿಸುವ ಪಟ್ಟಿ

| ಕ್ರಮ ಸಂಖ್ಯೆ | ಅಂಗಗಳು | ಅಧಿಷ್ಠಾನ | ಭಗವದ್ರೂಪ | ವಾಯುರೂಪ | ವಿವರಗಳು |
|---|---|---|---|---|---|
| ೧ | ಸ್ತ್ರೀ (ಜನನಿ) | ಯೋಷಾಗ್ನಿ | ಅನಿರುದ್ಧ | ಸಮಾನ | ಸರ್ವರಿಂದಲೂ ಸೇವ್ಯಮಾನನಾಗಿರುವುದರಿಂದ"ಯೋಷ"ನಾಮಕನು. |
| ೨ | ಉಪಸ್ಥ | ಸಮಿಧೆ | ಅನಿರುದ್ಧಾಖ್ಯ ನಾರಾಯಣ | ಸಮಾನಾಖ್ಯ ಪ್ರಾಣ | ಸಮೀಪದಲ್ಲಿ ವಾಸಿಸುವುದರಿಂದ "ಉಪಸ್ಥ"ಶಬ್ದವಾಚ್ಯನು. |
| ೩ | ಕಾಮೋತ್ಪತ್ತಿ | ಧೂಮ | ಅನಿರುದ್ಧಾಖ್ಯ ವಾಸುದೇವ | ಸಮಾನಾಖ್ಯ ಅಪಾನ | ರತ್ಯರ್ಥವಾಗಿ ಕಾಮೋತ್ಪತ್ತಿ ಮಾತುಗಳನ್ನು ಆಡಿಸುವುದರಿಂದ "ಉಪಮಂತ್ರಣ"(ಸಂಭಾಷಣೆ)ನಾಮಕನು |

| | | | | | |
|---|---|---|---|---|---|
| ೪ | ಯೋನಿ | ಮಹಾಜ್ವಾಲೆ | ಅನಿರುದ್ಧಾಖ್ಯ ಸಂಕರ್ಷಣ | ಸಮಾನಾಖ್ಯ ವ್ಯಾನ | ಸಂಗಮ ಮಾಡುವುದರಿಂದ "ಯೋನಿ" ಶಬ್ದವಾಚ್ಯನು. |
| ೫ | ಯೋನಿ ಪ್ರವೇಶ ಕ್ರಿಯೆ | ಕೆಂಡ | ಅನಿರುದ್ಧಾಖ್ಯ ಪ್ರದ್ಯುಮ್ನ | ಸಮಾನಾಖ್ಯ ಉದಾನ | ಅಂತಸ್ಥ ಕ್ರಿಯಾಕರ್ತ. |
| ೬ | ಆನಂದ (ಉತ್ಸಹ) | ಕಿಡಿ | ಅನಿರುಡ್ಧಾಖ್ಯ ಅನಿರುದ್ಧ | ಸಮಾನಾಖ್ಯ ಸಮಾನ. | ರತಿಕ್ರೀಡೆಯಲ್ಲಿ ಆನಂದಪ್ರದನು "ಅಭಿನಂದ" ಶಬ್ದವಾಚ್ಯನು. |

# ಪದ್ಯ (೭)

ಮೂಲ :–

ಐದು ಅಗ್ನಿಗಳಲ್ಲಿ ಮರಿಯದೆಲೆ ।
ಐದು ರೂಪಾತ್ಮಕನ ಇಪ್ಪ ।
ತ್ತೈದು ರೂಪಗಳನುದಿನದಿ ನೆನೆವರಿಗೆ ಜನುಮಗಳ ॥
ಐದಿಸನು ನಳಿನಾಕ್ಷ ರಣದೊಳು ।
ಮೈದುನನ ಕಾಯ್ದಂತೆ ಸಲಹುವ ।
ಚೈದವಗೆ ಗತಿಯಿತ್ತ ಭಯಹರ ಭಕ್ತವತ್ಸಲನು ॥ ॥೭॥

**ಅವತರಣಿಕೆ :–**

ಗಗನಾಗ್ನಿಯಾದಿ ಯೋಷಾಗ್ನಿ ಪರ್ಯಂತ ಪೂರ್ವೋಕ್ತ ಪಂಚಾಗ್ನಿಗಳಲ್ಲಿ ನಾರಾಯಣಾದಿ ಅನಿರುದ್ಧ ಪರ್ಯಂತ ವಿದ್ಯಮಾನನಾಗಿರುವ ಮೂಲರೂಪ ಗಳು ಐದು ಮತ್ತೆ ಯಜ್ಞೋಪಾಂಗಗಳಾದ ಸಮಿತ್ತು ಇತ್ಯಾದಿ ಪಂಚಾಧಿ ಷ್ಠಾನಗತ ಇಪ್ಪತ್ತೈದು ರೂಪಗಳು. ಒಟ್ಟಿನಲ್ಲಿ ಪಂಚಾಗ್ನಿಗತ ಮೂವತ್ತು ರೂಪಗಳನ್ನು ಮರೆಯದೆ, ನಿರಂತರದಲ್ಲಿಯೂ ಧ್ಯಾನೋಪಾಸನೆ ಮಾಡುತ್ತಿ ರುವ ಭಗವದ್ಭಕ್ತರಿಗೆ ಜನ್ಮಗಳನ್ನು ಕೊಡದೆ, ಜನನ ಮರಣಾಖ್ಯವಾದ ಸಂಸಾರ ಬಂಧನದಿಂದ ಬಿಡುಗಡೆ ಮಾಡಿ, ಕಮಲದಳಾಯತಾಕ್ಷನಾದ ಪರ ಮಾತ್ಮನು ಮಹಾಭಾರತ ಯುದ್ಧದಲ್ಲಿ ತನ್ನ ಮೈದುನನಾದ ಅರ್ಜುನನನ್ನು ಕಾಪಾಡಿದಂತೆ, ಹಾಗೂ ತನ್ನನ್ನು ಮನಸ್ವೀ ನಿಂದೆಮಾಡಿದ ಜೀವದ್ವಯಾವೇಶ ವಿಶಿಷ್ಟನಾಗಿದ್ದ ಶಿಶುಪಾಲನಲ್ಲಿದ್ದ ಜಯನಾಮಕ ದ್ವಾರಪಾಲಕನಿಗೆ ಸದ್ಗತಿ ಯನ್ನು ಇತ್ತಂತೆ, ಅಸುರಾವೇಶ ಅಜ್ಞಾದಿಗಳಿಂದ ಬರುವ ಸಮಸ್ತ ಭಯ ವನ್ನೂ ಪರಿಹಾರಮಾಡಿ, ಭಕ್ತವತ್ಸಲನಾದ ಆ ಕರುಣಾಸಾಗರನು ಸಂರಕ್ಷಿಸು ವನು ಎಂದು ಹೇಳುತ್ತಾರೆ. "ಐದು ಅಗ್ನಿಗಳಲ್ಲಿ"–ಎಂಬ ಪ್ರಸಕ್ತ ಸಂಧಿ ಗತ ಈ ಏಳನೆಯ ಪದ್ಯದಿಂದ. ॥೭॥

**ಪ್ರತಿಪದಾರ್ಥ :–**

**ಐದು ಅಗ್ನಿಗಳಲ್ಲಿ**= ಆಕಾಶ, ಮೇಘ, ಭೂಮಿ, ಪಿತ ಮತ್ತು ಜನನೀ ಎಂಬ ಪಂಚಾಗ್ನಿಗಳಲ್ಲಿ ಅಂತರ್ಗತನಾಗಿ ಇರತಕ್ಕ ಭಗವದ್ರೂಪಗಳನ್ನು **ಮರಿಯದೆಲೆ**= ಮರೆಯದೆ **ಐದು ರೂಪಾತ್ಮಕನ**= ನಾರಾಯಣ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ಎಂಬ ಐದು ರೂಪಾತ್ಮಕನಾದ ಪರಮಾತ್ಮನ **ಇಪ್ಪತ್ತೈದು ರೂಪಗಳ**= ಪ್ರತಿ ಅಗ್ನಿಯಲ್ಲಿ ಐದು ರೂಪಗಳಂತೆ. ಪಂಚಾಗ್ನಿಗಳಲ್ಲಿ ೨೫ ಸಂಖ್ಯಾಕವಾದ ಭಗವದ್ರೂಪಗಳನ್ನು **ಅನುದಿನದಿ**= ನಿತ್ಯದಲ್ಲಿಯೂ **ನೆನವರಿಗೆ**= ಪೂರ್ವೋಕ್ತ ಪ್ರಕಾರ ಜ್ಞಾನಾನುಸಂಧಾನಯುಕ್ತರಾಗಿ ಸ್ಮರಿಸುತ್ತಿರುವವರಿಗೆ **ಜನುಮಗಳು**= ಪುನಃ ಮುಂದಿನ ಜನ್ಮಗಳನ್ನು **ಐದಿಸನು**= ಕೊಡುವುದಿಲ್ಲ. ಅಂದರೆ, ಅಂತಹ ಧ್ಯಾನೋಪಾಸಕರನ್ನು ಜೀವನ್ಮುಕ್ತರನ್ನಾಗಿ ಮಾಡಿ, ಮಹರಾದಿ ಲೋಕಗಳಲ್ಲಿಟ್ಟು, ಪುನಃ ಜನಿಸುವಂತೆ ಮಾಡುವುದಿಲ್ಲ ಎಂತ ತಾತ್ಪರ್ಯ. **ನಳಿನಾಕ್ಷ**= ಕಮಲದಳಾಯತಾಕ್ಷನಾದ ಶ್ರೀಕೃಷ್ಣನು **ರಣದೊಳು**= ಭಾರತ ಯುದ್ಧದಲ್ಲಿ **ಮೈದುನನ**= ತನ್ನ ತಂಗಿ ಸುಭದ್ರೆಯ ಪತಿಯಾದ ಅರ್ಜುನನನ್ನು **ಕಾಯ್ದಂತೆ**= ಶತ್ರುಗಳಿಂದ ರಕ್ಷಿಸಿದಂತೆ, **ಸಲಹುವ**= ಬೆಂಗಾವಲಾಗಿ ನಿಂತು ಕಾಪಾಡುತ್ತಾನೆ. **ಚೈದವಗೆ**= ತನ್ನನ್ನು ಮನಸ್ವೀ ನಿಂದಾಮಾಡಿದ ಶಿಶುಪಾಲನನ್ನು ಸಂಹರಿಸಿ ಅವನಲ್ಲಿದ್ದ ಜಯನಾಮಕ ದ್ವಾರಪಾಲಕನಾದ ಸಚ್ಚೇತನನಿಗೆ **ಭಯಹರ**= ಭಕ್ತರಿಗೆ ಬರುವ ಸಕಲ ವಿಧವಾದ ಭಯಗಳನ್ನು ನಿವಾರಿಸುವ **ಭಕ್ತವತ್ಸಲನು**= ಭಕ್ತರಲ್ಲಿ ಕಾರುಣ್ಯವುಳ್ಳ ಪರಮಾತ್ಮನು **ಗತಿಯಿತ್ತ**= ಸದ್ಗತಿಯನ್ನು ಅನುಗ್ರಹಿಸಿದನು. ॥೭॥

## ವ್ಯಾಖ್ಯಾನಗಳು-

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :–

ಇಂಥಾ ಅನುಸಂಧಾನದಿಂದ ಭಗವದನುಗ್ರಹ ಎಂಥಾದ್ದು ಆಗುತ್ತದೆ ಎಂತ ಹೇಳುತ್ತಾರೆ.

ಐದು ಅಗ್ನಿಗಳಲ್ಲಿ ಮರಿಯದಲೆ-ಗಗನಾದಿ ಐದು ಅಗ್ನಿಗಳಲ್ಲಿ ಅಂತರ್ಗತನಾಗಿ ಇರತಕ್ಕ ಶ್ರೀಪರಮಾತ್ಮನ ಮರಿಯದೇನೇ, ಐದು ರೂಪಾತ್ಮಕನ-ಅನಿರುದ್ಧಾದಿ ಐದು ರೂಪದಿಂದ ಪ್ರಚುರನಾದ ಶ್ರೀಪರಮಾತ್ಮನ, ಇಪ್ಪತ್ತೈದು ರೂಪಗಳ-ಒಂದೊಂದು ಅಗ್ನಿಗತ ಒಂದೊಂದು ರೂಪದಿಂದ ಅನಿರುದ್ಧಾದಿ ಐದು ರೂಪಗಳ ಅಂಶ ವಿಶೇಷಗಳಿಂದ ಒಂದೊಂದು ಅಗ್ನಿಗೆ ಏರ್ಪಟ್ಟ ಕಾಷ್ಠಾದಿ, ಧೂಮಾದಿ ಐದು ಅಧಿಷ್ಠಾನಗಳಲ್ಲಿ ಐದು ರೂಪದಿಂದ ಇದ್ದಾನೆ. ಈ ಪ್ರಕಾರ ಆಗತಕ್ಕ ರೂಪಗಳು, ಇಪ್ಪತ್ತೈದು ರೂಪಗಳು. ಅಂತು, ಅಗ್ನಿಗತ ರೂಪಗಳು ಐದು, ಧೂಮಾದಿಗತ ರೂಪಗಳು ಇಪ್ಪತ್ತೈದು. ಅಂತು ಮೂವತ್ತು ರೂಪಗಳು. ಪ್ರಥಮ ಶ್ಲೋಕದಲ್ಲಿ ಹೇಳಿದ ತ್ರಿಂಶತಿ ಮೂರ್ತಿಗಳು ಇವೇನೇ. ಈ ರೂಪಗಳ ಅನುದಿನದಿ ನೆನೆವರಿಗೆ-ಪ್ರತಿದಿನದಲ್ಲೂ ಪೂರ್ವೋಕ್ತ ಪ್ರಕಾರ ಯಜ್ಞಾನುಸಂಧಾನದಿಂದ ಅಂತರ್ಗತ ಭಗವದ್ರೂಪಗಳ ಸ್ಮರಣೆ ಮಾಡುತ್ತಾ ಇರತಕ್ಕವರಿಗೆ, ಜನುಮಗಳ ಐದಿಸನು-ಪುನಶ್ಚ ಜನ್ಮಕ್ಕೆ ತರೋದಿಲ್ಲ, ಎಂದರೆ, ಜೀವನ್ಮುಕ್ತರನ್ನು ಮಾಡಿ, ಮಹರಾದಿ ಲೋಕಗಳಲ್ಲಿಟ್ಟು ಜನ್ಮಕ್ಕೆ ನಳಿನಾಕ್ಷ-ಕಮಲದಳದೋಪಾದಿಯಲ್ಲಿ ನೇತ್ರಗಳು ಉಳ್ಳ ಶ್ರೀಪರಮಾತ್ಮ, ರಣದೊಳು ಮೈದುನನ-ಭಾರತಯುದ್ಧದಲ್ಲಿ ಅರ್ಜುನನ ಕಾಯ್ದಂತೆ-ಶತ್ರುಗಳನ್ನು ಪರಾಜಯ ಮಾಡಿ, ರಕ್ಷಿಸಿದಂತೆ, ಸಲಹುವ-ಪಾಪಗಳ ನಾಶಮಾಡಿ ಸಂರಕ್ಷಿಸುತ್ತಾನೆ, ಬೈದವಗೆ ಗತಿಯಿತ್ತ-ಶ್ರೀಪರಮಾತ್ಮನ್ನ ಶಿಶುಪಾಲ ಬೈದವ. ಇವನಲ್ಲಿ ಜೀವದ್ವಯಾವೇಶ. ಜಯನೆಂಬ ದ್ವಾರಪಾಲಕ, ಶಿಶುಪಾಲನೆಂಬೋ ದೈತ್ಯ ಇಬ್ಬರು. ಬೈದ ಶಿಶುಪಾಲನಿಗೆ ದುರ್ಗತಿ. ಜಯನೆಂಬ ದ್ವಾರಪಾಲಕನಿಗೆ ಸದ್ಗತಿ ಕೊಡುವವನಾದ. ಭಯಹರ-ಸಂಸಾರ ಭಯ ಪರಿಹಾರಕನಾದವ. ಭಕ್ತವತ್ಸಲನು-ಭಕ್ತರಲ್ಲಿ ದಯಾವುಳ್ಳ ಪರಮಾತ್ಮನು. ಶಿಶುಪಾಲ ಜಯನ ದೃಷ್ಟಾಂತದಿಂದ ಅಸುರಾವೇಶದಿಂದ ಭಕ್ತರು ಪಾಪಗಳ ಮಾಡಿದ ಕಾಲಕ್ಕೂ, ಈ ಪಾಪಫಲದಿಂದ ದೇಹಗತ ಅಸುರರಿಗೆ ದುರ್ಗತಿಯೂ, ಭಕ್ತರಿಗೆ ಸದ್ಗತಿಯೂ ಕೊಡತಾನೆ ಎಂತ ತಿಳಿಯಬೇಕು ಎಂತ ತಾತ್ಪರ್ಯ. ॥೭॥

(೨) "ಭಾವಪ್ರಕಾಶಿಕೆ" ವ್ಯಾಖ್ಯಾನ:-

ಹೀಗೆ ಮೇಲಿನ ಐದು ಪದ್ಯಗಳಲ್ಲಿ ಹೇಳಿದ ಪ್ರಕಾರ ಆಕಾಶ, ಮೇಘ, ಭೂಮಿ, ಪುರುಷ, ಸ್ತ್ರೀ ಎಂಬ ಐದು ಅಗ್ನಿಗಳಲ್ಲಿ ನಾರಾಯಣ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧನೆಂಬ ಐದು ರೂಪಗಳನ್ನು ಚಿಂತಿಸಿ, ಮರಿಯದೆ, ನಾರಾಯಣ ಮೊದಲಾದ ಒಂದೊಂದು ರೂಪದಲ್ಲಿಯೂ ನಾರಾಯಣಾದಿ ಐದು ರೂಪಗಳಂತೆ, ಒಟ್ಟು ೨೫ ರೂಪಗಳನ್ನು ಪ್ರತಿದಿವಸದಲ್ಲಿಯೂ, ಸ್ಮರಿಸುತ್ತಿದ್ದವರಿಗೆ ಪುನರ್ಜನ್ಮವನ್ನು ಕೊಡಿಸದೆ, ಶ್ರೀಕೃಷ್ಣನು ತನ್ನ ತಂಗಿ ಸುಭದ್ರೆಯ ಪತಿಯಾದ ಅರ್ಜುನನ್ನು ತಾನು ಸಾರಥಿಯಾಗಿದ್ದು, ಯುದ್ಧಕಾಲದಲ್ಲಿ ರಕ್ಷಿಸಿದಂತೆ ರಕ್ಷಿಸುವನು. ಭಕ್ತವತ್ಸಲನು, ಶ್ರೀಪರಮಾತ್ಮನು ಭಕ್ತರಿಗೆ ಬರುವ ಭಯಗಳನ್ನು ಪರಿಹರಿಸುವನು. ಬಾಲ್ಯದಾರಭ್ಯ ತನ್ನನ್ನು ದೂಷಿಸುತ್ತಿದ್ದ ಶಿಶುಪಾಲ ಪ್ರವಿಷ್ಟನಾದ ಜಯನೆಂಬ ದ್ವಾರಪಾಲಕನನ್ನು ಮುಕ್ತಿಯನ್ನು ಕೊಟ್ಟು ಸಂರಕ್ಷಿಸಿದನು. ಆದುದರಿಂದಲೇ ಭಕ್ತವತ್ಸಲನೆಂಬ ಬಿರುದು ಅವನಿಗೆ ಇರುವುದು. ||೭||

(೨) "ಭಾವದರ್ಪಣಟೀಕಾ" ವ್ಯಾಖ್ಯಾನ:—

ಈಗ "**ದ್ಯು ಪರ್ಜನ್ಯ ಧರಾ ಪುಂ ಸ್ತ್ರೀ**"ಈ ಒಂದೊಂದು ಅಗ್ನಿಯಲ್ಲಿ ಶ್ರೀ ಹರಿ ನಾರಾಯಣಾದಿ ಪಂಚರೂಪ ಪ್ರಕಾರ ಇಪ್ಪತ್ತೈದು ರೂಪದಿಂದ ಇದ್ದಾನೆಂದು ಮನಃಪೂರ್ವಕ ಸ್ಮರಣೇ ಮಾಡತಕ್ಕ ಜನರಿಗೆ ಪುನಃ ಜನ್ಮಗಳೇ ಕೊಡೋದಿಲ್ಲವೆಂದು ಆತನ ಕೃಪಾ ವಿವರಣ ಮಾಡುತ್ತಾರೆ-"ಐದೇತಿ"||

ಮೈದುನ-ಅರ್ಜುನ. ಬೈದವ-ಶಿಶುಪಾಲ.

**ಸಾರಾಂಶ :—**

ಈ ಪಂಚಾಗ್ನಿ ವಿವರ ತಿಳಿಯೋ ಉದ್ದಿಶ್ಯ ಉಕ್ತವಾದ **ಛಾಂದೋಗ್ಯೋಪನಿಷತ್ತಿನ ಖಂಡಗತ** ಶಬ್ದಗಳು ಕನ್ನಡ ಪದ್ಯ ರಚನಕ್ಕೆ ಅನಾನುಕೂಲವಾದ ಕಾರಣ, ಈ ಪದ್ಯಗಳಲ್ಲಿ ಪರ್ಯಾಯ ಶಬ್ದಗಳು ಪ್ರಯೋಗ ಮಾಡಿರು

ತ್ತಾರೆ. ಮೂಲವಾದಂಥ ಖಂಡೋಕ್ತ ಶಬ್ದಗಳಿಗೆ ಶ್ರೀಸರ್ವಜ್ಞರು ಭಾಷ್ಯ ರೂಪದಿಂದ ನಿರ್ವಚನ ಮಾಡಿರುತ್ತಾರೆ. ಆದ ಕಾರಣ ಉಭಯ ಶಬ್ದಗಳೂ ಏಕಾರ್ಥವೆಂತಲೇ ತಿಳೀತಕ್ಕದ್ದು. ಆ ಶಬ್ದದ ನಿರ್ವಚನ ವಿವರ ಅಗ್ನಿಃ ಸಮಿತ್ತು, ಧೂಮ, ಅರ್ಚಿ, ಅಂಗಾರ, ವಿಸ್ಫುಲಿಂಗಾದಿ ಆರು ಶಬ್ದಕ್ಕೆ ಪ್ರಥಮಥಃ ಹೇಳುತ್ತದೆ:-

(೧) "ನಿತರಾಂ ನ ಗಚ್ಛತಿ ನ ಚಲತೀತ್ಯಗ್ನಿಃ"
—ಚೇತನವನ್ನು ಬಿಟ್ಟು ಚಲಿಸತಕ್ಕವಲ್ಲ ಎಂಬರ್ಥ.

(೨) "ಸಮೋಧನಾತ್ ಸಮ್ಯಗ್ವಧನಾತ್ ಸಮಿತ್ ಏಧವೃದ್ಧೌ ಇತಿ ಧಾತೋಃ ಸರ್ವೋತ್ತಮ ಇತಿಯಾವತ್"
—ಸರ್ವೋತ್ತಮ ಎಂಬರ್ಥ.

(೩) "ಧೂಕ್ತಾರಾತ್ ಶತ್ರೂಣಾಂ ಕಂಪನಾತ್ ಧೂಮಃ ಧೂತ್ರ ಕಂಪನೋತಿ ಧಾತೋಃ"
—ಶತ್ರುಗಳನ್ನು ನಡುಗಿಸತಕ್ಕವ ಎಂಬರ್ಥ.

(೪) "ಅರಂಚಿತತ್ವಾದರ್ಚಿಃ"
—ಸರ್ವದಾ ಸರ್ವರಿಂದಲೂ ಪೂಜ್ಯ ಎಂಬರ್ಥ.

(೫) "ಅಂಗರತೇಃ ಜೀವದೇಹರತೇಃ ಸ್ವಾಂಗೇ ರತೀರ್ವಾ ಅಂಗಾರಃ"
—ಸಮಸ್ತ ದೇಹದಲ್ಲೂ ತನ್ನ ದೇಹದಲ್ಲಿ ರಮಣಮಾಡತಕ್ಕವನೆಂದರ್ಥ.

(೬) "ವಿವಿಧಂ ಜ್ಞಾನಿನಾಂ ಸ್ಫುರಣಾತ್ ವಿಸ್ಫುಲಿಂಗಾಃ"
—ನಾನಾ ವಿಧವಾಗಿ ತನ್ನ ಗುಣರೂಪ ಕ್ರಿಯೆಗಳನ್ನು ಸ್ಫೂರ್ತಿಗೆ ತಂದುಕೊಡತಕ್ಕವನೆಂದರ್ಥ.

ತದುಕ್ತಂ ಶ್ರೀಮದಾನಂದತೀರ್ಥ ಪೂಜ್ಯ ಚರಣೈಃ "ಛಾಂದೋಗ್ಯ ಭಾಷ್ಯೇ":-

"ನಾರಾಯಣಾದಯಃ ಪಂಚ ಕ್ರಮಾತ್ಪಂಚಾಗ್ನಯಃ ಸ್ಮೃತಾಃ।
ಆದನಾಂದಗನೇತೃತ್ವಾನ್ನಿತರಾಂ ಬಲವತ್ವತಃ ॥
ಸಮೇಧನಾತ್ಸಮಿದ್ವಿಷ್ಣುರ್ಧೂರ್ತಾತ್ಕಾರಾದ್ಧೂಮ ಉಚ್ಯತೇ।
ಆರಂಚಿತತ್ವಾದರ್ಚಿಶ್ಚ ಸೋಂಗಾರೋಂಗರತೇರಪಿ ।
ವಿವಿಧಂ ಸ್ಫುರಣಾಚ್ಚೈವ ವಿಸ್ಫುಲಿಂಗ ಇತೀರಿತ ಇತ್ಯಾದಿ ॥"

ಪ್ರಥಮಾಗ್ನಿಗತ ಆದಿತ್ಯ ರಶ್ಮಿ ಅಹಶ್ಚಂದ್ರ ನಕ್ಷತ್ರ ಶಬ್ದಗಳ ನಿರ್ವಚನ ಮಾಡುತ್ತದೆ :-

(೧) "ಆದಾನಾದಾಯುರಾದೇಃ ಆದಿತ್ಯಃ ತತ್ರ ನಾರಾಯಣಃ"
-ಆಯುಸ್ಸು ಕೊಡೋಣ, ಸ್ವೀಕಾರ ಮಾಡೋಣ ಎಂದರ್ಥ.

(೨) "ರತಿ ಶಂರೂಪತ್ವಾದ್ರಶ್ಮಿನಾಮ ತಸ್ಥಃ ವಾಸುದೇವಃ ರಮಣರೂಪಃ"
-ಸುಖ ರೂಪವೆಂದರ್ಥ.

(೩) "ತಮಸಾಂ ಜ್ಞಾನೇನ ಹನನೀಯತ್ವಾತ್ ಅಹಃ ತಸ್ಥಃ ಸಂಕರ್ಷಣಃ"
-ಅಜ್ಞಾನಾಖ್ಯ ತಮಸ್ಸುಗಳನ್ನು ಜ್ಞಾನದಿಂದ ನಿವಾರಣ ಮಾಡ ತಕ್ಕಂಥವ ಎಂಬರ್ಥ.

(೪) ಪರಮ ಸುಖಕರತ್ವಾಚ್ಚಂದ್ರ ತಸ್ಥಃ ಪ್ರದ್ಯುಮ್ನಃ"
-ಪರಲೋಕ ಸುಖಪ್ರದ ಎಂಬರ್ಥ.

(೫) "ಅಸ್ಯ ಕ್ಷತ್ರಮನ್ಯೋ ನಾಸ್ತೀತಿನಕ್ಷತ್ರಃ ತಸ್ಥ ಅನಿರುದ್ಧಃ"
-ಇತರ ರಾಜ ಇಲ್ಲದೆಂಬ ಅರ್ಥ.

ತದುಕ್ತಂ ಛಾಂದೋಗ್ಯಭಾಷ್ಯೇ :-

"ಪುನರ್ನಾರಾಯಣಾಧ್ಯಾತ್ಮಾ ಪ್ರತ್ಯೇಕಂ ಪಂಚರೂಪವಾನ್।
ಆದಿತ್ಯಸ್ಥಸ್ತಥಾನಾದಾದ್ರಶ್ಮಿಃತಿರತಿ ರೂಪತಃ ॥

**ತನುಸಾಂ ಹನನೀಯತ್ವಾದಹಶ್ಚಂದ್ರಪರಂ ಸುಖಂ।**
**ಅನನ್ಯ ರಾಜೋ ನಕ್ಷತ್ರಮಿತ್ಯಾದಿ ॥"**

ದ್ವಿತೀಯಾಗ್ನಿಯಲ್ಲಿ ಇರತಕ್ಕ ವಾಯು ಅಭ್ರ ವಿದ್ಯುದಶನೀಹ್ಲಾದಿ ಶಬ್ದಗಳ ನಿರ್ವಚನ ಮಾಡುತ್ತದೆ :–

(೧) **ಜ್ಞಾನರೂಪತ್ವಾದ್ವಾಯುಃ ತಸ್ಥಃ ನಾರಾಯಣಃ"**
-ಜ್ಞಾನರೂಪನಾದ ನಾರಾಯಣನು ಎಂಬರ್ಥ.

(೨) **ಅಪಾಂಭರಣಾದಭ್ರಂ ತಸ್ಥಃ ವಾಸುದೇವಃ"**
ಉದಕ ಧಾರಣ ಮಾಡತಕ್ಕಂಥವ-ವಾಸುದೇವ ಎಂತರ್ಥ.

(೩) **"ವಿದ್ಯೋತನಾವಿದ್ವದ್ಯುತ ತಸ್ಥಃ ಸಂಕರ್ಷಣಃ"**
-ವಿಶೇಷ ಪ್ರಕಾಶರೂಪನು-ಸಂಕರ್ಷಣ ಎಂದರ್ಥ.

(೪) **"ಅಶನಾತ್"**
**"ಆನಂದತ್ವಾದಭಿನಂದಃ ತಸ್ಥಃ ಅನಿರುದ್ಧಃ"**
-ಅತ್ಯಂತ ಆನಂದ ಉಳ್ಳವ ಎಂಬರ್ಥ.

**ಉಕ್ತಂಚ ಛಾಂದೋಗ್ಯಭಾಷ್ಯೇ :-**

**"ಉಪಸ್ಥಿತೇ ರೂಪಸ್ಥಂಸಃ ಉಪಮಂತ್ರಕೃದೇವ ಸಃ।**
**ಯೋನಿರ್ಯುನಕ್ತಿ ಯಸ್ಮಾಸ್ತ್ವನಂದಕೃಚ್ಚಾಥ**
**ನಂದನಜ್ಞ ತಿ ॥"**

ಉಪನಿಷತ್ತಿನ ಪಂಚ ಖಂಡದಲ್ಲಿ ಆದಿ ಪಂಚ ಶಬ್ದಗಳ ನಿರ್ವಚನ ಮಾಡುತ್ತದೆ.

(1)"ಆಸೌ" ಎಂದರೆ ಮುಖ್ಯ ಪ್ರಾಣನಲ್ಲಿದಂಥ ತೇಜೋಮಯ ನಾರಾಯಣ ಎಂದರ್ಥ.

(2) "ಪರಂ" ಎಂದರೆ ಉತ್ತಮನಾದಂಥ ಚತುರ್ಮುಖಾಖ್ಯವಸ್ತು.

ಈತನ ದೆಶೆಯಿಂದ ಜನ್ಯನಾದ ಪ್ರಯುಕ್ತ "ಪರ್ಜನ್ಯ" ಎಂಬರ್ಥ.

(3) "ಪೃಥಿತತ್ವಾತ್ಪೃಥಿವೀ"-ಪ್ರಸಿದ್ಧನಾದ ಎಂಬರ್ಥ.

(4) "ಪೂರ್ಣಷಡ್ಗುಣತ್ವಾತ್ಪುರುಷಃ"

(5) "ಸೇವ್ಯತ್ವಾದ್ಯೋಷಾ ಜ್ಯೋಷಾಜುಷಿಂ ಪ್ರೀತೀತಿ ಸೇವನಯೋಃ"-ಎಂದು ಧಾತು ಇರೋಣದರಿಂದ "ಯೋಷಾ" ಎಂದರೆ, ಸಮಸ್ತ ಜಗತ್ತಿನಿಂದಲೂ ಸೇವೆಮಾಡಿಸಿಕೊಳ್ಳಲ್ಪಡುವನೆಂಬರ್ಥ.

**ಉಕ್ತಂಚ ಛಾಂದೋಗ್ಯಭಾಷ್ಯೇ :-**

**"ಅಸೌಲೋಕ ಪ್ರಕಾಶತ್ವಾತ್ ಪ್ರಾಣಸ್ಥತ್ವಾಚ್ಚ ಕೇಶವಃ ॥**
**ಪರ್ಜನ್ಯೋ ಜನಕೋ ಯಸ್ಮಾತ್ಪೃಥಿವೀ ಪ್ರಥಿತ್ವತಃ ॥**
**ಪುರುಷಃ ಪುರುಯಸ್ಮಾತ್ಸಯೋಷಾ ಜೋಷಾಯತೋ**
**ರಿವಲೈರಿತಿ॥"**

ಇಲ್ಲಿಗೆ ಮೊದಲಿನ ಆರು ಪದ್ಯಗಳ ಉಪನಿಷದ್ವಾಕ್ಯಗತ ಸಾರಾಂಶ ಸಂಪೂರ್ಣವಾಯಿತು. ॥೭॥

## (೪) ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ)-

ಅಥ "ಯ ಏತಾನ್ ಏವಂ ಪಂಚಾಗ್ನೀನ್ ವೇದ"-ಇತಿ ಫಲಾಭಿಜ್ಞಸ್ಯ ಸುಯಜ್ಞಸ್ಯಾಪಿ ಫಲಂ ಕಿಂ ತದುಪಾಸಕಸ್ಯ ಇತ್ಯಾಹ-"ಐದು"—ಇತಿ ॥ "ತದಾಜ್ಞಯೇತಿ ವಿಜ್ಞಾಯ ಕಾಲೇ ಯಾಯಾತ್ ಸ್ವಯೋಷಿತಿ"-ಇತಿ ವಿಷ್ಣುರಹಸ್ಯೋಕ್ತೇಃ । "ಶ್ರುತಿಸ್ಮೃತೇ ಹರೇರಾಜ್ಞಾ"-ಇತ್ಯುಕ್ತೇಃ ಅವಶ್ಯವೇದ್ಯತಾ । ಮೈದುನ ರುಕ್ಮೀ । ಬಹು ನೀಚ ಜರಾಸುತಾದಿ ಸಹಾಯಸ್ಯಾಪಿ ಶ್ರೀ ವಧೂವಾಗಮ್ಯತ ಯಂತ್ರಿತತ್ವಾತ್ ರಕ್ಷಣಂ ಯಥಾ ತದ್ವತ್‌ಪಂಚ ಮಹಾಪಾತಕಿಭಿಃ ಸಮಾಚರನ್ನಪಿ ಪಾಪ್ಮನಾ ಅವಿದ್ಧಃ ಪಂಚಾಗ್ನಿವೇದನಾಭಿವ್ಯಕ್ತ ತ್ರಿಶಂನ್ಮೂರ್ತಿ ಪ್ರಸಾದೇನ" ಇತಿ ಭ್ರೂತ್ರೇತಾವದುಪನಿಷತ್ ॥ "ಯಃ ಪಂಚಾಗ್ನೀನ್ ವೇದ ನ ಸತ್ತೈರಪ್ಯಾಚರನ್ ಪಾಪ್ಮನಾ ಲಿಪ್ಯತೇ ಶುದ್ಧಃ ಪೂತಃ" ॥ಇತಿ॥ತೈರಿತಿ॥ ತದೇಷ ಶ್ಲೋಕಃ । ಸ್ತೇನೋ ಹಿರಣ್ಯ

ಸ್ಯ ಸುರಾಂ ಪಿಬಂಶ್ಚ ಗುರೋಃ ತಲ್ಪಂ ಅವಸನ್ ಬ್ರಹ್ಮಹಾಚ ॥ ಏತೇ ಪತಂತಿ ಚತ್ವಾರಃ ಪಂಚಮಶ್ಚ ಆಚರನ್ ಚ ತೈಃ ॥ ಪ್ರಕೃತೇ ಅನರ್ಹಾಃ ಗ್ರಾಹ್ಯಾಃ ॥ ಮೈದುನೇತ್ಯಸೂಚಿ ಅಯಮರ್ಥಃ ॥ ಬೈದವಗೆ ಇದಂ ದ್ವೇಷಿ ಗತಿದಾನಂ"ಸರ್ವದಾ ಭಕ್ತಿತೋ ಮುಕ್ತಿಃ ದ್ವೇಷಾತ್ ತಮ ಉದೀರಿತಮ್"। ಇತಿ ತೃತೀಯ ಭಾಗವತ ತಾತ್ಪರ್ಯ ವಿರೋಧಿ ಇತಿ ಚೇತ್ ತದವಚ್ಛಿನ್ನಜಯ ಪರತಾಂ ಭ್ರೂಮಃ ॥ ತತ್ರ ಜೀವ ದ್ವಂದ್ವ ಮುದ್ರಯಾಗತಿದ್ವಯಮ್ ॥ ಕಿಂ ಪ್ರಮಾಣಮಿತಿಚೇತ್--"ಜೀವದ್ವಯ ಸಮಾಯೋಗಾತ್ ಗತಿದ್ವಯ ಜಿಗೀರ್ಷವಃ" ॥ ಇತಿ ॥ ಶಿಶುಪಾಲಾದಿಷು ದ್ವಿಧಾ ಜೀವಃ ಸಂತಃ ತು ಅಸಂತಶ್ಚ" ಇತಿ ಚ॥ ಭಕ್ತವತ್ಸಲಃ ಓಂ ಗೃಹಂ ನಮಸ್ವಿನಃ ತೂತುಜಾನೋ ಮಹೇಮತೇಶ್ವೇಭಿಃ ಪ್ರಷಿತಪ್ಸುಭಿಃ ॥ ಅಯಾಪಿ ಯಜ್ಞಮಾಶುಭಃ ಶಮಿದ್ಧಿ ಓಂ ॥ ಭಜಸೇವಾಯಾಂ। ಸೇವ್ಯತೇ ಇತಿ ಭಕ್ತಂ ಧಾನಾದಿಶಂ ಪ್ರತಿ ವತ್ಸಲಾಃ ತತ್ಪ್ರೇಪ್ಸವಃ ಇತಿ ಯಾವತ್ ಅಶ್ವಾಃ ಯಸ್ಯ ಸ ತಥೋಕ್ತಃ ॥೭॥

**ಕನ್ನಡಾನುವಾದ :–**

ಯಾರಿಗೆ ಈ ಪಂಚಾಗ್ನಿ ವಿದ್ಯೆಯು ತಿಳಿದಿರುವುದೋ, ಅವರು ಯಜ್ಞ ಫಲವನ್ನು ಹೊಂದುವರೆಂದು ಛಾಂದೋಗ್ಯೋಪನಿಷತ್ತಿನಲ್ಲಿ ಉಕ್ತವಾಗಿದೆ.

**"ಅಥ ಏತಾನ್ ಪಂಚಾಗ್ನೀನ್ 'ವೇದ"**–ಉಪನಿಷದ್ವಾಕ್ಯ.

"ಶ್ರುತಿ ಸ್ಮೃತಿಗಳು ಶ್ರೀ ಹರಿಯ ಆಜ್ಞೆ"-ಎಂಬ ಪ್ರಮಾಣಗಳಿವೆ. ಇದರಿಂದ **"ಯೋಷಿತ್"** ಮುಂತಾದ ಪಂಚಾಗ್ನಿಗಳ ವಿವರ ಮತ್ತು ಉಪಾಸನಾ ಕ್ರಮವನ್ನು ಅತ್ಯಗತ್ಯವಾಗಿ ತಿಳಿಯಬೇಕು. **"ಏವಂ ವೇದ"** ಎಂಬ ಫಲಸ್ತುತಿಯೊಡನೆ ಪಂಚಾಗ್ನಿಹೋತ್ರದ ಉಪಾಸನೆ ಅತ್ಯಗತ್ಯ.

ಮೈದುನ=ರುಕ್ಮಿ. ರುಕ್ಮಿಯು ರುಕ್ಮಿಣಿಯ ಸಹೋದರ. ಪರಮ ನೀಚರಾದ ಜರಾಸಂಧಾದಿ ಪಾಪಿಗಳಿಗೆ ಸಹಾಯಕ. ಹಾಗಿದ್ದರೂ ರುಕ್ಮಿಣೀ ದೇವಿಯರ ವಚನದಂತೆ ಅವನನ್ನು ರಕ್ಷಿಸಿದನು. ಪಂಚಾಗ್ನಿ ಜ್ಞಾನದಿಂದ ಮೂವತ್ತು ರೂಪಗಳ ಚಿಂತನೆಯಿಂದ ಪಾಪಲೇಪವಿಲ್ಲ; ಮಹಾಪ್ರಸಾದ ಪ್ರಾಪ್ತಿಯಾಗುವುದು.

(೧) ಸುವರ್ಣಚೋರ (೨) ಸುರಾಪಾನಿ (೩) ಗುರುತಲ್ಪಗಾಮಿ (೪) ಬ್ರಹ್ಮಹತ್ಯೆಯನ್ನು ಮಾಡಿರುವವನು ಮತ್ತು (೫) ಈ ನಾಲ್ವರ ಸಹ ವಾಸದಲ್ಲಿರುವವನು. ಇವರು ಪಂಚಮಹಾಪಾತಕಿಗಳು. ಈ ಅರ್ಥವು "ಮೈದುನ" ಎಂಬ ಪದದಿಂದ ಸೂಚಿತವಾಗುತ್ತದೆ. ಚೈದವನಿಗೆ, ಅಂದರೆ ಶಿಶುಪಾಲನಿಗೆ ಸದ್ಗತಿಯಾಯಿತು. "ಭಕ್ತಿಯಿಂದಲೇ ಮುಕ್ತಿ ದ್ವೇಷದಿಂದ ತಮಸ್ಸು"ಇದು ಭಾಗವತ ತೃತೀಯ ಸ್ಕಂಧದ ತಾತ್ಪರ್ಯ ವಚನ ಶ್ರೀಮಧ್ವಾ ಚಾರ್ಯರದು. ಶಿಶುಪಾಲನಿಗೆ ಸದ್ಗತಿ ಪ್ರಾಪ್ತಿಯು. ಈ ವಚನಕ್ಕೆ ವಿರುದ್ಧ ಬರುತ್ತದೆ ಎಂದು ಆಕ್ಷೇಪ ಬಂದರೆ ಶ್ರೀಶುಕಾಚಾರ್ಯರೇ ಅದಕ್ಕೆ ಉತ್ತರ ಕೊಟ್ಟಿರುತ್ತಾರೆ.

"ದ್ವೇಷ ಮಾಡಿದವನಾದ ಶಿಶುಪಾಲನ (ಚೈದ್ಯ) ದೇಹದಲ್ಲಿರುವ "ಜಯ"ನಾಮಕನಾದ ದ್ವಾರಪಾಲಕನಿಗೆ ಸದ್ಗತಿ. ಶಿಶುಪಾಲ ಮುಂತಾದವ ರಲ್ಲಿ ಜೀವದ್ವಯಾವೇಶವಿದೆ. ಎರಡು ಜೀವಗಳೂ ಒಂದೇ ದೇಹದಲ್ಲಿ ಪ್ರವಿಷ್ಟವಾಗಿರುವುದರಿಂದ ಅವರಿಗೆ ಭಿನ್ನಗತಿಗಳಾಗುತ್ತವೆ. ಸುಜೀವನಿಗೆ ಮುಕ್ತಿ. ದುರ್ಜೀವನಿಗೆ ಅಂಧಃತಮಸ್ಸು.

"ಭಕ್ತವತ್ಸಲ"-ಎಂಬುದು ವಿಷ್ಣುಸಹಸ್ರನಾಮಗಳಲ್ಲಿ ಒಂದು. ಇದರ ಅರ್ಥವನ್ನು **"ಗೃಹಂ ನಮಸ್ವಿನಃ"**-ಎಂಬ **ಬೃಹತೀ ಋಙ್ಮಂತ್ರವು** ವಿವರಿಸು ವುದು. "ಭಜ" ಎಂದರೆ "ಸೇವಿಸು" ಎಂದರ್ಥ. ಯಾವುದು ಸೇವಿತವೋ ಅದು ಭಕ್ತ. ಯಜ್ಞಾರ್ಥವಾಗಿ ಅನ್ನವನ್ನು ಹೋಮಿಸುವವನು. ಅಂತಹ ವಿಪ್ರಶ್ರೇಷ್ಠರು ಪರಮಾತ್ಮನಿಗೆ ಅತ್ಯಂತ ಪ್ರೀತಿಯ ವಿಷಯರು. ಇದರಿಂದ ಶ್ರೀಪರಮಾತ್ಮನಿಗೆ "ಭಕ್ತವತ್ಸಲ" ನೆಂದು ಅಭಿಧಾನ. ॥೭॥

**(೫) "ಗುರುಹೃದಯಪ್ರಕಾಶಿಕೆ"–ವ್ಯಾಖ್ಯಾನ :-**

ಹಿಂದೆ ಹೇಳಿದ ಐದು ಅಗ್ನಿಗಳಲ್ಲೂ ಮರೆಯದೆ ನಾರಾಯಣಾದಿ ಪಂಚ ರೂಪಾತ್ಮಕನ ಇಪ್ಪತ್ತೈದು ರೂಪಗಳನ್ನು ನಿರಂತರದಲ್ಲೂ ಸ್ಮರಿಸುವವರಿಗೆ ಕಮಲದಳನೇತ್ರನಾದ ದೇವರು ಭಾರತ ಯುದ್ಧದಲ್ಲಿ ತನ್ನ ಮೈದುನ

ನಾದ ಅರ್ಜುನನನ್ನು ರಕ್ಷಿಸಿದಂತೆ ರಕ್ಷಿಸುವನು. ಪುನರ್ಜನ್ಮಗಳನ್ನು ಕೊಡುವುದಿಲ್ಲ. ಎಂದರೆ, ಈ ಉಪಾಸನೆ ಮೋಕ್ಷಸಾಧನೆ ಎಂದರ್ಥ. ಚೈದಂಥಾ ಶಿಶುಪಾಲನಲ್ಲಿದ್ದ ಜಯನೆಂಬ ದ್ವಾರಪಾಲಕನಿಗೆ, ತತ್ಸ್ವರೂಪ ಪ್ರಾಪ್ತಿ ಎಂಬ ಸದ್ಗತಿಯನ್ನು ಕೊಟ್ಟನು. ಆದುದರಿಂದ ಭಕ್ತವತ್ಸಲ. ಭವಭಯ ಪರಿಹರಿಸುವನು. ॥೭॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಪಂಚಾಗ್ನಿಗತ ಇಪ್ಪತ್ತೈದು ಭಗವದ್ರೂಪಗಳು, ನಾರಾಯಣಾದಿ ಪಂಚರೂಪಗಳು, ಅಂತು, ಒಟ್ಟಿನಲ್ಲಿ ಮೂವತ್ತು ರೂಪಗಳನ್ನು ಮನಸ್ಸಿನಲ್ಲಿ ಚಿಂತಿಸುತ್ತಾ ಧ್ಯಾನೋಪಾಸನೆಯನ್ನು ಮಾಡತಕ್ಕ ಭಗವದ್ಭಕ್ತರನ್ನು ಸದಾ ಸಂರಕ್ಷಿಸುತ್ತಾನೆಂದು ಪ್ರಸಕ್ತ ಪದ್ಯದಿಂದ ತಿಳಿಸುತ್ತಾರೆ.

**"ಅಥ ಏತಾನ್ ಪಂಚಾಗ್ನೀನ್ ವೇದ"**-ಎಂಬ ಛಾಂದೋಗ್ಯೋಪನಿಷತ್ತಿನ ವಾಕ್ಯದಂತೆ. ಯಾರಿಗೆ ಪಂಚಾಗ್ನಿ ವಿದ್ಯೆ ತಿಳಿದಿದೆಯೋ, ಯಾರು ಆ ಪಂಚಾಗ್ನಿಗತ ಭಗವದ್ರೂಪಗಳನ್ನು ನಿರಂತರವೂ ಉಪಾಸಿಸುತ್ತಿರುವರೋ, ಅಂತಹವರು ಆ ಯಜ್ಞಫಲವನ್ನು ಭಗವದನುಗ್ರಹದಿಂದ ಹೊಂದುವರು ಎಂದು ತಾತ್ಪರ್ಯ.

(೧) ಆಕಾಶ (೨) ಪರ್ಜನ್ಯ (ಮೇಘ) (೩) ಭೂಮಿ (೪) ತಂದೆ (ಪುರುಷ) ಮತ್ತು ೫ ಜನನಿ (ಯೋಷಾ) ಈ ಪಂಚಾಗ್ನಿಗತ ನಾರಾಯಣ ವಾಸುದೇವ-ಸಂಕರ್ಷಣ-ಪ್ರದ್ಯುಮ್ನ-ಅನಿರುದ್ಧ ಈ ಅಗ್ನ್ಯಂತರ್ಗತ ಮೂಲ ರೂಪಗಳನ್ನೂ, ಪ್ರತಿಯೊಂದು ಅಗ್ನಿಯ ಅಂಗರೂಪವಾದ (೧) ಸಮಿತ್ತು (೨) ಧೂಮ, (೩) ಅರ್ಚಿ (ಉರಿ) (೪) ಕೆಂಡ (ಅಂಗಾರ) ಮತ್ತು (೫) ಕಿಡಿಗಳು (ವಿಸ್ಫುಲಿಂಗ) ಎಂಬ ೫ ಯಜ್ಞೋಪಕರಣಗಳಲ್ಲಿ ಪ್ರತಿ ಅಗ್ನಿಯಲ್ಲಿಯೂ ಐದರಂತೆ ೨೫ ರೂಪಗಳಾಗುವುವು. ಅಲ್ಲಿಗೆ ಪ್ರತಿ ಅಗ್ನಿಗೂ ಸಂಬಂಧಿಸಿದಂತೆ ೬ ಭಗವದ್ರೂಪಗಳ ಪ್ರಕಾರ ಪಂಚಾಗ್ನಿಗಳಲ್ಲಿ ೬×೫=೩೦ ರೂಪಗಳಾಗುವುವು. ಇಂತು ಪಂಚಾಗ್ನಿಗತ ೨೫ ರೂಪಗಳು ಮತ್ತು ನಾರಾ

ಯಣಾದಿ ಪಂಚರೂಪಗಳನ್ನು ನಿರಂತರವೂ ಸ್ಮರಿಸುತ್ತಾ, ಧ್ಯಾನಕ್ಕೆ ವಿಷಯವನ್ನಾಗಿಸಿ. ಉಪಾಸಿಸುತ್ತಿರಬೇಕು. ಅಂತಹ ಧ್ಯಾನೋಪಾಸಕರಿಗೆ ಕಮಲದಳಾಯತಾಕ್ಷನಾದ ಶ್ರೀಪರಮಾತ್ಮನು ಪುನರ್ಜನ್ಮಗಳನ್ನು ಕೊಡದಂತೆ ಜೀವನ್ಮುಕ್ತರನ್ನಾಗಿ ಮಾಡಿ, ಮಹರಾದಿಲೋಕ ಸ್ಥಾನಗಳಲ್ಲಿಟ್ಟು, ಸದಾ ಅವರ ಬೆಂಗಾವಲಾಗಿ ಸಂರಕ್ಷಿಸುವನು. ಇದಕ್ಕೆ ಎರಡು ನಿದರ್ಶನಗಳನ್ನು ದಾಸರಾಯರು ಈ ಪದ್ಯದಲ್ಲಿ ಕೊಟ್ಟಿರುತ್ತಾರೆ :-

(೧) ಮಹಾಭಾರತ ಯುದ್ಧದಲ್ಲಿ ಕುರುಕ್ಷೇತ್ರ ಎಂಬ ರಣರಂಗದಲ್ಲಿ ಅರ್ಜುನನನ್ನು ಶ್ರೀಕೃಷ್ಣನು ಸಂರಕ್ಷಿಸಿದನು. ಸುಭದ್ರೆಯು ಶ್ರೀಕೃಷ್ಣನ ತಂಗಿ. ಸುಭದ್ರೆಯ ಪತಿ ಅರ್ಜುನನು ಕೃಷ್ಣನಿಗೆ ಮೈದುನನಾಗಬೇಕು. ಮೈದುನನಾದ ಪಾರ್ಥನಿಗೆ ಪಾರ್ಥಸಾರಥಿ ಎಂದೆನಿಸಿ, ಅವನ ಬಂಡಿ ಬೋವನಾಗಿ, ಅವನ ಮಿತ್ರನಾಗಿ, ಕರ್ಣನಿಂದ ಪ್ರಯೋಗಿಸಲ್ಪಟ್ಟ ಭಯಂಕರವಾದ ಸರ್ಪಾಸ್ತ್ರವು ಅರ್ಜುನನನ್ನು ಆಹುತಿ ತೆಗೆದುಕೊಳ್ಳಲು ಬರುತ್ತಿರಲು, ಭಕ್ತವತ್ಸಲನಾದ ಶ್ರೀಕೃಷ್ಣನು ತಕ್ಷಣ ರಥವನ್ನು ಹೆಬ್ಬೆಟ್ಟಿನಿಂದ ಒತ್ತಿ, ಅರ್ಜುನನನ್ನು ಆ ಗಂಡಾಂತರದಿಂದ ಪಾರುಗೊಳಿಸಿ, ಸಂರಕ್ಷಿಸಿದನು. ಇಂತೆಯೇ ಅರ್ಜುನನನ್ನು ಕಾಯ್ದು, ಸಲಹಿದ ಪ್ರಸಂಗಗಳು ಶ್ರೀಮನ್ಮಹಾಭಾರತದಲ್ಲಿ ಅನೇಕವಿವೆ.

ಈ ಪ್ರಸಂಗದಲ್ಲಿ ಶ್ರೀಜಮುಖಂಡಿವಾದಿರಾಜಾಚಾರ್ಯರು "ವ್ಯಾಸದಾಸ ಸಿದ್ಧಾಂತ ಕೌಮುದೀ"ಎಂಬ ತಮ್ಮ ವ್ಯಾಖ್ಯಾನದಲ್ಲಿ ಮೈದುನನೆಂದರೆ "ರುಕ್ಮಿ" ಎಂದು ಹೇಳಿರುತ್ತಾರೆ. ರುಕ್ಮಿಯು ಶ್ರೀಕೃಷ್ಣನ ಪತ್ನಿ ಸಾಕ್ಷಾತ್ ರಮಾವತಾರ ಭೂತರಾದ ರುಕ್ಮಿಣೀದೇವಿಯವರ ಸಹೋದರ. ತಂಗಿಯ ಪತಿ ಹಾಗೂ ಪತ್ನಿಯ ಸಹೋದರರು ಇವರಿಗೂ "ಮೈದುನ" ನೆಂದು ಕರೆಯುವರು. ಆದರೆ ಈ ಪ್ರಸಂಗದಲ್ಲಿ ರುಕ್ಮಿಯು ಶ್ರೀಕೃಷ್ಣನಿಗೆ ವಿರೋಧಿಯಾಗಿದ್ದು, ಚೈದ್ಯನಾದ ಶಿಶುಪಾಲನಿಗೆ ರುಕ್ಮಿಣಿಯನ್ನು ಕೊಡಬೇಕೆಂದು ಹಠಹಿಡಿದು, ಕೃಷ್ಣನ ಮೇಲೆ ಯುದ್ಧಕ್ಕೆ ನಿಂತನು. ಆಗ ಶ್ರೀಕೃಷ್ಣನು ರುಕ್ಮಿಯನ್ನು ಸಂಹರಿಸಬಹುದಾಗಿತ್ತು. ಆದರೆ ರುಕ್ಮಿಣಿಯ ಪ್ರಾರ್ಥನೆಯನ್ನು ಲಾಲಿಸಿ, ಅವನಿಗೆ ತಲೆಯು ಮುಂಗೂದಲು ಮತ್ತು ಅರ್ಧಮೀಸೆಯನ್ನು ಕತ್ತರಿಸಿ, ಅವಮಾನಮಾಡಿ

ಉಳಿಸಿದನು. ಅರ್ಜುನ ಮತ್ತು ರುಕ್ಮಿ ಇಬ್ಬರೂ ಶ್ರೀಕೃಷ್ಣನಿಗೆ ಮೈದುನರೇ ಎರಡೂ ಯುದ್ಧ ಪ್ರಸಂಗಗಳೇ. ಆದರೆ ಅರ್ಜುನನು ಶ್ರೀಕೃಷ್ಣಭಕ್ತ. ರುಕ್ಮಿಯು ನೀಚನಾದ ಶಿಶುಪಾಲನೊಡನೆ ಸೇರಿ ವಿರೋಧಿಯಾಗಿ ನಿಂತನು. ಇಬ್ಬರನ್ನೂ ಸಂರಕ್ಷಿಸಿದ್ದಾನೆ. ಅರ್ಜುನನನ್ನು ಭಕ್ತವಾತ್ಸಲ್ಯದಿಂದ ಮತ್ತು ರುಕ್ಮಿಯನ್ನು ರುಕ್ಮಿಣಿಯ ಪ್ರಾರ್ಥನೆಯಂತೆ, ಈ ರೀತಿಯಲ್ಲಿ ಸಮನ್ವಯ ಮಾಡಬಹುದು. ಆದರೆ ಎಲ್ಲಾ ವ್ಯಾಖ್ಯಾನಕಾರರೂ "ಮೈದುನ" ಎಂದರೆ "ಅರ್ಜುನ" ಎಂದೇ ತೆಗೆದುಕೊಂಡಿದ್ದಾರೆ.

(೨) ಎರಡನೆಯ ನಿದರ್ಶನ ಚೇದಿರಾಜನಾದ ಶಿಶುಪಾಲನದು. ಜಯ ಮತ್ತು ವಿಜಯರೆಂಬ ಶ್ರೀಹರಿಯ ದ್ವಾರಪಾಲಕರು ಸನಕಾದಿಗಳಿಂದ ಶಪ್ತರಾಗಿ, ಭೂತಲದಲ್ಲಿ ಮೂರು ದೈತ್ಯ ಜನ್ಮಗಳನ್ನು ತಾಳಿದರು. ದ್ವಾಪರದಲ್ಲಿ ಶಿಶುಪಾಲ ಮತ್ತು ದಂತವಕ್ತ್ರರಾಗಿ ಜನ್ಮತಾಳಿದರು. ಇಬ್ಬರಿಗೂ ಜೀವದ್ವಯಾವೇಶ. ಶಿಶುಪಾಲನ ದೇಹದಲ್ಲಿ "ಜಯ" ನಾಮಕ ಸಚ್ಚೇತನನೂ ಮತ್ತು "ಶಿಶುಪಾಲ" ನೆಂಬ ದೈತ್ಯನೂ ಇಬ್ಬರೂ ಆವಿಷ್ಟರಾಗಿದ್ದರು. ರಾಜಸೂಯಯಾಗದ ಪ್ರಸಂಗದಲ್ಲಿ, ತುಂಬಿದ ಸಭೆಯಲ್ಲಿ, ಶ್ರೀಕೃಷ್ಣನಿಗೆ ಅಗ್ರಪೂಜೆ ಸಲ್ಲದೆಂದು ಆಕ್ಷೇಪಿಸಿ, ಶಿಶುಪಾಲನು ಶ್ರೀಕೃಷ್ಣನನ್ನು ಮನಸ್ವೀ ನಿಂದೆಮಾಡಿದನು. ಕೊನೆಯಲ್ಲಿ ಶ್ರೀಕೃಷ್ಣನ ಚಕ್ರಾಯುಧದಿಂದ ಶಿಶುಪಾಲನು ಸಂಹೃತನಾದನು. ಆಗ ಅವನಲ್ಲಿ ಪ್ರವಿಷ್ಟನಾಗಿದ್ದ "ಜಯ" ನಾಮಕ ದ್ವಾರಪಾಲಕನಿಗೆ ಸದ್ಗತಿಯನ್ನು ಕೊಟ್ಟನು. ದೈತ್ಯನಿಗೆ ನಿತ್ಯ ದುಃಖರೂಪವಾದ ಅಂಧಃತಮಸ್ಸು ಪ್ರಾಪ್ತವಾಯಿತು. ಈ ಪ್ರಸಂಗದಲ್ಲಿ ದೈತ್ಯನ ದುಷ್ಟಸಹವಾಸದಲ್ಲಿದ್ದ ಜಯನಾಮಕ ಮಂಗಳಾತ್ಮನು ಪಾಪಕಾರ್ಯದಲ್ಲಿ ಭಾಗಿಯಾದರೂ. ಅವನ ಅಪರಾಧವನ್ನು ಮನ್ನಿಸಿ, ಅವನಿಗೆ ಸದ್ಗತಿಯನ್ನು ನೀಡಿದನು. ಇದಕ್ಕೆ ಶ್ರೀಪರಮಾತ್ಮನು ಭಕ್ತರಲ್ಲಿ ಇಟ್ಟಿರುವ ವಾತ್ಸಲ್ಯವೇ ಕಾರಣವು. ಇಂತು ಕರುಣಾಸಾಗರನಾದ ಭಗವತ್ಸಲನು ಭಕ್ತರಿಗೆ ಬಂದೊದಗುವ ಭಯಗಳನ್ನು ಪರಿಹರಿಸಿ, ಸದಾ ಸಂರಕ್ಷಿಸುವನು ಎಂದು ತಾತ್ಪರ್ಯ. ॥೭॥

## ಪಂಚಾಗ್ನಿಗತ ಭಗವದ್ರೂಪಗಳ ಚಿಂತನೆ ಮತ್ತು ಅವುಗಳ ವಿವರಣಾತ್ಮಕವಾದ ವಿಹಂಗಮನೋಟ

| ಕ್ರಮ ಸಂಖ್ಯೆ | ವಿವರಗಳು | ಪಂಚಾಗ್ನಿಗಳು | ಭಗವದ್ರೂಪಗಳು | ವಾಯುರೂಪ |
|---|---|---|---|---|
| ೧ | ಅಗ್ನಿ | ಆಕಾಶಾಗ್ನಿ | ನಾರಾಯಣ | ಪ್ರಾಣ ನಾಮಕ ವಾಯುದೇವರು |
| ೨ | ಸಮಿತ್ತು | ಸೂರ್ಯ | ನಾರಾಯಣ-ನಾರಾಯಣ | ಪ್ರಾಣ–ಪ್ರಾಣ |
| ೩ | ಧೂಮ | ಸೂರ್ಯಕಿರಣಗಳು | ನಾರಾಯಣ–ವಾಸುದೇವ | ಪ್ರಾಣ–ಅಪಾನ |
| ೪ | ಅರ್ಚಿ | ಹಗಲು | ನಾರಾಯಣ-ಸಂಕರ್ಷಣ | ಪ್ರಾಣ–ವ್ಯಾನ |
| ೫ | ಕಿಡಿಗಳು | ನಕ್ಷತ್ರಗಳು | ನಾರಾಯಣ–ಪ್ರದ್ಯುಮ್ನ | ಪ್ರಾಣ–ಉದಾನ |
| ೬ | ಅಂಗಾರ (ಕೆಂಡ) | ಚಂದ್ರ | ನಾರಾಯಣ–ಅನಿರುದ್ಧ | ಪ್ರಾಣ–ಸಮಾನವಾಯು |

| | | | | |
|---|---|---|---|---|
| ೦ | ಅಗ್ನಿ | ಪರ್ಜನ್ಯಾಗ್ನಿ (ಮೇಘ) | ವಾಸುದೇವ | ಅಪಾನನಾಮಕ ವಾಯುದೇವರು |
| ೧ | ಸಮಿತ್ತು | ಪ್ರವಹವಾಯು | ವಾಸುದೇವ-ನಾರಾಯಣ | ಅಪಾನ-ಪ್ರಾಣ |
| ೨ | ಧೂಮ | ಮೇಘಪಂಕ್ತಿ | ವಾಸುದೇವ-ವಾಸುದೇವ | ಅಪಾನ-ಅಪಾನ |
| ೩ | ಅರ್ಚಿ | ಮಿಂಚು | ವಾಸುದೇವ-ಸಂಕರ್ಷಣ | ಅಪಾನ-ವ್ಯಾನ |
| ೪ | ಕಿಡಿಗಳು | ಗುಡುಗು | ವಾಸುದೇವ-ಪ್ರದ್ಯುಮ್ನ | ಅಪಾನ-ಉದಾನ |
| ೫ | ಅಂಗಾರ | ಸಿಡಿಲು | ವಾಸುದೇವ-ಅನಿರುದ್ಧ | ಅಪಾನ-ಸಮಾನವಾಯು. |

| | | | | |
|---|---|---|---|---|
| ೦ | ಅಗ್ನಿ | ಪೃಥಿವ್ಯಾಗ್ನಿ | ಸಂಕರ್ಷಣ | ವ್ಯಾನನಾಮಕ ವಾಯುದೇವರು |
| ೧ | ಸಮಿತ್ತು | ಸಂವತ್ಸರ | ಸಂಕರ್ಷಣ-ನಾರಾಯಣ | ವ್ಯಾನ-ಪ್ರಾಣ |
| ೨ | ಧೂಮ | ಆಕಾಶ | ಸಂಕರ್ಷಣ-ವಾಸುದೇವ | ವ್ಯಾನ-ಅಪಾನ |
| ೩ | ಅರ್ಚಿ | ರಾತ್ರಿ | ಸಂಕರ್ಷಣ-ಸಂಕರ್ಷಣ | ವ್ಯಾನ-ವ್ಯಾನ |
| ೪ | ಅಂಗಾರ | ದಿಕ್ಕುಗಳು | ಸಂಕರ್ಷಣ ಪ್ರದ್ಯುಮ್ನ | ವ್ಯಾನ-ಉದಾನ |
| ೫ | ಕಿಡಿಗಳು | ವಿದಿಕ್ಕುಗಳು | ಸಂಕರ್ಷಣ-ಅನಿರುದ್ಧ | ವ್ಯಾನ-ಸಮಾನರೂಪವಾಯು |

| | | | | |
|---|---|---|---|---|
| ೧ | ಅಗ್ನಿ | ಪುರುಷಾಗ್ನಿ (ತಂದೆ) | ಪ್ರದ್ಯುಮ್ನ | ಉದಾನನಾಮಕ ವಾಯುದೇವರು |
| ೨ | ಸಮಿತ್ತು | ವಾಗಿಂದ್ರಿಯ | ಪ್ರದ್ಯುಮ್ನ-ನಾರಾಯಣ | ಉದಾನ-ಪ್ರಾಣ |
| ೩ | ಧೂಮ | ಕಿರಣಗಳು | ಪ್ರದ್ಯುಮ್ನ-ವಾಸುದೇವ | ಉದಾನ-ಅಪಾನ |
| ೪ | ಅರ್ಚಿ | ಜಿಹ್ವೆ | ಪ್ರದ್ಯುಮ್ನ-ಸಂಕರ್ಷಣ | ಉದಾನ-ವ್ಯಾನ |
| ೫ | ಅಂಗಾರ | ಎರಡುಕಣ್ಣುಗಳು | ಪ್ರದ್ಯುಮ್ನ-ಪ್ರದ್ಯುಮ್ನ | ಉದಾನ-ಉದಾನ |
| ೬ | ಕಿಡಿಗಳು | ಎರಡು ಕಿವಿಗಳು | ಪ್ರದ್ಯುಮ್ನ-ಅನಿರುದ್ಧ | ಉದಾನ ಸಮಾನವಾಯು |

| | | | | |
|---|---|---|---|---|
| ೧ | ಅಗ್ನಿ | ಯೋಷಾಗ್ನಿ (ಸ್ತ್ರೀ-ಜನನಿ) | ಅನಿರುದ್ಧ | ಸಮಾನನಾಮಕ ವಾಯುದೇವರು |
| ೨ | ಸಮಿಧೆ | ಉಪಸ್ಥ | ಅನಿರುದ್ಧ-ನಾರಾಯಣ | ಸಮಾನ-ಪ್ರಾಣ |
| ೩ | ಧೂಮ | ಕಾಮೋತ್ಪತ್ತಿಯ ಸಂಭಾಷಣೆ | ಅನಿರುದ್ಧ -ವಾಸುದೇವ | ಸಮಾನ-ಅಪಾನ |
| ೪ | ಅರ್ಚಿ | ಯೋನಿ | ಅನಿರುದ್ಧ-ಸಂಕರ್ಷಣ | ಸಮಾನ-ವ್ಯಾನ |
| ೫ | ಅಂಗಾರ | ಯೋನಿ ಪ್ರವೇಶಕ್ರಿಯೆ | ಅನಿರುದ್ಧ-ಪ್ರದ್ಯುಮ್ನ | ಸಮಾನ-ಉದಾನ |
| ೬ | ಕಿಡಿ | ಆನಂದ (ಉತ್ಸಹ) | ಅನಿರುದ್ಧ-ಅನಿರುದ್ಧ | ಸಮಾನ-ಸಮಾನವಾಯು |

## ಪದ್ಯ (೮)

ಮೂಲ :–

ಪಂಚನಾರೀ ತುರಗದಂದದಿ ।
ಪಂಚರೂಪಾತ್ಮಕನು ತಾ ಷಟ್ ।
ಪಂಚರೂಪವ ಧರಿಸಿ ತತ್ತನ್ನಾಮದಿಂ ಕರಿಸಿ ॥
ಪಂಚಪಾವಕ ಮುಖದಿ ಗುಣಮಯ ।
ಪಂಚ ಭೂತಾತ್ಮಕ ಶರೀರವ ।
ಪಂಚವಿಧ ಜೀವರಿಗೆ ಕೊಟ್ಟಲ್ಲಲ್ಲೆ ರಮಿಸುವನು ॥ ॥೮॥

ಅವತರಣಿಕೆ :–

ಐದು ಮಂದಿ ಸ್ತ್ರೀಯರನ್ನು ಒಂದು ಕುದುರೆಯ ಆಕಾರ ಬರುವಂತೆ ಕ್ರಮಬದ್ಧವಾದ ರೀತಿಯಲ್ಲಿ ಜೋಡಿಸಿದಾಗ, ಒಂದು ಚಿತ್ರವು ಉಂಟಾಗುವುದು. ಚಿತ್ರಶಾಸ್ತ್ರದಲ್ಲಿ ಸಿದ್ಧವಾದ ಇಂತಹ ಚಿತ್ರ ವಿನ್ಯಾಸಕ್ಕೆ "ಪಂಚನಾರೀ ತುರಗ"ಎಂದು ಹೆಸರು. ಇದರಲ್ಲಿ ಒಬ್ಬೊಬ್ಬ ಸ್ತ್ರೀಯು ಬೇರೆ ಬೇರೆಯಾದರೂ ಒಟ್ಟಿನಲ್ಲಿ ಅಖಂಡರೂಪದಲ್ಲಿ ಕುದುರೆಯ ಆಕಾರವಾಗಿ ಕಾಣಿಸುವುದು. ಅಂತೆಯೇ, ಸ್ವಗತ ಭೇದವಿವರ್ಜಿತನಾದ ಶ್ರೀಪರಮಾತ್ಮನು ಅನಿರುದ್ಧಾದಿ ಪಂಚರೂಪಗಳಿಂದ ಪ್ರತಿ ಅಗ್ನಿಯಲ್ಲಿಯೂ ಆರು ರೂಪಗಳಂತೆ, ಸಮಗ್ರವಾಗಿ ಪಂಚಾಗ್ನಿಗಳಲ್ಲಿ ಮೂವತ್ತು ರೂಪಗಳಿಂದ (ಷಟ್ ಪಂಚರೂಪವ ಧರಿಸಿ) ವಿದ್ಯಮಾನನಾಗಿದ್ದಾನೆ. ಪ್ರತಿ ಅಗ್ನಿಯಲ್ಲಿಯೂ ತದಾಕಾರನಾಗಿ, ಅದೇ ಅಗ್ನಿ ಮತ್ತು ಯಜ್ಞೋಪಾಂಗಗಳಾದ ಸಮಿತ್ತು ಇತ್ಯಾದಿ ಹೆಸರುಗಳಿಂದಲೇ ತನ್ನಾಮಕನಾಗಿ, ಪಂಚಾಗ್ನಿಗಳ ದ್ವಾರಾ, ತ್ರಿಗುಣಾತ್ಮಕವಾದ ಭೂತ ಪಂಚಕಗಳಿಂದ ನಿರ್ಮಿತವಾದ ಈ ಸ್ಥೂಲ ಶರೀರವನ್ನು ಋಷಿ, ಪಿತೃ, ನೃಪ, ಗಂಧರ್ವ, ನರ-ಎಂಬ ಪಂಚ ಜೀವವರ್ಗಕ್ಕೆ ಕೊಟ್ಟು, ಅವರವರ ದೇಹಸ್ಥಿತನಾಗಿದ್ದು, ಆಯಾಯಾ ದೇಹಗಳಲ್ಲಿ ವ್ಯಾಪಾರಮಾಡುತ್ತಾ, ಕ್ರೀಡಾವಿಶಿಷ್ಟನಾಗಿ ಸಾಧನೆ

ಗಳನ್ನು ಪರಿಡಿ ಪಾಡಿಸುತ್ತಿರುವನು ಎಂದು ಹೇಳುತ್ತಾರೆ. **"ಪಂಚನಾರೀ ತುರಗಡಂಬದಿ"**-ಎಂಬ ಪ್ರಸಕ್ತ ಸಂಧಿಗತ ಈ ೮ ನೆಯ ಪದ್ಯದಿಂದ. ॥೮॥

**ಪ್ರತಿಪದಾರ್ಥ :-**

**ಪಂಚನಾರೀತುರಗಡಂಬದಿ**=ಐದು ಮಂದಿ ಸ್ತ್ರೀಯರನ್ನು ಒಟ್ಟುಗೂಡಿಸಿ, ಅವರ ಕಾಲು, ಕೈ ಮೊದಲಾದ ಶರೀರದ ಅಂಗಗಳನ್ನೇ ಕುದುರೆಯ ಆಕಾರ ಬರುವಂತೆ ಮಾಡಿ ನಿಲ್ಲಿಸುವುದಕ್ಕೆ "ಪಂಚನಾರೀತುರಗ" ವೆಂದು ಹೆಸರು. (ಹೀಗೆ ಚಿತ್ರವನ್ನು ಸಹ ಬರೆಯುವುದು ಚಿತ್ರಶಾಸ್ತ್ರದಲ್ಲಿ ಸಿದ್ಧ) ಇದರಂತೆ, **ಪಂಚರೂಪಾತ್ಮಕನು**=ನಾರಾಯಣ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ಎಂಬ ಐದು ರೂಪಗಳನ್ನು ಧರಿಸಿದ ಶ್ರೀಪರಮಾತ್ಮನು **ತಾ**=ತಾನು, **ಷಟ್‌ಪಂಚರೂಪವಧರಿಸಿ** = ಒಂದೊಂದು ಅಗ್ನಿಯಲ್ಲಿ ನಾರಾಯಣಾದಿ ಅನಿರುದ್ಧ ಪರ್ಯಂತ ಐದುರೂಪಗಳು. ಪ್ರತಿ ಅಗ್ನಿಗಳ ಉಪಕರಣಗಳಲ್ಲಿ ನಾರಾಯಣ-ನಾರಾಯಣಾದಿಯಾಗಿ ಅನಿರುದ್ಧ -ಅನಿರುದ್ಧಪರ್ಯಂತ ಇಪ್ಪತ್ತೈದು. ಒಟ್ಟಿನಲ್ಲಿ ೬×೫=೩೦. ಅಂದರೆ ಮೂವತ್ತು ರೂಪಗಳನ್ನು (ತ್ರಿಶಂತಿ ರೂಪಗಳು) **ಧರಿಸಿ**=ಧಾರಣೆ ಮಾಡಿ, **ತನ್ನಾಮದಿಂ**=ಆಕಾಶಾದಿ ಅಗ್ನಿಗಳಲ್ಲಿ ಅದೇ ಹೆಸರಿನಿಂದಲೂ, ಕಾಷ್ಠಾದಿ ಉಪಕರಣಗಳಲ್ಲಿ ತಚ್ಛಬ್ಧವಾಚ್ಯನಾಗಿ **ಕರಿಸಿ**=ಕರಿಸಿಕೊಳ್ಳುತ್ತಾ **ಪಂಚಪಾವಕ**=ಪೂರ್ವೋಕ್ತ ಪಂಚಾಗ್ನಿಗಳ **ಮುಖದಿ**=ದ್ವಾರಾ (ಮುಖಾಂತರ) **ಗುಣಮಯ**=ಸತ್ವರಜಸ್ತಮೋಗುಣಗಳಿಂದ ಪ್ರಚುರವಾದ **ಪಂಚಭೂತಾತ್ಮಕ**=ಪೃಥಿವ್ಯಾದಿ ಪಾಂಚಭೌತಿಕವಾದ **ಶರೀರವ**=ಶರೀರಗಳನ್ನು **ಪಂಚ ಜೀವರಿಗೆ**= ದೇವ ಋಷಿ, ಪಿತೃ, ನೃಪ ಮನುಷೋತ್ತಮ. (ನೃಪರನ್ನು ಮಾನುಷೋತ್ತಮರಲ್ಲಿ ಪರಿಗಣಿಸಿದರೆ, "ಗಂಧರ್ವ" ರೆಂಬ ವರ್ಗ ಗ್ರಾಹ್ಯ) ಎಂಬ ಪಂಚವಿಧ ಜೀವವರ್ಗಕ್ಕೆ **ಕೊಟ್ಟು**=ಕೊಟ್ಟವನಾಗಿ **ಅಲ್ಲಲ್ಲೆ**=ಆಯಾಯಾ ಜೀವರ ಸ್ಥೂಲ ದೇಹಗಳಲ್ಲಿ ತಾನು ಸ್ಥಿತನಾಗಿದ್ದು **ರಮಿಸುವನು**= ಕ್ರೀಡಿಸುವನು (ವ್ಯಾಪಾರಮಾಡುವನು.) ॥೮॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖಾನ :-

ಪೂರ್ವೋಕ್ತ ಪ್ರಕಾರ ಜನನ ದ್ವಾರಾ ಪಂಚಭೂತ ಶರೀರಗಳ ಕೊಡುತ್ತಾನೆ ಎಂತ ಹೇಳುತ್ತಾರೆ.—

ಪಂಚನಾರೀತುರಗದಂದದಿ-ಐದು ಸ್ತ್ರೀ ರೂಪಗಳಿಂದ ಒಂದು ಕುದರಿ ಚಿತ್ರ್ರಾಕಾರವಾಗಿ ಬರೆಯೋದು ಶಾಸ್ತ್ರಸಿದ್ಧ. ಈ ಪಂಚನಾರೀತುರಗದೋಪಾದಿಯಲಿ, ಪಂಚರೂಪಾತ್ಮಕನು. ಅನಿರುದ್ಧಾದಿ ಪಂಚರೂಪಾತ್ಮಕನು (ಪಂಚರೂಪಿ ಪರಮಾತ್ಮನು) ಒಂದೊಂದು ರೂಪದಲ್ಲಿ ಈ ಪಂಚನಾರೀತುರಗ ದೃಷ್ಟಾಂತಾನುಸಾರ ಅನಂತಾನಂತ ರೂಪಗಳಿಂದ ಪ್ರಚುರವಾದ ಒಂದು ರೂಪವುಳ್ಳವನು. ತಾ ಷಟ್ ಪಂಚರೂಪವ ಧರಿಸಿ-ಒಂದೊಂದು ಅಗ್ನಿಯಲ್ಲಿ ಐದು ರೂಪಗಳು, ಅಗ್ನಿಗತ ರೂಪ ಒಂದು, ಅಂತು ಆರು. ಈ ಪ್ರಕಾರ ಐದು ಅಗ್ನಿಗಳಲ್ಲಿ ಆರಾರು ರೂಪದ ಮ್ಯಾರಿಗೆ ಮೂವತ್ತು ರೂಪಗಳ ಧರಿಸಿ, ತನ್ನಾಮದಿಂ ಕರೆಸಿ-ಆಯಾ ಅಗ್ನಿಗಳಲ್ಲಿ ಆಯಾ ಕಾಷ್ಠ ಧೂಮಾದಿಗಳಲ್ಲಿ ಅಂತರ್ಗತನಾಗಿ ಆಯಾ ನಾಮಗಳಿಂದ ಕರೆಸಿ, ಪಂಚನಾಮಕ ಮುಖದಿ-ಪೂರ್ವೋಕ್ತ ಪಂಚಾಗ್ನಿಗಳ ದ್ವಾರಾ ಗುಣಮಯ-ಸತ್ವ ರಜಸ್ತಮೋಗುಣಗಳಿಂದ ಪ್ರಚುರವಾದ ಪಂಚಭೂತಾತ್ಮಕ ಪಂಚಭೂತಗಳಿಂವ ಪ್ರಚುರವಾದ, ಇನ್ನೂ ಪಿತೃಸಂಬಂಧ ಶುಕ್ಲ, ಮಾತೃಸಂಬಂಧ ಶೋಣಿತ ಇವುಗಳಿಂದ ಪಿಂಡೀಭೂತವಾದ ಶರೀರವ-ಸ್ಥೂಲಶರೀರವನ್ನು, ಪಂಚಜೀವರಿಗೆ ಋಷಿ, ಪಿತೃ, ಅರಸರು, ನರ, ಗಂಧರ್ವರು (ನರ ಗಂಧರ್ವ ಸಾಂಕೇತದಿಂದ ತೃಣಾಂತ ಜೀವರು ಗ್ರಾಹ್ಯ), ಕೊಟ್ಟು ಈ ಪಂಚವಿಧವಾದ ಜೀವರಿಗೆ ಸ್ಥೂಲ ದೇಹಗಳನ್ನು ಕೊಟ್ಟು ಅಲ್ಲಲ್ಲೆ ರಮಿಸುವನು—ಆಯಾ ಸ್ಥೂಲ ದೇಹಗಳಲ್ಲಿ ತನ್ನೊಳು ತಾನಿದ್ದು ಕ್ರೀಡಾ ಮಾಡುತಾ ಇರತಾನೆ.

ಈ ಪೂರ್ವೋಕ್ತ ಪಂಚವಿಧ ಜೀವರಲ್ಲಿ ದೇವತೆಗಳು ಸೇರಿದ್ದಾರೆ. ಅವರೊಳಗೆ ಋಜುಗಳ ವ್ಯತಿರಿಕ್ತ ಮಿಗಿಲಾದ ದೇವತೆಗಳಿಗೆ ಮಾತೃಗರ್ಭದ್ವಾರಾ ಜನನಾದಿಗಳು ಮಾತ್ರ ಉಂಟು. ನಿರಂಶದೋಪಾದಿಯಲ್ಲಿ ಪಂಚಾಗ್ನಿಗಳ

ದ್ವಾರಾ ಜನನವಿಲ್ಲ ಮತ್ತು ಪಂಚವಿಧ ಜೀವರು ಯಾರೆಂದರೆ – ಮನುಷ್ಯ ಗಂಧರ್ವರಾರಭ್ಯ ಮನುಷ್ಯೋತ್ತಮರವರೆಗೆ ಒಂದು, ಕ್ಷತ್ರಿಯ ಜೀವರು ಎರಡು, ವೈಶ್ಯ ಜೀವರು ಮೂರು. ಶೂದ್ರ ಜೀವರು ನಾಲ್ಕು, ತದನ್ಯ ತೃಣಾಂತ ಜೀವರು ಐದು. ಈ ಐದು ಮಂದಿ ನಿರಂಶರು ಪೂರ್ವೋಕ್ತ ಪಂಚಾಗ್ನಿಗಳ ದ್ವಾರಾ ಜನನಕ್ಕೆ ಯೋಗ್ಯರು ಎಂತ ತಾತ್ಪರ್ಯ.

**ವಿಶೇಷಾರ್ಥ :—**

ಪಂಚನಾರೀತುರಗ ಎಂಬುದು ಸಮೂಹನಾಮ. ಹಾಂಗೆ ನವನಾರೀ ಕುಂಜರದ ಸಮೂಹನಾಮ. ಹ್ಯಾಗೆಂದರೆ, ಐದು ನಾರಿಗಳು ಸೇರಿ, ಒಂದು ತುರಗವಾಗದಂತೆ. ತುರಗವು ಒಂದು ನಾರಿ. ಖಂಡಾಖಂಡಗಳು ಹ್ಯಾಂಗೆ ಇದರಲ್ಲಿ ಅದೋ, ಆ ಪ್ರಕಾರ ಅನಿರುದ್ಧ ಎಂಬುದು ಸಮೂಹನಾಮ. ಅನಿರುದ್ಧಾದಿ ಐದುನಾಮಗಳು, ತದ್ಗತರೂಪಗಳು ಖಂಡರೂಪಗಳೆಂದು ತಿಳಿಯಬೇಕು ಎಂತ ತಾತ್ಪರ್ಯ.

ಮೇಲೆ ಹೇಳಿದ್ದು ಜನನ ಯಜ್ಞ. ಸ್ಥಿತಿಯಜ್ಞ ಮೊದಲು ಶ್ಲೋಕದಲ್ಲಿ ಹೇಳಲ್ಪಟ್ಟದೆ. ಮರಣಯಜ್ಞ ಯಾವುದೆಂದರೆ :– (೧) ನರಕಕ್ಕೆ ಹೋಗಿ ಸೇರೋವರೆಗೆ ಐದು ಕಡೆ ದೇಹಗಳ ಬಿಡತಾನೆ. ಸ್ಥೂಲ ಪಾಂಚಭೌತಿಕ ಶರೀರವನ್ನು ಅಗ್ನಿಯಲ್ಲಿ ಬಿಡೋವವನಾಗತಾನೆ. (೨) ತದನಂತರ ಪೈಶಾಚ ದೇಹವನ್ನು ಹೊಂದಿ, ಅದನ್ನು ಇಲ್ಲೇ ಬಿಡುವವನಾಗತಾನೆ. (೩) ತದನಂತರ ಆಂತರಿಕ ದೇಹದಿಂದ ಯಮಲೋಕಕ್ಕೆ ಹೋಗಿ, ಅಲ್ಲಿ ಆ ಶರೀರವನ್ನು ಬಿಡುತ್ತಾನೆ. (೪) ತದನಂತರ, ನರಕಮಾರ್ಗ ನಡಿಯೋ ಕಾಲದಲ್ಲಿ ತದಪೇಕ್ಷೆಯಾ ದುಃಖ ಶರೀರ ಪ್ರಾಪ್ತಿ. (೫) ಅನಂತರ ಆ ಶರೀರವನ್ನು ಬಿಟ್ಟು, ವೈತರಣೀ ನದಿಯಲ್ಲಿ ಯಾತನಾ ಶರೀರಪಾಪ್ತಿ. ಈ ಶರೀರದಿಂದಲೇ ನರಕಭೋಗ. ಈ ಶರೀರ ಅಂತ್ಯಕ್ಕೆ ಅಲ್ಲೇ ಬಿಡೋವನಾಗತಾನೆ. ಈ ಪ್ರಕಾರ ಮರಣ ಯಜ್ಞವು. ಆಯಾ ಶರೀರಗಳು ದಾವದಾವ ಸ್ಥಾನದಲ್ಲಿ ಬಿಡತಾನೋ, ಅಲ್ಲಲ್ಲಿ ಪೂರ್ವೋಕ್ತ ಪ್ರಕಾರ ಪಂಚಾಗ್ನಿಗಳ ಅನುಸಂಧಾನ

ಮಾಡಿ, ದೇಹವನ್ನು ಹೋಮಿಸುವನಾಗಬೇಕು. ಅಂತು ಮೂರು ಯಜ್ಞಗಳ ಅನುಸಂಧಾನಮಾಡಬೇಕು ಎಂತ ತಾತ್ಪರ್ಯ. ॥೮॥

(೨) "ಭಾವಪ್ರಕಾಶಿಕೆ"-ವ್ಯಾಖ್ಯಾನ:—

ಧ್ಯಾನಕ್ಕೋಸ್ಕರವಾಗಿ ಮೇಲಿನ ಏಳು ಪದ್ಯಗಳಲ್ಲಿ ಹೇಳಿದ ಅಭಿಪ್ರಾಯಗಳನ್ನೂ, ಛಾಂದೋಗ್ಯೋಪನಿಷದರ್ಥವನ್ನೂ ಕ್ರೋಢೀಕರಿಸಿ, ಒಟ್ಟು ತಾತ್ಪರ್ಯವನ್ನು ಹೇಳುತ್ತಾರೆ. –

ಪಂಚನಾರೀ ತುರಗವೆಂದು ೫ ನಾರಿಯರನ್ನು ಸೇರಿಸಿ. ಒಂದು ಕುದುರೆಯ ಆಕಾರವನ್ನಾಗಿ ಮಾಡಿ ನಿಲ್ಲಿಸುವುದುಂಟು. ಇದರಂತೆ ಚಿತ್ರಕಾರರು ಕೆಲವು ಪಠಗಳಲ್ಲಿ ಬರೆದಿರುವರು. ಒಂದು ರೂಪದೊಳಗೆ ಐದು ರೂಪಗಳನ್ನು ಹೇಗೆ ಚಿಂತಿಸಬೇಕು ಎಂಬ ಪರಿಹಾರಕ್ಕೋಸ್ಕರ ಪಂಚನಾರೀತುರಗದ ಉಪಮಾನವನ್ನು ದಾಸರಾಯರು ಹೇಳಿರುವರು. ಇದರ ವಿಶೇಷವೇನೆಂದರೆ ನೋಡಿದವರಿಗೆ ಒಂದು ಕುದುರೆಯಾಗಿ ಕಾಣುವುದು. ಚೆನ್ನಾಗಿ ನೋಡಿ ಬೇರ್ಪಡಿಸಿದರೆ ೫ ನಾರೀ ರೂಪಗಳು ಬೇರೆ ಬೇರೆಯಾಗಿ ಕಾಣಿಸುವುವು. ಹಾಗೆ ನಾರಾಯಣ ರೂಪದಿಂದ ಆಕಾಶವಾಗಿ ಕಾಣುವನು. ಅದರ ಕಾಷ್ಠಾದಿ ಸ್ಥಾನಗಳಲ್ಲಿ ಸೂರ್ಯಾದಿ ಐವರಲ್ಲಿ ನಾರಾಯಣಾದಿ ಐದು ರೂಪದಿಂದ ಇರುವನು. ಹೀಗೆ ನಾರಾಯಣಾದಿ ಪಂಚರೂಪಿಯು ಮತ್ತು ಒಂದೊಂದು ರೂಪದಲ್ಲಿಯೂ ನಾರಾಯಣಾದಿಗಳೆಂದರೆ, ಒಟ್ಟು ಮೂವತ್ತು ರೂಪಗಳನ್ನು ಧರಿಸಿ, ಆಕಾಶಾದಿಗಳಲ್ಲಿ ಆಕಾಶಾದಿ ಶಬ್ದವಾಚ್ಯನಾಗಿಯೂ, ಕಾಷ್ಠ, ಧೂಮಾಗಳಲ್ಲಿ ತತ್ತಚ್ಛಬ್ದವಾಚ್ಯನಾಗಿಯೂ, ಆಕಾಶಾದಿಗಳನ್ನು ಅಗ್ನಿಯನ್ನಾಗಿ, ಚಿಂತಿಸುವಾಗ, ಕಾಷ್ಠಾದಿ ಸ್ಥಾನದಲ್ಲಿ ಚಿಂತಿಸಬೇಕಾದ ಸೂರ್ಯಾದಿ ನಾಮಗಳಿಂದ ಕರೆಸಿಕೊಳ್ಳುತ್ತಾ, ಆಕಾಶಾದಿ ಪಂಚಾಗ್ನಿ ಮುಖದಲ್ಲಿ ಸಾತ್ವಿಕ ರಾಜಸ ತಾಮಸ ಗುಣಮಯವಾದ ಪಾಂಚಭೌತಿಕ ಶರೀರಗಳನ್ನು ಪಂಚವಿಧ ಜೀವರಿಗೆ ಕೊಟ್ಟು, ಆಯಾ ಜೀವರ ದೇಹಗಳಲ್ಲಿದ್ದು ಕ್ರೀಡಿಸುವನು. ಪಂಚವಿಧ ಜೀವರೆಂದರೆ, **ಭಾಗವತ ಧಶಮಸ್ಕಂಧದಲ್ಲಿ—"ಯತೋ ಯತೋಧಾವತಿ ದೈವ ಚೋದಿತಂ ಮನೋವಿಕಾರಾತ್ಮ ಪಂಚಸು"**

ಎಂಬ ಶ್ಲೋಕದ ವಿಜಯ ಧ್ವಜೀಯ ವ್ಯಾಖ್ಯಾನದಲ್ಲಿ **ಆತ್ಮಪಂಚನು** ಎಂಬ ಪದಕ್ಕೆ **"ದೇವ, ಗಂಧರ್ವ, ಪಿತೃ, ಮನುಷ್ಯಾಸುರ ಭೇದೇನ ಪಂಚನಾಂ ಆತ್ಮಾನಾಂ ಮಧ್ಯೇ"**-ಎಂದು ಹೇಳಿರುವರು. ಇದೇ ಆಧಾರದಿಂದ ಐದು ವಿಧ ಜೀವರೆಂದರೆ :- ದೇವತೆಗಳು, ಗಂಧರ್ವರು, ಪಿತೃಗಳು, ಮನುಷ್ಯರು ಮತ್ತು ಅಸುರರು-ಎಂಬ ಐದು ವಿಧ ಜೀವರಿಗೆ ಶರೀರಗಳನ್ನು ಕೊಟ್ಟು, ಅವರೊಳಗಿದ್ದು ವಿಹಾರ ಮಾಡುವನು. ॥೮॥

(೩) **"ಭಾವದರ್ಪಣಟೀಕಾ"ವ್ಯಾಖ್ಯಾನ:-**

ಈಗ ಪಂಚ ಸ್ತ್ರೀಯರ ಕರಚರಣಾದ್ಯವಯವಗಳನ್ನು ತುರಗಾಕಾರ ಮಾಡಿ, ಶ್ರೀಕೃಷ್ಣಾವತಾರದಲ್ಲಿ ಹ್ಯಾಗೆ ಆರೂಢನಾದನೋ ತದ್ವತ್ **ಛಾಂದೋಗ್ಯೋಪನಿಷದೋಕ್ತ** ಒಂದೊಂದು ಖಂಡಗತ ದ್ವಾದಶಶಬ್ದ ಪ್ರಕಾರ ಪಂಚಖಂಡಗತ ಅರವತ್ತು ಶಬ್ದಗಳಲ್ಲೂ ತದಾ ವ್ಯಾಪ್ಯನಾಗಿ ಪಂಚಖಂಡದಲ್ಲಿ ನಾರಾಯಣಾದಿ ಪಂಚರೂಪದಿಂದ ಆರೂಢನಾಗಿ ಅಹತ್ಯ ಪಂಚಷಷ್ಠಿ ರೂಪದಿಂದ ಇದ್ದು, ಕಾರ್ಯ ನಡೆಸುತ್ತಾನೆಂದು ಹೇಳುತ್ತಾರೆ "ಪಂಚನಾರೀತಿ"

ಷಟ್ ಪಂಚೇತಿ ಎಂದರೆ ಮೂವತ್ತು. "ಪಂಚಭೂತಾತ್ಮರೇತಿ"- ಪೃಥ್ವೀ, ಅಪ್, ತೇಜ, ವಾಯು, ಆಕಾಶ ಈ ಐದು ಕೂಡಿದ ಶರೀರ ಎಂದರ್ಥ. "ಪಂಚವಿಧ ಜೀವೇತಿ"- **ದೇವ ಋಷಿ ಪಿತೃಪನರಾಃ"- ಇತಿ ತತ್ತ್ವಸಂಖ್ಯಾನೋಕ್ತೇಃ.** ಈ ಜೀವರಿಗೆ ದೇಹಕೊಡೋಣ :ಎಂದರೆ, ಅದರ ವಿವರ ಯಜ್ಞಮಾಡಿದಂಥ ಶ್ರದ್ಧಾವಿಶಿಷ್ಟನಾದಂಥ, ಜೀವರನ್ನು ಭಗವದಾಜ್ಞಾನುಸಾರ ದೇವತೆಗಳು ಆಹುತಿ ಕೊಡುತ್ತಾರೆ. ಎಂದರೆ,

(೧) ಸ್ವರ್ಗಾನುಭವತೀರೋಣ, ಚಂದ್ರ ಲೋಕಾಂತರ್ಗತನ್ನ ಮಾಡತಾನೆ.

(೨) ಆ ಚಂದ್ರನಿಂದ ವರ್ಷಾಂತರ್ಗತನಾಗುತ್ತಾನೆ. (೩) ಆ ಪರ್ಜನ್ಯನಿಂದ ಅನ್ನಾಂತರ್ಗತನಾಗಿ ಪುರುಷನ ಉದರ ಪ್ರವೇಶನಾಗುತ್ತಾನೆ.

(೪) ಆ ಪುರುಷನ ರೇತೋದ್ವಾರದಿಂದ ಸ್ತ್ರೀ ಗರ್ಭಪ್ರವೇಶನಾಗುತ್ತಾನೆ. (೫) ನವಮಾಸ ಭಗವದಾಜ್ಞೆಯಿಂದ ಆ ಉದರದಲ್ಲಿದ್ದು, ಪಂಚ ಭೂತಾತ್ಮಕ ಶರೀರದಿಂದ ಯೋನಿದ್ವಾರಾ ಭೂಮಿಯಲ್ಲಿ ಜನನವಾಗೋಣವೇ ಜನ್ಮ ಕೊಡೋಣ ಎಂದು ಭಾವ. ಇಂಥ ಜನ್ಮಗಳಲ್ಲೂ ಕೂಡ ಸರ್ವಕಾರ್ಯ ಗಳಿಗೂ ತಾನೇ ನಿರ್ವಾಹ ಕರ್ತೃವಾಗಿ ಮಾಡಿ ಮಾಡಿಸುತ್ತ ಇರುತ್ತಾನೆಂದು ಮನನಕ್ಕೆ ತರತಕ್ಕದ್ದು. ಇಂಥ ಜನ್ಮ ಪುನಃ ಬಾರದಂತೆ ತಪ್ಪಿಸಿಕೊಳ್ಳ ಬೇಕೆಂಬ ತಾತ್ಪರ್ಯವುಳ್ಳವರು ಉಕ್ತರೀತ್ಯಾ ಪಂಚಾಗ್ನಿಗಳಲ್ಲಿ ಮೇಲೆ ಹೇಳಿದ ಯಜ್ಞಸಾಮಗ್ರಿಗಳನ್ನು ಚಿಂತನಕ್ಕೆ ತಂದು, ಅತ್ಯಂತ ಭಕ್ತಿಪೂರ್ವಕ ಮಾನ ಸಿಕ ಯಜ್ಞಮಾಡಿ ಸ್ವಹೃದಯಸ್ಥ ಬಿಂಬಮೂರ್ತಿಯ ಚರಣಾರವಿಂದ ಯುಗಳಕ್ಕೆ ಸಮರ್ಪಿಸಿದರೆ, ಈ ಸಂಧಿ ಏಳನೇ ಪದ್ಯದಲ್ಲಿ ಹೇಳಿದ ರೀತಿಯಾಗಿ ಜನ್ಮಗಳೇ ಕೊಡನೆಂದು ದಾಸರಾಜರ ಮುಖ್ಯ ಹೃದಯವೆಂತ ತಿಳಿಯಬೇಕು. ॥೮॥

## (೪) ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ)

ನನುದ್ವಾವ್ಯದಿ ಪಂಚಾಗ್ನಿಷು ಪೃಥಕ್ ಪಂಚಾತ್ಮಾ ಧ್ಯೇಯಃ ಇತಿ ಅತ್ರ ಭಾಸತೇ । ಪೂರ್ವಪದ ವಚನಾಭ್ಯಾಂ ಅಸೂಚಿ ಚ। ತತ್ ಕಥಂ ಆವಿರ್ಭಾವಃ ಇತಿ ಚೇತ್ ॥ ಅತ್ರ ಬ್ರೂಮಃ । ತತ್ರ ಏವಂ ಅನುಸಂಧಾನ ಪ್ರಕಾಶಃ । ತತ್ತ್ವ ನಿಯಾಮಕಾಃ ದೇವಾಃ ಹಿ ಉತ್ತರ ದೇಹಾರಂಭಕೈಃ ಭೂತಸೂಕ್ಷ್ಮೈಃ ಪರಿವೇಷ್ಟಿತಂ ಜೀವಂ ನಾರಾಯಣಾದಿ ಪಂಚಾಗ್ನಿಷು ಜುಹ್ವತಿ॥ ತತ್ರ ಅಸೌ ಪ್ರಾಣೇ ಸ್ಥಿತತ್ವಾತ್ ಪ್ರಕಾಶ ರೂಪತ್ವಾಚ್ಚ ಅಸೌ ಲೋಕಾಭಿಧೇ ಸ್ವರ್ಗ ಲೋಕೇಸ್ಥಿತಃ ನಾರಾಯಣ ಏವ ಪ್ರಥಮಾಗ್ನಿಃ॥ ಸ ಚ ಅದನಾತ್ ಅಂಗ ನೇತೃತ್ವಾತ್ ಅಗ್ನಿರಿತ್ಯುಚ್ಯತೇ॥ ತಸ್ಯಾಗ್ನೇಃ ನಾರಾಯಣೋದ್ಭೂತಾನಿ ನಾರಾಯಣಾದೀನಿ ಪಂಚರೂಪಾಣಿ ಭವಂತಿ॥ ತಥಾಹಿ॥ ಪ್ರಾಣಿಕೃತಂ ಕರ್ಮ ಜಾತಂ ಆದಾಯ ಯಾತಿ ಇತಿ ಆದಿತ್ಯನಾಮಾ ಆದಿತ್ಯಾಂತರ್ಗತೋ ನಾರಾಯಣ ನಾರಾಯಣಃ ಸಮೇಧನಾತ್ ಸಮಿತ್॥ ರತಿಶಲಮಾನರೂಪತ್ವಾತ್ ರಶ್ಮಿ ಸ್ಥಿತೋ ನಾರಾಯಣ ವಾಸುದೇವಃ ಆಜ್ಯಾದೀನಾಂ ಧೂತ್ಕರಣಾತ್ ಧೂಮಃ॥

ತಮಸಾ ಆಹನೀಯತ್ವಾತ್ ಅಹರ್ನಾಮಾ ಅಹಃ ಸಂಸ್ಥಿತೋ ನಾರಾಯಣ ಸಂಕರ್ಷಣಃ ಆರಂಚಿತತ್ವಾತ್ ಅರ್ಚಿಃ॥ ಆಹ್ಲಾದರೂಪತ್ವಾತ್ ಚಂದ್ರ ನಾಮಾ ಚಂದ್ರ ಸಂಸ್ಥಿತೋ ನಾರಾಯಣ ಪ್ರದ್ಯುಮ್ನಃ ಅಂಗರತೇಃ ಅಂಗಾರಃ॥ "ನವಿದ್ಯತೇ ಕ್ಷತ್ರಂ ಪಾಲಕಃ ಯಸ್ಯ"-ಇತಿ ನಕ್ಷತ್ರನಾಮಾ ನಕ್ಷತ್ರಸ್ಥೋ ನಾರಾಯಣಾನಿರುದ್ಧೋ ವಿವಿಧಂ ಸ್ಫುರಣಾತ್ ವಿಸ್ಫುಲಿಂಗಃ ಇತಿ ॥೧॥

(೨) ಸೋಮಃ ರಾಜಾ ಭವತಿ। ತತ್ರ ಜೀವಂ ಪ್ರವೇಶಯಂತಿ॥ ಏವಂ ದೇವಾಃ ನಾರಾಯಣಾದಿ ಪಂಚರೂಪಾತ್ಮಕ ಸಮಿದಾದಿ ಪಂಚರೂಪೋಪಪನ್ನೇ ನಾರಾಯಣಾಖ್ಯೇ ಪ್ರಥಮಾಗ್ನೌ ಹುತ್ವಾ ತತಃ ಚಂದ್ರದ್ವಾರಾ ಪರ್ಜನ್ಯಾಹ್ವದ್ವಿತೀಯಾಗ್ನೌ ಜುಹ್ವತಿ ॥ ಪರಂ ಬ್ರಹ್ಮಾದಿಕಮಪಿ ಜನ್ಯಂ ಅಸ್ಯ ಇತಿ ಪರ್ಜನ್ಯನಾಮಾ ಪರ್ಜನ್ಯಸ್ಥಃ ವಾಸುದೇವಃ ದ್ವಿತೀಯಾಗ್ನಿಃ ॥ ಅಸ್ಯ ಅಗ್ನೇಃ ವಾಸುದೇವೋದ್ಭೂತಾನಿ ನಾರಾಯಣಾದಿ ಪಂಚರೂಪಣ್ಯೇವ ಸಮಿದಾದಿ ಪಂಚರೂಪಾಣಿ ॥ ತಥಾಹಿ ॥ ಜ್ಞಾನಾಯು ರೂಪತ್ವಾತ್ ವಾಯುರ್ನಾಮಾ ವಾಯುಸ್ಥಃ ವಾಸುದೇವ ನಾರಾಯಣಃ ಸಮಿತ್ ॥ಅಪಾಂ ಭರಣಾತ್ ಅಭ್ರನಾಮಾ ಅಭ್ರಸ್ಥಃ ವಾಸುದೇವ ವಾಸುದೇವಃ ಧೂಮಃ॥ ವಿಶೇಷೇಣ ದ್ಯೋತನಾತ್ ವಿದ್ಯುನ್ನಾಮಾ ವಿದ್ಯುತ್ ಸಂಸ್ಥಿತಃ ವಾಸುದೇವ ಸಂಕರ್ಷಣಃ ಅರ್ಚಿಃ ಅಶನಾತ್ ಅಶನಿ ನಾಮಾ ಅಶನಿಗತಃ ವಾಸುದೇವ ಪ್ರದ್ಯುಮ್ನಃ ಅಂಗಾರಃ ॥ ನಿಹ್ರಾದನಾತ್ "ಹ್ರಾದುನಿ" ನಾಮಾ ಹ್ರಾದುನಿಸ್ಥಃ ವಾಸುದೇವಾನಿರುದ್ಧಃ ವಿಸ್ಫುಲಿಂಗಃ ಇತಿ ॥೨॥

(೩) ವರ್ಷಃ ತತ್ರವಿಷ್ಟಃ ಜೀವಃ । ಏವಂ ನಾರಾಯಣಾದಿ ಪಂಚರೂಪಾತ್ಮಕ ಸಮಿಧಾದ್ಯುಕ್ತ ರೂಪೋಪಪನ್ನೇ ವಾಸುದೇವಾಖ್ಯ ದ್ವಿತೀಯಾಗ್ನೌ ಹುತ್ವಾ ತತಃ ವೃಷ್ಟಿದ್ವಾರಾ ತೃತೀಯಾಗ್ನೌ ಜುಹ್ವತಿ ॥ ಪೃಥಿತ್ವಾತ್ ಪೃಥವೀ ಸಂಸ್ಥಃ ಸಂಕರ್ಷಣಃ ತೃತೀಯಾಗ್ನಿಃ ॥ ಅಸ್ಯ ಅಗ್ನೇಃ ಸಂಕರ್ಷಣೋದ್ಭೂತಾನಿ ನಾರಾಯಣಾದಿ ಪಂಚರೂಪಾಣ್ಯೇವ ಸಮಿದಾದಿ ಪಂಚರೂಪಾಣಿ ॥ ತಥಾಹಿ ॥

ಸಮ್ಯಗಾತ್ ವಾಸಯತಿ ಇತಿ ಸಂವತ್ಸರನಾಮಾ ಸಂಪವತ್ಸರಸ್ಥಃ ಸಂಕರ್ಷಣ

ನಾರಾಯಣಃ ಸಮಿತ್ । ಪ್ರಕಾಶನಾತ್ ಆಕಾಶನಾಮಾ ಆಕಾಶಸ್ಥಃ ಸಂಕರ್ಷಣ ವಾಸುದೇವಃ ಧೂಮಃ ॥ ರತಿದಾತೃತ್ವಾತ್ ರಾತ್ರಿನಾಮಾ ರಾತ್ರಿಸ್ಥಃ ಸಂಕರ್ಷಣ ಸಂಕರ್ಷಣಃ ಅರ್ಚಿಃ ॥ ಮೋಕ್ಷಾದಿ ಪುರುಷಾರ್ಥಂ ದಿಶತೀತಿ ದಿಙ್ನಾಮಾದಿಕ್ ಸಂಸ್ಥಃ ಸಂಕರ್ಷಣ ಪ್ರದ್ಯುಮ್ನಃ ಅಂಗಾರಃ ॥ ಸ್ವರ್ಗ್ಯಾದ್ಯವಾಂತರಂ ದಿಶತಿ ಇತಿ ಅವಾಂತರ ದಿಙ್ನಾಮಾ ಅವಾಂತರದಿಕ್‌ಸಂಸ್ಥಃ ಸಂಕರ್ಷಣಾನಿರುದ್ಧಃ ವಿಸ್ಫುಲಿಂಗಃ ॥೩॥

(೪) ಅನ್ನಂ ಪ್ರವಿಷ್ಟೋ ಜೀವಃ ॥ ಏವಂ ಸಂಕರ್ಷಣಾಖ್ಯೇ ತೃತೀಯಾಗ್ನೌ ಹುತ್ವಾ ಅನ್ನದ್ವಾರಾ ಚತುರ್ಥಾಗ್ನೌ ಜುಹ್ವತಿ ॥ ಪುರುತ್ವಾತ್ ಪೂರ್ಣತ್ವಾತ್ ಪುರುಷನಾಮಾ ಪುರುಷಸ್ಥಃ ಪ್ರದ್ಯುಮ್ನಃ ಚತುರ್ಥಾಗ್ನಿಃ ॥ ಅಸ್ಯ ಅಗ್ನೇಃ ಪ್ರದ್ಯುಮ್ನೋದ್ಭೂತಾನಿ ನಾರಾಯಣಾದಿ ಪಂಚರೂಪಾಣ್ಯೇವ ಸಮಿದಾದಿ ಪಂಚ ಭಗವದ್ರೂಪಾಣಿ ॥ತಥಾಹಿ॥ ವಚನಾತ್ ವಾಙ್ನಾಮಾ ವಾಚಿಸಂಸ್ಥಃ ಪ್ರದ್ಯುಮ್ನ ನಾರಾಯಣಃ ಸಮಿತ್ ॥ ಪ್ರಕರ್ಷೇಣ ಅಶನಾತ್ ಪ್ರಾಣನಾಮಾ ಪ್ರಾಣಸಂಸ್ಥಃ ಪ್ರದ್ಯುಮ್ನ ವಾಸುದೇವಃ ಧೂಮಃ ॥ ಹೂಯತೇ ಅಸ್ಮಿನ್ ಇತಿ ಜಿಹ್ವಾನಾಮಾ ಜಿಹ್ವಾಸ್ಥಃ ಪ್ರದ್ಯುಮ್ನ ಸಂಕರ್ಷಣಃ ಅರ್ಚಿಃ ॥ ದರ್ಶನಾತ್ ಚಕ್ಷುರ್ನಾಮಾ ಚಕ್ಷುಸ್ಥಃ ಪ್ರದ್ಯುಮ್ನ ಪ್ರದ್ಯುಮ್ನಃ ಅಂಗಾರಃ ॥ ಶ್ರವಣಾತ್ ಶ್ರೋತ್ರನಾಮಾ ಶ್ರೋತ್ರಸ್ಥಃ ಪ್ರದ್ಯುಮ್ನಾನಿರುದ್ಧಃ ವಿಸ್ಫುಲಿಂಗಃ ಇತಿ ॥

ಏವಂ ಪ್ರದ್ಯುಮ್ನದ್ವಾರೇಣ ಚತುರ್ಥಾಗ್ನೌ ಹುತ್ವಾ, ರೇತೋದ್ವಾರಾ ಪಂಚಮಾಗ್ನೌ ಜುಹ್ವತಿ ॥ ಚೋಷ್ಯತ್ವಾತ್ ಭೋಗ್ಯತ್ವಾತ್ ಯೋಷಾನಾಮಾ ಯೋಷಸ್ಥಃ ಅನಿರುದ್ಧಃ ಪಂಚಮಾಗ್ನಿಃ ॥ ಅಸ್ಯ ಅಗ್ನೇಃ ನಾರಾಯಣಾದಿ ಪಂಚರೂಪಾಣ್ಯೇವ ಸಮಿದಾದಿ ಪಂಚರೂಪಾಣಿ ॥ತಥಾಹಿ॥ ಉಪಸಮೀಪೇ ಸ್ಥಿತತ್ವಾತ್ ಉಪಸ್ಥ ನಾಮಾ ಉಪಸ್ಥಸ್ಥಿತಃ ಅನಿರುದ್ಧ ನಾರಾಯಣಃ ಸಮಿತ್ ॥ ಉಪಮಂತ್ರಣ ಕರ್ತೃತ್ವಾತ್ ಉಪಮಂತ್ರಣನಾಮಾ ಉಪಮಂತ್ರಣಸ್ಥಃ ಅನಿರುದ್ಧ ವಾಸುದೇವಃ ಧೂಮಃ ॥ ಯುನಕ್ತಿ ಮಿಶ್ರೀಕರೋತಿ ಇತಿ ಯೋನಿನಾಮಾ ಯೋನಿಸ್ಥಃ ಅನಿರುದ್ಧ ಸಂಕರ್ಷಣಃ ಅರ್ಚಿಃ ॥ ಯೋನ್ಯಂತಃ ಕ್ರಿಯಮಾಣ ವ್ಯಾಪಾರ

ಕರ್ತೃತ್ವಾತ್ ಅಂತಃಕರಣನಾಮಾ ಅಂತಃಕರಣಸ್ಥಃ ಅನಿರುದ್ಧ ಪ್ರದ್ಯುಮ್ನಃ ಅಂಗಾರಃ ॥ ಅಭಿನಂದಯತಿ ಇತಿ ಅಭಿನಂದನಾಮಾ ಅಭಿನಂದಸ್ಥಿತಃ ಅನಿರುದ್ಧಾನಿರುದ್ಧಃ ವಿಸ್ಫುಲಿಂಗಃ ಇತಿ ಗರ್ಭಸ್ಥಃ ॥ ಏವಂ ಕ್ರಮೇಣ ಪಂಚಾಗ್ನೌ ಹೋಮಾನಂತರಂ ಪುರುಷ ಶಬ್ದಿತಃ ದೇಹಃ ಜಾಯತೇ ॥ ತತ ಏವ ಅಯಂ "ಪುರುಷಃ" ಇತ್ಯುಚ್ಯತೇ ॥ ಇತಿ ಉಪಾಸನಾಯಾಮ್ ॥ ನನು ನಾರಾಯಣಾದ್ಯಾತ್ಮಾ ತ್ರಿಂಶದಾತ್ಮಾ ಅವಿಕೃತಃ ಏವ ಏಕದಾ ಕಥಂ ಆವಿರ್ಭೂವ? ಅನ್ಯತ್ರ ಕನಕ ಕುಂಡಲಾದಿ ಭಾವ ನಿದರ್ಶನೋಕ್ತೇಃ ಚ ಕಿಂ ಬೀಜಮ್? ಇತಿ ಚೇತ್ ಅಭೀರ ಮಾತ್ರ ಏವ ಸಾ ॥ ಇತಿ ಭಾವೇನ ॥ "ಹರೇರಪಿ ಸ್ವರೂಪಾಣಾಮ್"- ಇತಿ ಆರ್ಯಾರ್ಯೋದಿತರಿತ ಸಂಶ್ಲೇಷಂ ಲೌಕಿಕ ನಿದರ್ಶನಾರೂಢಂ ಕರ್ತುಮಾಹ "ಪಂಚೇತಿ"॥ ನಾಮದಿಂ–ನಾಮಭಿಃ॥ ಮಯ–ವಿಕಾರ ಪಂಚವಿಧಾಃ ಸಾತ್ವಿಕಾಃ ॥ ತ್ರಿದಿವ ನಿರಯ ಭೂ ಪ್ರಚುರಾಃ ತ್ರಯಃ ರಾಜಸಃ ॥ ಸಮಸ್ತಾಃ ಚ ॥ ಇತಿ ಸಾಂಪ್ರದಾಯಕಾಃ ॥ ॥೮॥

ಕನ್ನಡಾರ್ಥ :—

"ದ್ಯು" ಮುಂತಾದ ಪಂಚಾಗ್ನಿಗಳಲ್ಲಿ ಪಂಚರೂಪಿ ಹರಿಯ ಉಪಾಸನೆ ಅತ್ಯಗತ್ಯ. ಜೀವನು ಮಾತೃಗರ್ಭದಲ್ಲಿ ಸೇರುವ ಕ್ರಮವು ಇಲ್ಲಿ ವಿಶದವಾಗಿ ವಿವರಿಸಲ್ಪಟ್ಟಿದೆ.

ತತ್ತ್ವನಿಯಾಮಕ ದೇವತೆಗಳು ದೇಹದ ಉತ್ಪತ್ತಿಗೆ ಕಾರಣವಾದ ಪಂಚಮಹಾಭೂತಗಳ ಸೂಕ್ಷ್ಮಾಂಶಗಳಿಂದ ಜೀವನನ್ನು ನಾರಾಯಣ ಮುಂತಾದ ಪಂಚಾಗ್ನಿಗಳಲ್ಲಿ ಹೋಮಿಸುತ್ತಾರೆ (ಇಡುತ್ತಾರೆ.) ಸ್ವರ್ಗಲೋಕ (ದ್ಯುಲೋಕ) ದಲ್ಲಿರುವ ನಾರಾಯಣನೇ ಪ್ರಥಮಾಗ್ನಿಯು. ಅವನು ಪ್ರಾಣನಲ್ಲಿ ಸ್ಥಿತನಾಗಿದ್ದು, ಪ್ರಕಾಶರೂಪವುಳ್ಳವನು. ಲೋಕವನ್ನು ಸಂಹರಿಸುವುದರಿಂದಲೂ (ತಿನ್ನು), ಅವಯವಗಳನ್ನು ಪ್ರೇರಿಸುವುದರಿಂದಲೂ (ನಡೆಯಿಸು) "ಅಗ್ನಿ" ನಾಮಕನಾಗಿದ್ದಾನೆ.

(೧) "ದ್ಯು" ಎಂಬ ಅಗ್ನಿಗೆ ನಾರಾಯಣನೇ ಮುಖ್ಯಾಭಿಮಾನಿಯು.

(೨) ಪ್ರಾಣಿಗಳ ಸಕಲ ಕರ್ಮಗಳನ್ನು ತೆಗೆದುಕೊಂಡು ಹೋಗುವುದರಿಂದ "ಆದಿತ್ಯ" ನಾಮಕನಾಗಿ, ಆದಿತ್ಯನಲ್ಲಿದ್ದು "ನಾರಾಯಣ-ನಾರಾಯಣ" ಎಂದು ವಾಚ್ಯನಾಗಿದ್ದಾನೆ. ಮೂಲಾಗ್ನಿ ನಾರಾಯಣನಿಗೆ ಇವನು "ಸಮಿತ್" ನಾಮಕನಾಗಿ ಸಮಿಧೆಯಲ್ಲಿರುತ್ತಾನೆ.

(೩) ರತಿಸುಖ ಜ್ಞಾನರೂಪವಾದುದರಿಂದ ಶ್ರೀಹರಿಯು "ರಶ್ಮಿ" ಶಬ್ದವಾಚ್ಯನಾಗಿದ್ದಾನೆ. ರಶ್ಮಿಗಳಲ್ಲಿರುವ ಈ ನಾರಾಯಣ–ವಾಸುದೇವ ರೂಪವನ್ನು ಅಜ್ಞಾನ ಮುಂತಾದ ದೋಷ ಪರಿಹಾರಕವಾಗಿರುವುದರಿಂದ "ಧೂಮ" ನೆನಿಸಿಕೊಳ್ಳುವನು.

(೪) ಕತ್ತಲೆ-ಅಜ್ಞಾನ ಮುಂತಾದ ದೋಷಗಳಿಂದ ವಿದೂರನಾದ ನಾರಾಯಣ-ಸಂಕರ್ಷಣನಿಗೆ "ಅಹ" (ಹಗಲು) ಎನ್ನುವರು. ಈ ನಾರಾಯಣ ಸಂಕರ್ಷಣರೂಪವು ಅತಿಶಯನಾಗಿ ನಿರ್ವಿಕಾರನಾಗಿ, ಪ್ರಕಾಶಮಯವಾಗಿರುವುದರಿಂದ "ಅರ್ಚಿ" ನಾಮಕನಾಗಿದ್ದಾನೆ.

(೫) ನಾರಾಯಣ-ಪ್ರದ್ಯುಮ್ನ ರೂಪದಿಂದ ಆಹ್ಲಾದರೂಪನಾಗಿರುವುದರಿಂದ, "ಚಂದ್ರ" ನಾಮಕನಾಗಿ, ಅಂಗಗಳಲ್ಲಿ ರಮಿಸುವುದರಿಂದ "ಅಂಗಾರ" ನೆನಿಸುವನು.

(೬) ಪರಾಪೇಕ್ಷಾರಹಿತನಾಗಿ, ಸರ್ವತಂತ್ರ ಸ್ವತಂತ್ರ ಪೋಷಕನಾದುದರಿಂದ "ನಕ್ಷತ್ರ" ನಾಮಕನಾದ ನಾರಾಯಣಾನಿರುದ್ಧನು ನಕ್ಷತ್ರಗತನಾಗಿದ್ದು, ವಿಧವಿಧವಾಗಿ ಸ್ಫುರಿಸುವುದರಿಂದ (ಹೊಳೆಯುವುದರಿಂದ) "ವಿಸ್ಫುಲಿಂಗ" ವಾಚ್ಯನಾಗಿ ಕಿಡಿ ಎನಿಸುತ್ತಾನೆ.

"**ಸೋಮೋ ರಾಜಾ ಭವತಿ**"- ಎಂಬಂತೆ ದೇವತೆಗಳು ಜೀವನನ್ನು ಚಂದ್ರನಲ್ಲಿ ಸೇರಿಸುವರು. (ಹೋಮಿಸುವರು). ಇಂತು ದೇವತೆಗಳು ನಾರಾಯಣಾದಿ ಆರು ರೂಪಗಳಲ್ಲಿರುವ ನಾರಾಯಣಾಗ್ನಿ ಎಂಬ ಪ್ರಥಮಾಗ್ನಿಯಲ್ಲಿ ಹೋಮಿಸಿ, ಅನಂತರ ಚಂದ್ರನದ್ವಾರಾ ಪರ್ಜನ್ಯವೆಂಬ ದ್ವಿತೀಯಾಗ್ನಿಯಲ್ಲಿ ಹೋಮಿಸುವರು.

(೧) ಬ್ರಹ್ಮಾದಿ ಶ್ರೇಷ್ಠರನ್ನು ಹುಟ್ಟಿಸುವುದರಿಂದ (ಜನಯಿಸು) "ಪರ್ಜನ್ಯ" ನೆಂದು ವಾಸುದೇವರೂಪೀ ಶ್ರೀಪರಮಾತ್ಮನಿಗೆ ಹೆಸರು. ಪರ್ಜನ್ಯ ಅಂದರೆ, ಮೇಘಪಂಕ್ತಿಗತನಾದ ವಾಸುದೇವನೇ ದ್ವಿತೀಯಾಗ್ನಿಯು.

(೨) ಜ್ಞಾನ ಮತ್ತು ಬಲ (ಆಯು) ರೂಪನಾದುದರಿಂದ "ವಾಯು" ನಾಮಕನಾದ ವಾಯುಗತ ವಾಸುದೇವ ನಾರಾಯಣನು "ಸಮಿಧೆ" ಎನಿಸುವನು.

(೩) ನೀರನ್ನು ತುಂಬಿಸುವುದರಿಂದ "ಅಭ್ರ" ಶಬ್ದವಾಚ್ಯನಾದ ಮೇಘಗತ (ಅಭ್ರಗತ) ವಾಸುದೇವ ವಾಸುದೇವನು "ಧೂಮ" ನೆನಿಸುವನು.

(೪) ಅತಿಶಯವಾಗಿ ಮಿಂಚುವುದರಿಂದ (ಹೊಳೆಯುವುದರಿಂದ) "ವಿದ್ಯುತ್" ನಾಮಕನಾದ ವಿದ್ಯುದ್ಗತ ವಾಸುದೇವ ಸಂಕರ್ಷನು "ಅರ್ಚಿ" (ಜ್ವಾಲೆ) ಎಂದು ಖ್ಯಾತನಾಗಿದ್ದಾನೆ.

(೫) ಎಲ್ಲವನ್ನು ನುಂಗುವುದರಿಂದ (ತಿನ್ನುವುದರಿಂದ) "ಅಶನಿ" ನಾಮಕನಾದ ವಾಸುದೇವ ಪ್ರದ್ಯುಮ್ನನು ಅಶನಿಸ್ಥಿತನಾಗಿ, "ಅಂಗಾರ" (ಕೆಂಡ) ಶಬ್ದವಾಚ್ಯನಾಗಿದ್ದಾನೆ.

(೬) ವಜ್ರದಂತೆ ಗಂಭೀರವಾಗಿ ಘರ್ಜಿಸುವುದರಿಂದ "ಹ್ರಾದುನಿ" ನಾಮಕನಾದ ವಾಸುದೇವಾನಿರುದ್ಧನು ಹ್ರಾದುನಿಗತನಾಗಿ "ವಿಸ್ಫುಲಿಂಗ" (ಕಿಡಿಗಣ) ಶಬ್ದವಾಚ್ಯನಾಗಿದ್ದಾನೆ.

ಇಂತು,ದೇವತೆಗಳು ವಾಸುದೇವನೆಂಬ ದ್ವಿತೀಯಾಗ್ನಿಯಲ್ಲಿ ಹೋಮಿಸಿ. ಜೀವನನ್ನು ವೃಷ್ಟಿಯದ್ವಾರಾ (ಮಳೆ) ತೃತೀಯಾಗ್ನಿಯಲ್ಲಿ ಹೋಮಿಸುವರು.

(೧) ಪ್ರಸಿದ್ಧನಾದುದರಿಂದ "ಪ್ರಥಿವೀ" ಶಬ್ದವಾಚ್ಯನಾದ ಪೃಥಿವೀ ತತ್ತ್ವಸ್ಥ ಸಂಕರ್ಷಣನು ತೃತೀಯಾಗ್ನಿಯು.

(೨) ಸರ್ವತ್ರ ವಾಸವಾಗಿರುವುದರಿಂದ (ವ್ಯಾಪಿಸಿರುವುದರಿಂದ)

"ಸಂವತ್ಸರ" ನಾಮಕನಾಗಿ ಸಂವತ್ಸರಗತನಾದ ಸಂಕರ್ಷಣ ನಾರಾಯಣನು "ಸಮಿಧೆ" (ಕಾಷ್ಠ) ಶಬ್ದವಾಚ್ಯನಾಗಿದ್ದಾನೆ.

(೩) ಪ್ರಕಾಶಮಾನನಾದುದರಿಂದ, "ಆಕಾಶ" ಶಬ್ದನಾಮಕನಾದ ಆಕಾಶಸ್ಥನಾಗಿ ಸಂಕರ್ಷಣ ವಾಸುದೇವನು "ಧೂಮ" ಎನಿಸಿಕೊಳ್ಳುವನು.

(೪) ರತಿಯನ್ನೀವುದರಿಂದ (ರತಿಪ್ರದ) "ರಾತ್ರಿ" ನಾಮಕನಾದ ರಾತ್ರಿಗತ ಸಂಕರ್ಷಣ ಸಂಕರ್ಷಣನು "ಅರ್ಚಿ" (ಜ್ವಾಲೆ) ಶಬ್ದವಾಚ್ಯನು.

(೫) ಮೋಕ್ಷಾದಿ ಪುರುಷಾರ್ಥಪ್ರದನಾದುದರಿಂದ "ದಿಶ" ನಾಮಕನಾದ ದಿಕ್ಕುಗಳಲ್ಲಿರುವ ಸಂಕರ್ಷಣ ಪ್ರದ್ಯುಮ್ನನು "ಅಂಗಾರ" (ಕೆಂಡ) ನೆನಿಸುವನು.

(೬) ಅವಾಂತರ ಫಲಗಳಾದ ಸ್ವರ್ಗ ಮುಂತಾದ ಭೋಗಗಳನ್ನು ಕೊಡುವನಾದ್ದರಿಂದ "ಅವಾಂತರ ದಿಕ್"ಶಬ್ದವಾಚ್ಯನಾಗಿ ವಿದಿಕ್ಕುಗಳಲ್ಲಿದ್ದು, ಸಂಕರ್ಷಣಾನಿರುದ್ಧನು "ವಿಸ್ಫುಲಿಂಗ" (ಕಿಡಿಗಳು) ನೆನಿಸಿರುವನು.

ನಂತರ ಜೀವನು ಅನ್ನವನ್ನು ಪ್ರವೇಶಿಸುವನು. ದೇವತೆಗಳು ಸಂಕರ್ಷಣಾಖ್ಯವಾದ ತೃತೀಯಾಗ್ನಿಯಲ್ಲಿ ಹೋಮಿಸಿ, ಅನ್ನದ್ವಾರಾ ಚತುರ್ಥಾಗ್ನಿಯಾದ ಪ್ರದ್ಯುಮ್ನನಲ್ಲಿ ಹೋಮಿಸುವರು.

(೧) ಬಹುರೂಪನೂ ಮತ್ತು ಪರಿಪೂರ್ಣನೂ ಆಗಿರುವುದರಿಂದ ಪರಮಾತ್ಮನಿಗೆ "ಪುರುಷ" ನೆಂದು ನಾಮ. ಪುರುಷ ಶಬ್ದವಾಚ್ಯನಾದ ಪ್ರದ್ಯುಮ್ನನೇ ನಾಲ್ಕನೆಯ ಅಗ್ನಿಯು.

(೨) ವಾಗ್ವ್ಯಾಪಾರ ರೂಪವಾದ ಕ್ರಿಯೆಗಳನ್ನು ಮಾಡಿ ಮಾಡಿಸುವವನಾದ್ದರಿಂದ "ವಾಕ್" ಶಬ್ದವಾಚ್ಯನಾಗಿ ವಾಕ್‌ಸ್ಥಿತನಾಗಿರುವ ಪ್ರದ್ಯುಮ್ನ ನಾರಾಯಣನು "ಸಮಿತ್ತು" (ಕಾಷ್ಠ) ಎಂದೆನಿಸುವನು.

(೩) ಅತಿಶಯವಾಗಿ ಸಂಚಾರ ಮತ್ತು ಕ್ರಿಯಾ ಪ್ರವರ್ತಕನಾದ್ದ

ರಿಂದ "ಪ್ರಾಣ" ಶಬ್ದವಾಚ್ಯನಾಗಿ, ಪ್ರಾಣನಲ್ಲಿ ಇರುವ ಪ್ರದ್ಯುಮ್ನ ವಾಸುದೇವನು "ಧೂಮ" (ಹೊಗೆ) ಎಂದೆನಿಸಿದ್ದಾನೆ.

(೪) ಆಹ್ವಾನ ಮಾಡುವುದರಿಂದ ತನ್ನಲ್ಲಿಯೇ ಹೋಮವನ್ನು ಸ್ವೀಕರಿಸುವುದರಿಂದ, "ಜಿಹ್ವಾ" ನಾಮಕನಾಗಿ, ಜಿಹ್ವೆಯಲ್ಲಿರುವ ಪ್ರದ್ಯುಮ್ನ ಸಂಕರ್ಷಣನು "ಅರ್ಚಿ" (ಜ್ವಾಲೆ) ಶಬ್ದವಾಚ್ಯನಾಗಿದ್ದಾನೆ.

(೫) ನೋಡಿ ನೋಡಿಸುವುದರಿಂದ "ಚಕ್ಷುಸ್" ಶಬ್ದವಾಚ್ಯನಾಗಿ, ಚಕ್ಷುಸ್ಸಿನಲ್ಲಿ ಇರುವ ಪ್ರದ್ಯುಮ್ನ ಪ್ರದ್ಯುಮ್ನನು "ಅಂಗಾರಕ" (ಕೆಂಡ) ನೆಂದೆನಿಸುವನು.

(೬) ಕೇಳುವುದರಿಂದ "ಶ್ರೋತ್ರ" ನಾಮಕನಾವ ಶ್ರೋತ್ರಸ್ಥ ಪ್ರದ್ಯುಮ್ನಾನಿರುದ್ಧನು "ವಿಸ್ಫುಲಿಂಗ" ನು.

ಇಂತು ಪ್ರದ್ಯುಮ್ನಾಗ್ನಿಯಲ್ಲಿ ಹೋಮಿಸಿದ ನಂತರ ರೇತಸ್ಸಿನ ದ್ವಾರಾ ಜೀವನನ್ನು ಐದನೆಯದಾದ ಅನಿರುದ್ಧಾಖ್ಯ ಅಗ್ನಿಯಲ್ಲಿ ಹೋಮಿಸುವರು.

(೧) ಉಪಭೋಗಕ್ಕೆ ಆಶ್ರಯನಾದುದರಿಂದ, ಉಪಭೋಗ್ಯನಾಗಿ, "ಯೋಷಾ" ಶಬ್ದವಾಚ್ಯನಾಗಿ, ಸ್ತ್ರೀಯಲ್ಲಿರುವ ಅನಿರುದ್ಧನೇ ಐದನೆಯ ಅಗ್ನಿಯು.

(೨) ಸಮೀಪದಲ್ಲಿರುವುದರಿಂದ "ಉಪಸ್ಥ" ನಾಮಕನಾಗಿ, ಉಪಸ್ಥದಲ್ಲಿರುವ ಅನಿರುದ್ಧ ನಾರಾಯಣನು "ಸಮಿತ್" ಎಂದು ಕರೆಯಿಸುವನು.

(೩) ಉಪಮಂತ್ರಣ ಮಾಡುವುದರಿಂದ, ಉಪಮಂತ್ರಣನಾಮಕನಾಗಿ ಅನಿರುದ್ಧ ವಾಸುದೇವನು "ಧೂಮ" ನೆನಿಸುವನು.

(೪) ಮಿಶ್ರೀಕರಿಸುವುದರಿಂದ (ಕೂಡುವುದರಿಂದ) "ಯೋನಿ" ನಾಮಕನಾಗಿ ಯೋನಿಸ್ಥ ಅನಿರುದ್ಧ ಸಂಕರ್ಷಣನು "ಅರ್ಚಿ" ಎಂದೆನಿಸುವನು.

(೫) ಯೋನಿಗತ ವ್ಯಾಪಾರಗಳನ್ನು ಮಾಡಿ ಮಾಡಿಸುವುದರಿಂದ, "ಅಂತಃಕರಣ" ನಾಮಕನಾಗಿ ಆ ಅಧಿಷ್ಠಾನಗತನಾಗಿದ್ದು, ಅನಿರುದ್ಧ ಪ್ರದ್ಯುಮ್ನನು "ಅಂಗಾರಕ" ಎಂದು ಕರೆಯಿಸುವನು.

(೬) ಅಭಿನಂದಿಸುವುದರಿಂದ "ಅಭಿನಂದ" ನಾಮಕನಾಗಿ, ಅಭಿನಂದ (ಉತ್ಸಾಹ) ದಲ್ಲಿರುವ ಅನಿರುದ್ಧಾನಿರುದ್ಧನು "ವಿಸ್ಫುಲಿಂಗ"ನು.

ಹೀಗೆ ಕ್ರಮವಾಗಿ ಪಂಚಾಗ್ನಿಗಳಲ್ಲಿ ಹೋಮವಾದ ನಂತರ ಗರ್ಭಸ್ಥನಾದ ಜೀವನಿಗೆ "ಪುರುಷ" ಎಂದು ಹೆಸರು.

ನಾರಾಯಣಾದಿ ರೂಪಿಯಾದ ಶ್ರೀಹರಿಯು ನಿರ್ವಿಕಾರನಾಗಿ, ಏಕ ಕಾಲದಲ್ಲಿ ತ್ರಿಂಶತಿ (ಮೂವತ್ತು) ರೂಪಗಳಿಂದ ವ್ಯಕ್ತನಾಗುವ ವಿಷಯವನ್ನು ಕನಕ-ಕುಂಡಲ ಮುಂತಾದ ಆಭರಣಗಳ ದೃಷ್ಟಾಂತದಿಂದ ತಿಳಿಸುತ್ತಾರೆ. ಶ್ರೀಹರಿಯು ಸ್ವಗತಭೇದವಿವರ್ಜಿತನು. ಅಂದರೆ, ಅವನ ಮೂಲರೂಪಕ್ಕೂ, ಇತರ ಸಮಸ್ತ ಪ್ರಾದುರ್ಭಾವ ಹಾಗೂ ಅವತಾರ ರೂಪಗಳಿಗೂ ಪರಸ್ಪರ ಭೇದವಿಲ್ಲ.

**"ಹರೇರಪಿ ಸ್ವರೂಪಾಣಾಮ್"** -ಎಂಬ ಆರ್ಯವರೇಣ್ಯರ ಅಭಿಪ್ರಾಯವೇ ಈ ಪದ್ಯದಲ್ಲಿ ಪ್ರತಿಪಾದಿತವಾಗಿದೆ.

ನಾಮದಿಂ = ನಾಮಗಳಿಂದ. ಮಯ = ವಿಕಾರ. ಸಾತ್ವಿಕರು, ಸ್ವರ್ಗ ಪ್ರಚುರರು, ಭೂಪ್ರಚುರರು, ನರಕ ಪ್ರಚುರರು ಎಂದು ರಾಜಸರಲ್ಲಿ ತ್ರಿವರ್ಗ ಮತ್ತು ತಾಮಸರು. ಇದೇ "ಪಂಚಜೀವರು" ಎಂದು ತಾತ್ಪರ್ಯ ॥೮॥

**(ಆ) "ಗುರುಹೃದಯ ಪ್ರಕಾಶಿಕೆ"-ವ್ಯಾಖ್ಯಾನ : —**

ಅನೇಕ ರೂಪನಾದರೂ ಏಕರೂಪನೆಂದು ದೃಷ್ಟಾಂತ ಸಹ ಬೋಧಿಸುತ್ತಾರೆ **ಪಂಚನಾರೀ**-ಎಂದು.

ಐದು ಹೆಣ್ಣು ಪ್ರತಿಮೆಗಳು ಬೇರೆ ಬೇರೆ ಇದ್ದಾಗ್ಯೂ ಕುದುರೆ ಆಕಾರ,

ಒಂದೇ ಆಗಿರುವಂತೆ, ಐದು ರೂಪನಾದ ದೇವರು ಒಂದೊಂದಗ್ನಿಯಲ್ಲಿ, ಸಮಿತ್ತು, ಹೊಗೆ, ಉರಿ, ಕೆಂಡ, ಕಿಡಿ ಸಹಾ ಈ ರೀತಿ ಐದು ಅಗ್ನಿಗಳಲ್ಲಿ (ಐದು ಐದು) ಇಪ್ಪತ್ತೈದು ಅಗ್ನಿಗಳು ಐದೂ ಸಹಾ ಮುವತ್ತು ರೂಪ ಧರಿಸಿ, ಜ್ಞಾನಾನಂದ ಗುಣಮಯ ರೂಪನು ಒಬ್ಬನೇ ಹೊಗೆ ಮೊದಲಾದ ನಾಮಗಳಿಂದ ಕರೆಸುತ್ತಾ, ತ್ರಿಗುಣವಿಕಾರವಾದ ಪಂಚಭೂತಾತ್ಮಕ ಶರೀರ ವನ್ನು ಪೂರ್ವೋಕ್ತ ರೀತಿಯಾಗಿ, ದೇವ, ಋಷಿ, ಪಿತೃ, ರಾಜ ಮತ್ತು ಮನು ಷ್ಯೋತ್ತಮರೆಂದು ಐದು ಜಾತಿ ಭೇದದಿಂದಿರುವ ಮುಕ್ತಿಯೋಗ್ಯ ಜೀವ ರಿಗೂ ಸ್ವರ್ಗ, ನರಕ, ಮಾನುಷಾ, ಪಿತೃಲೋಕ ಸಹ ನಾಲ್ಕು, ಪಶುಜನ್ಮ ಸಹ ಐದು ಸ್ಥಾನ ಹೊಂದುವ ರಾಜಸ ಜೀವರಿಗೂ ಸಹ. ಜನ್ಮಗಳ ಕೊಟ್ಟು, ಅವ ರಲ್ಲಿದ್ದು ತಾನು ಕ್ರೀಡಿಸುವನು ‖೮‖

## ಸರ್ವವ್ಯಾಖ್ಯಾನಸಾರ ಸಂಗ್ರಹ

ಮೂಲರೂಪಿ ಶ್ರೀಮನ್ನಾರಾಯಣನು ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ರೂಪಚತುಷ್ಟಯಗಳಿಂದ ಅಭಿವ್ಯಕ್ತವಾಗಿ ಪಂಚಾಗ್ನಿಗತನಾಗಿ ಮೂವತ್ತು ರೂಪಗಳಿಂದ ವಿದ್ಯಮಾನನಾಗಿದ್ದು, ಜೀವರ ಉತ್ಪತ್ತಿ ಮತ್ತು ಸಂರಕ್ಷಣೆಗೆ ಮುಖ್ಯ ಕಾರಣನಾಗಿ ನಿಯಾಮಕನಾಗಿದ್ದನೆಂಬ ವಿಷಯವನ್ನು **ಪಂಚನಾರೀತುರಗ**ವೆಂಬ ಒಂದು ದೃಷ್ಟಾಂತದಿಂದ ಪ್ರಸಕ್ತ ಸಂಧಿಗತ ೮ ನೆಯ ಈ ಪದ್ಯದಿಂದ ವಿವರಿಸುತ್ತಾರೆ.

ಐದು ಮಂದಿ ಸ್ತ್ರೀಯರನ್ನು ಒಂದು ಕುದುರೆಯ ಆಕಾರ ಬರುವಂತೆ ಹೊಂದಿಸಿ, ಚಿತ್ರವನ್ನು ಬರೆಯುವ ಕಲೆಯು ಚಿತ್ರಕಲಾ ಶಾಸ್ತ್ರದಲ್ಲಿದೆ. ಅಂತೆಯೇ ಪ್ರಾಯೋಗಿಕವಾಗಿಯೂ, ಅದೇ ಚಿತ್ರದ ಮಾದರಿಯನ್ನು ಅನು ಸರಿಸಿ, ಐದು ಮಂದಿ ಸ್ತ್ರೀಯರನ್ನು ಜೋಡಿಸಿ, ಒಂದು ಕುದುರೆಯ ಆಕಾರ ಬರುವಂತೆ ಮಾಡಲು ಸಾಧ್ಯ. ಇಂತಹ ಚಿತ್ರಾಕಾರವಾದ ಜೋಡಣೆಗೆ **ಪಂಚನಾರೀತುರಗ**ವೆಂದು ಕರೆಯುವರು. ಈ ಚಿತ್ರದಲ್ಲಿ ಐದು ಜನ ಸ್ತ್ರೀ ಯರೂ ಬೇರೆ ಬೇರೆಯಾಗಿದ್ದರೂ, ಅವರು ಒಟ್ಟಿಗೆ ಸೇರಿದಾಗ ಒಂದು ಕುದು ರೆಯ ಆಕಾರದಲ್ಲಿ ಅಖಂಡರೂಪದಲ್ಲಿ ಕಾಣಿಸುವರು.

ಅಂತೆಯೇ, ಮೂಲರೂಪಿ ಶ್ರೀಮನ್ನಾರಾಯಣನು ಪಂಚಾಗ್ನಿಗತ ಸಮಿತ್ತು ಮೊದಲಾದ ಯಜ್ಞೋಪಕರಣಗಳಲ್ಲಿ ಸ್ವಾಭಿನ್ನಗಳಾದ ನಾರಾಯಣ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ರೂಪಗಳಿಂದ ಯುಕ್ತನಾಗಿ ಸಮಗ್ರ ಅಂದರೆ, ಅಖಂಡ ರೂಪಿಯಾಗಿ ಪಂಚಾಗ್ನಿಗತ ಕಾರ್ಯ ವಿಶೇಷಗಳನ್ನು ಮಾಡಿ ಮಾಡಿಸುತ್ತಿರುವನು. ಅದರ ವಿವರಗಳನ್ನು ಪೂರ್ವೋಕ್ತ ಪದ್ಯಗಳಲ್ಲಿ ಕೊಟ್ಟಿದೆ.

1 (೧) **ಆಕಾಶಾಗ್ನಿಯಲ್ಲಿ** ಮೂಲರೂಪಿ ಶ್ರೀಮನ್ನಾರಾಯಣನು.
(೨) ಸಮಿತ್ತಿನಲ್ಲಿ ನಾರಾಯಣ–ನಾರಾಯಣರೂಪ
(೩) ಧೂಮದಲ್ಲಿ ನಾರಾಯಣ-ವಾಸುದೇವರೂಪ.
(೪) ಜ್ವಾಲೆಯಲ್ಲಿ ನಾರಾಯಣ-ಸಂಕರ್ಷಣರೂಪ.
(೫) ಅಂಗಾರದಲ್ಲಿ ನಾರಾಯಣ-ಪ್ರದ್ಯುಮ್ನರೂಪ
(೬) ಕಿಡಿಗಳಾಗಿ ನಾರಾಯಣ-ಅನಿರುದ್ಧರೂಪ.

2 (೭) **ಪರ್ಜನ್ಯಾಗ್ನಿಯಲ್ಲಿ** ವಾಸುದೇವರೂಪ.
(೮) ಸಮಿತ್ತಿನಲ್ಲಿ ವಾಸುದೇವ-ನಾರಾಯಣರೂಪ.
(೯) ಹೊಗೆಯಲ್ಲಿ ವಾಸುದೇವ-ವಾಸುದೇವರೂಪ.
(೧೦) ಅರ್ಚಿಯಲ್ಲಿ ವಾಸುದೇವ-ಸಂಕರ್ಷಣರೂಪ.
(೧೧) ಕೆಂಡದಲ್ಲಿ ವಾಸುದೇವ-ಪ್ರದ್ಯುಮ್ನರೂಪ.
(೧೨) ವಿಸ್ಫುಲಿಂಗದಲ್ಲಿ ವಾಸುದೇವ-ಅನಿರುದ್ಧರೂಪ.

3 (೧೩) **ಪೃಥಿವ್ಯಾಗ್ನಿಯಲ್ಲಿ** ಸಂಕರ್ಷಣರೂಪ.
(೧೪) ಕಾಷ್ಠದಲ್ಲಿ ಸಂಕರ್ಷಣ-ನಾರಾಯಣರೂಪ.
(೧೫) ಧೂಮದಲ್ಲಿ ಸಂಕರ್ಷಣ-ವಾಸುದೇವರೂಪ.
(೧೬) ಉರಿಯಲ್ಲಿ ಸಂಕರ್ಷಣ-ಸಂಕರ್ಷಣರೂಪ.
(೧೭) ಅಂಗಾರದಲ್ಲಿ ಸಂಕರ್ಷಣ-ಪ್ರದ್ಯುಮ್ನರೂಪ.
(೧೮) ಕಿಡಿಗಳಲ್ಲಿ ಸಂಕರ್ಷಣ-ಅನಿರುದ್ಧರೂಪ.

4 (೧೯) **ಪುರುಷಾಗ್ನಿಯಲ್ಲಿ** (ತಂದೆ) ಪ್ರದ್ಯುಮ್ನರೂಪ.
(೨೦) ಸಮಿತ್ತಿನಲ್ಲಿ ಪ್ರದ್ಯುಮ್ನ-ನಾರಾಯಣರೂಪ.
(೨೧) ಹೊಗೆಯಲ್ಲಿ ಪ್ರದ್ಯುಮ್ನ-ವಾಸುದೇವರೂಪ.
(೨೨) ಜ್ವಾಲೆಯಲ್ಲಿ ಪ್ರದ್ಯುಮ್ನ-ಸಂಕರ್ಷಣರೂಪ.
(೨೩) ಕೆಂಡದಲ್ಲಿ ಪ್ರದ್ಯುಮ್ನ-ಪ್ರದ್ಯುಮ್ನರೂಪ.
(೨೪) ವಿಸ್ಫುಲಿಂಗದಲ್ಲಿ ಪ್ರದ್ಯುಮ್ನ-ಅನಿರುದ್ಧರೂಪ.

5 (೧೫) **ಯೋಷಾಗ್ನಿಯಲ್ಲಿ** (ಜನನೀ) ಅನಿರುದ್ಧರೂಪ.
(೨೬) ಸಮಿತ್ತಿನಲ್ಲಿ ಅನಿರುದ್ಧ-ನಾರಾಯಣರೂಪ.
(೨೭) ಧೂಮದಲ್ಲಿ ಅನಿರುದ್ಧ-ವಾಸುದೇವರೂಪ.
(೨೮) ಆರ್ಚಿಯಲ್ಲಿ ಅನಿರುದ್ಧ-ಸಂಕರ್ಷಣರೂಪ.
(೨೯) ಅಂಗಾರದಲ್ಲಿ ಅನಿರುದ್ಧ-ಪ್ರದ್ಯುಮ್ನರೂಪ.
(೩೦) ವಿಸ್ಫುಲಿಂಗದಲ್ಲಿ ಅನಿರುದ್ಧ-ಅನಿರುದ್ಧರೂಪ.

ಇಂತು ಪ್ರತಿ ಅಗ್ನಿಯಲ್ಲಿಯೂ ಆರು ರೂಪಗಳ ಪ್ರಕಾರ, ಪಂಚಾಗ್ನಿಗಳಲ್ಲಿ ೬ × ೫ = ಮೂವತ್ತು ರೂಪಗಳಿಂದ, ಆಯಾಯಾ ಅಗ್ನಿಗಳ ಹೆಸರುಗಳಿಂದಲೇ ತತ್ತಚ್ಛಬ್ದವಾಚ್ಯನಾಗಿ, ಸಮಿತ್ತು, ಧೂಮ, ಆರ್ಚಿ, ಅಂಗಾರ ಮತ್ತು ಕಿಡಿಗಳು ಎಂಬ ಅಗ್ನಿ ಸಂಬಂಧವಾದ ಉಪಾಂಗಗಳಲ್ಲಿ ತತ್ತನ್ನಾಮಕನಾಗಿ ಶ್ರೀಪರಮಾತ್ಮನು [ಸ್ವಾಭಿನ್ನರೂಪಗಳಿಂದ ವಿದ್ಯಮಾನನಾಗಿದ್ದಾನೆ. ಇಲ್ಲಿ ನಾರಾಯಣಾದಿ ಪಂಚರೂಪಗಳಿಗೆ ಪರಸ್ಪರ ಅಭೇದ. ಅಂತೆಯೇ ನಾರಾಯಣ–ನಾರಾಯಣ ಇತ್ಯಾದಿ ಖಂಡರೂಪಗಳಿಗೂ ಅಭೇದ. ಇಂತು ಸ್ವಗತ ಭೇದ ವಿವರ್ಜಿತನಾದ ಶ್ರೀಪರಮಾತ್ಮನು ಪ್ರತಿ ಅಗ್ನಿಯಲ್ಲಿಯೂ ಅಖಂಡ ರೂಪದಿಂದ ಇದ್ದು, ಪಂಚನಾರೀತುರಗದಂತೆ ಲೀಲಾವಿಲಾಸ್ಪದನಾಗಿದ್ದಾನೆ.

ದೇವತೆಗಳು ಆಕಾಶಾಗ್ನಿಗತ ನಾರಾಯಣನಲ್ಲಿ ಜೀವನನ್ನು ಹೋಮಿಸಿ, ಚಂದ್ರನದ್ವಾರಾ, ಪರ್ಜನ್ಯಾಗ್ನಿಗತ ವಾಸುದೇವನಲ್ಲಿ ಹೋಮಿಸಿ, ಮಳೆಯ ದ್ವಾರಾ. ಭೂಮಿಯನ್ನು ಸೇರಿ, ಅಲ್ಲಿ ಪೃಥಿವ್ಯಾಗ್ನಿಗತ ಸಂಕರ್ಷಣನಲ್ಲಿ ಹೋಮಿಸಿ, ಪೃಥ್ವೀದ್ವಾರಾ, ವ್ರೀಹ್ಯಾದಿಗಳಲ್ಲಿಟ್ಟು, ನಂತರ ಪುರುಷಾಗ್ನಿ

ಗತ ಪ್ರದ್ಯುಮ್ನನಲ್ಲಿ ಹೋಮಿಸಿ, ತಂದೆಯ ರೇತಸ್ಸಿನಲ್ಲಿ ಜೀವನನ್ನು ಇಟ್ಟು ನಂತರ ಯೋಷಾಗ್ನಿಗತ ಅನಿರುದ್ಧನಲ್ಲಿ ಹೋಮಿಸಿ, ಮಾತೃಗರ್ಭವನ್ನು ಸೇರಿ, ತದ್ವಾರಾ ಜನಿಸುವನು. ಇಂತು ಸತ್ವರಜಸ್ತಮೋಗುಣತ್ರಯ ಸಂಬಂಧ ದಿಂದ ಪೃಥ್ವ್ಯಾದಿ ಪಂಚಭೂತಗಳಿಂದ ಜೀವನ ಸ್ಥೂಲ ಶರೀರವು ಉತ್ಪತ್ತಿ ಯಾಗುವುದು. ಇಂತಹ ಪಾಂಚಭೌತಿಕ ಶರೀರವನ್ನು ಪರಮಾತ್ಮನೇ ಪೂರ್ವೋಕ್ತ ಪಂಚಾಗ್ನಿಗತದ್ವಾರಾ ಪಂಚವಿಧ ಜೀವರಿಗೆ ಕೊಡುವನು.

**ಪಂಚಜೀವರ ವಿವರ :–**

(೧) ದೇವ. (೨) ಋಷಿ. (೩) ಪಿತೃ. (೪) ನೃಪ. **ಮತ್ತು** (೫) ಮಾನು ಷೋತ್ತಮರು ಎಂದು ಪಂಚವಿಧ ಜೀವರು ಗ್ರಾಹ್ಯ.

**"ದೇವ ಋಷಿ ಪಿತೃಪನರಾಃ" – ಎಂದು ತತ್ತ್ವಸಂಖ್ಯಾನದ ಪ್ರಮಾಣ.** ಎರಡನೆಯ ವರ್ಗವು.

(೧) ದೇವ. (೨) ಗಂಧರ್ವ. (೩) ಪಿತೃ. (೪) ಮನುಷ್ಯ ಮತ್ತು (೫) ಅಸುರ.

ಇದು **ವಿಜಯಧ್ವಜೀಯ ವ್ಯಾಖ್ಯಾನದ ಪ್ರಮಾಣ** (**"ಅತ್ರ ಪಂಚನು"**) ಇದಲ್ಲದೆ,

(೧) ಸಾತ್ವಿಕರು. (೨) ರಾಜಸ ವರ್ಗದಲ್ಲಿ ಸ್ವರ್ಗಪ್ರಚುರು. (೩) ಭೂಪ್ರಚುರರು. (೪) ನರಕ ಪ್ರಚುರರು ಮತ್ತು (೫) ತಮೋ ಯೋಗ್ಯ ಜೀವರು ಎಂದು ಗುಣತ್ರಯಂಗಳಿಗನುಸಾರವಾಗಿ ಪಂಚವಿಧ ಜೀವರೂ ಗ್ರಾಹ್ಯ.

ಇಂತು, ಪೂರ್ವೋಕ್ತ ಪಂಚ ಜೀವರಿಗೆ ಪಾಂಚಭೌತಿಕ ಸ್ಥೂಲ ದೇಹ ಗಳನ್ನು ಕೊಟ್ಟು, ಆಯಾಯಾ ದೇಹಗತನಾಗಿ ಕ್ರೀಡಾವಿಶಿಷ್ಟನಾಗಿದ್ದಾನೆ ಎಂದು ತಾತ್ಪರ್ಯ. ॥೯॥

## ಪದ್ಯ (೯)

ವಿಧಿಭವಾದಿ ಸಮಸ್ತ ಜೀವರ ।
ಹೃದಯದೊಳಗೇಕಾತ್ಮನೆನಿಸುವ ।
ಪದುಮನಾಭನು ಅಚ್ಯುತಾದಿಯನಂತ ರೂಪದಲಿ ॥
ಅದಿಸುಭೂತಾಧ್ಯಾತ್ಮವಧಿ ದೈ ।
ವದೊಳು ಕರೆಸುವ ಪ್ರಾಣ ನಾಗಾ ।
ಭಿಧನು ದಶರೂಪದಲಿ ದಶವಿಧ ಪ್ರಾಣದೊಳಗಿದ್ದು ॥೯॥

**ಅವತರಣಿಕೆ :–**

ಬ್ರಹ್ಮರುದ್ರಾದಿ ಸಮಸ್ತ ದೇವತಾ ವರ್ಗದಿಂದ ಸಂಸೇವ್ಯಮಾನನಾಗಿ ಸರ್ವಜೀವರಾಶಿಗಳ ಹೃತ್ಪದ್ಮದಲ್ಲಿ "ಏಕಮೇವಾದ್ವಿತೀಯ" ದೆಂದು ಆದಿ ಮೂಲ ಸ್ವರೂಪಿಯಾದ ಮೂಲೇಶನಾಮಕ ಶ್ರೀಮನ್ನಾರಾಯಣನು ಪದ್ಮನಾಭ ಎಂದು ಖ್ಯಾತನಾಗಿ, ಜಗತ್ಸೃಷ್ಟಿರೂಪವಾದ ವ್ಯಾಪಾರ ವಿಶೇಷಗಳನ್ನು ಲೀಲಾಜಾಲವಾಗಿ ಮಾಡುತ್ತಾ, ಅಚ್ಯುತ, ಅನಂತ, ಗೋವಿಂದ ಇತ್ಯಾದಿ ಅನಂತಾನಂತ ರೂಪಾತ್ಮಕನಾಗಿ ಆದಿ ದೈವಿಕ, ಆದಿಭೌತಿಕ ಮತ್ತು ಆಧ್ಯಾತ್ಮಿಕ ಎಂಬ ಅಧಿಷ್ಠಾನತ್ರಯಗಳಲ್ಲಿ ಅಂತಸ್ಥಿತನಾಗಿದ್ದು, ಪ್ರಾಣಾದಿ ಪಂಚ ರೂಪಗಳಿಂದಲೂ, ಅಂತು ಒಟ್ಟಿನಲ್ಲಿ ದಶವಿಧ ಪ್ರಾಣರಲ್ಲಿರುವ ಭಾರತೀರಮಣ ಮುಖ್ಯ ಪ್ರಾಣ ದೇವರಲ್ಲ ಅಂತರ್ಯಾಮಿಯಾಗಿದ್ದು, ದೈಹಿಕ ಐಂದ್ರಿಕ, ಮಾನಸಿಕ, ಭೌದ್ಧಿಕ ಇತ್ಯಾದಿ ಕ್ರಿಯಾ ವಿಶೇಷಗಳನ್ನು ಮಾಡಿ ಮಾಡಿಸುತ್ತಿರುವನು ಎಂದು ವಿವರಿಸುತ್ತಾರೆ. "ವಿಧಿ ಭವಾದಿ"–ಎಂಬ ಪ್ರಸಕ್ತ ಸಂಧಿಗತ ೯ನೆಯ ಈ ಪದ್ಯದಿಂದ ॥೯॥

**ಪ್ರತಿಪದಾರ್ಥ :—**

**ವಿಧಿಭವಾದಿ**=ಬ್ರಹ್ಮ, ರುದ್ರ ಇವರೇ ಮೊದಲಾದ **ಸಮಸ್ತ ಜೀವರ**=ಎಲ್ಲಾ ತೃಣಾಂತ ತ್ರಿವಿಧ ಜೀವರುಗಳ **ಹೃದಯದೊಳಗೆ**=

ಸ್ಥೂಲದೇಹದಲ್ಲಿ ವಿದ್ಯಮಾನವಾಗಿರುವ ಹೃತ್ಪದ್ಮದಲ್ಲಿ ಹೃದ್ಗುಹಾವಾಸಿಯಾಗಿ **ಏಕಾತ್ಮನೆನಿಸುವ**=ಒಂದೇ ರೂಪದಿಂದ ಜೀವಾಕಾರದೋಪಾದಿಯಲ್ಲಿ ಬಿಂಬ ರೂಪಿಯಾದ ಅಗ್ರೇಶನಾಮಕ ಶ್ರೀಪರಮಾತ್ಮನು (ಇವನಿಗೆ "ಆತ್ಮ" ಎಂತ ನಾಮ) **ಪದುಮನಾಭನು**=ಮೂಲರೂಪಿಯಾದ ಪದ್ಮನಾಭನು **ಅಚ್ಯುತಾದಿ**=ಅಚ್ಯುತ, ಅನಂತ, ಗೋವಿಂದ ಇತ್ಯಾದಿಯಾದ **ಅನಂತ ರೂಪದಿಂದಲಿ**=ತನ್ನ ಪರಿಪೂರ್ಣವಾದ ಅನಂತಾನಂತ ರೂಪಗಳಿಂದ ವಿಶಿಷ್ಟ ನಾಗಿ **ಅಧಿಸುಭೂತ**=ಸಮೀಚೀನವಾದ ಆಧಿಭೂತ ಸಾಂಕೇತವಾದ ಸ್ಥೂಲದೇಹದಲ್ಲಿ ಅಚ್ಯುತರೂಪಿ ಪರಮಾತ್ಮ **ಅಧ್ಯಾತ್ಮ**=ಅಧ್ಯಾತ್ಮ ಸಾಂಕೇತವಾದ ಮನೋ ಇಂದ್ರಿಯದಲ್ಲಿ ಅನಂತನಾಮಕ ಪರಮಾತ್ಮ **ಆದಿದೈವದೊಳು**=ಅಧಿದೈವ ಸಾಂಕೇತವಾದ ದಶೇಂದ್ರಿಯಗಳಲ್ಲಿ ಗೋವಿಂದ ನಾಮಕ ಪರಮಾತ್ಮನು **ಕರೆಸುವ**=ಆಯಾಯಾ ಅಧಿಷ್ಠಾನಗಳ ಹೆಸರಿನಿಂದಲೇ ತನ್ನಾಮಕನಾಗಿ **ಪ್ರಾಣ**=ಪ್ರಾಣ,ಅಪಾನ,ವ್ಯಾನ, ಉದಾನ ಮತ್ತು ಸಮಾನಗಳೆಂಬ ಪಂಚಪ್ರಾಣ ರೂಪಗಳಿಂದಲೂ **ನಾಗ**=ನಾಗ, ಕೂರ್ಮ ಕೃಕಲ ದೇವದತ್ತ ಮತ್ತು ಧನಂಜಯ ಎಂಬ ಐದು ಉಪಪ್ರಾಣ ರೂಪಗಳಿಂದಲೂ **ಅಭಿಧನು**=ಪ್ರಾಣ ಮತ್ತು ನಾಗಾದಿ ನಾಮಗಳಿಂದಲೇ ವಾಚ್ಯನಾಗಿದ್ದು **ದಶರೂಪದಲಿ**=ದಶವಿಧ ಪ್ರಾಣನಾಮಕನಾಗಿ **ದಶ ವಿಧ ಪ್ರಾಣರೊಳಗಿದ್ದ**=ಪ್ರಾಣಾದಿ ಪಂಚರೂಪಗಳು ಮತ್ತು ನಾಗಾದಿ ಪಂಚರೂಪಗಳು ಇವುಗಳಲ್ಲಿರುವ ಮುಖ್ಯ ಪ್ರಾಣಾಂತರ್ಗತನಾಗಿದ್ದು **ಕರೆಸುವ**=ಆಯಾಯಾ ನಾಮಗಳಿಂದಲೇ ತತ್ತಶ್ಶಬ್ದವಾಚ್ಯನಾಗಿ ಇದ್ದು, ವ್ಯಾಪಾರಗಳನ್ನು ಮಾಡಿ ಮಾಡಿಸುವನು. ||೯||

## ವ್ಯಾಖ್ಯಾನಗಳು

### (೧) ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ಪ್ರಪಂಚದಲ್ಲಿ ಅನೇಕ ರೂಪಗಳಿಂದ ಭಿನ್ನ ಭಿನ್ನ ಜೀವರಲ್ಲಿ ಇರತಕ್ಕ ಪರಮಾತ್ಮನ ರೂಪಗಳು ಅಭಿನ್ನಗಳೇ. ಈ ಪರಮಾತ್ಮನ ದ್ವಾರಾ ಅಂತರ್ಗತವಾಗಿ ಉಪಸನಾ ಮಾಡಬೇಕು ಎಂದರೆ ಹೇಳುತ್ತಾರೆ.

ವಿಧಿಭವಾದಿ-ಬ್ರಹ್ಮರುದ್ರಾದಿ ಸಮಸ್ತ ಜೀವರ–ಸಮಸ್ತ ತೃಣಾಂತ ತ್ರಿವಿಧ ಜೀವರ, ಹೃದಯದೊಳಗೆ- ಸ್ಥೂಲಹೃದಯದೊಳಗೆ, ಏಕಾತ್ಮನೆನಿಸುವ- ಸರ್ವೋತ್ತಮನಾದವನೊಬ್ಬನಾದ ಜೀವಾಕಾರೋಪಾದಿಯಲ್ಲಿ ತದಾತ್ಮಕನಾದ ಬಿಂಬ ಎಂತ ಕರೆಸುವ ಅಗ್ರೇಶನಾಮಕನು. ಇವನಿಗೆ ಆತ್ಮ ಎಂತ ನಾಮ. ಪದುಮನಾಭನು-ಪದ್ಮನಾಭರೂಪಿ ಪರಮಾತ್ಮನು, ಅಚ್ಯುತ-ಅಚ್ಯುತ ಎಂಬ ನಾಮದಿಂದಲೂ, ಅನಂತ–ಅನಂತ ಎಂಬ ನಾಮದಿಂದಲೂ, ಆದಿ-ಆದಿ ಶಬ್ದದಿಂದ ಗೋವಿಂದ ಎಂಬ ನಾಮದಿಂದಲೂ, ರೂಪದಲಿ-ಅಂತು ಈ ಮೂರು ರೂಪಗಳಿಂದ (ಅಚ್ಯುತ, ಅನಂತ, ಗೋವಿಂದ), ಆಧಿ ಸುಭೂತ-ಸಮೀಚೀನವಾದ ಆದಿಭೂತ ಸಾಂಕೇತವಾದ ಸ್ಥೂಲದೇಹದೊಳು ಅಚ್ಯುತ ರೂಪಿ ಪರಮಾತ್ಮ, ಅಧಿದೈವದೊಳು-ಅಧಿದೈವಗಳಾದ ದಶೇಂದ್ರಿಯಗಳಲ್ಲಿ ಗೋವಿಂದ ನಾಮಕ ಪರಮಾತ್ಮ, ಅಧ್ಯಾತ್ಯ-ಅಧ್ಯಾತ್ಮವಾದ ಮನೋ ಇಂದ್ರಿಯದಲ್ಲಿ ಅನಂತ ನಾಮಕ ಪರಮಾತ್ಮ, ಕರೆಸುವ-ಈ ರೂಪಗಳಿಂದ ಆಧಿಭೂತಾದಿ ಮೂರು ಅಧಿಷ್ಠಾನಗಳಲ್ಲಿ ತತ್ತನ್ನಾಮಗಳಂದ ಕರಿಸೋವನಾಗ ತಾನೆ. ಪ್ರಾಣ-ಪ್ರಾಣ ಶಬ್ದದಿಂದ ಪ್ರಾಣ,ಅಪಾನ, ವ್ಯಾನ, ಉದಾನ,ಸಮಾನ ಈ ಐದು ರೂಪಗಳು. ನಾಗ-ನಾಗ ಶಬ್ದದಿಂದ ನಾಗ,ಕೂರ್ಮ, ಕೃಕಲ, ದೇವದತ್ತ ಮತ್ತು ಧನಂಜಯ ಎಂಬ ಈ ಐದು ರೂಪಗಳೂ, ಅಂತು ಮುಖ್ಯ ಪ್ರಾಣರೂಪಗಳು ಹತ್ತು. ಏವಂ ಸಮ್ಮೇಳನವೇ (೧) ಹೃದಯದಲ್ಲಿ ಆತ್ಮರೂಪ. (೨)ಆದಿಭೂತದಲ್ಲಿ ಅಚ್ಯುತ. (೩) ಅಧ್ಯಾತ್ಮದೊಳು ಅನಂತ (೪) ಆದಿ ದೈವದೊಳು ಗೋವಿಂದ. ಈ ನಾಲ್ಕು ಸ್ಥಾನಗಳಲ್ಲಿ ದಶವಿಧ ಮುಖ್ಯ ಪ್ರಾಣ ರೂಪಗಳು ಇರೋದಾಗಿ ಅವೆ. (೧) ಹೃದಯ ಕಮಲಕ್ಕೆ ದಶದಿಕ್ಕುಗಳಲ್ಲಿ ದಶಪ್ರಾಣ ರೂಪಗಳು ತದಂರ್ಗತ ಆತ್ಮರೂಪ ಶ್ರೀಪರಮಾತ್ಮ (೨) ಅಧಿಭೂತವಾದ ದೇಹಗತ ದಶಪ್ರಾಣಗಳಲ್ಲಿ ಅಚ್ಯುತ. (೩) ಅಧಿದೈವಗಳಾದ ದಶೇಂದ್ರಿಯಃಗತ ದಶಪ್ರಾಣರಲ್ಲಿ ಗೋವಿಂದ. (೪) ಅಧ್ಯಾತ್ಮವಾದ ಮನೋ ಇಂದ್ರಿಯದಲ್ಲಿ ದಶವಿಧ ವ್ಯಕ್ತಿಗಳಲ್ಲಿ ದಶಪ್ರಾಣಗತ ಅನಂತ ರೂಪಿ ಪರಮಾತ್ಮ. ಅಭಿದನು-ಈ ಪ್ರಕಾರ ಪರಮಾತ್ಮ ದಶವಿಧ ಪ್ರಾಣ ನಾಮದಿಂದ ಕರೆಸುವ ದಶರೂಪದಲಿ–ಹತ್ತು ರೂಪದಿಂದ, ದಶವಿಧ–

ಪ್ರಾಣನಾಗಾದಿ ದಶವಿಧ, ಪ್ರಾಣಶೊಳಗಿದ್ದು– ಮುಖ್ಯಪ್ರಾಣರೂಪಗಳ ಲ್ಲಿದ್ದು ವ್ಯಾಪಾರಗಳ ಮಾಡುತಾನೆ ಎಂತ ತಾತ್ಪರ್ಯ.

ಈ ಪರಮಾತ್ಮನ ಅಚ್ಯುತ, ಅನಂತ, ಗೋವಿಂದ ರೂಪಗಳು ಆಧಿ ಭೂತಾದಿ ಮೂರುಸ್ಥಾನಗಳಲ್ಲಿರತಕ್ಕ ದಶವಿಧ ಪ್ರಾಣರೊಳಗೆ ಅಂತರ್ಯಾಮಿ ಯಾಗಿದ್ದು, ಪಂಚಪ್ರಾಣದಿಂದಲೂ, ಪಂಚ ನಾಗಾದಿನಾಮುಗಳಿಂದಲೂ ಕರೆಸ ತಾನೆ ಎಂತ ಪ್ರಾಣಾಂತರ್ಗತನಾದ ಭಗವಂತನನ್ನು ಚಿಂತಿಸಬೇಕು.

**ವಿಶೇಷಾರ್ಥ :—**

ವಿಧಿಭವಾದಿ ಸಮಸ್ತ ಜೀವದೊಳು ಎಂದರೆ : –

ಜೀವರಲ್ಲಿ ನಾಲ್ಕು ವಿಧವಾದ ಗುಣಸಮೂಹಗಳುಂಟು. ಅದು ದಾವ ದೆಂದರೆ—(೧) ಬ್ರಹ್ಮದೇವರು ಆರಂಭಮಾಡಿ ಶತಸ್ಥದೇವ ಪರಿಯಂತ ದೇವಶಬ್ದವಾಚ್ಯರು. (೨) ಶತಸ್ಥರ ಅನಂತರ ಪುಷ್ಕರನ ಪರ್ಯಂತ ಕರ್ಮಜರು. (೩) ಪುಷ್ಕರನ ಅನಂತರ ಅಜಾನಜರು ದೇವಗಂಧರ್ವ ಪರ್ಯಂತ. (೪) ತದನಂತರ ನಿರಂಶಜೀವರು (ಮನುಷ್ಯ ಗಂಧವಾರಭ್ಯ ತೃಣಾಂತವರವಿಗೂ). ಈ ನಾಲ್ಕುವಿಧ ಜೀವರ ಸ್ಥೂಲ ಹೃದಯದಲ್ಲಿ ಆತ್ಮ ಶಬ್ದವಾಚ್ಯನಾಗಿ ಇರೋವನಾಗಿದ್ದಾನೆ.

ಪದುಮನಾಭ ಎಂತ ಯಾಕೆ ಪ್ರಯೋಗವೆಂದರೆ-ನಾಭಿಯಿಂದ ಕಮಲ ಉತ್ಪತ್ತಿಮಾಡಿದವ. ಪ್ರಳಯೋದಕದಲ್ಲಿ ಒಬ್ಬನೇ ಶಯನನಾಗಿರುತ್ತಾನೆ. ಪರಮಾತ್ಮನ ಅನಂತ ರೂಪಗಳು ಭಿನ್ನಗಳಾಗಿ ಇದ್ದರೆ, ಪ್ರಳಯದಲ್ಲಿ ಅನಂತ ರೂಪಗಳು ಶಯನಿಸಿ ಇರಬೇಕು. ಹಾಗಿಲ್ಲವಾದ್ದರಿಂದಲೇ ಪರಮಾತ್ಮ ಒಬ್ಬನೇ ಅನಂತ ರೂಪಗಳು ಧರಿಸಿ, ಅನಂತ ಅಧಿಷ್ಠಾನಗಳಲ್ಲಿ ಒಬ್ಬನೇ ಪರ ಮಾತ್ಮ ವ್ಯಾಪ್ತಿ ಎಂಬೋದಕ್ಕೆ ಸೂಚನೆಗಾಗಿ ಪದ್ಮನಾಭ ಎಂತ ಪ್ರಯೋಗವು.

ಆಧಿ ಸುಭೂತ ಎಂದರೆ- ಸು–ಸಮೀಚೀನವಾದ ಸಾಧನಿಗೆ ಯೋಗ್ಯ ವಾದ ಜೀವಗೆ "ಅಧಿ" ಎಂದರೆ, ಅಧಿಷ್ಠಾನ ಭೂತವಾದ "ಭೂತ" ಎಂದರೆ, ಪಂಚಭೂತಮಯವಾದ ಸ್ಥೂಲಶರೀರ ಎಂತ ತಾತ್ಪರ್ಯ.

ಅಧಿಭೂತ-ಸ್ಥೂಲಶರೀರವು ಇದರ ಸಜಾತಿ ದೃಷ್ಟಾಂತ. ಸ್ವರೂಪ ದೇಹವು ಅಧಿಭೂತವೇ. "ಅಧ್ಯಾತ್ಮ"-ಎಂದರೆ, ಮನಸ್ಸು ಜಡಮನಸ್ಸು, ಚಿನ್ಮನಸ್ಸು ಎರಡೂ ತಿಳಿಕೊಳ್ಳಬೇಕು. "ಅಧಿದೈವ"- ಎಂದರೆ, ದಶೇಂದ್ರಿಯ ಗಳು, ಸ್ವರೂಪ, ಬಾಹ್ಯ ಎರಡೂ ತೆಗೆದುಕೊಳ್ಳಬೇಕು. ॥೯॥

(೨) "ಭಾವಪ್ರಕಾಶಿಕೆ"-ವ್ಯಾಖ್ಯಾನ :-

ಪೂರ್ವ ಪದ್ಯದಲ್ಲಿ ತ್ರಿವಿಧ ಜೀವರಿಗೆ ಪಂಚವಿಧ ಶರೀರವನ್ನು ಕೊಟ್ಟು ವಿಹರಿಸುವನೆಂದು ಹೇಳಿದರು. ಈ ಪದ್ಯದಿಂದ ಪಂಚಭೂತಗಳಲ್ಲಿಯೂ, ಶರೀರದಲ್ಲಿಯೂ, ಇಂದ್ರಿಯಗಳಲ್ಲಿಯೂ, ತತ್ವಾಭಿಮಾನಿಗಳಲ್ಲಿಯೂ ಸಹ ಇರುವ ಭಗವದ್ರೂಪಗಳನ್ನು ವಿವರಿಸುತ್ತಾರೆ.

ಭಾಗವತ ತೃತೀಯಸ್ಕಂಧ—ಅಧ್ಯಾಯ (೬) :-

**"ವಿಬಭಾಜಾತ್ಮತಾತ್ಮಾನಮೇಕ ಧಾದಶಧಾ ತ್ರಿಧಾ ॥**
**ಸಾಧ್ಯಾತ್ಮಂ ಸಾಧಿ ದೈವಂಚ ಸಾಧಿಭೂತ ಮಿತಿ ತ್ರಿಧಾ ॥**
**ವಿರಾಟ್ ಪ್ರಾಣೋ ದಶವಿಧ ಏಕಧಾ ಹೃದಯೇನ ಚ ॥"**

ಆದ್ಯವತಾರ ರೂಪನಾದ ಶ್ರೀಪದ್ಮನಾಭನು ತನ್ನನ್ನು ಒಂದು ರೂಪ ವನ್ನಾಗಿಯೂ ೧೦ ರೂಪಗಳಾಗಿಯೂ ವಿಭಾಗಿಸಿದನು. ಅಧ್ಯಾತ್ಮ, ಅಧಿ ದೈವ, ಅಧಿಭೂತಗಳೆಂಬ ಮೂರರಲ್ಲಿ ಮೂರು ರೂಪಗಳಾಗಿಯೂ, ಪ್ರಾಣಾದಿ ೫, ನಾಗಾದಿ ೫, ಅಂತು ಪ್ರಾಣಗಳಲ್ಲಿ ದಶರೂಪಗಳು.

ಇದಕ್ಕೆ ಪ್ರಮಾಣ-ಮೇಲಿನ ಶ್ಲೋಕದ ವ್ಯಾಖ್ಯಾನದಲ್ಲಿ

**"ಪ್ರಾಣಾದಿ ಪಂಚಕಂ ಚೈವ ತಥಾನಾಗಾದಿ ಪಂಚಕಮ್ ।**
**ಏವಂತು ದಶಧಾಪ್ರಾಣಾ ಅಧ್ಯಾತ್ಮಾದಿ ತ್ರಿಧಾಖಿಲಾ ॥"**

ಪ್ರಾಣಾದಿ ಪಂಚಕಗಳೆಂದರೆ-ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನ. ನಾಗಾದಿ ಪಂಚಕಗಳೆಂದರೆ-ನಾಗ, ಕೃಕಳ, ಕೂರ್ಮ,

ದೇವದತ್ತ ಮತ್ತು ಧನಂಜಯ. ಈ ಪ್ರಕಾರ ದಶವಿಧ ಪ್ರಾಣರು. ಅಧ್ಯಾತ್ಮಾದಿ ಮೂರು ಭೇದಗಳು. ಈ ದಶಪ್ರಾಣದೊಳಗೆ ಇರುವವೆಂದರ್ಥ. ಬ್ರಹ್ಮಾದಿ ಚೇತನದ ಹೃದಯಗಳಲ್ಲಿ ೧ ರೂಪ, ಹೀಗೆ ಒಂದು ರೂಪನಾಗಿಯೂ ೧೦ ರೂಪಗಳುಳ್ಳವನಾಗಿಯೂ ಇರುವನೆಂದು ಹೇಳಿರುವರು, ಬ್ರಹ್ಮ ರುದ್ರಾದಿ ಸಮಸ್ತ ಜೀವರ ಹೃದಯದೊಳಗೆ ಏಕಾತ್ಮನೆನಿಸುವ ಆದ್ಯವತಾರ ಭೂತನಾದ ಶ್ರೀಪದ್ಮನಾಭನು ಅಚ್ಯುತ, ಅನಂತ, ಗೋವಿಂದನೆಂಬ ಮೂರು ರೂಪಗಳ ಅನಂತಾನಂತವನ್ನು ಸ್ವೀಕರಿಸಿ, ಪ್ರತಿಯೊಂದು ಶರೀರಗಳಲ್ಲಿಯೂ ಅಧ್ಯಾತ್ಮ, ಅಧಿದೈವ, ಅಧಿಭೂತಗಳೆಂಬ ಮೂರುವಿಧ ಪ್ರದೇಶಗಳಲ್ಲಿ ವಾಸ ಮಾಡುವನು. ಆಧ್ಯಾತ್ಮವೆಂದರೆ, ಶರೀರದೊಳಗಿನ ಚಕ್ಷುಃ ಶ್ರೋತ್ರಾದಿ ಇಂದ್ರಿಯಗಳು, ಅಧಿದೈವ ತತ್ವಾಭಿಮಾನಿ ದೇವತೆಗಳು. ಅಧಿಭೂತ ಎಂದರೆ, ಪಂಚಭೂತಗಳು. ಇವು ಒಂದೊಂದರಲ್ಲಿ ಅಚ್ಯುತ, ಅನಂತ, ಗೋವಿಂದ ಎಂಬ ಮೂರು ಅಖಂಡ ರೂಪಗಳಿಂದಲೂ, ಪಂಚಭೂತ, ಇಂದ್ರಿಯಗಳು, ತತ್ವಾಭಿಮಾನಿಗಳಲ್ಲಿ ಖಂಡರೂಪಿಯಾಗಿಯೂ, ಹೀಗೆ ಅಚ್ಯುತಾದಿ ಅನಂತ ರೂಪಗಳಿಂದ ವ್ಯಾಪಿಸಿಕೊಂಡಿರುವನು. ಪ್ರಾಣ ಅಪಾನಾದಿ ಐದು ಪ್ರಾಣಗಳಲ್ಲೂ ನಾಗ, ಕೃಕಳ ಮೊದಲಾದ ಐವರಲ್ಲಿ ೫ ರೂಪಗಳು- ಹೀಗೆ ದಶವಿಧ ಪ್ರಾಣರೊಳಗೆ ೧೦ ರೂಪಗಳಿಂದಲೂ ಇದ್ದು, ತತ್ತಚ್ಛಬ್ದವಾಚ್ಯನಾಗಿ ಪ್ರಸಿದ್ಧನಾಗಿರುವನು. ॥೯॥

(೨) **"ಭಾವದರ್ಪಣಟೀಕಾ" ವ್ಯಾಖ್ಯಾನ:—**

ಬ್ರಹ್ಮಾದಿ ಜೀವರಲ್ಲಿ ಏಕಾತ್ಮ ಎಂತ ಅನಿಸಿಕೊಂಡಿಹನೆಂತಲೂ, ತಾಪತ್ರಯಗಳಲ್ಲಿ ಅಚ್ಯುತಾನಂತ ಗೋವಿಂದಾದಿ ಈ ನಾಮಗಳಿಂದ ಇದ್ದಾನೆಂತಲೂ, ದಶಪ್ರಾಣರಲ್ಲಿ ತನ್ನಾಮದಿಂದ ಇದ್ದಾನೆಂತರೂ ಹೇಳುತ್ತಾರೆ.- **"ಏಧೀತಿ"** ||

**ಪ್ರಾಣಿಗಳಿಂದಲೂ ಪಂಚಭೂತಗಳಿಂದಲೂ ಅಗತಕ್ಕ ದುಃಖವೇ ಅಧಿಭೌತಿಕ ವೆಂದರ್ಥ.**

"ಭೂತಾನಿ ಪ್ರಾಣಿನಃ ಪ್ರೋಕ್ತಾಸ್ತಥಾಽಕಾಶಾದಿ ಪಂಚಕಮ್ ।
ಸರ್ಪವ್ಯಾಘ್ರ ವರಾಹಾದೇಸ್ತಸ್ಕರಾ ದೇರ್ನೃಪಾದಪಿ ॥
ಸ್ವದೇಹೇ ಸ್ವಪ್ರಿಯ ಸ್ಯಾಪಿ ಪುತ್ರಾದೇಃ ಪೀಡನಾದ್ಭವೇತ್ ।
ದುಃಖಂ ತಥೈವ ವಿಸ್ಫೋಟಹಿಕ್ಕಾಕಾ ಸಜ್ವರಾದಿನಾ ॥
ಭೌತಿಕೇಶ್ವಿಹ ದೇಹೇಷು ಜಾಯತೇ ದುಃಖ ಮುಲ್ಬಣಮ್ ॥
ತದಾಧಿ ಭೌತಿಕಂ ನಾಮ ದೃಶ್ಯತೇಽಖಿಳ ಜಂತುಷ್ವಿತಿ ॥
—ವಿಷ್ಣುರಹಸ್ಯೋಕ್ತೇಃ

ಧನಪುತ್ರಗೃಹ ಕ್ಷೇತ್ರ ಕುಟುಂಬ ಇವರುಗಳಿಗೆ ಹಾನಿಯಾಗೋಣದರಿಂದ ಮನಸ್ಸಿಗೆ ಯಾವ ದುಃಖವೋ ಅನಿಷ್ಟ ಅಸೂಯಾಭಿಮಾನದಿಂದ ಮನಸಿಗೆ ಪ್ರಾಪ್ತವಾದ ದುಃಖ ಯಯವದೋ ಅದೇ ಅಧ್ಯಾತ್ಮ ಎಂತ ಅನಿಸಿಕೊಳ್ಳುತ್ತದೆ.

ತದುಕ್ತಂ ವಿಷ್ಣುರಹಸ್ಯೇ :—

"ಆತ್ಮಾ ಮನಸ್ತು ತಸ್ಸೈವ ಜಾತಂಯಪರಾಧತಃ ।
ಧನಂ ಪುತ್ರಗೃಹಕ್ಷೇತ್ರ ಕಲತ್ರಾದೇಃ ಪ್ರಿಯಸ್ಯ ಯತ್ ॥
ವಿಘಾತಾದೇಸ್ತಥಾನಿಷ್ಟ ಪ್ರಾಪ್ತೇ ಶ್ಚಾಪ್ಯತಿ ಚಿಂತಯಾ ।
ಅಸೂಯಾಭಿಮಾನೇನ ದುಃಸ್ವಪ್ನಾಚ್ಚ ವೃಥಾ ಭಯಾತ್ ॥
ಸ್ವೇಚ್ಛಯಾಪಿ ಹಿ ಯದ್ದುಃಖಂ ತದಾಧ್ಯಾತ್ಮಿಕಮುಚ್ಯತ ಇತಿ" ॥

ಅಕಸ್ಮಾತ್ ಮರಣದ ಮಹಾವೃಷ್ಟಿಯಿಂದ ದುರ್ಭಿಕ್ಷಾದಿಗಳಿಂದಲೂ ಯಾವ ದುಃಖ ಪ್ರಾಪ್ತಿಯೋ ಅದೇ ಅಧಿದೈವಿಕ ವೆಂದರ್ಥ.

ತದುಕ್ತಂ ವಿಷ್ಣುರಹಸ್ಯೇ :—

"ದೃಷ್ಟ್ವಾ ಕಾರಣಹೀನೋ ಯಜ್ಞಾಯತೇ ದೈವಯೋಗತಃ ।
ಅಕಸ್ಮಾನ್ಮರಣಾದ್ಯಂಚ ಮಹಾಮಾರುತ ವೃಷ್ಟಯಃ ॥
ದುರ್ಭಿಕ್ಷಂ ಮಾರಕೋ ವಹ್ನಿರ್ವರ್ಷಾವ್ಯಾಧ್ಯಾ ಈತಯಃ
ಸ್ತುಯಾಃ ।

ಬಹುಸಾಧಾರಣಾಲೋಕೇ ದೃಶ್ಯಂತೇ ಜಂತುಪೀಡಕಾಃ ||
ತೇಭ್ಯೋ ಯಜ್ಜಾಯತೇऽ ದುಃಖಂ ಅಧಿದೈವಿಕಮೇವ ತತ್
ಇತ್ಯಾದಿ" ||

(೪) "ಭಾವಸೂಚನ" ವ್ಯಾಖ್ಯಾನ :—

ಅಧಿಮಭೂತ=ಗಗನಾದಿ ಅಧಿದೈವ=ದೇವಾದಿ ಅಧ್ಯಾತ್ಮ =ಶರೀರ. ನಾಗ=ಗಜ.

"ವಿಕಾತ್ಮ" ಎಂಬ ಪದವು ಶ್ರೀವಿಷ್ಣುನಾಮದೊಳಗಿನ "ತತ್ತ್ವ ವಿವೇಕಾತ್ಮಾ"-ಎಂಬ ನಾಮದ ಅರ್ಥದ್ಯೋತಕ. "ತತ್ತ್ವ"-ಎಂದರೆ, ಸರ್ವತಂತ್ರಸ್ವತಂತ್ರನೂ ಜ್ಞಾನಾನಂದಪೂರ್ಣನೂ, ಪರಬ್ರಹ್ಮಶಬ್ದ ವಾಚ್ಯನೂ ಆದ ಶ್ರೀಮನ್ನಾರಾಯಣನು. ಅಂತಹ ನಾರಾಯಣನ ಸ್ವರೂಪ ವನ್ನು ಶಾಸ್ತ್ರೋಕ್ತವಾಗಿ ತಿಳಿಯುವವನು "ತತ್ವವಿತ್" ಎಂದು ಕರೆಯಿಸು ತ್ತಾನೆ. ಅಂತಹ ತತ್ವವಿತ್ತನಿಗೆ ಬಲಜ್ಞಾನಾದಿಗಳನ್ನು ಕೊಡುವುದರಿಂದ ಪರ ಮಾತ್ಮದಿಗೆ "ತತ್ವವಿವೇಕಾತ್ಮ" ಎಂದು ಹೆಸರು. ಇಲ್ಲಿ "ಅಧಿಭೂತ" ವೆಂದರೆ ಶರೀರ ಎಂದರ್ಥ. ಇಂದ್ರಿಯಗಳಿಗೆ "ಅಧ್ಯಾತ್ಮ" ವೆಂತಲೂ ಮತ್ತು ತದಭಿ ಮಾನಿ ದೇವತೆಗಳಿಗೆ "ಅಧಿದೈವ" ಎಂತಲೂ ಹೆಸರು. "ಪದ್ಮನಾಭ"– ಇದೂ ಸಹ ಶ್ರೀಮದ್ವಿಷ್ಣು ಸಹಸ್ರನಾಮದಲ್ಲಿ ಸೇರಿದೆ. ಸಿಂಹನಾದ ಮುಂತಾದುವುಗಳಿಂದ ರಣದಲ್ಲಿ ಅತಿಶಯನಾಗಿ ಶೋಭಿಸುವವನು (ಆಭಾತಿ) ಪದ್ಮನಾಭನು. ನಾಶವನ್ನು (ಚ್ಯುತಿ) ಹೊಂದದ ಸುಖಪೂರ್ಣನಾದುದರಿಂದ "ಅಚ್ಯುತ" ನಾಮಕನು. ಅಮ್=ಹಿಂಸೆ ಹಿಂಸೆಯಿಂದ ರೋಷ. ಹಿಂಸಾಕಾರಣನಾದ ರೋಷವು "ಅಂತ" ಎಂದೆನಿಸುವುದು. ಭಕ್ತರ ವಿಷಯ ದಲ್ಲಿ ರೋಷರಹಿತನು ಯಾರೋ ಅವನೇ ಅನಂತ ನಾಮಕನು. ಪಶುಪುತ್ರ ಮುಂತಾದ ಸಂಪತ್ತನ್ನು ಭಕ್ತರಿಗೆ ಹೊಂದಿಸುವನಾದ್ದರಿಂದ "ಗೋವಿಂದ" ಶಬ್ದವಾಚ್ಯನು. ದಶವಿಧ ಪ್ರಾಣರು=ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ನಾಗ, ಕೂರ್ಮ, ಕೃಕಲ, ದೇವದತ್ತ ಮತ್ತು ಧನಂಜಯ. ||೯||

## (ಞ) "ಗುರುಹೃದಯ ಪ್ರಕಾಶಿಕೆ"-ವ್ಯಾಖ್ಯಾನ :—

ಹೃದಯಾಂತರ್ಗತ ರೂಪ ೧, ಅಧಿಭೂತ, ಅಧಿದೈವ, ಅಧ್ಯಾತ್ಮಗತ ರೂಗಳು ೩. ದಶವಿಧ ಪ್ರಾಣಗತರೂಪ ಸಹ ಉಪಾಸನಾಮಾಡುವ ವಿಧಾನ ನಿರೂಪಿಸುತ್ತಾರೆ. ಬ್ರಹ್ಮರುದ್ರಾದಿ ಸರ್ವಜೀವ ಹೃದಯಾಂತಸ್ಥ ರೂಪ ನಾಗಿ ಏಕವಿಧದಿಂದಲೂ, ಅಧಿಭೂತವೆಂದರೆ, ಕರಣಾಭಿಮಾನಿ ದೇವತೆಗಳು ಸಹಾ ಈ ಮೂರು ಸ್ಥಾನಗಳಲ್ಲಿ ಅಚ್ಯುತ,ಅನಂತ, ಗೋವಿಂದ ಎಂಬ ಮೂರು ರೂಪಗಳಿಂದ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ನಾಗ, ಕೃಕಲ. ಕೂರ್ಮ, ದೇವದತ್ತ, ಧನಂಜಯ ಎಂಬ ಉಪವಾಯುಗಳೆಂಬ ಹತ್ತು ಪ್ರಾಣಗಳಲ್ಲಿ ಹತ್ತು ರೂಪಗಳಿಂದಲೂ, ಪದ್ಮನಾಭನಾದ ಸ್ವಾಮಿಯು ಇರುವನು.

**"ಸಾಧ್ಯಾತ್ಮಂ ಸಾಧಿ ದೈವಂಚ ಸಾಧಿಭೂತಮಿತಿ ತ್ರಿಧಾ ।**
**ವಿರಾಟ್ಪ್ರಾಣೋ ದಶವಿಧ ಏಕಧಾ ಹೃದಯೇನ ಚ ॥"**

**-ಎಂಬ ಭಾಗವತಾರ್ಥವು** ಹೇಳಲ್ಪಟ್ಟಿತು ॥೯॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಬ್ರಹ್ಮ ರುದ್ರಾದಿ ಸಮಸ್ತ ದೇವತಾವರ್ಗವೆಂದರೆ, ನಾಲ್ಕು ಮುಖ್ಯ ವರ್ಗಗಳನ್ನು ಪರಿಗಣಿಸಬೇಕು :—

(೧) ಬ್ರಹ್ಮ ದೇವರು ಆರಂಭಮಾಡಿ ಶತಸ್ಥದೇವರ ಪರ್ಯಂತ.

(೨) ಶತಸ್ಥರ ನಂತರ ಪುಷ್ಕರನ ಪರ್ಯಂತ ಕರ್ಮಜ ದೇವತೆಗಳ ವರ್ಗ.

(೩) ಪುಷ್ಕರನ ನಂತರ ಅಜಾನಜರು ದೇವಗಂಧರ್ವ ಪರ್ಯಂತ

(೪) ನಂತರ ಮಾನುಷ್ಯ ಗಂಧರ್ವರಾರಭ್ಯ ತೃಣಾಂತ ನಿರಂತ ಜೀವರ ವರ್ಗ.

"ಸಮಸ್ತ ಜೀವರ" ಎಂಬ ಪದ ಪ್ರಯೋಗದಿಂದ ಬ್ರಹ್ಮ ರುದ್ರಾದಿ

ದೇವತಾ ವರ್ಗದಿಂದ ಪ್ರಾರಂಭಿಸಿ, ಸಮಸ್ತ ತೃಣಾಂತ ತ್ರಿವಿಧ ಜೀವರುಗಳನ್ನು ಪರಿಗಣಿಸಬೇಕು. ಅಂತಹ ಸಮಸ್ತ ಜೀವರಾಶಿಗಳ ಹೃದ್ಗುಹಾನಿವಾಸಿಯಾದ ಬಿಂಬರೂಪಿ ಪರಮಾತ್ಮನಿಗೆ "ಮೂಲೇಶ" ನೆಂದು ಹೆಸರು. ಆ ಬಿಂಬ ರೂಪಿಯೇ "ಏಕಾತ್ಮ" ನೆಂದು ಕರೆಯಿಸುವ ಶ್ರೀಹರಿಯು. ಸರ್ವೋತ್ತಮ ನಾದ ಜೀವಾಕಾರನೋಪಾದಿಯಲ್ಲಿರುವ ಶ್ರೀಮನ್ನಾರಾಯಣನೇ "ಏಕಾತ್ಮ" ನೆಂದಿನಿಸುವನು. ಆದ್ಯವತಾರರೂಪನಾದ ಬಿಂಬರೂಪಿ ಶ್ರೀಹರಿಗೆ "ಏಕಾತ್ಮ" ನೆಂದು ಹೆಸರು. ಅಂತಹ ಏಕಮೇವಾದ್ವಿತೀಯನಾದ ಆದಿ ಮೂಲಸ್ವರೂಪಿಯೂ ಪರಾತ್ಪರ ವಸ್ತುವೂ ಆದ ಶ್ರೀಪರಮಾತ್ಮನೇ ಪದ್ಮ ನಾಭರೂಪವನ್ನು ಧರಿಸಿ, ಪ್ರಳಯೋದಕದಲ್ಲಿ ಶ್ರೀರಮಾದೇವಿಯವರಿಂದ ಸಂಸೇವ್ಯಮಾನನಾಗಿ ಶಯನಮಾಡಿದನು. ಜಗತ್ಸೃಷ್ಟಿಗೆ ಮೂಲಕಾರಣ ನಾದ್ದರಿಂದ "ಪದ್ಮನಾಭ" ನೆಂದು ಶಬ್ದಪ್ರಯೋಗವು. ಆದ್ಯವತಾರರೂಪಿ ಯಾದ ಪದ್ಮನಾಭನಾಮಕ ಶ್ರೀಪರಮಾತ್ಮನು ಅಚ್ಯುತ, ಅನಂತ, ಗೋವಿಂದ ಎಂಬ ಮೂರು ರೂಪಗಳಿಂದ ಆದಿ ಭೌತಿಕ, ಆಧ್ಯಾತ್ಮಿಕ ಮತ್ತು ಆದಿದೈವಿಕ ಎಂಬ ತಾಪತ್ರಯಂಪಳಲ್ಲಿ ವಿದ್ಯಮಾನನಾಗಿದ್ದು, ತತ್ಸಂಬಂಧವಾದ ತಾಪಾದಿ ಅನುಭವಗಳನ್ನು ಜೀವರಿಗೆ ತಂದೀಯುವನು.

ತಾಪತ್ರಯಗಳ ವಿವರಗಳು ಇಂತಿವೆ:—

### (೧) ಆಧಿಭೌತಿಕ :—

ಆಕಾಶಾದಿ ಪಂಚಭೂತಗಳು. ಇಂತಹ ಭೂತ ಪಂಚಕಗಳಿಂದ ನಿರ್ಮಿತ ವಾದ ಈ ಸ್ಥೂಲದೇಹ. ದೇಹಗತ ಪಂಚಭೂತಗಳಿಂದ ಆಗತಕ್ಕ ದುಃಖ ಪರಂಪರೆಯೇ ಆಧಿಭೌತಿಕ ವೆನಿಸುವುದು. ಸರ್ಪ, ವ್ಯಾಘ್ರ ಮುಂತಾದ ಪ್ರಾಣಿಗಳಿಂದ ಉಂಟಾಗುವ ಕ್ಲೇಶಾದಿಗಳೂ ಆದಿ ಭೌತಿಕವೇ. ಇಂತು ಶಾರೀ ರಿಕ ಭಾದೆಗಳ ರೂಪವಾದ ಆದಿ ಭೌತಿಕದಲ್ಲಿ ಅಚ್ಯುತ ನಾಮಕನಾಗಿ ಪರ ಮಾತ್ಮನಿದ್ದು, ದೇಹಗತ ತಾಪಗಳನ್ನು ಜೀವರ ಅನುಭವಕ್ಕೆ ತಂದುಕೊಡುವನು.

### (೨) ಆಧ್ಯಾತ್ಮಿಕ :—

ಮನೋ ಇಂದ್ರಿಯವು ಆಧ್ಯಾತ್ಮಿಕ ವೆನಿಸುವುದು. ಧನ, ಗ್ರಹ,

ಪುತ್ರ, ಮತ್ತು ಪತ್ನೀ ಇವರ ವಿಯೋಗ ಅಥವಾ ಅವರ ಸಂಬಂಧದಿಂದ ಉಂಟಾಗುವ ಮನಸ್ಸಿನ ತಾಪವು ಆಧ್ಯಾತ್ಮಿಕವೆನಿಸುವುದು. ಇದರಲ್ಲಿ **ಅನಂತ** ನಾಮಕ ಪರಮಾತ್ಮನು ವಿದ್ಯಮಾನನಾಗಿದ್ದು, ತತ್ಸಂಬಂಧವಾದ ಕ್ರಿಯಾ ವಿಶೇಷಗಳನ್ನು ನಡೆಯಿಸುವನು.

(೩) **ಆದಿದೈವಿಕ : —**

ದಶೇಂದ್ರಿಯಗಳ ನಿಯಾಮಕರಾದ ತತ್ತ್ವದೇವತೆಗಳು. ಈ ತತ್ತ್ವ ದೇವತೆಗಳು ದಶೇಂದ್ರಿಯಗತ ದೈತ್ಯರಲ್ಲಿ ಬಿಂಬನ ಪ್ರೇರಣಾನುಸಾರ ಪ್ರಾಣ ದೇವರ ನಿಯಂತ್ರಣದಂತೆ ಪಾಪಕಾರ್ಯಗಳನ್ನು ಮಾಡಿಸಿ, ತತ್ಸಂಬಂಧವಾದ ತಾಪಗಳನ್ನು ಜೀವರ ಅನುಭವಕ್ಕೆ ತಂದೀಯುವರು. ಇಂತಹ ತಾಪಕ್ಕೆ **ಆದಿ ದೈವಿಕ** ಎಂದು ಹೆಸರು. ಇದರಲ್ಲಿ **ಗೋವಿಂದ** ನಾಮಕ ಪರಮಾತ್ಮನು ಕ್ರೀಡಾವಶಿಷ್ಮನಾಗಿರುವನು.

ಪದ್ಮನಾಭರೂಪಿಯಾದ ಶ್ರೀಹರಿಯು "ಆತ್ಮ" ವಾಚ್ಯನಾಗಿ ಸಕಲ ಚೇತನರ ಹೃದಯದಲ್ಲಿದ್ದು. ಅಚ್ಯುತ, ಅನಂತ ಮತ್ತು ಗೋವಿಂದ ಎಂಬ ನಾಮತ್ರಯಗಳಿಂದ ಆಧಿಭೌತಿಕ, ಆಧ್ಯಾತ್ಮಿಕ, ಮತ್ತು ಆದಿದೈವಿಕ ಎಂಬ ತಾಪತ್ರಯಗಳೆಂಬ ಅಧಿಷ್ಠಾನಗಳಲ್ಲಿ ವಿದ್ಯಮಾನನಾಗಿದ್ದು, ತತ್ತನ್ನಾಮಕನಾಗಿ ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನ ಎಂದು ಐದು ರೂಪ ಗಳಲ್ಲಿಯೂ ಮತ್ತು ನಾಗ, ಕೂರ್ಮ, ಕೃಕಲ, ದೇವದತ್ತ ಮತ್ತು ಧನಂಜಯ ಎಂಬ ಐದು ರೂಪಗಳಲ್ಲಿಯೂ, ಅಂದರೆ ಈ ಪ್ರಕಾರ ದಶವಿಧ ಪ್ರಾಣರೊಳ ಗಿದ್ದು ಆ ದಶ ಸಂಖ್ಯಾಕರಾದ ಉಪವಾಯುಗಳಿಗೆ ನಿಯಾಮಕರಾಗಿರುವ ಮುಖ್ಯ ಪ್ರಾಣದೇವರ ದ್ವಾರಾ, ತತ್ತಚ್ಛಬ್ದವಾಚ್ಯನಾಗಿ, ತನ್ನಾಮಕನಾಗಿ ಕಾರ್ಯನಿರ್ವಹಣೆ ಮಾಡುತ್ತಿರುವನು.

ಅವುಗಳ ಚಿಂತನೆಯ ವಿವರಗಳು ಇಂತಿವೆ : -

(೧) ಹೃದಯ ಕಮಲದಲ್ಲಿ ದಶದಿಕ್ಕುಗಳಲ್ಲಿ ದಶಪ್ರಾಣರೂಪಗಳೊ ಳಗೆ ಏಕಾತ್ಮನಾಮಕ ಪರಮಾತ್ಮ.

(೨) ಆಧಿಭೂತಗತ ಪಂಚಭೂತಗಳು ಮತ್ತು ಸ್ಥೂಲದೇಹಗತ ದಶಪ್ರಾಣರಲ್ಲಿ ಅಚ್ಯುತರೂಪಿ ಪರಮಾತ್ಮ.

(೩) ಆಧ್ಯಾತ್ಮಗತ ಮನೋಇಂದ್ರಿಯದಲ್ಲಿ ದಶಪ್ರಾಣಗತ ಅನಂತ ನಾಮಕ ಪರಮಾತ್ಮ.

(೪) ಆಧಿದೈವಿಕವೆನಿಸುವ ದಶೇಂದ್ರಿಯಗತ ದಶಪ್ರಾಣರಲ್ಲಿ ಗೋವಿಂದನಾಮಕ ಪರಮಾತ್ಮ.

| ಕ್ರಮ ಸಂಖ್ಯೆ | ಅಧಿಷ್ಠಾನ | ವಿವರಗಳು | ಭಗವದ್ರೂಪ |
|---|---|---|---|
| ೧ | ಸಮಸ್ತ ಜೀವರ ಹೃದಯಕಮಲ | ಹೃದ್ಗುಹಾವಾಸಿ ಮೂಲೇಶನಾಮಕ | ಏಕಾತ್ಮ |
| ೨ | ಆಧಿಭೌತಿಕ | ಪಂಚಭೂತಾತ್ಮಕ ದೇಹ | ಅಚ್ಯುತ |
| ೩ | ಆಧ್ಯಾತ್ಮಿಕ | ಮನೋಇಂದ್ರಿಯ | ಅನಂತ |
| ೪ | ಅದಿದೈವಿಕ | ದಶೇಂದ್ರಿಯಾಭಿಮಾನಿ ದೇವತೆಗಳು | ಗೋವಿಂದ |

## ಪದ್ಯ (೧೦)

**ಮೂಲ :–**

ಈರೈದು ಸಾವಿರದ ಇಪ್ಪ ।
ತ್ತಾರಧಿಕ ಮುನ್ನೂರು ರೂಪಗ ।
ಳೀರೆರಡು ಸ್ಥಾನದಲ್ಲಿ ಚಿಂತಿಪುದನುದಿನದಿ ಬುಧರು ॥
ನೂರ ಇಪ್ಪತ್ತೇಳಧಿಕ ಮೂ ।
ರಾರು ಸಾವಿರ ರೂಪದಿಂ ದಶ ।
ಮಾರುತರೊಳಿದ್ದವರವರ ಪೆಸರಿನಿಂದ ಕರೆಸುವನು ॥ ||೧೦||

**ಅವತರಣಿಕೆ :—**

ಪೂರ್ವೋಕ್ತ ಹೃದಯಸ್ಥಾನ, ಅಧಿಭೂತ, ಅಧ್ಯಾತ್ಮ ಮತ್ತು ಅಧಿದೈವ ಎಂಬ ಈ ನಾಲ್ಕು ಸ್ಥಾನಗಳಲ್ಲಿ ೧೦೩೨೬ (ಈರೈದು ಸಾವಿರದ ಇಪ್ಪತಾರಧಿಕ ಮುನ್ನೂರು) ಸಂಖ್ಯಾಕವಾದ ಭಗವದ್ರೂಪಗಳನ್ನು ಜ್ಞಾನಿಗಳಾದವರು ಚಿಂತಿಸುವರು. ೧೮೧೨೭ (ನೂರ ಇಪ್ಪತ್ತೇಳಧಿಕ ಮೂರಾರು ಸಾವಿರ) ಸಂಖ್ಯಾಕವಾದ ಭಗವದ್ರೂಪಗಳಿಂದ ಪ್ರಾಣಾದಿ ಐದು ಮತ್ತು ನಾಗಾದಿ ಐದು,ಅಂತು, ದಶಪ್ರಾಣರಲ್ಲಿ ವಿದ್ಯಮಾನನಾಗಿದ್ದು ಬಿಂಬರೂಪಿ ಪರಮಾತ್ಮನು ತತ್ತನ್ನಾಮಕನಾಗಿ, ಆಯಾಯಾ ದಶವಿಧ ಪ್ರಾಣರ ಹೆಸರಿನಿಂದಲೇ ಕರೆಸುತ್ತಾ, ದೇಹಗತ ವ್ಯಾಪಾರ ವಿಶೇಷಗಳನ್ನು ಮಾಡಿ ಮಾಡಿಸುತ್ತಿರುವನು –ಎಂದು ಹೇಳುತ್ತಾರೆ.–

**"ಈರೆರಡು"**–ಎಂಬ ಪ್ರಸಕ್ತ ಸಂಧಿಗತ ೧೦ ನೆಯ ಈ ಪದ್ಯದಿಂದ ||೧೦||

**ಪ್ರತಿಪದಾರ್ಥ :–**

**ಈರೈದು ಸಾವಿರದ**=೫×೨=೧೦ ಸಾವಿರದ ಇಪ್ಪತ್ತಾ**ರಧಿಕ ಮುನ್ನೂರು**=ಮುನ್ನೂರರ ಮೇಲೆ ಇಪ್ಪತ್ತಾರು ಅಧಿಕವಾದ,ಅಂದರೆ

೧೦,೦೦೦+೩೦೦+೨೬=೧೦೩೨೬ (ಹತ್ತುಸಾವಿರದ ಮುನ್ನೂರಇಪ್ಪತ್ತಾರು)ಸಂಖ್ಯಾಕವಾದ **ರೂಪಗಳ**=ಭಗವದ್ರೂಪಗಳನ್ನು **ಈರೆರಡು ಸ್ಥಾನದಲ್ಲಿ**=೨×೨=ನಾಲ್ಕು ಸ್ಥಾನಗಳಲ್ಲಿ (ಹೃದಯ, ಆಧಿಭೌತಿಕ, ಅಧಿದೈವಿಕ ಮತ್ತು ಆಧ್ಯಾತ್ಮಿಕ ಎಂಬ ಸ್ಥಾನ ಚತುಷ್ಟಯಗಳು) **ಬುಧರು**=ಜ್ಞಾನಿಗಳು **ಅನುದಿನದಿ**=ಪ್ರತಿದಿವಸದಲ್ಲಿಯೂ **ಚಿಂತಿಸುವುದು**=ಚಿಂತಿಸುವವರಾಗಬೇಕು **ನೂರ ಇಪ್ಪತ್ತೇಳಧಿಕ**=೧೨೭ ಹೆಚ್ಚಾದ **ಮೂರಾರು**=೩×೬=೧೮ **ಸಾವಿರ ರೂಪದಿಂದ**=೧೮೦೦೦. ಅಂದರೆ, ೧೮,೦೦೦+೧೨೭=೧೮೧೨೭ (ಹದಿನೆಂಟು ಸಾವಿರದ ನೂರ ಇಪ್ಪತ್ತೇಳು)ಸಂಖ್ಯಾಕವಾದ ಭಗವದ್ರೂಪಗಳಿಂದ **ದಶವಾರುತರೊಳಿದ್ದು**=ಪ್ರಾಣಾದಿ ಐದು ಮತ್ತು ನಾಗಾದಿ ಐದು. ಅಂತು, ಹತ್ತು ಮಂದಿ ಪ್ರಾಣರಲ್ಲಿ ಅಂತರ್ಯಾಮಿತ್ವೇನ ಸ್ಥಿತನಾಗಿ **ಅವರವರ**=ಆಯಾಯಾ ನಾಮಕರಾದ ಪ್ರಾಣಾಪಾನಾದಿ **ಪೆಸರಿಂದ**=ಆಯಾಯಾ ಹೆಸರುಗಳಿಂದಲೇ. ಅಂದರೆ, ತತ್ತನ್ನಾಮಕನಾಗಿ **ಕರೆಸುವನು**=ಕರೆಯಿಸಿಕೊಳ್ಳುತ್ತಾನೆ. ॥೧೦॥

## ವ್ಯಾಖ್ಯಾನಗಳು-

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

**ವಿಶೇಷ ಸೂಚನೆ :-**

ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿ ಪ್ರಸಕ್ತ ಪದ್ಯದಲ್ಲಿ "**ಈರೆರಡು ಸಾವಿರದ**" ಎಂದು ಬರೆದಿದೆ. ಆದರೆ, ಇತರ ಎಲ್ಲಾ ವ್ಯಾಖ್ಯಾನ ಗ್ರಂಥಗಳಲ್ಲಿ "**ಈರೈದು ಸಾವಿರದ**" ಎಂಬುದಾಗಿ ಇದೆ. ನಮ್ಮ ಪೂರ್ವಿಕರು ಬರೆದಿರುವ ವಹಿಗಳಲ್ಲಿಯೂ ಸಹ "ಈರೈದು ಸಾವಿರದ" ಎಂತಲೇ ಇದೆ. ಈ ವಿಷಯವನ್ನು ಪ್ರಾಜ್ಞರು ಗಮನಿಸತಕ್ಕದ್ದು.

ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದ ಪ್ರಕಾರ, ಈರೆರಡು=೨×೨=೪. ಅಂದರೆ "ನಾಲ್ಕು ಸಾವಿರ" ಎಂದಾಗುವುದು.

ಉಳಿದ ವ್ಯಾಖ್ಯಾನಗಳ ಪ್ರಕಾರ ಈರೈದು ಸಾವಿರ=೫×೨×೧೦೦೦ ="ಹತ್ತು ಸಾವಿರ" ಎಂದಾಗುವುದು.

ಈಗ ಸಂಕರ್ಷಣ ಒಡೆಯರ ವ್ಯಾಖ್ಯಾನವನ್ನು ಅಮೂಲಾಗ್ರವಾಗಿ ಪರಿಶೀಲಿಸೋಣ.

**ವ್ಯಾಖ್ಯಾನ :**

ದಶಮಾರುತರೊಳಗಿದ್ದ ರೂಪಗಳು, ಈರೆರಡು ಸ್ಥಾನಗಳು, ಆ ಸ್ಥಾನಗಳಲ್ಲಿರತಕ್ಕ ಭಗವದ್ರೂಪಗಳು ಹೇಳುತ್ತಾರೆ.

ಈರೆರಡು ಸ್ಥಾನದಲಿ-ಪೂರ್ವೋಕ್ತ ಆಧಿಭೂತ, ಆಧಿದೈವ, ಆಧ್ಯಾತ್ಮ ಮತ್ತು ಹೃದಯಸ್ಥಾನ. ಈ ನಾಲ್ಕು ಸ್ಥಾನದಲಿ ಅಂದರೆ, ಈ ಸ್ಥಾನಗಳಲ್ಲಿ ಈರೆರಡು ಸಾವಿರದ ಮುನ್ನೂರು ಅಧಿಕ ಇಪ್ಪತ್ತಾರು-೪೩೨೬, ನಾಲ್ಕು ಸಾವಿರದ ಮುನ್ನೂರ ಇಪ್ಪತ್ತಾರು ರೂಪಗಳು. ಚಿಂತಿಸುವುದು-ಭಗವದ್ರೂಪಗಳ ಚಿಂತನಮಾಡಬೇಕು. ಎಂದರೆ, ಇದಕ್ಕೆ ವಿವರ ಹೇಳುತ್ತಾರೆ;—

(೧) ೧೩೧ ಆಧಿಭೂತಗತ "ಅಚ್ಯುತ" ರೂಪಗಳು ಅಕ್ಷರ ಸಾಂಕೇತದಿಂದ ಆಗೋ ರೂಪಗಳು. ಅ-೧, ಚ್ಯು-೩, ತ-೧=೧೩೧. ಬಲದಿಂದ ಎಡಕ್ಕೆ ಲೆಕ್ಕ. ಚ್ಯು$_{\text{ಚ ಶ}}$=ಚ+ಚ+ಯು =೩, ಅ=೧ ಚ್ಯು$_{\text{ಚ ಶ}}$=೩, ತ=೧-೧೩೧.

(೨) ಅಧಿದೈವಗತ ರೂಪಗಳು-೩೦೪೩. ಹೇಗೆಂದರೆ, ಅಕ್ಷರ ಸಾಂಕೇತದಿಂದ "ಗೋವಿಂದ" ರೂಪಗಳು. ಗೋ-೩, ವಿಂ-೪೦ ದ-೩=೩೦೪೩. ಬಲದಿಂದ ಎಡಕ್ಕೆ ಲೆಕ್ಕ.

(೩) ಅಧ್ಯಾತ್ಮಗತ ಭಗವದ್ರೂಪಗಳು ೧೦೫೨. ಹೇಗೆಂದರೆ, ಅಕ್ಷರ ಸಾಂಕೇತದಿಂದ "ಅನಂತ" ರೂಪಗಳು. ಅ-೨, ನಂ-೫೦, ತ-೧ =೧೦೫೨ ರೂಪಗಳು. ಬಲದಿಂದ ಎಡಕ್ಕೆ ಲೆಕ್ಕ.

(ಗಮನಿಸಿ :– ಇಲ್ಲಿ "ಅ" ಎಂಬ ವರ್ಣವು ಸ್ವರಾಕ್ಷರ ಶ್ರೇಣಿಯಲ್ಲಿ ಪ್ರಥಮಾಕ್ಷರ. ಅದರ ಅಕ್ಷರ ಸ್ಥಾನ=೧. ಇಲ್ಲಿ ೨ ಎಂದು ತೆಗೆದುಕೊಂಡಿದೆ. ಇದರ ಪರಿಶೀಲನೆ ಅಗತ್ಯ.)

(೪) ಹೃದಯ ಸ್ಥಾನಗತ "ಆತ್ಮ" ನ ಅಕ್ಷರ ಸಾಂಕೇತವಾದ ಭಗವದ್ರೂಪಗಳು ೬೩. ಹೇಗೆಂದರೆ, ಆ-೨, ತ್ಮ–೬ (ತ+ಮ=೬೨ ರೂಪಗಳು. (ಮುದ್ರಿತ ಪುಸ್ತಕದಲ್ಲಿ ೬೩ ಎಂದು ತಪ್ಪಾಗಿ ಬಿದ್ದಿದೆ) "ತ್ಮ" ದಲ್ಲಿ ಎರಡು ಅಕ್ಷರಗಳು–ತ+ಮ=೧+೫=೬.

(೫) ಒಂದೊಂದು ಅಗ್ನಿಯಲ್ಲಿ ಅರಾರು ರೂಪದ ವ್ಯಾರಿಗೆ ಮೂವತ್ತು ಭಗವದ್ರೂಪಗಳು. ೬×೫=೩೦ ರೂಪಗಳು.

(೯) ಗುಣತ್ರಯಾದಿ ಅಂದರೆ, ವಿಶ್ವಾದಿ ರೂಪಗಳು=೩.

(೬) ದೇಹಗತ ಪಂಚಭೂತಾರ್ಗತ ಅನಿರುದ್ಧಾದಿ ಐದು ರೂಪಗಳು =೫. ಅಂತು, ೧೩೧+೩೦೪೩+೧೦೫೨+೬೨+೩೦+೩+೫=೪೩೨೬ ರೂಪಗಳು. (ನಾಲ್ಕು ಸಾವಿರದ ಇಪ್ಪತ್ತಾರು ರೂಪಗಳು).

ಅಂತು, ಪೂರ್ವೋಕ್ತ ಮೊತ್ತಕ್ಕೆ ಲೆಕ್ಕವಾಯಿತು. ಈ ಪ್ರಕಾರ ಬ್ರಹ್ಮಾಂತ ತ್ರಿವಿಧ ಜೀವರಲ್ಲಿ ಇರೋದಾಗಿ ಅದೆ. ಅನುದಿನದಿ-ಪ್ರತಿದಿನದಲ್ಲೂ ಜ್ಞಾನಿಗಳಾದವರು ಚಿಂತಿಸೋವರಾಗಬೇಕು ಎಂತ ತಾತ್ಪರ್ಯ. ಮೂರಾರು ಸಾವಿರ-೧೮,೦೦೦ (ಹದಿನೆಂಟು ಸಾವಿರ) ಅಧಿಕ ನೂರ ಇಪ್ಪತ್ತೇಳು-೧೨೭ ನೂರ ಇಪ್ಪತ್ತೇಳು. ಅಂತು ೧೮೧೨೭. ಅಂದರೆ, ಹದಿನೆಂಟು ಸಾವಿರದ ನೂರ ಇಪ್ಪತ್ತೇಳು ರೂಪದಿಂದ ದಶಮಾರುತರೊಳಿದ್ದು– ಪೂರ್ವೋಕ್ತ ಪ್ರಾಣಾದಿ (೫), ನಾಗಾದಿ (೫). ಅಂತು ದಶವಿಧ ಮುಖ್ಯ ಪ್ರಾಣರೊಳಗಿದ್ದು ಅದರ ವಿವರ ಇಂತಿದೆ:–

| ಕ್ರಮ ಸಂಖ್ಯೆ | ವಿವರ | ರೂಪಗಳು | ವಿವರ | ರೂಪಗಳು |
|---|---|---|---|---|
| ೧ | ಪ್ರಾಣ ೩೫ | ೫೩ | ೧. ನಾಗ ೫೩ | ೩೫ |
| ೨ | ಅಪಾನ ೧೧೫ | ೫೧೧ | ೨. ಕೃಕಲ ೩೧೩ | ೩೧೩ |
| ೩ | ವ್ಯಾನ ೫೫ | ೫೫ | ೩. ಕೂರ್ಮ ೧೭ | ೭೧ |
| ೪ | ಉದಾನ ೫೩೫ | ೫೩೫ | ೪. ದೇವದತ್ತ ೩೪೩೨ | ೨೩೪೩ |
| ೫ | ಸಮಾನ ೭೫೫ | ೫೫೭ | ೫. ಧವಂಜಯ ೪೫೦೩೧ | ೧೩೦೫೪ |
| | ಅಂತು ಒಟ್ಟು | ೧೭೧೧ ರೂಪಗಳು | ಅಂತು ಒಟ್ಟು | ೧೫೮೧೬ ರೂಪಗಳು |

ಎಲ್ಲಾ ಸೇರಿ ಒಟ್ಟು ಮೊತ್ತ=೧೭೧೧+೧೫೮೧೬=೧೭೫೨೭ ಅಂದರೆ, ಹದಿನೇಳು ಸಾವಿರದ ಐನೂರ ಇಪ್ಪತ್ತೇಳು ಭಗವದ್ರೂಪಗಳು. (ದಶಮಾರುತರೊಳಗೆ)

## ೬೦೦ ರೂಪಗಳಿಗೆ ವಿವರ

(೧) ಪಂಚ ಭೂತಗಳು = ೫
(೨) ಪಂಚತನ್ಮಾತ್ರಗಳು = ೫
(೩) ದಶೇಂದ್ರಿಯಗಳು =೧೦
(೪) ದಶೇಂದ್ರಿಯಗಳಿಗೆ
ಅನುಸರಿಸಿದ ಮನೋವೃತ್ತಿಗಳು =೧೦

ಅಂತು ಒಟ್ಟು =೩೦

(೧) ಪಂಚಭೂತ ಕಾರ್ಯಗಳು =೫
(೨) ತನ್ಮಾತ್ರ ಕಾರ್ಯಗಳು =೫
೩) ದಶೇಂದ್ರಿಯ ಕಾರ್ಯಗಳು =೧೦
(೪) ದಶಮನೋವೃತ್ತಿಗಳಿಗೆ
ಅನುಸರಿಸಿದ ಕಾರ್ಯಗಳು =೧೦

ಅಂತು ಒಟ್ಟು =೩೦

ಪೂರ್ವೋಕ್ತ ಒಟ್ಟು =೩೦+೩೦=೬೦ ರೂಪಗಳು.

ಈ ಪ್ರಕಾರ ಒಂದೊಂದು ಪ್ರಾಣ ಶರೀರದಲ್ಲಿ ಇರೋದಾಗಿ ಅದೆ. ಈ ರೀತ್ಯಾ, ದಶಪ್ರಾಣ ಶರೀರಗಳಲ್ಲಿ ಲೆಕ್ಕ ಮಾಡಿದರೆ, ೬೦×೧೦=೬೦೦ ರೂಪಗಳಾಗುವುವು. ಈ ಮೇಲೆ ವಿವರಿಸಿದ ಆರುನೂರು ರೂಪಗಳು ಯಾವುವು ಎಂಬುದಕ್ಕೆ ಪ್ರಮಾಣ :-

**ತದುಕ್ತಂ ಭಾಗವತೇ ತೃತೀಯ ಸ್ಕಂಧೇ ದಶಮೋಧ್ಯಾಯೇ :—**

**"ಪ್ರಾಣೋಽಪಾನಸ್ತಥಾ ವ್ಯಾನಸ್ತ್ವ ಥೋದಾನ ಸಮಾನಕೌ ।**
**ನಾಗಃ ಕೂರ್ಮೋಽಥ ಕೃಕಲೋ ದೇವದತ್ತೋ ಧನಂಜಯಃ" ॥**

-ಇತಿ ದಶಪ್ರಾಣಗತ ಇಂದ್ರಿಯಸ್ಥ ರೂಪಾಣಿ ೬೦೦ ರೂಪಗಳು. ಈ ಪ್ರಕಾರ ಆಗತಕ್ಕ ರೂಪಗಳು ೧೮೧೨೭. ಇದರ ವಿವರ :-

| | | |
|---|---|---|
| (೧) | ಪೂರ್ವೋಕ್ತ ಪ್ರಾಣಾದಿ ರೂಪಗಳು= | ೧೭೧೧ |
| (೨) | ಪೂರ್ವೋಕ್ತ ನಾಗಾದಿ ರೂಪಗಳು= | ೧೫,೮೧೬ |
| (೩) | ಪೂರ್ವೋಕ್ತ ಪಂಚಭೂತಾದಿ ತಥಾ ಕಾರ್ಯಾದಿ ದಶಪ್ರಾಣ ಶರೀರಗತ ರೂಪಗಳು= | ೬೦೦ |
| | ಅಂತು, ಒಟ್ಟಿನಲ್ಲಿ | ೧೮,೧೨೭ ರೂಪಗಳು |

ಅಂತು, ಹದಿನೆಂಟು ಸಾವಿರದ ನೂರಇಪ್ಪತ್ತೇಳು ಭಗವದ್ರೂಪಗಳು ಆದಂತಾಯಿತು. ಈ ರೂಪಗಳಿಂದ ದಶವಿಧ ನಾಮಗಳು ಉಳ್ಳ, ದಶಮುಖ ಪ್ರಾಣ ರೂಪಗಳ ಒಳಗಿದ್ದು, ಅವರವರೊಳಗಿದ್ದು-ಆಯಾ ಮಾರುತರಲ್ಲಿ ಇದ್ದಂಥವನಾಗಿ, ಅವರವರ ಹೆಸರಿನಿಂದ-ಆಯಾ ಮಾರುತರ ಹೆಸರಿನಿಂದ ಕರೆಸುವನು-ಕರಿಸೋವನಾಗಥಾನೆ ಎಂಥ ತಾತ್ಪರ್ಯ. ಈ ರೀತಿ ತಿಳಿಕೋಬೇಕು.

**ವಿಶೇಷಾರ್ಥ :—**

ಮೇಲೆ ಹೇಳಿದ ಆರುನೂರು ರೂಪಗಳು ಹ್ಯಾಂಗೆ ಅಂದರೆ, ಅದರ ವಿವರವನ್ನು ಕೊಟ್ಟಿದೆ : –

"ಗೋಳಕವು ಕುಂಡಾಗ್ನಿ ಕರ್ಣವು" -ಎಂತ ಹೇಳಿದ ಅನುಸಂಧಾನದಿಂದ ಅಂದರೆ, ಅನುಸಂಧಾನಕ್ರಮದಿಂದ ಒಂದೊಂದು ಗೋಳಕದಲ್ಲಿ ಆರಾರು ಭಗವದ್ರೂಪಗಳ ಚಿಂತಿಸಬೇಕು. (ಗೋಳಕ ಎಂದರೆ, ಇಂದ್ರಿಯಗಳಿಗೆ ಆಶ್ರಯವಾದ ಸ್ಥಾನಗಳು ಎಂತ ಅರ್ಥ.) ಆರು ದಾವದು ಎಂದರೆ-

(೧) ಗೋಳಕದಲ್ಲಿ ಅಗ್ನಿ ಒಂದು. (೨) ಅಗ್ನಿಯಲ್ಲಿ ಹಾಕತಕ್ಕ ಕಾಷ್ಠ. (೩) ಅಗ್ನಿ ಮತ್ತು ಕಾಷ್ಠ ಎರಡೂ ಸಂಪರ್ಕವಾದ

ಕೂಡಲೇ ಉತ್ಪತ್ತಿಯಾಗುವ ಧೂಮ. (೪) ತದನಂತರ ಉತ್ಪತ್ತಿಯಾಗುವ ಜ್ವಾಲೆ. (೫) ಈ ಜ್ವಾಲೆಯಿಂದ ಹೊರಡತಕ್ಕ ಕಿಡಿಗಳು. (೬) ಕಾಷ್ಠವು ಸುಟ್ಟಮೇಲೆ ಉಂಟಾಗುವ ಕೆಂಡಗಳು. ಹೀಗೆ ಅಗ್ನಿ, ಕಾಷ್ಠ, ಧೂಮ, ಜ್ವಾಲೆ, ಕಿಡಿ ಮತ್ತು ಕೆಂಡ ಅಂತು ಆರು. ಆರಕ್ಕೆ ಆರು ಭಗವದ್ರೂಪಗಳು, ಈ ಪ್ರಕಾರ ದಶೇಂದ್ರಿಯಗಳಲ್ಲಿ (ಪಂಚ ಜ್ಞಾನೇಂದ್ರಿಯಗಳು ಮತ್ತು ಪಂಚ ಕರ್ಮೇಂದ್ರಿಯಗಳು). ಅದರಂತೆ ೧೦ × ೬ = ೬೦ ಭಗವದ್ರೂಪಗಳಾಯಿತು. ಇಷ್ಟು ಒಂದು ಮರುತಾಂತರ್ಗತದಲ್ಲಿ ಎಂತ ತಿಳಿಯೋವರಾಗಬೇಕು. ಈ ಕ್ರಮದಿಂದ ಭಾಗವತೋಕ್ತ ಪ್ರಕಾರ ದಶಮರುತರೊಳಗೆ (ಪ್ರಾಣಾದಿಪಂಚ + ನಾಗಾದಿಪಂಚ) ಒಂದೊಂದು ಮರುತಗತ ಒಂದೊಂದು ಇಂದ್ರಿಯಗಳಲ್ಲಿ ಆರಾರು ರೂಪಗಳ ಪ್ರಕಾರ ಅರವತ್ತು ರೂಪ ಒಂದು. ಮರುತನ ದೇಹಗತ ದಶ ಇಂದ್ರಿಯಗಳಲ್ಲಿ ಲೆಖ್ಖವಾಗುತ್ತದೆ. ಆದ್ದರಿಂದ, ದಶಮರುತಾಂತರ್ಗತವಾಗಿ ಇರತಕ್ಕ ಸಂಖ್ಯಾ ಆರುನೂರು ಎಂದು ತಿಳಿಯಬೇಕು. ಅಂತು, ಲೆಕ್ಕ ೬೦೦ ರೂಪಗಳು.

ದಶಪ್ರಾಣರಲ್ಲಿ ವರ್ಣಸಾಂಕೇತ ಭಗವದ್ರೂಪಗಳು ೧೭೫೨೭ ರೂಪಗಳು ಅಂತ ಹಿಂದೆ ವಿವರಿಸಿ ಅದೆ. ದಶಪ್ರಾಣಗತ ಇಂದ್ರಿಯಗತ ಅನುಸಂಧಾನಕ್ಕೆ ಯೋಗ್ಯವಾದ ರೂಪಗಳು ೬೦೦ ಅಂತ ಮೇಲೆ ವಿವರಿಸಿ ಅದೆ. ಇವೆರಡೂ ಸೇರಿದರೆ. ೧೭೫೨೭ + ೬೦೦ ೧೮೧೨೭ ರೂಪಗಳು. ಹದಿನೆಂಟು ಸಾವಿರದ ನೂರ ಇಪ್ಪತ್ತೇಳು ಭಗವದ್ರೂಪಗಳು ಸರಿ ಆಯಿತು.

ಅಧಿಭೂತಾದಿ ಪ್ರಾಣರೂಪಗಳು ದಶ ಯಾಕೆ ಹೇಳಬೇಕೆಂದರೆ ಅಧಿಭೂತಾದಿಗಳಲ್ಲಿ ಒಂದೊಂದರಲ್ಲಿ ದಶವಿಧ ಅಧಿಷ್ಠಾನಗಳು ಬ್ಯಾರೆ ಬ್ಯಾರೆ ಆದ್ದರಿಂದ ದಶಕ್ಕೆ ದಶವಾಯು ರೂಪಗಳು ತಿಳಿಯಬೇಕು.

ಅದಕ್ಕೆ ವಿವರ ;— (ಭೂತಗಳಲ್ಲಿ ೧೦). ದೇಹಗತ ಪಂಚಭೂತಗಳಲ್ಲಿ ಪ್ರಾಣಾದಿ ರೂಪಗಳು ೫, ತನ್ಮಾತ್ರಗಳಲ್ಲಿ ನಾಗಾದಿ ವಾಯುರೂಪಗಳು ೫ ಅಂತು, ೫ + ೫ = ೧೦. (ಇಂದ್ರಿಯಗಳಲ್ಲಿ ೧೦). ಪಂಚಜ್ಞಾನೇಂದ್ರಿಯಗಳಲ್ಲಿ ಪ್ರಾಣಾದಿರೂಪಗಳು ೫, ಪಂಚ ಕರ್ಮೇಂದ್ರಿಯಗಳಲ್ಲಿ ನಾಗಾದಿ

ರೂಪಗಳು ೫. ಅಂತು, ೫+೫=೧೦ (ಹತ್ತು) ಆಯಿತು, (ಮನೋವೃತ್ತಿಗಳು= ೧೦)

| ಕ್ರಮ ಸಂಖ್ಯೆ | ವೃತ್ತಿಗಳು | ವಾಯುರೂಪ | ಅಂತರ್ಭೂತ ವೃತ್ತಿಗಳು | ಇಂದ್ರಿಯ |
|---|---|---|---|---|
| ೧ | ಮನಸ್ಸು | ಪ್ರಾಣ | ಸಂಕಲ್ಪ ವಿಕಲ್ಪ | ಮನಸ್ಸಿನ ವೃತ್ತಿ |
| ೨ | ಬುದ್ಧಿ | ಅಪಾನ | ನಿಶ್ಚಯ ವೃತ್ತಿ | ಬುದ್ಧಿಯದು |
| ೩ | ಚಿತ್ತ | ವ್ಯಾನ | ಸ್ಮರಣ ವೃತ್ತಿ | ಚಿತ್ತದ್ದು |
| ೪ | ಅಹಂಕಾರ | ಉದಾನ | ವಿಷಯವೃತ್ತಿ | ಅಹಂಕಾರದ್ದು |
| ೫ | ಅಂತಃಕರಣ | ಸಮಾನ | ಭೋಗವೃತ್ತಿ | ಅಂತಃಕರಣದ್ದು |

(೧) ಭೂತದಲ್ಲಿ =೧೦
(೨) ಇಂದ್ರಿಯಗಳಲ್ಲಿ =೧೦
(೩) ಮನೋವೃತ್ತಿಗಳಲ್ಲಿ =೧೦

ಅಂತು ಒಟ್ಟು =೩೦ ಆಯಿತು.

ಇದರ ವಿವರಗಳು :—

(೧) ಪಂಚಭೂತ, ಪಂಚತನ್ಮಾತ್ರಗಳು=೧೦
ಈ ಒಂದೊಂದರಲ್ಲಿ ಸಂಸ್ಪೃಷ್ಟಗಳು ಹತ್ತು ಹತ್ತು ಪ್ರಕಾರ =೧೦೦

(೨) ಇಂದ್ರಿಯಗಳು=೧೦.
ಈ ಒಂದೊಂದರಲ್ಲಿ ಸಂಸ್ಪೃಷ್ಟಗಳು ಹತ್ತು ಹತ್ತು ಪ್ರಕಾರ =೧೦೦

(೩) ಮನೋವೃತ್ತಿಗಳು ೫, ತತ್ಕಾರ್ಯಗಳು ೫, ಅಂತು ೧೦
ಒಂದೊಂದರಲ್ಲಿ ಸಂಸೃಷ್ಟಗಳು ಹತ್ತು ಹತ್ತು ಪ್ರಕಾರ =೧೦೦

ಅಂತು ಒಟ್ಟು =೩೦೦

ಇನ್ನು ಉಳಿದ ಮುನ್ನೂರಕ್ಕೆ ವಿವರ :–

(೧) ಪಂಚಭೂತಗಳಲ್ಲಿ ಒಂದೊಂದರಲ್ಲಿ ಪ್ರಾಣಾದಿರೂಪಗಳು
ಹತ್ತು ಹತ್ತು ಪ್ರಕಾರ, ೫ × ೧೦ =೫೦

(೨) ಪಂಚ ತನ್ಮಾತ್ರಗಳಲ್ಲಿ-ನಾಗಾದಿ ರೂಪಗಳು
ಒಂದೊಂದರಲ್ಲಿ ಹತ್ತು ಹತ್ತು ಪ್ರಕಾರ, ೫ × ೧೦ =೫೦

(೩) ಪಂಚ ಜ್ಞಾನೇಂದ್ರಿಯಗಳಲ್ಲಿ ಪ್ರಾಣಾದಿ ರೂಪಗಳು
ಒಂದೊಂದರಲ್ಲಿ ಹತ್ತು ಹತ್ತು ಪ್ರಕಾರ, ೫ × ೧೦ =೫೦

(೪) ಪಂಚಕರ್ಮೇಂದ್ರಿಯಗಳಲ್ಲಿ, ನಾಗಾದಿ ರೂಪಗಳು
ಒಂದೊಂದರಲ್ಲಿ ಹತ್ತು ಹತ್ತು ಪ್ರಕಾರ, ೫ × ೧೦ =೫೦

(೫) ಮನೋವೃತ್ತಿಗಳಲ್ಲಿ, ಐದು ಪ್ರಾಣಾದಿ ರೂಪಗಳು
ಒಂದೊಂದರಲ್ಲಿ ಹತ್ತು ಹತ್ತು ಪ್ರಕಾರ, ೫ × ೧೦ =೫೦

(೬) ಮನೋವೃತ್ತಿ ಕಾರ್ಯಗಳಲ್ಲಿ, ನಾಗಾದಿ ರೂಪಗಳು
ಒಂದೊಂದರಲ್ಲಿ ಹತ್ತು ಹತ್ತು ಪ್ರಕಾರ, ೫ × ೧೦ =೫೦

ಅಂತು ಒಟ್ಟಿನಲ್ಲಿ =೩೦೦

ಅಂತು, ಒಟ್ಟು ೩೦೦+೩೦೦=೬೦೦ (ಆರು ನೂರು) ಆಯಿತು.

ಈ ಆರು ನೂರು ರೂಪಗಳಲ್ಲಿ, ಮುನ್ನೂರು ಅನಿರುದ್ಧಾದಿ ರೂಪಗಳು, ಉಳಿದ ಮುನ್ನೂರು ಕೃದ್ಧೋಲ್ಕಾದಿ ಭಗವದ್ರೂಪಗಳು. ಅನಿರುದ್ಧಾದಿ ಪತ್ನೀರು ಮತ್ತು ಕ್ರುದ್ಧೋಲ್ಕಾದಿ ಭಗವದ್ರೂಪಗಳ ಪತ್ನೀರು ಇವರ ಹೆಸರುಗಳನ್ನು ಹೇಳುತ್ತಾರೆ. (ವ್ಯಾಖ್ಯಾನಕಾರರು) :–

| ಕ್ರಮ ಸಂಖ್ಯೆ | ಅನಿರುದ್ಧಾದಿ | ಪತ್ನಿಯರು | ಕ್ರಮ ಸಂಖ್ಯೆ | ಕೃದ್ಧೋಲ್ಕಾದಿ | ಪತ್ನಿಯರು |
|---|---|---|---|---|---|
| ೧. | ವಾಸುದೇವ | ಮಾಯಾ | ೧. | ಕೃದ್ಧೋಲ್ಕ | ದುರ್ಗಾ |
| ೨. | ಸಂಕರ್ಷಣ | ಜಯಾ | ೨. | ಮಹೋಲ್ಕ | ಅಂಭ್ರಣೀ |
| ೩. | ಪ್ರದ್ಯುಮ್ನ | ಕೃತೀ | ೩. | ವೀರೋಲ್ಕ | ಲಕ್ಷ್ಮೀ |
| ೪. | ಅನಿರುದ್ಧ | ಶಾಂತೀ | ೪. | ದ್ಯುಲ್ಕ | ದಕ್ಷಿಣಾ |
| ೫. | ನಾರಾಯಣ | ಲಕ್ಷ್ಮೀ | ೫. | ಸಹಸ್ರೋಲ್ಕ | ಜಯಂತೀ |

ಅಂತು, ೧೦ ಭಗವದ್ರೂಪಗಳು ಮತ್ತು ಅವರ ಪತ್ನಿಯರ ಹೆಸರುಗಳು ಹೇಳಿದಂತಾಯಿತು.

ಈ ಕಾರಣದಿಂದ ಅಧಿಭೂತ, ಅಧಿದೈವ, ಆಧ್ಯಾತ್ಮ- ಈ ಮೂರರಲ್ಲಿ ಒಂದೊಂದರಲ್ಲಿ ದಶಪ್ರಾಣ ರೂಪಗಳು ಚಿಂತಿಸಬೇಕು. ತದ್ಗತ ಭಗವದ್ರೂಪಗಳು ೧೦. ಪೂರ್ವೋಕ್ತ ಪ್ರಕಾರ ಚಿಂತನಾ ಮಾಡಬೇಕು ಎಂತ ತಾತ್ಪರ್ಯ.

ಈರೆರಡು ಸ್ಥಾನ, ಎಂದರೆ-ದೇಹ, ಇಂದ್ರಿಯಗಳು, ಮನಸ್ಸು ಹೃದಯಾಕಾಶ (ಅಚ್ಯುತ, ಅನಂತ, ಗೋವಿಂದ ಮತ್ತು ಆತ್ಮ) ಈ ನಾಲ್ಕು ಸ್ಥಾನಗಳಲ್ಲಿ ನಾಲ್ಕು ರೂಪಗಳ ತಿಳಿಯಬೇಕೆಂತಲೂ ತಾತ್ಪರ್ಯವೇ ಆಗಿದೆ. ಈ ಪೂರ್ವೋಕ್ತ ವಿಭಾಗ ಕ್ರಮದಿಂದ ನೂರಾ ಇಪ್ಪತ್ತೇಳಧಿಕ ಮೂರಾರು ಸಾವಿರ ರೂಪದಿಂದ ದಶಮಾರುರೊಳಿದ್ದು, ಅವರವರ ಹೆಸರಿನಿಂದ ಕರೆಸೋವನಾಗತಾನೆಂದು ತಿಳಿಯಬೇಕು ಎಂತ ತಾತ್ಪರ್ಯ.

ಈ ಕೆಳಗೆ ಹೇಳಿರುವುದನ್ನ ಮನಕ್ಕೋಸ್ಕರ ಬರೆದಿದ್ದಾಗಿದೆ :-

(೧) ಇಲ್ಲಿ ಪ್ರಾರಂಭದಲ್ಲಿ ನಾಲ್ಕು ಸ್ಥಾನ ತೆಗೆದುಕೊಂಡು, ಅಧಿಭೂತ, ಅಧಿದೈವ, ಅಧ್ಯಾತ್ಮ ಮತ್ತು ಹೃದಯ ಸ್ಥಾನ ಈ ನಾಲ್ಕು ಸ್ಥಾನಗಳು. ಈ ನಾಲ್ಕು ಸ್ಥಾನಗಳಲ್ಲಿ ಕ್ರಮವಾಗಿ ಅಂತರ್ಗತ ಭಗವದ್ರೂಪಗಳು ಅಚ್ಯುತ, ಅನಂತ, ಗೋವಿಂದ ಮತ್ತು ಆತ್ಮ ಇವು ಅವೆ, ಹೃದಯಸ್ಥಾನಾಪನ್ನನಾದವ ಆತ್ಮ. ಈ ಭಗವದ್ರೂಪಗಳ ಅಕ್ಷರ ಸಾಂಕೇತದಿಂದ ಆಗತಕ್ಕ ಭಗವದ್ರೂಪ ಗಳು ಪಂಚಾಗ್ನಿಗಳ ಅಂತರ್ಗತ ಭಗವದ್ರೂಪಗಳ, ಗುಣತ್ರಯಗಳ ಅಂತರ್ಗತ ವಿಶ್ವ, ತೈಜಸ, ಪ್ರಾಜ್ಞಾದಿ, ಮೂರು ರೂಪಗಳು. ಪಂಚಭೂತ ಎಂದರೆ, ಸ್ಥೂಲದೇಹಗತ ಪಂಚಭೂತಾಂತರ್ಗತ ಅನಿರುದ್ಧಾದಿ ಐದು ರೂಪಗಳೂ ಸೇರಿ ನಾಲ್ಕು ಸಾವಿರದ ಮುನ್ನೂರ ಇಪ್ಪತ್ತಾರು ಭಗವದ್ರೂಪಗಳನ್ನು ಚಿಂತಿಸಬೇಕು.

(೨) ತದನಂತರ, ಏಕವಿಂಶತಿ ತತ್ತ್ವಗಳನ್ನು ತೆಗೆದುಕೊಂಡು. ಅವುಗಳಲ್ಲಿ ಪಂಚಭೂತಗಳು, ಪಂಚತನ್ಮಾತ್ರಗಳು, ಪಂಚಜ್ಞಾನೇಂದ್ರಿಯಗಳು, ಪಂಚ ಕರ್ಮೇಂದ್ರಿಯಗಳು. ಇವುಗಳಲ್ಲಿ ಇರತಕ್ಕ ದಶಪ್ರಾಣಾದಿಗಳು, ಅಂದರೆ, ಪ್ರಾಣಾದಿ ಪಂಚಕಗಳು, ನಾಗಾದಿ ಪಂಚಕಗಳು ಇವುಗಳನ್ನು ವಿವರಿಸಿ, ಅನಂ ತರ, ಮನೋಇಂದ್ರಿಯದ ಪ್ರಭೇದಗಳನ್ನು ಮತ್ತು ಅವುಗಳ ವೃತ್ತಿಯನ್ನು ತಿಳಿಸಿ, ಇವುಗಳಲ್ಲಿ, ಕ್ರಮವಾಗಿ ಇರುವ ಪ್ರಾಣಾದಿ ಪಂಚಕಗಳನ್ನೂ ಮತ್ತು ನಾಗಾದಿ ಪಂಚಕಗಳನ್ನೂ ವಿವರಿಸಿ, ಒಟ್ಟು ಆಗತಕ್ಕ ಭಗವದ್ರೂಪಗಳು ೧೮, ೧೨೭ (ಹದಿನೆಂಟು ಸಾವಿರದ ನೂರ ಇಪ್ಪತ್ತೇಳು) ಎಂತ ವಿವರಿಸಿ. ಇವುಗಳಲ್ಲಿ ಒಳಗೊಂಡ ಆರುನೂರು ಭಗವದ್ರೂಪಗಳ ಪೈಕಿ, ಮುನ್ನೂರು ಅನಿರುದ್ಧಾದಿ ರೂಪಗಳಿಂದಲೂ, ಉಳಿದ ಮುನ್ನೂರು ಕೃದ್ಧೋಲ್ಕಾದಿ ರೂಪಗಳು ಎಂತಲೂ ವಿವರಿಸಿದ್ದಾರೆ. ನಾವು ಯಾವಾಗಲೂ ಚಿಂತಿಸಬೇಕಾದರೆ ಲಕ್ಷ್ಮೀ ನಾರಾಯಣ ಸಮೇತ ಚಿಂತಿಸಿ, ಧ್ಯಾನಮಾಡಬೇಕು-ಎಂತ ತಾತ್ಪರ್ಯ. ॥೧೦॥

(೨) "ಭಾವಪ್ರಕಾಶಿಕೆ"-ವ್ಯಾಖ್ಯಾನ:—

ಮೇಲಿನ ಪದ್ಯದಲ್ಲಿ ಪದ್ಮನಾಭನು ತನ್ನ ಸ್ವರೂಪ ಒಂದು ರೂಪ ವಾಗಿಯೂ, ಹತ್ತು ರೂಪವಾಗಿಯೂ. ಮೂರು ರೂಪವಾಗಿಯೂ ಭಾಗಿಸಿದ

ನೆಂದು ಹೇಳಿ, ಬ್ರಹ್ಮಾದಿ ಸಕಲ ಚೇತನರ ಹೃದಯದಲ್ಲಿ ಏಕರೂಪನಾಗಿಯೂ, ಆಧ್ಯಾತ್ಮಾದಿಗಳಲ್ಲಿ ಮೂರು ರೂಪಗಳು. ದಶಪ್ರಾಣರಲ್ಲಿ ದಶರೂಪಗಳೆಂದು ಹೇಳಿದರು. ಈಗ ಒಂದು, ಹತ್ತು ಮತ್ತು ಮೂರು ಎಂಬ ಈ ಸ್ಥಾನಗಳ ಪೈಕಿ ಒಂದೊಂದರಲ್ಲೂ ಅನೇಕ ರೂಪಗಳನ್ನು ಚಿಂತಿಸಬೇಕೆಂದು ಹೇಳುತ್ತಾರೆ.

ಬ್ರಹ್ಮಾದಿ ಚೇತನರ ಹೃದಯುಗತ ರೂಪ ಒಂದು ಏಕರೂಪ. ಅಧ್ಯಾತ್ಮಾದಿ ಮೂರರಲ್ಲಿ ಅಚ್ಯುತಾದಿ ಮೂರು ರೂಪಗಳು. ಇವುಗಳನ್ನು ಅಕ್ಷರ ಸಂಖ್ಯಾ ಮಾಡಿದರೆ, ಲಭ್ಯವಾಗುವ ರೂಪಗಳು ೧೦, ೩೨೬. ವಿವರ :–

(೧) ಏಕಾತ್ಮ-ಏ=೧೧, ಕಾ=೧, ತ್ಮ=ತ+ಮ=೬. =೬೧೧೧
(ವಾಮಾಂಕರೀತ್ಯಾ)
(೨) ಅಚ್ಯುತ-ಅ=೧, ಚ್ಯು=ಚ+ಯ=೨, ತ=೧ =೧೨೧
(೩) ಆನಂತ-ಆ=೧ ನ=೫, ೦=೦, ತ=೧ =೧೦೫೧
(೪) ಗೋವಿಂದ–ಗೋ=೩, ವಿ=೪, ೦=೦. ದ=೩ =೩೦೪೩

ಅಂತು, ಒಟ್ಟು ಭಗವದ್ರೂಪಗಳು =೧೦೩೨೬

ಹೀಗೆ ನಾಲ್ಕು ಸ್ಥಾನಗಳಲ್ಲಿ ಒಟ್ಟು ೧೦,೩೨೬ (ಹತ್ತು ಸಾವಿರದ ಮುನ್ನೂರ ಇಪ್ಪತ್ತಾರು) ರೂಪಗಳನ್ನು ಜ್ಞಾನಿಗಳು ಚಿಂತಿಸಬೇಕು.

ದಶಪ್ರಾಣರಲ್ಲಿ ಅಕ್ಷರ ಸಂಖ್ಯಾಕ್ರಮದಿಂದ ಚಿಂತಿಸಬೇಕಾದ ರೂಪಗಳ ವಿವರ : –

(೧) ಪ್ರಾಣ-ಪ್ರಾ=ಪ+ರ=೩' ಣ=೫. =೫೩
(೨) ಅಪಾನ ಅ=೧, ಪಾ=೧, ನ=೫ =೫೧೧
(೩) ವ್ಯಾನ-ವ್ಯಾ=ವ+ಯ=೪+೧=೫, ನ=೫ =೫೫
(೪) ಉದಾನ-ಉ=೫, ದಾ=೩, ನ=೫ =೫೭೫
(೫) ಸಮಾನ-ಸ=೭, ಮಾ=೫, ನ=೫ =೫೫೭
(೬) ನಾಗ-ನಾ=೫, ಗ=೩ =೩೫

(೭) ಕೃಕಳ-ಕೃ=ಕ+ರ=೧+೨=೩, ಕ=೧, ಳ=೯ =೯೧೩
(೮) ಕೂರ್ಮ-ಕೂ=೧, ರ್ಮ=ಮ+ರ=೫+೨=೭ =೭೧
(೯) ದೇವದತ್ತ-ದೇ=೩. ವ=೪, ದ=೩, ತ್ತ=ತ+ತ=೨=೨೩೪೩
(೧೦) ಧನಂಜಯ-ಧ=೪, ನ=೫, ೦=೦, ಜ=೩, ಯ=೧=೧೩೦೫೪

ಹೀಗೆ ಪ್ರಾಣಾದಿ ಮತ್ತು ನಾಗಾದಿ ದಶಪ್ರಾಣರಲ್ಲಿ ೧೮,೧೨೭

ಹೀಗೆ ದಶಮಾರುತರೊಳು, ಅಂದರೆ ಪ್ರಾಣಾದಿ ಪಂಚಕ ಮತ್ತು ನಾಗಾದಿ ಪಂಚಕಗಳಲ್ಲಿ ೧೮,೧೨೭ ರೂಪಗಳಿಂದ ಇದ್ದು, ಪ್ರಾಣ, ಅಪಾನ, ನಾಗ, ಕೃಕಳ ಇತ್ಯಾದಿ ಹೆಸರಿನಿಂದಲೇ ಪ್ರಖ್ಯಾತನಾಗಿರುವನು ॥೧೦॥

(೩) **"ಭಾವದರ್ಪಣಟೀಕಾ"ವ್ಯಾಖ್ಯಾನ:-**

ಸ್ವರೂಪ, ಲಿಂಗ, ಅನಿರುದ್ಧ, ಸ್ಥೂಲ, ಈ ನಾಲ್ಕು ದೇಹಗಳಲ್ಲಿ ಸಂಖ್ಯಾಂಕದಿಂದ **ಅಂತರಾತ್ಮಾ**-ಹತ್ತು ಸಾವಿರದ ಮುನ್ನೂರ ಇಪ್ಪತ್ತಾರು ರೂಪದಿಂದ ಅನಿರುದ್ಧಾದಿ ಚತುಷ್ಟಯ ನಾಮಗಳಿಂದ ಇದ್ದಾನೆಂತಲೂ ಪ್ರಾಣಾದಿ ದಶಮಾರುತಗಳಲ್ಲಿ ಹದಿನೆಂಟು ಸಾವಿರದ ನೂರಾ ಇಪ್ಪತ್ತೇಳು ರೂಪಗಳಿಂದ ತತ್ತನಾಮಕನಾಗಿ ಇದ್ದಾನೆಂತಲೂ ಹೇಳುತ್ತಾರೆ-"ಈರ್ಯೈದೇತಿ".

ಅಂ=೧೦, ತ್ರಾ=ತ+ರ=೧+೨=೩, ಆ=೨, ತ್ಮಾ=ತ+ಮ=೧+೫=೬, ಅಂದರೆ. ೧೦.೩೨೬ ರೂಪಗಳು ಎಂಬುವುದಕ್ಕೆ ಪ್ರಮಾಣ,

**"ಆಯುತ್ಯೈಶ್ಚಾಪಿ ಷಡ್ವಿಂಶತ್ಯಧಿಕೈ ಸ್ತ್ರಿಶತ್ಯೈಯುರ್ಗತ್ಯೈಃ ||**
**ಚತುಸ್ಥಾನೇ ಗತಃ ಶ್ರೀಶ ||" ಇತ್ಯುಕ್ತೇಃ ||**

"ದಶಮಾರುತೇತಿ"-

ಪ್ರಾಣ=೫೩, ಅಪಾನ=೫೧೧, ವ್ಯಾನ=೫೫, ಉದಾನ=೫೩೫, ಸಮಾನ=೫೫೭, ಅಹತ್ಯ=೧೭೧೧ ರೂಪಗಳು.

ನಾಗ=೩೫, ಕೂರ್ಮ=೭೧, ಕೃಕಲ=೯೧೩ ದೇವದತ್ತ=೨೩೪೩

ಮತ್ತು ಧನಂಜಯ =೧೩೦೫೪. ಇದರ ಒಟ್ಟು ಸಂಖ್ಯಾ =೧೮,೧೨೭ ಭಗವದ್ರೂಪಗಳು ಆದವು ಎಂಬರ್ಥ. ಇದಕ್ಕೆ ಪ್ರಮಾಣ :

"ಸಪ್ತವಿಂಶಂತ್ಯಧಿಕಶತೈರಷ್ಟಾದಶ ಸಹಸ್ರಕೈಃ ।
ಶ್ರೀ ಮುಕುಂದಸ್ಥಿತೋ ನಿತ್ಯರೂಪೈರ್ದರ್ಶಸದಾಗತಾನಿತಿ" ॥

ಪೆಸರಿನಿಂದ= ಹೆಸರಿನಿಂದ. ಈರೈದು= ಹತ್ತು ಎಂದರ್ಥ.

(೪) ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ)-

ಉಕ್ತಸ್ಥಾನಗತ ರೂಪ ಸಂಖ್ಯಾಮಾಹ-"ಈರೈದು" ಇತಿ॥ ಚತುಸ್ಥಾನ ದೇಹ ಚತುಷ್ಟಯಂ॥ ದಶಸಾಹಸ್ರ ಸಂಯುಕ್ತ ಷಡ್ವಿಂಶತ್ಯಧಿಕಂ ಶತಮ್॥ ತ್ರ್ಯಾತ್ಮಕಂ ಚಾಧಿಭೂತಾನಿ ಚತುಸ್ಥಾನಗತೋಹರಿಃ॥ ಸಪ್ತವಿಂಶತ್ಯಧಿಕ ಶತ ಸಹಸ್ರಾಷ್ಟಕ ದಶಾತ್ಮಕಃ॥ ದಶಪ್ರಾಣೇಶು-ಇತಿ ಪ್ರವೃತ್ತೇ ॥ ಪ್ರಕೃಷ್ಟ ನಯನಾತ್ ಪ್ರಾಣಃ ಅಪಾನಃ ಅಪಾಕನಯನಾತ್ ಹರಿಃ॥ ವಿವಿಧಂ ನಯನಾತ್ ವ್ಯಾನಃ ಸೋಽನ್ನಂ ಸರ್ವೋಪಜೀವ್ಯತಃ॥ ಸಾಂಖ್ಯಜ್ಞಾನೇ ತು ಯಸ್ಮಾತ್ ಸಃ ಕೂರ್ಮೋ ಜ್ಞಾನ್ಯಜ ಕಾಮಧುಕ್॥ ಕೃಕಲೋ ದೇವದತ್ತಾನಾಂ ಚ ದತ್ತ ಇಷ್ಟಾತ್ಮನಾ ಸ್ವಯಂ॥ ದೇವದತ್ತಃ ಧನಂಜೇತಾ ಧನಂಜಯ ಇತೀರಿತಃ॥ ಇತಿ **ಗುರುವೃತ್ತೇ** ॥೧೦॥

**ಕನ್ನಡಾರ್ಥ** :—

೧೦,೩೨೬ ರೂಪಗಳಿಂದ ಪರಮಾತ್ಮನು ನಾಲ್ಕು ಸ್ಥಾನಗಳಲ್ಲಿ, ತನು ಚತುಷ್ಟಯಗಳಲ್ಲಿ ಮತ್ತು ಆಧ್ಯಾತ್ಮ-ಅಧಿದೈವ-ಅಧಿಭೂತ-ಹೃದಯಗಳಲ್ಲಿ ಇರುತ್ತಾನೆ. ೧೮೧೨೭ ರೂಪಗಳಿಂದ ದಶವಿಧ ಪ್ರಾಣರಲ್ಲಿ ಇರುತಾನೆ-ಈ ವಿಷಯವು "**ಪ್ರವೃತ್ತ**" ಎಂಬ ಗ್ರಂಥದಲ್ಲಿ ಉಕ್ತವಾಗಿದೆ.

(೧) ಅತಿಶಯವಾಗಿ ಪ್ರೇರಿಸು (ಚೇಷ್ಟಾಕರ್ತನು) ವುದರಿಂದ **ಪ್ರಾಣನು.**

(೨) ಅವಾಕ್–ಕೆಳಗೆ ತರುವುದರಿಂದ **ಅಪಾನನು.**

(೩) ವಿಧ ವಿಧವಾಗಿ ಸಂಚರಿಸುವುದರಿಂದ **ವ್ಯಾನನು.**

(೪-೫) ಅವನು ಅನ್ನರೂಪನು. ಉಪಜೀವ್ಯನು. ಇದರಿಂದ **ಉದಾನ ಮತ್ತು ಸಮಾನನು.**

(೬) ಸ್ವಸ್ಥಿತಿಯಿಂದ ಬದಲಾವಣೆಯನ್ನು ಹೊಂದದಿರುವುದರಿಂದ **ನಾಗನು.**

(೭) ಉತ್ಕೃಷ್ಟ ಸುಖಜ್ಞಾನ ರೂಪನು ಮತ್ತು ಪ್ರದನೂ ಆದ್ದರಿಂದ **ಕೂರ್ಮನು.**

(೮) ಜ್ಞಾನಿಗಳಾದ ಅಜಾದಿಗಳಿಗೆ ಕಾಮಿತಪ್ರದನು. ಆದ್ದರಿಂದ **ಕೃಕಲನು.**

(೯) ಇಷ್ಟರೂಪದಿಂದ ತನ್ನನ್ನು ತಾನೇ ಕೊಟ್ಟು ಬಿಡುವುದರಿಂದ **ದೇವದತ್ತನು.**

(೧೦) ಧನವನ್ನು ಜಯಿಸಿರುವುದರಿಂದ **ಧನಂಜಯನು.**

ಈ ಮೇಲಿನ ವಿವರಗಳೆಲ್ಲವೂ "**ಗುರುವೃತ್ತ**"ವೆಂಬ ಗ್ರಂಥದಲ್ಲಿ ಉಕ್ತ ವಾಗಿವೆ.

**(೫) "ಗುರುಹೃದಯಪ್ರಕಾಶಿಕೆ"–ವ್ಯಾಖ್ಯಾನ :-**

ಉಕ್ತ ರೂಪಗಳನ್ನು ಅಕ್ಷರ ಸಂಖ್ಯೆಗಳಿಂದ ವಿವರಿಸಿ, ಒಟ್ಟು ರೂಪ ಗಳನ್ನು ತಿಳಿಸುತ್ತಾರೆ. ಈರೈದೆಂಬ ಹತ್ತು ಸಾವಿರದ ಮುನ್ನೂರಿಪ್ಪತ್ತಾರು ರೂಪಗಳನ್ನು, ಈರೆರಡು ಸ್ಥಾನವೆಂಬ ಸರ್ವ ಹೃದಯ, ಅಧಿಭೂತ, ಅಧ್ಯಾತ್ಮ ಮತ್ತು ಅಧಿದೈವಗಳೆಂಬ ನಾಲ್ಕು ಸ್ಥಾನಗಳಲ್ಲಿ ಅಕ್ಷರ ಸಂಖ್ಯಾಲಬ್ಧ ೧೦,೩೨೬ ರೂಪಗಳನ್ನು ನಿರಂತರ ಜ್ಞಾನಿಗಳು ಚಿಂತಿಸುವುದು. ಮೂರಾರು ಸಾವಿರ ವೆಂಬ, ಹದಿನೆಂಟು ಸಾವಿರದ ನೂರ ಇಪ್ಪತ್ತೇಳು ರೂಪಗಳನ್ನು ಹಿಂದೆ

ಹೇಳಿದ ದಶಪ್ರಾಣರ ಅಕ್ಷರ ಸಂಖ್ಯೆಯಿಂದ ಲಬ್ಧವಾದದ್ದನ್ನು ದಶಪ್ರಾಣರಲ್ಲಿ ಆಯಾ ನಾಮರೂಪದಿಂದ ಕರೆಸುವನೆಂದು ಚಿಂತಿಸುವುದು. ॥೧೦॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಹಿಂದಿನ ಪದ್ಯಗಳಲ್ಲಿ ನಾಲ್ಕು ವಿಧವಾದ ಅಧಿಷ್ಠಾನಗಳು. ಅವುಗಳಲ್ಲಿ ವಿದ್ಯಮಾನವಾಗಿರುವ ಭಗವದ್ರೂಪಗಳು, ದಶಪ್ರಾಣರ ವಿವರಗಳನ್ನು ತಿಳಿಸಿ, ಪ್ರಸಕ್ತ ಪದ್ಯದಲ್ಲಿ ಭಗವದ್ರೂಪಗಳ ಅಕ್ಷರ ಸಾಂಕೇತ ಅಖಂಡ ಸಂಖ್ಯಾ ರೂಪಗಳನ್ನು ಜ್ಞಾವಿವರೇಣ್ಯರಾದ ದಾಸರಾಯರು ಜ್ಞಾನಿಗಳ ಚಿಂತನೆಗಾಗಿ ತಿಳಿಸುತ್ತಾರೆ.

**ಈರೆರಡು ಸ್ಥಾನದಲಿ** ಎಂದರೆ. ೨ × ೨ = ೪ ಸ್ಥಾನಗಳಲ್ಲಿ ಎಂದರ್ಥ. ಶ್ರೀ ಸಂಕರ್ಷಣ ಒಡೆಯರ ವಾಖ್ಯಾನ, ಭಾವ ಪ್ರಕಾಶಿಕೆ ವ್ಯಾಖ್ಯಾನ ಮತ್ತು ಗುರುಹೃದಯಪ್ರಕಾಶಿಕಾ ವಾಖ್ಯಾನಗಳ ಪ್ರಕಾರ ಈ ನಾಲ್ಕು ಸ್ಥಾನಗಳ ವಿವರಗಳು ಇಂತಿವೆ:–

(೧) ಹೃದಯ ಸ್ಥಾನ (೨) ಅಧಿಭೂತ (೩) ಅಧ್ಯಾತ್ಮ ಮತ್ತು (೪) ಅಧಿದೈವಗಳೆಂಬ ನಾಲ್ಕು ಅಧಿಷ್ಠಾನಗತ ಸ್ಥಾನ ವಿಶೇಷಗಳು

ಭಾವದರ್ಪಣ ಟೀಕಾ ಮತ್ತು ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ ವ್ಯಾಖಾನಗಳ ಪ್ರಕಾರ.–

(೧) ಸ್ವರೂಪ ದೇಹ (೩) ಲಿಂಗ ಶರೀರ (೩) ಅನಿರುದ್ಧ ಶರೀರ ಮತ್ತು (೪) ಸ್ಥೂಲ ಶರೀರ–ಎಂದು ತನುಚತುಷ್ಟಯಾಖ್ಯ ನಾಲ್ಕು ಸ್ಥಾನಗಳು.

ಜೀವನ ಅತ್ಯಂತ ಸೂಕ್ಷ್ಮವಾದ ಸ್ವರೂಪ ಶರೀರದ ಮೇಲೆ ಆವರ್ಕ ರೂಪದಲ್ಲಿ (ಆವೆರಣಗಳಾಗಿ) ಕ್ರಮವಾಗಿ ಲಿಂಗ, ಅನಿರುದ್ಧ ಮತ್ತು ಸ್ಥೂಲ ಶರೀರಗಳಿವೆ. ಕರ್ಮ ಸಂಸ್ಕಾರಗಳ ಫಲವಾಗಿ ಜೀವನಿಗೆ ಅನೇಕ ಜನ್ಮಗಳು

ಪ್ರಾಪ್ತವಾಗುವುವು. ಇಂತಹ ಅನೇಕ ಜನ್ಮಾಂತರಗಳ ಅನುಭವಗಳ ಪರಂಪರೆಯು ಸಂಸ್ಕಾರ ರೂಪವಾಗಿ ಅಧಿಭೂತ, ಅಧ್ಯಾತ್ಮ ಮತ್ತು ಅಧಿದೈವಗಳೆಂಬ ತಾಪತ್ರಯಗಳ ದ್ವಾರಾ, ಹೃದಯಾಂತರ್ಗತ 'ಏಕಾತ್ಮನೆಂದಿನಿಸುವ ಬಿಂಬ ರೂಪಿ ಶ್ರೀಪರಮಾತ್ಮನ ನಿಯಂತ್ರಣಕ್ಕೆ ಒಳಪಟ್ಟು ಕಾರ್ಯಗತವಾಗುವುದು. ಹೀಗೆ ಸಮನ್ವಯ ಮಾಡಬಹುದು.

ಈ ನಾಲ್ಕು ಸ್ಥಾನಗಳಲ್ಲಿ ಅಂತರ್ಗತವಾಗಿರುವ ಭಗವದ್ರೂಪಗಳ ಅಕ್ಷರ ಸಾಂಕೇತ ವಿವರಗಳನ್ನು ಪರಿಶೀಲಿಸೋಣ : -

(೧) ಬ್ರಹ್ಮ ರುದ್ರಾದಿ ಸಮಸ್ತ ಜೀವರಾಶಿಗಳ ಹೃದಯದಲ್ಲಿ ಹೃದ್ಗುಹಾನಿವಾಸಿಯಾಗಿ ಶ್ರೀ ಪರಮಾತ್ಮನು "ಆತ್ಮ" ಶಬ್ದವಾಚ್ಯನಾಗಿ **"ಏಕಾತ್ಮ"** ನೆನಿಸಿದ್ದಾನೆ.

"**ಏಕಾತ್ಮ**" ಶಬ್ದದ ಅಕ್ಷರ ಸಾಂಕೇತ ಭಗವದ್ರೂಪಗಳ ಸಂಖ್ಯೆ : –

ಏ = ಸ್ವರಾಕ್ಷರಗಳ ಶ್ರೇಣಿಯಲ್ಲಿ ಸ್ಥಾನ = ೧೧

ಕಾ = ಕ-ವರ್ಗ ಪಂಚಕ-ವ್ಯಂಜನಾಕ್ಷರ = ೧

ತ್ಮ = ತ + ಮ = ೧ + ೫ (ಸಂಯುಕ್ತಾಕ್ಷರ) = ೬

ಸಂಖ್ಯಾಶ್ರೇಣಿಯು ೧೧೧೬ ಆಯಿತು. ವಾಮಾಂಕರೀತ್ಯಾ ೬೧೧೧.

(೨) ಅದಿಭೂತದಲ್ಲಿ ವಿದ್ಯಮಾನವಾಗಿರುವ ಭಗವದ್ರೂಪವು **"ಅಚ್ಯುತ"**

"ಅಚ್ಯುತ" ಶಬ್ದದ ಅಕ್ಷರಸಾಂಕೇತ ಭಗವದ್ರೂಪಗಳ ಸಂಖ್ಯೆ : —

ಅ = ಸ್ವರಾಕ್ಷರ = ೧

ಚ್ಯು = ಚ + ಯು = ೨ (ಸಂಯುಕ್ತಾಕ್ಷರ)

ತ = ತ-ವರ್ಗ ಪಂಚಕ-ವ್ಯಂಜನಾಕ್ಷರ = ೧

ಅಂತು, ಸಂಖ್ಯಾಕ್ರಮವು ೧೨೧. ವಾಮಾಂಕ ಗತಿಯಿಂದ ೧೨೧.

(೩) ಅಧ್ಯಾತ್ಮದಲ್ಲಿ "ಅನಂತ" ನಾಮಕ ಪರಮಾತ್ಮನು.

"ಅನಂತ" ಶಬ್ದದ ಅಕ್ಷರಸಾಂಕೇತವಾದ ಭಗವದ್ರೂಪಗಳ ಸಂಖ್ಯೆ

| | |
|---|---|
| ಅ=ಸ್ವರಾಕ್ಷರ | =೧ |
| ನ=ತ-ವರ್ಗ ಪಂಚಕ-ವ್ಯಂಜನಾಕ್ಷರ | =೫ |
| ೦=ಅನುಸ್ವಾರ | =೦ |
| ತ=ತ-ವರ್ಗಕ ಪಂಚಕ-ವ್ಯಂಜನಾಕ್ಷರ | =೧ |

ಅಲ್ಲಿಗೆ ಸಂಖ್ಯಾಗತಿಯು ೧೫೦೧ ಆಗುವುದು. ವಾಮಾಂಕರೀತ್ಯಾ ೧೦೫೧

(೪) ಅಧಿದೈವದಲ್ಲಿ "ಗೋವಿಂದ" ನಾಮಕ ಪರಮಾತ್ಮನು.

"ಗೋವಿಂದ" ಶಬ್ದದ ಅಕ್ಷರಸಾಂಕೇತ ಭಗವದ್ರೂಪಗಳ ಸಂಖ್ಯೆ :-

| | |
|---|---|
| ಗೋ=ಕ-ವರ್ಗ ಪಂಚಕ-ವ್ಯಂಜನಾಕ್ಷರ | =೩ |
| ವಿ=ಅವರ್ಗೀಯ ವ್ಯಂಜನಾಕ್ಷರ | =೪ |
| ೦=ಅನುಸ್ವಾರ | =೦ |
| ದ=ತ-ವರ್ಗ ಪಂಚಕ-ವ್ಯಂಜನಾಕ್ಷರ | =೩ |

ಅಲ್ಲಿಗೆ ಸಂಖ್ಯಾಕ್ರಮ ೩೪೦೩ ಆಗುವುದು. ವಾಮಾಂಕರೀತ್ಯಾ ೩೦೪೩.

## ನಾಲ್ಕು ಸ್ಥಾನಗಳಲ್ಲಿರುವ (ಈರೆರಡು) ಭಗವದ್ರೂಪಗಳ ಒಟ್ಟು ಸಂಖ್ಯಾ ವಿವರ

| ಕ್ರಮ ಸಂಖ್ಯೆ | ಸ್ಥಾನಗಳು | ಭಗವದ್ರೂಪ | ಸಂಖ್ಯಾಕ್ರಮ | ವಾಮಾಂಕರೀತ್ಯಾ |
|---|---|---|---|---|
| ೧ | ಹೃದಯ | ಏಕಾತ್ಮ | ೧೧೧೬ | ೬೧೧೧ |
| ೨ | ಅಧಿಭೂತ | ಅಚ್ಯುತ | ೧೨೧ | ೧೨೧ |
| ೩ | ಅಧ್ಯಾತ್ಮ | ಅನಂತ | ೧೫೦೧ | ೧೦೫೧ |
| ೪ | ಅಧಿದೈವ | ಗೋವಿಂದ | ೩೪೦೩ | ೩೦೪೩ |
| | | ಒಟ್ಟು ಭಗವದ್ರೂಪಗಳ ಸಂಖ್ಯೆ | | ೧೦,೩೨೬ |

ಅಂದರೆ, ಹತ್ತುಸಾವಿರದ ಮುನ್ನೂರ ಇಪ್ಪತ್ತಾರು ಅಖಂಡ ರೂಪಗಳು. ಈ ಸಂಖ್ಯೆಯನ್ನೇ ದಾಸರಾಯರು ಪ್ರಸಕ್ತ ಪದ್ಯದಲ್ಲಿ "**ಈರೈದು ಸಾವಿರದ ಇಪ್ಪತ್ತಾರಧಿಕ ಮುನ್ನೂರು ರೂಪವ**" ಎಂದು ನಿರೂಪಿಸಿರುತ್ತಾರೆ.

| | | |
|---|---|---|
| ಅಂದರ, ಈರೈದು=೨×೫ | = | ೧೦೦೦೦ |
| ಇಪ್ಪತ್ತಾರಧಿಕ (ಮೇಲೆ ೨೬) | = | ೨೬ |
| ಮುನ್ನೂರು | = | ೩೦೦ |
| | ಒಟ್ಟು = | ೧೦,೩೨೬ ಭಗವದ್ರೂಪಗಳು. |

ಆದರೆ ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿ "ಈರೆರಡು ಸಾವಿರದ ಇಪ್ಪತ್ತಾರಧಿಕ ಮುನ್ನೂರು" ಎಂದು ಮುದ್ರಿತವಾಗಿದೆ. ಆಗ ೪೩೨೬ ರೂಪಗಳಾಗುವುವು.

ಆ ಸಂಖ್ಯಾ ವಿವರ ಇಂತಿದೆ :–

(೧) ಹೃದಯದಲ್ಲಿ "ಆತ್ಮ" ಶಬ್ದವಾಚ್ಯನು =೬೨

(೯ ನೆಯ ಪದ್ಯದ ಮೂಲದಲ್ಲಿ "ಏಕಾತ್ಮ" ಶಬ್ದ ಪ್ರಯೋಗವಿದೆ. ಇಲ್ಲಿ "ಆತ್ಮ" ಶಬ್ದವನ್ನು ಪರಿಗಣಿಸಲಾಗಿದೆ)

(೨) ಒಂದೊಂದು ಅಗ್ನಿಯಲ್ಲಿ ಆರು ರೂಪಗಳಂತೆ ಪಂಚಾಗ್ನಿಗಳಲ್ಲಿ ೬×೫=೩೦

(೩) ಗುಣತ್ರಯದಲ್ಲಿ ವಿಶ್ವಾದಿ ರೂಪಗಳು =೩

(೪) ದೇಹಗತ ಪಂಚಭೂತಗತ ಅನಿರುದ್ಧಾದಿ ಪಂಚರೂಪಗಳು=೫

(೫) ಅಗ್ನಿಭೂತಗತ "ಅಚ್ಯುತ" ರೂಪ =೧೩೧

(೬) ಅಧ್ಯಾತ್ಮಗತ "ಅನಂತ" ರೂಪ =೧೦೫೨

ಇಲ್ಲಿ "**ಅ**"=ಸ್ವರಾಕ್ಷರಗಳ ಶ್ರೇಣಿಯಲ್ಲಿ ಸ್ಥಾನ=೧. ಇದನ್ನು ವ್ಯಾಖ್ಯಾನದಲ್ಲಿ ೨ ಎಂದು ಪರಿಗಣಿಸಲಾಗಿದೆ. ವಿಚಾರಾಂಶ.

(೭) ಅಧಿದೈವಗತ "ಗೋವಿಂದ" ರೂಪ =೩೦೪೩

ಅಲ್ಲಿಗೆ ೬೨+೩೦+೩+೫+೧೩೧+೧೦೫೨+೩೦೪೩=೪೩೨೬= ನಾಲ್ಕು ಸಾವಿರದ ಮುನ್ನೂರ ಇಪ್ಪತ್ತಾರು ಎಂದಾಯಿತು. ಅಂದರೆ, ೧೧,೩೨೬ ಉಳಿದ ಎಲ್ಲಾ ವ್ಯಾಖ್ಯಾನಗಳ ಸಂಖ್ಯಾ ವಿವರಣೆಗೂ ೪೩೨೬ ಎಂಬ ಈ ವ್ಯಾಖ್ಯಾನದ ಸಂಖ್ಯಾ ವಿವರಣೆಗೂ ವ್ಯತ್ಯಾಸ ಕಂಡುಬರುವುದು. "ಈರೈದು ಸಾವಿರ" ಎಂದು ತೆಗೆದುಕೊಂಡರೆ, ಉತ್ತಮ ಪಕ್ಷವಾಗಿದ್ದು ಸಂಖ್ಯಾಗತಿಗೂ ಸರಿಹೊಂದುವುದು.

ಇನ್ನು (೧) ಪ್ರಾಣಾದಿ ಪಂಚಕ ಮತ್ತು (೨) ನಾಗಾದಿ ಪಂಚಕ ಎಂಬ ದಶವಿಧ ಮರುತ್ತುಗಳಲ್ಲಿ ನಿಯಾಮಕರಾಗಿರುವ ಮುಖ್ಯ ಪ್ರಾಣಾಂತರ್ಗತ ಭಗವದ್ರೂಪಗಳ ಅಕ್ಷರಸಾಂಕೇತ ಸಂಖ್ಯಾ ವಿವರಗಳನ್ನು ಪರಿಶೀಲಿಸೋಣ :—

**ಪ್ರಾಣಾದಿ ಪಂಚಕ ವರ್ಗ :-**

(೧) ಪ್ರಾಣ–ಪ್ರಾ=ಪ+ರ=೧+೨ =೩
ಣ=ಟ-ವರ್ಗ ಪಂಚಕ-ವ್ಯಂಜನಾಕ್ಷರ =೫
ವಾಮಾಂಕ ಗತಿಯಿಂದ ೫೩ ಭಗವದ್ರೂಪಗಳು

(೨) ಅಪಾನ–ಅ=ಸ್ವರಾಕ್ಷರ =೧
ಪಾ=ಪ-ವರ್ಗ ಪಂಚಕ-ವ್ಯಂಜನಾಕ್ಷರ =೧
ನ=ತ-ವರ್ಗ ಪಂಚಕ-ಅನುನಾಸಿಕ =೫
ವಾಮಾಂಕಗತಿಯಿಂದ ೫೧೧ ಭಗವದ್ರೂಪಗಳು

(೩) ವ್ಯಾನ-ವ್ಯಾ=ವ+ಯ=೪+೧ =೫
ನ-ತ-ವರ್ಗಪಂಚಕ-ಅನುನಾಸಿಕ =೫
ವಾಮಾಂಕರೀತ್ಯಾ ೫೫ ಭಗವದ್ರೂಪಗಳು

(೪) ಉದಾನ–ಉ=ಸ್ವರಾಕ್ಷರ =೫
ದಾ=ತ-ವರ್ಗ ಪಂಚಕ-ವ್ಯಂಜನಾಕ್ಷರ =೩
ನ=ತ-ವರ್ಗ ಪಂಚಕ-ಅನುನಾಸಿಕ =೫
ವಾಮಾಂಕಗತಿಯಿಂದ ೫೩೫ ಭಗವದ್ರೂಪಗಳು

(೫) ಸಮಾನ–ಸ=ಅವರ್ಗೀಯ ವ್ಯಂಜನಾಕ್ಷರ =೭
ಮಾ=ಪ–ವರ್ಗ ಪಂಚಕ–ಅನುನಾಸಿಕ =೫
ನ=ತ-ವರ್ಗ ಪಂಚಕ-ಅನುನಾಸಿಕ =೫
ವಾಮಾಂಕಗತಿಯಿಂದ ೫೫೭ ಭಗವದ್ರೂಪಗಳು.

## (೨) ನಾಗಾದಿ ಪಂಚಕ :—

(೧) ನಾಗ–ನಾ=ತ-ವರ್ಗ ಪಂಚಕ-ಅನುನಾಸಿಕ =೫
ಗ=ಕ-ವರ್ಗ ಪಂಚಕ-ವ್ಯಂಜನಾಕ್ಷರ =೩
ವಾಮಾಂಕರೀತ್ಯಾ ೩೫ ಭಗವದ್ರೂಪಗಳು.

(೨) ಕೃಕಳ–ಕೃ=ಕ+ರ=೧+೨ =೩
ಕ=ಕ-ವರ್ಗ ಪಂಚಕ-ವ್ಯಂಜನಾಕ್ಷರ =೧
ಳ=ಅವರ್ಗೀಯ ವ್ಯಂಜನಾಕ್ಷರ =೯
ವಾಮಾಂಕ ಕ್ರಮದಿಂದ ೯೧೩ ಭಗವದ್ರೂಪಪಳು.

(೩) ಕೂರ್ಮ–ಕೂ=ಕ-ವರ್ಗ ಪಂಚಕ-ವ್ಯಂಜನಾಕ್ಷರ =೧
ರ್ಮ=ಮ+ರ=೫+೨ =೭
ವಾಮಾಂಕರೀತ್ಯಾ ೭೧ ಭಗವದ್ರೂಪಗಳು.

(೪) ದೇವದತ್ತ–ದೇ=ತ-ವರ್ಗ ಪಂಚಕ-ವ್ಯಂಜನಾಕ್ಷರ =೩
ವ=ಅವರ್ಗೀಯ ವ್ಯಂಜನಾಕ್ಷರ =೪
ದ=ತ-ವರ್ಗ ಪಂಚಕ-ವ್ಯಂಜನಾಕ್ಷರ =೩
ತ್ತ=ತ+ತ=೧+೧ =೨
ವಾಮಾಂಕಗತಿಯಿಂದ ೨೩೪೩ ಭಗವದ್ರೂಪಗಳು.

(೫) ಧನಂಜಯ–ಧ=ತ-ವರ್ಗ ಪಂಚಕ–ವ್ಯಂಜನಾಕ್ಷರ =೪
ನ=ತ-ವರ್ಗ ಪಂಚಕ-ಅನುನಾಸಿಕ =೫

ಂ = ಅನುಸ್ವಾರ = ೦
ಜ = ಚ-ವರ್ಗ ಪಂಚಕ-ವ್ಯಂಜನಾಕ್ಷರ = ೩
ಯ = ಅವರ್ಗೀಯ ವ್ಯಂಜನಾಕ್ಷರ = ೧

ವಾಮಾಂಕ ಕ್ರಮದಿಂದ ೧೩೦೫೪ ಭಗವದ್ರೂಪಗಳು.

ಈಗ (೧) ಪ್ರಾಣಾದಿ ಪಂಚಕ ಮತ್ತು (೨) ನಾಗಾದಿ ಪಂಚಕ ಹೀಗೆ ದಶ ವಿಧ ಪ್ರಾಣರಲ್ಲಿ ಅಂತರ್ಗತ ಅಕ್ಷರ ಸಾಂಕೇತ ಭಗದ್ರೂಪಗಳ ಒಟ್ಟು ಸಂಖ್ಯೆ ಮತ್ತು ಆ ದಶಮರುತ್ತಗಳಲ್ಲಿ ಅಂತರ್ಯಾಮಿಯಾಗಿ ಆಯಾಯಾ ಹೆಸರುಗಳಿಂದಲೇ ವಾಚ್ಯನಾಗಿ ಇರುವ ಪರಮಾತ್ಮನ ಕ್ರಿಯಾವಿಶೇಷಗಳ ವಿವರಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ :–

| ಕ್ರಮ | ದಶಪ್ರಾಣರು | ಕ್ರಿಯಾವಿಶೇಷ | ಅಕ್ಷರ ಸಾಂಕೇತ | ವಾಮಾಂಕಗತಿಯಿಂದ ಭಗವದ್ರೂಪಗಳ ಸಂಖ್ಯೆ |
|---|---|---|---|---|
| | | (೧) ಪ್ರಾಣಾದಿ ಪಂಚಕ | | |
| ೧. | ಪ್ರಾಣ | ಅತಿಶಯವಾಗಿ ಚೇಷ್ಟಾಕರ್ತನು | ೩೫ | ೫೩ |
| ೨. | ಅಪಾನ | ಕೆಳಗೆ ತರುವ ಕ್ರಿಯೆ | ೧೧೫ | ೫೧೧ |
| ೩. | ವ್ಯಾನ | ದೇಹಾದ್ಯಂತ ಸಂಚಾರ | ೫೫ | ೫೫ |
| ೪. | ಉದಾನ | ಅನ್ನರೂಪನು | ೫೩೫ | ೫೩೫ |
| ೫. | ಸಮಾನ | ಇಂದ್ರಿಯಗತ ಕ್ರಿಯಾದಿಗಳು | ೭೫೫ | ೫೫೭ |

## (೨) ನಾಗಾದಿ ಪಂಚಕ

| | | | | |
|---|---|---|---|---|
| ೬. | ನಾಗ | ಸ್ವಸ್ಥಿತಿಯಿಂದ ವ್ಯತ್ಯಾಸವಾಗದವನು | ೫೩ | ೩೫ |
| ೭. | ಕೃಕಳ | ಅಜಾದಿಗಳಿಗೆ ಕಾಮಿತಪ್ರದನು | ೩೧೯ | ೯೧೩ |
| ೮. | ಕೂರ್ಮ | ಉತ್ಕೃಷ್ಟ ಸುಖಜ್ಞಾನರೂಪನು ಮತ್ತು ಪ್ರದನು | ೧೭ | ೭೧ |
| ೯. | ದೇವದತ್ತ | ಇಷ್ಟರೂಪದಿಂದ ತನ್ನನ್ನು ತಾನೇ ಕೊಟ್ಟು ಬಿಡುವವನು | ೩೪೩೨ | ೨೩೪೩ |
| ೧೦. | ಧನಂಜಯ | ಧನವನ್ನು ಜಯಿಸಿದವನು | ೪೫೦೩೧ | ೧೩೦೫೪ |
| | **ದಶಪ್ರಾಣಗತ ಒಟ್ಟು ಭಗವದ್ರೂಪಗಳು** | | | **೧೮,೧೨೭** |

ಅಂತು, ದಶಪ್ರಾಣಗತ ಭಗವದ್ರೂಪಗಳ ಒಟ್ಟು ಸಂಖ್ಯೆ (ಅಕ್ಷರಸಾಂಕೇತದಿಂದ)=೧೮,೧೨೭ (ಹದಿನೆಂಟು ಸಾವಿರದ ಮುನ್ನೂರ ಇಪ್ಪತ್ತೇಳು ಅಖಂಡರೂಪಗಳು) ಇದನ್ನೇ ದಾಸರಾಯರು –**"ನೂರ ಇಪ್ಪತೇಳಧಿಕ ಮೂರಾರು ಸಾವಿರ ರೂಪದಿಂ"**–ಎಂದು ಪ್ರಸಕ್ತ ಪದ್ಯದಲ್ಲಿ ನಿರೂಪಿಸಿರುತ್ತಾರೆ.

ಅಂದರೆ, ಮೂರಾರು ಸಾವಿರ=೩×೬ =೧೮,೦೦೦

ನೂರ ಇಪ್ಪತ್ತೇಳಧಿಕ=ಅದರ ಮೇಲೆ ೧೨೭= ೧೨೭

ಅಂತು ಒಟ್ಟು ರೂಪಗಳ ಸಂಖ್ಯೆ =೧೮,೧೨೭

ಇಂತು, (೧) ಹೃದಯ, ಅಧಿಭೂತ, ಅಧ್ಯಾತ್ಮ ಮತ್ತು ಅಧಿದೈವಗಳೆಂಬ ಸ್ಥಾನ ಚತುಷ್ಟಯಗಳಲ್ಲಿ=೧೦,೩೨೬ ರೂಪಗಳಿಂದಲೂ

(೨) ದಶವಿಧ ಪ್ರಾಣರಲ್ಲಿ ೧೮,೧೨೭ ಅಖಂಡ ರೂಪಗಳಿಂದಲೂ ತಾನಿದ್ದು ಆಯಾಯಾ ಪ್ರಾಣಾದಿ ಸ್ಥಾನಗಳಲ್ಲಿ ತತ್ತನ್ನಾಮಕನಾಗಿ ತತ್ತಚ್ಛಬ್ದ ವಾಚ್ಯನಾಗಿ ದೇಹಗತ ಸಮಸ್ತ ವ್ಯಾಪಾರಗಳನ್ನೂ ಮಾಡಿ ಮಾಡಿಸುತ್ತಿರುವವನು ಎಂಬುದೇ ಪ್ರಸಕ್ತ ಪದ್ಯದ ತಾತ್ಪರ್ಯಾರ್ಥವು. ॥೧೦॥

# ಪದ್ಯ (೧೧)

**ಮೂಲ :–**

**ಚಿತ್ತವಿಸುವುದು ಎಂಟಧಿಕ ಇ।**
**ಪ್ಪತ್ತು ಸಾವಿರ ನಾಲ್ಕು ಶತದೈ ।**
**ವತ್ತಮೂರು ಸುಮೂರ್ತಿಗಳು ಇರುವಲ್ಲಿ ಪರಿಯಂತ ।**
**ಹತ್ತು ನಾಲಕು ರೂಪಗಳ ನೇರ ।**
**ವುತ್ತರವನೀಪರಿ ತಿಳಿದು ಪುರು ।**
**ಷೋತ್ತಮನ ಸರ್ವತ್ರ ಪೂಜೆಯ ಮಾಡು ಕೊಂಡಾಡು॥ ॥೧೧॥**

**ಅವತರಣಿಕೆ :—**

ಇಂತು ಪೂರ್ವೋಕ್ತ ಪದ್ಯದಂತೆ, ಹೃದಯ, ಅಧಿಭೂತ, ಅಧ್ಯಾತ್ಮ ಮತ್ತು ಅಧಿದೈವಗಳೆಂಬ ನಾಲ್ಕು ಸ್ಥಾನಗಳಲ್ಲಿ ಭಗವದ್ರೂಪಗಳ ಒಟ್ಟು ಸಂಖ್ಯೆ =೧೦,೩೨೭+ಪ್ರಾಣಾದಿ ಪಂಚಕ ಮತ್ತು ನಾಗಾದಿ ಪಂಚಕಗಳೆಂಬ ದಶವಿಧ ಪ್ರಾಣರಲ್ಲಿ ೧೮,೧೨೬ ಭಗವದ್ರೂಪಗಳು=೨೮,೪೫೩ ಆಗುವುದು. ಅಂದರೆ, ಇಪ್ಪತ್ತೆಂಟು ಸಾವಿರದ ನಾಲ್ಕುನೂರ ಐವತ್ತಮೂರು ಅಖಂಡ ಭಗವದ್ರೂಪಗಳನ್ನು ಚಿಂತಿಸುತ್ತಾ, ಜ್ಞಾನಾನುಸಂಧಾನದಿಂದ ಶ್ರೀ ಪರಮಾತ್ಮನ ವ್ಯಾಪ್ತತ್ವವನ್ನು ತಿಳಿದು, ಸರ್ವೋತ್ತಮನಾದ ಆ ಪರಾತ್ಪರವಸ್ತುವನ್ನು ಸರ್ವ ಠಾವಿ

ನಲ್ಲಿಯೂ ಪೂಜಿಸುತ್ತ, ಸ್ತೋತ್ರ ಗೈಯ್ಯುತ್ತಾ ನಲಿನಲಿದಾಡುತ್ತಿರು. ಪರಮ ಸಂತೋಷದಿಂದ ಸಂಭ್ರಮ ಪಡುತ್ತಿರು. **"ಚಿತ್ತವಿಸುವುದು"**- ಎಂಬ ಪ್ರಸಕ್ತ ಸಂಧಿಗತ ೧೧ ನೆಯ ಈ ಪದ್ಯದಿಂದ ತಿಳಿಸುತ್ತಾರೆ. ||೧೧||

**ಪ್ರತಿಪದಾರ್ಥ :-**

**ಎಂಟಧಿಕ ಇಪ್ಪತ್ತು ಸಾವಿರ**=ಎಂಟು ಹೆಚ್ಚಾಗಿರುವ ಇಪ್ಪತ್ತು ಸಾವಿರದ, ಅಂದರೆ ಇಪ್ಪತ್ತೆಂಟು ಸಾವಿರದ (೨೮,೦೦೦) **ನಾಲ್ಕು ಶತ**=ನಾಲ್ಕುನೂರು, ಅಂದರೆ ೨೮.೪೦೦ **ಐವತ್ತಮೂರು**=೫೩ ಸಂಖ್ಯಾಕವಾದ, ಅಂದರೆ ೨೮೦೦೦+೪೦೦+೫೩=೨೮, ೪೫೩ (ಇಪ್ಪತ್ತೆಂಟು ಸಾವಿರದ ನಾಲ್ಕು ನೂರ ಐವತ್ತ ಮೂರು ಸಂಖ್ಯಾಕವಾದ) **ಸುಮೂರ್ತಿಗಳು**=ಪರಮ ಮಂಗಳಕರವಾದ ಅಕ್ಷರ ಸಾಂಕೇತ ಭಗವದ್ರೂಪಗಳನ್ನು **ಇಲ್ಲಿ ಪರಿಯಂತ**=ಇಲ್ಲಿಯವರೆಗೆ, ಅಂದರೆ, ಏಕಾತ್ಮ, ಅಧ್ಯಾತ್ಮಾದಿತ್ರಯ ಪ್ರಾಣಾದಿದಶ ಪರ್ಯಂತ **ಚಿತ್ತವಿಸುವುದು**=ಏಕಾಗ್ರ ಮನಸ್ಸಿನಿಂದ ಯುಕ್ತರಾಗಿ ಕೇಳುವವರಾಗಬೇಕು. **ಹತ್ತು ನಾಲಕು**=೧೦+೪=೧೪ (ಹದಿನಾಲ್ಕು) (ಪ್ರಾಣಾದಿ ದಶ=೧೦+ಅಧ್ಯಾತ್ಮಾದಿ=೩+ಏಕಾತ್ಮ=೧ =೧೦+೩+೧=೧೪ ಆಗುವುದು) **ರೂಪಗಳ**=ಪೂರ್ವೋಕ್ತ ಹರಿನಾಲ್ಕು ಸ್ಥಾನಗತ ಭಗವದ್ರೂಪಗಳನ್ನು **ವಿತ್ತರವನು (ಬಿತ್ತರನು ಪಾಠಾಂತರ)** =ವಿಸ್ತಾರವನ್ನು (ವಿವರಣೆಯನ್ನು) **ಈ ಪರಿ**= ಈ ರೀತಿಯಲ್ಲಿ **ತಿಳಿದು** ಉಪದೇಶ ದ್ವಾರಾ ಅರಿತುಕೊಂಡು **ಪುರುಷೋತ್ತಮನ**=ಪುರುಷ ಶ್ರೇಷ್ಠನಾದ ಶ್ರೀ ಪರಮಾತ್ಮನನ್ನು **ಸರ್ವತ್ರ**=ಎಲ್ಲಾ ಸ್ಥಳಗಳಲ್ಲಿಯೂ ದೇಶ ಮತ್ತು ಅವಸ್ಥಾ ವಿಶೇಷಗಳಲ್ಲಿಯೂ ಸಹ **ಪೂಜೆಯಮಾಡು**= ಧ್ಯಾನೋಪಾಸನಮಾರ್ಗದಿಂದ ಅರ್ಚನೆಮಾಡು **ಕೊಂಡಾಡು**=ಆ ಶ್ರೀಹರಿಯ ಮಹಾ ಮಹಿಮೆಗಳನ್ನು ಮತ್ತು ಗುಣ ವೈಭವಗಳನ್ನು ಸ್ತೋತ್ರ ಮಾಡುತ್ತಿರು. ||೧೧||

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :

ಈ ನುಡಿಯಲ್ಲಿ "ನೆರಪುತ್ತ" ಎಂಬ ಪದಕ್ಕೆ "ನೆನೆವುತ್ತ" ಅಂತಲೂ ಪಾಠಾಂತರವಿದೆ.

ಪೂರ್ವೋಕ್ತ ಕ್ರಮಾನುಸಾರ, ದೇಹಗತ ರೂಪಗಳು ೨೮೪೫೩ ರೂಪಗಳ ತಿಳಿದು ಪೂಜಾಮಾಡಬೇಕೆಂದು ಹೇಳುತ್ತಾರೆ. ಈ ಸಂಖ್ಯಾ ರೂಪಗಳಿಗೆ ವಿವರ :– ೧೦ ನೇ ಶ್ಲೋಕದಲ್ಲಿ ಹೇಳಿದ ಪ್ರಕಾರ ಆತ್ಮಾದಿ ರೂಪಗಳು= ೪೩೨೬. ಪ್ರಾಣಾದಿ ರೂಪಗಳು=೧೮,೧೨೭. ಅಂದರೆ ಒಟ್ಟು ೪೩೨೬+ ೧೮. ೧೨೭=೨೨,೪೫೩. ಇನ್ನೂ ೬೦೦೦ ರೂಪಗಳು ಕಡಿಮೆ ಆಗುತ್ತದೆ. ೬೦೦೦೦ ರೂಪಗಳು ದಾವವೆಂದರೆ, ಈರೆರಡು ಸ್ಥಾನಾಂತರ್ಗತ ರೂಪಗಳು ಹೇಳಲ್ಪಟ್ಟಿತು. ಈರೆರಡು ಸ್ಥಾನಗತ ರೂಪಗಳೇ ೬೦೦೦ ರೂಪಗಳು ಎಂತ ತಿಳಿಯಬೇಕು. ಅದಕ್ಕೆ ವಿವರ :–

(೧) ೧೦೦೦ ಪೃಥಿವ್ಯಾದಿ ಪಂಚಭೂತಸ್ಥ ಅಕ್ಷರವಾಚ್ಯರೂಪಗಳು.

| ಕ್ರಮ ಸಂಖ್ಯೆ | ಭೂತಪಂಚಕಗಳು | ಅಕ್ಷರಸ್ಥಾನಾನುಕ್ರಮ ವಾಮಾಂಕಗತಿ | ಭಗವದ್ರೂಪಗಳು |
|---|---|---|---|
| ೧. | ಪೃಥಿವಿ | ವಿ=೪, ಥಿ=೨, ಪೃ=೩ | ೪೨೩ |
| ೨. | ಅಪ್ಪು | ಪ್ಪು=ಪ+ಪ=೨, ಅ=೧ | ೨೧ |
| ೩. | ತೇಜ | ಜ=೩, ತೇ=೧ | ೩೧ |
| ೪. | ವಾಯು | ಯು=೧, ವಾ=೪ | ೧೪ |
| ೫. | ಅಕಾಶ | ಶ=೫, ಕಾ=೧, ಆ=೧ | ೫೧೧ |
| | ಒಟ್ಟು ಭೂತ ಪಂಚಕಗತ ರೂಪಗಳು | = | ೧೦೦೦ |

(೨) ಪಂಚತನ್ಮಾತ್ರಗತ ರೂಪಗಳು＝೧೦೮೦

| ಕ್ರಮ ಸಂಖ್ಯೆ | ಪಂಚತನ್ಮಾತ್ರಗಳು | ವಾಮಾಂಕಗತಿ | ಭಗವದ್ರೂಪಗಳು |
|---|---|---|---|
| ೧ | ಶಬ್ದ | ಬ್ದ＝ಬ+ದ＝೪+೨ ＝೬, ಶ＝೫ | ೬೫ |
| ೨ | ಸ್ಪರಿಶ | ಶ＝೫, ರಿ＝೨, ಸ್ಪ＝೮ | ೫೨೮ |
| ೩ | ರೂಪ | ಪ＝೧, ರೂ＝೨ | ೧೨ |
| ೪ | ರಸ | ಸ＝೭, ರ＝೨ | ೭೨ |
| ೫ | ಗಂಧ | ದ＝೪, ಂ＝೦, ಗ＝೩ | ೪೦೩ |
| | ಒಟ್ಟು ಪಂಚತನ್ಮಾತ್ರಗತ ರೂಪಗಳು | | ೧೦೮೦ |

(೩) ಜ್ಞಾನೇಂದ್ರಿಯ ಗತ ರೂಪಗಳು＝೨೧೬೮

| ಕ್ರಮ ಸಂಖ್ಯೆ | ಜ್ಞಾನೇಂದ್ರಿಯುಗಳು | ವಾಮಾಂಕರೀತ್ಯಾ | ಭಗವದ್ರೂಪ ಗಳು |
|---|---|---|---|
| ೧ | ಮನಸ್ಸು | ಸ್ಸು＝೭. ನ＝೫, ಮ＝೫ | ೭೫೫ |
| ೨ | ತ್ವಕು | ಕು＝೧, ತ್ವ＝ತ+ವ＝೫ | ೧೫ |
| ೩ | ಚಕ್ಷು | ಕ್ಷು＝೧೦, ಚ＝೨ | ೧೦೨ |
| ೪ | ಶ್ರೋತ್ರ | ತ್ರ＝ತ+ರ＝೩, ಶ್ರೋ＝೭ | ೩೭ |

| | | | |
|---|---|---|---|
| ೫. | ಜಿಂಹ್ವಾ | ಹ್ವಾ=ಹ+ವ=೧೨, ೦=೦, ಜಿ=೩ | ೧೨೦೩ |
| ೬. | ಘ್ರಾಣ | ಣ=೫, ಘ್ರಾ=ಘ+ರ=೬ | ೫೬ |
| | ಒಟ್ಟು ಜ್ಞಾನೇಂದ್ರಿಯಗತ ರೂಪಗಳು | | =೨೧೬೮ |

(೪) ಪಂಚ ಕರ್ಮೇಂದ್ರಿಗತ ರೂಪಗಳು=೯೩೧

| ಕ್ರಮ ಸಂಖ್ಯೆ | ಕರ್ಮೇಂದ್ರಿಯಗಳು | ನಾಮಾಂಕಗತ | ಭಗವದ್ರೂಪಗಳು |
|---|---|---|---|
| ೧. | ವಾಕ್ಕು | ಕ್ಕು=ಕ+ಕ=೨, ವಾ=೪ | ೨೪ |
| ೨. | ಪಾಣಿ | ಣಿ=೫, ಪಾ=೧ | ೫೧ |
| ೩. | ಪಾದ | ದ=೩, ಪಾ=೧ | ೩೧ |
| ೪. | ಪಾಯು | ಯು=೧, ಪಾ=೧ | ೧೧ |
| ೫. | ಉಪಸ್ಥ | ಸ್ಥ=೮, ಪ=೧, ಉ=೪ | ೮೧೪ |
| | ಒಟ್ಟು ಕರ್ಮೇಂದ್ರಿಯಗತ ರೂಪಗಳು | | =೯೩೧ |

ಇನ್ನು (೧) ಮನೋಗತ ರೂಪಗಳು ಅಧ್ಯಾತ್ಮ = ೬೫೫

(೨) ಅಧಿದೈವ (ದಶೇಂದ್ರಿಯಗತ ರೂಪ) =೨೩೪೯

(೩) ಅಂದರೆ ಮೂರುಸಾವಿರದ ತೊಂಭತ್ತೊಂಭತ್ತು =೩೦೯೯

(೪) ಅಧಿಭೂತ, ಪಂಚಭೂತ, ಪಂಚತನ್ಮಾತ್ರ ಗತ ರೂಪಗಳು =೨೦೮೦

ಅಂದರೆ. ಐದುಸಾವಿರದ ಒಂದನೂರ ಎಪ್ಪತೊಂಭತ್ತು =೫೧೭೯

ಅಂದರೆ ೬೦೦ ಕ್ಕೆ ೮೨೧ ಕಡಿಮೆ ಆಯಿತು.

ಈ ಎಂಟನೂರ ಇಪ್ಪತ್ತೊಂದು ರೂಪಗಳು ದಾವವೆಂದರೆ :-

ವಿಧಿಭವಾದಿ ಸಮಸ್ತ ಜೀವರ ಹೃದಯಾಕಾಶದೊಳು "ಏಕಾತ್ಮ" ನೆಂದು ಒಂಭತ್ತನೆಯ ಪದ್ಯದಲ್ಲಿ ಪ್ರಯೋಗ ಮಾಡಿದ್ದಾರೆ. ಆತ್ಮರೂಪಿ ಪರಮಾತ್ಮ ಹೃದಯಾಕಾಶದಲ್ಲಿ ಎಂತ ಇರೋಣದರಿಂದ, ಹೃದಯ ಒಂದು, ಆಕಾಶ ಒಂದು. ಈ ಆಕಾಶ ದಹರಾಕಾಶ. ಆ ಆಕಾಶ ಬ್ಯಾರೆ.

| | | | |
|---|---|---|---|
| (೧) | ಹೃದಿ | ದಿ=೩, ಹೃ=ಹ+ರ=೮+೨=೧೦ | =೩೧೦ |
| (೪) | ಆಕಾಶ | ಶ=೫, ಕಾ=೧, ಆ=೧ | =೫೧೧ |
| | | ಒಟ್ಟು | =೮೨೧ |

ಅಲ್ಲಿಗೆ ೫೧೭೯+೮೨೧=೬೦೦೦ ರೂಪಗಳಾಯಿತು.

೨೮೪೫೩, ಚಿತ್ತವಿಸುವುದು- ಎಂಟಧಿಕ ಇಪ್ಪತ್ತು ಸಾವಿರ ನಾಲ್ಕು ಶತದ ಐವತ್ತಮೂರು ಮೂರ್ತಿಗಳು-ಎಂದರೆ, ಪೂರ್ವೋಕ್ತ ಸಂಖ್ಯಾನುಸಾರ ಆಗ ತಕ್ಕ ವರ್ಣವಾಚ್ಯ ರೂಪಗಳು. ಮೊತ್ತ ಸಂಖ್ಯಾ ಇಪ್ಪತ್ತೆಂಟು ಸಾವಿರದ ನಾನೂರ ಐವತ್ಮೂರು ಮೂರ್ತಿಗಳು. ಇಹವಲ್ಲಿ ಪರಿಯಂತ-ಇಹವು ಎಂದರೆ ಇರೋದಾಗಿ ಅದೆ. ಅಲ್ಲಿ ಅಂದರೆ, ದೇಹದಲ್ಲಿ ಅಂತ ಅರ್ಥ. ಪರಿಯಂತ ಎಂದರೆ, ಸೃಜ್ಯರಾಗಿ ಇರತಕ್ಕ ಯಾವತ್ತು ಜೀವರು ಅಂತ. (ಯಾವತ್ತು ಚರಾಚರ ಅಂತ ಪರಿಯಂತಲೂ ತಾತ್ಪರ್ಯವೇ) ಹ್ಯಾಂಗೆಂದರೆ :-

ಪರಿ ಎಂದರೆ, ಈ ಪರಿ ಅಂತ, ಎಂದರೆ ಸೃಷ್ಟಿಯ ಅಂತದವರೆಗೆ ಜೀವ ರಿಗೆ ಅಂತ ದಾವವೆಂದರೆ ಹತ್ತು ನಾಲಕ್ಕೂ. ಹತ್ತು ಒಂದು ಅಂತ್ಯ ನಾಲ್ಕು ಒಂದು, ಹತ್ತು ಏನು ಎಂದರೆ, ನಾಲ್ಕು ಎಂದರೆ ಏನು ಅಂದರೆ, ಹತ್ತೂನೂ ಜಿವರ ಸಂಖ್ಯಾವೇ. ನಾಲ್ಕುನೂ ಜೀವರ ಸಂಖ್ಯಾವೇ.

ಹತ್ತಕ್ಕೆ ವಿವರ :-(೧) ದೇವ (೪) ಋಷಿ (೩) ಪಿತೃ (೪) ಜನಪ (೫) ಜಲಚರ (೬) ಸ್ಥಾವರ (೭) ಕ್ರಿಮಿ (೮) ಪಕ್ಷಿ (೯) ಪಶುಗಳು (೧೦) ಮನುಷ್ಯರು ಅಂತು ಹತ್ತು.

ನಾಲ್ಕಕ್ಕೆ ವಿವರ : (೧) ಸ್ವೇದಜ. (೨) ಪೃಥ್ವಿಜ (೩) ಅಂಡಜ ಮತ್ತು (೪) ಜರಾಯುಜ. ಯಾವತ್ತು ಜೀವರು. ಹತ್ತು ನಾಲಕ್ಕು ಪರಿಯಂತರ, ಅಲ್ಲಿ- ಆಯಾ ಜೀವರಲ್ಲಿ ಪೂರ್ವೋಕ್ತ ರೂಪಗಳು ಇಹವು. ಹತ್ತುನಾಲಕ್ಕು ರೂಪಗಳು ನೆರವುತ್ತ (ನೆನೆವುತ್ತ)- ಮ್ಯಾಲೆ ಉದಹರಿಸಿದ್ದ ಹತ್ತುವಿಧ, ನಾಲ್ಕು ವಿಧ ಜೀವರುಗಳಲ್ಲಿ ೨೮,೪೫೩ ರೂಪಗಳ ನೆನೆವುತ್ತಾ, ಅವನೀಪರಿ ತಿಳಿದು, ಅವನಿ-ಭೂಮಿಯಲ್ಲಿ, ಈ ಪರಿ-ಪೂರ್ವೋಕ್ತ ಪ್ರಕಾರ, ತಿಳಿದು-ವಿವರ ತಿಳಿದು, ಅನುಸಂಧಾನಗಳ ತಿಳಿದು. ಪುರುಷೋತ್ತಮನ-ಕ್ಷರಾಕ್ಷರಪುರುಷರಿಗೆ ಉತ್ತಮನಾದ ಪರಮಾತ್ಮನ, ಸರ್ವತ್ರ- ಚರಾಚರಗಳಲ್ಲಿ, ಸರ್ವತ್ರ ತನ್ನ ಬಿಂಬನ್ನ ತಿಳಿದು, ತಾರತಮ್ಯಾನುಸಾರ ಪೂಜಾವಿಧಿಗಳ ತಿಳಿದು. ಪೂಜೆಯ ಮಾಡು ಕೊಂಡಾಡು-ಈ ಮಾರ್ಗವನ್ನು ಉಪದೇಶಿಸಿದ ಗುರುಗಳ, ಗುರುಗಳಂತರ್ಗತ ಪರಮಾತ್ಮನ-ಸರ್ವಗತ ಪರಮಾತ್ಮನ ಕೊಂಡಾಡು ಎಂತ ತಾತ್ಪರ್ಯ.

ಮತ್ತು ಹತ್ತುನಾಲ್ಕು ರೂಪಗಳು ಎಂದರೆ : —

ಹತ್ತು-ದಶೇಂದ್ರಿಯಗಳು (ಪಂಚಭೂತ, ಪಂಚತನ್ಮಾತ್ರ) ದಶಮಾರುತರು-೧೦. ನಾಲಕ್ಕು ಎಂದರೆ ಶತಸ್ಥರಪರಿಯಂತ ದೇವತೆಗಳು, ಕರ್ಮಜರು ಅಜಾನಜರು, ನಿರಂಶರು ಅಂತ ನಾಲ್ಕು. ಅಧಿಭೂತ, ಅಧ್ಯಾತ್ಮ, ಅಧಿದೈವ, ಹೃದಯ ಅಂತ ನಾಲ್ಕು. ಈ ಪ್ರಕಾರ ಹತ್ತುನಾಲಕ್ಕು. ಈ ಹತ್ತು ನಾಲಕ್ಕರಲ್ಲಿ ಪೂರ್ವೋಕ್ತ ಪ್ರಕಾರ ರೂಪಗಳ ನೆನೆವುತ್ತ, ಅವನೀಪರಿ ತಿಳಿದು- ಅವನ-ಬಿಂಬರೂಪಿ ಪರಮಾತ್ಮನ, ಈ ಪರಿ-ಈ ರೀತಿ ಹೇಳಿದ ಕ್ರಮದಿಂದ ಇರತಕ್ಕ ರೂಪಗಳಲ್ಲಿ ತನ್ನ ಬಿಂಬನ್ನ ತಿಳಿದು, ಎಂದರೆ, ಐಕ್ಯಚಿಂತಿಸಿ, ಅನುಸಂಧಾನ ತಿಳಿದು, ಪುರುಷೋತ್ತಮನ-ಪುರುಷಶ್ರೇಷ್ಠನಾದ ಪರಮಾತ್ಮನ. ಸರ್ವತ್ರ-ಐಕ್ಯಚಿಂತನಿ, ಪರಸ್ಪರ ರೂಪಗಳಿಗೆ ಐಕ್ಯಚಿಂತನೆ ರೂಪವಾದ ಪೂಜಾವನ್ನು ಮಾಡಿ, ಕೊಂಡಾಡು-ಜ್ಞಾನ, ಭಕುತಿ, ವೈರಾಗ್ಯಗಳನ್ನು ಹೊಂದಿದವನಾಗಿ, ಆಹ-ಸಂಚಾರಮಾಡು ಎಂತ ತಾತ್ಪರ್ಯ. ॥೧೧॥

(೨) "ಭಾವಪ್ರಕಾಶಿಕೆ" ವ್ಯಾಖ್ಯಾನ :–

ಮೇಲೆ ಹೇಳಿದ ೧೪ ಸ್ಥಾನಗತ ಒಟ್ಟು ಭಗವದ್ರೂಪಗಳನ್ನು ಚಿಂತಿಸಬೇಕೆಂದು ಹೇಳುತ್ತಾರೆ. ಸರ್ವರ ಹೃದಯಾಂತರ್ಗತ ರೂಪ ೧, ಅಧ್ಯಾತ್ಮಾದಿ ರೂಪತ್ರಯಗಳು, ಅಂತು, ಈ ನಾಲ್ಕರಲ್ಲಿ ಭಗವದ್ರೂಪಗಳ ಸಂಖ್ಯಾ =೧೦,೩೨೬. ದಶಪ್ರಾಣದೊಳಗಿನ ರೂಪಗಳು ೧೮೧೨೭. ಅಂತು, ಒಟ್ಟಿನಲ್ಲಿ ೨೮೪೫೩. ಹೀಗೆ ಮೇಲೆ ಹೇಳಿದ ೧೦ ಸ್ಥಾನಗಳಲ್ಲಿ ಒಟ್ಟು ೨೮೪೫೩ ರೂಪಗಳ ವಿಸ್ತಾರವನ್ನು ತಿಳಿದು, ಸರ್ವತ್ರ ಪರಮಾತ್ಮನನ್ನು ಪೂಜಿಸಬೇಕು. ಆನಂದ ಪಡುತ್ತಿರಬೇಕು ಎಂದು ತಾತ್ಪರ್ಯ. ॥೧೧॥

(೩) "ಭಾವದರ್ಪಣಟೀಕಾ" ವ್ಯಾಖ್ಯಾನ:–

ಇದರ ಹಿಂದಿನ ಪದ್ಯದಲ್ಲಿ ಉಕ್ತವಾದ ಹದಿನಾಲ್ಕು ಅಧಿಷ್ಠಾನ ಭಗವದ್ರೂಪಗಳು ಇಪ್ಪತ್ತೆಂಟು ಸಾವಿರದ ನಾನೂರಾ ಐವತ್ಮೂರು ಭಗವದ್ರೂಪಗಳೆಂದು ಹೇಳುತ್ತಾರೆ–"ಚಿತ್ತೈಸುವುದು"–ಎಂದು.

ವಿಜ್ಞಾಪನೆಯನ್ನು ಚಿತ್ತಕ್ಕೆ ತರಬೇಕೆಂಬೋ ತಾತ್ಪರ್ಯ. ಅಹವಿಲ್ಲಿ ಪರಿಯಂತ ಇಲ್ಲಿ ಪರ್ಯಂತ ಸಂಖ್ಯಾ ಇಷ್ಟು ಆಗೋದೆಂಬರ್ಥ.

ಇದಕ್ಕೆ ಪ್ರಮಾಣ : —

**"ಅಷ್ಟಾವಿಂಶತ್ಸಹಸ್ರೈಶ್ಚ ಪುನಶ್ಚತು ಶತೋಪರಿ ।**
**ತ್ರಿಪಂಚಾಶದ್ರೂಪೈಸ್ತು ಭಗವಾನ್ ಶ್ರೀಧರೋ ಹರಿರಿತಿ ॥"**

**–ಗುರುವೃತ್ತ ಪ್ರಮಾಣ ॥**

ಹತ್ತುನಾಲ್ಕು-ಹದಿನಾಲ್ಕು ಸ್ಥಾನ ಎಂಬರ್ಥ.

ಇದಕ್ಕೆ ಪ್ರಮಾಣ : —

**"ಜ್ಞಾತವ್ಯಾನೀಹರೂಪಾಣಿ ಚತುರ್ದಶಸ್ಥಲೇಷುಚೇತಿ ॥"**
**–ಗುರುವೃತ್ತೇ ॥**

ನೆರೆವಿತ್ತರವ ಛಂದಾಗಿ ವಿಸ್ತಾರವೆಂಬರ್ಥ. ॥೧೧॥

## (೪) ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ)

ಕ್ರೋಡೀ ಕರೋತಿ-"ಚಿತ್ತೈಸುವುದು" ಇತಿ । ಅಲ್ಲಿ=ಚತುರ್ದೇಹೇಷು । ನೆರೆರೀತಿ । ಬಿಸ್ತರ=ವಿಸ್ತಾರ । ಹತ್ತು-ದಶ ಪ್ರಾಣೇಷು ॥ ನಾಲ್ಕು ಪದ್ಮನಾಭಾದಯಃ ॥ "ಅಷ್ಟಾವಿಂಶತ್ ಸಹಸ್ರೈಸ್ತು ಚತುಃ ಶತಯುತೈರ್ಹರಿಃ ॥ ಗಾತ್ರೇ ಸವರ್ತ್ರ ಚ ॥ಇತಿ॥ ॥೧೧॥

**ಕನ್ನಡಾರ್ಥ:**

ಈ ರೂಪಗಳನ್ನು ಕ್ರೋಢೀಕರಿಸಿ ಹೇಳುತ್ತಾರೆ-"ಚಿತ್ತೈಸುವುದು"-ಎಂಬ ಪದ್ಯದಿಂದ ॥

ಅಲ್ಲಿ ಎಂದರೆ, ನಾಲ್ಕು ದೇಹಗಳಲ್ಲಿ ಎಂದು ಅರ್ಥ. ಬಿತ್ತರ=ವಿಸ್ತಾರ ನೆರೆ=ರೀತಿ. "೨೮೪೫೩ ರೂಪಗಳಿಂದ ಶ್ರೀಹರಿಯು ೧೪ ಸ್ಥಳಗಳಲ್ಲಿಯೂ, ದೇಹದಲ್ಲಿ ಎಲ್ಲೆಡೆಯಲ್ಲಿಯೂ ಇರುತ್ತಾನೆ"-ಎಂದು ಹೇಳಿರುವ **ಗುರುವೃತ್ತ** ಮುಂತಾದವುಗಳ ವಾಕ್ಯಗಳು ಪ್ರಮಾಣವಾಗಿರುತ್ತವೆ. ॥೧೧॥

## (೫) "ಗುರುಹೃದಯಪ್ರಕಾಶಿಕೆ"-ವ್ಯಾಖ್ಯಾನ :-

೨೮೪೫೩ ರೂಪಗಳು ಮೇಲೆ ಹೇಳಿದ ನಾಲ್ಕು ಸ್ಥಾನಗಳೂ ಮತ್ತು ದಶಮಾರುತಾಂತರ್ಗತ ರೂಪಗಳೂ ಸಹ ಒಟ್ಟು ಕೂಡಿಸಿದರೆ, ಅಕ್ಷರಸಂಖ್ಯೆಯಿಂದ ಆಗುವುದೆಂದು ತಿಳಿಯಬೇಕು. ದಶಮಾರುತಾಂತರ್ಗತ ಹತ್ತುರೂಪಗಳೂ, ಅಧಿಭೂತ, ಅಧ್ಯಾತ್ಮ, ಅಧಿದೈವ ಮತ್ತು ಸರ್ವಹೃದಯಗಳೆಂಬ ನಾಲ್ಕು ಸ್ಥಾನಗತ ರೂಪಗಳೂ ಸೇರಿ,ಈ ಹದಿನಾಲ್ಕು ರೂಪಗಳ,ಬಿತ್ತರವೆಂಬ ವಿಸ್ತಾರವನ್ನು, ನೆರೆ ಎಂದರೆ, ಚೆನ್ನಾಗಿ ಅಕ್ಷರ ಸಂಖ್ಯೆಯಿಂದ ತಿಳಿದು, ಕ್ಷರಾಕ್ಷರ ಪುರುಷೋತ್ತಮನಾದ ದೇವರನ್ನು ಸದಾ ಪೂಜಿಸುತ್ತಾ ಸ್ತುತಿಸಬೇಕೆಂದು ಅರ್ಥ. ॥೧೧॥

# ಸರ್ವವ್ಯಾಖ್ಯಾನಸಾರಸಂಗ್ರಹ

ಪೂರ್ವೋಕ್ತ ಪದ್ಯಗಳಲ್ಲಿ ವಿವರಿಸಿರುವ ಹದಿನಾಲ್ಕು ಸ್ಥಾನಗತ ಭಗವದ್ರೂಪಗಳ ಒಟ್ಟು ಅಕ್ಷರ ಸಂಖ್ಯಾಗಣನೆಯನ್ನು ಪ್ರಸಕ್ತಪದ್ಯದಲ್ಲಿ ಧ್ಯಾನೋಪಾಸನೆಗಾಗಿ ಜ್ಞಾನಿವರೇಣ್ಯರಾದ ದಾಸರಾಯರು ತಿಳಿಸುತ್ತಾರೆ.

ಮನಸ್ಸಿನ ದಾರ್ಢ್ಯಕ್ಕೋಸ್ಕರವಾಗಿ, ಈ ಭಗವದ್ರೂಪಗಳ ಉಪಾಸನಾಕ್ರಮ ಮತ್ತು ಚಿಂತನೆಯನ್ನು ಪುನಃ ದೃಢೀಕರಿಸುತ್ತಾರೆ. ಈ ಕಾರಣದಿಂದಲೇ "ಚಿತ್ತವಿಸಬಹುದು" ಎಂದು ಪ್ರಾರಂಭಿಸುತ್ತಾರೆ. ಅಂದರೆ ಕಿವಿಗೊಟ್ಟು ಕೇಳಿ. ಮನಸ್ಸಿನಲ್ಲಿ ತತ್ತ್ವವಿಷಯಗಳನ್ನು ಸ್ಥಿರಗೊಳಿಸಿ, ಚಿತ್ತದಲ್ಲಿ ಅದನ್ನು ಚಿಂತನೆಗೆ ವಿಷಯವನ್ನಾಗಿ ಮಾಡಿ, ಧ್ಯಾನೋಪಾಸನೆ ಮಾಡುವುದು ಎಂದು ಮನಸ್ಸಿನ ದಾರ್ಢ್ಯಕ್ಕಾಗಿ ಸ್ಪಷ್ಟಪಡಿಸುತ್ತಾರೆ.

ಭಗವದ್ರೂಪಗಳ ವರ್ಣವಾಚ್ಯಸಂಖ್ಯಾಗಣನೆಯನ್ನು ತಿಳಿಸುತ್ತಾರೆ : –

1 (೧) ಸರ್ವಚೇತನರ ಹೃದಯದಲ್ಲಿ ಆತ್ಮಶಬ್ದವಾಚ್ಯನಾಗಿ "ಏಕಾತ್ಮ" ಎಂಬ ಭಗವದ್ರೂಪಗಳು = ೬೧೧೧

(೨) ಅಧಿಭೂತಗತ ಅಚ್ಯುತ ನಾಮಕ ಶ್ರೀ ಪರಮಾತ್ಮ = ೧೨೧

(೩) ಅಧ್ಯಾತ್ಮಗತ ಅನಂತ ನಾಮಕ ಶ್ರೀಪರಮಾತ್ಮ = ೧೦೫೧

(೪) ಅಧಿದೈವಗತ ಗೋವಿಂದನಾಮಕ ಶ್ರೀ ಪರಮಾತ್ಮ = ೩೦೪೩

2 ಪ್ರಾಣಾದಿ ಪಂಚಗತ ರೂಪಗಳು ; —

(೫) ಪ್ರಾಣಗತ ಭಗವದ್ರೂಪಗಳು = ೫೩

(೬) ಅಪಾನ ಗತ ಭಗವದ್ರೂಪಗಳು = ೫೧೧

(೭) ವ್ಯಾನ ಗತ ಭಗವದ್ರೂಪಗಳು = ೫೫

(೮) ಉದಾನಗತ ಭಗವದ್ರೂಪಗಳು = ೫೩೫

(೯) ಸಮಾನಗತ ಭಗವದ್ರೂಪಗಳು = ೫೫೭

3 **ನಾಗಾದಿಪಂಚಕಗತ ರೂಪಗಳು : —**

| | | |
|---|---|---|
| (೧೦) | ನಾಗಗತ ಭಗವದ್ರೂಪಗಳು | = ೩೫ |
| (೧೧) | ಕೃಕಳಗತ ಭಗವದ್ರೂಪಗಳು | = ೯೧೩ |
| (೧೨) | ಕೂರ್ಮಗತ ಭಗವದ್ರೂಪಗಳು | = ೭೧ |
| (೧೩) | ದೇವದತ್ತಗತ ಭಗವದ್ರೂಪಗಳು | = ೨೩೪೩ |
| (೧೪) | ಧನಂಜಯಗತ ಭಗವದ್ರೂಪಗಳು | = ೧೩೦೫೪ |

**ಹದಿನಾಲ್ಕು ಸ್ಥಾನಗತ ಭಗವದ್ರೂಪಗಳ ಒಟ್ಟು ಸಂಖ್ಯೆ = ೨೮೪೫೩**

**ಅಂದರೆ** ಇಪ್ಪತ್ತೆಂಟು ಸಾವಿರದ ನಾಲ್ಕುನೂರ ಐವತ್ಮೂರು ಭಗವದ್ರೂಪಗಳಾಯಿತು. ಈ ಸಂಖ್ಯೆಯನ್ನೇ ದಾಸರಾಯರು ಪ್ರಸಕ್ತ ಪದ್ಯದಲ್ಲಿ **"ಎಂಟಧಿಕ ಇಪ್ಪತ್ತು ಸಾವಿರ ನಾಲ್ಕುಶತದೈವತ್ತಮೂರು"** -ಎಂದಿದ್ದಾರೆ.

| | |
|---|---|
| ಅಂದರೆ, ಎಂಟಧಿಕ ಇಪ್ಪತ್ತು ಸಾವಿರ | = ೨೮೦೦೦ |
| ನಾಲ್ಕು ಶತ | = ೪೦೦ |
| ಐವತ್ತಮೂರು | = ೫೩ |
| ಅಂತು, | = ೨೮೪೫೩ |

ಇಷ್ಟು ಸಂಖ್ಯಾಕವಾದ ಪರಮ ಮಂಗಳಕರವಾದ ಸಮೀಚೀನ ಭಗವದ್ರೂಪಗಳನ್ನು ಅಲ್ಲಿ **ಪರಿಯಂತ** ಇಹವು ಎಂದಿದ್ದಾರೆ. ಅಲ್ಲಿ ಎಂಬ ಶಬ್ದಾರ್ಥವು **ಹತ್ತುನಾಲಕು ರೂಪಗಳ** ಎಂಬ ಶಬ್ದಪ್ರಯೋಗದಲ್ಲಿ ಉಕ್ತವಾಗಿದೆ.

ಹತ್ತು + ನಾಲಕು = ಹತ್ತುನಾಲಕು = ಹದಿನಾಲ್ಕು = ೧೪

ಅಂದರೆ ಹೃದಯ, ಅಧಿಭೂತ, ಅಧ್ಯಾತ್ಮ ಮತ್ತು
ಅಧಿದೈವಗಳೆಂಬ ಸ್ಥಾನಗಳು = ೪
ಪ್ರಾಣಾದಿ ಪಂಚಕ+ನಾಗಾದಿ ಪಂಚಕಗಳು = ೧೦

ಅಧಿಷ್ಠಾನಗಳ ಸಂಖ್ಯೆ =೧೪

ಅಂತು ಹದಿನಾಲ್ಕು ಸ್ಥಾನಗತ ಭಗವದ್ರೂಪಗಳ ಒಟ್ಟುಸಂಖ್ಯೆ-೨೮,೪೫೩. ಇದಕ್ಕೆ ಪ್ರಮಾಣವು **ಗುರುವೃತ್ತ** ವೆಂಬ ಗ್ರಂಥದಲ್ಲಿ ಉಕ್ತವಾಗಿದೆ.

**"ಅಷ್ಟಾವಿಂಶತ್ಸಹಸ್ರೈಶ್ಚ ಪುನಶ್ಚತುಶತೋಪರಿ ॥**
**ತ್ರಿಪಂಚಾಶದ್ರೂಪೈಸ್ತು ಭಗವಾನ್ ಶ್ರೀಧರೋ ಹರಿಃ ॥" ॥೧॥**

**"ಜ್ಞಾತವ್ಯಾನೀಹರೂಪಾಣಿ ಚತುರ್ದಶಸ್ಥಲೇಷು"॥ ॥೨॥**

**–ಇತಿ ಗುರುವೃತ್ತೇ ॥**

ಅಂದರೆ, ಅಷ್ಟಾವಿಂಶತಿ=೨೮. ಸಹಸ್ರೈ=ಸಾವಿರದ ಅಂತು, ೨೮× ೧೦೦೦=೨೮,೦೦೦ ಆಯಿತು.

ಪುನಃ=ಮತ್ತು ಉಪರಿ=ಅದಮೇಲೆ ಚತುಶ್ಚತ=೪× ೧೦೦ (ನಾಲ್ಕುನೂರು) ತ್ರಿಪಂಚಾಶತ್=೩+೫೦=೫೩ ರೂಪೈಸ್ತು =೨೮೦೦೦+೪೦೦+೫೩=೨೮,೪೫೩ ರೂಪಗಳಿಂದ ಭಗವಾನ್= ಷಡ್ಗುಣೈಶ್ವರ್ಯ ಸಂಪನ್ನನಾದ ಶ್ರೀಧರೋ ಹರಿಃ=ಲಕ್ಷ್ಮೀ ವಕ್ಷಸ್ಥನಾದ ಶ್ರೀಹರಿಯು ವಿದ್ಯಮಾನನಾಗಿದ್ದಾನೆ.

ಚತುರ್ದಶ=ಹದಿನಾಲ್ಕು ಸಂಖ್ಯಾಕವಾದ ಸ್ಥಲೇಷು=ಅಧಿಷ್ಠಾನ ವಿಶೇಷಗಳಲ್ಲಿ ರೂಪಾಣಿ=ಪೂರ್ವೋಕ್ತ ರೂಪಗಳನ್ನು ಇಹ= ಇಲ್ಲಿ ಪರ್ಯಂತ, ಜ್ಞಾತವ್ಯಾನಿ=ಅನುಸಂಧಾನಪೂರ್ವಕ ತಿಳಿಯತಕ್ಕದ್ದು.

**ವ್ಯಾಸದಾಸ ಸಿದ್ಧಾಂತ ಕೌಮುದಿ** ವ್ಯಾಖ್ಯಾನ ರೀತ್ಯಾ, "ಇಲ್ಲಿ" ಎಂಬ ಪದಕ್ಕೆ ನಾಲ್ಕು ದೇಹಗಳಲ್ಲಿ (ಗಾತ್ರೇ) ಎಂದು ಉಕ್ತವಾಗಿದೆ. ಹೃದಯಾದಿ ನಾಲ್ಕು ಸ್ಥಾನಗಳು ಸ್ವರೂಪಾದಿ ತನುಚತುಷ್ಟಯ ಅಧಿಷ್ಠಾನಗಳೆಂದು ತಿಳಿಯಬೇಕು.

**ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದ** [ಪ್ರಕಾರ ೨೮,೪೫೩ ಎಂಬ ಭಗವದ್ರೂಪಗಳ ಸಂಖ್ಯೆಯನ್ನು ಆತ್ಮಾದಿ ರೂಪಗಳು (೪೩೨೬)+ ಪ್ರಾಣಾದಿ ರೂಪಗಳು (೧೮,೧೨೭)=೨೨,೪೫೩. ಉಳಿದ ೬೦೦೦ ರೂಪಗಳನ್ನು ಪ್ರಾಕಾರಾಂತವಾಗಿ ಭೂತಪಂಚಕಗಳು (೧೦೦೦)+ಪಂಚತನ್ಮಾತ್ರಗಳು (೧೦೮೦)+ಪಂಚಜ್ಞಾನೇಂದ್ರಿಯಗಳು (೨೧೬೮)+ಪಂಚಕರ್ಮೇಂದ್ರಿಯಗಳು (೯೩೧)+ಹೃದಯ (೩೧೦)+ಆಕಾಶ(೫೧೧)=೨೮,೪೫೩. ಈ ರೀತಿ ಗಣನೆ ಮಾಡಿದ್ದಾರೆ.

ಹದಿನಾಲ್ಕು ಎಂಬ ಅಧಿಷ್ಠಾನಗಳಿಗೆ ಹತ್ತು ಜೀವರು+ಸ್ವೇದಜ, ಪೃಥ್ವಿಜ, ಆಂಡಜ ಮತ್ತು ಜರಾಯುಜ ಎಂದು ನಾಲ್ಕು ಪ್ರಕಾರ ಎಂದು ಪರಿಗಣಿಸಿದ್ದಾರೆ. ಆದರೆ ಪೂರ್ವೋಕ್ತ ಪದ್ಯಗಳಲ್ಲಿ ಏಕಾತ್ಮ, ಅಚ್ಯುತ, ಅನಂತ, ಗೋವಿಂದ, ಪ್ರಾಣಾದಿ ಪಂಚಕಗಳು ಮತ್ತು ನಾಗಾದಿ ಪಂಚಕಗಳು (ದಶವಿಧ ಪ್ರಾಣರು) ಎಂದು ಸ್ಪಷ್ಟವಾಗಿ ಇರುವುದರಿಂದ, ಆಯಾಯಾ ಅಧಿಷ್ಠಾನಗತ ಭಗವದ್ರೂಪಗಳನ್ನು ಪರಿಗಣಿಸಿದರೆ, ನೇರವಾಗಿ ೨೮,೪೫೩ ರೂಪಗಳು ಬರುವುವು. ಈ ಸಂಖ್ಯಾಗಣನೆ ನೇರ ಹಾಗೂ ಸರಳ.

ಈ ರೀತಿಯಲ್ಲಿ ಗುರೂಪದೇಶ ದ್ವಾರಾ ತಿಳಿದು, ಭಗವದ್ರೂಪಗಳ ವಿಸ್ತಾರವನ್ನು ಜ್ಞಾನಾನುಸಂಧಾನಪೂರ್ವಕವಾಗಿ ಚಿಂತನೆಗೆ ತಂದುಕೊಂಡು, ಧ್ಯಾನಿಸಬೇಕು. ಕ್ಷರಾಕ್ಷರ ಪುರುಷರಿಂದ ಸಂಸೇವ್ಯಮಾನನಾದ ಪುರುಷಶ್ರೇಷ್ಠನಾದ ಆ ಪುರುಷೋತ್ತಮನಾಮಕ ಶ್ರೀ ಪರಮಾತ್ಮನನ್ನು ಸರ್ವಕಾಲಗಳಲ್ಲಿ ದೇಶಗಳಲ್ಲಿ ಅವಸ್ಥಾ ವಿಶೇಷಗಳಲ್ಲಿ ತಿಳಿದು, ಆಯಾಯಾ ಅಧಿಷ್ಠಾನಗತ ಭಗವದ್ರೂಪಗಳನ್ನು ಉಪಾಸಿಸಬೇಕು. ಅಂತಹ ಅಪಾರ ಮಹಿಮಾ ಸಂಪನ್ನನಾದ

ಶ್ರೀಹರಿಯ ಗುಣಾತಿಶಯಗಳನ್ನು ಸದಾ ಕೊಂಡಾಡುತ್ತಾ ಸಂಭ್ರಮದಿಂದ ನಲಿನಲಿದಾಡುತ್ತಿರಬೇಕೆಂದು ಉದ್ಘೋಷಿಸುತ್ತಾರೆ ಜ್ಞಾನೋಪಾಸಕರಾದ ಶ್ರೀ ದಾಸರಾಯರು. ||೧೧||

## ಪದ್ಯ (೧೨)

ಮೂಲ :

ಈರೆರಡು ಶತದ್ವ್ಯಷ್ಟಧಿಕ ಹದಿ ।
ನಾರುಸಾವಿರ ರೂಪ ಸರ್ವ ಶ ।
ರೀರದೊಳು ಶಬ್ದಾದಿಗಳಧಿಷ್ಠಾನದೊಳಗಿಪ್ಪ ||
ಮಾರುತನು ನಾಗಾದಿ ರೂಪದಿ
ಮೂರನೇ ಗುಣಮಾನಿ ಶ್ರೀ ಮ ||
ಗ್ಗಾರಮಣ ವಿದ್ಯಾ ಕುಮೋಹವ ಕೊಡುವ ಕರಣಕ್ಕೆ || ||೧೨||

ಅವತರಣಿಕೆ :

ಹದಿನಾರು ಸಾವಿರದ ನಾನ್ನೂರ ಹದಿನಾರು ರೂಪಗಳನ್ನು ಧಾರಣ ಮಾಡಿ ಸರ್ವಚೇತನರ ಶರೀರಗಳಲ್ಲಿ, ಪಂಚಭೂತಾತ್ಮಕ ತದ್ಗುಣಗಳಾದ ಶಬ್ದಾದಿ ತನ್ಮಾತ್ರಾಲ್ಲಿ ಅಧಿಷ್ಠಾನಗತ ನಾಗಾದಿ ಪಂಚರೂಪಗಳಿಂದ ವಿದ್ಯ ಮಾನರಾಗಿರತಕ್ಕ ಶ್ರೀವಾಯ್ವಂತರ್ಗತನಾಗಿ ಶ್ರೀ ಪರಮಾತ್ಮನು ಇದ್ದು, ಅವಿದ್ಯಾಸಾಂಕೇತವಾದ ಪಂಚ ಅವಿದ್ಯೆಗಳಿಗೆ ಪ್ರಾಚುರ್ಯನಾಗಿ ಇದ್ದಾನೆ. ಮೂರನೆಯ ಗುಣವಾದ ತಮೋಗುಣಕ್ಕೆ ಅಭಿಮಾನಿಯಾದ ದುರ್ಗಾದೇವಿ ಯರ ಪತಿಯಾದ ರುದ್ರನಾಮಕ ಶ್ರೀ ಪರಮಾತ್ಮ ಕುತ್ಸಿತವಾದ ಮೋಹ ಗಳನ್ನು ಏಕಾದಶೇಂದ್ರಿಯಗಳಿಗೆ ಕೊಟ್ಟು ಅಜ್ಞಾನಾದಿಗಳನ್ನು ಅಭಿವ್ಯಕ್ತ ಮಾಡುವನು ಎಂದು ಹೇಳುತ್ತಾರೆ ಪ್ರಸಕ್ತ ಸಂಧಿಗತ ಈ ೧೨ ನೆಯ ಪದ್ಯ ದಿಂದ. ||೧೨||

**ಪ್ರತಿಪದಾರ್ಥ :**

**ಮಾರುತನು**=ಶ್ರೀವಾಯುದೇವರು **ನಾಗಾದಿ ರೂಪದಿ**=ನಾಗ ಮೊದಲಾದ ಉಪವಾಯುರೂಪರಾಗಿ **ಸರ್ವ ಶರೀರದೊಳು**=ಸಕಲ ಚೇತನರ ಸ್ಥೂಲಶರೀರಗಳಲ್ಲಿ **ಶಬ್ದಾದಿಗಳ**=ಶಬ್ದ ಸ್ಪರ್ಶಾದಿ ತನ್ಮಾತ್ರಾ ಗುಣಗಳ **ಅಧಿಷ್ಠಾನದೊಳಗೆ**=ಅಧಿಷ್ಠಾನಗಳಲ್ಲಿ (ಸ್ಥಾನಗಳಲ್ಲಿ) **ಈರೆರಡು**=೨×೨=ನಾಲ್ಕು **ಶತ**=ನೂರು. ಅಂದರೆ ನಾಲ್ಕುನೂರು (೪೦೦) **ದ್ವಿ ಅಷ್ಟಕ**=೨×೮=ಹದಿನಾರು ಅಧಿಕವಾದ, ಅಂದರೆ, ೪೦೦+೧೬=೪೧೬. **ಹದಿನಾರುಸಾವಿರರೂಪ**=೧೬,೦೦೦. ಅಲ್ಲಿಗೆ ೧೬,೦೦೦+೪೦೦+೧೬=೧೬೪೧೬ (ಹದಿನಾರು ಸಾವಿರದ ನಾಲ್ಕುನೂರ ಹದಿನಾರು) ರೂಪಗಳಿಂದ **ಇಪ್ಪ**=ಇರುತ್ತಿರುವವರು. **ಮೂರನೆಯ ಗುಣಮಾನಿ**=ತ್ರಿಗುಣವರ್ಗದಲ್ಲಿ ಮೂರನೆಯ ಗುಣವಾದ ತಮೋಗುಣಕ್ಕೆ ಅಭಿಮಾನಿಯಾದ **ದುರ್ಗಾರಮಣ**=ಶ್ರೀ ದುರ್ಗಾದೇವಿಯರಿಗೆ ಪತಿಯಾದ ಶ್ರೀ ಪರಮಾತ್ಮನು ಪೂರ್ವೋಕ್ತ ವಾಯುರೂಪಗಳಲ್ಲಿ ಅಂತರ್ಗತನಾಗಿದ್ದು **ಕರಣಕ್ಕೆ**=ಇಂದ್ರಿಯಗಳಿಗೆ **ಕುಮೋಹವ**=ಅನ್ಯಥಾ ಜ್ಞಾನರೂಪವಾದ ಮೋಹಗಳನ್ನು (ಅವಿದ್ಯಾ ರೂಪವಾದ ಅಜ್ಞಾನವನ್ನು) **ಕೊಡುವ**=ಅಭಿವ್ಯಕ್ತಿ ಮಾಡುವನು. ||೧೨||

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

ಪಂಚ ಅವಿದ್ಯಾಗತ ಪ್ರಾಣರೂಪಗಳು, ತದ್ಗತ ಭಗವದ್ರೂಪಗಳು, ಉತ್ತರ ಶ್ಲೋಕದ ಸಂಗತಿಯೂ ಸಹ ಹೇಳುತ್ತಾರೆ.

ಈರೆರಡು ಶತ-ನಾಲಕ್ಕು ನೂರು, ದ್ವ್ಯಷ್ಟಧಿಕ-ದ್ವಿ-ಎರಡು, ಅಷ್ಟ-ಎಂಟು, ಅಧಿಕ-ಅಧಿಕವಾಗಿ ಉಳ್ಳ (ಅಂದರೆ,೪೧೬) ಹದಿನಾರು ಸಾವಿರ-೧೬೦೦೦,-ಒಟ್ಟಿಗೆ ಲೆಕ್ಕ ೧೬,೪೧೬, ರೂಪ-ರೂಪಗಳ ಧರಿಸಿ, ಸರ್ವಶರೀರ

ರೊಳು-ಸರ್ವಜೀವರಾಶಿಗಳ ಸ್ಥೂಲದೇಹದಲ್ಲಿ ಅವೆ. ಇರತಕ್ಕ ಸ್ಥಾನದಾವ ದೆಂದರೆ, ಶಬ್ದಾದಿಗಳ-ಪಂಚಭೂತಾಂತರ್ಗತ ತದ್ಗುಣಗಳಾದ, ಶಬ್ದಾದಿ ಐದು ಸಾಂಕೇತಗಳಾದ, ಅಧಿಷ್ಠಾನದೊಳಗಿಪ್ಪ-ಅಧಿಷ್ಠಾನಾಂತರ್ಗತದಲ್ಲಿ ಇರತಕ್ಕ ಅವಿದ್ಯಾ ಸಾಂಕೇತಗಳಾದ ಪಂಚ ಅವಿದ್ಯಾಗಳೊಳಗೆ, ಮಾರುತನು -ಶ್ರೀವಾಯುದೇವರು, ನಾಗಾದಿ ರೂಪದಿ-ನಾಗಾದಿ ಪಂಚರೂಪಗಳಿಂದ ಇದ್ದಾರೆ. ಇದರ ವಿವರ ಹ್ಯಾಗೆಂದರೆ :—

**ವಿವರಗಳನ್ನು ಮುಂದಿನ ಪುಟ ನೋಡಿ.**

| | | | | | | | |
|---|---|---|---|---|---|---|---|
| ೩೫ | ಶಬ್ದ | ತಮ | ನಾಗ ೫೩ | 1 | ತಮ | ಅಜ್ಞಾನ ಕಾರ್ಯ | ಕೃದ್ಧೋಲ್ಕ |
| ೩೧೩ | ಸ್ಪರ್ಶ | ಮೋಹ | ಕೃಕಲ ೩೧೩ | 2 | ಮೋಹ | ಭ್ರಾಂತಿ ಕಾರ್ಯ | ಮಹೋಲ್ಕ |
| ೭೧ | ರೂಪ | ಮಹಾಮೋಹ | ಕೂರ್ಮ ೧೭ | 3 | ಮಹಾಮೋಹ | ಮಹಾ ಭ್ರಾಂತಿ | ವೀರೋಲ್ಕ |
| ೨೩೪೩ | ರಸ | ತಾಮಿಸ್ರ | ದೇವದತ್ತ ೩೪೩೨ | 4 | ತಾಮಿಸ್ರ | ಮಹಾ ಕ್ರೋಧ | ದ್ಯುಲ್ಕ |
| ೧೩೧೫೪ | ಗಂಧ | ಅಂಧತಾಮಿಸ್ರ | ಧನಂಜಯ ೪೫೦೩೧ | 5 | ಅಂಧತಾಮಿಸ್ರ | ಮಹಾ ಕ್ರೋಧ | ಸಹಸ್ರೋಲ್ಕ |
| ೧೫೮೧೬ | | | | | ೫ | ೬ | ಅಂತು ೧೦ |

ಕೃದ್ಧೋಲ್ಕಾದಿ ಹತ್ತು ಭಗವದ್ರೂಪಗಳು (ಐದು ರೂಪಗಳೇ ಹತ್ತು ರೂಪಗಳಿಂದ ಅದೆ). ಇದರೊಳಗೆ ಪ್ರಾಚುರ್ಯದಿಂದ ಒಂದೊಂದರಲ್ಲಿ ಸಂಸೃಷ್ಟಗಳಾಗಿ ಅವಿದ್ಯಾ ಐದರಲ್ಲಿ, ತತ್ಕಾರ್ಯ ಐದರಲ್ಲಿ, ಒಂದೊಂದರಲ್ಲಿ ಐದು ಐದುಪ್ರಕಾರ ಇರೋದಾಗಿ ಅದೆ. ಈ ರೀತ್ಯಾ ಲೆಖ್ಖಮಾಡಿದರೆ ಖದು ಹತ್ತುಗಳು ಐವತ್ತು. ಅವಿದ್ಯಾ ತತ್ಕಾರ್ಯ ಸಹಿತ ೫೦. ಏಕಾದಶೇಂದ್ರಿಯ ಗಳ ಒಳಗೆ ಒಂದೊಂದು ಇಂದ್ರಿಯಗಳಲ್ಲಿ ೫೦ ಪ್ರಕಾರ ವ್ಯಾಪ್ತವಾಗಿ ಇದೆ. ಈ ಪ್ರಕಾರ ಇದ್ದದ್ದರನ್ನ ಲೆಕ್ಕಮಾಡಿದರೆ ೫೫೦. ಹನ್ನೊಂದು ಐವತ್ತು ಗಳು. ಅಂದರೆ, ಐದುನೂರ ಐವತ್ತುಗಳು. ಅಂತು, ಆರುನೂರು ಕೃದ್ಧೋ ಲ್ಕಾದಿ ಐದು ರೂಪಗಳೇ ಆರುನೂರು ರೂಪಗಳಿಂದ ಇರೋದಾಗಿ ಅದೆ. ಅಂತು, ೧೬೪೧೬ ಸರಿ ಆಯಿತು. (೧೫೮೧೬+೬೦೦=೧೬೪೧೬) ಮೂರನೆ ಗುಣಮಾನಿ–ತಮೋ ಗುಣಾಭಿಮಾನಿಯಾದ, ಶ್ರೀ ದುರ್ಗಾರಮಣ-ದುರ್ಗಾ ದೇವೇರಿಗೆ ಪತಿಯಾದ ರುದ್ರರೂಪಿ ಶ್ರೀ ಪರಮಾತ್ಮ, ವಿದ್ಯಾಕುಮೋಹವ –ಕುತ್ಸಿತವಾದ ಮೋಹಗಳ ಜ್ಞಾನದ್ವಾರಾ, ಕರಣಕ್ಕೆ-ಏಕಾದಶೇಂದ್ರಿಯ ಗಳಿಗೆ ಅಜ್ಞಾನಾದಿಗಳು ವ್ಯಕ್ತಮಾಡಿ, ಕೊಡುವ-ಕೊಡ್ತಾತಾ ಇರತಾನೆ ಎಂತ ತಾತ್ಪರ್ಯ.

ತಾ ॥ ಪೂರ್ವೋಕ್ತ ಶಬ್ದಾದಿಗಳ ಅಧಿಷ್ಠಾನಗಳಲ್ಲಿರತಕ್ಕ ವಿದ್ಯಾಗಳಲ್ಲಿ ಶ್ರೀವಾಯುದೇವರೇ ನಾಗಾದಿರೂಪಗಳ ಧರಿಸುವರು. ರುದ್ರರೂಪಿ ಪರ ಮಾತ್ಮ ಕೃದ್ಧೋಲ್ಕಾದಿ ರೂಪಗಳಿಂದ ನಾಗಾದಿ ಪಂಚಪ್ರಾಣರೂಪಗಳಲ್ಲಿದ್ದು ಯಾವತ್ತು ಜೀವರ ದೇಹಗತ ಇಂದ್ರಿಯಗಳಲ್ಲಿ ಇದ್ದು, ಆಯಾ ಇಂದ್ರಿಯ ಗಳಿಗೆ ಕುತ್ಸಿತವಾದ ಮೋಹ ಕೊಡುತ್ತಾನೆ ಎಂತ ತಾತ್ಪರ್ಯ. ॥೧೨॥

(೨) "ಭಾವಪ್ರಕಾಶಿಕೆ" ವ್ಯಾಖ್ಯಾನ:—

ದಶಪ್ರಾಣರನ್ನು ದೇಹದಲ್ಲಿ ಚಿಂತಿಸಬೇಕೆಂದು ಹೇಳಿದರು. ಇದರಲ್ಲಿ **"ಪ್ರಾಣಾಪಾನ ವಿಜ್ಞಾಯಾಂ ಚ ಪಿಂಗಳಾಯಾಂಚ ಸರ್ವಶಃ"** –ಎಂಬ ವಾಕ್ಯಾನುಸಾರ ಇಡಾ, ಪಿಂಗಳಾ ಮೊದಲಾದ ನಾಡಿಗಳಲ್ಲಿ ಪ್ರಾಣ ಅಪಾನಾದಿ ವಾಯುಗಳು ಇರುವರೆಂಬ ವಿಷಯವು ಪೂರ್ವದಲ್ಲಿ ಹೇಳಲ್ಪಟ್ಟಿದೆ. ನಾಗಾದಿ

ಉಪ ಪ್ರಾಣರು ಈ ಶರೀರದೊಳಗೆಲ್ಲಿರುವರೆಂಬುದನ್ನು ಹೇಳಿರಲಿಲ್ಲ. ಈ ಪದ್ಯದಿಂದ ಅವುಗಳನ್ನು ವಿವರಿಸುತ್ತಾರೆ.

ನಾಗ, ಕೃಕಳ, ಕೂರ್ಮ, ದೇವದತ್ತ, ಧನಂಜಯ ಎಂಬ ಈ ೫ ಮಂದಿ ಪ್ರಾಣರು ಸರ್ವಚೇತನರ ಶರೀರದೊಳಗೆ ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧಗಳೆಂಬ ತನ್ಮಾತ್ರಾಗುಣಗಳ ಅಧಿಷ್ಠಾನಗಳಲ್ಲಿ ಇರುವರು. ಅಕ್ಷರಸಂಖ್ಯಾ ಕ್ರಮದಿಂದ ೧೬೪೧೬ ರೂಪಗಳು ಆಗುವುವು ಹೇಗೆಂದರೆ, –

(೧) ನಾಗ–ನಾ=೫, ಗ=೩. ವಾಮಾಂಕರೀತ್ಯಾ = ೩೫

(೨) ಕೃಕಳ–ಕೃ=೩. ಕ=೧, ಳ=೯ ವಾಮಾಂಕ ರೀತ್ಯಾ = ೯೧೩

(೩) ಕೂರ್ಮ–ಕೂ=೧, ರ್ಮ=೭ ವಾಮಾಂಕ ರೀತ್ಯಾ = ೭೧

(೪) ದೇವದತ್ತ–ದೇ=೩, ವ=೪, ದ=೩, ತ್ತ=೨. ವಾಮಾಂಕರೀತ್ಯಾ = ೨೩೪೩

(೫) ಧನಂಜಯ–ಧ=೪, ನ=೫, ಂ=೦, ಜ=೩, ಯ=೧. ವಾಮಾಂಕರೀತ್ಯಾ = ೧೩೦೫೪

ಒಟ್ಟು ರೂಪಗಳ ಸಂಖ್ಯೆ = ೧೬,೪೧೬

ಈ ಪ್ರಕಾರ ೧೬, ೪೧೬ ನಾಗಾದಿ ಪ್ರಾಣರಲ್ಲಿ ತಮೋಗುಣಾಭಿಮಾನಿ ಶ್ರೀ ದುರ್ಗಾದೇವಿಯ ಪತಿಯಾದ ಪರಮಾತ್ಮನು ಇದ್ದು, ತಾಮಸ ಶಬ್ದಾದಿ ಮಾತ್ರಾಗುಣಗಳಿಗೆ ವಿಷಯೀಭೂತವಾದ ತಾಮಿಸ್ರ, ಅಂಧತಾಮಿಸ್ರ, ಮಹಾ ಮೋಹ, ಮೋಹ ಮತ್ತು ತಮಸ್ಸು ಎಂಬ ಅಜ್ಞಾನ ವೃತ್ತಿಗಳಲ್ಲಿ ಪ್ರೇರಿಸು ವನು. ॥೧೨॥

(೩) **"ಭಾವದರ್ಪಣ ಟೀಕಾ" ವ್ಯಾಖ್ಯಾನ :—**

ಈಗ ಸಿಂಹಾವಲೋಕನ ನ್ಯಾಯದಿಂದ ಪಂಚತನ್ಮಾತ್ರಾಗತ ಅವಿದ್ಯಾ ಪಂಚಕರಲ್ಲಿ ಮರುತ್ಸಂಬಂಧಿ ನಾಗಾದಿ ಪಂಚಕನಾಮವನ್ನು ಶ್ರೀದುರ್ಗಾರಮಣನಾದ ಶ್ರೀಹರಿಯು ಧಾರಣಮಾಡಿ, ತಮೋಯೋಗ್ಯರಿಗೆ ಕುಮೋಹವ ಕೊಡುತ್ತಾನೆಂದು ಪುನಃ ಧಾರಧ್ಯಾರ್ಥ ನಾಗಾದಿ ಪಂಚಕಗತ ಭಗವದ್ರೂಪಗಳು ೧೬,೪೧೬ ಎಂದು ಹೇಳುತ್ತಾರೆ.- "ಈರೆರಡು" ಎಂಬ ಈ ಪದ್ಯದಿಂದ ಈರೆರಡು-ನಾಲ್ಕು ಎಂದರ್ಥ. **ಉಕ್ತಂಚ ವಿಜಯದಾಸ ರಾಜೈ : —**

**ಅವಿದ್ಯಾಪಂಚಕಸುಳಾದಿ**

**"ವರಶಬ್ದ ಪಂಚಕದಿ ಪಂಚಪರ್ವಗಳು**
**ಸ್ಥಿರನಾಗಿ ಇಪ್ಪಾದ್ಯೆಯಾತ್ತತ್ತದ್ಗತ**
**ಹರಿಯು ನಾಗಾದಿ ನಾಮ ಧರಿಸಿ ದೇಹದೊಳಗಿಹ ತಾನು**
**ಕರಣಕ್ಕೆ ಕೊಡುವಾನು ಕುಮೋಹವ ॥"**

–ಎಂದು **ಅವಿದ್ಯಾಪಂಚಕಸುಳಾದಿಯಲ್ಲಿ** ಹೇಳುತ್ತಾರೆ.

ಅವಿದ್ಯಾಪಂಚಕದ ವಿವರ : -

(೧) ತಮ ಎಂದರೆ ಅಜ್ಞಾನ.
(೨) ಮೋಹ ಎಂದರೆ ಭ್ರಾಂತಿ.
(೩) ಮಹಾಮೋಹ ಎಂದರೆ ದುರಾಗ್ರಹ.
(೪) ತಾಮಿಸ್ರ ಎಂದರೆ ಕ್ರೋಧ.
(೫) ಅಂಧತಾಮಿಸ್ರ ಎಂದರೆ ಮರಣ.

ಈ ಐದು ಪ್ರಕಾರವೂ ತನ್ಮಾತ್ರಾಗಳಲ್ಲಿರುತ್ತದೆ.

ಇದಕ್ಕೆ ಪ್ರಮಾಣ : —

**"ತಮಃ ಶಬ್ದಗತ ಸ್ಪ್ರಾಹುಃ ಮೋಹಃ ಸ್ಪರ್ಶಗತೋ ಮತಃ ॥**
**ಮಹಾಮೋಹೋ ರೂಪಗತಸ್ತಾಮಿಸ್ರೋ ರಸಗೋ ಮತಃ ॥**

**ಗಂಧಗೋ ಅಂಧತಾಮಿಸ್ರಸ್ತ ಏತೇ ಭಾವರೂಪಕಾ ಇತಿ ||"**

**–ಪ್ರಕಾಶಸಂಹಿತೋಕ್ತೇಃ ||**

**(೨) ತೃತೀಯ ತಾತ್ಪರ್ಯೇಚ :—**

**"ತಮಸ್ತು ಶಾರ್ವರಂ ಪ್ರೋಕ್ತಂ ಮೋಹಶ್ಚೈವ ವಿಪರ್ಯಯಃ**
**ತದಾಗ್ರಹೋ ಮಹಾಮೋಹಃ ತಾಮಿಸ್ರಃ ಕ್ರೋಧ ಉಚ್ಯತೇ ||**
**ಮರಣಂ ತ್ವಂಧತಾಮಿಸ್ರಮವಿದ್ಯಾಪಂಚಪರ್ವಕೇತಿ ||"**

**ಇದಕ್ಕೆ "ಭಾವರೂಪ ಅಜ್ಞಾನ", "ಅವಿದ್ಯಾ ಪಂಚಕ", "ಪಂಚಪರ್ವ"** –ಎಂತಲೂ ಹೆಸರು. ||೧೨||

**(೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ)-**

ನನು ಏವಂ ಅನುಸಂದಧತಾಮಪಿ ಮೋಹಾಜ್ಞಾನದರ್ಶನಾತ್ ತಥಮೋ ತತ್ ? ಇತ್ಯಾಶಂಕ್ಯ ಲಿಂಗಕಲಾ ಮಾತ್ರಾಗತ ನಾಗಾದಿಗತ ತಮೋಮಾನಿ ದುರ್ಗಾರಮಣಸ್ಯ ಪಂಚರೂಪೀ ಭಗವತಃ ಏವ ಇತಿವಕ್ತುಂ ಉತ್ತರೂಪಾಣಿ ಆಹ- "ಈರೆರಡು" ಇತಿ । ದ್ವಾತ್ರಿಂಶತ್ ಸಹಸ್ರಾತ್ಮಾ ಚತುಃ ಶತ ಹರಿಃ ಪ್ರಭುಃ || ಸರ್ವದೇಹೇಷು ಶಬ್ದಾದ್ಯಾಃ ನಾಗಾದಿಭಿರಧಿಷ್ಟಿತಾಃ || ಇತಿ ವೈಭವೇ || ಅವಿದ್ಯೇತಿ, ಭೇದಃ ||೧೨||

**ಕನ್ನಡಾರ್ಥ :**

ಪೂರ್ವೋಕ್ತ ಪದ್ಯಗಳಲ್ಲಿರುವಂತೆ ಅನುಸಂಧಾನ ಉಳ್ಳವರಿಗೂ ಸಹ ಅಜ್ಞಾನ ಮತ್ತು ಮೋಹಗಳಿರುವುವು. ಲಿಂಗ ಶರೀರಗತ ಕಳಾ (ಗಾತ್ರ) ಗಳಲ್ಲಿರುವ ನಾಗ ಮುಂತಾದವರಲ್ಲಿ ತಮೋಗುಣಾಭಿಮಾನಿಯಾದ ದುರ್ಗಾ ದೇವಿಯ ಪತಿಯಾದ ಪಂಚರೂಪೀ ಭಗವಂತನಿರುವನು. ಅವನಿಂದಲೇ ಅನುಸಂಧಾನ ಯುಕ್ತರಿಗೂ ಸಹ ಮೋಹಾಜ್ಞಾನಾದಿಗಳೇ ಬರುತ್ತವೆ. "ಈರೆರಡು" ಎಂಬ ಪದ್ಯದಿಂದ ೩೨,೪೦೦ ರೂಪಗಳಿಂದ ಪರಮಾತ್ಮನು

ನಾಗಾದಿದಶಪ್ರಾಣರಲ್ಲಿದ್ದು, ತಮೋಗುಣಾಭಿಮಾನಿ ದುರ್ಗಾದೇವಿಯರ ಪತಿಯಾಗಿದ್ದು, ದುರ್ಗಾರೂಪದಿಂದ ಅವಿದ್ಯಾಮೋಹಗಳನ್ನು ಕೊಡುತ್ತಾನೆ-ಎಂದು "ವೈಭವ" ಎಂಬ ಗ್ರಂಥದಲ್ಲಿ ಪ್ರತಿಪಾದಿತವಾಗಿದೆ. ಮೂಲದಲ್ಲಿ ೧೬೪೦೮ ರೂಪವೆಂದು ಹೇಳಿದೆ. ಈ ಜ್ಞಾನಿಗಳು ಒಟ್ಟಿಗೆ ೩೨,೪೦೦ ರೂಪಗಳೆಂದು ಪ್ರಮಾಣೀಕರಿಸುತ್ತಾರೆ. ಇದು ವಿಚಾರಾಂಶವು.

(೫) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ :—

ಹಿಂದೆ ಹೇಳಿದ ನಾಗಾದಿ ಉಪವಾಯು ಪಂಚಕದಲ್ಲಿ ಶಬ್ದ, ಸ್ಪರ್ಶ, ರೂಪ, ರಸ, ಗಂಧವೆಂಬ ಐದು ವಿಷಯಗಳಲ್ಲೂ ಸಹ, ಕೃದ್ಧೋಲ್ಕ ಮಹೋಲ್ಕ, ವೀರೋಲ್ಕ, ದ್ಯುಲ್ಕ, ಸಹಸ್ರೋಲ್ಕ ಎಂಬ ಐದು ರೂಪಗಳಿಂದ ಅಯೋಗ್ಯರಿಗೆ ಪಂಚಪರ್ವಾ ವಿದ್ಯಪ್ರದನಾಗಿ, ಸಜ್ಜನರಿಗೆ ಮೋಹ, ಮಹಾಮೋಹ, ತಾಮಿಸ್ರಾ, ಅಂಧತಾಮಿಸ್ರ, ಅಜ್ಞಾನಗಳೆಂಬ ಪಂಚಪರ್ವಾ ವಿದ್ಯೆಗಳನ್ನು ಪರಿಹರಿಸುವನೆಂದು ಉಪಾಸಕರ ಉಪಾಸನೆ ನಿರೂಪಿಸುತ್ತಾರೆ. "ಶಬ್ದ"-ಎಂದರೆ, ಅಯೋಗ್ಯಗಾನ, ದುರ್ವಾರ್ತೆಶ್ರವಣ, "ಸ್ಪರ್ಶ"-ಎಂದರೆ, ದುಷ್ಟ ಸ್ತ್ರೀಭೋಗ ಮೊದಲಾದ್ದು. "ರೂಪ"-ಎಂದರೆ, ಪರಸ್ತ್ರೀ ಮೊದಲಾದ ದುಷ್ಟವಸ್ತುಗಳನ್ನು ಸಾಪೇಕ್ಷೆಯಿಂದ ನೋಡುವುದು. "ರಸ"-ಎಂದರೆ, ಈರುಳ್ಳಿ ಮೊದಲಾದ ದುಷ್ಟವಸ್ತು ಭೋಜನ. "ಗಂಧ"-ಎಂದರೆ, ದುಷ್ಟ ವಾಸನೆ ಇಷ್ಟವಾಗಿ ಸ್ವೀಕರಿಸುವುದು. ಈ ಐದಧಿಷ್ಠಾನಗಳಲ್ಲಿರುವ ನಾಗ, ಕೂರ್ಮ, ಕೃಕಲ, ದೇವದತ್ತ, ಧನಂಜಯ ಎಂಬ ಪಂಚ ಉಪವಾಯು ಅಂತರ್ಗತ, ಮೂರನೇ ಗುಣವೆಂಬ ತಮೋಗುಣಾಭಿಮಾನಿ ದುರ್ಗಾದೇವಿಯ ಪತಿಯಾದ ದೇವರು, ೧೬,೪೧೬ ಶಬ್ದಾದ್ಯಕ್ಷರ ಸಂಖ್ಯಾ ರೂಪದಿಂದ ವಿದ್ಯಾಕು ಮೋಹವನೀವ ಕರಣಕ್ಕೆ ಎಂದರೆ, ಜ್ಞಾನಕ್ಕೆ ಪ್ರತಿಬಂಧಕವಾದ ಅಜ್ಞಾನ ಮೊದಲಾದ ಮಿಥ್ಯಾ ಜ್ಞಾನವನ್ನು ಅಯೋಗ್ಯರ ಮನಸ್ಸು ಮೊದಲಾದ ಕರಣಗಳಿಗೆ ಪ್ರೇರಿಸುವನೆಂದರ್ಥ. ||೧೨||

# ಸರ್ವವ್ಯಾಖ್ಯಾನಸಾರಸಂಗ್ರಹ

ಸರ್ವಜೀವರಾಶಿಗಳ ಸ್ಥೂಲದೇಹದಲ್ಲಿ ಆಕಾಶ, ವಾಯು, ತೇಜಸ್ಸು, ಅಪ್ ಮತ್ತು ಪೃಥ್ವೀ ಎಂಬ ಭೂತಪಂಚಕಗಳು ವಿದ್ಯಮಾನವಾಗಿವೆ. ಇವುಗಳ ತನ್ಮಾತ್ರಾಗುಣಗಳು ಕ್ರಮವಾಗಿ ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧ. ಈ ಮಾತ್ರಾ ಪಂಚಕಗಳಲ್ಲಿ ಕ್ರಮವಾಗಿ ನಾಗ, ಕೃಕಲ, ಕೂರ್ಮ, ದೇವದತ್ತ ಮತ್ತು ಧನಂಜಯ ಎಂಬ ಉಪವಾಯು ರೂಪಗಳಿವೆ. ಈ ಉಪವಾಯುಗಳಲ್ಲಿ ಭಾರತೀರಮಣ ಮುಖ್ಯ ಪ್ರಾಣರಾದ ಶ್ರೀವಾಯುದೇವರು ಇದ್ದು ನಿಯಾಮಕರಾಗಿದ್ದಾರೆ. ನಾಗಾದಿ ಪಂಚಕಗಳ ಅಕ್ಷರಸಂಖ್ಯಾ ರೂಪಗಳು ೧೬,೪೧೬ ಇವೆ. ಅವುಗಳ ವಿವರ ಇಂತಿದೆ.

(೧) ನಾಗ—ನಾ=೫, ಗ=೩, ವಾಮಾಂಕರೀತ್ಯಾ = ೩೫

(೨) ಕೃಕಳ—ಕೃ=ಕ+ರ=೧+೨=೩, ಕ=೧, ಳ=೯. ವಾಮಾಂಕರೀತ್ಯಾ = ೯೧೩

(೩) ಕೂರ್ಮ—ಕೂ=೧, ರ್ಮ=ಮ+ರ=೫+೨=೭. ವಾಮಾಂಕರೀತ್ಯಾ = ೭೧

(೪) ದೇವದತ್ತ—ದೇ=೩, ವ=೪, ದ=೩, ತ್ತ=ತ+ತ=೧+೧=೨. ವಾಮಾಂಕರೀತ್ಯಾ = ೨೩೪೩

(೫) ಧನಂಜಯ—ಧ=೪, ನ=೫, ಂ=೦, ಜ=೩, ಯ=೧. ವಾಮಾಂಕರೀತ್ಯಾ =೧೩೦೫೪

ರೂಪಗಳ ಒಟ್ಟು ಸಂಖ್ಯೆ=೧೬,೪೧೬

ಅಂದರೆ, ಹದಿನಾರು ಸಾವಿರದ ನಾನ್ನೂರ ಹದಿನಾರು ರೂಪಗಳಾ

ಯಿತು. ಈ ಸಂಖ್ಯೆಯನ್ನೇ ಪ್ರಸಕ್ತ ಪದ್ಯದಲ್ಲಿ ದಾಸರಾಯರು–"**ಈರೆರಡು ಶತ ದ್ವ್ಯಷ್ಟಧಿಕ ಹದಿನಾರು ಸಾವಿರ ರೂಪ**" -ಎಂದು ಹೇಳಿದ್ದಾರೆ.

| | |
|---|---|
| ಅಂದರೆ, ಹದಿನಾರು ಸಾವಿರ | =೧೬,೦೦೦ |
| ಈರೆರಡು ಶತ=೨×೨×೧೦೦ | = ೪೦೦ |
| ದ್ವಿ ಅಷ್ಟ ಅಧಿಕ=೨×೮=೧೬ ಹೆಚ್ಚಾದ | =೦೦೦೧೬ |
| ಒಟ್ಟು | =೧೬,೪೧೬ ಆಗುವುದು |

ಇಷ್ಟು ರೂಪಗಳಿಂದ ಶಬ್ದಾದಿ ಪಂಚತನ್ಮಾತ್ರಾ ಅಧಿಷ್ಠಾನಗಳಲ್ಲಿರುವ ನಾಗಾದಿ ಪಂಚ ಉಪವಾಯುಗಳಲ್ಲಿ ನಿಯಾಮಕರಾಗಿರುವ ವಾಯು ಗೋಳಕಾಂತರ್ಗತನಾಗಿ ಶ್ರೀ ಪರಮಾತ್ಮನು ಕೃದ್ಧೋಲ್ಕಾದಿ ಪಂಚರೂಪಗಳಿಂದ ಕಾರ್ಯನಿರ್ವಹಿಸುತ್ತಿರುವನು. ಮೂರನೆಯ ಗುಣವು ತಮೋಗುಣ. ಇದಕ್ಕೆ ಅಭಿಮಾನಿ ದುರ್ಗಾನಾಮಕಳಾದ ಶ್ರೀಲಕ್ಷ್ಮೀದೇವಿಯರು. ಅಂತಹ ತಮೋಗುಣಾಭಿಮಾನಿ ದುರ್ಗಾರಮಣನಾದ ರುದ್ರರೂಪೀ ಸಂಕರ್ಷಣ ನಾಮಕ ಶ್ರೀ ಪರಮಾತ್ಮನು ತಮೋಯೋಗ್ಯರಾದ ಅಯೋಗ್ಯ ಚೇತನರಿಗೆ ಮೋಹಾದಿ ಅವಿದ್ಯಾ ಪಂಚಕಗಳನ್ನು ಕೊಟ್ಟು, ಅವರ ಇಂದ್ರಿಯಗಳ ವ್ಯಾಪಾರವನ್ನು ನಡೆಯಿಸುವನು. ಸಚ್ಚೇತನರಿಗೆ ಮೋಹಾದಿ ಅಜ್ಞಾನವನ್ನು ಅವರ ಇಂದ್ರಿಯಗಳಿಗೆ ಕೊಟ್ಟು, ಮೋಹಗ್ರಸ್ತರನ್ನಾಗಿ ಮಾಡಿ, ಕೊನೆಯಲ್ಲಿ ಅವರ ಕರ್ಮಬಂಧನ ರೂಪವಾದ ಸಂಸಾರವೆಂಬ ಮಹಾಸಮುದ್ರವನ್ನು ದಾಟಿಸಿ, ಕರ್ಮವಿಮೋಚನ ದ್ವಾರಾ ಅವರಿಗೆ ಸದ್ಗತಿಯನ್ನು ಕೊಡುವನು. ಈ ಅವಿದ್ಯಾ ಪಂಚಕಗಳ ವಿವರಗಳು ಇಂತಿವೆ.

(೧) ಆಕಾಶ ತತ್ತ್ವವು ಭೂತಪಂಚಕಗಳಲ್ಲಿ ಮೊದಲನೆಯದು. ಇದರ ತನ್ಮಾತ್ರಾಗುಣವು ಶಬ್ದವು. ಈ ಶಬ್ದಾಧಿಷ್ಠಾನದಲ್ಲಿ **ನಾಗ** ಎಂಬ ಉಪವಾಯು ಇದ್ದಾನೆ. ಇವನಿಗೆ ನಿಯಾಮಕನಾದ ಮುಖ್ಯಪ್ರಾಣರಲ್ಲಿ ಅಂತರ್ಗತನಾಗಿ ಕೃದ್ಧೋಲ್ಕ ರೂಪಿ ಶ್ರೀಪರಮಾತ್ಮನು ತಮ ಅಂತ ಅಜ್ಞಾನ

ವನ್ನು ಶಬ್ದತನ್ಮಾತ್ರಾದ್ವಾರಾ ಆಕಾಶ ತತ್ತ್ವಕ್ಕೆ ಅಧಿಷ್ಠಾನಭೂತನಾದ ಶ್ರವಣೇಂದ್ರಿಯ ಕ್ಕೆ ಕೊಡುವನು. ಇದರ ಕಾರ್ಯವೇ ದುಷ್ಟಶಬ್ದಗಳನ್ನು ಕೇಳುವಿಕೆ, ದುರ್ವಾರ್ತೆಗಳಲ್ಲಿ ಆಸಕ್ತಿ ಮೊದಲಾದ ಅಜ್ಞಾನ (ತಮ) ಸಂಬಂಧವಾದ ಕಾರ್ಯಗಳು ನಡೆಯುವುವು.

(೨) **ವಾಯು** ತತ್ತ್ವವು ಭೂತಪಂಚಕಗಳಲ್ಲಿ ಎರಡನೆಯದು. ಇದರ ತನ್ಮಾತ್ರಗುಣವು **ಸ್ಪರ್ಶವು**, ಈ ಸ್ಪರ್ಶಾಧಿಷ್ಠಾನದಲ್ಲಿ ಇರುವ ಉಪವಾಯು **ಕೃಕಲ**. ಈ ಉಪವಾಯುವಿನಲ್ಲಿರುವ ಶ್ರೀಮುಖ್ಯ ಪ್ರಾಣಾಂತರ್ಗತನಾಗಿ ದುರ್ಗಾರಮಣನಾದ ಶ್ರೀ ಪರಮಾತ್ಮನು ೯೧೩ ರೂಪಗಳಿಂದ **ಮಹೋಲ್ಕ** ನಾಮಕನಾಗಿರುವನು. ಈ ಮಹೋಲ್ಕರೂಪಿ ಶ್ರೀಪರಮಾತ್ಮನು ಸ್ಪರ್ಶ ತನ್ಮಾತ್ರದ್ವಾರಾ ವಾಯುತತ್ತ್ವಕ್ಕೆ ಅಧಿಷ್ಠಾನವಾದ **ತ್ವಗಿಂದ್ರಿಯ** ಕ್ಕೆ **ಮೋಹ** ಎಂಬ ಭ್ರಾಂತಿಕಾರ್ಯವನ್ನುಂಟುಮಾಡಿ, ದುಷ್ಟ ಸ್ತ್ರೀಯರ ಸ್ಪರ್ಶಾದಿ ಭೋಗಗಳು, ಪ್ರಾಪಂಚಿಕ ಉಪಭೋಗ ವಸ್ತುಗಳಲ್ಲಿ ನನ್ನದು ಎಂಬ ಭ್ರಾಂತಿ ಜ್ಞಾನರೂಪವಾದ ಮೋಹವನ್ನು ಕೊಟ್ಟು, ಅವರನ್ನು ಮೋಹಗ್ರಸ್ತರನ್ನಾಗಿ ಮಾಡುವನು.

(೩) **ತೇಜಸ್ತತ್ತ್ವ** ದ ತನ್ಮಾತ್ರಗುಣವು **ರೂಪವು**. ಈ ಅಧಿಷ್ಠಾನದಲ್ಲಿ **ಕೂರ್ಮ** ನಾಮಕ ಉಪವಾಯುವಿಗೆ ನಿಯಾಮಕರಾದ ಮುಖ್ಯ ಪ್ರಾಣಾಂತರ್ಗತನಾಗಿ ವೀರೋಲ್ಕ ರೂಪಿ ಶ್ರೀ ಪರಮಾತ್ಮನು ೭೧ ಅಕ್ಷರ ವಾಚ್ಯ ಸಂಖ್ಯಾರೂಪಗಳಿಂದ ಇದ್ದು, ರೂಪ ತನ್ಮಾತ್ರಾದ್ವಾರಾ ತೇಜಸ್ತತ್ತ್ವಕ್ಕೆ ಸಂಬಂಧಿಸಿದ **ಚಕ್ಷುರಿಂದ್ರಿಯ** (ಎರಡು ಕಣ್ಣುಗಳು)ಕ್ಕೆ ವಿಷಯ ಸನ್ನಿಕರ್ಷ ವನ್ನುಂಟುಮಾಡಿ, **ಮಹಾಮೋಹ** ಎಂಬ ಅವಿದ್ಯಾ ಪಂಚಕಗಳಲ್ಲಿ ಒಂದಾದ ದುರಾಗ್ರಹದ ಅನುಭವವನ್ನು ದೇಹದಲ್ಲಿ ಪ್ರಕಾಶತೋ ವ್ಯಾಪ್ತನಾಗಿರುವ ಜೀವನಿಗೆ ಕೊಡುವನು. ಇದರಿಂದ ದುಷ್ಟ ವಿಷಯಗಳನ್ನು ಅವಲೋಕಿಸುವುದು, ದುರಾಗ್ರಹಪೂರಿತವಾದ ಕುಶಾಸ್ತ್ರಗಳ ಗ್ರಂಥಗಳ ಅವಲೋಕನ, ಪರ ಸ್ತ್ರೀಯರ ರೂಪದ ಕಡೆಗೆ ಗಮನ ಇತ್ಯಾದಿ ದುರಾಗ್ರಹ ಪೂರ್ವಕವಾದ ಅಜ್ಞಾನಾದಿಗಳಿಗೆ ಜೀವನನ್ನು ಭಾಜನನನ್ನಾಗಿ ಮಾಡುವನು.

(೪) **ಅಪ್‌ತತ್ತ್ವದ** ತನ್ಮಾತ್ರಾಗುಣವಾದ **ರಸದಲ್ಲಿ ದೇವದತ್ತ** ನಾಮಕನಾದ ಉಪವಾಯುವು ಇದ್ದು, ಆ ಅಧಿಷ್ಠಾನದಲ್ಲಿರುವ ಪವಮಾನಂತರ್ಗತನಾಗಿ **ಧೃಲ್ಕ ರೂಪಿ ಶ್ರೀ** ಪರಮಾತ್ಮನು ೨೪೪೩ ವರ್ಣವಾಚ್ಯ ರೂಪಗಳಿಂದ ವಿದ್ಯಮಾನನಾಗಿದ್ದು, **ಅಪ್** ತತ್ತ್ವದ ದ್ವಾರಾ **ರಸನೇಂದ್ರಿಯ** ವಾದ ನಾಲಿಗೆಗೆ **ತಾಮಿಸ್ರ**. ಎಂದರೆ, **ಕ್ರೋಧ** ಎಂಬ ದುಷ್ಟ ಪ್ರವೃತ್ತಿಯನ್ನು ಪ್ರವರ್ತನಗೊಳಿಸಿ, **ಅನಿಷಿದ್ಧಾ** ಪದಾರ್ಥಗಳ ಭಕ್ಷಣ, ಅನಿವೇದಿತ ಆಹಾರಸೇವನೆ, ಇತ್ಯಾದಿ ನಿಷಿದ್ಧ **ಕರ್ಮ**ಗಳಲ್ಲಿ ಮನಸ್ಸನ್ನು ಅನುಗೊಳಿಸಿ, ನಾಲಿಗೆಯು ಅಂತಹ ಅಗ್ರಾಹ್ಯ **ರಸವಿಶೇಷ**ಗಳಿಗೆ ಹಂಬಲಿಸುವಂತೆ ಮಾಡುವನು.

(೫) **ಕೊನೆಯದಾಗಿ ಪೃಥ್ವೀ** ತತ್ತ್ವದ ತನ್ಮಾತ್ರಾ ಗುಣವಾದ **ಗಂಧ**ದಲ್ಲಿರುವ **ಧನಂಜಯ** ನಾಮಕ ಉಪವಾಯುವಿಗೆ ನಿಯಾಮಕರಾಗಿರುವ ಮುಖ್ಯ **ಪ್ರಾಣಾಂತರ್ಗತ**ನಾಗಿ **ಸಹಸ್ರೋಲ್ಕ** ನಾಮಕ ಶ್ರೀ ಪರಮಾತ್ಮನು ಪೃಥ್ವೀತತ್ತ್ವದ **ಅಧಿಷ್ಠಾನ** ಭೂತವಾದ **ಘ್ರಾಣೇಂದ್ರಿಯ**ಕ್ಕೆ ಗಂಧವೆಂಬ ವಿಷಯ ಸನ್ನಿ**ಕರ್ಷವಾ**ಗುವಂತೆ ಮಾಡಿ, **ಅಂಧತಾಮಿಸ್ರ**ವೆಂಬ ಅವಿದ್ಯಾ ರೂಪವಾದ **ಕುಮೋಹ**ವನ್ನು ಕೊಟ್ಟು, ದುರ್ಗಂಧ ರೂಪವಾದ ಮದ್ಯಪಾನಾದಿ ಅನಿಷ್ಟ **ಭೋಗ** ವಿಷಯಗಳಲ್ಲಿ ಆಸಕ್ತನಾಗುವಂತೆ ಮಾಡಿ, ತದ್ವಾರಾ ಆಯುಸ್ಸಿನ ಕ್ಷೀಣ. ಅಂತ್ಯದಲ್ಲಿ ದುರ್ಮರಣ ಇತ್ಯಾದಿ ಅನರ್ಥ ಫಲಗಳು ಸಂಭವಿಸುವಂತೆ **ಮಾಡುವನು.**

ಇಂತು **ತಮ, ಮೋಹ**, ಮಹಾಮೋಹ, ತಾಮಿಸ್ರ ಮತ್ತು ಅಂಧತಾಮಿಸ್ರ ಎಂಬ **ಈ** ಐದು ದುರ್ವಿಷಯಗಳಿಗೆ **ಭಾವರೂಪ ಅಜ್ಞಾನ ಅಥವಾ ಅವಿದ್ಯಾ ಪಂಚಕ ಅಥವಾ ಪಂಚಪರ್ವ** ಎಂದು ಹೆಸರು. ಇವೆಲ್ಲವೂ ತಮೋಗುಣದ **ಪ್ರಭಾವಗಳು.** ಇದಕ್ಕೆ ಅಭಿಮಾನಿ **ದುರ್ಗಾ** ನಾಮಕಳಾದ ಶ್ರೀ **ರಮಾದೇವಿಯರು.** ಅಂತಹ ದುರ್ಗಾರಮಣನಾದ ರುದ್ರಾಂತರ್ಗತ ಸಂಕರ್ಷಣ**ರೂಪಿ** ಶ್ರೀ ಪರಮಾತ್ಮನು ದಶೇಂದ್ರಿಯಗಳನ್ನು ನಿಯಂತ್ರಿಸುವ **ಮನೋತತ್ತ್ವ**ದ ದ್ವಾರಾ ಆಯಾಯಾ ಇಂದ್ರಿಯಗಳಿಗೆ ವಿಷಯ ಸನ್ನಿಕರ್ಷದಿಂದ **ವಿದ್ಯಾಕುಮೋಹ**ವನ್ನುಂಟುಮಾಡುವನು ಎಂದು ತಾತ್ಪರ್ಯ.

ನಾಗಾದಿಪಂಚಕಗಳು, ತನ್ಮಾತ್ರಾ ಪಂಚಕಗಳು, ಪಂಚಭೂತಗಳು ಅವಿದ್ಯಾಪಂಚಕಗಳು. ಕೃದ್ಧೋಲ್ಕಾದಿ ಪಂಚರೂಪಗಳು ಈ ವಿವರಗಳ ವಿಹಂಗಮನೋಟವನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ. ಇದು ಅಧ್ಯಯನ ಹಾಗೂ ಚಿಂತನೆಗೆ ತುಂಬಾ ಸಹಕಾರಿಯಾಗುವುದು.

| ಕ್ರಮ ಸಂ. | ಭೂತ ಪಂಚಕ | ಪಂಚ ತನ್ಮಾತ್ರಾ | ಇಂದ್ರಿಯ | ನಾಗಾದಿ ಪಂಚಕ | ಅಕ್ಷರಸಾಂಕೇತ ರೂಪಗಳು | ಅವಿದ್ಯಾ ಪಂಚಕ | ಕಾರ್ಯ | ಭಗವದ್ರೂಪ |
|---|---|---|---|---|---|---|---|---|
| ೧ | ಆಕಾಶ | ಶಬ್ದ | ಶ್ರೋತ್ರ | ನಾಗ | ೩೫ | ತಮ | ಅಜ್ಞಾನ | ಕೃದ್ಧೋಲ್ಕ |
| ೨ | ವಾಯು | ಸ್ಪರ್ಶ | ಚರ್ಮ | ಕೃಕಲ | ೯೧೩ | ಮೋಹ | ಭ್ರಾಂತಿ | ಮಹೋಲ್ಕ |
| ೩ | ತೇಜಸ್ಸು | ರೂಪ | ನೇತ್ರ | ಕೂರ್ಮ | ೭೧ | ಮಹಾಮೋಹ | ದುರಾಗ್ರಹ | ವೀರೋಲ್ಕ |
| ೪ | ಅಪ್ಪು | ರಸ | ನಾಲಿಗೆ | ದೇವದತ್ತ | ೨೩೪೩ | ತಾಮಿಸ್ರ | ಕ್ರೋಧ | ದ್ಯುಲ್ಕ |
| ೫ | ಪೃಥ್ವೀ | ಗಂಧ | ನಾಸಿಕ | ಧನಂಜಯ | ೧೩೦೫೪ | ಅಂಧತಾಮಿಸ್ರ | ಆಯುಃಕ್ಷೀಣ, ಮರಣ | ಸಹಸ್ರೋಲ್ಕ |

**ರೂಪಗಳ ಒಟ್ಟು ಸಂಖ್ಯೆ ೧೬,೪೧೬**

ಇಂತು ಭೂತಪಂಚಕಗಳು, ಅವುಗಳ ತನ್ಮಾತ್ರಾ ಗುಣವಿಶೇಷಗಳು, ಅವುಗಳಿಗೆ ಸಂಬಂಧಿಸಿದ ಇಂದ್ರಿಯಗಳು, ಆಯಾಯಾ ತನ್ಮಾತ್ರಾಧಿಷ್ಠಾನಗಳಲ್ಲಿಪ್ಪ ನಾಗಾದಿ ಪಂಚಕಗಳು, ತನ್ನಾಮಕನಾಗಿ ತತ್ತಶ್ಚಬ್ದ ವಾಚ್ಯನಾಗಿ ಇರುವ ಭಗವದ್ರೂಪಗಳು, ಆ ಗುಣಗಳಿಂದ ಪ್ರವರ್ತನವಾಗುವ ಅವಿದ್ಯಾ ಪಂಚಕಗಳು, ಅವುಗಳ ಕಾರ್ಯ, ಆ ಕಾರ್ಯನಿಯಾಮಕ ಕೃದ್ಧೋಲ್ಕಾದಿ ಪಂಚರೂಪಗಳು ಇವುಗಳ ವಿವರಗಳ ಜ್ಞಾನಸಾಧಕರಿಗೆ ಅತ್ಯಗತ್ಯ. ಇಂತಹ ಜ್ಞಾನಾನುಸಂಧಾನವಿರುವ ಸಚ್ಚೇತನರ ಅವಿದ್ಯಾರೂಪವಾದ ಭ್ರಾಂತಿ ಅಜ್ಞಾನಾದಿಗಳನ್ನು ನಿವಾರಿಸಿ ಸದ್ಗತಿಗೆ ಪಥವನ್ನು ತೋರುವನು ಶ್ರೀ ಪರಮಾತ್ಮ ಎಂಬುದೇ ಪ್ರಸಕ್ತ ಪದ್ಯಗತಾಭಿಪ್ರಾಯವು. ॥೧೨॥

## ಪದ್ಯ (೧೩)

ಮೂಲ :–

ಐದವಿದ್ಯೆಗಳೊಳಗೆ ಇಹ ನಾ ।
ಗಾದಿಗಳಧಿಷ್ಠಾನದಲ್ಲಿ ಲಕು ।
ಮೀಧವನು ಕೃದ್ಧೋಲ್ಕ ಮೊದಲಾದೈದು ರೂಪಗಳ ।
ತಾ ಧರಿಸಿ ಸಜ್ಜನರವಿದ್ಯವ ।
ಭೇದಿಸುವ ತಾನುಸರಿಗಜ್ಞಾ ।
ನಾದಿಗಳ ಕೊಟ್ಟವರರವರ ಸಾಧನವ ಮಾಡಿಸುವ ॥ ॥೧೩॥

ಅವತರಣಿಕೆ :–

ಹಿಂದಿನ ಪದ್ಯದಲ್ಲಿ ವಿವರಿಸಿರುವ ವಿಷಯವನ್ನೇ ಈ ಪದ್ಯದಲ್ಲಿ ಉಪಸಂಹಾರ ಮಾಡುತ್ತಾರೆ. ಪೂರ್ವೋಕ್ತ ಅವಿದ್ಯಾ ಪಂಚಕಗಳಲ್ಲಿ ನಾಗಾದಿ ಉಪವಾಯು ಪಂಚಕಗಳ ಅಧಿಷ್ಠಾನಗಳಲ್ಲಿ ಶ್ರೀರಮಾರಮಣನಾದ ಶ್ರೀ ಪರಮಾತ್ಮನು ಕೃದ್ಧೋಲ್ಕಾದಿ ಪಂಚರೂಪಗಳನ್ನು ತಾ ಧಾರಣಮಾಡಿ, ಸಚ್ಚೇತನರಿಗೆ ಅಜ್ಞಾನ ದೆಶೆಯಿಂದ ಆಗಿಂದಾಗ್ಗೆ ಉಂಟಾಗುತ್ತಿರುವ ಅವಿದ್ಯಾ ಪಂಚಕ

ಗಳನ್ನು ನಿವಾರಿಸುವನು. ಆದರೆ ತಮೋಯೋಗ್ಯರಾದ ಅಯೋಗ್ಯ ಚೇತನರಿಗೆ ಅಜ್ಞಾನ, ಮಹಾಮೋಹಾದಿಗಳನ್ನು ಕೊಟ್ಟು ಭಗವದ್ವೇಷ, ಭಗವದ್ಭಕ್ತರಲ್ಲಿ ದ್ವೇಷ, ಲೋಕ ಕಂಟಕತ್ವ ಇತ್ಯಾದಿ ಸಾಧನೆಗಳನ್ನು ಮಾಡಿಸುವನೆಂದು ವಿವರಿಸುತ್ತಾರೆ–"ಐದವಿದ್ಯೆಗಳೊಳಗೆ"-ಎಂಬ ಪ್ರಸಕ್ತ ಸಂಧಿಗತ ಈ ೧೩ನೆಯ ಪದ್ಯದಿಂದ. ॥೧೩॥

**ಪ್ರತಿಪದಾರ್ಥ :–**

**ಐದವಿದ್ಯೆಗಳೊಳಗೆ**= ಪೂರ್ವೋಕ್ತ ತಮಮೋಹಾದಿ ಐದು ಅವಿದ್ಯೆಗಳಲ್ಲಿ (ಅವಿದ್ಯಾ ಪಂಚಕಗಳಲ್ಲಿ) **ಇಹ**= ವಿದ್ಯಮಾನನಾಗಿರುವ **ನಾಗಾದಿಗಳ**= ನಾಗ, ಕೂರ್ಮ, ಕೃಕಲ, ದೇವದತ್ತ, ಧನಂಜಯ ಎಂಬ ಪಂಚಉಪವಾಯುಗಳ **ಅಧಿಷ್ಠಾನದಲ್ಲಿ**= ಅಂತರ್ಯಾಮಿಯಾಗಿದ್ದು **ಲಕುಮೀಧವನು**= ಲಕ್ಷ್ಮೀಪತಿಯಾದ ನಾರಾಯಣದೇವರು **ಕೃದ್ಧೋಲ್ಕನೊಡಲಾದ**= ಕೃದ್ಧೋಲ್ಕ, ಮಹೋಲ್ಕ, ವೀರೋಲ್ಕ, ದ್ಯುಲ್ಕ ಮತ್ತು ಸಹಸ್ರೋಲ್ಕ ಎಂಬ **ಐದು ರೂಪಗಳ**= ಪಂಚರೂಪಗಳನ್ನು **ತಾ ಧರಿಸಿ**= ನಾರಾಯಣನೇ ಸ್ವೀಕಾರಮಾಡಿ **ಸಜ್ಜನರ**= ಮುಕ್ತಿಯೋಗ್ಯರಾದ ಸಾತ್ವಿಕ ಜೀವರಿಗೆ **ಅವಿದ್ಯವ**= ಮಧ್ಯೆ ಮಧ್ಯೆ ಬರುತ್ತಿರುವ ಅನ್ಯಥಾಜ್ಞಾನಾದಿಗಳನ್ನು **ಛೇದಿಸುವ**= ಕಡಿದುಹಾಕಿ, ಪರಿಹಾರ ಮಾಡುತ್ತಾ **ತಾಮಸರಿಗೆ**= ತಮೋಯೋಗ್ಯ ಜೀವರಿಗೆ **ಅಜ್ಞಾನಾದಿಗಳ**= ಅಜ್ಞಾನ, ಅನ್ಯಥಾಜ್ಞಾನಾದಿಗಳನ್ನು **ಕೊಟ್ಟು**= ಅವರವರ ಯೋಗ್ಯತಾನುಸಾರ ಇತ್ತು **ಸಾಧನವ ಮಾಡಿಸುವ**= ತದಂತರ್ಗತ ದ್ವಾರಾ ಸಾಧನ ಮಾಡಿಸುತ್ತಾನೆ. ॥೧೩॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :–

ಅವಿದ್ಯಾಗತ ಆರುನೂರು ರೂಪಗಳು ಯಾಕೆ ಹೇಳಬೇಕೆಂದರೆ, ಈ ಆರುನೂರು ರೂಪಗಳಿಂದ ಸಜ್ಜನರ ಅವಿದ್ಯಾ ಪರಿಹಾರಕ್ಕೂ, ದುರ್ಜನರ

ಅವಿದ್ಯಾ ವೃದ್ಧಿಗಾಗಿಯೂ ಇವು ಕಾರಣ ರೂಪಗಳು. ಅವಿದ್ಯಾ ಎಂಬುದು ತೃತೀಯ ಪರಿಚ್ಛೇಧದ ಲಿಂಗದೇಹದಲ್ಲಿ ಬೀಜಾತ್ಮಕವಾದದ್ದು. ಅದರ ಕಾರ್ಯ ಸ್ಥೂಲದೇಹದಲ್ಲಿ ಆಗುತ್ತದೆ. ಸ್ಥೂಲದೇಹದಲ್ಲಿ ವಿದ್ಯಮಾನವಾದ ತ್ರಿಗುಣಗಳ ಒಳಗೆ ತಮೋಗುಣದಲ್ಲಿ ಅವಿದ್ಯಾ ಪಂಚಕವೇ ಎಂತ ತಿಳಿಯಬೇಕು. ಆದರೆ ಈ ಅವಿದ್ಯಾ ಪಂಚಕದಲ್ಲಿ ನಾಗಾದಿ ಪ್ರಾಣರೂಪಗಳು, ಪ್ರಾಣಾದಿ ಪಂಚಪ್ರಾಣಗಳು ಉಂಟೋ ಎಂತ ಶಂಕಾ ಇಲ್ಲ. ಎಂದರೆ, ಇದೇ ಹರಿಕಥಾಮೃತಸಾರದಲ್ಲಿ **"ಸರಸಿಜಾಸನ ವಾಣಿ ಭಾರತಿ ಭರತರಿಂದೊಡಗೂಡಿ ಲಿಂಗದಿ ಇರುತಿಹರು"**-ಎಂತ ಹೇಳಿದ್ದಾರೆ. ಆದ್ದರಿಂದ ಇಲ್ಲಾ ಎಂತ ಹೇಳಲಿಕ್ಕೆ ಇಲ್ಲ. ಶ್ರೀ ವಿಜಯದಾಸರು ತಾವು ಮಾಡಿದ —**"ಲಿಂಗ ಪರಿಚ್ಛೇದ ಸುಳಾದಿ"** ಯಲ್ಲಿ—**"ತತ್ವೇಶರು ಲಿಂಗದೇಹದಲಿ ಇಲ್ಲ || ಎತ್ತ ನೋಡಿದರತ್ತ ಶ್ರೀವ್ಯಾಪ್ತಗಳು || ಕರ್ತನು ಶ್ರೀವಿಜಯವಿಠ್ಠಲರೇಯಾ"** -ಎಂತ ಹೇಳಿದ್ದಾರೆ.

ಮತ್ತೆ ವಿಜಯರಾಯರು ಮಾಡಿರುವ **"ಜೀವಸುಳಾದಿ"**ಯಲ್ಲಿ ಬ್ರಹ್ಮ ವಾಯು, ಭಾರತಿ, ಸರಸ್ವತಿ ಈ ನಾಲ್ವರು ಲಿಂಗದ ತೃತೀಯ ಪರಿಚ್ಛೇದವಾದ ತಮೋಗುಣದ ಮುಂಭಾಗದಲ್ಲಿ ಇದ್ದಾರೆ ಎಂತ ಹೇಳಿದ್ದಾರೆ. ಪರಸ್ಪರ ವಾಕ್ಯಗಳಿಗೆ ವಿರೋಧ ಪ್ರಾಪ್ತವಾಯಿತು. ದಾವದು ನಿತಾಂತವೆಂದರೆ, ಎರಡೂ ನಿತಾಂತವೇ. ವಿವಿಕ್ಷಾ ಭೇದ ಅಷ್ಟೇ. ಅದು ದಾವದೆಂದರೆ. ಲಿಂಗಗಳು ಎರಡು. ಅನಾದಿ ಲಿಂಗ ಒಂದು, ವೈಷಯಿಕ ಲಿಂಗ ಒಂದು. ವೈಷಯಿಕ ಲಿಂಗ ಎಂದರೆ, ಸೃಷ್ಟಿಕಾಲದಲ್ಲಿ ವೈಷಯಿಕ ಶರೀರ ಎಂದು ಲಿಂಗದ ಮ್ಯಾಲೆ ಆಯಿತು. ಈ ವೈಷಯಿಕ ಶರೀರಕ್ಕೆ ಅಣುಲಿಂಗ ಎಂದು ಹೆಸರು. ಲಿಂಗಸದೃಶ, ಲಿಂಗದೇಹಸದೃಶ, ಲಿಂಗದೇಹಗತ ವಿದ್ಯಮಾನಗಳು ಯಾವತ್ತು ಈ ಅಣುಲಿಂಗದಲ್ಲಿ ಇರೋದಾಗಿದೆ. ಇದರಲ್ಲಿ ವಾಯುದೇವರ ಪ್ರವೇಶವು, ಇಲ್ಲಾದರೋ ಮುಖ್ಯಾಭಿಮಾನಿ ರಮಾ, ಅಮುಖ್ಯಾಭಿಮಾನಿ ವಾಯುದೇವರು ಅಂತ ತಿಳಿಯಬೇಕು. ಆದ್ದರಿಂದ ಶ್ರೀ ವಿಜಯರಾಯರು ಲಿಂಗದೇಹದಲ್ಲಿ ತತ್ವೇಶರು ಇಲ್ಲ ಎಂತ ಹೇಳಿದ್ದು ಅನಾದಿಲಿಂಗ ವಿವಕ್ಷಯಾ. ಶ್ರೀ ಜಗನ್ನಾಥದಾಸರಾಯರು ಲಿಂಗದೇಹದಲ್ಲಿ ವಾಯುದೇವರು ಇದ್ದಾರೆ

ಎಂತ ಹೇಳಿದ್ದು ಅಣುಲಿಂಗ ವಿವಕ್ಷಯಾ. ಆದ್ದರಿಂದ ದಾವವಾಕ್ಯಕ್ಕೂ ವಿರೋಧ ಬರಲಿಲ್ಲ. ॥೧೩॥

(೨) "ಭಾವಪ್ರಕಾಶಿಕೆ"-ವ್ಯಾಖ್ಯಾನ :-

ಮೇಲಿನ ಪದ್ಯದಲ್ಲಿ ನಾಗಾದಿ ಪಂಚಪ್ರಾಣರು ಸಕಲ ಜನರ ಶಬ್ದಾದಿಗಳಲ್ಲಿರುವರೆಂದು ಹೇಳಿ, ಇವರಂತರ್ಯಾಮಿ ಪರಮಾತ್ಮನು ಅಯೋಗ್ಯ ಜನರಲ್ಲಿ ತಮೋಭಿಮಾನಿ ದುರ್ಗಾಪತಿ ರೂಪನಾಗಿ ನಿಂತು, ಅವಿದ್ಯಾಪಂಚಪರ್ವ ಸಂಬಂಧವಾದ ಅನ್ಯಥಾ ಜ್ಞಾನಾದಿಗಳಲ್ಲಿ ಪ್ರೇರಿಸುವನೆಂದು ಹೇಳಿದರು. ಈಗ ಅದೇ ನಾಗಾದಿ ಪ್ರಾಣರ ಅಂತರ್ಯಾಮಿಯಾಗಿ ಸಜ್ಜನರಲ್ಲಿ ಪರಮಾತ್ಮನು ಏನು ಮಾಡಿಸುವನೆಂದು ಹೇಳುತ್ತಾರೆ.

ಅಯೋಗ್ಯರಿಗೆ ೫ ವಿಧವಾದ ಅವಿದ್ಯೆಯಲ್ಲಿ ಬುದ್ಧಿಯನ್ನು ಪ್ರೇರಿಸುವಂತೆ ಸಜ್ಜನ ಶಬ್ದಾದ್ಯಧಿಷ್ಠಾನದಲ್ಲಿದ್ದು, ತರ್ಕ, ವ್ಯಾಕರಣ, ಮೀಮಾಂಸಾ, ಛಂದಸ್ಸು, ಅಲಂಕಾರಗಳೆಂಬ ಪಂಚವಿದ್ಯಾ ಪ್ರೇರಕನಾಗಿ. ನಾಗಾದಿ ಪಂಚಪ್ರಾಣರೊಳಗೆ ಶ್ರೀ ಲಕ್ಷ್ಮೀಪತಿಯು ಕೃದ್ಧೋಲ್ಕ, ಮಹೋಲ್ಕ. ವೀರೋಲ್ಕ ದ್ಯುಲ್ಕ, ಸಹಸ್ರೋಲ್ಕಗಳೆಂಬ ೫ ರೂಪಗಳಿಂದ ಇದ್ದು, ಅವರವರ ಯೋಗ್ಯತಾನುಸಾರ ಅಂದರೆ, ಮುಕ್ತಿಯೋಗ್ಯರಿಗೆ ಮುಕ್ತಿಸಾಧನವನ್ನು ಮಾಡಿಸುವನು. ತಮೋ ಯೋಗ್ಯರಿಗೆ ತಮಸ್ಸಾಧನವನ್ನೂ, ಮಧ್ಯಮರಿಗೆ ಮಿಶ್ರಲೋಕದ ಸಾಧನವನ್ನೂ ಮಾಡಿಸುವನು. ॥೧೩॥

(೩) "ಶಿವದರ್ಪಣಟೀಕಾ" ವ್ಯಾಖ್ಯಾನ :-

ಅವಿದ್ಯಾ ಪಂಚಕದಲ್ಲಿ ಕೃದ್ಧೋಲ್ಕಾದಿ ಪಂಚರೂಪದಿಂದ ಇದ್ದು, ಸಜ್ಜನರ ಅಜ್ಞಾನ ಛೇದಿಸಿ, ತಮೋಯೋಗ್ಯರಿಗೆ ಅಜ್ಞಾನವೃದ್ಧಿ ಮಾಡುತ್ತಾನೆಂದು ಹೇಳುತ್ತಾರೆ.-"ಐದುವಿದ್ಯೇತಿ" ॥೧೩॥

(೪) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :–

"ಐದು"-ಇತಿ ॥ ತಮಸ್ತು ಶಾರ್ವರಂ ವಿಂದ್ಯಾತ್ ಮೋಹಶ್ಚೈವ ವಿಪರ್ಯಯಾತ್ ॥ ಮೋಹಃ ಭ್ರಾಂತಿಃ ॥ ತಥಾಗ್ರಹಃ ಮಹಾಮೋಹಃ ತಾಮಿಸ್ರಃ ಕ್ರೋಧಃ ಉಚ್ಯತೇ ॥ ಮರಣಂ ತ್ವಂಧತಾಮಿಸ್ರಂ ಅವಿದ್ಯಾ ಪಂಚಪರ್ವಿಕಾ ॥ ಇತಿ ಭಾಗವತ ತೃತೀಯ ತಾತ್ಪರ್ಯೇ ॥ ತದರ್ಥಸ್ತು "ಶರ್ವರೀ ಭವತಮಃ ಸದೃಶಂ ಜೀವೇಶ್ವರ ವೈಲಕ್ಷಣ್ಯಾ ಜ್ಞಾನಾತ್ಮಕಂ ತಮಃ ಏಕಮ್" ||೧||

ಜೀವೇಶ್ವರಾ ಭೇದ ಜ್ಞಾನಾಭ್ಯೋ ವಿಪರ್ಯಯಾಪರ ಪರ್ಯಾಯಃ ಮೋಹಃ ಏಕಃ ||೨||

ತದಾಗ್ರಹಃ ಮಹಾಮೋಹಃ ಸನ್ಮೋಹಾ ಪರಪರ್ಯಾಯಃ ಏಕಃ ||೩||

ಜೀವೇಶ್ವರಾಭೇದ ನಿರಾಕರ್ತೃಷು ಕ್ರೋಧ ತಾಮಿಸ್ರಃ ಏಕಃ ||೪||

ಜೀವೇಶ್ವರಾಭೇದವಾದಿಭಿಃ ಸಹ ಮರಣ ಪರ್ಯಂತಂ ವಿಗ್ರಹಃ ಅಂಧತಾಮಿಸ್ರಃ ಏಕಃ ||೫|| ಇತಿ ಮಂಜರೀ ||

"ತಮಃ ಶಬ್ದಗತಂ ಪ್ರಾಹುಃ ಮೋಹಾ ಸ್ಪರ್ಶಗತೋ ಮತಃ ॥ ಮಹಾಮೋಹಂ ರೂಪಗತಃ ತಾಮಿಸ್ರಃ ರಸಗಃ ಮತಃ || ಗಂಧಗೋಽಂಧ ತಾಮಿಸ್ರಾಖ್ಯಃ ತ ಏತೇ ಭಾವರೂಪತಾಃ" ॥ ಇತಿ ಪ್ರಕಾಶಸಂಹಿಯಾಮ್॥

ಮೊದಲಾದ=ವೀರೋಲ್ಕ ಮಹೋಲ್ಕ ದ್ಯುಲ್ಕ ಸಹಸ್ರೋಲ್ಕಾಃ ಕ್ಮ ತ್=ಕ್ರೋಧಃ ॥ ತಂ ಹತಿಂ ಪ್ರಾಪಯತಿ ಇತಿ || ತನ್ನಾಮ್ನೀ ದುರ್ಯೋಧನಃ ಕೃದ್ಧಃ || ತದ್ವಿಷಯೇ ಉಲ್ಕೇವ ಆಚರತೀತಿ ಕೃದ್ಧೋಲ್ಕಃ ||೧||

ಮಹತೋ ರುಲಯೋಃ ರುದ್ರೇಂದ್ರಯೋಃ ತಂ ಯಸ್ಮಾತ್ ಸ ತಥೋಕ್ತಃ ||೨||

ವೀರಾಣಾಂ ಋಜೂನಾಂ ಉತ್ಕೃಷ್ಟಂ ಲಂ ಅಮೃತಂ ಕಾಮಯತಿ ದಾತುಂ ಪ್ರತಿಜಾನೀತೇ ಇತಿ ತಥೋಕ್ತಃ ||೩||

ದ್ಯೂಪಲಕ್ಷಿತಯಾವಲ್ಲೋಕಾನಾಂ ಉಲ್ಕೇವ ಪ್ರಕಾಶಕತ್ವಾತ್ ಸ ತಥೋಕ್ತಃ || ಸಹಸ್ರ ಸಂಖ್ಯಾಕಾಃ ಉಲ್ಕಾಃ ಕಾಂತಿ ವಿಶೇಷಾಃ ಯಸ್ಯ ಇತಿ ತಥೋಕ್ತಃ ||೪||

**ಕನ್ನಡಾರ್ಥ :**

"ಐದವಿದ್ಯೆಗಳಲ್ಲಿ" ಎಂಬ ಪದ್ಯದಲ್ಲಿ ಅವಿದ್ಯಾಗಳಲ್ಲಿರುವ ಭಗವದ್ರೂಪಗಳನ್ನು ನಿರೂಪಿಸುತ್ತಾರೆ. ಭಾಗವತ ತಾತ್ಪರ್ಯ ತೃತೀಯ ಸ್ಕಂಧದಲ್ಲಿ- "ತಮಸ್ಸು-ಮೋಹ-ಮಹಾಮೋಹ-ತಾಮಿಸ್ರ-ಅಂಧತಾಮಿಸ್ರ"- ಎಂಬುದಾಗಿ ಅವಿದ್ಯೆಗಳಲ್ಲಿ "ಪರ್ವಗಳು- ಪ್ರಭೇದಗಳು"-ಎಂದು ಹೇಳಿರುತ್ತಾರೆ. ಈ ಶ್ಲೋಕಗಳ ಅರ್ಥವನ್ನು ಹೀಗೆ ತಿಳಿಯಬೇಕು.

(೧) ರಾತ್ರಿಯಲ್ಲಿರುವ ಕತ್ತಲೆಯಂತೆ ಇರುವ ಜೀವೇಶ್ವರ ವೈಲಕ್ಷಣ್ಯವನ್ನು (ಭೇದವನ್ನು) ತಿಳಿಯದೇ ಇರುವುದು. ಇದು ಅಜ್ಞಾನ. ಇದೇ "ತಮಸ್ಸು".

(೨) ಜೀವೇಶ್ವರರಲ್ಲಿ ಅಭೇದದನ್ನು ತಿಳಿಯುವುದೇ ಒಂದು ಅಜ್ಞಾನವೆಂದು ಕರೆಯಲ್ಪಡುವ ವಿಪರ್ಯಾಯ. ಇದು ವಿಪರೀತ ಜ್ಞಾನವು. ಇದೇ "ಮೋಹ" ಎಂಬ ಎರಡನೆಯ ಅವಿದ್ಯೆ.

(೩) ಜೀವೇಶ್ವರ ಅಭೇದವೇ ಇದ್ದೆ ಈ ವಿಷಯದಲ್ಲಿ ಮಹಾ ಆಗ್ರಹವು. ಅಂದರೆ, ದುರಾಗ್ರಹವು "ಮಹಾಮೋಹ" ವೆಂಬ ಮೂರನೆಯ ಅವಿದ್ಯೆಯು.

(೪) ಜೀವೇಶ್ವರರಲ್ಲಿ ಐಕ್ಯವನ್ನು ನಿರಾಕರಿಸುವವರಲ್ಲಿ ಕ್ರೋಧವು "ತಾಮಿಸ್ರ"ವು. ಇದು ನಾಲ್ಕನೆಯ ಅವಿದ್ಯೆಯು.

(೫) "ಜೀವೇಶ್ವರರಲ್ಲಿ ಭೇದವಿದೆ"-ಎಂದು ವಾದಿಸುವ ಸದ್ವಾದಿಗಳೊಡನೆ ಮರಣವಾಗುವವರೆಗೂ ಕಲಹ (ವಿಗ್ರಹ) ಮಾಡುವುದು "ಅಂಧತಾಮಿಸ್ರ" ವೆಂಬ ಐದನೆಯ ಅವಿದ್ಯೆಯು.

ಹೀಗೆ **ಮಂಜರೀ** ಎಂಬ ಗ್ರಂಥದಲ್ಲಿ ಹೇಳಲಾಗಿದೆ. ಈ ಅವಿದ್ಯಾ ಪಂಚಕಗಳ ಅಧಿಷ್ಠಾನಗಳು ಇಂತಿವೆ : —

(೧) ಶಬ್ದದಲ್ಲಿ ತಮಸ್ಸು ಇದೆ ಎಂದು ಪ್ರಾಜ್ಞರು ಹೇಳುತ್ತಾರೆ.
(೨) ಸ್ಪರ್ಶದಲ್ಲಿ ಮೋಹವಿದೆ ಎಂದು ಪ್ರಸಿದ್ಧವಾಗಿದೆ.
(೩) ರಸದಲ್ಲಿ ತಾಮಿಸ್ರವಿದೆ ಎಂದು ಪ್ರಸಿದ್ಧಿ.
(೪) ರೂಪದಲ್ಲಿ ಮಹಾಮೋಹವಿದೆ.
(೫) ಗಂಧದಲ್ಲಿ ಅಂಧತಾಮಿಸ್ರವಿದೆ.

ಮೇಲ್ಕಂಡ ಐದು ಅವಿದ್ಯೆಗಳು "ಭಾವರೂಪ" ಗಳಾಗಿವೆ ಎಂದು **ಪ್ರಕಾಶಸಂಹಿತೆ**ಯಲ್ಲಿ ಉಕ್ತವಾಗಿದೆ.

ವೀರೋಲ್ಕ, ದ್ಯುಲ್ಕ, ಮಹೋಲ್ಕ ಮತ್ತು ಸಹಸ್ರೋಲ್ಕ ಭಗವದ್ರೂಪಗಳು.

(೧) "ಕೃತ್"-ಎಂದರೆ ಕ್ರೋಧ. ಅದನ್ನು ನಾಶಗೊಳಿಸುವವನು "ಕೃದ್ಧಃ" ಅಥವಾ ಕೃತ್ = ಕ್ರೋಧ. ಅದಕ್ಕೆ ಅಭಿಮಾನಿಯಾದ ದುರ್ಯೋಧನನು ಕೃದ್ಧನು. ದುರ್ಯೋಧನನ ವಿಷಯದಲ್ಲಿ ಉಲ್ಕಾ (ಜ್ವಾಲೆನೊಂದಿದ ಕೆಂಡ) ದಂತೆ ವರ್ತಿಸುವುದರಿಂದ ಭಗವಂತನಿಗೆ **"ಕೃದ್ಧೋಲ್ಕ"** ಎಂದು ಹೆಸರು.

(೨) ಮಹಾತ್ಮರಾದ ರುದ್ರ, ಇಂದ್ರಾದಿ ದೇವತೆಗಳಿಗೆ ಸುಖಯುವನ್ನೀಯುವುದರಿಂದ ನಾರಾಯಣನಿಗೆ **"ಮಹೋಲ್ಕ"** ಎಂದು ಹೆಸರು.

(೩) ವೀರರೆನಿಸಿದ ಋಜುಗಳಿಗೆ ಉತ್ಕೃಷ್ಟವಾದ ಆನಂದಪ್ರದನಾದ್ದರಿಂದ **"ವೀರೋಲ್ಕ"** ಎಂತ ನಾಮ.

(೪) ದ್ಯು ಮುಂತಾದ ಸಕಲ ಲೋಕಗಳನ್ನು ಉಲ್ಕೆಯಂತೆ ಪ್ರಕಾಶಿಸುವುದರಿಂದ "ದ್ಯುಲ್ಕ" ಎಂದು ಹೆಸರು.

(೫) ಸಹಸ್ರಾರು ಕಾಂತಿಯ ಪ್ರಭೇದಉಳ್ಳವನಾದ್ದರಿಂದ "ಸಹಸ್ರೋಲ್ಕ" ಎನ್ನುವರು. ||೧೩||

(೫) "ಗುರುಹೃದಯಪ್ರಕಾಶಿಕೆ" ವ್ಯಾಖ್ಯಾನ :–

ಹಿಂದೆ ಹೇಳಿದ ಅಜ್ಞಾನಾದಿ ಪಂಚಪರ್ವದ ಅಧಿಷ್ಠಾನದಲ್ಲಿರುವ ನಾಗಾದಿ ಪಂಚ ಉಪವಾಯುಗಳಲ್ಲಿ ಲಕ್ಷ್ಮೀಪತಿಯು ಕೃದ್ಧೋಲ್ಕಾದಿ ಐದು ರೂಪಗಳ ಧರಿಸಿಕೊಂಡು, ಸಜ್ಜನರಿಗೆ ಅಜ್ಞಾನಾದಿಗಳನ್ನು ಪರಿಹರಿಸಿ, ಅಯೋಗ್ಯರಿಗೆ ಅಜ್ಞಾನಾದಿಗಳನ್ನು ಕೊಟ್ಟು. ಅವರವರ ಸಾಧನೆ ಮಾಡಿಸುವನೆಂದು ಉಪಾಸನೆ ಮಾಡುವರೆಂದು ನಿರೂಪಿಸುತ್ತಾರೆ. ||೧೩||

## ಸರ್ವವ್ಯಾಖ್ಯಾನಸಾರಸಂಗ್ರಹ

ಅವಿದ್ಯಾ ಪಂಚಕಗಳನ್ನು "ಐದವಿದ್ಯೆಗಳೊಳಗೆ" ಎಂದು ನಿರೂಪಿಸಿರುತ್ತಾರೆ ಜ್ಞಾನಿವರೇಣ್ಯರಾದ ದಾಸವರ್ಯರು. ಅಂದರೆ, ಐದು ಅವಿದ್ಯೆಗಳೊಳಗೆ ಎಂದು ಬಿಡಿಸಿಕೊಳ್ಳಬೇಕು. ಅವೆರಡು ಶಬ್ದಗಳನ್ನು ಜೋಡಿಸಿದಾಗ "ಐದವಿದ್ಯೆ" ಎಂದಾಗುವುದು. ಈ ಅವಿದ್ಯಾ ಪಂಚಕಗಳನ್ನು ಶ್ರೀಮದ್ಭಾಗವತ ತಾತ್ಪರ್ಯ ತೃತೀಯ ಸ್ಕಂಧದಲ್ಲಿ ಈ ರೀತಿಯಲ್ಲಿ ವಿವರಿಸಿರುತ್ತಾರೆ :–

"ತಮಸ್ತು ಶಾರ್ವರಂ ವಿಂದ್ಯಾತ್ ಮೋಹಶ್ಚೈವ ವಿಪರ್ಯಯಾತ್ ||
ಮೋಹಃ ಭ್ರಾಂತಿಃ ತದಾಗ್ರಹಃ ಮಹಾಮೋಹಃ ತಾಮಿಸ್ರಃ ಕ್ರೋಧಃ ಉಚ್ಯತೇ ||
ಮರಣಂ ತ್ವಂಧತಾಮಿಸ್ರಂ ಅವಿದ್ಯಾ ಪಂಚಪರ್ವಿಕಾ ಇತಿ ||"

ಈ ಅವಿದ್ಯಾಪಂಚಕಗಳಾವುವೆಂದರೆ :—

(೧) ತಮಸ್ಸು :—

ರಾತ್ರಿಯಲ್ಲಿರುವ ಕತ್ತಲೆಯಂತೆ ಇರುವ ಜೀವೇಶ್ವರ ವೈಲಕ್ಷಣ್ಯವನ್ನು (ಭೇದವನ್ನು) ತಿಳಿಯದೇ ಇರುವುದು. ಇದು ಅಜ್ಞಾನವು. ಇದಕ್ಕೆ "ತಮಸ್ಸು" ಎಂದು ಹೆಸರು.

(೨) ಮೋಹ :—

ಜೀವೇಶ್ವರರಲ್ಲಿ ಭೇದವಿದೆ ಎಂದು ತಿಳಿಯುವುದೇ ಅನ್ಯಥಾ ಜ್ಞಾನ. ಇದು ವಿಪರೀತ ಜ್ಞಾನವು. ಇದಕ್ಕೆ "ಮೋಹ" ಎಂದು ಹೆಸರು.

(೩) ಮಹಾಮೋಹ :—

ಜೀವೇಶ್ವರರಲ್ಲಿ ಅಭೇದವೇ ಇದೆ. ಎಂದೆಂದಿಗೂ ಭೇದವಿಲ್ಲ ಎಂಬ ದುರಾಗ್ರಹವೇ ಮೂರನೆಯ ಅವಿದ್ಯೆಯಾದ "ಮಹಾಮೋಹ" ವು.

(೪) ತಾಮಿಸ್ರ :—

ಜೀವೇಶ್ವರರಲ್ಲಿ ಭೇದವಿದೆ ಎಂದೂ ಮತ್ತು ಐಕ್ಯವನ್ನು ಖಂಡಿಸುವವ ರಲ್ಲಿ ಕ್ರೋಧವೇ "ತಾಮಿಸ್ರ" ಎಂಬ ಅವಿದ್ಯೆಯು.

(೫) ಅಂಧತಾಮಿಸ್ರ :—

"ಜೀವ ಮತ್ತು ಈಶರಿಗೆ ಪರಸ್ಪರ ಭೇದವಿದೆ"-ಎಂದು ವಾದಿಸುವ ಸದ್ವಾದಿಗಳೊಡನೆ ಆಮರಣಾಂತವಾದ ಕಲಹವೆಂಬ ಅವಿದ್ಯೆಯೇ "ಅಂಧ ತಾಮಿಸ್ರ" ಎನಿಸುವುದು.

ಇಂತು, ತಮಸ್ಸು, ಮೋಹ, ಮಹಾಮೋಹ, ತಾಮಿಸ್ರ ಮತ್ತು ಅಂಧ ತಾಮಿಸ್ರಗಳೆಂಬ ಅವಿದ್ಯಾ ಪಂಚಕಗಳಲ್ಲಿ (ಐದವಿದ್ಯೆಗಳೊಳಗೆ) ಅಧಿಷ್ಠಾನ ಭೂತರಾದ ನಾಗ, ಕೂರ್ಮ, ಕೃಕಲ, ದೇವದತ್ತ ಮತ್ತು ಧನಂಜಯರೆಂಬ ಪಂಚಉಪವಾಯುಗಳು ಇದ್ದಾರೆ.

ನಾಗಾದಿ ಪಂಚಕಗಳು ಪಂಚಭೂತಗಳ ತನ್ಮಾತ್ರಾ ಗುಣಗಳಾದ ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧಗಳಲ್ಲಿ ವಿದ್ಯಮಾನರಾಗಿದ್ದಾರೆ. ಈ ತನ್ಮಾತ್ರಾಪಂಚಕಗಳು ಅವಿದ್ಯಾಪಂಚಕಗಳಿಗೆ ಅಧಿಷ್ಠಾನಗಳಾಗಿವೆ. ಹೇಗೆಂದರೆ:

(೧) **ಶಬ್ದವು ತಮಸ್ಸಿಗೆ ಅಧಿಷ್ಠಾನ.**
(೨) **ಸ್ಪರ್ಶವು ಮೋಹಕ್ಕೆ ಅಧಿಷ್ಠಾನ,**
(೩) **ರೂಪವು ಮಹಾಮೋಹಕ್ಕೆ ಅಧಿಷ್ಠಾನ.**
(೪) **ರಸವು ತಾಮಿಸ್ರಕ್ಕೆ ಅಧಿಷ್ಠಾನ.**
(೫) **ಗಂಧವು ಅಂಧತಾಮಿಸ್ರಕ್ಕೆ ಅಧಿಷ್ಠಾನ.**

ಮೇಲ್ಕಂಡ ಅವಿದ್ಯಾಪಂಚಕಗಳು ಮತ್ತು ಅವುಗಳಿಗೆ ಅಧಿಷ್ಠಾನಗಳಾದ ಪಂಚ ತನ್ಮಾತ್ರಾಗುಣಗಳೂ **"ಮಂಜರೀ" ಮತ್ತು "ಪ್ರಕಾಶಸಂಹಿತೆ"**-ಎಂಬ ಗ್ರಂಥಗಳಲ್ಲಿ ಉಕ್ತವಾಗಿದೆ.

**ಪ್ರಮಾಣ :–**

**ತಮಃ ಶಬ್ದಗತಂ ಪ್ರಾಹುಃ ಮೋಹಾಸ್ಪರ್ಶಗತೋ ಮತಃ ॥**
**ಮಹಾಮೋಹಂ ರೂಪಗತಃ ತಾಮಿಸ್ರಃ ರಸಗಃ ಮತಃ ॥**
**ಗಂಧಗೋ ಅಂಧತಾಮಿಸ್ರಾಖ್ಯಃ ತ ಏತೇ ಭಾವರೂಪತಾಃ ॥**

**-ಇತಿ ಪ್ರಕಾಶಸಂಹಿತಾಯಾಮ್.**

ಇಂತು, ಅವಿದ್ಯಾಪಂಚಕಗಳೊಳಗೆ ವಿದ್ಯಮಾನರಾದ ನಾಗಾದಿ ಪಂಚಕಗಳ ಅಧಿಷ್ಠಾನದಲ್ಲಿ ಲಕ್ಷ್ಮೀಪತಿಯಾದ ಪರಮಾತ್ಮನು ಕೃದ್ಧೋಲ್ಕಾದಿ ಪಂಚ ರೂಪಗಳನ್ನು ಧಾರಣಮಾಡಿ ಇದ್ದಾನೆ, ಅವುಗಳ ವಿವರ ಇಂತಿದೆ :-

**(೧) ಕೃದ್ಧೋಲ್ಕ :—**

"ಕೃತ್"ಎಂದರೆ ಕ್ರೋಧವು, ಅದನ್ನು ನಾಶಗೊಳಿಸುವವನು, ಅಂದರೆ, ಕ್ರೋಧನಾಶಕ ರೂಪವು ಕೃದ್ಧೋಲ್ಕ. ಸಜ್ಜನರಿಗೆ ಆಗಿಂದಾಗ್ಗೆ ಬಂದು

ಪೀಡಿಸುವ ಕ್ರೋಧವನ್ನು ನಿವಾರಿಸುವನು. ಆದರೆ ಅಯೋಗ್ಯರಾದ ತಮೋ ಜೀವರಿಗೆ ಕ್ರೋಧವನ್ನು ವೃದ್ಧಿ ಮಾಡುವನು. ಇದರಿಂದ "ಉಲ್ಕಾ" ಎಂದರೆ ಅಗ್ನಿಯಂತೆ ಪ್ರಜ್ವಲಿಸುವುದು ಎಂದರ್ಥ.

(೨) ಮಹೋಲ್ಕ : —

ಮಹಾತ್ಮರಾದ ರುದ್ರ ಮತ್ತು ಇಂದ್ರಾದಿ ದೇವತೆಗಳಿಗೆ ಸುಖವನ್ನು ಕೊಡುವುದರಿಂದ ಭಗವಂತನಿಗೆ ಮಹೋಲ್ಕ ಎಂದು ಹೆಸರು. ಅಯೋಗ್ಯರಿಗೆ ದುಃಖವೃದ್ಧಿ ಮಾಡುವ ರೂಪ.

(೩) ವೀರೋಲ್ಕ : —

ಋಜುಗಳಿಗೆ ಯಾವತ್ತೂ ಅಜ್ಞಾನಾದಿ ದೋಷಗಳಿಲ್ಲ. ಅವರೆಲ್ಲರೂ ಅತಿರೋಹಿತವಿಮಲವಿಜ್ಞಾನಿಗಳು. ಅಂತಹ ಋಜುಗಳಿಗೆ ಉತ್ಕೃಷ್ಟವಾದ ಆನಂದವನ್ನು ಕೊಡುವುದರಿಂದ, ವೀರೋಲ್ಕ ಎಂತ ನಾಮ.

(೪) ದ್ಯುಲ್ಕ : —

ದ್ಯು ಅಂದರೆ ಸ್ವರ್ಗಾದಿ ಲೋಕಗಳನ್ನು ತನ್ನ ಕಾಂತಿಯಿಂದ ಪ್ರಕಾಶಗೊಳಿಸುವುದರಿಂದ ದ್ಯುಲ್ಕ ಎಂದು ಪರಮಾತ್ಮನಿಗೆ ಹೆಸರು.

(೫) ಸಹಸ್ರೋಲ್ಕ : —

ಕೋಟಿಸೂರ್ಯಪ್ರಕಾಶನು ಸಹಸ್ರಾರು ಕಾಂತಿ ಪ್ರಭೇದಯುಕ್ತನಾಗಿರುವುದರಿಂದ ಸಹಸ್ರೋಲ್ಕ ನಾಮಕನು.

ಇಂತು ಕೃದ್ಧೋಲ್ಕ, ಮಹೋಲ್ಕ, ವೀರೋಲ್ಕ, ದ್ಯುಲ್ಕ ಮತ್ತು ಸಹಸ್ರೋಲ್ಕವೆಂಬ ಪಂಚರೂಪಗಳಿಂದ ಶ್ರೀ ಪರಮಾತ್ಮನು ಸಜ್ಜನರಾದ ಮತ್ತು ಯೋಗ್ಯ ಚೇತನರಿಗೆ ಅವಿದ್ಯಾ ಪಂಚಕಗಳನ್ನು ನಿವಾರಣೆಮಾಡಿ, ತಮೋಯೋಗ್ಯರಾದ ಅಯೋಗ್ಯ ಜೀವರಿಗೆ ಅಜ್ಞಾನ, ವಿಪರೀತಜ್ಞಾನ ಮೋಹಾದಿ

ಗಳನ್ನು ಕೊಟ್ಟು, ಅವರವರ ಯೋಗ್ಯತಾನುಸಾರ ಸಾಧನೆಗಳನ್ನು ಮಾಡಿ ಮಾಡಿಸುತ್ತಿರುವನು ಎಂದು ವಿವರಿಸುತ್ತಾರೆ ಪ್ರಸಕ್ತ ಪದ್ಯದಿಂದ. ||೧೩||

## ಪದ್ಯ (೧೪)

ಮೂಲ :–

ಗೋವುಗಳೊಳುದ್ಗೀಥನಿಹ ಪ್ರ ।
ಸ್ತಾವ ಹಿಂಕಾರೆರಡು ರೂಪದ ।
ಲಾವಿಯು ಜಗದೊಳಿಹನು ಪ್ರತಿಹಾರಾಹ್ವ ಹಯುಗಳೊಳು ॥
ಜೀವನಪ್ರದ ನಿಧನ ಮನುಜರೊ ।
ಳೀ ವಿಧದೊಳಿಹ ಪಂಚ ಸಾಮುವ ।
ರ್ಝೂವ ರ್ಝೂವಕೆ ನೆನೆವರಿಗೆ ಐದಿಪನು ಜನುಮಗಳ ||೧೪॥

ಅವತರಣಿಕೆ :—

ಗೋವು ಮುಂತಾದ ಪಶುಜಾತಿಗಳಲ್ಲಿ ಐದುವಿಧವಾದ ವರ್ಗಗಳಿವೆ.

(೧) ಗೋವುಗಳಲ್ಲಿ ಸದ್ಗತಿಪ್ರದನಾದ ಗೋಶಬ್ದವಾಚ್ಯನಾದ ಪರಮಾತ್ಮನಿರುವನು. ಆ ಪರಮಾತ್ಮನೇ ಉದ್ಗೀಥನಾಮಕ ಶ್ರೀಮನ್ನಾರಾಯಣನು. ಇವನು ಪಂಚಮ ಯಾಮಕ್ಕೆ ಅಭಿಮಾನಿಯು. (೨) ಕುರಿ ಮೇಕೆಗಳಲ್ಲಿ ಪ್ರಸ್ತಾವನಾಮಕ ವಾಸುದೇವರೂಪಿ ಪರಮಾತ್ಮನು ತನ್ನಾಮಕನಾಗಿ ತದಾಕಾರನಾಗಿ ವಿದ್ಯಮಾನನಾಗಿದ್ದಾನೆ. (೩) ಕುರಿ ಮತ್ತು ಮೇಕೆ ಜಾತಿಯ ಪ್ರಾಣಿವರ್ಗದಲ್ಲಿ ಪ್ರಸ್ತಾವನಾಮಕ ವಾಸುದೇವನೂ ಮತ್ತು ಹಿಂಕಾರನಾಮಕ ಸಂಕರ್ಷಣನನ್ನು ಚಿಂತಿಸಬೇಕು. (೪) ಕುದುರೆಗಳಲ್ಲಿ ಪ್ರತಿಹಾರನಾಮಕ ಪ್ರದ್ಯುಮ್ನರೂಪಿ ಶ್ರೀ ಪರಮಾತ್ಮನನ್ನು ಚಿಂತಿಸಬೇಕು. (೫) ಮನುಷ್ಯರಲ್ಲಿ ಜಗದ್ರಕ್ಷಕನಾದ ಶ್ರೀ ಪರಮಾತ್ಮನನ್ನು ತದಾಕಾರನಾಗಿ

ತಚ್ಛಬ್ದವಾಚ್ಯನಾಗಿ ನಿಧನನಾಮಕ ಅನಿರುದ್ಧನನ್ನು ಚಿಂತಿಸಬೇಕು. ಇಂತು, ಸಾಮವೇದ ಪ್ರತಿಪಾದ್ಯವಾದ ಶ್ರೀ ಪರಮಾತ್ಮನ, ಉದ್ಗೀಥ, ಪ್ರಸ್ತಾವ, ಹಿಂಕಾರ, ಪ್ರತಿಹಾರ ಮತ್ತು ನಿಧನ ಎಂಬ ಪಂಚರೂಪಗಳನ್ನು ಆಯಾಯಾ ಝಾಮಗಳಲ್ಲಿ ಕಾಲಾಂತರ್ಗತ ಕಾಲನಿಯಾಮಕನಾಗಿರುವನೆಂದು ಉಪಾಸನೆ ಮಾಡುವ ಭಗವದ್ಭಕ್ತರಿಗೆ ಪುನರ್ಜನ್ಮಗಳನ್ನು ಕೊಡದೆ ಉದ್ಧರಿಸುವನು ಎಂದು ಹೇಳುತ್ತಾರೆ, "ಗೋವುಗಳು" ಎಂಬ ಪ್ರಸಕ್ತ ಸಂಧಿಗತ ೧೪ ನೆಯ ಈ ಪದ್ಯದಿಂದ. ||೧೪||

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :–

ಪೂರ್ವೋಕ್ತ ಜೀವರಲ್ಲಿ ಆಯಾ ಕಾಲಗಳಲ್ಲಿ ಸಂರಕ್ಷಣೆಮಾಡತಕ್ಕ ಭಗವದ್ರೂಪಗಳು, ನಾಮಸಾಂಕೇತಗಳಾದ ಭಗವದ್ರೂಪಗಳ ಚಿಂತನಾವಿಚಾರವು ಹೇಳುತ್ತಾರೆ.

ಈ ನುಡಿಯ ಟೀಕಾ ಬರೆಯುವುದಕ್ಕೆ ಮುಂಚಿತವಾಗಿ ಇದರಲ್ಲಿ ಹೇಳುವ ಝಾಮಶಬ್ದಕ್ಕೆ ಅರ್ಥವಿವರಿಸಬೇಕಾಗಿ, ದಿನದ ಭಾಗಗಳನ್ನೂ ವಿವರಿಸಿ, ಆಯಾ ಕಾಲಾಭಿಮಾನಿ ಭಗವದ್ರೂಪಗಳನ್ನು ವಿವರಿಸುತ್ತಾರೆ.

ಒಂದು ಹಗಲಿಗೆ ಐದು ಯಾಮ. ಯಮಾ ಒಂದಕ್ಕೆ ಆರು ಘಳಿಗಿ. ಅಂತು ಮೂವತ್ತು ಘಳಿಗಿ. ಪ್ರಥಮಯಾಮಕ್ಕೆ ಉದ್ಗೀಥನಾಮಕ ಪರಮಾತ್ಮ ಅನಿರುದ್ಧ (ಭಗವದ್ರೂಪ) ಆರು ಘಳಿಗಿ ಮತ್ತು

| ಕ್ರಮ ಸಂ. | ಯಾಮ | ನಾಮ | ಭಗವದ್ರೂಪ | ಕಾಲ |
|---|---|---|---|---|
| ೧. | ಪ್ರಥಮಯಾಮಕ್ಕೆ | ಉದ್ಗೀಥನಾಮಕ | ಅನಿರುದ್ಧ | ಆರು ಘಳಿಗಿ |
| ೨. | ದ್ವಿತೀಯಯಾಮಕ್ಕೆ | ಪ್ರಸ್ತಾವನಾಮಕ | ಪ್ರದ್ಯುಮ್ನ | ಆರು ಘಳಿಗಿ |
| ೩. | ತೃತೀಯಯಾಮಕ್ಕೆ | ಹಿಂಕಾರನಾಮಕ | ಸಂಕರ್ಷಣ | ಆರು ಘಳಿಗಿ |
| ೪. | ಚತುರ್ಥಯಾಮಕ್ಕೆ | ಪ್ರತಿಹಾರನಾಮಕ | ವಾಸುದೇವ | ಆರು ಘಳಿಗಿ |
| ೫. | ಪಂಚಮಯಾಮಕ್ಕೆ | ನಿಧನನಾಮಕ | ನಾರಾಯಣ | ಆರು ಘಳಿಗಿ |

ಒಂದು ದಿನಕ್ಕೆ ಯಾಮಗಳು ನಾಲ್ಕು. ವಿವಕ್ಷಾ ಭೇದದಿಂದ ಐದು ಯಾಮ ಆಗುತ್ತದೆ. ಮುಹೂರ್ತಕ್ಕೆ ಎರಡು ಘಳಿಗಿ, ವಿವಕ್ಷಾ ಒಂದು, ಎರಡುವರಿ ಘಳಿಗೆ ವಿವಕ್ಷಾ ಒಂದು. ಎರಡು ಘಳಿಗೆ ವಿವಕ್ಷಾದಿಂದ ಯಾಮಕ್ಕೆ ಆರು ಘಳಿಗಿ ಆಗುತ್ತದೆ. ಆಗ ಒಂದು ಹಗಲಿಗೆ ಐದು ಯಾಮ ಆಗುತ್ತದೆ. ಈ ಐದು ಯಾಮಕ್ಕೆ ಅಭಿಮಾನಿ ಭಗವದ್ರೂಪಗಳು ಮ್ಯಾಲೆ ಹೇಳಿದ್ದು. ಈ ಕಾಲಾಂತರ್ಗತ ಪರಮಾತ್ಮನೇ ಜೀವರಲ್ಲಿ ಇದ್ದುಕೊಂಡು, ಆಯಾ ಜೀವ ರಿಗೆ ಆಹಾರ ರೂಪವಾದದ್ದರನ್ನ ಕೊಡೋ ನಿಮಿತ್ತ ಅಲ್ಲಿಗಲ್ಲಿಗೆ ಕರಕೊಂಡು ಹೋಗಿ, ಅವರವರ ದ್ವಾರಾ ಕೊಡಲ್ಪಟ್ಟ ಜೀವಕ್ಕೆ ಯೋಗ್ಯವಾದ ಆಹಾರ ರೂಪಗಳಾದ ಪದಾರ್ಥಗಳಲ್ಲಿದ್ದು, ಆಹಾರಾಂತರ್ಗತನಾಗಿ ಆಹಾರ ರೂಪ ದಿಂದ ಪ್ರಾಪ್ತನಾಗುತ್ತಾನೆ. ಆಹಾರ ಕೊಡತಕ್ಕವರಲ್ಲಿ ಆಹಾರ ಪದಾರ್ಥದಲ್ಲಿ ಆಹಾರಪದಾರ್ಥ ತೆಗೆದುಕೊಂಬೋವರಲ್ಲಿ ಅವರವರಿಗೆ ನಿಯಮನವಾದ ಕಾಲಾಂತರ್ಗತದಲ್ಲಿ ಭಗವಂತ ಇರುತ್ತಾನೆ. ಅದಕ್ಕೆ ವಿವರ :—

ಗೋವುಗಳೊಳು-ಆಕಳುಗಳ ಒಳಗೆ, ಉದ್ಗೀಥನಿಹ-ಉದ್ಗೀಥನಾಮಕ ಪರಮಾತ್ಮ. ಇವ ಪ್ರಥಯಾಮಾಭಿಮಾನಿ. ಗೋವುಗಳು ಆರಂಭಮಾಡಿ

ಆವಿಯವರೆಗೂ ಮಧ್ಯ ಇರತಕ್ಕ ಯಾವತ್ತು ಜೀವರು ಇದರಲ್ಲೇ ಅಂತ ರ್ಭೂತರು, ಆವಿ-ಕರುಗಳ ಒಳಗೆ, ಪ್ರಸ್ತಾವ-ಪ್ರಸ್ತಾವನಾಮಕ. ಇವ ದ್ವಿತೀಯಸಾಮಾಭಿಮಾನಿ. ಆವಿ ಆರಂಭಮಾಡಿ ಅಜದವರೆವಿಗೂ ಮಧ್ಯೆ ಇರತಕ್ಕ ಯಾವತ್ತು ಜೀವರು ಇದರಲ್ಲಿ ಅಂತರ್ಭೂತರು; ಅಜ-ಮ್ಯಾಕಗಳ ಒಳಗೆ, ಹಿಂಕಾರ-ಹಿಂಕಾರನಾಮಕ ಪರಮಾತ್ಮ. ಇವ ತೃತೀಯಸಾಮಾಭಿಮಾನಿಯು. ಅಜ ಆರಂಭಮಾಡಿ ಹಯದವರೆವಿಗೂ ಯಾವತ್ತು ಜೀವರು ಅಂತರ್ಭೂತರು. ಹಯಗಳೊಳು-ಕುದುರೆಗಳ ಒಳಗೆ, ಪ್ರತಿಹಾರ-ಪ್ರತಿಹಾರನಾಮಕ. ಇವ ಚತುರ್ಥಸಾಮಾಭಿಮಾನಿ. ಹಯ ಆರಂಭಮಾಡಿ ಮನುಜಾಂತವರೆವಿಗೂ ಇರ ತಕ್ಕ ಯಾವತ್ತು ಜೀವರು ಅಂತರ್ಭೂತರು, ಇಹನು ಮನುಜರೊಳು ನಿಧನ -ಮನುಷ್ಯರೊಳು ನಿಧನನಾಮಕ. ಮನುಜ ಶಬ್ದದಿಂದ ಯಾವತ್ತು ಮನು ಷ್ಯರು ಇವರಲ್ಲಿ ಅಂತರ್ಭೂತರು. ನಿಧನ ಪಂಚಮಸಾಮಕ್ಕೆ ಅಭಿಮಾನಿ. ಪಂಚಮಕಾಲ ಲಯಕಾಲವಾದ್ದರಿಂದ ನಿಧನನಾಮಕ ಪರಮಾತ್ಮ ಎಂತ ತಿಳಿಯಬೇಕು. ಜೀವರುಗಳು ತ್ರಿವಿಧ :- (೧) ಖೇಚರರು (ಪಕ್ಷಿಗಳು), (೨) ಭೂಚರರು (ಮನುಜಾದಿಗಳು), ಮತ್ತು (೩) ವಾರಿಚರರು (ಜಲ ದಲ್ಲಿ ಸಂಚಾರ ಮಾಡತಕ್ಕವರು) ನಿಶಾಚರರು-ನಿಶೆಯಲ್ಲಿ ಸಂಚಾರ ಮಾಡ ತಕ್ಕವರು, ಇವರು ವಿವಕ್ಷಾ ಭೇದದಿಂದ ಭೂಚರರಲ್ಲೇ ಅಂತರ್ಭೂತರು. ಈ ಪೂರ್ವೋಕ್ತ ಐದರಲ್ಲಿ ಯಾವತ್ತು ಜೀವರೂ ಬಂದಂತಾಯಿತು. ಎರಡು ರೂಪದಲಿ ಈ ವಿಧದೊಳಿಹ-ಪೂರ್ವೋಕ್ತ ಎರಡು ರೂಪಗಳಿಂದ ಇದ್ದವರಾಗಿ, ಜೀವನಪ್ರದ-ಆಯಾ ಪ್ರಾಣಿಗಳಿಗೆ ಜೀವನೋಪಾಯಗಳಿಂದ ಆಹಾರಗಳ ಕೊಡೋವವನಾಗುತ್ತಾನೆ. ಪಂಚಸಾಮನ-ಐದು ಭಗವದ್ರೂಪಗಳು (ಭಗವ ದ್ರೂಪಗಳು ಯಾವುವೆಂದರೆ, ಋಗ್ವೇದಸಾಮ ಪ್ರತಿಪಾದ್ಯಗಳು) ಈ ರೂಪ ಗಳನ್ನು, ಝಷಾವ ಝಷಾವಕ್ಕೆ-ಪೂರ್ವೋಕ್ತ ಐದು ಝಷಾವಗಳಲ್ಲಿ ಝಷಾವಾಂತ ರ್ಗತ ಆಯಾ ಜೀವಾಂತರ್ಗತನೆಂದು. ನೆನೆವರಿಗೆ-ಅನುಸಂಧಾನದಿಂದ ಸ್ಮರಣೆಮಾಡತಕ್ಕವರಿಗೆ, ಜನುಮಗಳ-ಈ ಅನುಸಂಧಾನದಿಂದ ಅಹಂ ಮಮ ಎಂಬ ಜನ್ಮಕ್ಕೆ ಕಾರಣವಾದ ಕರ್ಮ ಉತ್ಪತ್ತಿ ಆಗೋದಿಲ್ಲವಾದ್ದರಿಂದ, ಐದಿ ಪನು-ಕೊಡೋದಿಲ್ಲ. ಅಂದರೆ, ಜನ್ಮಗಳ ತಪ್ಪಿಸಿ ಮೋಕ್ಷ ಕೊಡೋವನಾಗ ತ್ತಾನೆ.

**ವಿಶೇಷಾರ್ಥ :–**

ಇದುವರೆಗೆ ಪಂಚಕಾಲ ಹೇಳಿತು. ಹಗಲು ವಿವಕ್ಷಯಾ ತಿಳಿಯತಕ್ಕ ಮತ್ತೊಂದು ಕ್ರಮವಿದೆ. ಆರಾರು ಘಳಿಗೆ ಝಾಮ ಒಂದಕ್ಕೆ ಏಳುಝಾಮಾ ಒಂದು ವಿವಕ್ಷಯಾ ಹೇಳುತ್ತೇವೆ. ಸೂರ್ಯೋದಯತ್ಪೂರ್ವ ಆರು ಘಳಿಗಿ ಕಾಲ ಒಂದು, ಅಸ್ತಮಯಾನಂತರ ಆರು ಘಳಿಗಿಕಾಲ ಒಂದು. ಇದು ಎರಡು ಸೇರಿ ಏಳುಕಾಲವಾಗುತ್ತದೆ. ಅದರ ವಿವರ :–

ಆದಿತ್ಯ ಮಂಡಲದಲ್ಲಿ ನಾರಾಯಣದೇವರು ವಾಯುದೇವರ ಅಧಿಷ್ಠಾನ ಮಾಡಿಕೊಂಡು ಇದ್ದಾನೆ. ಈ ನಾರಾಯಣ ಸರ್ವರಿಗೂ ಸಮನಾಗಿ ಜೀವನ ಪ್ರದನಾಗಿ ಇರೋಣದರಿಂದ ಮಾಯಸಾಂತ (ಮಾಯಸ ಅಂತ) ಹೆಸರು. ಇವ ಋಗ್ವೇದ ಸಾಮದಿಂದ ಸ್ತೂಯಮಾನನಾದ್ದರಿಂದ **"ಸಾಮ"** ಎಂದು ಹೆಸರು.

ಇವನು ಸರ್ವಪ್ರಾಣಿಗಳಿಗೂ ಜೀವನಪ್ರದನಾಗಿ ಅವರವರಲ್ಲಿ ಆಯಾ ಕಾಲದಲ್ಲಿ ಆಶ್ರಯನಾಗಿದ್ದಾನೆ. ಕಾಲಗಳು ಏಳು. ಆ ಕಾಲಾಂತರ್ಗತ ಭಗವದ್ರೂಪಗಳು ಏಳು. ಇದರ ವಿವರ : - ಕಾಲಗಳು ಭಗವದ್ರೂಪಗಳು ಸೂರ್ಯಮಂಡಲವನ್ನು ಆಶ್ರಯಿಸಿ ಇವೆ. ನಾರಾಯಣನೇ ಆ ಏಳು ರೂಪ ಧರಿಸಿ ಇದ್ದಾನೆ. ಅದಕ್ಕೆ ವಿವರ :-

(೧) ಆದಿ : —

ಸೂರ್ಯೋದಯಾತ್ಪೂರ್ವದಲ್ಲಿ ಆರು ಘಳಿಗಿ ಅವಶಿಷ್ಟ ಉಳಿದಿರುವ ಕಾಲ ಒಂದು. ಈ ಕಾಲದಲ್ಲಿ ಸೂರ್ಯಾಂತರ್ಗತನಾದ ಸಾಮಶಬ್ದವಾಚ್ಯ ನಾರಾಯಣ ಧರಿಸಲ್ಪಟ್ಟ ಏಳು ರೂಪಗಳೊಳಗೆ ಆದಿನಾಮವಾಚ್ಯ ವರಾಹ ರೂಪಿ ಪರಮಾತ್ಮ ಸೃಜ್ಯರಾದ ಸರ್ವಪ್ರಾಣಿಗಳಿಗೂ ಈ ಪ್ರಥಮ ಕಾಲಕ್ಕೂ ಆಶ್ರಯನಾದವ. ಅಂದರೆ, ಸಣ್ಣ ಬಾಲಕರಿಗೆ ಎಂತ ತಾತ್ಪರ್ಯ.

(೨) ಉದ್ಗೀಥ : —

ದ್ವಿತೀಯಕಾಲ ಉದ್ಗೀಥನಾಮಕ ಪರಮಾತ್ಮ ಗೋವುಗಳಲ್ಲಿ ಚೇತನರಿಗೆ, ಜಲಚರರಿಗೆ ಮತ್ತು ದೇವತೆಗಳಲ್ಲಿ ಗೋವುಗಳೇ ಮೊದಲಾದವುಗಳಲ್ಲಿ ಆಶ್ರಯನು.

(೩) ಪ್ರಸ್ತಾವ : —

ತೃತೀಯಕಾಲಕ್ಕೆ ಪ್ರಸ್ತಾವ. ಕುರಿಗಳೇ ಮೊದಲಾದುವಕ್ಕೆ ಆಶ್ರಯನು.

(೪) ಹಿಂಕಾರ : —

ಚತುರ್ಥಕಾಲಕ್ಕೆ ಹಿಂಕಾರ. ಮ್ಯಾಕೆಗಳೇ ಮೊದಲಾದುವಕ್ಕೆ ಆಶ್ರಯನು. ಆಯಾಯಾ ಕಾಲಾಭಿಮಾನಿ ರೂಪಗಳ ವ್ಯತ್ಯಾಸದಿಂದ ರಕ್ಷಕರಾಗಿ ಇದ್ದಾರೆ. ಕಾಲಾಭಿಮಾನವು ಕ್ರಮವನ್ನು ಅನುಸರಿಸಿ ಆದೆ. ಅದೇ ರೂಪಗಳೇ ವ್ಯತ್ಯಾಸದಿಂದ ರಕ್ಷಕರು.

(೫) ಪ್ರತಿಹಾರ : —

ಪಂಚಮಕಾಲಕ್ಕೆ ಪ್ರತೀಹಾರ. ಹಯಗಳೇ ಮೊದಲಾದುವಕ್ಕೆ ಆಶ್ರಯ ಪುರುಷರ ಗರ್ಭಗತ ಸ್ತ್ರೀಯರ ಜೀವರಿಗೂ ಆಶ್ರಯನಾದವ.

(೬) ನಿಧನ : —

ಆರನೇ ಕಾಲಕ್ಕೆ ನಿಧನ. ಮನುಜಾದಿಗಳೇ ಮೊದಲಾದವರಿಗೆ ಆಶ್ರಯ.

(೭) ಉಪದ್ರವ : —

ಏಳನೇಕಾಲಕ್ಕೆ ಉಪದ್ರವಶಬ್ದವಾಚ್ಯ ನರಸಿಂಹ ಅರಣ್ಯಗತ ಮೃಗಾದಿಗಳಿಗೆ ಆಶ್ರಯ. ಅಸ್ತಮಾನಾಂತರ ಎಂತ ತಿಳಿಯಬೇಕು.

ಈ ಪ್ರಕಾರ ಯಾವತ್ತು ಕಾಲದಲ್ಲಿ ಯಾವತ್ತು ಜೀವರಲ್ಲಿ ತಿಳಿಯುಬೇಕು. ರಾತ್ರಿಯಲ್ಲಿ ಉಳಿದ ಕಾಲ ಐದು. ವರಾಹದೇವರನ ಎರಡೂವರಿ ಕಾಲಕ್ಕೆ ನರಸಿಂಹನ ಎರಡೂವರಿ ಕಾಲಕ್ಕೆ ತಿಳಿಯಬೇಕು. ಇದು ಸರ್ವಪ್ರಾಣಿಗಳಿಗೂ ನಿದ್ರಾಶ್ರಯಕಾಲಗಳು. ನಿದ್ರಾಕ್ಕೆ ಒಂದಂಶದಿಂದ ಸರ್ವಪ್ರಾಣಿಗಳಲ್ಲಿ ಇರುತ್ತಾರೆಂದು ತಿಳಿಯಬೇಕು. ಇನ್ನೂ ಅನೇಕ ಪ್ರಾಣಿಗಳು ಇರಲಾಗಿ ಅವಿ, ಗೋವು, ಅಜಗಳನ್ನು ಯಾಕೆ ಹೇಳಬೇಕು ಎಂದರೆ, ಯಾವತ್ತು ಪ್ರಾಣಿಗಳು ಇವುಗಳಲ್ಲಿ ಅಂತರ್ಭೂತರು. ಅದರ ಸಮನ್ವಯ ಹೇಗೆಂದರೆ, ಗಳಕಂಬಳ ಯುಕ್ತವಾದ ಯಾವತ್ತು ಜೀವರು ಗೋವುಗಳಲ್ಲಿ ಅಂತರ್ಭೂತರು. ಅದಕ್ಕೆ ಗಳಕಂಬಳವಿಲ್ಲ. ಶೃಂಗವುಂಟು. ಏತಾದೃಶಜೀವರು ಇದರಲ್ಲೇ ಅಂತರ್ಭೂತರು. ಕುದುರೆಗೆ ಗಳಕಂಬಳವಿಲ್ಲ, ಶೃಂಗವಿಲ್ಲ, ಏಕಶಫವುಳ್ಳದ್ದು. ಈ ಸಜಾತೀಯ ಜೀವರೆಲ್ಲಾ ಇದರಲ್ಲೇ ಅಂತರ್ಭೂತರು. ಮನುಷ್ಯರು ದ್ವಿಪಾದವುಳ್ಳವರು. ದ್ವಿಪಾದವುಳ್ಳ ಯಾವತ್ತೂ ಜೀವರು ಈ ಜಾತಿ ಒಳಗೆ ಸೇರಿದವರು ಪಂಚಶಫದಿಂದ ಯುಕ್ತವಾದ ಪಂಚನಖವುಳ್ಳ ಜೀವರು ದಾವದರಲ್ಲಿ ಗಣನ ಎಂದರೆ, ಶೃಂಗವು ಇಲ್ಲದ ಗಳಕಂಬಳವೂ ಇಲ್ಲದ, ದ್ವಿಶಫಕ ಉಳ್ಳ ಅವಿಯಲ್ಲಿ ಅಂತರ್ಭೂತರು. ದ್ವಿಪಾದಕ್ಕೆ ಅಧಿಕವುಳ್ಳ ಕ್ರಿಮಿಕೀಟಾದಿಗಳು ಮನುಷ್ಯರಲ್ಲಿ ಅಂತರ್ಭೂತರು, ತಾರತಮ್ಯದಲ್ಲಿ ಮನುಷ್ಯೋತ್ತಮರ ದ್ವಾರಾ, ಹಿಡಿದು ಹೇಳತ್ತಾರೆ. ತದವರರೆಲ್ಲಾ ಮನುಷ್ಯರಲ್ಲಿ ಗಣನಾ ಎಂತ ತಿಳಿಯಬೇಕೆಂದು ಹೇಳಿರುವ ಮರ್ಯಾದಾನುಸಾರ ತಿಳಿಯಬೇಕು. ಅಂತೂ, ಯಾವತ್ತು ಜೀವರು ಐದು ವಿಧದಲ್ಲಿ ಅಂತರ್ಭೂತರು. ಅಂತರ ವಿವರಗಳು ವಿಶೇಷ ಉಂಟು. ಗ್ರಂಥಾಂತರದಿಂದ ತಿಳಿಯಬೇಕು. ॥೧೪॥

(೨) "ಭಾವಪ್ರಕಾಶಿಕೆ" ವ್ಯಾಖ್ಯಾನ :–

ಗೋವುಗಳಲ್ಲಿ ಸದ್ಗತಿಪ್ರದನಾದ್ದರಿಂದ ಗೋಶಬ್ದವಾಚ್ಯನಾದ ಪರಮಾತ್ಮನಿರುವನು. ಅವುಗಳಲ್ಲಿ ಉದ್ಗೀಥನಾಮದಿಂದ ಶ್ರೀನಾರಾಯಣನು ಇರುವನು. ಉದ್ಗೀಥಾನಾಮಗಳ ಸಂಕೇತವೇನೆಂದರೆ, ಸಾಮವೇದವನ್ನು ಅಧ್ಯಯನ ಮಾಡುವರು ಇವುಗಳನ್ನು ತಿಳಿದಿರುವರು. ಉದ್ಗೀಥ, ಪ್ರಸ್ತಾವ.

ಹಿಂಕಾರ, ಪ್ರತಿಹಾರ ಮತ್ತು ನಿಧನ-ಎಂಬ ಐದು ಪ್ರಕಾರವಾಗಿ ಸಾಮಗಾನವು ಭಾಗಿಸಲ್ಪಟ್ಟಿರುವುದು. ಇವು ಐದರಲ್ಲಿ ನಾರಾಯಣ ವಾಸುದೇವಾದಿ ಐದು ರೂಪಗಳಿಂದ ಪರಮಾತ್ಮನಿರುವನು. ಈ ರೂಪಗಳನ್ನು ಪ್ರಸಿದ್ಧವಾದ ಯಜ್ಞಸಾಧನವಾದ ಪಂಚ ಪಶುಗಳಲ್ಲಿ ಉಪಾಸನೆ ಮಾಡಬೇಕು. ಗೋವುಗಳಲ್ಲಿ ಉದ್ಗೀಥನಾಮಕ ನಾರಾಯಣ ರೂಪವನ್ನು ಚಿಂತಿಸಬೇಕು, ಕುರಿ ಮೇಕೆಗಳಲ್ಲಿ ತನ್ನಾಮಕನಾಗಿ ತದಾಕಾರನಾಗಿ ಪರಮಾತ್ಮನಿರುವನು. ಅವೆರಡರಲ್ಲಿ ಪ್ರಸ್ತಾವನಾಮಕ ವಾಸುದೇವ ರೂಪವನ್ನೂ ಮತ್ತು ಹಿಂಕಾರ ನಾಮಕ ಸಂಕರ್ಷಣರೂಪವನ್ನೂ ಚಿಂತಿಸಬೇಕು. ಕುದುರೆಯಲ್ಲಿ ತದ್ರೂಪಿ ತನ್ನಾಮಕನಾಗಿ ಇರುವನು. ಅವುಗಳಲ್ಲಿ ಪ್ರತಿಹಾರ ನಾಮಕನಾಗಿ ಪ್ರದ್ಯುಮ್ನ ರೂಪಿಯಾದ ಶ್ರೀ ಪರಮಾತ್ಮನಿರುವನು. ಜಗದ್ರಕ್ಷಕನಾದ ಶ್ರೀ ಪರಮಾತ್ಮನು ಮನುಷ್ಯರಲ್ಲಿ ತದಾಕಾರನಾಗಿ ತಚ್ಛಬ್ದನಾಗಿರುವನು. ಅವರಲ್ಲಿ ನಿಧನನಾಮಕ ಅನಿರುದ್ಧ ರೂಪವನ್ನು ಚಿಂತಿಸಬೇಕು. ಹೀಗೆ ಪ್ರತಿ ಋಷಾವದಲ್ಲೂ ಪಂಚ ಸಾಮ ಪ್ರತಿಪಾದ್ಯ ಐದು ರೂಪಗಳನ್ನು ಚಿಂತನೆಮಾಡುತ್ತಿರುವವರಿಗೆ ಜನ್ಮ ಬಾರದಂತೆ ಮುಕ್ತಿಯನ್ನು ಕೊಟ್ಟು ಉದ್ಧರಿಸುವನು. ದಾಸರಾಯರು ಹೇಳದಿರುವ ನಾರಾಯಣ ವಾಸುದೇವಾದಿ ರೂಪಗಳ ಕಲ್ಪನವೇಕೆಂದು ಆಕ್ಷೇಪಿಸಬಾರದು. ಉದ್ಗೀಥಾದಿ ಶಬ್ದಗಳ ಪ್ರತಿಪಾದ್ಯನು ನಾರಾಯಣಾದಿ ರೂಪಿಯಾದ ಪರಮಾತ್ಮನೆಂದು ಶ್ರೀಮದಾಚಾರ್ಯರು ಛಾಂದೋಗ್ಯೋಪನಿಷತ್ತಿನ ಭಾಷ್ಯದಲ್ಲಿ ಹೇಳಿರುವರು.

**ಛಾಂದೋಗ್ಯೋಪನಿಷತ್ತು–೨ ನೆಯ ಅಧ್ಯಾಯ–೬ನೆಯ ಖಂಡ :**

**"ಪಶುಷು ಪಂಚವಿಧಙ್ ಸಾಮೋಪಸೀತಾಜಾಹಿಂಕಾರೋಽವಯಃ ಪ್ರಸ್ತಾವೋಗಾವ ಉದ್ಗೀಥೋಽಶ್ವಾಃ ಪ್ರತಿಹಾರಃ ಪುರುಷೋ ನಿಧನಂ ಭವಂತಿಹಾಸ್ಯಪಶವಃ ಪಶುಮಾನ್ಭವತಿಯ ಏತದೇವಂ ವಿದ್ವಾನ್ ಪಶುಷು ಪಂಚವಿಧಙ್ ಸಾಮೋಪಾಸ್ತೆ ॥"**

ಪಶುಗಳಲ್ಲಿ ಐದುವಿಧ ಸಾಮವನ್ನು ಉಪಾಸನೆ ಮಾಡಬೇಕು-ಎಂದು

ದಾಸರಾಯರು ಪದ್ಯದಲ್ಲಿ ಹೇಳಿದ ಅರ್ಥವನ್ನು ಹೇಳಿ, ಕಡೆಗೆ ಐದುವಿಧ ಸಾಮ ಪ್ರತಿಪಾದ್ಯವಾದ ಐದು ರೂಪಗಳನ್ನು ಪ್ರಸಿದ್ಧವಾದ ಐದು ಪಶುಗಳಲ್ಲಿ ಯಾವನು ತಿಳಿಯುವನೋ ಅವನು ಪಶುವಂತನಾಗುವನು ಎಂದು ಹೇಳಿರುವರು. ಅಂದರೆ, ಪಶುನಾಮಕ ಪರಮಾತ್ಮನನ್ನು ಹೊಂದುವನೆಂದು ತಾತ್ಪರ್ಯ.

ಈ ಉಪನಿಷದ್ಭಾಷ್ಯದಲ್ಲಿ : —

"ಸಾಧುತ್ವಾತ್ಸಾಮನಾಮಾನಂ ಸಮಸ್ತಗುಣಪೂರ್ಣತಃ ।
ಸಮಸ್ತಂ ಯ ಉಪಾಸೀತ ನಾರಾಯಣ ಮನಾಮಯಂ ॥
ಸರ್ವಸಾಮ್ನಾಂ ದೇವತೇತಿ ಸಮುಕ್ತಃ ಸಾಧುಧರ್ಮ ಭಾಗಿತಿ
ಸಾಮಸಂಹಿತಾಯಾಮ್ ॥
ನಾರಾಯಣಾಖ್ಯ ಉದ್ಗೀಥಃ ಉದ್ಗೇಯಃ ಪ್ರಣವೇನಯತ್ ।
ಉದ್ಗಂಚ್ಛಂತಿ ಯತೋಽಸ್ಮಾದ್ವಾಸುದೇವಾದಿ ಮೂರ್ತಯಃ ।
ಪ್ರಥಮಾವತಾರ ರೂಪತ್ವಾದ್ವಾಸುದೇವಃ ಪರಃ ಪುಮಾನ್ ॥
ಪ್ರಸ್ತಾವೋ ನಿಧನಂಚಾಪಿ ಸಂಕರ್ಷಣ ಉದಾಹೃತಃ ।
ಸಂಕರ್ಷಣೋಹಿ ಸಂಹರ್ತ್ತಾ ಪ್ರದ್ಯುಮ್ನಃ ಪರಮೇಶ್ವರಃ ॥
ಪ್ರಸಿದ್ಧತಾಹಿಸ್ಸೃಷ್ಟಿಃ ಸ್ಯಾದನಿರುದ್ಧಃ ಪರೋವಿಭುಃ ।
ಹಿಂಕಾರ ಇತಿ ಸಂಪ್ರೋಕ್ತೋ ಹೀತಿ ಸೃಷ್ಟಿರುದೀರ್ಯತೇ ।
ಪ್ರತೀಹಾರ ಇತಿ ಪ್ರೋಕ್ತಃ ಸಹಿಂಕಾರ್ಯೈಷ್ಟಿದಂ ಜಗತ್ ॥
ಪ್ರತಿಪ್ರತಿಹರೇನ್ನಿತ್ಯಂ ಮೂರ್ತಿಪ್ರತಿಹೃತೇಸ್ತಥಾ ।
ಪಾಲನಾತ್ಸುಖಕಾರಿತ್ವಾತ್ ಪಶುನಾಮಾ ಜನಾರ್ಧನಃ ॥
ಮುಕ್ತಸ್ತದ್ವಾನ್ ಭವತ್ಯೇವ ಪಶುಷೂಪಾಸಕೋ ಹರೇರಿತಿ ಚ ।
ಯಜ್ಞೇನಾಂಚನ ಹೇತುತ್ವಾದಜಸ್ಥೋ ಭಗವಾನಜಃ ॥
ಅವಿಸ್ತಸ್ಥವಿರೇಪ್ರೋಕ್ತೇಃ ಊರ್ಣಶಾಯಿಂ ತತೋಽವನಾತ್ ।
ಗೌಶ್ಚಸದ್ಗತಿ ಹೇತುತ್ವಾದ್ಗೋಸ್ಥಃ ಸ ಪುರುಷೋತ್ತಮಃ ॥
ಅಶ್ವಶ್ಚೈವಾತು ಗಂತೃತ್ವಾತ್ಪುರುಷಃ ಪೂರ್ತಿ ಹೇತುತ ಇತಿ ಚ ।
ಅಜಾ ಇತ್ಯಾದಿ ಬಹುವಚನಂ ಬಹುರೂಪತ್ವಾದ್ಭಗವತಃ ॥

ಸಮಸ್ತಗುಣಪೂರ್ಣನಾದುದರಿಂದಲೂ, ಸಾಧುವಾದುದರಿಂದಲೂ, ಪರಮಾತ್ಮನಿಗೆ "ಸಾಮ" ನೆಂದು ಹೆಸರು. ಹೀಗೆ ಸಕಲ ಸಾಮುಗಳ ಪ್ರತಿಪಾದ್ಯನೂ ಅಥವಾ ಸಕಲಸಾಮದೇವತಾ ಪರಮಾತ್ಮನೆಂದು ಯಾವನು ಉಪಾಸನೆ ಮಾಡುವನೋ ಅವನು ಸಾಧುಧರ್ಮಭಾಗಿಯು. ಅವನು ಮುಕ್ತಿಯನ್ನು ಹೊಂದುವನು ಎಂದು ಸಾಧು ಸಂಹಿತೆಯಲ್ಲಿ ಹೇಳಿರುವರು. ಶ್ರೀಮನ್ನಾರಾಯಣನು ಪ್ರಣವಮಂತ್ರದಿಂದ ಉತ್ಕೃಷ್ಟನೆಂದು ಹೇಳಿಸಿಕೊಳ್ಳಲ್ಪಡುವುದರಿಂದಾಗಲೀ, ಅಥವಾ ನಾರಾಯಣ ರೂಪದಿಂದಲೇ ವಾಸುದೇವಾದಿ ಮೂರ್ತಿಗಳು ಹೊರಡುವುದರಿಂದಾಗಲೀ "ಉದ್ಗೀಥ" ನೆಂದು ಹೆಸರು. ಪ್ರಥಮಾವತಾರ ರೂಪನಾದುದರಿಂದ ವಾಸುದೇವನಿಗೆ "ಪ್ರಸ್ತಾವ" ಎಂದು ಹೆಸರು. ಸಂಹಾರಕರ್ತನಾದುದರಿಂದ "ನಿಧನ" ನೆಂದು ಸಂಕರ್ಷಣನಿಗೆ ಹೆಸರು. ಪರಮೇಶ್ವರನಾದುದರಿಂದ ಪ್ರದ್ಯುಮ್ನನು "ಹಿ" ಎಂದರೆ ಸೃಷ್ಟಿ ಎಂದರ್ಥ. ಸೃಷ್ಟಿಕರ್ತನಾದುದರಿಂದ "ಹಿಂಕಾರ" ನೆಂದು ಪ್ರದ್ಯುಮ್ನನಿಗೆ ಹೆಸರು. ಉತ್ತಮರಾದ ಬ್ರಹ್ಮಾದಿಗಳಿಗೆ ಪ್ರಭುವಾದುದರಿಂದ ಅನಿರುದ್ಧನೆಂದು ಹೆಸರು ಒಂದೊಂದು ಕಾರ್ಯದಲ್ಲಿಯೂ ಈ ಜಗತ್ತನ್ನು ಪ್ರತಿಹರಣಮಾಡುವುದರಿಂದಲೂ, ಮೂರ್ತಿಗಳನ್ನು ಪ್ರತಿಹರಣಮಾಡುವುದರಿಂದಲೂ, "ಪ್ರತೀಹಾರ" ನೆಂದು-ಅನಿರುದ್ಧನೆಂದು ಹೆಸರು. ಪಾಲನ ಮಾಡುವುದರಿಂದಲೂ, ಸುಖಕರನಾದುದರಿಂದಲೂ, ಪಶುವಿಗೆ ಜನಾರ್ದನೆಂದು ಹೆಸರು. ಪಶುವಂತನಾಗುತ್ತಾನೆ-ಎಂದರೆ, ಮುಕ್ತನಾಗಿ ಪಶುನಾಮಕ ಪರಮಾತ್ಮನನ್ನು ಸೇರುತ್ತಾನೆ ಎಂದರ್ಥ. ಯಜ್ಞೋಪಯೋಗವಾದುದರಿಂದ "ಅಜ" ಎಂದು ಮೇಕೆಗಳಲ್ಲಿರುವ ಪರಮಾತ್ಮನಿಗೆ ಹೆಸರು. ಅವಿ ಎಂದರೆ, ಕುರಿಗಳು. ಅವುಗಳಲ್ಲಿರುವ ಪರಮಾತ್ಮನಿಗೂ "ಅವಿ" ಎಂದು ಹೆಸರು. ಕುರಿಗಳ ರೋಮಗಳಿಂದಾಗುವ ಧಾವಳಿ, ಶಾಲು ಮೊದಲಾವುಗಳಿಂದ ಛಳಿಗಳಿಂದ ಸಂರಕ್ಷಿಸುವುದರಿಂದ "ಅವಿ" ಎಂದು ಹೆಸರು. ಸದ್ಗತಿಗೆ ಕಾರಣನಾದುದರಿಂದ ಗೋವುಗಳೊಳಗಿನ ಪರಮಾತ್ಮನಿಗೆ "ಗೋವು"-ಎಂದು ಹೆಸರು. ಅಶುಗಂತಾ ಅಂದರೆ, ವೇಗವಾಗಿ ಹೋಗುವವನಾದುದರಿಂದ "ಅಶ್ವ" ನೆಂದು ಅಶ್ವದೊಳಗಿರುವ ಪರಮಾತ್ಮನಿಗೆ ಹೆಸರು. ಪೂರ್ತಿಮಾಡಲು ಕಾರಣಭೂತನಾದುದರಿಂದ "ಪುರುಷ" ನೆಂದು ಹೆಸರು. ಪರಮಾತ್ಮನು ಬಹುರೂಪಿಯಾದುದರಿಂದ ಮೇಕೆಗಳು, ಕುರಿಗಳು

ಎಂಬ ಬಹುವಚನವು ಪರಮಾತ್ಮನಿಗೆ ಎಂದರ್ಥ. ಇದರಿಂದಲೇ ದಾಸರಾಯರು ಪಶುಗಳಲ್ಲಿ ಪಂಚನಾಮವನ್ನು ಉಪಾಸನೆ ಮಾಡಬೇಕೆಂದು ಹೇಳಿರುವರು. ॥೧೪॥

(೩) "ಭಾವದರ್ಪಣಟೀಕಾ" ವ್ಯಾಖ್ಯಾನ :–

ಗೋವುಗಳಲ್ಲಿ ಉದ್ಗೀಥಾಖ್ಯ ನಾರಾಯಣನು, ಆವಿಗಳಲ್ಲಿ ಪ್ರಸ್ತಾವಾಖ್ಯ ವಾಸುದೇವನು, ಅಜಗಳಲ್ಲಿ ಹಿಂಕಾರಾಖ್ಯ ಪ್ರದ್ಯುಮ್ನನೂ, ಹಯಗಳಲ್ಲಿ ಪ್ರತೀಹಾರಾಖ್ಯ ಅನಿರುದ್ಧನು, ಮನುಷ್ಯರಲ್ಲಿ ನಿಧನಾಖ್ಯ ಸಂಕರ್ಷಣನೂ, ಈ ಪ್ರಕಾರ ಪಂಚಸಾಮಾಖ್ಯ ಭಗವದ್ರೂಪ ಸ್ಮರಣೆ ಮಾಡತಕ್ಕವರಿಗೆ ಜನ್ಮವಿಲ್ಲೆಂದು ಹೇಳುತ್ತಾರೆ-"ಗೋವೇತಿ" ॥

"ಪಶುಷು ಪಂಚವಿಧ ಸಾಮೋಪಾಸೀತಾಹಿಂಕಾರೋಽನ್ವಯಃ ॥
ಪ್ರಸ್ತಾವೋ ಗಾವ ಉದ್ಗೀಥೋಽಶ್ವಾಃ ಪ್ರತೀಹಾರಃ ಪ್ರತಿ
ಪುರುಷೋ ನಿಧನಮಿತಿ" ॥

–ಛಾಂದೋಗ್ಯೋಪನಿಷದಿ ॥

ಇಲ್ಲಿ ಉದ್ಗೀಥಾದಿ ಶಬ್ದಗಳಿಗೆ ಛಾಂದೋಗ್ಯಭಾಷ್ಯ ರೀತ್ಯಾ ತಿಳಿಯಬೇಕು. ಇದಕ್ಕೆ ಪ್ರಮಾಣ :–

"ಸಮುತ್ಥಾಪ್ಯತ್ಸರ್ವ ಭೂತೇಷು ಸಾಮ ಸಾಮ್ನಾಂಚ ದೇವತಾ ॥
ನಾರಾಯಣಾಖ್ಯ ಉದ್ಗೀಥ ಉಚ್ಚೈರ್ಯಃ ಪ್ರಣವೇನತು ॥
ಉದ್ಗಚ್ಛತಿ ಯತೋಽಸ್ಮಾತ್ಸಾದ್ಧಾ ವಾಸುದೇವಾದಿ ಮೂರ್ತಯಃ ॥
ಪ್ರಥಮಾವತಾರ ರೂಪತ್ವಾದ್ವಾಸುದೇವಃ ಪರಃ ಪುಮಾನ್ ॥
ಪ್ರಸ್ತಾವೋ ನಿಧನಂಚಾಪಿ ಸಂಕರ್ಷಣ ಉದಾಹೃತಃ ॥
ಸಂಕರ್ಷಣೋಹಿ ಸಂಹರ್ತಾ ಪ್ರದ್ಯುಮ್ನಃ ಪರಮೇಶ್ವರಃ ॥
ಹಿಂಕಾರ ಇತಿ ಸಂಪ್ರೋಕ್ತೋ ಹೀತಿಸೃಷ್ಟಿರುದೀರ್ಯತೇ ॥
ಪ್ರಸಿದ್ಧನಾಹಿ ಸೃಷ್ಟಿಸ್ಯಾನಿರುದ್ಧಃ ಪರೋ ವಿಭುಃ ॥

ಪ್ರತೀಹಾರ ಇತಿ ಪ್ರೋಕ್ತೋ ಸಹಿಕಾರ್ಯೇಽಸ್ಮಿದಂ ಜಗತ್ ॥
ಪ್ರತಿಪ್ರತಿಹರೋ ನಿತ್ಯಮೂರ್ತಿ ಪ್ರತಿಹೃತೇಸ್ತಥಾ ಇತ್ಯಾದಿ" ॥
॥೧೪॥

(೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :-

ಏವಂ ತದನುಗ್ರಹಾತ್ ಛಿನ್ನಾವಿದ್ಯಸ್ಯ ಮುಮುಕ್ಷೋಃ ಕಾಂಚನ ಸಾಮೋಪಾಸನಾಂ ವಕ್ತುಂ ಅಧಿಷ್ಠಾನಮಾಹ-"ಗೋವುಗಳೊಳು"-ಇತಿ ॥ ಯಥಾಹುಃ ಛಾಂದೋಗಾಃ ॥ ಪಶುಷು ಪಂಚವಿಧಂ ಸಾಮ ಉಪಾಸೀತ ॥ ಅಜಾ ಹಿಂಕಾರಃ ॥ ಅವಯಃ ಪ್ರಸ್ತಾವಃ ॥ ಗಾವಃ ಉದ್ಗೀಥಃ ॥ ಅಶ್ವಾಃ ಪ್ರತಿಹಾರಃ ॥ ಪುರುಷಃ ನಿಧನಂ ॥ ಭವತಿ ಹಾಸ್ಯ ಪಶವಃ ॥ ಪಶುಮಾನ್ ಭವತಿ ಯ ಏತದೇವಂ ವಿದ್ವಾನ್ ಪಶುಷು ಪಂಚವಿಧಂ ಸಾಮ ಉಪಾಸ್ತೇ ॥ಇತಿ॥

ಪೂಜ್ಯ ಪಾದಾಸ್ತುಃ ಪಾಲನಾತ್ ಸುಖಕಾರಿತ್ವಾತ್ ಪಶುನಾಮಾ ಜನಾರ್ದನಃ ॥ ಮುಕ್ತಃ ತದ್ವಾನ್ ಭವತ್ಯೇವ ಪಶುಷೂಪಾಸಕೋ ಹರೇಃ (ಭವೇತ್) ॥ಇತಿ ಚ ॥ ಯಜ್ಞೇನಾಂಚನ ಹೇತುತ್ವಾತ್ ಅಜಸ್ಥೋ ಭಗವಾನ್ ಅಜಃ ॥ ಅವಿಸ್ಥಃತ್ವವಿರೇವೋಕ್ತಃ ಉರ್ಣಶಾಯೀ ತತೋಽವನಾತ್ ಗೌಶ್ಚ ಸದ್ಗತಿ ಹೇತುತ್ವಾತ್ ಗೌಸ್ಥಃಸ ಪುರುಷೋತ್ತಮಃ ॥ ಅಶ್ವಶ್ಚೈಲವಾರು ಗಂತೃತ್ವಾತ್ ಪುರುಷಃ ಪೂರ್ತಿಹೇತುತಃ ॥ ॥ಇತಿ ಚ॥

ಭವಂತಿ ಹಾಸ್ಯ ಪಶವಃ ಇತಿ ಪ್ರಸಿದ್ಧ ಪಶವಃ ಏವ ॥ ಅಜಾಃ ಇತ್ಯಾದಿ ಬಹುವಚನಂ ಬಹುರೂಪತ್ವಾತ್ ಭಗವತಃ ॥ ಸಾಧುತ್ವಾತ್ ಸಾಮ ಸಾಮಾನಂ ಸಮಸ್ತ ಗುಣಪೂರ್ತಿತಃ ॥ ಸಮಸ್ತಂ ಯ ಉಪಾಸೀತ ನಾರಾಯಣ ಮನಾಮಯಮ್ ॥ ಸರ್ವಸಾಮ್ನಾಂ ದೇವತೇತಿ ಸಮುಕ್ತಃ ಸಾಧು ಧರ್ಮಖಾತ್ ॥ ಇತಿ ಸಾಮ ಸಂಹಿತಾಯಾಮ್ ॥ ನಾರಾಯಣಾಖ್ಯಃ ಉದ್ಗೀಥಃ ಉದ್ಗೇಯಃ ಪ್ರಣವೇನತು ॥ ಉದ್ಗಚ್ಛಂತಿ ಯಶೋಽಸ್ಮಾದ್ವಾಸುದೇವ ದೇವಾದಿ ಮೂರ್ತಿಯಃ ಪ್ರಥಮಾವತಾರ

ರೂಪತ್ವಾತ್ ವಾಸುದೇವಃ ಪರಃ ಪುಮಾನ್ ॥ ಪ್ರಸ್ತಾವಃ ನಿಧನಂ ಚಾಪಿ ಸಂಕರ್ಷಣಃ ಉದಾಹೃತಃ ॥ ಸಂಕರ್ಷಣೋಹಿ ಸಂಹರ್ತಾ ಪ್ರದ್ಯುಮ್ನಃ ಪರಮೇಶ್ವರಃ ॥ ಹಿಂಕಾರಃ ಇತಿ ಸಂಪ್ರೋಕ್ತಃ ಹೀತಿ ಸೃಷ್ಟಿರುದೀರ್ಯತೇ ॥ ಪ್ರಸಿದ್ಧಾ ತಾಹಿ ಸೃಷ್ಟಿಸ್ಥಾತ್ ಅನಿರುದ್ಧಃ ಪರಃ ವಿಭುಃ ॥ ಪ್ರತಿಹಾರ ಇತಿ ಪ್ರೋಕ್ತಃ ಸಹಿ ಕಾರ್ಯೇಷ್ಟಿದಂ ಜಗತ್ ॥ ಪ್ರತಿಪ್ರತಿಹರೇನ್ನಿತ್ಯಂ ಮೂರ್ತಿ ಪ್ರತಿಹೃತೇಃ ತಥಾ ॥ ತೇ ಪೃಥಿವ್ಯಾದಿಷು ಸದಾ ತನ್ನಾಮಾನಃ ಪ್ರತಿಷ್ಠಿತಾಃ ॥ ಇತಿ ಚ ॥ ಝೂವ-ಪ್ರಹರ ॥೧೪॥

**ಕನ್ನಡಾರ್ಥ :-**

ಭಗವದನುಗ್ರಹದಿಂದ ಪೂರ್ವೋಕ್ತ ಅವಿದ್ಯಾ ಪಂಚಕಗಳು ನಿವಾರಣೆಯಾಗುವುವು. ಅಂತಹ ಮುಮುಕ್ಷುವಿಗೆ ಸಾಮೋಪಸಾನೆಯ ಅಧಿಷ್ಠಾನಗಳನ್ನು ತಿಳಿಸುತ್ತಾರೆ. ಇದು ಪರಮ ಶ್ರೇಷ್ಠವಾದದ್ದು. ಇದನ್ನು "ಗೋವುಗಳೊಳು" ಎಂಬ ಪ್ರಸಕ್ತ ಪದ್ಯದಿಂದ ನಿರೂಪಿಸುತ್ತಾರೆ.

ಈ ವಿವರಗಳು ಛಾಂದೋಗ್ಯಶೃತಿಯಲ್ಲಿ ಪ್ರಸಕ್ತವಾಗಿವೆ.

ಛಾಂದೋಗ್ಯೋಪನಿಷತ್ತಿನ ಪ್ರಥಮಾಧ್ಯಾಯವು ಸಾಮವೇದದ ಒಂದು ಭಾಗವೆನಿಸಿದೆ. ಉದ್ಗೀಥಸ್ತೋಭದಲ್ಲಿ ಮಾಡಬೇಕಾದ ಉಪಾಸನೆಯನ್ನು ನಿರೂಪಿಸುವುದು. ಎರಡನೆಯ ಅಧ್ಯಾಯದಲ್ಲಿ ಐದೈದು ಭಾಗಗಳುಳ್ಳ ಸಪ್ತ ವಿಧವಾದ ಸಾಮಗಳಲ್ಲಿ ಮಾಡುವ ಸಾಮೋಪಾಸನೆಯ ಕ್ರಮವನ್ನು ತಿಳಿಸುತ್ತದೆ. (೧) ಲೋಕಗಳಲ್ಲಿ (೨) ವೃಷ್ಟಿಯಲ್ಲಿ (೩) ನೀರುಗಳಲ್ಲಿ (೪) ಋತುಗಳಲ್ಲಿ (೫) ಪಶುಗಳಲ್ಲಿ (೬) ಪ್ರಾಣರಲ್ಲಿ ಸಾಮೋಪಾಸನೆಯ ಕ್ರಮವು ನಿರೂಪಿತವಾಗಿದೆ. ಅದರಲ್ಲಿ ಪಶುಗಳಲ್ಲಿ ಐದುವಿಧವಾಗಿ ಸಾಮವನ್ನು ಉಪಾಸಿಸಬೇಕು. (೧) ಅಜ (೨) ಅವಿ (೩) ಗೋವು (೪) ಅಶ್ವ (೫) ಪುರುಷ. ಇವುಗಳೇ ಪಂಚ ಪಶುಗಳು. ಇವುಗಳೇ ಅಧಿಷ್ಠಾನಗಳಲ್ಲಿ ಪಂಚ ಸಾಮವನ್ನು ಉಪಾಸಿಸಬೇಕು. (೧) ಅಜವು ಹಿಂಕಾರ. (ಆಡುಗಳಲ್ಲಿ) (೨) ಅವಿ (ಕುರಿಗಳಲ್ಲಿ) ಪ್ರಸ್ತಾವ. (೩) ಗೋವುಗಳಲ್ಲಿ

(ಆಕಳು) ಉದ್ಗೀಥ. (೪) ಅಶ್ವಗಳಲ್ಲಿ (ಕುದುರೆ) ಪ್ರತಿಹಾರ ಮತ್ತು (೫) ಪುರುಷರಲ್ಲಿ (ಮನುಷ್ಯ) ನಿಧನ ಎಂದು ಪಂಚಪ್ರಕಾರ ಉಪಾಸನಾಕ್ರಮ.

ಶ್ರೀ ಮದಾನಂದ ತೀರ್ಥಭಗವತ್ಪಾದರು ಶ್ರೀಮದ್ಭಾಷ್ಯ ದಲ್ಲಿ "ಪಶು" ಶಬ್ದವನ್ನು ಪರಮಾತ್ಮನಲ್ಲಿ ಸಮನ್ವಯಿಸಿರುತ್ತಾರೆ.

ಪ-ಪಾತಿ = ಸಂರಕ್ಷಿಸುತ್ತಾನೆ. ಶು-ಶಂ-ಸುಖರೂಪನೂ,ಸುಖಕಾರಿಯೂ ಆಗಿರುವುದರಿಂದ ಪರಮಾತ್ಮನಿಗೆ "ಪಶು" ಎಂದು ಉಪನಿಷದ್ರಹಸ್ಯನಾಮ. ಪಶುಗಳಲ್ಲಿ ಪಶುಶಬ್ದವಾಚ್ಯನಾಗಿ ಹರಿಯು ಇದ್ದಾನೆ. ಅವನ ಉಪಾಸಕರಿಗೆ ಮುಕ್ತಿಯಲ್ಲಿ ಅಂತಹ ಭಗವದ್ರೂಪದರ್ಶನಪ್ರಾಪ್ತಿ. (೨) ಯಜ್ಞ ದಿಂದ ಗತಿಯನ್ನು ಹೊಂದಿಸುತ್ತಾನಾದ್ದರಿಂದ ಅಜ (ಆಡು) ಗಳಲ್ಲಿರುವ ಹರಿಗೆ "ಅಜ" ಎಂದು ಹೆಸರು. (೩) ಆವಿ (ಕುರಿ) ಗಳಲ್ಲಿರುವ ಶ್ರೀ ಹರಿಯು "ಆವಿ" ಶಬ್ದವಾಚ್ಯನು. ಉಣ್ಣೆಗಳಲ್ಲಿದ್ದ ಜನರನ್ನು ಛಳಿಗಾಳಿಗಳಿಂದ ರಕ್ಷಿಸುತ್ತನಾದ್ದರಿಂದ "ಆವಿ" ನಾಮಕನು. (೪) ಸದ್ಗತಿಪ್ರದನಾದುದರಿಂದ "ಗೋ" ಶಬ್ದವಾಚ್ಯನು. (೫) ಅತಿಶೀಘ್ರವಾಗಿ ಗತಿಸುವುದರಿಂದ ಅಶ್ವಗಳಲ್ಲಿರುವ ಶ್ರೀಹರಿಗೆ "ಅಶ್ವ" ನೆಂದು ಹೆಸರು. (೬) ಜೀವರಿಗೆ ಅವರ ಯೋಗ್ಯತಾನುಸಾರ ಪೂರ್ಣತೆಯ ಪ್ರಾಪ್ತಿಗೆ ಕಾರಣನಾದುದರಿಂದ ಪುರುಷಸ್ಥ ಹರಿಯು "ಪುರುಷ"–ಶಬ್ದವಾಚ್ಯನು. ಇಂತು ಪಂಚ ಪಶುಗಳಲ್ಲಿರುವ ಹರಿಯನ್ನು ಪಂಚವಿಧ ನಾಮದಿಂದ ಉಪಾಸಿಸುವರಿಗೆ ಪಶುವಂತನಾಗುತ್ತಾರೆ. (ಭಾಗ್ಯವಂತರಾಗುವರು).

(೧) ನಿರ್ದೋಷತ್ವವು (ಸಾಧುಸ್ವಭಾವವು) ಇರುವುದರಿಂದ ಶ್ರೀ ಹರಿಗೆ "ಸಾಮ" ನೆಂದು ಕರೆಯುತ್ತಾರೆ.

(೨) ಸಮಸ್ತ ಗುಣಪರಿಪೂರ್ಣನಾದುದರಿಂದ "ಸಮಸ್ತ ಸಾಮ" ನಾಮಕನು.

(೩) ಪ್ರಣವದಿಂದ (ಓಂಕಾರ) ಸರ್ವೋತ್ತಮನೆಂದು ಗಾನಮಾಡಲ್ಪಡುವವನಾದುದರಿಂದ "ಉದ್ಗೀಥ" ಎಂದು ನಾರಾಯಣನಿಗೆ ಹೆಸರು.

ಅಲ್ಲದೇ ವಾಸುದೇವಾದಿ ರೂಪಗಳು ನಾರಾಯಣ ಎಂಬ ಮೂಲರೂಪದಿಂದಲೇ ಉದ್ಭೂತಗಳಾದ್ದರಿಂದ "ಉದ್ಗೀಥ" ಶಬ್ದವಾಚ್ಯನು.

(೪) ನಾರಾಯಣನ ಪ್ರಥಮಾವಾತರನಾದ್ದರಿಂದ ಪುರುಷನಾಮಕ ವಾಸುದೇವನು "ಪ್ರಸ್ತೋತ್ರ" ಅಂದರೆ "ಪ್ರಸ್ತಾವ" ಎಂದೆನಿಸಿಕೊಳ್ಳುವನು.

(೫) ಸಂಹಾರಕರ್ತನಾದ್ದರಿಂದ ಸಂಕರ್ಷಣನು "ನಿಧನ" ನಾಮಕನು.

(೬) "ಹಿ" ಎಂದರೆ, ಸೃಷ್ಟಿ ಎಂದರ್ಥ. ಪರಮೈಶ್ವರ್ಯಶಾಲಿಯೂ ಸೃಷ್ಟಿಕರ್ತನೂ ಆದ ಪ್ರದ್ಯುಮ್ನನೇ "ಹಿಂಕಾರ" ನಾಮಕನು.

(೭) ಆಯಾಯಾ ಕಾರ್ಯಗಳಲ್ಲಿ ಜಗತ್ತನ್ನು ಪ್ರೇರಿಸುವುದರಿಂದ (ಪ್ರತಿಹಾರಣಕ್ರಿಯೆ) ಅನಿರುದ್ಧನಿಗೆ "ಪ್ರತಿಹಾರ" -ಎಂದು ಹೆಸರು.

ಇಂತು ಪಂಚ ಸಾಮಗಳಲ್ಲಿ ಆಯಾಯಾ ಶಬ್ದವಾಚ್ಯನಾಗಿ ತತ್ತನಾಮಕನಾಗಿ ಇರುವ ಭಗವದ್ರೂಪಗಳೊಂದಿಗೆ ಸಾಮೋಪಾಸನೆ ಮಾಡಬೇಕು-ಎಂದು ಶ್ರೀಮದಾಚಾರ್ಯರು ಭಾಷ್ಯದಲ್ಲಿ ಭಗವತ್ಪರತ್ವವನ್ನು ಹೇಳಿದ್ದಾರೆ. ಇಂತು ಪಂಚವಿಧಸಾಮವನ್ನು ಪಂಚಪಶುಗಳಲ್ಲಿ ಯಾವ ಯಾವಕ್ಕೆ ಉಪಾಸಿಸಬೇಕು. ॥೧೪॥

## (೩) "ಗುರುಹೃದಯಪ್ರಕಾಶಿಕೆ"–ವ್ಯಾಖ್ಯಾನ :-

ಪಶುಗಳಲ್ಲಿ ಪಂಚಸಾಮವೆಂಬ ಹಿಂಕಾರದಿ ಪಂಚಮೂರ್ತಿ ಉಪಾಸಕರ ಉಪಾಸನೆಯನ್ನು ನಿರೂಪಿಸುತ್ತಾರೆ. ಗೋವುಗಳಲ್ಲಿ ಸದ್ಗತಿಪ್ರದನಾದ್ದರಿಂದ, ಗೋಶಬ್ದವಾಚ್ಯನಾಗಿ, ಉದ್ಗೀಯಮಾನನಾದ್ದರಿಂದ "ಉದ್ಗೀಥ" ನೆಂಬ ಹೆಸರಿನಿಂದ ಮೂಲರೂಪಿ ನಾರಾಯಣನು ಇರುವನು. ಸಂರಕ್ಷಣೆಮಾಡುವುದರಿಂದ, ಅವಿಶಬ್ದವಾಚ್ಯನಾಗಿ ಕುರಿಗಳಲ್ಲಿ, ಯಜ್ಞಮೂಲಕ ಜನ್ಮಪರಿಹರಿಸುವುದರಿಂದ, ಅಜಶಬ್ದವಾಚ್ಯನಾಗಿ ಮೇಕೆಗಳಲ್ಲಿ ಸಹ, ಎರಡು ರೂಪಗಳಿಂದ ಪ್ರಸ್ತಾವನೆಂಬ ಪ್ರಥಮಾವತಾರ ಶ್ರೀವಾಸುದೇವನು "ಹಿಂಕಾರ" ನಾಮಕನಾಗಿರುವನು. ತ್ವರೆಯಾಗಿ ಗತಿ ಎಂಬ ನಡೆ ಇರುವುದರಿಂದ "ಅಶ್ವ" ನಾಮ

ದಿಂದ ಕುದುರೆಗಳಲ್ಲಿ ಪ್ರತಿಪ್ರತಿಕಾಯ ಹೊಂದಿಸಿ ರಕ್ಷಿಸುವುದರಿಂದ "ಪ್ರತಿಹಾರ" ನಾಮಕ ಅನಿರುದ್ಧನಿರುವನು. ಜೀವಪ್ರದನಾದ ದೇವರು ಸಂಹರ್ತೃವಾದ್ದರಿಂದ "ನಿಧನ" ನಾಮಕನಾಗಿ ಸಂಕರ್ಷಣನು ಪೂರ್ಣಗುಣನಾದ್ದರಿಂದ ಪುರುಷನಾಮಕನಾಗಿ ಮನುಷ್ಯರಲ್ಲಿರುವನು. ಸರ್ವರೂಪವೂ ಸಮಾನವಾದ್ದರಿಂದ "ಸಾಮ"-ಎಂಬ ಹೆಸರುಳ್ಳ ಪಂಚಮೂರ್ತಿಗಳನ್ನು, ಕಾಲಕಾಲದಲ್ಲಿ ಸ್ಮರಿಸುವವರಿಗೆ ಜನ್ಮಾದಿ ಸಂಸೃತಿ ಬಂಧ ಕೊಡದೆ, ಪಾಲಕನಾದ್ದರಿಂದಲೂ, ಸುಖರೂಪನಾದ್ದರಿಂದಲೂ, "ಪಶು" ಶಬ್ದವಾಚ್ಯನಾದ ದೇವರನ್ನು ಹೊಂದುವಂಥಾ ಮುಕ್ತಿಯನ್ನು ಕೊಡುವನು ಎಂದರ್ಥ. ||೧೪||

# ಸರ್ವವ್ಯಾಖ್ಯಾನಸಾರ ಸಂಗ್ರಹ

ಪಂಚವಿಧವಾದ ಪಶುಗಳಲ್ಲಿರುವ ಭಗವದ್ರೂಪಗಳು ಮತ್ತು ಆಯಾಯಾ ಅಧಿಷ್ಠಾನಗತ ಭಗವನ್ನಾಮಗಳ ವಿವರಗಳನ್ನು ಪ್ರಸಕ್ತ ೧೪ನೆಯ ಈ ಪದ್ಯದಿಂದ ತಿಳಿಸುತ್ತಾರೆ.

ಪಂಚವಿಧವಾದ ಪಶುಗಳು ಯಾವುವೆಂದರೆ : –

(೧) ಗೋವು (೨) ಕುರಿ (೩) ಮೇಕೆ (೪) ಕುದುರೆ ಮತ್ತು (೫) ಮನುಷ್ಯರು (ಪುರುಷ).

ಈ ಅಧಿಷ್ಠಾನಗತ ಭಗವದ್ರೂಪಗಳು ಕ್ರಮವಾಗಿ (೧) ನಾರಾಯಣ (೨) ವಾಸುದೇವ (೩) ಸಂಕರ್ಷಣ (೪) ಪ್ರದ್ಯುಮ್ನ ಮತ್ತು (೫) ಅನಿರುದ್ಧ.

ಪಂಚ ಭಗವನ್ನಾಮಗಳು : –

(೧) ಉದ್ಗೀಥ (೨) ಪ್ರಸ್ತಾವ (೩) ಹಿಂಕಾರ (೪) ಪ್ರತಿಹಾರ ಮತ್ತು (೫) ನಿಧನ.

ಈ ಹೆಸರುಗಳಿಂದಲೇ ಸಾಮವೇದವು ಐದು ವಿಧವಾಗಿ ವಿಭಕ್ತವಾಗಿದೆ. ಇದಕ್ಕೆ **ಪಂಚಸಾಮಗಳೆಂದು** ಹೆಸರು.

ಇಂತು ಸಾಮವೇದ ಪ್ರತಿಪಾದ್ಯನಾದ ಪಂಚಸಾಮನೆಂದು ಕರೆಯಿಸಲ್ಪಡುವ ಪರಮಾತ್ಮನ ಪಂಚರೂಪಗಳನ್ನು ಪ್ರತಿ ಝಾವಕ್ಕೆ ಒಂದರಂತೆ, ೫ ಝಾವಗಳಲ್ಲಿ ಚಿಂತಿಸಿ, ಉಪಾಸನೆ ಮಾಡತಕ್ಕ ಸಾಧಕರಿಗೆ ಪುನಃ ಜನ್ಮಗಳು ಬಾರದಂತೆ ಮಾಡಿ ಮೋಕ್ಷರೂಪವಾದ ಸದ್ಗತಿಯನ್ನು ಪರಮಾತ್ಮನು ಅನುಗ್ರಹಿಸುವನು.

ಈ ಉಪಾಸನೆಯ ಪೂರ್ಣವಿವರಗಳು ಇಂತಿವೆ :—

(೧) **ಗೋವುಗಳಲ್ಲಿ** ಮೂಲರೂಪಿ **ಶ್ರೀಮನ್ನಾರಾಯಣನು** **"ಉದ್ಗೀಥ"** ಶಬ್ದವಾಚ್ಯನಾಗಿದ್ದಾನೆ.

ಸದ್ಗತಿಪ್ರದನಾದ್ದರಿಂದಲೂ, ಪ್ರಣವದಿಂದ (ಓಂಕಾರ) ಸರ್ವೋತ್ತಮನೆಂದೇ ಗೇಗೀಯಮಾನದ್ದರಿಂದ ಗೋಶಬ್ದವಾಚ್ಯನಾದ ನಾರಾಯಣನಿಗೆ **ಉದ್ಗೀಥ** ಎಂದು ಹೆಸರು.

(೨) **ಕುರಿಗಳಲ್ಲಿ** (ಅವಿ) **ವಾಸುದೇವರೂಪಿ** ಪರಮಾತ್ಮನು **ಪ್ರಸ್ತಾವ** ಶಬ್ದವಾಚ್ಯನಾಗಿರುವನು.

ಕುರಿಗಳ ಶರೀರದ ಮೇಲಿರುವ ಉಣ್ಣೆಯಿಂದ ಕಂಬಳಿಗಳನ್ನು ತಯಾರಿಸುವರು. ಇದರಿಂದ ಚಳಿಗಾಳಿಗಳಿಂದ ಶರೀರಕ್ಕೆ ಸಂರಕ್ಷಣೆ ಕೊಡುವುದರಿಂದಲೂ ನಾರಾಯಣನ ಪ್ರಥಮಾವತಾರನಾದ್ದರಿಂದಲೂ ಪುರುಷನಾಮಕ ವಾಸುದೇವನು ಅವಿ ಶಬ್ದವಾಚ್ಯನಾಗಿ **"ಪ್ರಸ್ತಾವ"** ಎಂದು ಕರೆಯಿಸಲ್ಪಡುವನು.

(೩) **ಮೇಕೆಗಳಲ್ಲಿ** (ಅಜ) **ಹಿಂಕಾರ** ನಾಮಕನಾದ **ಪ್ರದ್ಯುಮ್ನ** ರೂಪಿ ಪರಮಾತ್ಮನು ವಿದ್ಯಮಾನನಾಗಿದ್ದಾನೆ. "ಹಿ" ಎಂದರೆ ಸೃಷ್ಟಿ ಎಂದರ್ಥ. ಪರಮೈಶ್ವರ್ಯಶಾಲಿಯೂ ಸೃಷ್ಟಿಕರ್ತನೂ ಆದ ಪ್ರದ್ಯುಮ್ನನೇ "ಹಿಂಕಾರ" ನಾಮಕನು.

(೪) **ಕುದುರೆ** (ಹಯ) ಗಳಲ್ಲಿ **ಪ್ರತಿಹಾರ** ನಾಮಕನಾದ **ಅನಿರುದ್ಧ** ರೂಪಿ ಪರಮಾತ್ಮನು ಇದ್ದಾನೆ.

ತ್ವರಿತವಾದಗತಿ ಉಳ್ಳವನಾದ್ದರಿಂದ (ವೇಗವಾಗಿ ನಡೆಯುವುದು) ಹಯಶಬ್ದವಾಚ್ಯನಾಗಿ ಅನಿರುದ್ಧನು ಪ್ರತಿಹಾರ ನಾಮಕದಿಂದಿರುವನು.

(೫) **ಮನುಷ್ಯರಲ್ಲಿ** (ಮನುಜ) **ಸಂಕರ್ಷಣ**ರೂಪಿ ಪರಮಾತ್ಮನು **ನಿಧನ** ನಾಮಕನಾಗಿದ್ದಾನೆ.

ಲಯ (ಸಂಹಾರ) ಕರ್ತನಾದ್ದರಿಂದ ಸಂಕರ್ಷಣನಿಗೆ "ನಿಧನ" ನೆಂದು ಹೆಸರು.

ಇಂತು ಪಂಚಸಾಮನೆಂದು ಸಾಮವೇದದಿಂದ ಗೇಗೀಯಮಾನನಾದ ಪರಮಾತ್ಮನು ಪಂಚವಿಧವಾದ ಪಶುಗಳಲ್ಲಿರುವುದರಿಂದ, **ಪಶು** ಶಬ್ದವನ್ನು ಶ್ರೀಮದಾಚಾರ್ಯರು ತಮ್ಮ ಭಾಷ್ಯದಲ್ಲಿ ಪರಮಾತ್ಮನಲ್ಲಿ ಸಮನ್ವಯ ಮಾಡಿದ್ದಾರೆ. ಹೇಗೆಂದರೆ **"ಪ"**-ಎಂದರೆ ಪಾತಿ=ಸಂರಕ್ಷಿಸುತ್ತಾನೆ ಎಂದರ್ಥ. **"ಶು"**-ಎಂದರೆ ಶಂ=ಸುಖರೂಪನೂ ಸಚ್ಚೇತನರಿಗೆ ಆನಂದಪ್ರದನು ಎಂದರ್ಥ. ಇದರಿಂದ ತನ್ನಿಂದ ಸೃಷ್ಟವಾದ ಜಗತ್ತನ್ನು ಸಂರಕ್ಷಿಸುವುದರಿಂದಲೂ, ಮುಕ್ತಿಯಲ್ಲಿ ಸಜ್ಜನರಿಗೆ ಸುಖಪ್ರದನಾದುದರಿಂದಲೂ, ಪರಮಾತ್ಮನು **ಪಶು** ಶಬ್ದವಾಚ್ಯನು. ಇಂತಹ ಪಂಚಸಾಮೋಪಾಸನೆಯನ್ನು ಮಾಡುವವರಿಗೆ ಪುನರ್ಜನ್ಮಗಳಿಲ್ಲ ಎಂದು ತಾತ್ಪರ್ಯ.

## ಪಂಚಸಾಮಾಖ್ಯ ಭಗವದ್ರೂಪಗಳ ಚಿಂತನೆ

| ಕ್ರಮ ಸಂಖ್ಯೆ | ಅಧಿಷ್ಠಾನ | ವಾಚ್ಯತ್ವ | ಭಗವದ್ರೂಪ | ಪಂಚ ಸಾಮಖ್ಯ | ವಿವರಗಳು |
|---|---|---|---|---|---|
| ೧ | ಆಕಳುಗಳಲ್ಲಿ | ಗೋಶಬ್ದ ವಾಚ್ಯನಾಗಿ | ನಾರಾಯಣ | ಉದ್ಗೀಥ | 1 ಸದ್ಗತಿ ಪ್ರದನು<br>2 ಪ್ರಣವ ಪ್ರತಿಪಾದ್ಯ ಸರ್ವೋತ್ತಮ |
| ೨ | ಕುರಿಗಳಲ್ಲಿ | ಅವಿಶಬ್ದ ವಾಚ್ಯನಾಗಿ | ವಾಸುದೇವ | ಪ್ರಸ್ತಾವ | 1 ಮೂಲರೂಪಿ ನಾರಾಯಣನ ಪ್ರಥಮಾವತಾರನು<br>2 ರಕ್ಷಣ ಪ್ರದನು |
| ೩ | ಮೇಕೆಗಳಲ್ಲಿ | ಅಜಶಬ್ದ ವಾಚ್ಯನಾಗಿ | ಪ್ರದ್ಯುಮ್ನ | ಹಿಂಕಾರ | 1 ಪರಮೈಶ್ವರ್ಯಸಂಪನ್ನ<br>2 ಸೃಷ್ಟಿಕರ್ತನು |
| ೪ | ಕುದುರೆಗಳಲ್ಲಿ | ಹಯಶಬ್ದ ವಾಚ್ಯನಾಗಿ | ಅನಿರುದ್ಧ | ಪ್ರತಿಹಾರ | ತ್ವರಿತಗತಿಯುಳ್ಳವನು |
| ೫ | ಮನುಷ್ಯರಲ್ಲಿ | ಮನುಜಶಬ್ದ ವಾಚ್ಯನಾಗಿ | ಸಂಕರ್ಷಣ | ನಿಧನ | ಲಯ (ಸಂಹಾರ) ಕರ್ತನು |

## ಪದ್ಯ (೧೫)

**ಮೂಲ :**

**ಯುಗಚತುಷ್ಟಯಗಳಲಿ ತಾನಿ ।**
**ದ್ದ್ಯುಗಪ್ರವರ್ತಕ ಧರ್ಮ ಕರ್ಮಗ ।**
**ಳಿಗೆ ಪ್ರವರ್ತಕ ವಾಸುದೇವಾದೀರೆರಡುರೂಪ ॥**
**ತೆಗೆದುಕೊಂಡು ಯುಗಾದಿಕೃತು ತಾ ।**
**ಯುಗಪ್ರವರ್ತಕನೆನಿಸಿ ಧರ್ಮ ।**
**ಪ್ರಘಟಕನು ತಾನಾಗಿ ಭಕುಂತಗೀವ ಸಂಪದವ ॥ ॥೧೫॥**

**ಅವತರಣಿಕೆ :**

ಕೃತಾದಿ ನಾಲ್ಕುಯುಗ ಪ್ರವರ್ತಕರಾದ ಪರಮಾತ್ಮನ ಕ್ರಿಯಾವಿಶೇಷ ಗಳನ್ನು ತಿಳಿಸುತ್ತಾರೆ **"ಯುಗ ಚತುಷ್ಟಯಗಳಲ್ಲಿ"**–ಎಂಬ ಪ್ರಸಕ್ತ ಸಂಧಿ ಗತ ೧೫ನೆಯ ಈ ಪದ್ಯದಿಂದ. ಕೃತ, ತ್ರೇತಾ, ದ್ವಾಪರ ಮತ್ತು ಕಲಿ ಎಂಬ ನಾಲ್ಕು ಯುಗಗಳಲ್ಲಿ ಮೂಲನಾರಾಯಣನು ಕ್ರಮವಾಗಿ ವಾಸುದೇವ, ಸಂಕ ರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ಎಂಬ ಸ್ವಾಭಿನ್ನ ರೂಪಚತುಷ್ಟಯ ಗಳಿಂದ ವಿದ್ಯಮಾನನಾಗಿರುವರು. ಕಾಲಾಂತರ್ಗತನೂ, ಕಾಲನಿಯಾಮಕನೂ ಆದ ಯುಗಶಬ್ದವಾಚ್ಯನಾದ ಶ್ರೀ ಪರಮಾತ್ಮನು ಯುಗಪ್ರವರ್ತಕನೆಂದೆನಿಸಿ, ಆಯಾಯಾ ಯುಗಗಳಿಗೆ ಯೋಗ್ಯವಾದ ಧರ್ಮ ಮತ್ತು ಕರ್ಮಗಳಿಗೆ ತಾನೇ ನಿಯಾಮಕನಾಗಿದ್ದುಕೊಂಡು, ಯುಗಾನುಸಾರವಾಗಿ ಆಯಾಯಾ ಚೇತನರಿಗೆ ತತ್ವೇಶರ ದ್ವಾರಾ ಪ್ರೇರಿಸಿ, ಆಚರಣೆ ಮಾಡಿಸುವನು. ಆಯಾಯಾ ಯುಗ ಗಳಿಗೆ ಸಂಬಂಧಪಟ್ಟ ಧರ್ಮಗಳನ್ನು ಚೇತನರಿಗೆ ಘಟನ ಮಾಡುವವನಾದ್ದ ರಿಂದ, "ಧರ್ಮ ಘಟಕ" ನೆಂದೆನಿಸಿದ್ದಾನೆ. ಸ್ವಭಕ್ತರಿಗೆ ಆಯಾಯಾ ಯುಗ ಗಳ ಧರ್ಮಕರ್ಮಗಳನ್ನು ಮಾಡಿ. ಮಾಡಿಸಿ, ತನ್ಮೂಲಕ ಇಹದಲ್ಲಿ ಲೌಕಿಕ ಸಂಪತ್ತನ್ನು ಕರುಣಿಸಿ ಪರದಲ್ಲಿ ಭವಬಂಧಕಮೋಚನ ರೂಪವಾದ ಮೋಕ್ಷ ಸಂಪತ್ತೆಂಬ ಆನಂದ ಭಾಗ್ಯವನ್ನು ಕೊಡುವನು ಎಂದು ತಾತ್ಪರ್ಯ. ಮಿಶ್ರ

ಜೀವರಿಗೆ ಮಿಶ್ರಫಲವನ್ನು ಮತ್ತು ತಮೋಯೋಗ್ಯರಿಗೆ ದುರ್ಗತಿಗಳನ್ನೂ ಕೊಡುವವನು ಎಂಬ ಭಾವವು ಸಿದ್ಧವಾಗುವುದು. ॥೧೫॥

**ಪ್ರತಿಪದಾರ್ಥ :**

**ಯುಗಚತುಷ್ಟಯುಗಳಲ್ಲಿ**=ಕೃತ, ತ್ರೇತಾ, ದ್ವಾಪರ ಮತ್ತು ಕಲಿ ಎಂಬ ನಾಲ್ಕು ಯುಗಗಳಲ್ಲಿ, **ತಾನಿದ್ದು**=ಸ್ವಯಂ ಶ್ರೀ ಪರಮಾತ್ಮನೇ ಇದ್ದು, **ಯುಗ ಪ್ರವರ್ತಕ**=ಆಯಾಯಾ ಯುಗಗಳಲ್ಲಿ ಆಚರಿಸ ಬೇಕಾದ **ಧರ್ಮ ಕರ್ಮಗಳಿಗೆ**=ಆಯಾಯಾ ಯುಗಕ್ಕೆ ಸಂಬಂಧಿಸಿದ ಯುಗ ಧರ್ಮಗಳೇನು, ಆಯಾಯಾ ಕಾಲಗಳಲ್ಲಿ ಆಚರಿಸಬೇಕಾದ ಕರ್ಮ ವಿಶೇಷಗಳೇನು ಇವುಗಳಿಗೆ **ಪ್ರವರ್ತಕ**=ಆಯಾ ಚೇತನರಿಗೆ ತತ್ವೇಶರ ದ್ವಾರಾ ಪ್ರೇರಿಸಿ, ಆಚರಣೆ ಮಾಡಿಸತಕ್ಕವನಾಗಿ **ವಾಸುದೇವಾದಿ**= ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ಎಂಬ **ಈರೆ ರಡು ರೂಪ**=ಎರಡು × ಎರಡು.ಅಂದರೆ ನಾಲ್ಕು ರೂಪಗಳನ್ನು **ತೆಗೆದು ಕೊಂಡು**=ತಾನು ಸ್ವೀಕರಿಸಿದವನಾಗಿ **ಯುಗಾದಿ ಕೃತು**="ಯುಗಾದಿ ಕೃತು"–ಅಂದರೆ ಆಯಾಯಾ ಯುಗಗಳ ಧರ್ಮ ಕರ್ಮಗಳಿಗೆ ಪ್ರವರ್ತಕನು ಎಂದೆನಿಸಿ ತಾ **ಯುಗಪ್ರವರ್ತಕನೆನಿಸಿ**=ಆಯಾಯಾ ಯುಗಗಳ ಧರ್ಮ ಕರ್ಮಗಳನ್ನು ಚೇತನ ದ್ವಾರ ಆಚರಿಸುವಂತೆ ಮಾಡಿ ಮಾಡಿಸಿ **ಧರ್ಮ ಪ್ರಘಟಕನು**=ಆಯಾಯಾ ಯುಗಧರ್ಮಗಳನ್ನು ಚೇತನರಿಗೆ ಚೆನ್ನಾಗಿ ಘಟನ ಅಂದರೆ ಹೊಂದಿಸತಕ್ಕವನಾಗಿ **ಸಂಪದವ**=ಇಹದಲ್ಲಿ ಐಶ್ವರ್ಯವನ್ನು ಮತ್ತು ಭಗವದನುಗ್ರಹ ಪ್ರಾಪ್ತಿಗೆ ಅಗತ್ಯವಾದ ಜ್ಞಾನ, ಭಕ್ತಿ ಮತ್ತು ವೈರಾಗ್ಯಗಳೆಂಬ ದೈವೀಸಂಪತ್ತನ್ನೂ, **ಭಕುತಂಗೆ**=ತನ್ನಲ್ಲಿ ಭಕ್ತಿ ಮಾಡುವ ಜನರಿಗೆ **ಈವ**=ಕೊಡುವವನು. ॥೧೫॥

## ವ್ಯಾಖ್ಯಾನಗಳು

**(೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :–**

**ಈ ಶ್ಲೋಕದಲ್ಲಿ ಜೀವರು ಮಾಡತಕ್ಕ ನಾಲ್ಕು ಪ್ರಕಾರವಾದ ಧರ್ಮ**

ಕರ್ಮಗಳ ನಡೆಸುತಾ, ಧರ್ಮಕರ್ಮಾಂತರ್ಗತನಾಗಿ ದೇಹದಲ್ಲಿ ಇರತಕ್ಕರೂಪಗಳ ಹೇಳುತ್ತಾರೆ : –

ಯುಗಚತುಷ್ಟಯಗಳಲಿ ತಾನಿದ್ದು ಎಂದರೆ : –

| ಯುಗಗಳು | ರೂಪಗಳು | ಧರ್ಮ | ಕರ್ಮ | ಪಾಪ | ಪುಣ್ಯ | ಅಧರ್ಮ |
|---|---|---|---|---|---|---|
| ಕೃತಯುಗ | ವಾಸುದೇವ | ಪಾರಾಯಣಾದಿ ಧರ್ಮಗಳು | ಸ್ನಾನಾದಿ ಕರ್ಮ | ಒಂದು ಭಾಗ | ನಲವತ್ತು ಭಾಗ | ಇಲ್ಲ |
| ತ್ರೇತಾಯುಗ | ಸಂಕರ್ಷಣ | ದಾನಾದಿ ಧರ್ಮಗಳು | ” | ಹತ್ತು ಭಾಗೆ | ಮೂವತ್ತು ಭಾಗೆ | |
| ದ್ವಾಪರಯುಗ | ಪ್ರದ್ಯುಮ್ನ | ” | ” | ಇಪ್ಪತ್ತು ಭಾಗ | ಇಪ್ಪತ್ತು ಭಾಗ | |
| ಕಲಿಯುಗ | ಅನಿರುದ್ಧ | ” | ” | ಮೂವತ್ತಾರು ಭಾಗ | ಒಂದು ಭಾಗೆ | |

ಯುಗಚತುಷ್ಟಯಗಳಲಿ– ಕೃತಯುಗಾದಿ ನಾಲ್ಕು ಯುಗಗಳಲ್ಲಿ, ತಾನಿದ್ದು–ಶ್ರೀ ಪರಮಾತ್ಮನು ಇದ್ದು; ಯುಗಪ್ರವರ್ತಕ– (ಯುಗವನ್ನು ಅವೃತ್ತಿಮಾಡತಕ್ಕವನು) ಆಯಾ ಯುಗಗಳಲ್ಲಿ ಜೀವರು ಆಚರಿಸತಕ್ಕ, ಧರ್ಮ ಕರ್ಮಗಳಿಗೆ–ಸ್ನಾನ. ಸಂಧ್ಯಾ, ಯಜ್ಞ, ದಾನ ಈ ಕರ್ಮಗಳಿಗೆ, ಪ್ರವರ್ತಕ –ಯುಗಾನುಸಾರವಾಗಿ ಆಯಾ ಪ್ರಾಣಿಗಳಿಗೆ ತತ್ವೇಶರ ದ್ವಾರಾ ಪ್ರೇರಿಸಿ, ಆಚರಣೆ ಮಾಡಿಸತಕ್ಕವ, ವಾಸುದೇವಾದಿ ಈರೆರಡು ರೂಪ–ವಾಸುದೇವಾದಿ ನಾಲ್ಕುರೂಪ ತೆಗೆದುಕೊಂಡು, ಯುಗಾದಿ–ನಾಲ್ಕು ಯುಗಕ್ಕೆ ಆದಿಯಾದ, ಕೃತಯುಗ–ಕೃತಯುಗಕ್ಕೆ ಅನುಸರಿಸಿದ, ಪ್ರವರ್ತಕನೆನಿಸಿ–ಧರ್ಮ ಕರ್ಮ ಗಳಿಗೆ ಪ್ರವರ್ತಕನು ಎಂದೆನಿಸಿ, ಧರ್ಮಘಟಕನು–ಧರ್ಮವನ್ನು ಪ್ರಾಣಿಗಳಿಗೆ ಛಂದಾಗಿ ಘಟನಮಾಡತಕ್ಕವನು, ತಾನಾಗಿ–ತನ್ನ ಇಚ್ಛಾದಿಂದ ತಾನೇ ಪ್ರವ ರ್ತಿಸುವವನಾಗಿ, ಭಕುತರಿಗೆ ಸಂಪದವ–ಧರ್ಮಕ್ಕೆ ದುರ್ಭಿಕ್ಷವಾದ ಕಲಿ ಯುಗದಲ್ಲಿ ಭಕ್ತರಿಂದ ಅಲ್ಪಸಾಧನಮಾಡಿಸಿ, ಅಂಥ ಸಾಧಕನಿಗೆ, ಅವರಿಗೆ ಜ್ಞಾನ ಭಕ್ತ್ಯಾದಿ ಸಂಪತ್ತು ಯಜ್ಞಯಾಗಾದಿಗಳು ಮಾಡಿದರೆ ದಾವಫಲ ಬರ ಬೇಕೋ ಅಂಥ ಫಲರೂಪವಾದ ಐಶ್ವರ್ಯವನ್ನು, ಈವ-ಕೊಡೋವನಾಗಿ ದ್ದಾನೆ ಎಂತ ತಾತ್ಪರ್ಯ.

**ವಿಶೇಷಾರ್ಥ :**

ಸಂಪತ್ತು ಎಂದರೆ, ಜ್ಞಾನ, ಭಕ್ತಿ ಮತ್ತು ವೈರಾಗ್ಯಗಳು, ಮುಕ್ತಿ ಯೋಗ್ಯರಿಗೆ ಸಂಪತ್ತು- ಭೇದಜ್ಞಾನ. ತಮೋಯೋಗ್ಯರಿಗೆ ಸಂಪತ್ತು- ಅಭೇದಜ್ಞಾನ. ಅದನನ್ನುಸರಿಸಿ ಕೃತಯುಗದಲ್ಲಿ ಧರ್ಮಕರ್ಮಗಳು. ಮುಕ್ತಿ ಯೋಗ್ಯರ ಸಂಪತ್ತೇ ಅಧಿಕ. ತಮೋಯೋಗ್ಯರ ಸಂಪತ್ತು ಕ್ವಚಿತು. ತ್ರೇತಾಯುಗದಲ್ಲಿಯೂ ಮುಕ್ತಿಯೋಗ್ಯರ ಸಂಪತ್ತೇ ಅಧಿಕ. ತಮೋ ಯೋಗ್ಯರದು ಕ್ವಚಿತು. ಆದರೂ ಕೃತಯುಗಾಪೇಕ್ಷಯಾ ಮುಕ್ತಿಯೋಗ್ಯರಿಗೆ ಸಂಪತ್ತು ಕಡಿಮೆ. ತಮೋಯೋಗ್ಯರಿಗೆ ಸಂಪತ್ತು ಅಧಿಕವೇ ಆಗುತ್ತದೆ. ದ್ವಾಪರಯುಗದಲ್ಲಿ ಉಭಯರ ಸಂಪತ್ತು ಸಮಾನ. ಕಲಿಯುಗದಲ್ಲಿ ದೈತ್ಯರ ಸಂಪತ್ತೇ ಅಧಿಕ. ಮುಕ್ತಿಯೋಗ್ಯರ ಸಂಪತ್ತು ಕ್ವಚಿತು. ಈ ಪ್ರಕಾರ ಯುಗ

ಗಳಲ್ಲಿ ನಾಲ್ಕುವಿಧ ಪ್ರವರ್ತಕನಾಗಿ ಇರ್ತಾನೆ. ಇದನನ್ನುಸರಿಸಿ ಜೀವಾಂತರ್ಯಾಮಿ ದೇಹಾಂತರ್ಯಾಮಿಯಾಗಿದ್ದು ಯುಗಾನುಸಾರವಾಗಿ ಪ್ರೇರಿಸಿದವನಾಗಿ ವಾಸುದೇವಾದಿರೂಪಗಳಿಂದ ಪ್ರವೃತ್ತಿ ಉಂಟುಮಾಡುತ್ತಾನೆ.

ಪ್ರತಿದಿನದಲ್ಲಿ ಪ್ರಾಣಿಗಳಲ್ಲಿ ನಾಲ್ಕು ಯುಗ ಧರ್ಮಕರ್ಮಗಳನ್ನು ನಡೆಸುತ್ತಾ ಇದ್ದಾನೆ. ಆಯಾ ಧರ್ಮಕರ್ಮಗಳಲ್ಲಿ ಆಯಾ ಸೂಕ್ಷ್ಮಗಳ ತಿಳಿದು, ಆಯಾ ಭಗವದ್ರೂಪಗಳ ಚಿಂತಿಸಬೇಕು. ಒಂದು ದಿನಕ್ಕೆ ನಾಲ್ಕು ಯಾಮಗಳು. ಪ್ರಥಮ ಯಾಮ ಕೃತಯುಗ ಸಮಾನ. ಸ್ವಾಮಿ ವಾಸುದೇವ. ದ್ವಿತೀಯ ಯಾಮ ತ್ರೇತಾಯುಗ ಸಮಾನ. ಸ್ವಾಮಿ ಸಂಕರ್ಷಣ. ತೃತೀಯ ಯಾಮ ದ್ವಾಪರಯುಗ ಸಮಾನ. ಸ್ವಾಮಿ ಪ್ರದ್ಯುಮ್ನ. ಚತುರ್ಥ ಯಾಮಕ್ಕೆ ಕಲಿಯುಗ ಸಮಾನ. ಇದಕ್ಕೆ ಸ್ವಾಮಿ ಅನಿರುದ್ಧ ಎಂತ ತಿಳೀಬೇಕು. ರಾತ್ರಿಗೂ ಕೂಡ ಇದೇ ರೀತಿ. ಆಯಾ ಯಾಮಗಳಲ್ಲಿ ಆಯಾ ಧರ್ಮಗಳು ನಡೆಯುತ್ತದೆ. ಸೂಕ್ಷ್ಮ ದೃಷ್ಟಿಯಿಂದ ತಿಳಿಯಬೇಕು. ಈ ಪ್ರಕಾರ ನಾಲ್ಕು ರೂಪಗಳಿಂದ ದೇಹದಲ್ಲೂನೂ ಯುಗಾದಿಗಳಲ್ಲೀನೂ ಇದ್ದು, ಧರ್ಮಕರ್ಮಗಳ ನಡೆಸುತ್ತಾನೆ ಎಂತ ತಿಳಿಯಬೇಕು. ವಾಸುದೇವಾದಿ ರೂಪಗಳು ಮನ ಆಶ್ರಯಮಾಡಿಕೊಂಡು ಅವೆ. ||೧೫||

(೨) "ಭಾವಪ್ರಕಾಶಿಕೆ" ವ್ಯಾಖ್ಯಾನ :–

ಕೃತ, ತ್ರೇತಾ, ದ್ವಾಪರ ಮತ್ತು ಕಲಿ ಎಂಬ ನಾಲ್ಕು ಯುಗಗಳಲ್ಲಿ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧನೆಂಬ ನಾಲ್ಕು ರೂಪಗಳಿಂದ ಇದ್ದು **"ಯುಗಾದಿ ಕೃದ್ಯುಗಾವರ್ತೋ"**–ಎಂಬಂತೆ, ಯುಗಾದಿಕೃತ್ ಎಂಬ ಹೆಸರಿನಿಂದಲೂ, ಕೃತಯುಗಾ ನಂತರ, ತ್ರೇತಾ, ತದನಂತರ ದ್ವಾಪರ ಹೀಗೆ ಯುಗಗಳನ್ನು ಆವರ್ತನ ಮಾಡಿಸುವುದರಿಂದ "ಯುಗಾವರ್ತ" ನೆಂತಲೂ, "ಯುಗಪ್ರವರ್ತಕ" ನೆಂತಲೂ ಹೆಸರು ಪಡೆದು, ಆಯಾ ಯುಗ ಧರ್ಮಗಳನ್ನು ಕರ್ಮಗಳನ್ನು ಆಯಾ ಜನರೊಳಗಿದ್ದು ಮಾಡುತ್ತಾ, ಮಾಡಿಸುತ್ತಾ, ತನ್ನ ಭಕ್ತರಿಂದ ಯುಗಾನುಸಾರವಾದ ಸತ್ಕರ್ಮಾನುಷ್ಠಾನವನ್ನು

ಮಾಡಿಸಿ, ಬರೇ ಸಂಪತ್ತು ಮಾತ್ರವಲ್ಲದೆ, ಐಶ್ವರ್ಯವೆಂದರೆ, ಈಶ್ವರ ಸಂಬಂಧವಾದ ಜ್ಞಾನಾದಿಗಳನ್ನು ಕೊಟ್ಟು ಉದ್ಧರಿಸುವನು. ॥೧೫॥

(೩) "ಭಾವದರ್ಪಣಟೀಕಾ" ವ್ಯಾಖ್ಯಾನ:–

ಚತುರ್ಯುಗಗಳಲ್ಲಿ ತತ್ತನ್ನಾಮದಿಂದ ಕರೆಸುತ್ತಾನೆಂದು ಹೇಳುತ್ತಾರೆ. "ಯುಗಚತುಷ್ಟಯೇತಿ" । ಯುಗಾದಿತಿ ।

"ಯುಗಾಕೃದ್ಯುಗಾವರ್ತೇತಿ"–ಸಹಸ್ರನಾಮ ಪಾಠಾತ್ ॥೧೫॥

(೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :–

"ಯುಗ"-ಇತಿ ॥ ಯುಗಾದಿಕೃತ್–"ಓಂ ಶಚಿಭಿರಾದಿತ್ಯರಾಮಿಷರಾಂ ಪರ್ಯಾಪಶತ್‌ನ್ ॥ ಅಯಾಹಿ ವನಸಾ ಸಹ ॥ ಗಾವಃ ಸಚಂತ ವರ್ತನಿಂ ಯಧೂಧಾಭಿಃ ಓಂ" । ಅನೇನ–ಯುಜ್ಯತೇ ಚೇತನೇಷು ಸಂಬಧ್ನಾತಿ ಇತಿ ಯತ್ । ಸ್ವಧಾಽಪರ ಪರ್ಯಾಯಂ ಸುಖಮ್ ಆದಿಃ ಭೋಕ್ತಾ ॥ ಯುಜಃ ಸುಖಸ್ಯ ಆದಿಃ ಸಮಂತಾತ್ ಭೋಕ್ತಾ-ಕರೋತಿ ಇತಿ ಸತಥೋಕ್ತಃ॥ "ಓಂ ಆಯಾಹಿ ವಸ್ವ್ಯಾಧಿಯಾ ಮಂಹಿಷ್ಠೋ ಚಾರಯನ್ ಮಖಃ ॥ ಸದಾನುಭಿಃ ಪಿತೃಭೃತೋನ ತಂತು ಮಿತ್ಸು ದಾನವಃ ಪ್ರತಿದಧೋಯುಗಾಮುಸಿ ಓಂ" ॥ ಅನೇನ–ಅಭೀಷ್ಟ ಜಾತಂ ಯುಜ್ಯತೇ ಸಂಬಧ್ಯತೇ ಅನೇನ ಇತಿ ಯತ್ ಯುಜ್ಞೋದಾನಂ ಚ । ತದಾವರ್ತ ಯತಿ ಇತಿ ಸತಥೋಕ್ತಮ್॥೧೫॥

ಕನ್ನಡಾರ್ಥ :

ಪ್ರಸಕ್ತ ಪದ್ಯದಲ್ಲಿ ಉಪಯೋಗಿಸಲ್ಪಡುವ "ಯುಗಾದಿಕೃತ್" ಮತ್ತು "ಯುಗಾವರ್ತ"–ಎಂಬ ಶಬ್ದಗಳೂ ವಿಷ್ಣುಸಹಸ್ರನಾಮಗಳಲ್ಲಿ ಘಟಕವಾಗಿವೆ. ಇವುಗಳ ಅರ್ಥವೇ ಬೃಹತೀ ಮಂತ್ರದ ವಿವರ್ಣರೂಪ. ಯುದ್=ಚೇತನರಲ್ಲಿ ಸಂಬಂಧಿಸಿ ಇರುವ ಸುಖ. ಇದಕ್ಕೆ "ಸ್ವಧಾ" –ಎಂತಲೂ ಪರ್ಯಾಯ ನಾಮ. ಇಂತಹ ಆನಂದಕ್ಕೆ ಆದಿಂ=ವಿಶ್ವತೋಮುಖವಾಗಿ ಅಂದರೆ, ಸರ್ವವಿಧಗಳಿಂದಲೂ ಭೋಗಿಸುವವನನ್ನು ಕೃತ್=ಮಾಡುವವನು ಶ್ರೀ

ಪರಮಾತ್ಮ ಎಂದರ್ಥ. ಸರ್ವೋತೋಮುಖವಾದ ಸುಖಯುಕ್ತನನ್ನಾಗಿ ಮಾಡುವವನು- ಎಂಬುದೇ "ಯುಗಾದಿಕೃತ್"- ಎಂಬುದರ ಶಬ್ದಾರ್ಥವು. "ಯುಗಾವರ್ತ"-ಅಪೇಕ್ಷಿತವಾದವುಗಳನ್ನು ತಂದುಕೊಡುವುದರಿಂದ "ಯತ್ಃ ಎಂದರೆ, ಆನಂದಪ್ರದವಾದ ಯಜ್ಞಯಾಗಾದಿಗಳು ತನ್ಮೂಲಕ ಸುಖವನ್ನು ದಿನದಿನಗಳಲ್ಲಿ ಪ್ರವರ್ತಿಸುವವನು, ಅಂದರೆ, "ಸುಖಪ್ರವರ್ತಕ" ಎಂದು "ಯುಗಾವರ್ತ" ಶಬ್ದಾರ್ಥವು. ||೧೫||

## (೫) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ :—

ಯುಗ ಚತುಷ್ಟಯಸ್ಥ ರೂಪೋಪಾಸನಾ ಪ್ರಕಾರ ನಿರೂಪಿಸುತ್ತಾರೆ. ಕೃತ, ತ್ರೇತಾ, ದ್ವಾಪರ ಮತ್ತು ಕಲಿ ಎಂಬ ನಾಲ್ಕು ಯುಗಗಳಲ್ಲಿ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧರೆಂಬ ನಾಲ್ಕು ರೂಪಗಳಿಂದ ಇದ್ದು, ನಾಲ್ಕು ಪಾದ, ಮೂರು ಪಾದ, ಎರಡು ಪಾದ, ಒಂದು ಪಾದ-ಈ ರೀತಿ ಧರ್ಮವೆಂಬ ಕ್ರಿಯೆಗಳಿಗೆ, ಪ್ರವರ್ತಕ ಎಂದರೆ ನಡೆಯಿಸುವವನು ಆಗಿ, ಧರ್ಮಪ್ರಘಟಕನು ಎಂದರೆ, ತಪಸ್ಸು, ಶುದ್ಧಿ, ದಯಾ, ಸತ್ಯವೆಂಬ ನಾಲ್ಕು ಪಾದ ಧರ್ಮಗಳನ್ನು ಮೇಲೆ ಹೇಳಿದ ಮೇರೆ ಹೊಂದಿಸುತ್ತ, ತ್ರೇತೆಯುಳ್ಳಿ ಮೂರುಪಾದ, ದ್ವಾಪರದಲ್ಲಿ ಎರಡುಪಾದ, ಕಲಿಯುಗದಲ್ಲಿ ಸತ್ಯವೆಂಬ ಒಂದೇ ಪಾದ, ಈ ಪ್ರಕಾರ ಯುಗಪ್ರವರ್ತಕ ದೇವರು ಯುಗಾದಿಕೃದ್ಯುಗಾವರ್ತನೆಂಬ ಹೆಸರಿನಿಂದ ಭಕ್ತರಿಗೆ ಸಕಲಸಂಪತ್ತು ಕೊಡುವನೆಂದು ಭಾವಿಸುವುದು ಎಂದರ್ಥ.

ಪ್ರಮಾಣ :

"ಕೃತೇ ಶುಕ್ಲಶ್ಚತುರ್ಬಾಹುಃ ತಪಸ್ಸತ್ಯಂ |
ದಯಾ ಶೌಚಮಿತಿ ಪಾದಾಃ ಕೃತೇಕೃತಾಃ ||"

-ಎಂಬ ಭಾಗವತಾರ್ಥವೂ

"ಯುಗಾದಿ ಕೃದ್ಯುಗಾವರ್ತಃ" -ಎಂಬ ವಿಷ್ಣುಸಹಸ್ರನಾಮಾರ್ಥವೂ ಹೇಳಲ್ಪಟ್ಟಿತು.

# ಸರ್ವವ್ಯಾಖ್ಯಾನಸಾರಸಂಗ್ರಹ

ಯುಗಗಳು ನಾಲ್ಕು. ಇವುಗಳು ಕ್ರಮವಾಗಿ (೧) ಕೃತಯುಗ, (೨) ತ್ರೇತಾಯುಗ, (೩) ದ್ವಾಪರಯುಗ ಮತ್ತು (೪) ಕಲಿಯುಗ ಎಂದು ನಾಲ್ಕು ಪ್ರಕಾರ. ಇವುಗಳಿಗೆ **ಯುಗಚತುಷ್ಟಯ**ಗಳೆಂದು ಹೆಸರು. ಇವುಗಳ ವಿವರಗಳು ಇಂತಿವೆ :—

**(೧) ಕೃತಯುಗ :—**

ಇದು ಪ್ರಥಮಯುಗವು. ಇದರ ಪ್ರಮಾಣ ೧೭,೨೮,೦೦೦ ಸೌರ ವರ್ಷಗಳು. ಈ ಯುಗಕ್ಕೆ ಅಭಿಮಾನಿ **ವಾಸುದೇವ**ನಾಮಕ ಶ್ರೀ ಪರಮಾತ್ಮನು. ಈ ಯುಗದಲ್ಲಿ ಧರ್ಮವು ನಾಲ್ಕು ಪಾದಗಳಿಂದ ಯುಕ್ತವಾಗಿರುವುದು. ನಾಲ್ವತ್ತುಭಾಗ ಪುಣ್ಯ ಮತ್ತು ಒಂದು ಭಾಗ ಪಾಪ. ಪುಣ್ಯಫಲ ಅತ್ಯಧಿಕ. ಧ್ಯಾನ ಮತ್ತು ತಪಸ್ಸು ಈ ಯುಗದ ಕರ್ಮಗಳು.

**(೨) ತ್ರೇತಾಯುಗ :—**

ಇದು ದ್ವಿತೀಯ ಯುಗವು. ಈ ಯುಗದ ಪ್ರಮಾಣ ೧೨,೯೬,೦೦೦ ಸೌರವರ್ಷಗಳು. **ಸಂಕರ್ಷಣ**ನು ಈ ಯುಗಾಭಿಮಾನಿಯು. ಧರ್ಮವು ಮೂರು ಪಾದಗಳಿಂದ ಕೂಡಿರುವುದು. ಅಂದರೆ, ಕೃತಯುಗಕ್ಕಿಂತ ಒಂದು ಪಾದ ನ್ಯೂನ. ಮೂವತ್ತುಭಾಗ ಪುಣ್ಯ ಮತ್ತು ಹತ್ತುಭಾಗ ಪಾಪ. ಯಜ್ಞ ಯಾಗಾದಿಗಳು ಈ ಯುಗದ ಕರ್ಮಗಳು. ತಪಸ್ಸು, ಶುದ್ಧಿ ಮತ್ತು ದಯಾ ಎಂಬ ಮೂರುಪಾದ ಧರ್ಮಗಳು.

**(೩) ದ್ವಾಪರಯುಗ :—**

ಇದು ತೃತೀಯ ಯುಗವು. ಈ ಯುಗದ ಪ್ರಮಾಣ ೮.೬೪,೦೦೦ ಸೌರವರ್ಷಗಳು, ಧರ್ಮವು ದಯಾ ಮತ್ತು ಸತ್ಯ ಎಂಬ ಎರಡು ಪಾದಗಳಿಂದ ಯುಕ್ತವಾಗಿದೆ. ಇಪ್ಪತ್ತುಭಾಗ ಪುಣ್ಯ ಇಪ್ಪತ್ತುಭಾಗ ಪಾಪ.

ಪುಣ್ಯ ಮತ್ತು ಪಾಪ ಫಲಗಳು ಸಮಾನವಾಗಿವೆ. ದಾನವಾಂತಕನ ದೇವತಾರ್ಚನೆ ಈ ಯುಗದ ಕರ್ಮ. **ಪ್ರದ್ಯುಮ್ನ** ನಾಮಕ ಶ್ರೀ ಪರಮಾತ್ಮನು ಈ ಯುಗಾಭಿಮಾನಿಯು.

(೪) **ಕಲಿಯುಗ :—**

ಚತುರ್ಥಯುಗವಾದ ಕಲಿಯುಗಕ್ಕೆ ಕಲಿಯೇ ಅಧಿಪತಿಯು. **ಅನಿರುದ್ಧ**ನು ಯುಗಾಭಿಮಾನಿ. ಈ ಯುಗದ ಪ್ರಮಾಣವು ೪,೩೨,೦೦೦ ಸೌರ ವರ್ಷಗಳು. ಮೂವತ್ತುಭಾಗ ಪಾಪ ಮತ್ತು ಒಂದು ಭಾಗ ಪುಣ್ಯ. ಈ ಯುಗಧರ್ಮವು ಸತ್ಯವೆಂಬ ಒಂದೇ ಪಾದಮೇಲೆ ನಿಂತಿದೆ. ಪಾಪ ಭೂಯಿಷ್ಟವಾದ ಈ ಯುಗದಲ್ಲಿ ಸಚ್ಚೇತನರ ಪಾಪಕ್ಷಾಳನಗೈವ ಏಕೈಕ ಉಪಾಯವೆಂದರೆ—**ಹರಿನಾಮ ಸಂಕೀರ್ತನೆ.** ಇನ್ನಾವುದೂ ಸಾಧನೆಗೆ ಸಹಕಾರಿಯಲ್ಲ.

ಇಂತು ಕೃತ, ತ್ರೇತಾ, ದ್ವಾಪರ ಮತ್ತು ಕಲಿ ಎಂಬ ಯುಗಚತುಷ್ಟಯಗಳಲ್ಲಿ ಶ್ರೀ ಪರಮಾತ್ಮನು ಕ್ರಮವಾಗಿ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ಎಂಬ ರೂಪಚತುಷ್ಟಯಗಳಿಂದ ವಿದ್ಯಮಾನನಾಗಿದ್ದು. ಆಯಾಯಾ ಯುಗಗಳ ಧರ್ಮ ಹಾಗೂ ಕರ್ಮಗಳಿಗೆ ಪ್ರವರ್ತಕನೆಂದೆನಿಸಿ, ಆಯಾಯಾ ಯುಗ ಧರ್ಮ ಮತ್ತು ಕರ್ಮಗಳನ್ನು ಕಾಲರೂಪಿಯಾಗಿದ್ದುಕೊಂಡು ನಡೆಯಿಸುವವನು. ಇಂತಹ ಪರಮಾತ್ಮನು **"ಯುಗಾದಿ ಕ್ರತು"** ಮತ್ತು **"ಯುಗ ಪ್ರವರ್ತಕ"**—ಎಂಬ ನಾಮದ್ವಯಗಳಿಂದ ಪರಿಶೋಭಿತನಾಗಿದ್ದಾನೆ. ಇವೆರಡೂ **ಶ್ರೀ ವಿಷ್ಣು ಸಹಸ್ರನಾಮದಲ್ಲಿ** ಘಟಕವಾಗಿರುವ ಹೆಸರುಗಳೇ. "ಯುದ್"—ಎಂದರೆ ಚೇತನರಲ್ಲಿ ಸಂಬಂಧಿಸಿ ಇರುವ ಆನಂದ ಎಂದರ್ಥ. ಈ ಸುಖಕ್ಕೆ "ಆದಿಂ" ಸರ್ವವಿಧಗಳಿಂದಲೂ ಭೋಗಗಳನ್ನು "ಕೃತ್" ಎಂದರೆ ಮಾಡಿಸುವವನು ವಿಂದರ್ಥ. ಇದರಿಂದಲೂ ಶ್ರೀ ಪರಮಾತ್ಮನಿಗೆ **"ಯುಗಾದಿ ಕೃತ್"**—ಎಂದು ಹೆಸರು. "ಯುತ್"—ಎಂದರೆ, ಯಜ್ಞಯಾಗಾದಿಗಳ ಮೂಲಕ ಆನಂದಪ್ರದನಾದುದರಿಂದ **"ಯುಗಾವರ್ತ"** ಎಂತಲೂ ಹೆಸರು.

ಹೀಗೆ ಯುಗ ಕೃತುವಾಗಿ, ಯುಗಪ್ರವರ್ತಕನಾಗಿ ಧರ್ಮವನ್ನು ಜೀವರಿಗೆ ಘಟನಮಾಡಿ, ನಿಜಭಕ್ತರಿಗೆ ಆಯಾ ಯುಗಗಳಿಗೆ ಸಂಬಂಧಪಟ್ಟ ಐಹಿಕ ಭೋಗಭಾಗ್ಯರೂಪವಾದ ಸಂಪತ್ತನ್ನೂ ಭಗವದನುಗ್ರಹಕ್ಕೆ ಸಾಧನವಾದ ಜ್ಞಾನ, ಭಕ್ತಿ ಮತ್ತು ವೈರಾಗ್ಯಗಳೆಂಬ ದೈವೀಸಂಪತ್ತನ್ನೂ ನಿಜಭಕ್ತರಿಗೆ ಕೊಡುವನು.

ಯುಗ ಚತುಷ್ಟಯಗಳಿಗೆ ಸಂಬಂಧಪಟ್ಟ ಧರ್ಮಕರ್ಮಗಳ ಸ್ವರೂಪವನ್ನು ಹರಿದಾಸಸಾಹಿತ್ಯದ ಆದ್ಯಪ್ರವರ್ತಕರಾದ **ಶ್ರೀ ಪಾದರಾಜರು** ಈ ಕೆಳಗಿನ ಉಗಾಭೋಗದಲ್ಲಿ ಹೃದಯಂಗಮವಾಗಿ ನಿರೂಪಿಸಿರುತ್ತಾರೆ : —

## ಉಗಾಭೋಗ

**ಧ್ಯಾನವು ಕೃತಯುಗದಿ ।**
**ಯಜನ ಯಜ್ಞವು ತ್ರೇತಾಯುಗದಿ ।**
**ದಾನವಾಂತಕನ ದೇವತಾರ್ಚನೆ ದ್ವಾಪರಯುಗದಿ ॥**
**ಆ ಮಾನವರಿಗೆಷ್ಟು ಫಲವೋ ಅಷ್ಟೇ ಫಲವು ।**
**ಕಲಿಯುಗದಿ ಗಾನದಲಿ ಕೇಶವ ಎನಲು ।**
**ಕೈಗೊಡುವನು ರಂಗವಿಠ್ಠಲ ॥**

ಯುಗ ಚತುಷ್ಟಯಗಳ ಸಮಗ್ರ ವಿವರಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ವಿಹಂಗಮ ನೋಟದ ರೂಪದಲ್ಲಿ ಕೊಡಲಾಗಿದೆ : —

| ಕ್ರಮ ಸಂಖ್ಯೆ | ಯುಗ | ಭಗವದ್ರೂಪ | ಪುಣ್ಯ ಭಾಗ | ಪಾಪ ಭಾಗ | ಧರ್ಮ | ಕರ್ಮ | ಪ್ರಮಾಣ |
| --- | --- | --- | --- | --- | --- | --- | --- |
| ೧ | ಕೃತಯುಗ | ವಾಸುದೇವ | ನಲವತ್ತು ಭಾಗ | ಒಂದು ಭಾಗ | ತಪಸ್ಸು, ಶುದ್ಧ ದಯಾ, ಸತ್ಯ ನಾಲ್ಕು ಪಾದಗಳು | ಧ್ಯಾನ ತಪಸ್ಸು | ೧೭,೨೮,೦೦೦ ಸೌರವರ್ಷಗಳು |
| ೨ | ತ್ರೇತಾಯುಗ | ಸಂಕರ್ಷಣ | ಮೂವತ್ತು ಭಾಗ | ಹತ್ತು ಭಾಗ | ಮೂರು ಪಾದಗಳು | ಯಜ್ಞ ಯಾಗಾದಿಗಳು | ೧೨,೯೬,೦೦೦ |
| ೩ | ದ್ವಾಪರಯುಗ | ಪ್ರದ್ಯುಮ್ನ | ಇಪ್ಪತ್ತು ಭಾಗ | ಇಪ್ಪತ್ತು ಭಾಗ ಸಹಭಾಗಗಳು | ಪಾದದ್ವಯ | ದೇವತಾರ್ಚನೆ | ೮,೬೪,೦೦೦ |
| ೪ | ಕಲಿಯುಗ | ಅನಿರುದ್ಧ | ಮೂವತ್ತು ಭಾಗ | ಒಂದು ಭಾಗ | ಸತ್ಯವೆಂಬ ಬಂಧಿ ಒಂದು ಪಾದ | ಹರಿನಾಮ ಸಂಕೀರ್ತನೆ | ೪,೩೨,೦೦೦ |
| | | | | | ಒಂದು ಮಹಾಯುಗ | | ೪೩,೨೦,೦೦೦ ಸೌರವರ್ಷಗಳು |

**ವಿಶೇಷ ವಿಚಾರ :** —

(೧) ಚತುರ್ಯುಗಗಳ ಒಟ್ಟು ಪ್ರಮಾಣಕ್ಕೆ **ಒಂದು ಮಹಾಯುಗ** ಎಂದು ಹೆಸರು.

(೨) ಒಂದು ಮಹಾಯುಗ = ೪೩,೨೦,೦೦೦ ಮಾನವ ವರ್ಷಗಳು. ಅಂದರೆ, ನಲವತ್ತುಮೂರುಲಕ್ಷ ಇಪ್ಪತ್ತುಸಹಸ್ರ ಮಾನವ ವರ್ಷಗಳು.

(೩) ಇಂತಹ ಮಹಾಯುಗಗಳು ೭೧ ಆವರ್ತ ತಿರುಗಿದರೆ **ಒಂದು ಮನ್ವಂತರವಾಗುವುದು.**

(೪) ಒಂದು ಮನ್ವಂತರ = ೭೧ × ೪೩,೨೦,೦೦೦ = ೩೦,೬೭,೨೦,೦೦೦ ಮಾನವ ವರ್ಷಗಳು.

ಅಂದರೆ, ಮೂವತ್ತುಕೋಟಿ. ಅರವತ್ತೇಳು ಲಕ್ಷದ ಇಪ್ಪತ್ತು ಸಹಸ್ರ ಮಾನವ ವರ್ಷಗಳು ಒಂದು ಮನ್ವಂತರದ ಕಾಲಪ್ರಮಾಣವು.

(೫) ಇಂತಹ ಒಂದುಸಹಸ್ರ ಮಹಾಯುಗಗಳಿಗೆ ಬ್ರಹ್ಮದೇವರ ಹಗಲು.

(೬) ಎರಡುಸಹಸ್ರ ಮಹಾಯುಗಗಳು = ಬ್ರಹ್ಮದೇವರ ಒಂದು ದಿನ ಮಾನ = ಬ್ರಹ್ಮನ ದಿನಕಲ್ಪ = ೮೬೪,೦೦,೦೦,೦೦೦ ಸೌರವರ್ಷಗಳು = ಎಂಟ ನೂರ ಅರವತ್ತನಾಲ್ಕುಕೋಟಿ ಮಾನವವರ್ಷಗಳು.

(೭) ಬ್ರಹ್ಮನ ಒಂದು ಹಗಲಿನಲ್ಲಿ ಸ್ವರ್ಗಲೋಕದಲ್ಲಿ ೧೪ ಮಂದಿ ಇಂದ್ರರೂ ಮತ್ತು ಭೂಲೋಕದಲ್ಲಿ ೧೪ ಮಂದಿ ಮನುಗಳೂ ರಾಜ್ಯಭಾರ ಮಾಡುತ್ತಾರೆ.

(೮) ಈಗ ನಡೆಯುತ್ತಿರುವುದು **ವೈವಸ್ವತ ಮನ್ವಂತರವು.** ॥೧೫॥

## ಪದ್ಯ (೧೬)

**ಮೂಲ :—**

**ತಲೆಯೊಳಿಹ ನಾರಾಯಣನು ಗಂ ।**
**ಟಲೆಡೆ ಒಡಲೊಳು ವಾಸುದೇವನು ।**
**ಬಲದಲಿಹ ಪ್ರದ್ಯುಮ್ನ ಎಡಭಾಗದೊಳನಿರುದ್ಧ ॥**
**ಕೆಳಗಿನಂಗದಿ ಸಂಕರುಷಣನ ।**
**ತಿಳಿದು ಈ ಪರಿ ಸಕಲ ದೇಹಗ ।**
**ಳೊಳಗೆ ಪಂಚಾತ್ಮಕನ ರೂಪವ ನೋಡು ಕೊಂಡಾಡು ॥ ॥೧೬॥**

**ಅವತರಣಿಕೆ :–**

ಪಾಂಚಭೌತಿಕವಾದ ಈ ನಮ್ಮ ಶರೀರವು ಸಾಧನದೇಹ. ಇದೇ ಬಿಂಬ ರೂಪಿಯಾದ ಶ್ರೀಹರಿಯ ಮಂದಿರವು. ಈ ಶರೀರದಲ್ಲಿ ಶಿರಾದಿ ಪಾದ ಪರ್ಯಂತ ವ್ಯಾಪಿಸಿರುದ ಪಂಚರೂಪಾತ್ಮಕನ ಭಗವದ್ರೂಪಗಳ ವಿಚಾರ ತಿಳಿಸುತ್ತಾರೆ –"ತಲೆಯೊಳಿಹ"–ಎಂಬ ಪ್ರಸಕ್ತ ಸಂಧಿಗತ ೧೬ ನೆಯ ಈ ಪದ್ಯದಿಂದ.

ಶಿರಃ ಸ್ಥಾನದಲ್ಲಿ ಮೂಲರೂಪಿ ನಾರಾಯಣನೂ, ಕುತ್ತಿಗೆ ಪ್ರದೇಶ ಮತ್ತು ಕುತ್ತಿಗೆಯಿಂದ ಪ್ರಾರಂಭಿಸಿ ಕೆಳಗೆ ಸೊಂಟದ ಪರ್ಯಂತ ಮಧ್ಯಗತ ದೇಹದಲ್ಲಿ ವಾಸುದೇವನಾಮಕ ಶ್ರೀ ಪರಮಾತ್ಮನೂ, ದೇಹದ ಬಲಪಾರ್ಶ್ವ ದಲ್ಲಿ ಭುಜದಿಂದ ಬೆರಳು ತುದಿಗಳ ಪರ್ಯಂತ ಬಲಹಸ್ತದಲ್ಲಿ ಪ್ರದ್ಯುಮ್ನನೂ, ದೇಹದ ಎಡಪಾರ್ಶ್ವ ಮತ್ತು ವಾಮಹಸ್ತದಲ್ಲಿ ಅನಿರುದ್ಧನೂ ಇರುವರು. ಸೊಂಟದಿಂದ ಪ್ರಾರಂಭಿಸಿ, ಕೆಳಗೆ ದೇಹದ ಪಾದಾಂತವರೆವಿಗೂ ಸಂಕರ್ಷಣ ರೂಪಿ ಶ್ರೀ ಪರಮಾತ್ಮನು ವ್ಯಾಪ್ತನಾಗಿದ್ದಾನೆ. ಈ ಪ್ರಕಾರವಾಗಿ ನಾರಾ ಯಣಾದಿ ಪಂಚರೂಪಗಳಿಂದ ಶ್ರೀಹರಿಯ ಮಂದಿರವೆಂದೆನಿಸುವ ಈ ಸಾಧನ ಶರೀರದಲ್ಲಿ ಶಿರಾದಿ ಪಾದಪರ್ಯಂತ ಶ್ರೀಪರಮಾತ್ಮನು ವ್ಯಾಪ್ತನಾಗಿ ದೇಹ

ಗತ ವ್ಯಾಪಾರಗಳನ್ನು ಇಂದ್ರಿಯಗಳ ದ್ವಾರಾ, ತತ್ತ್ವೇಶರ ಮೂಲಕ ಮಾಡಿ ಮಾಡಿಸುತ್ತಿರುವನು ಎಂಬ ತತ್ತ್ವಜ್ಞಾನವನ್ನು ಅನುಸಂಧಾನ ಪೂರ್ವಕ ಗುರೂಪದೇಶದ್ವಾರಾ ತಿಳಿದು, ಆಯಾಯಾ ಭಗವದ್ರೂಪಗಳನ್ನು ಮನಸಾ ಚಿಂತಿಸುತ್ತಾ, ಮನೋಮಂದಿರದಲ್ಲಿ ನೋಡುತ್ತಾ, ಆ ಮಹಿಮಾ ಸಂಪನ್ನನ್ನು ನಿರಂತರವೂ ಸ್ತೋತ್ರಮಾಡುತ್ತ ಕೊಂಡಾಡುತ್ತಿರು –ಎಂದು ತಿಳಿಸುತ್ತಾರೆ ಪ್ರಸಕ್ತ ಪದ್ಯದಿಂದ. ॥೧೬॥

**ಪ್ರತಿಪದಾರ್ಥ :–**

**ತಲೆಯೊಳು** = ಶಿರಃಸ್ಥಾನದಲ್ಲಿ **ನಾರಾಯಣನು** = ಮೂಲ ರೂಪಿ ಶ್ರೀಮನ್ನಾರಾಯಣನು **ಇಹ** = ವಿದ್ಯಮಾನನಾಗಿದ್ದಾನೆ. **ಗಂಟಲೆಡೆ** = ಕುತ್ತಿಗೆ ಪ್ರದೇಶದ ಕೆಳಗಡೆ **ಒಡಲೊಳು** = ಸೊಂಟದ ಪರ್ಯಂತ ದೇಹಗತ ಮಧ್ಯಭಾಗದಲ್ಲಿ (ಉದರ ಪ್ರದೇಶದಲ್ಲಿ) **ವಾಸುದೇವನು** = ವಾಸುದೇವನಾಮಕನಾದ ಶ್ರೀ ಪರಮಾತ್ಮನಿದ್ದಾನೆ, **ಬಲದಲಿ** = ಶರೀರದ ಬಲಪಾರ್ಶ್ವದಲ್ಲಿ ಮತ್ತು ದಕ್ಷಿಣ ಹಸ್ತ ಸಮಗ್ರವಾಗಿ **ಪ್ರದ್ಯುಮ್ನ** = ಪ್ರದ್ಯುಮ್ನ ರೂಪಿ ಶ್ರೀಪರಮಾತ್ಮನು **ಇಹ** = ವ್ಯಾಪ್ತನಾಗಿದ್ದಾನೆ, **ಎಡಭಾಗದೊಳಗೆ** = ದೇಹದ ಎಡಪಾರ್ಶ್ವದಲ್ಲಿ **ಅನಿರುದ್ಧ** = ಅನಿರುದ್ಧ ನಾಮಕ ಶ್ರೀ ಪರಮಾತ್ಮನಿರುವನು **ಕೆಳಗಿನಂಗದಿ** = ಸೊಂಟದಿಂದ ಕೆಳಗೆ ಪಾದಾಂತವಾಗಿ **ಸಂಕರುಷಣನ** = ಸಂಕರ್ಷಣರೂಪಿ ಪರಮಾತ್ಮನ **ತಿಳಿದು** = ವ್ಯಾಪ್ತನಾಗಿದ್ದಾನೆಂದು ಜ್ಞಾನಾನುಸಂಧಾನಪೂರ್ವಕವಾಗಿ ಅರಿತು. **ಈ ಪರಿ** = ಪೂರ್ವೋಕ್ತ ಪ್ರಕಾರವಾಗಿ **ಸಕಲ ದೇಹಗಳೊಳಗೆ** = ಸಮಸ್ತ ಚೇತನರ ಸಾಧನ ದೇಹವೆಂದೆನಿಪ ಈ ಸ್ಥೂಲಶರೀರಗಳಲ್ಲಿ **ಪಂಚಾತ್ಮಕನ ರೂಪವ** = ನಾರಾಯಣ ವಾಸುದೇವಾದಿ ಐದುಪ್ರಕಾರವಾದ ಭಗವದ್ರೂಪಗಳನ್ನು (ಪ್ರಚುರವಾದ ಅಖಂಡ ರೂಪಗಳನ್ನು) **ನೋಡು** = ಧ್ಯಾನದಿಂದ ಮನಸಾ ಚಿಂತಿಸುತ್ತಾ, ಆ ಮಾನಸಿಕ ಪ್ರತೀಕಗಳನ್ನು ನೋಡುತ್ತಾ

**ಕೊಂಡಾಡು**=ಅಪಾರ ಮಹಿಮಾ ಸಂಪನ್ನನಾದ ಶ್ರೀಹರಿಯ ಗುಣಾವಳಿಗಳನ್ನು ಸ್ತೋತ್ರಮಾಡುತ್ತಿರು. ॥೧೬॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :–

ಈ ಸ್ಥೂಲದೇಹದಲ್ಲಿ ಶ್ರೀ ಪರಮಾತ್ಮನ ಖಂಡಾಖಂಡರೂಪಗಳ ತಿಳಿಯಬೇಕಂತ ಹೇಳುತ್ತಾರೆ. ನಾರಾಯಣಾದಿ ಐದು ರೂಪಗಳ ದೇಹದಲ್ಲಿ ಕವಚಾಕಾರದಿಂದ ಇರತಕ್ಕ ಕ್ರಮ ಹೇಳುತ್ತಾರೆ.

ತಲೆಯೊಳಿಹ ನಾರಾಯಣನು–ಶಿರಃಸ್ಥಾನದಲ್ಲಿ ಮೂಲರೂಪಿ ನಾರಾಯಣನು ಇದ್ದಾನೆ. ಗಂಟಲೆಡೆ–ಕುತ್ತಿಗೆ ಪ್ರದೇಶದಲ್ಲಿ, ಒಡಲೊಳು–ಕುತ್ತಿಗೆ ಕೆಳಗೆ ಟೊಂಕದ ಪರಿಯಂತ ಮಧ್ಯಗತ ದೇಹಭಾಗದಲ್ಲಿ (ಅಂದರೆ, ಎರಡು ಪ್ರದೇಶಗಳಲ್ಲಿ), ವಾಸುದೇವನು–ವಾಸುದೇವರೂಪಿಯಾದ ಪರಮಾತ್ಮನು ಇದ್ದಾನೆ, ಬಲದಲಿಹ ಪ್ರದ್ಯುಮ್ನ–ಬಲಭಾಗದಲ್ಲಿ (ಬಲಹಸ್ತ) ಪ್ರದ್ಯುಮ್ನರೂಪಿ ಪರಮಾತ್ಮ, ಎಡಭಾಗದಲ್ಲಿ ಅನಿರುದ್ಧ–ಎಡಭಾಗದಲ್ಲಿ (ಎಡದ ಕೈ) ಅನಿರುದ್ಧರೂಪಿ ಪರಮಾತ್ಮ, ಕೆಳಗಿನಂಗದಿ–ಟೊಂಕದ ಕೆಳಗೆ ಪಾದಾಂತವಾಗಿ, ಸಂಕರುಷಣನ ತಿಳಿದು–ಸಂಕರ್ಷಣರೂಪಿ ಪರಮಾತ್ಮನು ಇದ್ದಾನೆ. ಪ್ರಥಮತಃ ತನ್ನ ದೇಹದಲಿ ತಿಳಿದು, ಈ ಪರಿ–ಇದೇ ಪ್ರಕಾರ ಸಕಲ ದೇಹಗಳೊಳಗೆ–ಸಮಸ್ತ ಪ್ರಾಣಿಗಳ ಸ್ಥೂಲಶರೀರಗಳ ಒಳಗೆ ಪಂಚಾತ್ಮಕನ ರೂಪವ–ಪೂರ್ವೋಕ್ತ ಅನಿರುದ್ಧಾದಿ ಪಂಚರೂಪಗಳಿಂದ ಪ್ರಚುರವಾದ ಅಖಂಡರೂಪವ, ನೋಡು–ಅನುಸಂಧಾನದಿಂದ ನೋಡಿದವನಾಗಿ (ಪರಮಾತ್ಮನ ಮಹಿಮಾವನ್ನ), ಕೊಂಡಾಡು–ಅವನ ಗುಣಗಳನ್ನು ಕೊಂಡಾಡು.

ಸರ್ವ ಪ್ರಾಣಿಗಳಲ್ಲಿ ಸರ್ವ ವ್ಯಾಪಾರಗಳು ನಡಿಸತಕ್ಕದ್ದು ಈ ಐದು ರೂಪಗಳೇ. ಅನಂತಾನಂತ ರೂಪಗಳು. ಈ ರೂಪಗಳಿಂದ ವ್ಯಕ್ತವಾಗಿ ಅನಂ

ತಾನಂತ ನಾಮಗಳಿಂದ ನಡೆಯುತ್ತದೆ. ಯುಗಪ್ರವರ್ತಕವಾದ ನಾರಾಯಣಾದಿ ಪಂಚರೂಪಗಳು ನಾರಾಯಣ ವ್ಯತಿರಿಕ್ತ ನಾಲ್ಕು ರೂಪಗಳು. ನಾಲ್ಕು ಯುಗಧರ್ಮಗಳು. ಪ್ರಾಚುರ್ಯಾಪ್ರಾಚುರ್ಯದಿಂದ ಪ್ರತಿದಿನದಲ್ಲಿಯೂ ಪ್ರಾಣಿಗಳ ದ್ವಾರಾ ಮಾಡಿಸುತಾನೆಂದು ತಾತ್ಪರ್ಯ. ||೧೬||

(೨) "ಭಾವಪ್ರಕಾಶಿಕೆ" ವ್ಯಾಖ್ಯಾನ:—

೧೬ ಮತ್ತು ೧೭ ಈ ಎರಡು ಪದ್ಯಗಳಿಂದ ನಮ್ಮ ಶರೀರದೊಳಗೆ ನಾರಾಯಣಾದಿ ಪಂಚರೂಪಗಳನ್ನು ಚಿಂತಿಸುವ ಪ್ರಕಾರವನ್ನು ಅದರ ಫಲವನ್ನು ನಿರೂಪಿಸುತ್ತಾರೆ : —

ತಲೆಯಲ್ಲಿ ನಾರಾಯಣನು, ಗಂಟಲು ಮೊದಲು ಕಟಿಪರ್ಯಂತವಾದ ಅಂಗಗಳಲ್ಲಿ ವಾಸುದೇವನು, ಬಲದ ಪಾರ್ಶ್ವದಲ್ಲಿ ಪ್ರದ್ಯುಮ್ನನು, ಎಡಭಾಗದಲ್ಲಿ ಅನಿರುದ್ಧನು, ಕಟಿಯ ಕೆಳಗಿನ ಅಂಗಗಳಲ್ಲಿ ಸಂಕರ್ಷಣನು, ಹೀಗೆ ನಮ್ಮ ಶರೀರದಲ್ಲಿ ಪಂಚಾತ್ಮಕನಾದ ಶ್ರೀ ಪರಮಾತ್ಮನು ನಾರಾಯಣಾದಿ ಐದು ರೂಪಗಳಿಂದ ವಾಸಮಾಡುತ್ತಿರುವನೆಂದು ಮನಸ್ಸಿನಲ್ಲಿ ತಿಳಿದು, ಚಿಂತಿಸಿ, ಸ್ತೋತ್ರ ಮಾಡಬೇಕು. ||೧೬||

(೩) "ಭಾವದರ್ಪಣ ಟೀಕಾ" ವ್ಯಾಖ್ಯಾನ :—

"ತಲೆಯೊಳಿಹ" ಗಂಟಲೆಡೆ–ಕುತ್ತಿಗೆ ಕೆಳಗೆ, ಒಡಲೊಳು-ಹೊಟ್ಟೆಯೊಳಗೆ, ||೧೬||

(೪) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :–

"ತಲೆಯೊಳಿಹ"-ಇತಿ । ನಾರಾಯಣಃ ||ಓಂ|| ರುರೋಜ ಕವಿಭಿಃ ಕವಿಃ ಸನ್ ಸನೀವ್ಯಾಭಿರ್ಜರಿತಾರ ಮಚ್ಛಾಮಹೋ ವಾಜೇಭಿರ್ಮಹದ್ಭಿಶ್ಚ ಶುಷ್ಮೈಃ ಪುರುವೀರಾಭಿಃ ||ಓಮ್|| ನಾರಂ ಅನ್ನಂ ಬಲಾದಿ ದಾತೃತ್ವೇನ ತದಾಶ್ರಯತ್ವಾತ್ ನಾರಾಯಣಃ । ಶಿರೋ ನಾರಾಯಣಃ ಪಕ್ಷಃ ದಕ್ಷಿಣಃ

ಸವ್ಯ ಏವಚ । ಪ್ರದ್ಯುಮ್ನಶ್ಚಾನಿರುದ್ಧಶ್ಚ ಸಂದೋಹೋ ವಾಸುದೇವಕಃ । ಪುಚ್ಛಂ ಸಂಕರ್ಷಣಃ ಪ್ರೋಕ್ತಃ (ಏಕ ಏವತು ಪಂಚಧಾ)–ಇತಿ ಸೂತ್ರ ಭಾಷ್ಯೇ. ॥೧೬॥

**ಕನ್ನಡಾರ್ಥ :**

"ತಲೆಯೊಳಿಹ ನಾರಾಯಣನು"–ಎಂಬ ಪ್ರಸಕ್ತ ಪದ್ಯದಲ್ಲಿ ನಾರಾಯಣ ಶಬ್ದದ ವಿವರಣೆ ಇದೆ. ಇದಕ್ಕೆ ಬೃಹತೀ ಮಂತ್ರದ ಸಮಾಖ್ಯೆ ಕೊಟ್ಟಿದೆ. **"ನಾರಂ"** ಎಂದರೆ, ಅನ್ನ, ಬಲ ಮುಂತಾದವುಗಳನ್ನು ಕೊಡುವವನು ಎಂತ ಅರ್ಥ. ಅಂದರೆ, ಅನ್ನಾಶ್ರಯನು "ನಾರಾಯಣನು" ಎಂದರ್ಥ.

ಶಿರಸ್ಸಿನಲ್ಲಿ ನಾರಾಯಣನು ಇರುವನು. ಪ್ರದ್ಯುಮ್ನನು ದಕ್ಷಿಣಬಾಹುವಿನಲ್ಲಿ ಮತ್ತು ಅನಿರುದ್ಧನು ಎಡಬಾಹುವಿನಲ್ಲಿ ಇರುವರು. ದೇಹದ ಮಧ್ಯಭಾಗದಲ್ಲಿ ವಾಸುದೇವನಿದ್ದಾನೆ. ಸಂಕರ್ಷಣನು ಪುಚ್ಛ-ಪಾದಗತನು. ಈ ವಿವರಗಳು **ಸೂತ್ರಭಾಷ್ಯ**ದಲ್ಲಿ ಉಕ್ತವಾಗಿವೆ. ಶ್ರೀ ಪರಮಾತ್ಮನ ಪಂಚರೂಪಗಳನ್ನು ಈ ಪದ್ಯದಲ್ಲಿ ನಿರೂಪಿಸಲಾಗಿದೆ. ॥೧೬॥

**(ಆ) "ಗುರುಹೃದಯಪ್ರಕಾಶಿಕೆ" ವ್ಯಾಖ್ಯಾನ :–**

ಪಂಚನಾರೀತುರಗದಂದದಿ, ಎಂಬ ದೃಷ್ಟಾಂತದಿಂದ ದೇವರಿಗೆ ಪಂಚರೂಪವೂ ಒಂದೇ ಎಂದು ಹೇಳಿದುದನ್ನು ದೇಹದಲ್ಲೂ ಉಪಾಸನೆ ಮಾಡುವ ವಿಧಾನವನ್ನು ನಿರೂಪಿಸುತ್ತಾರೆ. ತಲೆಯಲ್ಲಿ ನಾರಾಯಣರೂಪ ಇರುವುದು. ಗಂಟಲು ಕೆಳಗಿನ ದೇಹದಲ್ಲಿ ವಾಸುದೇವರೂಪವು, ಬಲಪಾರ್ಶ್ವದಲ್ಲಿ ಪ್ರದ್ಯುಮ್ನ, ಎಡದಲ್ಲಿ ಅನಿರುದ್ಧ ರೂಪಗಳು ಇರುವುವು. ಸೊಂಟದ ಕೆಳಗಿನ ಶರೀರದಲ್ಲಿ ಸಂಕರ್ಷಣರೂಪ. ಹೀಗೆ ಸರ್ವಶರೀರಗಳಲ್ಲಿಯೂ ಪಂಚರೂಪಗಳಿರುವುದೆಂದೂ, ಇವು ಏಕಕಾಲದಲ್ಲಿ ಇರುವುವೆಂದೂ ಮನಸ್ಸಿನಿಂದ ತಿಳಿದು, ನೋಡುತ್ತಾ ಸ್ತುತಿಸುವುದು. ॥೧೬॥

# ಸರ್ವವ್ಯಾಖ್ಯಾನಸಾರಸಂಗ್ರಹ

ಪಾಂಚಭೌತಿಕವಾದ ನಮ್ಮ ಈ ಸ್ಥೂಲ ಶರೀರವು ಬಿಂಬರೂಪಿಯಾದ ಶ್ರೀ ಪರಮಾತ್ಮನ ಆವಾಸಮಂದಿರ. ಶ್ರೀಹರಿಯ ಮಂದಿರವಾದ ಈ ಶರೀರವು ಸಾಧನದೇಹವೆಂದೂ ಕರೆಸಲ್ಪಡುವುದು. ದೇಹಗತ ಸಮಸ್ತ ಇಂದ್ರಿಯಗಳ ದ್ವಾರಾ, ಆಯಾಯಾ ಇಂದ್ರಿಯಗಳಿಗೆ ಅಭಿಮಾನಿಗಳಾದ ತತ್ತ್ವಪತಿಗಳ ಮೂಲಕ ಮುಖ್ಯಪ್ರಾಣದೇವರ ಗೋಳಕಾಂತರ್ಗತನಾಗಿ ಶ್ರೀ ಪರಮಾತ್ಮನು ಸಮಸ್ತ ದೇಹಗತ ವ್ಯಾಪಾರಾದಿಗಳನ್ನು ಬಿಂಬಕ್ರಿಯಾದ್ವಾರಾ ಮಾಡಿ, ಮಾಡಿಸಿ ಜೀವನ ಅನುಭವಕ್ಕೆ ತಂದೀಯುತ್ತಿರುವನು. ಇಂತಹ ಸಾಧನ ಶರೀರದಲ್ಲಿ ಶಿರಾದಿ ಪಾದಾಂತ ವ್ಯಾಪ್ತವಾಗಿರುವ ಶ್ರೀ ಪರಮಾತ್ಮನ ಪಂಚರೂಪಗಳನ್ನು ಪ್ರಸಕ್ತ ಪದ್ಯದಲ್ಲಿ ವಿವರಿಸುತ್ತಾರೆ ದಾಸರಾಯರು. ದೇಹದಲ್ಲಿ ಸರ್ವತ್ರ ವ್ಯಾಪ್ತನಾದ ಈ ಪಂಚರೂಪಾತ್ಮಕನ ಉಪಾಸನೆ ಭಗವದನುಗ್ರಹ ವ್ಯಾಪ್ತಿಗೆ ಪ್ರಥಮ ಹಂತವು.

(೧) ದೇಹದಲ್ಲಿ ತಲೆಯು ಅತ್ಯಂತ ಪ್ರಮುಖವಾದ ಅಂಗ. ಇದನ್ನು ಉತ್ತಮಾಂಗವೆಂದು ಶಾಸ್ತ್ರದಲ್ಲಿ ಹೇಳುತ್ತಾರೆ. ಪಂಚಜ್ಞಾನೇಂದ್ರಿಯಗಳು ಮನೋವೃತ್ತಿಗಳಾದ ಚಿತ್ತ, ಬುದ್ಧಿ ಇವೆಲ್ಲವೂ ಇರುವುದು ಈ ಪ್ರಧಾನಾಂಗದಲ್ಲಿಯೇ. ತಲೆಯಲ್ಲಿನ ಬ್ರಹ್ಮನಾಡಿನಲ್ಲಿ ಸಹಸ್ರದಳಾತ್ಮಕವಾದ ಕಮಲದಲ್ಲಿ ವಿಶ್ವಾದಿ ಸಹಸ್ರರೂಪಗಳಿಂದ ಮೂಲರೂಪಿ **ಶ್ರೀಮನ್ನಾರಾಯಣನೇ** ವಿದ್ಯಮಾನನಾಗಿದ್ದವನಾಗಿ, ಆ ಕೇಂದ್ರ ಸ್ಥಾನಗತನಾಗಿ ದೇಹಗತ ಸಮಸ್ತ ಕ್ರಿಯಾ ವಿಶೇಷಗಳನ್ನು ಮಾಡಿಸುತ್ತಿರುವನು.

(೨) ಕಂಠದಿಂದ ಕೆಳಗಡೆ ಕಟಿಯ ಪರ್ಯಂತ ಇರುವ ದೇಹದ ಮಧ್ಯಗತವಾದ ಪ್ರದೇಶದಲ್ಲಿ **ವಾಸುದೇವ** ನಾಮಕ ಪರಮಾತ್ಮನಿರುವನು. ಕಂಠಗತ ಕಮಲ, ಹೃದಯಗತ ಕಮಲ, ಉರಸ್ಥಳಗತ ಕಮಲ, ನಾಭೀಗತಕಮಲಗಳಲ್ಲಿ ವಿದ್ಯಮಾನನಾಗಿದ್ದು, ನಾಡೀಗತ ಕ್ರಿಯೆಗಳನ್ನು ಮಾಡಿ ಮಾಡಿಸುತ್ತಾ, ಈ ಶರೀರದ ಮೂಲಕ ಜೀವನಿಗೆ ಸಾಧನ ಮಾಡಿಸುತ್ತಿರುವನು.

(೩) ದೇಹದ ಬಲಪಾರ್ಶ್ವ ಮತ್ತು ಬಲಹಸ್ತದಲ್ಲಿ ಭುಜದಿಂದ ಹಸ್ತದ ಬೆರಳುಗಳ ತುದಿಯುವರೆಗೂ ವ್ಯಾಪ್ತನಾಗಿ **ಪ್ರದ್ಯುಮ್ನ** ರೂಪಿ ಶ್ರೀ ಪರಮಾತ್ಮನಿರುವನು. ದೇಹಗತ ಬಲಪಾರ್ಶ್ವನಾಡಿಗಳ ಕಾರ್ಯ,ಕರ್ಮೇಂದ್ರಿಯ ವಾದ ದಕ್ಷಿಣ ಹಸ್ತದ ವ್ಯಾಪಾರಗಳನ್ನು ನಡೆಯಿಸುವನು.

(೪) ಶರೀರದ ಎಡಭಾಗ ಮತ್ತು ಎಡಹಸ್ತದಲ್ಲಿ **ಅನಿರುದ್ಧ** ನಾಮಕ ಶ್ರೀಪರಮಾತ್ಮನು ಸಮಗ್ರವಾಗಿ ವ್ಯಾಪ್ತನಾಗಿದ್ದು, ಅಲ್ಲಿನ ದೇಹಗತ ಕ್ರಿಯಾದಿಗಳನ್ನು ನಡೆಯಿಸುವನು.

(೫) ಕಟಿಯಿಂದ ಕೆಳಗೆ ಪಾದಾಂತದವರೆವಿಗೂ, **ಸಂಕರ್ಷಣ** ರೂಪಿ ಶ್ರೀ ಪರಮಾತ್ಮನು ವ್ಯಾಪ್ತನಾಗಿದ್ದು, ಪಾದಗಳ ಚಲನೆ, ಗಮನಾಗಮನ, ಗುದ ಮತ್ತು ಉಪಸ್ಥೇಂದ್ರಿಯಗಳ ಕಾರ್ಯ ಇತ್ಯಾದಿ ವ್ಯಾಪಾರಗಳನ್ನುಮಾಡಿ ಸುತ್ತಿರುವನು. ಸಂಕರ್ಷಣನು **"ಪುಚ್ಛ-ಪಾದಗತನು"** ಎಂದು **ಬ್ರಹ್ಮ ಸೂತ್ರ ಭಾಷ್ಯ** ದಲ್ಲಿ ಉಕ್ತವಾಗಿದೆ. ಇಂತು ಶ್ರೀ ಪರಮಾತ್ಮನು ನಾರಾಯಣಾದಿ ಪಂಚರೂಪಾತ್ಮಕನಾಗಿ ಖಂಡರೂಪಗಳಿಂದ ದೇಹಗತ ಆಯಾಯಾ ಭಾಗಗಳಲ್ಲಿ ವ್ಯಾಪ್ತನಾಗಿದ್ದು, ಅಖಂಡರೂಪದಿಂದ (ಪಂಚನಾರೀ ತುರಗ ದಂತೆ) ಸಮಗ್ರ ದೇಹದಲ್ಲಿ ಆಪಾದಮೌಳಿ ಪರ್ಯಂತ ವ್ಯಾಪ್ತನಾಗಿದ್ದು, ಈ ದೇಹಕ್ಕೆ ಕವಚಾಕಾರವಾಗಿ ಸಾಧನ ಶರೀರವೆನಿಸಿರುವ ಈ ಶರೀರದಲ್ಲಿ ತಾನು ಬಿಂಬರೂಪದಿಂದ ಸ್ಥಿತನಾಗಿದ್ದು, ದೇಹಗತ ಸಮಸ್ತ ಕ್ರಿಯಾದಿಗಳನ್ನು ಬಿಂಬ ಕ್ರಿಯಾದ್ವಾರಾ ತಾನೇ ಮಾಡಿ, ತತ್ವೇಶರ ದ್ವಾರಾ ಮಾಡಿಸುತ್ತಿರುವನು. ಇಂತಹ ದೇಹಾಂತವಾಗಿ ವ್ಯಾಪ್ತನಾದ ಆ ಪಂಚರೂಪಾತ್ಮಕನನ್ನು ಜ್ಞಾನಾನು ಸಂಧಾನದಿಂದ ತಿಳಿದು, ಮನಸಾ ಚಿಂತಿಸುತ್ತಾ, ಆ ಭಗವನ್ಮೂರ್ತಿಗಳನ್ನು ಮನೋಮಂದಿರದಲ್ಲಿ ನೋಡುತ್ತಾ, ಆ ಭಾಗ್ಯಸಂಪನ್ನನನ್ನು ಅನವತರವೂ ಕೊಂಡಾಡುತ್ತಾ, ಹಿಗ್ಗುತ್ತಾ ಆನಂದದಿಂದಿರು ಎಂದು ಸಂದೇಶ ಸಾರುತ್ತಾರೆ ಜ್ಞಾನಿವರೇಣ್ಯರಾದ ವ್ಯಾಪ್ತ್ಯೋಪಾಸಕರಾದ ದಾಸರಾಯರು. ||೧೬||

## ಪದ್ಯ (೧೭)

ಮೂಲ :–

ತನುವಿಶಿಷ್ಟದಿ ಇಪ್ಪ ನಾರಾ ।
ಯಣನು ಕಟಿಪಾದಾಂತ ಸಂಕರು ।
ಷಣನು ಶಿರಜಘನಾಂತವಾಗಿಹ ವಾಸುದೇವಾಖ್ಯ ॥
ಅನಿಮೇಷೇಶನಿರುದ್ಧ ಪ್ರದ್ಯು ।
ಮ್ನನು ಎಡದಿ ಬಲಭಾಗದಲಿ ಚಿಂ ।
ತನೆಯು ಮಾಳ್ಪರಿಗುಂಟೆ ಮೈಲಿಗೆ ವಿಧಿ ನಿಷೇಧಗಳು ॥೧೭॥

ಅವತರಣಿಕೆ :–

ಪೂರ್ವೋಕ್ತ ಪದ್ಯದಲ್ಲಿ ವಿವರಿಸಿದ ದೇಹಗತ ಪಂಚರೂಪಾತ್ಮಕನ ಭಗವದ್ರೂಪಗಳನ್ನು ಇನ್ನೂ ವಿಶದೀಕರಿಸುತ್ತಾರೆ –**"ತನು ವಿಶಿಷ್ಟದಿ"** –ಎಂಬ ಪ್ರಸಕ್ತ ಸಂಧಿಗತ ೧೭ ನೆಯ ಈ ಪದ್ಯದಿಂದ.

ಉಂಗುಷ್ಟ ಆರಂಭಿಸಿ ಶಿರಃ ಪರ್ಯಂತ, ಈ ಸ್ಥೂಲದಲ್ಲಿ ಶ್ರೀಮನ್ನಾರಾಯಣನು ಸಮಗ್ರವಾಗಿ ವ್ಯಾಪಿಸಿಕೊಂಡಿದ್ದಾನೆ. ಕಟಿ ಆರಂಭಿಸಿ, ಕಾಲುಗಳ ತುದಿಗಳವರೆಗೆ ಸಂಕರ್ಷಣನಾಮಕ ಪರಮಾತ್ಮನು ವ್ಯಾಪ್ತನಾಗಿದ್ದಾನೆ. ತಲೆ ಆರಂಭಿಸಿಕೊಂಡು ಜಘನ ಪ್ರದೇಶದವರೆಗೆ (ಮೊಳಕಾಲು ಕೆಳಗಿನ ಪಾದ ಬಿಟ್ಟು) ವಾಸುದೇವಾಖ್ಯ ಪರಮಾತ್ಮನು ತುರ್ಯ ಪ್ರದೇಶದ ಕೊನೆಯವರೆವಿಗೂ ಇದ್ದಾನೆ. ದೇವತೆಗಳಿಗೆ ಸ್ವಾಮಿಯಾದ ಅನಿರುದ್ಧದೇವನು ದೇಹದ ಎಡಪಾರ್ಶ್ವದಲ್ಲಿಯೂ ಪ್ರದ್ಯುಮ್ನರೂಪಿ ಪರಮಾತ್ಮನು ಬಲಭಾಗದಲ್ಲಿಯೂ ಇದ್ದಾರೆ. ಇಂತು ಸ್ಥೂಲದೇಹದಲ್ಲಿ ಸಮಗ್ರವಾಗಿ ಖಂಡಾಖಂಡರೂಪದಿಂದ ವ್ಯಾಪ್ತನಾಗಿರುವ ಪಂಚರೂಪಾತ್ಮಕನಾದ ಪರಮಾತ್ಮನ ವ್ಯಾಪ್ತ ರೂಪಗಳನ್ನು ಅನವರತವೂ ಜ್ಞಾನಾನುಸಂಧಾನಪೂರ್ವಕ ಚಿಂತನೆಯನ್ನು ಮಾಡುತ್ತಿರುವ ಉಪಾಸಕರಿಗೆ ಮೈಲಿಗೆ ವಿಧಿ ನಿಷೇಧಗಳು ಇಲ್ಲವೇ ಇಲ್ಲ. ಅವರು ಯಾವಾಗಲೂ ಮಂಗಳಾತ್ಮರು ಎಂತ ತಾತ್ಪರ್ಯ. ॥೧೭॥

**ಪ್ರತಿಪದಾರ್ಥ :–**

**ತನುವಿಶಿಷ್ಟದಿ**=ಸ್ಥೂಲದೇಹದ ಉಂಗುಷ್ಟ ಆರಂಭಮಾಡಿ, ಶಿರಃ ಪರ್ಯಂತ, ಅಂದರೆ, ಸಮಗ್ರ ಶರೀರದಲ್ಲಿ **ನಾರಾಯಣನು**=ಮೂಲ ರೂಪಿ ಶ್ರೀಮನ್ನಾರಾಯಣನು **ಇಪ್ಪ**=ವ್ಯಾಪಿಸಿಕೊಂಡು ಇರುವನು. **ಕಟಿಪಾದಾಂತ**=ಸೊಂಟದಿಂದ ಪಾದದವರೆಗೂ **ಸಂಕರುಷಣನು**= ಸಂಕರ್ಷಣನಾಮಕ ಶ್ರೀ ಪರಮಾತ್ಮನು **ವಾಸುದೇವಾಖ್ಯ**=ವಾಸು ದೇವ ನಾಮಕನು **ಶಿರಜಘನಾಂತವಾಗಿ**=ತಲೆಮೊದಲು ಸೊಂಟದ ಹಿಂಭಾಗದವರೆಗೂ **ಇಹ**=ವ್ಯಾಪಿಸಿಕೊಂಡಿರುವನು. **ಅನಿಮಿಷೇಶ** =ದೇವತೆಗಳಿಗೆ ಸ್ವಾಮಿಯಾದ (ನಿಮಿಷ–ಎಂದರೆ ರೆಪ್ಪೆ, ಅನಿಮಿಷ–ಎಂದರೆ, ರೆಪ್ಪೆ ಇಲ್ಲದಿರುವವರು, ಅಂದರೆ, ದೇವತೆಗಳು ಎಂದರ್ಥ. ದೇವತೆಗಳು ನಿದ್ರಾರಹಿತರು) **ಅನಿರುದ್ಧ**=ಅನಿರುದ್ಧರೂಪಿ ಶ್ರೀ ಪರಮಾತ್ಮನು **ಎಡದಿ**=ದೇಹದ ಎಡಪಾರ್ಶ್ವದಲ್ಲಿಯೂ **ಪ್ರದ್ಯುಮ್ನನು**=ಪ್ರದ್ಯುಮ್ನ ನಾಮಕ ಶ್ರೀ ಪರಮಾತ್ಮನು **ಬಲಭಾಗದಲ್ಲಿ**=ಶರೀರದ ಬಲಭಾಗದ ಲ್ಲಿಯೂ **ಚಿಂತನೆಯ ಮಾಳ್ಪರಿಗೆ**=ನಾರಾಯಣಾದಿ ಪಂಚರೂಪಾತ್ಮಕ ನಾಗಿ ಶ್ರೀಹರಿಯು ಈ ದೇಹದಲ್ಲಿ ಆಪಾದಮೌಳಿ ಪರ್ಯಂತ ಸಮಗ್ರವಾಗಿ ವ್ಯಾಪ್ತನಾಗಿದ್ದಾನೆ ಎಂದು ಜ್ಞಾನಾನುಸಂಧಾನದಿಂದ ಅರಿತು, ಧ್ಯಾನೋಪಾ ಸನೆ ಮಾಡುವರಿಗೆ **ಮೈಲಿಗೆ**=ದೇಹಸ್ಪರ್ಶದಿಂದ ಉಂಟಾಗುವ ಮೈಲಿಗೆ ಯಾಗಲೀ **ವಿಧಿ ನಿಷೇಧಗಳು**=ಕರ್ತವ್ಯಾಕರ್ತವ್ಯ ದೋಷಗಳು (ಇದನ್ನು ಮಾಡಬೇಕು–ವಿಧಿ. ಇದನ್ನು ಮಾಡಕೂಡದು–ನಿಷೇಧ) **ಉಂಟೇ**= ಎಲ್ಲಾದರೂ ಇದೆಯೇ ? ಅಂದರೆ, ಇಲ್ಲವೆಂದರ್ಥ. ||೧೭||

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :–

ಕವಚಾಕಾರದಿಂದ ಇದ್ದು, ಸಂರಕ್ಷಣ ಮಾಡತಾನೆಂತ ಹಿಂದಿನ ಶ್ಲೋಕ ದಲ್ಲಿ ಹೇಳಲ್ಪಟ್ಟಿತು. ಈ ಶ್ಲೋಕದಲ್ಲಿ ಮೈಲಿಗೆ ಪರಿಹಾರವಾಗತಕ್ಕ ಅನು

ಸಂಧಾನ ಹೇಳುತ್ತಾರೆ. ಮೈಲಿಗೆ ಪರಿಹಾರ ಮಾಡತಕ್ಕ ರೂಪಗಳು ದೇಹದಲ್ಲಿ ಇರತಕ್ಕ ಕ್ರಮ : —

ತನುವಿಷ್ಟದಿ–ಸ್ಥೂಲದೇಹದ ಉಂಗುಷ್ಟ ಆರಂಭಮಾಡಿ ಶಿರಃ ಪರಿಯಂತ, ನಾರಾಯಣನು-ನಾರಾಯಣರೂಪಿ ಪರಮಾತ್ಮ, ಇಷ್ಟ–ವ್ಯಾಪ್ತನಾಗಿದ್ದಾನೆ, ಕಟಿಪಾದಾಂತ ಸಂಕರುಷಣನು–ಟೊಂಕ ಆರಂಭಮಾಡಿ ಪಾದಾಂತವರಿಗೂ ಸಂಕರ್ಷಣರೂಪಿ ಪರಮಾತ್ಮ ಇದ್ದಾನೆ, ಶಿರ ಜಘನಾಂತವಾಗಿಹ–ವಾಸುದೇವಾಖ್ಯ–ಶಿರಜಘನಾಂತವಾಗಿ, ತಲೆ ಆರಂಭಮಾಡಿ ಮೊಳಕಾಲು ಕೆಳಗೆ ಪಾದ ಬಿಟ್ಟು ತುರ್ಯ (ತುರೀಯ) ಪ್ರದೇಶ ಅಂತ್ಯದವರೆಗೂ, ವಾಸುದೇವಾಖ್ಯ–ವಾಸುದೇವ ಎಂತ ಹೆಸರು ಹೊತ್ತ ಪರಮಾತ್ಮನು ಇದ್ದಾನೆ, ಅನಿಮಿಷೇಶ–ದೇವತೆಗಳಿಗೆ ಸ್ವಾಮಿಯಾದಂಥಾ, ಅನಿರುದ್ಧ-ಅನಿರುದ್ಧರೂಪಿ ಪರಮಾತ್ಮ, ಎಡದಿ-ಎಡಭಾಗದಲ್ಲಿ ಇದ್ದಾನೆ. ಪ್ರದ್ಯುಮ್ನ–ಪ್ರದ್ಯುಮ್ನರೂಪಿ ಪರಮಾತ್ಮ ಬಲಭಾಗದಲ್ಲಿ ಇದ್ದಾನೆ. (ಪೂರ್ವೋಕ್ತ ಪ್ರಕಾರ ಭಗವದ್ರೂಪಗಳ ಅನುಸಂಧಾನದಿಂದ) ಚಿಂತನೆಯ ಮಾಳ್ಪರಿಗೆ-ತದ್ದ್ವಾರಾ ಆಗತಕ್ಕ ಬಿಂಬ ಪ್ರತಿಬಿಂಬಕ್ರಿಯಾ ಚಿಂತನಿ ಮಾಡೋವರಿಗೆ ಮೈಲಿಗಿ ನಿಷೇಧಗಳೂ, ಮೈಲಿಗೆ–ಸ್ಪರ್ಶರೂಪವಾದ ಮೈಲಿಗಿ, ವಿಧಿ-ಮಡಿ ಎನತಕ್ಕ ವಿಧಿಯೇನು, ನಿಷೇಧ-ಮೈಲಿಗೆ ಎನತಕ್ಕ ನಿಷೇಧವೇನು, ಉಂಟೇ-ಏನೂ ಇಲ್ಲ, ಪೂರ್ವೋಕ್ತ ಪ್ರಕಾರ ಚಿಂತನಿ ಮಾಡೋವರು ಸರ್ವದಾ ಮಡಿಯೇವೇ.

ಜಡದೇಹಭಾಗವನ್ನು ಮರೆತು, ಜಡದೇಹಾಂತರ್ಗತವಾಗಿ ಇರತಕ್ಕ ಪೂರ್ವೋಕ್ತ ಪ್ರಕಾರ ತನ್ನ ಮನ ಜಡದೇಹವನ್ನ ನೋಡದೇ ಸರ್ವದಾ ಅಂತರ್ಗತ ಪರಮಾತ್ಮನ್ನ ದೇವತಾ ಅಧಿಷ್ಠಾನದಲಿ ನೋಡುತ್ತಾ, ಅನುಸಂಧಾನ ಮಾಡುತಾ ಇರತಕ್ಕವರು ದಾರೋ ಅಂಥವರು ಸರ್ವದಾ ಮಡಿಯೇ ಹೊರತು ತದನ್ಯರು ಅಲ್ಲ.

ಈ ಪೂರ್ವೋಕ್ತಕ್ಕೆ ದೃಷ್ಟಾಂತ : — ದರ್ಪಣವನ್ನು (ಕನ್ನಡಿ) ನೋಡತಕ್ಕ ಪುರುಷ ದರ್ಪಣದಲ್ಲಿ ಲಕ್ಷ್ಯ ಇಡದೆ ಅಂತರ್ಗತದಲ್ಲಿ ತಿಳಿಯುವ

ತನ್ನ ಪ್ರತಿಬಿಂಬವನ್ನು ಮಾತ್ರ ಹ್ಯಾಂಗೆ ಲಕ್ಷ್ಯಇಟ್ಟು ನೋಡುತಾನೋ, ತದ್ವತ್ ದೇಹಾಂತರ್ಗತ ಕವಚಾಕಾರದಿಂದ ಇರತಕ್ಕ ಪೂರ್ವೋಕ್ತ ಅನಿರುದ್ಧಾದಿ ಭಗವದ್ರೂಪಗಳ ಅನುಸಂಧಾನದಿಂದ ಲಕ್ಷ್ಯಯುಕ್ತನಾಗಿ ನೋಡತಕ್ಕ ಭಕ್ತನಿಗೆ ಮೈಲಿಗಿ ವಿಧಿ ನಿಷೇಧ ಇಲ್ಲ ಎಂತ ತಾತ್ಪರ್ಯ. (೧೬ ನೆಯ ಶ್ಲೋಕಕ್ಕೂ ಇದೇ ತಾತ್ಪರ್ಯ.) ||೧೭||

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ :–

ಸಂಪೂರ್ಣವಾಗಿ ಶರೀರವನ್ನು ಅಖಂಡರೂಪದಿಂದ ನಾರಾಯಣನು ವ್ಯಾಪಿಸಿಕೊಂಡಿರುವನು. ಖಂಡರೂಪಗಳಿಂದ ಸೊಂಟದಿಂದ ಕೆಳಭಾಗದಲ್ಲಿ ಪಾದಾಂತವಾಗಿ ಸಂಕರ್ಷಣನು, ಸೊಂಟದಿಂದ ಮೇಲ್ಗಡೆ ಶಿರಃ ಪರ್ಯಂತವಾಗಿ ವಾಸುದೇವಮೂರ್ತಿಯೂ, ಎಡ ಮತ್ತು ಬಲಪಾರ್ಶ್ವಗಳಲ್ಲಿ ದೇವೇಶರಾದ ಅನಿರುದ್ಧ ಪ್ರದ್ಯುಮ್ನರು ಇರುವರೆಂದು ಚಿಂತನೆಯನ್ನು ಮಾಡುವವರಿಗೆ ಮೈಲಿಗೆಯಾಗಲೀ, ವಿಧಿ ಎಂದರೆ, ಕರ್ತವ್ಯ ಕರ್ಮಗಳು, ನಿಷೇಧವೆಂದರೆ, ಅಕರ್ತವ್ಯ ಕರ್ಮಗಳು ಇವುಗಳ ಸಂಬಂಧವಾದುದು. ಅಂದರೆ, ಮೈಲಿಗೆ ಮಡಿ ಎಂಬ ದೋಷಗಳಿಲ್ಲ. ಮಾಡಬೇಕಾದ ಕರ್ಮಗಳನ್ನು ಬಿಟ್ಟರೂ, ಬಿಡಬೇಕಾದುದನ್ನು ಮಾಡಿದರೂ ಯಾವ ದೋಷವೂ ಇವರನ್ನು ಬಂಧಿಸುವುದಿಲ್ಲವೆಂದರ್ಥ.

ಹೀಗೆ ಹೇಳಿದ ಮಾತ್ರದಿಂದ ದಾಸರಾಯರ ಅಭಿಪ್ರಾಯವು ಸ್ನಾನ ಸಂಧ್ಯಾದಿ ಕರ್ಮಗಳನ್ನು ಬಿಟ್ಟು ಬಿಡಬಹುದೆಂದಲ್ಲ. ಅಭಕ್ಷ್ಯ ಭಕ್ಷಣ, ಅಗಮ್ಯಗಮನಾದಿ ನೀಚಕಾರ್ಯವನ್ನು ಮಾಡಿದರೂ ಪಾಪವಿಲ್ಲದೆಂದು ಭ್ರಷ್ಟನಾಗಬೇಕೆಂದಲ್ಲ. ಏಕೆಂದರೆ, ಇದೇ ಶ್ರೀ ಜಗನ್ನಾಥದಾಸರಾಯರು ತಮ್ಮ ಒಂದು ಪದ್ಯದಲ್ಲಿ —

**"ಸೋಚಿತ ಕರ್ಮಗಳಾಚರಿಸುತ, ಬಹು ।**
**ನೀಚರಲಿ ಪೋಗಿ ಯಾಚಿಸದೆ ॥**
**ಖೇಚರವಾಹ ಚರಾಚರ ಬಂಧಕ ।**

**ಮೋಚಕನಹುದೆಂದು ಯೋಚಿಸುತಿಪ್ಪುದೆ ||**
**ಫಲವಿದು ಬಾಳ್ದುದಕೆ ||"**

-ಎಂದು ಹೇಳಿರುವರು. ಈ ವಾಕ್ಯಗಳಿಂದ ಸ್ವವರ್ಣಾಶ್ರಮೋಚಿತವಾದ ಕರ್ಮಗಳನ್ನು ಮಾಡಬೇಕೆಂದು ಒಂದು ಸ್ಥಳದಲ್ಲಿ ಹೇಳಿ, ಮತ್ತೊಂದು ಸ್ಥಳದಲ್ಲಿ ವಿಧಿ ನಿಷೇಧಗಳು ಬಾಧಿಸುವುದಿಲ್ಲವೆಂದರೆ, ಕರ್ಮವೇ ಮಾಡಬೇಕಾಗಿಲ್ಲವೆಂಬ ಅರ್ಥವು ಎಂದಿಗೂ ಸರಿಯಾದುದಲ್ಲ. ಇದು ಹೊರತು ಭಗವದ್ಗೀತೆಯಲ್ಲಿ :—

**"ಯಾಸ್ತ್ವಿಂದ್ರಿಯಾಣಿ ಮಾನಸಾನಿಯಮಾರಭ್ಯತೇಽರ್ಜುನ ||**
**ಕರ್ಮೇಂದ್ರಿಯೈಃ ಕರ್ಮಯೋಗಮಸಕ್ತಃ ಸವಿಶ್ಯತೇ ||**
**ನಿಯತಂ ಕುರು ಕರ್ಮಂ ತ್ವ ಕರ್ಮಜ್ಯಾಯೋಹ್ಯಕರ್ಮಣಃ ||"**

ಇತ್ಯಾದಿ ಅನೇಕ ಪ್ರಮಾಣಗಳಿಂದ ನಿತ್ಯಕರ್ಮಾನುಷ್ಠಾನ ಮಾಡಬೇಕೆಂತಲೂ, ನಿಶ್ಚಯವಾಗುವುದು. ಆದ್ದರಿಂದ ವಿಧಿ ನಿಷೇಧಗಳೆಂಬ ಪದಗಳಿಗೆ ಸಂಕೋಚಾರ್ಥಮಾಡಬೇಕು. ಅಂದರೆ, ನಮ್ಮ ಮನಃಪೂರ್ವಕ ನಿಷಿದ್ಧಕರ್ಮವನ್ನು ಮಾಡಬಾರದು. ನಾವು ಪರಮಾತ್ಮನ ಚಿಂತನಾದಿಗಳಲ್ಲಿರುವಾಗಲೋ ಮೈಮರೆತು ಆನಂದದಿಂದ ನರ್ತನಾದಿಗಳನ್ನು ಮಾಡುವಾಗಲೋ, ನಿಷಿದ್ಧವಾದ ಪ್ರಾಣಿಹಿಂಸಾದಿಗಳು, ಕ್ರಿಮಿಕೀಟಾದಿಗಳ ಹಿಂಸಾ ಮೊದಲಾದವು ಆಗಿಬಿಟ್ಟರೆ, ಭಗವಜ್ಜಪವನ್ನು ಚಿಂತಿಸುತ್ತಿರುವ ನಮ್ಮನ್ನು ಆ ಪಾಪವು ಏನೂ ಮಾಡಲಾರದು. ವಿಧಿಕಾರ್ಯವಾದರೂ **"ಪೂರ್ವಸಂಧ್ಯಾಂ ಸನಕ್ಷತ್ರಾಂ"**-ಇತ್ಯಾದಿಗಳಿಂದ ಕಾಲಕಾಲಗಳಲ್ಲಿ ಮಾಡಬೇಕಾದ ಕರ್ಮಗಳನ್ನು ನಾವು ಪರಮಾತ್ಮನನ್ನು ಭಜಿಸುತ್ತಾ, ಆ ಕಾಲದಲ್ಲಿ ಮಾಡದೆ ಬಿಟ್ಟರೆ, ಆ ವಿಧಿ ಮೀರಿದ ದೋಷವು ನಮಗಿಲ್ಲವೆಂದರ್ಥ. ನಾವು ಸ್ನಾನಾದಿಗಳನ್ನು ಮಾಡಿಕೊಂಡು, ಮೈಮರೆತು, ಪರಮಾತ್ಮನನ್ನು ಭಜಿಸುತ್ತಿರುವಾಗ, ನಾಯಿ, ಬೆಕ್ಕು ಮೊದಲಾದವೋ ಯಾರಾದರೂ ಹುಡುಗರು ನಮ್ಮನ್ನು ಮುಟ್ಟಿಬಿಟ್ಟರೂ ನಾವು ಮೈಲಿಗೆಯಲ್ಲಿ ಭಜಿಸುವುದು ಸರಿಯಲ್ಲವೆಂದು ಸಂಶಯಪಡದೆ ನಿಶ್ಚಿಂತರಾಗಿ ಕ್ಲುಪ್ತ ಕಾಲದವರೆಗೂ ಭಜಿಸಬಹುದು. ಆ ಮೈಲಿಗೆ ಭಜನಾಸಕ್ತನಾಗಿರುವಾಗ ಇಲ್ಲ

ವೆಂದರ್ಥವೆಂದು ಭಾವಿಸಬೇಕೇ ಹೊರ್ತು, ಸುತರಾಂ ಸ್ನಾನಸಂಧ್ಯಾವಿಧಿಯನ್ನು ಬಿಟ್ಟರೂ ಬಾಧಕವಿಲ್ಲವೆಂತಲೂ, ನಿಷಿದ್ಧವಾದ ಸುರಪಾನ ಮೊದಲಾದುದು ಮಾಡಿದರೂ ಕೂಡ ನಮಗೆ ಬಾಧಕವಿಲ್ಲವೆಂದು ಎಂದಿಗೂ ಭಾವಿಸಬಾರದು. ||೧೭||

## (೪) ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ)

"ವಾಸುದೇವಃ ಶಿರೋಽಪಿ ವಾ" । ಇತಿ ಪಕ್ಷಾಂತರೋಕ್ತಿಃ । ತಾಮನು ಸರನ್ನಾಹ–"ತನು ವಿಶಿಷ್ಟದಿ"-ಇತಿ । "ಮೈಲಿಗೆ-ಕೇನಸ್ಯಾತ್ ಯೇನಸ್ಯಾತ್" ಇತ್ಯುಕ್ತೇಃ । ಪ್ರಮಾದಾತ್ ಚ ಕೃತಂ ಸ್ವಲ್ಪಂ ಭಸ್ಮೀ ಭವಿಷ್ಯತಿ ।" ಇತ್ಯುಕ್ತೇಃ ಚ ||೧೭||

**ಕನ್ನಡಾರ್ಥ:**

ಪರಮಾತ್ಮನ ರೂಪಗಳಿಗೆ ಪರಸ್ಪರ ಅಭೇದ. ಆದರೂ ಅವಯವ ಅವಯವೀ ಭಾವದಿಂದ ದೇಹಗತನಾಗಿ ಕ್ರೀಡಾವಿಶಿಷ್ಟನಾಗಿ ನಾರಾಯಣಾದಿ ಪಂಚರೂಪಾತ್ಮಕವಾಗಿ ಇದ್ದಾನೆ ಎಂದು ಒಂದು ಕ್ರಮದಿಂದ ಹೇಳಿ,ಪಕ್ಷಾಂತರ ವೆಂದು ಭಾಷ್ಯದಲ್ಲಿ ಹೇಳಿದಂತೆ ಹೇಳುತ್ತಾರೆ. ನಾರಾಯಣನ ಪಂಚರೂಪೋ ಪಾಸಕರಿಗೆ ಮೈಲಿಗೆಗಳಿಲ್ಲ. ಇದಕ್ಕೆ **"ಕೇನಸ್ಯಾತ್"**–ಎಂಬ ವಚನಗಳೇ ಆಧಾರ. ಪ್ರಮಾದದಿಂದ ಆಗಿರುವ ದೋಷಗಳು ಭಸ್ಮವಾಗುತ್ತವೆ ಎಂದು ವಚನಗಳ ತಾತ್ಪರ್ಯ. ||೧೭||

# ಸರ್ವವ್ಯಾಖ್ಯಾನಸಾರ ಸಂಗ್ರಹ

ಹಿಂದಿನ ಪದ್ಯದಲ್ಲಿ ನಿರೂಪಿತವಾಗಿರುವ ತತ್ತ್ವವಿಷಯವನ್ನೇ ಪ್ರಸಕ್ತ ಪದ್ಯದಲ್ಲಿ ವಿಶದೀಕರಿಸುತ್ತಾರೆ.

ಸಾಧನ ಶರೀರವೆಂಬ ಈ ಸ್ಥೂಲದೇಹದಲ್ಲಿ ಮೂಲರೂಪಿ ಶ್ರೀಮನ್ನಾ ರಾಯಣನು ಖಂಡಾಖಂಡರೂಪಗಳಿಂದ ಶಿರಃಪರ್ಯಂತ ಪಾದಾಂತವರೆವಿಗೂ

ಸಮಗ್ರವಾಗಿ ವ್ಯಾಪಿಸಿಕೊಂಡು ದೇಹಗತ ವ್ಯಾಪಾರಗಳನ್ನು ತತ್ವೇಶರ ಮೂಲಕ ಮಾಡಿ ಮಾಡಿಸಿ, ಶರೀರದಲ್ಲಿ ಪ್ರಕಾಶತೋವ್ಯಾಪ್ತನಾಗಿರುವ ಜೀವನ ಅನುಭವಕ್ಕೆ ತಂದೀಯುವವನು. ಜೀವನು ಆ ಸಮಸ್ತ ದೇಹಗತ ವ್ಯಾಪಾರಗಳನ್ನು ಬಿಂಬಕ್ರಿಯಾದ್ವಾರವೇ ತಿಳಿಯುವವನು.

(೧) ಸಂಪೂರ್ಣವಾಗಿ **ಈ** ದೇಹವನ್ನು ಶಿರದಿಂದ ಪ್ರಾರಂಭಿಸಿ, ಪಾದದವರೆವಿಗೂ ಅಖಂಡರೂಪದಿಂದ ಅಂತರ್ಬಹಿಶ್ಚ ಸರ್ವತ್ರವ್ಯಾಪ್ತನಾಗಿ ರುವ **ಶ್ರೀಮನ್ನಾರಾಯಣನು** ವ್ಯಾಪಿಸಿಕೊಂಡಿರುವನು. ಈ ದೇಹಗತ ಸಮಸ್ತ ವ್ಯಾಪಾರವನ್ನೂ ಮೂಲೇಶನಾಮಕನಾದ ಶ್ರೀಮನ್ನಾರಾಯಣನೇ ದೇಹಸ್ಥಿತನಾಗಿದ್ದು ಜೀವಕೃತ ಕರ್ಮಗಳನ್ನು ತಾಮಾಡಿ, ಮಾಡಿಸುತ್ತಿರುವನು.

(೨) ಸೊಂಟದಿಂದ ಕೆಳಭಾಗದಲ್ಲಿ ಪಾದಾಂತವಾಗಿ **ಶ್ರೀಸಂಕರ್ಷಣ ರೂಪಿ** ಪರಮಾತ್ಮನು ವ್ಯಾಪ್ತನಾಗಿದ್ದು, ಕರ್ಮೇಂದ್ರಿಯಗಳಾದ ಗುದ, ಉಪಸ್ಥ ಮತ್ತು ಚರಣಗಳ ಕಾರ್ಯಗಳನ್ನು ಮಾಡಿ. ಮಾಡಿಸುತ್ತಿರುವನು. ಕಾಲುಗಳ ಚಲನೆ, ಗಮನಾಗಮನ ವ್ಯಾಪಾರಾದಿಗಳು, ಮಲಮೂತ್ರವಿಸರ್ಜ ನಾದಿ ಕ್ರಿಯೆಗಳು, ನರಮಂಡಲ, ರಕ್ತಪರಿಚಲನೆ, ಸ್ನಾಯುಗಳ ಸಂಕೋಚನ ವಿಕಾಸನಾದಿ ಸಮಸ್ತ ವ್ಯಾಪಾರಗಳನ್ನು ಸಂಕರ್ಷಣನೇ ಮಾಡಿಸುತ್ತಿರುವನು.

(೩) ದೇಹಗತ ಬಲಪಾರ್ಶ್ವದಲ್ಲಿ ಹಾಗೂ ಬಲಹಸ್ತದಲ್ಲಿ **ಪ್ರದ್ಯುಮ್ನ ರೂಪಿ** ಪರಮಾತ್ಮನು ವ್ಯಾಪ್ತನಾಗಿದ್ದು, ದಾನ ಸ್ವೀಕಾರಾದಿ ಹಸ್ತಗತ ವ್ಯಾಪಾರ ಗಳನ್ನೂ ದಕ್ಷಿಣಪಾರ್ಶ್ವ ದೇಹಗತ ಕ್ರಿಯಾದಿಗಳನ್ನೂ ನಡೆಯಿಸುತ್ತಿರುವನು.

(೪) ದೇಹದ ಎಡಭಾಗದಲ್ಲಿ ಮತ್ತು ಎಡಗೈಯ್ಯಿನಲ್ಲಿ ದೇವತೆಗಳಿಗೆ ಸ್ವಾಮಿಯಾದ **ಅನಿರುದ್ಧನಿದ್ದು**, ವಾಮಪಾರ್ಶ್ವ ಶರೀರಗತ ವ್ಯಾಪಾರಾದಿ ಗಳನ್ನು ವಾಮಹಸ್ತದ ಕ್ರಿಯಾದಿಗಳನ್ನು ಮಾಡಿ, ಮಾಡಿಸುತ್ತಿರುವನು.

(೫) **ವಾಸುದೇವಾಖ್ಯ** ಪರಮಾತ್ಮನು ಸೊಂಟದಿಂದ ಮೇಲೆ ಶಿರಃ ಪರ್ಯಂತ ವ್ಯಾಪಿಸಿಕೊಂಡು ಇದ್ದವನಾಗಿ, ಶ್ವಾಸಕ್ರಿಯಾ, ಹೃದಯಕ್ರಿಯಾ,

ಪಚನಕ್ರಿಯಾದಿ ಆ ದೇಹ ಭಾಗಗತ ವ್ಯಾಪಾರಾದಿಗಳನ್ನು ಮಾಡಿ, ಮಾಡಿಸುತ್ತಾ ಶರೀರದ ಸಂರಕ್ಷಕನಾಗಿರುವನು.

ಇಂತು ಮೂಲರೂಪಿ ಶ್ರೀಮನ್ನಾರಾಯಣನು ಅಖಂಡರೂಪದಿಂದ ತನುವಿಶಿಷ್ಟದಿ ವ್ಯಾಪ್ತ ಶರೀರದ ಸಮಗ್ರ ಕ್ರಿಯೆಗಳನ್ನು ಮಾಡಿ ಮಾಡಿಸುತ್ತಿರುವನೆಂತಲೂ, ಖಂಡರೂಪಗಳಿಂದ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ರೂಪಗಳಿಂದ ಆಯಾಯಾ ಶರೀರದ ಭಾಗದಲ್ಲಿ ವ್ಯಾಪಾರಗಳನ್ನು ಮಾಡಿ, ಮಾಡಿಸುತ್ತಿರುವರೆಂದೂ, ಜ್ಞಾನಾನುಸಂಧಾನ ಕ್ರಮದಿಂದ ಗುರೂಪದೇಶದ್ವಾರಾ ತಿಳಿದು, ಆ ಪಂಚರೂಪಾತ್ಮಕ ಬಿಂಬರೂಪಿ ಶ್ರೀಹರಿಯನ್ನು ಸಾಧನ ಶರೀರವಾದ ಈ ದೇಹದಲ್ಲಿ ಸರ್ವತ್ರ ವ್ಯಾಪ್ತನಾಗಿದ್ದಾನೆಂದು ಧ್ಯಾನೋಪಾಸನೆಯನ್ನು ಮಾಡತಕ್ಕ ಮಂಗಳಾತ್ಮರಿಗೆ ಮೈಲಿಗೆ, ವಿಧಿ ನಿಷೇಧಗಳು ಎಂದಿಗಾದರೂ ಬಾಧಕವನ್ನು ಉಂಟುಮಾಡುತ್ತವೆಯೇ? ಸರ್ವಥಾ ಇಲ್ಲ ಎಂದು ಹೇಳುತ್ತಾರೆ. ಅಂದರೆ ಜೀವನು ವಿಧಿಬದ್ಧನು. ವಿಧಿ ನಿಷೇಧಗಳು ಜೀವನಿಗೆ ಉಂಟೇ ಉಂಟು. ಸ್ವೋಚಿತವಾದ ವರ್ಣಾಶ್ರಮ ಧರ್ಮಗಳನ್ನು ಸಮಸ್ತ ಜೀವರೂ ಆಚರಿಸಲೇಬೇಕು. ಲೋಕಶಿಕ್ಷಣಕ್ಕಾಗಿ ಶ್ರೀಪರಮಾತ್ಮನೇ ತಾನು ರಾಮಕೃಷ್ಣಾದ್ಯವತಾರಗಳನ್ನು ಎತ್ತಿದ್ದಾಗ, ಕರ್ಮಾಚರಣೆಗಳ ಕ್ರಮವನ್ನು ತೋರಿಸಿಕೊಟ್ಟಿದ್ದಾನೆ. ಸದಾಚಾರಸ್ಮೃತಿ ಮುಂತಾದ ಗ್ರಂಥಗಳ ದ್ವಾರಾ ಶ್ರೀಮದಾಚಾರ್ಯರು ಜೀವರಿಗೆ ಮಾರ್ಗದರ್ಶಕರಾಗಿದ್ದಾರೆ. ಆದರೆ ದೈಹಿಕ, ಮಾನಸಿಕ, ವಾಚನಿಕ ಇತ್ಯಾದಿ ದೇಹಗತ ಸಮಸ್ತ ವ್ಯಾಪಾರಗಳನ್ನೂ ಕರ್ಮಪತಿಯಾದ ಬಿಂಬನೇ ಕರ್ಮಾಂತರ್ಗತನಾಗಿದ್ದುಕೊಂಡು, ಪಂಚರೂಪಾತ್ಮಕನಾಗಿ ವ್ಯಾಪಿಸಿಕೊಂಡು ತಾನೇ ಆ ಸಮಸ್ತ ಕರ್ಮಗಳಿಗೂ ಪ್ರೇರಕವಾಗಿ ಬಿಂಬಕ್ರಿಯಾದ್ವಾರದಿಂದ ಮಾಡಿ, ತತ್ವಪತಿಗಳ ದ್ವಾರಾ ಮಾಡಿಸಿ, ಶರೀರದಲ್ಲಿ ಪ್ರಕಾಶತೋ ವ್ಯಾಪ್ತನಾದ ಜೀವನ ಅನುಭವಕ್ಕೆ ತಂದು ಆ ಜೀವನ ಅನಾದಿ ಕರ್ಮಾನುಸಾರ ಆ ಕರ್ಮಫಲಗಳನ್ನು ಆ ಜೀವನಿಗೆ ಕೊಡುವನು. ಇದೇ ಕರ್ಮಾಚರಣೆಯ ರಹಸ್ಯವಾದ ಜ್ಞಾನಾನುಸಂಧಾನ. ಬಿಂಬನೇ ಮಾಡಿಸುತ್ತಿರುವ ಕರ್ಮಗಳನ್ನು ನಾನೇ ಕರ್ತನೆಂದು ಅಹಂಕಾರ ಮಮಕಾರಗಳಿಂದ ಗ್ರಸ್ತನಾದ ಜೀವನು ತಿಳಿದರೆ, ಅವು ಅವನಿಗೆ ಬಂಧಕ

ವಾಗುವುವು. ಆದರಿಂದ ಜೀವನಿಗೆ ಬಾಧಕ. ಆದರೆ ನಿರಂತರ ಹರಿಯ ಸ್ಮರಣೆಯಲ್ಲಿ ಮೈಮರೆತು ಇರುವ ಧ್ಯಾನೋಪಾಸಕನಿಗೆ ಅಜ್ಞಾತವಾಗಿ ಮೈಲಿಗೆ, ವಿಧಿ ನಿಷೇಧಗಳನ್ನು ಮಾಡದಿರುವುದರಿಂದ ಬರುವ ದೋಷಗಳು ಲೇಪವಾಗುವುದಿಲ್ಲ. ಅವುಗಳಿಂದ ಅವನು ಬಾಧಿತನಾಗುವುದಿಲ್ಲ. ಅಂತಹ ದೋಷಗಳನ್ನು ಕರುಣಾಸಮಗ್ರನಾದ ಶ್ರೀಪರಮಾತ್ಮನು ತನ್ನ ಅಪಾಂಗದೃಷ್ಟಿ ಯಿಂದ ಭಸ್ಮೀಭೂತ ಮಾಡುವನು ಎಂದು ಈ ಪದ್ಯದ ಹೃದ್ಗತಾರ್ಥವೇ ಹೊರತು, ವಿಧಿ ನಿಷೇಧಗಳೇ ಜೀವನಿಗೆ ಇಲ್ಲ ಎಂಬರ್ಥವಲ್ಲ. ॥೧೭॥

## ಪದ್ಯ (೧೮)

**ಮೂಲ :–**

**ಪದುಮನಾಭನು ಪಾಣಿಯೊಳಿಹ ।**
**ವದನದಲಿ ಹೃಷೀಕೇಶ ನಾಸಿಕ ।**
**ಸದನದಲಿ ಶ್ರೀಧರನು ಜಿಂಹ್ವೆಯೊಳಿಪ್ಪ ವಾಮನನು ॥**
**ಮೃದುಳ ತ್ವಗ್ದೇಶದಿ ತ್ರಿವಿಕ್ರಮ ।**
**ಮಧುವಿರೋಧಿಯು ಲೋಚನದಿ ಕ ।**
**ರ್ಣದಲಿ ಇಪ್ಪನು ವಿಷ್ಣುನಾಮಕ ಶ್ರವಣನೆಂದೆನಿಸಿ ॥ ॥೧೮॥**

**ಅವತರಣಿಕೆ :—**

ಪೂರ್ವೋಕ್ತ ಪದ್ಯಗಳಲ್ಲಿ ಶ್ರೀಪರಮಾತ್ಮನು ನಾರಾಯಣಾದಿ ರೂಪ ಗಳಿಂದ ಪಂಚರೂಪಾತ್ಮಕನಾಗಿ ಈ ದೇಹದಲ್ಲಿ ಆಪಾದಮೌಳಿ ಪರ್ಯಂತ ಸಮಗ್ರನಾಗಿ ಖಂಡಾಖಂಡ ರೂಪಗಳಿಂದ ವ್ಯಾಪ್ತನಾಗಿದ್ದಾನೆಂದು ತಿಳಿಸಿ, ಪ್ರಸಕ್ತ ಪದ್ಯದಿಂದ ಮುಂದಕ್ಕೆ ೨೨ ನೆಯ ಪದ್ಯದವರೆವಿಗೂ, ದೇಹಗತ ಚತು ರ್ವಿಂಶತಿ ತತ್ವಗತರಾದ ಆಯಾ ಇಂದ್ರಿಯಗಳಲ್ಲಿ ವಿದ್ಯಮಾನಗಳಾಗಿರುವ ಭಗವದ್ರೂಪಗಳ ವಿಷಯವನ್ನು ತಿಳಿಸುತ್ತಾರೆ.

ಕರ್ಮೇಂದ್ರಿಯವಾದ ಹಸ್ತದಲ್ಲಿ ಪದ್ಮನಾಭನೂ, ಮುಖದಲ್ಲಿ ಇಂದ್ರಿ ಯಾಭಿಮಾನಿಗಳಿಗೆ ಅಧಿಪನಾದ ಹೃಷಿಕೇಶನೂ, ಮೂಗಿನ ದ್ವಾರಗಳಲ್ಲಿ ಶ್ರೀ

ಧರನೂ, ರಸನೇಂದ್ರಿಯವಾದ ನಾಲಗೆಯಲ್ಲಿ ವಾಮನನೂ, ಶೀತೋಷ್ಣಗಳ ಅನುಭವವನ್ನುಂಟುಮಾಡುವ ತ್ವಗಿಂದ್ರಿಯದಲ್ಲಿ ತ್ರಿವಿಕ್ರಮನೂ, ನೇತ್ರದ್ವಯಗಳಲ್ಲಿ ಮಧುಸೂದನನೂ ಎರಡು ಕಿವಿಗಳಲ್ಲಿ ವಿಷ್ಣುನಾಮಕ ಪರಮಾತ್ಮನು "ಶ್ರವಣ" ಎಂಬ ನಾಮಧೇಯನಾಗಿ ಇದ್ದು ಆಯಾಯಾ ತತ್ತ್ವೇಶರದ್ವಾರಾ ದೇಹಗತ ಇಂದ್ರಿಯ ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಿರುವನು ಎಂದು ಹೇಳುತ್ತಾರೆ–**"ಪದುಮನಾಭನು"**–ಎಂಬ ಪ್ರಸಕ್ತ ಸಂಧಿಗತ ೧೮ ನೆಯ ಈ ಪದ್ಯದಿಂದ. ॥೧೮॥

**ಪ್ರತಿಪದಾರ್ಥ :–**

**ಪದುಮನಾಭನು**=ಪದ್ಮನಾಭರೂಪಿ ಪರಮಾತ್ಮನು **ಪಾಣಿಯೊಳಗೆ**=ಎರಡು ಕೈಗಳಲ್ಲಿ **ಇಹ**=ವಿದ್ಯಮಾನನಾಗಿದ್ದಾನೆ **ವದನದಲಿ**=ಮುಖದಲ್ಲಿ (ಬಾಯಿಯಲ್ಲಿ) **ಹೃಷಿಕೇಶ**=ಹೃಷಿಕೇಶನಾಮಕನು **ನಾಸಿಕ ಸದನದಲಿ**=ಮೂಗಿನ ದ್ವಾರದ್ವಯಗಳಲ್ಲಿ (ಹೊಳ್ಳೆಗಳಲ್ಲಿ) **ಶ್ರೀಧರನು**=ಶ್ರೀಧರರೂಪಿಯಾದ ಪರಮಾತ್ಮನು **ವಾಮನನು**=ವಾಮನನಾಮಕನು **ಜಿಂಹ್ವೆಯೊಳಿಪ್ಪ**=ರಸನೇಂದ್ರಿಯವಾದ ನಾಲಿಗೆಯಲ್ಲಿ ಇದ್ದಾನೆ **ಮೃದುಳ**=ಮೃದುತ್ವ (ಹಾಗೂ ಕಾಠಿಣ್ಯ) ಶೀತೋಷ್ಣಗಳನ್ನು ತಿಳಿಸಿಕೊಡುವ ಸೂಕ್ಷ್ಮವಾದ **ತ್ವಗ್ದೇಶದಿ**=ತ್ವಗಿಂದ್ರಿಯದಲ್ಲಿ (ತ್ವಕ್+ಇಂದ್ರಿಯ. ದೇಹದಲ್ಲಿ ಸರ್ವತ್ರವ್ಯಾಪ್ತವಾದ ಜ್ಞಾನೇಂದ್ರಿಯವು ಚರ್ಮವು) **ತ್ರಿವಿಕ್ರಮ**=ತ್ರಿವಿಕ್ರಮ ದೇವರು ಇದ್ದಾನೆ **ಮಧುವಿರೋಧಿಯು**=ಮಧುನಾಮಕ ದೈತ್ಯನನ್ನು ಸಂಹರಿಸಿದ ಮಧುಸೂದನನಾಮಕನು **ಲೋಚನದಿ**=ನೇತ್ರದ್ವಯಗಳಲ್ಲಿ ಇರುವನು. **ಕರ್ಣದಲಿ**=ಎರಡು ಕಿವಿಗಳಲ್ಲಿ **ವಿಷ್ಣುನಾಮಕ**=ವಿಷ್ಣುರೂಪಿ ಪರಮಾತ್ಮನು **ಶ್ರವಣನೆಂದೆನಿಸಿ**="ಶ್ರವಣ" ಎಂಬ ಅಭಿಧಾನದಿಂದ ಕರೆಯಿಸುತ್ತಾ **ಇಪ್ಪನು**=ಇರುವನು. ॥೧೮॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ದೇಹಗತ ಚತುರ್ವಿಂಶತಿ ತತ್ತ್ವಗತವಾದ ಆಯಾ ಇಂದ್ರಿಯಗಳ ಶುದ್ಧಿ ಮಾಡತಕ್ಕ ಭಗವದ್ರೂಪಗಳ ಹೇಳುತ್ತಾರೆ.

ಪದುಮನಾಭನು–ಪದ್ಮನಾಭದೇವರು, ಪಾಣಿಯೊಳಗಿಹ–ಕೈಯಲ್ಲಿ ಇದ್ದಾನೆ, ವದನದಲಿ–ಬಾಯಿಯಲ್ಲಿ, ಹೃಷಿಕೇಶ-ಹೃಷಿಕೇಶನೂ, ನಾಸಿಕ ಸದನದಲಿ–ಮೂಗಿನ ದ್ವಾರದ್ವಯಗಳಲ್ಲಿ ಶ್ರೀಧರನು-ಶ್ರೀಧರನೂ, ಜಿಂಹ್ವೆ ಯೊಳಿಪ್ಪ ವಾಮನನು-ನಾಲಿಗೆಯಲ್ಲಿ ವಾಮನ ದೇವರೂ ಇದ್ದಾರೆ. ಮೃದುಳ-ಮೃದು ಕಠಿಣ ಶೀತೋಷ್ಣಗಳ ತಿಳಿಸಿಕೊಡುವಂಥಾ, ತ್ವಗ್ದೇಶದಿ–ತ್ವಗಿಂದ್ರಿಯ ಪ್ರದೇಶದಲ್ಲಿ ತ್ರಿವಿಕ್ರಮದೇವರು ಇದ್ದಾರೆ. ಮಧುವಿರೋಧಿಯು-ಮಧು ನಾಮಕ ದೈತ್ಯಗೆ ಶತ್ರುವಾದಂಥಾ ಮಧುಸೂದನ ದೇವರು, ಲೋಚನದಿ-ನೇತ್ರಗಳಲ್ಲಿ ಇದ್ದಾರೆ, ವಿಷ್ಣುನಾಮಕ–ವಿಷ್ಣುರೂಪಿ ಪರಮಾತ್ಮನು, ಕರ್ಣ ದಲಿ-ಕಿವಿಗಳಲ್ಲಿ, ಶ್ರವಣನೆಂದೆನಿಸಿ–ದಿಕ್ಪ್ರದರ್ಶನದಿಂದ ತತ್ತದಿಂದ್ರಿಯಗಳಲ್ಲಿ ತತ್ತನ್ನಾಮಗಳಿಂದ ಕರಿಸುತ್ತಾನಾದ್ದರಿಂದ, ಶ್ರವಣ ಎಂಬ ಹೆಸರಿನಿಂದ ಇಪ್ಪನು–ಇದ್ದಾನೆ.

ಈ ಪ್ರಕಾರ ಇಂದ್ರಿಯಗಳಲ್ಲಿ ಇಂದ್ರಿಯಾಕಾರಗಳಿಂದ ಇದ್ದು, ಆಯಾ ಇಂದ್ರಿಯ ನಾಮಗಳಿಂದ ಕರಿಸೋವನಾಗಿ,ಇಂದ್ರಿಯಗಳ ಕಾರ್ಯ ಮಾಡುತಾ ಇದ್ದಾನೆ. ಖಂಡಾಖಂಡರೂಪದಿಂದ ಅಂದರೆ, ಪದ್ಮನಾಭಾದಿ ರೂಪಗಳಿಂದ ನಿಯಾಮಕನಾಗಿ ಇದ್ದಾನೆಂದು ಅನುಸಂಧಾನಮಾಡಬೇಕು. ಇಂದ್ರಿಯಾಕಾರ ರೂಪ ಪವಿತ್ರ ಮಾಡತಕ್ಕರೂಪ. ಪದ್ಮನಾಭಾದಿ ರೂಪಗಳು ತತ್ವ ನಿಯಾಮಕ ರೂಪಗಳು. ||೧೮||

(೨) "ಭಾವಪ್ರಕಾಶಿಕೆ"–ವ್ಯಾಖ್ಯಾನ :–

ಈ ಪದ್ಯವೊದಲು ೨೧ ನೆಯ ಪದ್ಯದವರೆವಿಗೂ ೨೪ ತತ್ತ್ವಗಳಲ್ಲಿ ಕೇಶವಾದಿ ಚತುರ್ವಿಂಶತಿ ಮೂರ್ತಿಗಳನ್ನು ಚಿಂತಿಸುವ ಪ್ರಕಾರವನ್ನು ಹೇಳುತ್ತಾರೆ. ಎರಡು ಕೈಗಳಲ್ಲಿ ಪದ್ಮನಾಭಮೂರ್ತಿಯನ್ನು ಚಿಂತಿಸಬೇಕು. ಮುಖದಲ್ಲಿ ಹೃಷೀಕೇಶ, ಘ್ರಾಣೇಂದ್ರಿಯಗಳಲ್ಲಿ ಶ್ರೀಧರ, ಜಿಹ್ವೇಂದ್ರಿಯದಲ್ಲಿ ವಾಮನ, ತ್ವಗಿಂದ್ರಿಯದಲ್ಲಿ ತ್ರಿವಿಕ್ರಮ, ನೇತ್ರಗಳಲ್ಲಿ ಮಧುಸೂದನರೂಪ, ಶ್ರವಣೇಂದ್ರಿಯದಲ್ಲಿ ವಿಷ್ಣುರೂಪವನ್ನು ಚಿಂತಿಸಬೇಕು. ||೧೮||

(೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :–

"ಪದುಮನಾಭನು" ಇತಿ ॥ ಪದ್ಮನಾಭಃ "ಓಂ ತುಭ್ಯಂ ಬ್ರಹ್ಮಾಣಿ ಗಿರ ಇಂದ್ರ ತುಭ್ಯಂ ನದಂ ವ ಜದತೀನಾಂ ಸತ್ರಾದಧಿರೇ ಹರಿವೋಜುಷಸ್ವ ನದಂ ಯೋ ಯುವತೀನಾಂ ಓಂ" ॥ ಪದ್ಮಂ ಸ್ವಕಾರಣತ್ವೇನ ಪ್ರಾಪ್ನೋತಿ ಇತಿ ಪದ್ಮನಃ ಚತುರ್ಮುಖಃ ॥ ತಸ್ಯ ಅಭಿಯತಃ ತಥೋಕ್ತಃ ॥ ಹಸ್ತಗಃ ಪದ್ಮನಾಭೋ ಹಿ ಹೃಷೀಕೇಶೋ ಮುಖೇ ಸ್ಮೃತಃ ॥ ಶ್ರೀಧರೋ ನಾಸಿ ಜಿಹ್ವಾಯಾಂ ವಾಮನೋಽಸ್ತಿ ತ್ರಿವಿಕ್ರಮಃ ॥ ತ್ವಚ್ಯಕ್ಷಯೋಃ ಮಧು ದ್ವೇಷೀ ವಿಷ್ಣುಃ ಜೀವ ಸುಕರ್ಣಯೋಃ ॥ ಮಧುಸೂದನಃ ಓಂ ॥ ವೃತ್ರಂ ವೃತ್ತತರಂ ವ್ಯಂ ಸಮಿಂದ್ರೋ ವಜ್ರೇಣ ಮಹತಾ ಧನೇನ ಸ್ಕಂಧಾಂಸೀವ ಕುಲಶೇನಾ ವಿವೃತ್ಣಾಹಿಃ ಶಯತ ಉಪಹೃತ್ ॥ಓಂ॥ ಮಧುವಧಾಪಾತ ರಮಣೀಯಂ ಮಂ ಜ್ಞಾನಂ ಸುಖಂ ವಾ ಧುನೋತಿ ಇತಿ ವಾ ಮಧೂನಿ ಅಜ್ಞಾನಾದೀನಿ ವೃತ್ರಾದೀನಿವಾ ಸೂದಯತಿ ಇತಿ ಮಧುಸೂದನಃ ॥ ||೧೮||

ಕನ್ನಡಾರ್ಥ :–

"ಪದ್ಮನಾಭ" ಎಂಬುದು ಶ್ರೀಮದ್ವಿಷ್ಣುನಾಮವು. ಇದರ ವಿವರಣೆ ಬೃಹತೀಮಂತ್ರ ದಲ್ಲಿ ಉಕ್ತವಾಗಿದೆ. ಪದ್ಮದಲ್ಲಿ ವಾಸಮಾಡಿಕೊಂಡಿರುವವನೇ "ಪದ್ಮನಃ". ಅವನೇ ಚತುರ್ಮುಖ ಬ್ರಹ್ಮನು. ಆತನ ಸ್ತೋತ್ರಗಳಿಗೆ ವಿಷಯನಾಗಿರುವವನು ಮತ್ತು ಅವನಿಗೆ ಜ್ಞಾನಬಲಪ್ರದನಾದ್ದರಿಂದ

"ಪದ್ಮನಾಭ" ವಾಚ್ಯನು. ಕೈಗಳಲ್ಲಿ ಪದ್ಮನಾಭ, ಮುಖದಲ್ಲಿ ಹೃಶಕೇಷೀ, ನಾಸಿಕೆಯಲ್ಲಿ ಶ್ರೀಧರ, ಜಿಹ್ವೆಯಲ್ಲಿ ವಾಮನ, ತ್ವಚದಲ್ಲಿ ತ್ರಿವಿಕ್ರಮ, ಕಣ್ಣುಗಳಲ್ಲಿ ಮಧುಸೂದನನು ಮತ್ತು ಕಿವಿಗಳಲ್ಲಿ ವಿಷ್ಣು-ಈ ಪ್ರಕಾರ ಭಗವದ್ರೂಪಗಳು ದೇಹಗತ ಅವಯವೇಂದ್ರಿಗಳಲ್ಲಿ ವಿದ್ಯಮಾನವಾಗಿವೆ. "ಮಧುಸೂದನ" ಎಂಬ ಪದದ ಶಬ್ದಾರ್ಥವು ಬೃಹತೀಮಂತ್ರ ವಿವರಿಸಲ್ಪಟ್ಟಿದೆ. ವೈಷಯಿಕ ಜ್ಞಾನವು (ವಿಷಯಸಂಬಂಧವಾದ ಇಂದ್ರಿಯ ಜ್ಞಾನವು) ಮಧುವಿನಂತೆ (ಹಿತಕರವಾಗಿ) ಮೇಲೆ ರಮಣೀಯತರವಾಗಿ ಕಾಣಿಸುವುದು. ಆದರೆ ಕ್ಲೇಶಕಾರಕ. ಅದನ್ನು ಪರಿಹರಿಸಿ, ನಿತ್ಯಾನಂದರೂಪವಾದ ಮೋಕ್ಷಸುಖವನ್ನು ಕೊಡುವುದರಿಂದ "ಮಧುಸೂದನ" ಎಂಬರ್ಥ. ಅಥವಾ ಮಧು=ಅಜ್ಞಾನ ರೋಗ ಭಯಾದಿ ವಿರೋಧಿಗಳನ್ನು (ಶತ್ರುಗಳು) ಸೂದನ=ನಾಶಮಾಡುವವನು. ಆದ್ದರಿಂದ "ಮಧುಸೂದನ" ನಾಮಕನು. ॥೧೮॥

## (ಇ) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ :—

ಬ್ರಹ್ಮಕಾಂಡೋಕ್ತ ಪಾದಾದ್ಯವಯವ ನಿಯಾಮಕ ಚತುರ್ವಿಂಶತಿ ತತ್ತ್ವನಿಯಾಮಕ ಮೊದಲಾದ ರೂಪೋಪಾಸನಾ ಪ್ರಕಾರ ವಿವರಿಸುತ್ತಾರೆ. ಪದ್ಮನಾಭರೂಪ ಹಸ್ತದಲ್ಲಿ, ಬಾಯಿಯಲ್ಲಿ ಹೃಷೀಕೇಶರೂಪ. ಮೂಗಿನಲ್ಲಿ ಶ್ರೀಧರರೂಪ. ನಾಲಿಗೆಯಲ್ಲಿ ವಾಮನರೂಪ, ಮೃದುವಾದ ಚರ್ಮದಲ್ಲಿ ತ್ರಿವಿಕ್ರಮ. ಕಣ್ಣಿನಲ್ಲಿ ಮಧುಸೂದನ. ಶ್ರವಣಶಬ್ದವಾಚ್ಯರೂಪ ವಿಷ್ಣುವು ಇರುವರೆಂದು ಚಿಂತಿಸಬೇಕೆಂದು ನಿರೂಪಿಸುತ್ತಾರೆ. ॥೧೮॥

# ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತ ಪದ್ಯದಿಂದ ಪ್ರಾರಂಭಿಸಿ, ಮುಂದಿನ ೨೨ನೆಯ ಪದ್ಯದವರೆಗೂ ಈ ಸ್ಥೂಲದೇಹಗತ ಚತುರ್ವಿಂಶತಿ ತತ್ತ್ವಗಳನ್ನು ನಿಯಮನ ಮಾಡುವ ಭಗವದ್ರೂಪಗಳ ವಿವರಣೆಯನ್ನು ತಿಳಿಸುತ್ತಾರೆ ತತ್ತ್ವಜ್ಞಾನಿಗಳಾದ ಶ್ರೀ ದಾಸರಾಯರು.

(೧) ಹಸ್ತದ್ವಯಗಳು ಕರ್ಮೇಂದ್ರಿಯಗಳು. ದಾನ, ಸ್ವೀಕಾರ ಇತ್ಯಾದಿ ಕ್ರಿಯಾವಿಶೇಷಗಳನ್ನು ನಮ್ಮ ಎರಡು ಕೈಗಳಿಂದ ಮಾಡುತ್ತೇವೆ. ಈ ತತ್ತ್ವಕ್ಕೆ **ಅಭಿಮಾನಿಯು ದಕ್ಷಪ್ರಜಾಪತಿಯು.** ಹಸ್ತಾಭಿಮಾನಿಯಾದ ದಕ್ಷನಲ್ಲಿ **ಯಜ್ಞಾ** ನಾಮಕಳ ಪತಿಯಾದ **ಪದ್ಮ**ನಾಭರೂಪಿ ಶ್ರೀಪರಮಾತ್ಮನು ಇದ್ದು, ಹಸ್ತದ ವ್ಯಾಪಾರಗಳನ್ನು ಮಾಡಿಮಾಡಿಸುತ್ತಿರುವನು. "ಪದ್ಮನಾಭ" ಎಂಬ ಪದದ ಶಬ್ದಾರ್ಥವು ಬೃಹತೀಮಂತ್ರದಲ್ಲಿ ವರ್ಣಿತವಾಗಿದೆ. ಪದ್ಮ (ಕಮಲ) ದಲ್ಲಿ ವಾಸಮಾಡುವವನು ಅಥವಾ ಪದ್ಮವನ್ನು ಆಶ್ರಯ ಮಾಡಿಕೊಂಡಿರುವವನು ಚತುರ್ಮುಖ ಬ್ರಹ್ಮದೇವರು. ಹಿರಣ್ಯಗರ್ಭ ನಾಮಕರಾದ ಬ್ರಹ್ಮದೇವರ ಸ್ತೋತ್ರಗಳಿಗೆ ವಿಷಯನಾಗಿರುವುದರಿಂದ ಶ್ರೀ ಪರಮಾತ್ಮನಿಗೆ **"ಪದ್ಮನಾಭ"** ನೆಂದು ಹೆಸರು.

(೨) ವದನ (ಮುಖ) ಕ್ಕೆ ತತ್ವಾಭಿಮಾನಿಯು ಅಗ್ನಿ. ಅಗ್ನ್ಯಂತರ್ಗತನಾಗಿ **ಬುದ್ಧಿ** ನಾಮಕಳಾದ ಲಕ್ಷ್ಮೀದೇವಿಯರ ಪತಿ **ಹೃಷೀಕೇಶ**ನಾಮಕ ಶ್ರೀ ಪರಮಾತ್ಮನಿದ್ದು, ಸಂಭಾಷಣೆ ಇತ್ಯಾದಿ ವಾಗ್ರೂಪ ವ್ಯಾಪಾರಗಳನ್ನು ಮಾಡಿ, ಮಾಡಿಸುತ್ತಿರುವನು. "ಹೃಷೀಕ"- ಎಂದರೆ "ಇಂದ್ರಿಯಗಳು" ಎಂದರ್ಥ. ಈ ಇಂದ್ರಿಯಗಳಿಗೆ ನಿಯಾಮಕನಾಗಿರುವುದರಿಂದ **ಹೃಷಿಕೇಶ** ನಾಮಕನು. (ಹೃಷೀಕ+ಈಶ) ನಮ್ಮ ದೇಹಗತ ಇಂದ್ರಿಯಾಭಿಮಾನಿ ಭಗವದ್ರೂಪವೇ ಹೃಷಿಕೇಶರೂಪವು.

(೩) **ನಾಸಿಕದ್ವಾರ**ಗಳಲ್ಲಿ ಅಂದರೆ ಮೂಗಿನ ಹೊಳ್ಳೆಗಳಲ್ಲಿ **ನಾಸತ್ಯ ಮತ್ತು ಅದ್ರ** ಎಂಬ ಅಶ್ವಿನೀದೇವತೆಗಳು (ಯಮಳರು) ಅಭಿಮಾನಿಗಳಾಗಿದ್ದಾರೆ. ಈ ತತ್ವೇಶರಲ್ಲಿ ಅಂತರ್ಗತ ಭಗವದ್ರೂಪವೇ **ಪ್ರಕೃತಿ** ನಾಮಕಳಾದ ಶ್ರೀರಮಾರಮಣನಾದ **ಶ್ರೀಧರನು.** ಶ್ರೀಧರನಾಮಕ ಪರಮಾತ್ಮನು ನಾಸಿಕದ್ವಾರಗಳಲ್ಲಿದ್ದು, ಭೂತತತ್ತ್ವದ ತನ್ಮಾತ್ರಾ ಗುಣವಾದ ಗಂಧದ ಸ್ವೀಕಾರ, ತಜ್ಜನ್ಯವಾದ ಅನುಭವಸಿದ್ಧವಾದ ಜ್ಞಾನವನ್ನು ಜೀವರಿಗೆ ಉಂಟುಮಾಡುವನು.

(೪) **ನಾಲಿಗೆಯಲ್ಲಿ** ವರುಣನು ತತ್ವಾಭಿಮಾನಿಯಾಗಿದ್ದಾನೆ.

ನಾಲಿಗೆಯು ರಸನೇಂದ್ರಿಯವು. ವರುಣಾಂತರ್ಗತನಾಗಿ **ವೃಷಾಕಪಿ** ನಾಮಕ ಳಾದ ಇಂದಿರಾಪತಿಯಾದ **ವಾಮನದೇವರು** ನಿಯಾಮಕನಾಗಿದ್ದು, ಅಪ್ ತತ್ತ್ವದ ತನ್ಮಾತ್ರ ಗುಣವಾದ ರಸ-ಸ್ವೀಕಾರ. ರುಚಿಯ ಅನುಭವ ಇತ್ಯಾದಿ ವ್ಯಾಪಾರವಿಶೇಷಗಳನ್ನು ರಸನೇಂದ್ರಿಯ ದ್ವಾರಾ ಮಾಡಿ ಮಾಡಿಸುತ್ತಿರುವನು.

(೫) ತ್ವಗಿಂದ್ರಿಯವೇ ಚರ್ಮವು. ಇದು ಅತ್ಯಂತ ಸೂಕ್ಷ್ಮವಾಗಿದ್ದು ಮೃದುತ್ವವನ್ನು ಹೊಂದಿದೆ. ನಖ ಶಿಖಾಂತ ವ್ಯಾಪ್ತವಾಗಿರುವ ತ್ವಗಿಂದ್ರಿಯವು ಪದಾರ್ಥಗಳ ಮೃದುತ್ವ, ಕಾಠಿಣ್ಯ, ಶೀತ ಮತ್ತು ಉಷ್ಣಗಳ ಅನುಭವ ವನ್ನುಂಟುಮಾಡುವ ಜ್ಞಾನೇಂದ್ರಿಯವು. ಇಂತಹ ಮೃದುಳ ತ್ವಗಿಂದ್ರಿಯ ಪ್ರದೇಶದಲ್ಲಿ ತ್ವಗಿಂದ್ರಿಯಾಭಿಯಾದ **ಅಹಂಕಾರಿಕ ಪ್ರಾಣ** ನಲ್ಲಿ ವಿದ್ಯಮಾನ ವಾಗಿರುವ ಭಗವದ್ರೂಪವು **ತ್ರಿವಿಕ್ರಮನ ರಮಾ** ನಾಮಕಳಾದ ಲಕ್ಷ್ಮೀಪತಿ ತ್ರಿವಿಕ್ರಮರೂಪಿ ಶ್ರೀ ಪರಮಾತ್ಮನು ತ್ವಗಿಂದ್ರಿಯರಲ್ಲದ್ದು ವಾಯುತತ್ತ್ವದ ತನ್ಮಾತ್ರಾಗುಣವಾದ ಸ್ಪರ್ಶಜ್ಞಾನವನ್ನುಂಟುಮಾಡುವನು.

(೬) **ನೇತ್ರದ್ವಯಗಳಲ್ಲಿ** ನಿಯಾಮಕ ಭಗವದ್ರೂಪವು **ಮಧುಸೂದನನು**. ಮಧು ಎಂಬ ದೈತ್ಯನನ್ನು ಸಂಹರಿಸಿದ್ದರಿಂದ,ಮಧುಸೂದನ ನಾಮಕ ಪರಮಾತ್ಮನು ನೇತ್ರಾಭಿಮಾನಿ **ಸೂರ್ಯ**ನಲ್ಲಿ ಅಂತರ್ಯಾಮಿ ರೂಪದಿಂದ ಇರುವನು. **ಕಮಲಾ** ನಾಮಕಳಾದ ಲಕುಮೀರಮಣನಾದ ಮಧುಸೂದನನು ತೇಜೋ ತತ್ತ್ವದ ತನ್ಮಾತ್ರಾ ಗುಣವಾದ ರೂಪಕ್ಕೆ ಪ್ರವರ್ತಕನಾಗಿದ್ದು, ವಸ್ತುಗಳ ಆಕಾರ, ರೂಪ, ಅವಲೋಕನಾದಿ ವ್ಯಾಪಾರವಿಶೇಷಗಳನ್ನು ನೇತ್ರ ದ್ವಯಗಳ ದ್ವಾರಾ ಮಾಡಿ ಮಾಡುತ್ತಿರುವನು. "ಮಧುಸೂದನ" ಶಬ್ದಾರ್ಥವು **ಬೃಹತೀಮಂತ್ರ** ದಲ್ಲಿ ವರ್ಣಿತವಾಗಿದೆ. ನಮಗೆ ವಿಷಯ ಸನ್ನಿಕರ್ಷಣದಿಂದ ಉಂಟಾಗುವ ವೈಷಯಿಕ ಜ್ಞಾನವು ಮಧುವಿನಂತೆ ಹಿತಕರವಾಗಿ ತೋರುವುದು. ಆದರೆ ಇದು ಕೇವಲ ಕ್ಷಣಿಕ ಹಾಗೂ ಕ್ಲೇಶಕಾರಕ. ಇದನ್ನು ಪರಿಹರಿಸಿ, ನಿತ್ಯಾ ನಂದ ರೂಪವಾದ "ಮಧು" ಅಂದರೆ ಮೋಕ್ಷ ಸುಖವನ್ನು ಕೊಡುವುದರಿಂದ ಶ್ರೀ ಪರಮಾತ್ಮನಿಗೆ "ಮಧುಸೂದನ" ನೆಂದು ಹೆಸರು.

(೭) ವಿಷ್ಣುನಾಮಕ ಶ್ರೀ ಪರಮಾತ್ಮನು **ಕರ್ಣದ್ವಯ ಗಳಲ್ಲಿ** ಇದ್ದಾನೆ. ಶ್ರವಣಾಭಿಮಾನಿಯಾದ **ಚಂದ್ರ** (ದಿಗ್ದೇವತೆಗಳು) ನಲ್ಲಿ ಅಂತರ್ಗತನಾಗಿದ್ದು ಆಕಾಶತತ್ತ್ವದ ತನ್ಮಾತ್ರಾಗುಣವಾದ ಶಬ್ದಜ್ಞಾನವನ್ನು ಉಂಟು ಮಾಡುವನು. ಪದ್ಮಾನಾಮಕಳಾದ ಇಂದಿರಾಪತಿ ಶ್ರೀ ವಿಷ್ಣುವು **"ಶ್ರವಣ"** ಶಬ್ದವಾಚ್ಯನಾಗಿ ಅದೇ ಹೆಸರಿನಿಂದ ಶ್ರವಣನಾಮಕನಾಗಿ ಕರ್ಣದ್ವಯಗಳ ದ್ವಾರಾ, ಶ್ರವಣಕಾರ್ಯಗಳನ್ನು ಮಾಡಿ ಮಾಡಿಸುತ್ತಿರುವನು.

ಪೂರ್ವೋಕ್ತ ಭಗವದ್ರೂಪಗಳ ವಿವರಗಳನ್ನು ಈ ಕೆಳಗಿನ ಪಟ್ಟಿಯಿಂದ ಸುಲಭವಾಗಿ ತಿಳಿಯಬಹುದು.

| ಕ್ರಮ ಸಂಖ್ಯೆ | ಇಂದ್ರಿಯಗಳು | ತತ್ವಾಭಿಮಾನಿ | ರಮಾರೂಪ | ಭಗವದ್ರೂಪ | ತತ್ತ್ವಕಾರ್ಯ |
|---|---|---|---|---|---|
| ೧ | ಹಸ್ತ | ದಕ್ಷ ಪ್ರಜಾಪತಿ | ಯಜ್ಞಾ | ಪದ್ಮನಾಭ | ದಾನ–ಸ್ವೀಕಾರ ಇತ್ಯಾದಿ ಹಸ್ತಕಾರ್ಯ |
| ೨ | ವದನ | ಅಗ್ನಿ | ಬುದ್ಧಿ | ಹೃಷಿಕೇಶ | ವಾಗ್ರೂಪವ್ಯಾಪಾರ ವಿಶೇಷಗಳು |
| ೩ | ನಾಸಿಕ | ಅಶ್ವಿನೀ ದೇವತೆಗಳು | ಪ್ರಕೃತಿ | ಶ್ರೀಧರ | ಘ್ರಾಣೇಂದ್ರಿಯ ವ್ಯಾಪಾರ (ಗಂಧ) |
| ೪ | ನಾಲಿಗೆ | ವರುಣ | ವೃಷಾಕಪಿ | ವಾಮನ | ರಸಾಸ್ವಾದನ-ರಸನೇಂದ್ರಿಯ |
| ೫ | ಚರ್ಮ | ಅಹಂ ಕಾರಿಕ ಪ್ರಾಣ | ರಮಾ | ತ್ರಿವಿಕ್ರಮ | ಸ್ಪರ್ಶಜ್ಞಾನ |
| ೬ | ನೇತ್ರ | ಸೂರ್ಯ | ಕಮಲಾ | ಮಧುಸೂದನ | ಅವಲೋಕನಾದಿ ಕ್ರಿಯೆಗಳು |
| ೭ | ಕಿವಿ | ಚಂದ್ರ | ಪದ್ಮಾ | ವಿಷ್ಣು | ಶಬ್ದಗ್ರಹಣಕಾರ್ಯ |

# ಪದ್ಯ (೧೯)

ಮೂಲ :—

ಮನದೊಳಿಹ ಗೋವಿಂದ ಮಾಧವ ।
ಧನಪಸಖತತ್ತ್ವದಲಿ ನಾರಾ ।
ಯಣ ಮಹತ್ತತ್ತ್ವದಲಿ ಅವ್ಯಕ್ತದೊಳು ಕೇಶವನು ॥
ಇನಿತು ರೂಪವ ದೇಹದೊಳು ಚಿಂ ।
ತನೆಯ ಗೈವ ಮಹಾತ್ಮರಿಳೆಯೊಳು ।
ಮನುಜರವರಲ್ಲಮರರೇ ಸರಿ ಹರಿಕೃಪಾಬಲದಿ ॥೧೯॥

ಅವತರಣಿಕೆ :-

ಪ್ರಸಕ್ತ ಪದ್ಯದಲ್ಲಿ ಸೂಕ್ಷ್ಮತತ್ತ್ವಗಳಾದ ಅವ್ಯಕ್ತ, ಮಹತ್ತತ್ತ್ವ, ಅಹಂಕಾರ ಮತ್ತು ಮನಸ್ತತ್ತ್ವಗಳಲ್ಲಿ ನಿಯಾಮಕವಾದ ಭಗವದ್ರೂಪಗಳ ವಿಭಾಗವನ್ನು ತಿಳಿಸುತ್ತಾರೆ. "**ಮನದೊಳಿಹ**"–ಎಂಬ ಪ್ರಸಕ್ತ ಸಂಧಿಗತ ೧೯ ನೆಯ ಈ ಪದ್ಯದಿಂದ.

ಗೋವಿಂದನಾಮಕ ಶ್ರೀ ಪರಮಾತ್ಮನು ಮನಸ್ತತ್ತ್ವದಲ್ಲೂ, ಮಾಧವನು ಅಹಂಕಾರ ತತ್ತ್ವದಲ್ಲೂ (ಧನಪಸಖತತ್ತ್ವ) ನಾರಾಯಣರೂಪಿ ಪರಮಾತ್ಮನು ಮಹತ್ತತ್ತ್ವದಲ್ಲೂ ಮತ್ತು ಕೇಶವ ನಾಮಕನು ಅವ್ಯಕ್ತತತ್ತ್ವದಲ್ಲೂ ಇದ್ದು, ಆಯಾ ತತ್ತ್ವಪತಿ ದೇವತೆಗಳ ದ್ವಾರಾ ಆಯಾಯಾ ತತ್ತ್ವಕಾರ್ಯಗಳನ್ನು ಮಾಡಿ ಮಾಡಿಸುತ್ತಿರುವನು. ಈ ಪ್ರಕಾರ ಈ ಸ್ಥೂಲದೇಹದಲ್ಲಿ ವಿದ್ಯಮಾನವಾಗಿರುವ ತತ್ತ್ವನಿಯಾಮಕ ಭಗವದ್ರೂಪಗಳನ್ನು ಅನವರತ ಧ್ಯಾನೋಪಾಸನೆಯನ್ನು ಮಾಡುತ್ತಿರುವವರೇ ಈ ಜಗತ್ತಿನಲ್ಲಿ ಮಹಾತ್ಮರೆಂದೆನಿಸುವರು, ಇಂತಹ ಮಂಗಳಾತ್ಮರನ್ನು ದೇವತಾವರ್ಗಕ್ಕೆ ಸೇರಿದವರೆಂದು ಭಾವಿಸಬೇಕೇ ಹೊರತು, ಅವರು ಕೇವಲ ಮಾನವರಲ್ಲವೆಂದು ತಿಳಿಯಬೇಕು. ಶ್ರೀಹರಿಯು ಪರಮಾನುಗ್ರಹಕ್ಕೆ ಪಾತ್ರರಾದ ಅಂತಹ ಉಪಾಸಕರು ನರರಲ್ಲ, ದೇವತೆಗಳೇ ಸರಿ ಎಂದು ಪದ್ಯದ ಅಂತರಾರ್ಥ ॥೧೯॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಈ ಶ್ಲೋಕದಲ್ಲಿ ತತ್ವಾಂತರ್ಗತ ರೂಪಗಳ ಹೇಳುತ್ತಾರೆ. ಮನದಲಿ–ಮನಸ್ತತ್ವದಲ್ಲಿ, ಗೋವಿಂದ–ಗೋವಿಂದನಾಮಕ ಪರಮಾತ್ಮ, ಇಹ–ಇದ್ದಾನೆ, (ಈ ಮನಸ್ತತ್ವಕ್ಕೆ ಗರುಡ, ಶೇಷ, ರುದ್ರ, ಇಂದ್ರ, ಮನ್ಮಥ ಅಭಿಮಾನಿ ದೇವತೆಗಳು), ಧನಪಸಖತತ್ತ್ವದಲಿ–ಧನಪ–ಧನವನ್ನು ಪಾಲನೆ ಮಾಡತಕ್ಕ ಕುಬೇರನಿಗೆ, ಸಖ-ಸ್ನೇಹಿತನಾದ ರುದ್ರದೇವರ, ತತ್ವ ದಲಿ–ಅಹಂಕಾರ ತತ್ವದಲಿ–ಮಾಧವ—ಮಾಧವ ದೇವರು ಇಹ ಇದ್ದಾರೆ. ಮಹತತ್ತ್ವದಲಿ ಬ್ರಹ್ಮದೇವರ ಅಭಿಮಾನ್ಯಮಾನವಾದ ಮಹತ್ತ ತ್ತ್ವದಲ್ಲಿ, ನಾರಾಯಣ–ನಾರಾಯಣದೇವರು, ಇಹ–ಇದ್ದಾರೆ, ಅವ್ಯಕ್ತ ದಲಿ–ರಮಾಭಿಮನ್ಯವಾದ ತ್ರಿಗುಣಾತ್ಮಕ ಅವ್ಯಕ್ತತತ್ವದಲಿ, ಕೇಶವ–ಕೇಶವ ನಾಮಕ ಪರಮಾತ್ಮ ಇದ್ದಾನೆ, ಇನಿತು-ಪೂರ್ವೋಕ್ತ ಪ್ರಕಾರ, ರೂಪವ–ಭಗವದ್ರೂಪವ, ದೇಹದೊಳು–ತನ್ನ ದೇಹದಲ್ಲೇನು, ಅನ್ಯರ ದೇಹದಲ್ಲೇನು ಯಾವತ್ತರ ದೇಹಗಳೊಳು, ಚಿಂತನೆಯಗೈವ–ವ್ಯಾಪಾರಗಳನ್ನು ಅನುಸಂಧಾನ ಮಾಡತಕ್ಕವರೇ, ಅಹಂ ಮಮತಾದಿಗಳು ಬಿಡತಕ್ಕವರು (ಇವರೇ), ಮಹಾತ್ಮರು–ಕೇವಲ ಜ್ಞಾನಿಗಳು, ಇವರುಗಳು, ಇಳೆಯೊಳು–ಭೂಮಿಯಲ್ಲಿ ಮಾನುಷ ಶರೀರದಿಂದ ಸಾಧನೆಗಾಗಿ ಅವತಾರಮಾಡಿದ, ಅಮರರೇ ಸರಿ–ದೇವತೆಗಳೆಂಬೋದೇ ನಿಶ್ಚಯ, ಮನುಜರವರಲ್ಲ–ಇವರು ಮನುಷ್ಯರಲ್ಲ, ಹರಿಕೃಪಾಬಲದಿ–ಶ್ರೀ ಪರಮಾತ್ಮನ ಅಂತಃಕರಣ ಬಲದಿಂದ ತಮ್ಮ ಸಾಧನ ಪೂರ್ತಿ ಆಗೋಣವೇ ವರ್ತಮಾನದೇಹವನ್ನು ಬಿಟ್ಟು, ದೇವತಾ ದೇಹದಿಂದ ದೇವಲೋಕದಲ್ಲಿ ಇರುತ್ತಾರೆ. ಮನುಷ್ಯರು ದೇವತ್ವವನ್ನು ಐದತ್ತಾರೆ ಎಂಬುದು ಇಂಥಾ ಮಾನುಷರೆಂದು ತಾತ್ಪರ್ಯ. ||೧೯||

### (೨) "ಭಾವಪ್ರಕಾಶಿಕೆ" ವ್ಯಾಖ್ಯಾನ :–

ಮನಸ್ತತ್ವದಲ್ಲಿ-ಗೋವಿಂದನನ್ನು, ಅಹಂಕಾರ ತತ್ತ್ವದಲ್ಲಿ ಮಾಧವನನ್ನು, ಮಹತ್ತತ್ವದಲ್ಲಿ ನಾರಾಯಣನನ್ನು, ಅವ್ಯಕ್ತ ತತ್ತ್ವದಲ್ಲಿ ಕೇಶವನನ್ನು

ಚಿಂತಿಸಬೇಕು. ಈ ಪ್ರಕಾರ ದೇಹದಲ್ಲಿ ರೂಪವನ್ನು ಚಿಂತಿಸುವವರು ಸಾಮಾನ್ಯ ಮನುಷ್ಯರಲ್ಲ. ಇವರನ್ನು ಭಗವತ್ಕೃಪಾಬಲ ಉಳ್ಳ ದೇವಾಂಶ ರೆಂದೇ ಹೇಳಬೇಕು. ||೧೯||

## (೩) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ):-

"ಮನಃ"–ಇತಿ ॥ ಮಾಧವೋ ಹಿ ಮನಸ್ತತ್ವೇ ಗೋವಿಂದೋ ಮಾನಸೇ ಹರಿಃ ॥ ನಾರಾಯಣಃ ಮಹತ್ತತ್ವೇ ಅವ್ಯಕ್ತೇ ಕೇಶವೋ ಹರಿಃ ॥ ಇತಿ ಸಂಧ್ಯಾ ಪದ್ಧತೌ ॥ ಕೇಶವಾದಿ ರೂಪೇಣ ಲಲಾಟಾದಿ ಸ್ಥಿತೇಃ ಏಕ ವಿಂಶಃ ಇತ್ಯುಚ್ಯತೇ ॥ ಇತಿ ಛಾಂದೋಗ್ಯ ಭಾಷ್ಯೇ ಚ ॥ ಕೇಶವಃ ॥ಓಂ॥ ಯದಿನ್ವಿಂದ್ರಂ ವೃಷಣಂ ಸಚಾಸುತೇ ಸಖಾಯಂ ತೃಣವಾಮಹೇ ॥ ಉಗ್ರಂ ಯುಯುಜ್ಮ ಪ್ರತನಾಸು ಸಾಸಹಿಮ್ ॥ಓಂ॥ ಕಂ=ಸುಖಂ, ಈ= ಲಕ್ಷ್ಮೀ:, ಶಂ=ಶ್ರೇಯ:, ತಾನಿ ವಹತಿ ಗಮಯತಿ ಇತಿ ಕೇಶವಃ ||೧೯||

**ಕನ್ನಡಾರ್ಥ :**

"ಮನಸ್ತತ್ವದಲ್ಲಿ ಗೋವಿಂದನು ; ಅಹಂಕಾರ (ಮಾನಸ) ತತ್ತ್ವದಲ್ಲಿ ಮಾಧವನು ; ಮಹತ್ತತ್ವದಲ್ಲಿ ನಾರಾಯಣನು ; ಅವ್ಯಕ್ತ ತತ್ತ್ವದಲ್ಲಿ ಕೇಶವನು"–ಎಂದು **ಸಂಧ್ಯಾ ಪದ್ಧತಿ** ಎಂಬ ಗ್ರಂಥದ ವಚನಗಳೇ ಆಧಾರ ವಾಗಿವೆ.

"ಕೇಶವ ಮುಂತಾದ ರೂಪಗಳಿಂದ ಲಲಾಟ ಮುಂತಾದ ಸ್ಥಳಗಳಲ್ಲಿ ಇರುವನು. ಇದರಿಂದ ೨೧ ರೂಪಗಳು (ಏಕವಿಂಶತಿ) ಉಕ್ತವಾಗಿವೆ." –ಈ ವಿಷಯವನ್ನು ಶ್ರೀಮದಾಚಾರ್ಯರು **ಛಾಂದೋಗ್ಯಭಾಷ್ಯ** ದಲ್ಲಿ ನಿರೂಪಿಸು ತ್ತಾರೆ. "ಕೇಶವ" ಎಂಬ ಶಬ್ದಾರ್ಥವು **ಬೃಹತೀಮಂತ್ರ**ದಲ್ಲಿ "ಯದಿ ನ್ವಿಂದ್ರ" ಎಂದು ವಿವರಿಸಲ್ಪಟ್ಟಿದೆ. ಕಂ=ಸುಖ, ಈ=ಲಕ್ಷ್ಮೀ (ಸಂಪತ್ತು) **ಶಂ**=**ಶ್ರೇಯಸ್ಸು** ಇವುಗಳನ್ನು ಕೊಡುವವನಾದ್ದರಿಂದ **ಕೇಶವ** ನಾಮಕನೆಂದು ಬೃಹತೀಮಂತ್ರದ ಅರ್ಥ. ||೧೯||

## (೪) "ಗುರುಹೃದಯಪ್ರಕಾಶಿಕೆ" ವ್ಯಾಖ್ಯಾನ :-

ಮನಸ್ಸಿನಲ್ಲಿ ಗೋವಿಂದ. ಧನಪನೆಂಬ ಕುಬೇರನಿಗೆ ಸಖನಾದ ರುದ್ರ ದೇವರ ತತ್ತ್ವವಾದ ಅಹಂಕಾರ ತತ್ತ್ವದಲ್ಲಿ ಮಾಧವರೂಪ. ಮಹತ್ತತ್ತ್ವ ದಲ್ಲಿ ನಾರಾಯಣರೂಪ. ಅವ್ಯಕ್ತವೆಂಬ ಜಡಪ್ರಕೃತಿಯಲ್ಲಿ ಕೇಶವ ರೂಪ. ಈ ರೂಪಗಳನ್ನೆಲ್ಲಾ ದೇಹದಲ್ಲಿ ಚಿಂತನೆಯನ್ನು ಮಾಡುವ ಮಹಾತ್ಮರು ಭೂಮಿಯಲ್ಲಿ ಮನುಷ್ಯರಾಗಿದ್ದಾಗ್ಯೂ, ಹರಿಕೃಪಾಬಲವಿರುವುದರಿಂದ, ಅವರನ್ನು ದೇವಾಧಿಕಾರಿಗಳೆಂದು ತಿಳಿಯಬೇಕೆಂದು ನಿರೂಪಿಸುತ್ತಾರೆ. ॥೧೯॥

# ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತ ಪದ್ಯದಲ್ಲಿ ಜ್ಞಾನಿಶ್ರೇಷ್ಠರಾದ ದಾಸರಾಯರು ಸೂಕ್ಷ್ಮತತ್ತ್ವ ಗಳಲ್ಲಿ ವಿದ್ಯಮಾನವಾದ ಭಗವದ್ರೂಪಗಳನ್ನು ಮತ್ತು ತತ್ತ್ವಕಾರ್ಯಗಳ ವಿಚಾ ವನ್ನು ತಿಳಿಸುತ್ತಾರೆ.

ಮೂಲ ಪ್ರಕೃತಿಯು ಜಗತ್ಸೃಷ್ಟಿಗೆ ಉಪಾದಾನಕಾರಣ ಸಾಮಗ್ರಿಯ
ಇದಕ್ಕೆ ಅಭಿಮಾನಿಗಳು **ಶ್ರೀ ಲಕ್ಷ್ಮೀದೇವಿ**. ಮೂಲ ಪ್ರಕೃತಿಯು ತ್ರಿಗುಣ
ತ್ಮಕವಾದದ್ದು. (೧) ಸತ್ವ, (೨) ರಜ ಮತ್ತು (೩) ತಮ ಎಂಬ
ಗುಣತ್ರಯಗಳಿಗೆ ಶ್ರೀ ರಮಾದೇವಿಯರು ಕ್ರಮವಾಗಿ ಶ್ರೀ, ಭೂ ಮತ
ದುರ್ಗಾ ರೂಪಗಳಿಂದ ಅಭಿಮಾನಿಗಳಾಗಿದ್ದಾರೆ. ರಮಾಭಿಮನ್ಯವಾದ
ತ್ರಿಗುಣಗಳಿಂದ ಜನ್ಯವಾಗಿರುವುದೇ **ಅವ್ಯಕ್ತ ತತ್ತ್ವವು**. ಇದು ಸೂಕ್
ತಮವಾದದ್ದು. ಇದರಿಂದ ಕ್ರಮವಾಗಿ ಮಹತ್ತತ್ವ, ಅಹಂಕಾರತತ್
ಮತ್ತು ಮನಸ್ತತ್ತ್ವಗಳು ಜನ್ಯವಾಗಿವೆ. ಇಂತು (೧) ಅವ್ಯಕ್ತತತ್
(೨) ಮಹತತ್ತ್ವ (೩) ಅಹಂಕಾರತತ್ತ್ವ ಮತ್ತು (೪) ಮನಸ್ತ
ಗಳೆಂಬ ಈ ನಾಲ್ಕು ತತ್ತ್ವಗಳೂ **ಸೂಕ್ಷ್ಮತತ್ತ್ವಗಳು**. ಇವುಗಳಿಂ
ಕ್ರಮವಾಗಿ (೧) ಜ್ಞಾನೇಂದ್ರಿಯಗಳು=೫, ಕರ್ಮೇಂದ್ರಿಯಗಳು=
(೩) ಪಂಚಭೂತಗಳು=೫ ಮತ್ತು (೪) ತನ್ಮಾತ್ರಾಗುಣಗಳು=
ಅಂತು ಮೂಲ ಪ್ರಕೃತಿಯಿಂದ ಪ್ರಾರಂಭಿಸಿ, **ಗುಣವೈಷಮ್ಯದಿಂದ** ಈ ರಿ

೨೪ ತತ್ತ್ವಗಳು (ಚತುರ್ವಿಂಶತಿ ತತ್ತ್ವಗಳು) ಸೃಷ್ಟಿಯಾಗಿವೆ. ಇದರಿಂದ ಚತುರ್ವಿಶಂತಿ ತತ್ತ್ವಾತ್ಮಕವಾದ ಬ್ರಹ್ಮಾಂಡದ ಸೃಷ್ಟಿ.

(೧) **ಅವ್ಯಕ್ತ ತತ್ತ್ವದಲ್ಲಿ** ಅಂತರ್ಗತವಾಗಿ ನಿಯಾಮಕವಾಗಿರುವ ಭಗವದ್ರೂಪ **ಕೇಶವ.** ಅವ್ಯಕ್ತ ತತ್ತ್ವಾಭಿಮಾನಿಯಾದ ಶ್ರೀ ಲಕ್ಷ್ಮೀದೇವಿಯರಲ್ಲಿ ಬಿಂಬನಾಗಿದ್ದು, ಕೇಶವನಾಮಕ ಶ್ರೀ ಪರಮಾತ್ಮನು ತ್ರಿಗುಣಗಳ ವ್ಯಾಪಾರಗಳನ್ನು ಮಾಡಿ, ಮಾಡಿಸುತ್ತಿರುವನು. "ಕೇಶವ" ಎಂಬ ಪದದ ಶಬ್ದಾರ್ಥವು **ಬೃಹತೀ ಮಂತ್ರದಲ್ಲಿ** ಉಕ್ತವಾಗಿದೆ. "ಕಂ" ಎಂದರೆ ಸುಖ ಎಂದರ್ಥ. "ಈ" ಎಂದರೆ ಲಕ್ಷ್ಮಿ, "ಶಂ" ಎಂದರೆ ಶ್ರೇಯಸ್ಸು. ಸುಖ ಮತ್ತು ಶ್ರೇಯಸ್ಸುಗಳನ್ನು ಶ್ರೀ ಲಕ್ಷ್ಮೀದ್ವಾರಾ ಕೊಡುವನಾದ್ದರಿಂದ "ಕೇಶವ" ಶಬ್ದವಾಚ್ಯನು.

**"ಚಿತ್ತದಲ್ಲಿ ಆನಂದಸುಖವನೀವಳು ರಮಾ."**

–**ಶ್ರೀ ಪುರಂದರದಾಸವರ್ಯರ** ಉಗಾಭೋಗದ ವಚನ.

ಅಲ್ಲದೆ ಕ=ಬ್ರಹ್ಮದೇವರು, ಈಶ=ರುದ್ರದೇವರು ಇವರಿಗೆ ವ=(ವರಾಯ ನಮಃ) ಶ್ರೇಷ್ಠನಾದವನು. ಅಂದರೆ ಬ್ರಹ್ಮರುದ್ರಾದಿಗಳಿಗಿಂತ ಸರ್ವೋತ್ತಮನಾದ್ದರಿಂದ "ಕೇಶವ" ನಾಮಕನು,

(೨) **ಮಹತ್ತತ್ತ್ವದಲ್ಲಿ** ಚಿಂತಿಸಬೇಕಾದ ಭಗವದ್ರೂಪ **ನಾರಾಯಣ** ಬ್ರಹ್ಮ, ವಾಯು, ಸರಸ್ವತಿ ಮತ್ತು ಭಾರತೀದೇವಿಯರು ಮಹತ್ತತ್ವಕ್ಕೆ ಅಭಿಮಾನಿಗಳು. ಈ ಅಭಿಮಾನಿಗಳಲ್ಲಿ ನಾರಾಯಣನಾಮಕ ಶ್ರೀ ಪರಮಾತ್ಮನು ನಿಯಾಮಕನಾಗಿದ್ದು, ಆ ತತ್ವಪತಿಗಳದ್ವಾರಾ, ತತ್ತ್ವ ಕಾರ್ಯಗಳನ್ನು ಮಾಡಿ, ಮಾಡಿಸುತ್ತಿರುವನು.

ಅರಾಃ=ದೋಷಗಳು ನ=ಯಾರಲ್ಲಿ ಇಲ್ಲವೋ, ಅಂದರೆ ಕಲ್ಯಾಣಗುಣಗಳೆಂದರ್ಥ. ಅಂತಹ ಗುಣಸಮೂಹಗಳಿಗೆ ಅಯನ=ಆಶ್ರಯದಾತನು (ಆವರ). ಅಂದರೆ. ಸರ್ವದೋಷವಿವರ್ಜಿತನು ಮತ್ತು ಅನಂತ ಕಲ್ಯಾಣ

ಗುಣಗಣಪರಿಪೂರ್ಣನು **ನಾರಾಯಣ** ಶಬ್ದಾರ್ಥವು. ಅಂತಹ ನಾರಾಯಣ ರೂಪಿ ಶ್ರೀ ಪರಮಾತ್ಮನು ಮಹತ್ತತ್ವದಲ್ಲಿ ವಿದ್ಯಮಾನನಾಗಿರುವನು.

(೩) ಮಹತ್ತತ್ವದಿಂದ ಜನ್ಯವಾದದ್ದು **ಅಹಂಕಾರ ತತ್ತ್ವವು.** ಅಹಂಕಾರ, ಮಮಕಾರಗಳು (ನಾನು-ನನ್ನದು ಎಂಬ ಅಭಿಮಾನ). ಪಂಚ ಮನೋವೃತ್ತಿಗಳೂ ಈ ತತ್ತ್ವದಲ್ಲಿವೆ. ಈ ಅಹಂಕಾರ ತತ್ತ್ವವನ್ನು **ಧನ ಪಸಖತತ್ತ್ವ** ಎಂದು ಹೇಳಿದ್ದಾರೆ ದಾಸರಾಯರು. ಅಂದರೆ, ಧನಪ–ಸಂಪತ್ತಿಗೆ ಒಡೆಯನಾದ **ಕುಬೇರ.** ಕುಬೇರನ ಸಖ ಅಂದರೆ ಮಿತ್ರ–ಶ್ರೀಮಹ ರುದ್ರದೇವರು. ಅವರು ಈ ಅಹಂಕಾರ ತತ್ತ್ವಕ್ಕೆ ಅಭಿಮಾನಿಗಳಾಗಿರುವುದರಿಂದ. ಧನಪಸಖತತ್ತ್ವವೆಂದು ಕರೆದಿದ್ದಾರೆ. ಈ ಅಹಂಕಾರ ತತ್ತ್ವದಲ್ಲಿ ನಿಯಾಮಕ ಭಗವದ್ರೂಪವು **ಮಾಧವ.** ಅಹಂಕಾರ ತತ್ತ್ವಕ್ಕೆ ಗರುಡ, ಶೇಷ ಮತ್ತು ರುದ್ರರು ಹಾಗೂ ಅವರ ಪತ್ನಿಯರಾದ ಸೌಪರ್ಣಿ, ವಾರುಣಿ, ಮತ್ತು ಪಾರ್ವತೀ ಇದಕ್ಕೆ ಅಭಿಮಾನಿಗಳು. ಈ ಅಭಿಮಾನಿಗಳ ದ್ವಾರಾ, ಮಾಧವನಾಮಕ ಪರಮಾತ್ಮನು ತತ್ತ್ವಕಾರ್ಯವನ್ನು ಮಾಡಿ ಮಾಡಿಸುತ್ತಿರುವನು. ಮಾ = ರಮಾದೇವಿ. ಧವ = ಪತಿ. ಅಂದರೆ ರಮಾಪತಿಯಾದ ಮಾಧವನು. ಮೂಲಪ್ರಕೃತಿಗೆ ಅಭಿಮಾನಿಗಳಾದ ರಮಾದೇವಿಯರಲ್ಲಿ ರಮಣಮಾಡಿ ಅವರನ್ನು ಉಪಾದಾನಕಾರಣವನ್ನಾಗಿ ಮಾಡಿಕೊಂಡು, ಜಗತ್ಸೃಷ್ಟ್ಯಾದಿ ವ್ಯಾಪಾರಗಳನ್ನು ಮಾಡುವುದರಿಂದ **ಮಾಧವ** ನಾಮಕನು.

(೪) ಸೂಕ್ಷ್ಮವಾದ **ಮನಸ್ತತ್ವದಲ್ಲಿ** ನಿಯಾಮಕ ಭಗವದ್ರೂಪ ಗೋವಿಂದ. ಇಂದ್ರ ಮತ್ತು ಕಾಮರು ಹಾಗೂ ಅವರ ಪತ್ನಿಯರಾದ ಶಚಿ ಮತ್ತು ರತಿದೇವಿಯರು ಈ ತತ್ತ್ವಕ್ಕೆ ಅಭಿಮಾನಿಗಳು. ಇವರ ದ್ವಾರಾ ಗೋವಿಂದನಾಮಕ ಪರಮಾತ್ಮನು ಮನಸ್ಸಿನ ವ್ಯಾಪಾರಗಳನ್ನು ಪ್ರೇರಿಸುವನು ಗೋ–ವೇದಗಳು. ವೇದಪ್ರತಿಪಾದ್ಯನಾದ ಭಗವದ್ರೂಪವೇ **ಗೋವಿಂದನು.**

ಇಂತು ಚತುರ್ವಿಂಶತಿ ತತ್ತ್ವಾತ್ಮಕವಾದ ಪಿಂಡಾಂಡರೂಪವಾದ ಈ ದೇಹದಲ್ಲಿ ಕ್ರಮವಾಗಿ ಕೇಶವ, ನಾರಾಯಣ, ಮಾಧವ ಮತ್ತು ಗೋವಿಂದ ಎಂಬ ಭಗವದ್ರೂಪಗಳನ್ನು ಕ್ರಮವಾಗಿ ಅವ್ಯಕ್ತತತ್ತ್ವ, ಮಹತತ್ತ್ವ, ಅಹಂ

ಕಾಲತತ್ತ್ವ ಮತ್ತು ಮನಸ್ತತ್ತ್ವಗಳೆಂಬ ಸೂಕ್ಷ್ಮವಾದ ತತ್ತ್ವ ಚತುಷ್ಟಯಗಳಲ್ಲಿ ಮತ್ತು ಆಯಾಯಾ ತತ್ತ್ವಾಭಿಮಾನಿ ದೇವತೆಗಳಲ್ಲಿ ಇದ್ದು ತತ್ತ್ವಕಾರ್ಯಗಳನ್ನು ಬಿಂಬಕ್ರಿಯಾದ್ವಾರಮಾಡಿ, ತತ್ತ್ವೇಶರ ಮೂಲಕ ಮಾಡಿಸುತ್ತಿರುವನೆಂದು ಅನವರತವೂ ಧ್ಯಾನೋಪಾಸನೆಯನ್ನು ಮಾಡತಕ್ಕ ಮಹಾತ್ಮರು ಈ ಜಗತ್ತಿನಲ್ಲಿ ದೇವತೆಗಳೇ ಸರಿ. ಅವರು ಕೇವಲ ಮಾನವರಲ್ಲ, ಮನುಷ್ಯ ಜನ್ಮವೆತ್ತಿರುವ ದೇವತೆಗಳು. ಅವರಲ್ಲಿ ಶ್ರೀಹರಿಯ ವಿಭೂತಿರೂಪವಿದ್ದು, ಹರಿಯ ಕೃಪಾಬಲದಿಂದ ಭಗವದ್ವಿಭೂಸತಿಂಪನ್ನರಾದ ದೇವತೆಗಳೆಂದು ತಿಳಿಯಬೇಕೆಂದು ಈ ಪದ್ಯದ ಹೃದ್ಗತ ತಾತ್ಪರ್ಯವು ॥೧೯॥

## ಪದ್ಯ (೨೦)

**ಮೂಲ :**

**ನೆಲದೊಳಿಪ್ಪನು ಕೃಷ್ಣರೂಪದಿ ।**
**ಜಲದೊಳಿಪ್ಪನು ಹರಿಯೆನಿಸಿ ಶಿಖಿ ।**
**ಒಳಗೆ ಇಪ್ಪನು ಪರುಶುರಾಮನುಪೇಂದ್ರನೆಂದೆನಿಸಿ ॥**
**ಎಲರೊಳಿಪ್ಪ ಜನಾರ್ದನನು ಬಾಂ ॥**
**ದಳದೊಳಚ್ಯುತ ಗಂಧ ನರಹರಿ ।**
**ಪೊಳೆವಧೋಕ್ಷಜ ರಸಗಳೊಳು ರಸರೂಪ ತಾನಾಗಿ ॥ ॥೨೦॥**

**ಅವತರಣಿಕೆ :**

ಭೂತ ಪಂಚಕಗಳಲ್ಲಿ ಅಂತರ್ಗತರೂಪದಿಂದ ಇದ್ದು, ನಿಯಮನ ಮಾಡುವ ವಿವರಗಳನ್ನು ತಿಳಿಸುತ್ತಾರೆ **"ನೆಲದೊಳಿಪ್ಪನು"**–ಎಂಬ ಪ್ರಸಕ್ತ ಸಂಧಿಗತ ೨೦ ನೆಯ ಈ ಪದ್ಯದಿಂದ.

ನೆಲದಲ್ಲಿ (ಪೃಥ್ವೀತತ್ತ್ವ) ಕೃಷ್ಣರೂಪದಿಂದಲೂ, ಜಲದಲ್ಲಿ (ಅಪ್ ತತ್ತ್ವ) ಹರಿನಾಮಕನಾಗಿ, ಅಗ್ನಿಯಲಿ (ತೇಜಃತ್ತತ್ತ್ವ) ಅಂತರ್ಗತ ಪರಶುರಾಮರೂಪಿ ಶ್ರೀ ಪರಮಾತ್ಮನು ಉಪೇಂದ್ರನೆಂದೆನಿಸಿ, ಗಾಳಿಯಲ್ಲಿ (ವಾಯು

ತತ್ತ್ವ) ಜನಾರ್ದನ ರೂಪದಿಂದಲೂ, ಬಾಂದಳ, ಎಂದರೆ ಆಕಾಶತತ್ತ್ವದಲ್ಲಿ ಅಚ್ಯುತನಾಮಕನಾಗಿ, ಶ್ರೀ ಪರಮಾತ್ಮನು ಈ ಭೂತಪಂಚಕಗಳಲ್ಲಿ ಇದ್ದು, ಆಯಾಯಾ ತತ್ತ್ವಕಾರ್ಯಗಳನ್ನು ಬಿಂಬಕ್ರಿಯಾದ್ವಾರಾ ತಾನೇ ಮಾಡಿ, ತತ್ತ್ವ ಪತಿ ದೇವತೆಗಳ ದ್ವಾರಾ ಮಾಡಿಸುತ್ತಿರುವನು.

ಮುಂದೆ ಭೂತಪಂಚಕಗಳ ತನ್ಮಾತ್ರಾಗುಣಗಳಲ್ಲಿ ಅಂತರ್ಗತ ಹಾಗೂ ನಿಯಾಮಕ ಭಗವದ್ರೂಪಗಳನ್ನು ತಿಳಿಸುತ್ತಾರೆ.

ಪೃಥ್ವೀತತ್ತ್ವದ ತನ್ಮಾತ್ರಾಗುಣವಾದ ಗಂಧದಲ್ಲಿ ನರಸಿಂಹರೂಪಿ ಶ್ರೀ ಪರಮಾತ್ಮನೂ, ಉದಕತತ್ತ್ವದ ಮಾತ್ರಾಗುಣ ರಸದಲ್ಲಿ ರಸರೂಪನಾಗಿ, ರಸಪದವಾಚ್ಯನಾಗಿ ಅಧೋಕ್ಷಜನಾಮಕನೂ ಇದ್ದು, ಗಂಧದ್ವಾರಾ ಆಘ್ರಾಣ ಕ್ರಿಯೆ ಮತ್ತು ರಸಾಂತರ್ಗತನಾಗಿ ರುಚಿಯ ಅನುಭವವನ್ನು ಜೀವನಿಗೆ ಬಿಂಬ ಕ್ರಿಯಾದ್ವಾರಾ ತಂದುಕೊಡುವನು. ॥೨೦॥

**ಪ್ರತಿಪದಾರ್ಥ :—**

**ನೆಲದೊಳು** = ಪೃಥ್ವೀತತ್ತ್ವದಲ್ಲಿ **ಕೃಷ್ಣರೂಪದಿ** = ಕೃಷ್ಣರೂಪಿ ಪರಮಾತ್ಮನು **ಇಪ್ಪನು** = ಇದ್ದಾನೆ **ಜಲದೊಳು** = ಉದಕತತ್ತ್ವದಲ್ಲಿ **ಹರಿಯೆನಿಸಿ** = ಹರಿನಾಮಕ ಪರಮಾತ್ಮನು = **ಇಪ್ಪನು** = ವರುಣಾಂತರ್ಗತನಾಗಿ ಇರುವನು. **ಶಿಖಿ ಒಳಗೆ** = ಅಗ್ನಿ. ಅಂದರೆ, ತೇಜಸ್ತತ್ವದಲ್ಲಿ **ಉಪೇಂದ್ರನೆಂದೆನಿಸಿ** = ಉಪೇಂದ್ರನಾಮಕನಾಗಿ **ಪರಶುರಾಮನು ಇಪ್ಪನು** = ಅಗ್ನ್ಯಂತರ್ಗತ ಪರಶುರಾಮರೂಪಿ ಪರಮಾತ್ಮನು ಇದ್ದಾನೆ, ಎಲರೊಳು = ವಾಯುತತ್ತ್ವದಲ್ಲಿ **ಜನಾರ್ದನನು ಇಪ್ಪ** = ಜನಾರ್ದನನಾಮಕ ಪರಮಾತ್ಮನು ಇರುವನು. **ಬಾಂದಳದೊಳು** = ಆಕಾಶತತ್ತ್ವದಲ್ಲಿ **ಅಚ್ಯುತ** = ಅಚ್ಯುತರೂಪಿ ಪರಮಾತ್ಮನಿರುವನು. **ಗಂಧ** = ಪೃಥ್ವೀಗುಣವಾದ ಗಂಧವೆಂಬ ತನ್ಮಾತ್ರಾದಲ್ಲಿ **ನರಹರಿ** = ನರಸಿಂಹನಾಮಕ ಪರಮಾತ್ಮನಿದ್ದಾನೆ. **ರಸಗಳೊಳು** = ಉದಕಗುಣವಾದ ಆಮ್ಲಾದಿ ಷಡ್ರಸಗಳಲ್ಲಿ **ಅಧೋಕ್ಷಜ** = ಅಧೋಕ್ಷಜರೂಪಿ ಪರ

ಮಾತ್ಮನು  **ರಸರೂಪತಾನಾಗಿ**=ರಸಾಕಾರ, ರಸರೂಪ ಮತ್ತು ರಸಪದ
ವಾಚ್ಯನಾಗಿ  **ಪೊಳೆವ**=ಪ್ರಕಾಶಮಾನನಾಗಿದ್ದಾನೆ. ॥೨೦॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ದೇಹತತ್ವಗತ ಭಗವದ್ರೂಪಗಳ ಹೇಳುತ್ತಾರೆ.

ನೆಲದೊಳು-ದೇಹಗತ ಪೃಥ್ವೀತತ್ವದೊಳು, ಕೃಷ್ಣರೂಪದಿ-ಕೃಷ್ಣ ರೂಪಿ ಪರಮಾತ್ಮನು, ಇಪ್ಪನು—ಇದ್ದಾನೆ, ಜಲದಲಿ-ಅಪ್ಪುತತ್ವದಲ್ಲಿ. ಹರಿಯೆನಿಸಿ—ಹರಿನಾಮಕ ಪರಮಾತ್ಮ ವರುಣಾಂತರ್ಗತನಾಗಿ, ಇಪ್ಪನು—ಇದ್ದಾನೆ. ಶಿಖಿ ಒಳಗೆ—ಅಗ್ನಿ ತತ್ವದೊಳಗೆ, ಉಪೇಂದ್ರನೆಂದೆನಿಸಿ-ಉಪೇಂದ್ರ ಎಂತ ಕರೆಸಿದವನಾಗಿ, ಪರಶುರಾಮನು—ಪರಶುರಾಮದೇವರು, ಇಪ್ಪನು—ಇದ್ದಾನೆ, ಎಲರೊಳು—ವಾಯುತತ್ವದಲ್ಲಿ, ಜನಾರ್ದನನು—ಜನಾರ್ದನರೂಪಿ ಪರಮಾತ್ಮ, ಇಪ್ಪ—ಇದ್ದಾನೆ, ಬಾಂದಳದೊಳು ಆಕಾಶತತ್ತ್ವದಲ್ಲಿ ಅಚ್ಯುತ—ಅಚ್ಯುತರೂಪಿ ಪರಮಾತ್ಮ, ನಿಪ್ಪ—ಇದ್ದಾನೆ. ಗಂಧ—ಪೃಥ್ವೀತತ್ವದ ಗುಣದಲ್ಲಿ, ನರಹರಿ—ನರಸಿಂಹನಾಮಕ ಪರಮಾತ್ಮ ಇದ್ದಾನೆ. ರಸಗಳೊಳು—ಉದಕಾಶ್ರಯವಾದ ಉದಕಗುಣವಾದ ಆಮ್ಲಾದಿ ಆರು ರಸಗಳಲ್ಲಿ, ಹೊಳೆವಧೋಕ್ಷಜ—ಪ್ರಕಾಶಮಾನನಾದ ಅಧೋಕ್ಷಜಮೂರ್ತಿ, ರಸರೂಪ ತಾನಾಗಿ—ರಸಾಕಾರದಿಂದ ರಸರೂಪನಾಗಿ ಇರುತ್ತಾನೆ.

ಅಖಂಡರೂಪದಿಂದ ಇಂದ್ರಿಯಗಳ ದೇಹಗತ ಪಂಚಭೂತಗಳ ಪವಿತ್ರವು, ಖಂಡರೂಪದಿಂದ ಇಂದ್ರಿಯಗಳ ನಿಯಮನವು ಮಾಡತಾನೆಂದು ಅನುಸಂಧಾನಮಾಡಬೇಕು. ॥೨೦॥

### (೨) "ಭಾವಪ್ರಕಾಶಿಕೆ" ವ್ಯಾಖ್ಯಾನ :—

ಪಂಚಮಹಾಭೂತಗಳಲ್ಲೂ, ತನ್ಮಾತ್ರಾಗುಣಗಳಲ್ಲಿಯೂ ಪಾದ ಪಾಯು ಉಪಸ್ಥೇಂದ್ರಿಯಗಳಲ್ಲಿಯೂ ಚಿಂತಿಸಬೇಕಾದ ಭಗವದ್ರೂಪಗಳನ್ನು ಈ ಎರಡು ಪದ್ಯಗಳಿಂದ ಹೇಳುತ್ತಾರೆ.

ಪೃಥಿವಿಯಲ್ಲಿ ಕೃಷ್ಣರೂಪದಿಂದಲೂ, ಉದಕದಲ್ಲಿ ಹರಿ ಎಂತಲೂ, ಅಗ್ನಿಯಲ್ಲಿ ಅಂದರೆ, ತೇಜಸ್ತತ್ವದಲ್ಲಿ ಪರಶುರಾಮನು ಉಪೇಂದ್ರನಾಮ ದಿಂದಲೂ, ವಾಯುತತ್ತ್ವದಲ್ಲಿ ಜನಾರ್ದನರೂಪದಿಂದಲೂ, ಆಕಾಶದಲ್ಲಿ ಅಚ್ಯುತರೂಪಯಾಗಿಯೂ ಹೀಗೆ ಪಂಚಮಹಾಭೂತಗಳಲ್ಲಿ ಇರುವ ಮತ್ತು ತನ್ಮಾತ್ರಾಗುಣಗಳ ಪೈಕಿ, ಗಂಧದಲ್ಲಿ ನರಸಿಂಹರೂಪದಿಂದಲೂ, ರಸದಲ್ಲಿ ಅಧೋಕ್ಷಜ ರೂಪಿಯಾಗಿಯೂ ಇರುತ್ತಿರುವನು. ||೨೦||

**(೩) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ):—**

"ನೆಲದೊಳಿಪ್ಪನು" ಇತಿ || "ಕಾರ್ಷ್ಣ್ಯ ಪ್ರಚುರಾ ಚ ಪೃಥಿವೀ" ಇತ್ಯುಕ್ತೇಃ || "||ಓಂ|| ಸ್ತೋಮಾ ಇಂದ್ರಸ್ಯ ವಜ್ರಿಣ ನ ವಿಂಧೇ ಅಸ್ಯ ಸುಷ್ಟುತಿಮ್ || ವೃಷಾಯುಃಥೇವ ವಂಸಗಃ ಕೃಷ್ಟೀರಿಯರ್ತ್ಯೋಜಸಾ ಈಶಾನಃ ||ಓಂ||" ಕರ್ತೃತ್ವಾತ್ ಚೇಷ್ಟಕತ್ವಾತ್ ಸರ್ವಜಗತ್ಪ್ರವರ್ತಕತ್ವಾತ್ ಬಲಾದ್ಯನಂತ ಗುಣತ್ವಾತ್ ಕೃಷ್ಣಃ || ವಾಯೌ ಜನಾರ್ದನಃ ಖೇತುಚ್ಯುತ್ಯ ಪೇತೋಸ್ತಿ ಗಂಧಗಃ || ನೃಸಿಂಹೋಽಧೋಕ್ಷಜಃ ಪ್ರೋಕ್ತಃ ರಸೇ ತದ್ರೂಪ ಏಕರಾಟ್ ||ಇತಿ|| ||೨೦||

**ಕನ್ನಡಾನುವಾದ :—**

ಪೃಥ್ವಿಯಲ್ಲಿ ಕಪ್ಪುಬಣ್ಣವೇ ಹೆಚ್ಚು, ಇದರಿಂದ **"ಕೃಷ್ಣಾ"** ಎಂದು ಕರೆಯುತ್ತಾರೆ. ಈ ಕಾರಣದಿಂದ "ನೆಲದೊಳಿಪ್ಪನು ಕೃಷ್ಣರೂಪದಿ" ಎಂದು ದಾಸವರೇಣ್ಯರ ನಿರೂಪಣೆ. **ಸ್ತೋಮಾ** ಇತ್ಯಾದಿ ಬೃಹತೀಮಂತ್ರದ ಅರ್ಥ ವನ್ನು ಕೃಷ್ಣಶಬ್ದವು ಪ್ರತಿಪಾದಿಸುತ್ತದೆ. (೧) ಜಗತ್ತಿನಲ್ಲಿ ನಾನಾ ವಿಧ ವಾದ ವ್ಯಾಪಾರಗಳನ್ನು ನಡೆಯಿಸಿ, ಜಗತ್ತನ್ನು ಪ್ರವರ್ತಿಸುವುದರಿಂದಲೂ (೨) ಬಲ ಮುಂತಾದ ಅನಂತಗುಣಸಂಪನ್ನನಾಗಿರುವುದರಿಂದಲೂ ಶ್ರೀ ಪರ ಮಾತ್ಮನಿಗೆ "ಕೃಷ್ಣ" ಎಂಬ ನಾಮಧೇಯ. ಜಲದಲ್ಲಿ **ಹರಿಯು.** ಅಗ್ನಿಯಲ್ಲಿ ಜಮದಗ್ನಿ ಪುತ್ರನಾಗಿ ಅವತರಿಸಿದ ಭಾರ್ಗವರಾಮನು **ಉಪೇಂದ್ರ** ರೂಪ ದಿಂದಿದ್ದಾನೆ. ಗಾಳಿಯಲ್ಲಿ **ಜನಾರ್ದನನು.** ಆಕಾಶದಲ್ಲಿ ಅಚ್ಯುತನು. ಗಂಧ

ದಲ್ಲಿ **ನಾರಸಿಂಹನು.** ರಸದಲ್ಲಿ **ಅಧೋಕ್ಷಜನು.** ಇಂತು ಪ್ರಮಾಣವಾಕ್ಯಗಳಿಗನುಗುಣವಾಗಿ ದಾಸವರ್ಯರು ಭಗವದ್ರೂಪಗಳನ್ನು ವಿವರಿಸುತ್ತಾರೆ. ||೨೦||

(೪) **"ಗುರುಹೃದಯಪ್ರಕಾಶಿಕೆ"-ವ್ಯಾಖ್ಯಾನ :-**

ನೆಲದಲ್ಲಿ ಕೃಷ್ಣರೂಪದಿಂದ ಇರುವನು. ಜಲದಲ್ಲಿ ಹರಿ ರೂಪ. ಅಗ್ನಿಯಲ್ಲಿ ಪರಶುರಾಮ ಉಪೇಂದ್ರರೂಪನು. ಎಲರೆಂಬ ಗಾಳಿಯಲ್ಲಿ ಜನಾರ್ದನನು. ಬಾಂದಳವೆಂಬ ಆಕಾಶದಲ್ಲಿ ಅಚ್ಯುತರೂಪಿಯು. ಗಂಧವೆಂಬ ಭೂವಾಸನೆ ಮೊದಲಾದ ಸುಗಂಧದಲ್ಲಿ ನರಹರಿಯು. ಮಧುರಾದಿ ಷಡ್ರಸಗಳಲ್ಲಿ ರಸನಾಮಕನಾಗಿ ಅಧೋಕ್ಷಜನಿರುವನೆಂದು ಭಾವಿಸಬೇಕು. ||೨೦||

## ಸರ್ವವ್ಯಾಖ್ಯಾನಸಾರಸಂಗ್ರಹ

ಪೃಥ್ವೀ, ಅಪ್ಪು, ತೇಜಸ್ಸು, ವಾಯು ಮತ್ತು ಆಕಾಶವೆಂಬ ಪಂಚಭೂತ ತತ್ತ್ವಗಳಲ್ಲಿ ನಿಯಾಮಕ ಭಗವದ್ರೂಪಗಳನ್ನು ತಿಳಿಸುತ್ತಾರೆ ಪ್ರಸಕ್ತ ಈ ೨೦ ನೆಯ ಪದ್ಯದಿಂದ.

(೧) ಪೃಥ್ವೀ ತತ್ತ್ವದಲ್ಲಿ ಅಂದರೆ ನೆಲದಲ್ಲಿ ಕೃಷ್ಣನಾಮಕನಾಗಿದ್ದಾನೆ. ಪೃಥ್ವಿಯಲ್ಲಿ ಕಪ್ಪುಬಣ್ಣವೇ ಹೆಚ್ಚು. ಇದರಿಂದ ಕಪ್ಪುವರ್ಣಸಾಂಕೇತವಾದ ಕೃಷ್ಣಶಬ್ದವಾಚ್ಯನು. **ಸ್ತೋಮಾ** ಇತ್ಯಾದಿ ಬೃಹತೀಮಂತ್ರದ ಅರ್ಥವನ್ನು ಕೃಷ್ಣಶಬ್ದವು ಪ್ರತಿಪಾದಿಸುತ್ತದೆ. (೧) ಜಗತ್ತಿನಲ್ಲಿ ನಾನಾ ವ್ಯಾಪಾರಗಳನ್ನು ಪ್ರವರ್ತಿಸುವುದರಿಂದಲೂ, (೨) ಬಲಾದಿ ಅನಂತಗುಣ ಸಂಪನ್ನನಾಗಿರುವುದರಿಂದಲೂ ಶ್ರೀ ಪರಮಾತ್ಮನಿಗೆ "ಕೃಷ್ಣಾ" ಎಂಬ ನಾಮಧೇಯ.

**ಸುಲಕ್ಷಣಾ** ನಾಮಕಳಾದ ಶ್ರೀ ಲಕ್ಷ್ಮೀದೇವಿಯು ಕೃಷ್ಣನೊಡಗೂಡಿ ಪೃಥ್ವೀತತ್ತ್ವದಲ್ಲಿದ್ದಾಳೆ.

**ಧರಾ ಮತ್ತು ಶನೈಶ್ಚರ** ಇವರು ಪೃಥಿವೀ ತತ್ತ್ವಕ್ಕೆ ಅಭಿಮಾನಿ ದೇವತೆಗಳು.

(೨) ಅಪ್ ತತ್ತ್ವ ಎಂದರೆ ಉದಕದಲ್ಲಿ **ಹರಿ** ಶಬ್ದವಾಚ್ಯನಾಗಿ ನಿಯಾಮಕನಾಗಿದ್ದಾನೆ.

**ಸುಶೀಲಾ** ಎಂಬ ಹೆಸರಿನಿಂದ ಶ್ರೀ ಇಂದಿರೆಯು ವಿದ್ಯಮಾನಳಾಗಿದ್ದಾಳೆ.

**ವರುಣದೇವರು** ಅಪ್ ತತ್ತ್ವಕ್ಕೆ ಅಭಿಮಾನಿಯು.

(೩) ಅಗ್ನಿ ಎಂದರೆ, ತೇಜಸ್ತತ್ವದಲ್ಲಿ ಅಗ್ನ್ಯಂತರ್ಗತ ಶ್ರೀ ಪರಶುರಾಮದೇವರು **ಉಪೇಂದ್ರ** ನಾಮಕರಾಗಿ ತತ್ತ್ವಕಾರ್ಯ ನಡೆಯಿಸುವರು.

ವಿದ್ಯಾ ನಾಮಕಳಾಗಿ ಶ್ರೀ ಲಕ್ಷ್ಮೀದೇವಿಯರು ಇದ್ದಾರೆ.

**ಅಗ್ನಿ (ಪಾವಕ)** ಯು ತೇಜಸ್ತತ್ವಕ್ಕೆ ಅಭಿಮಾನಿದೇವತಾ.

(೪) ವಾಯುತತ್ತ್ವದಲ್ಲಿ (ಎಲರೊಳು) ನಿಯಾಮಕ ಭಗವದ್ರೂಪವು **ಜನಾರ್ದನನು.**

**ಸುಂದರೀ** ನಾಮಕಳಾಗಿ ರಮಾದೇವಿಯರು ಇರುವರು.

**ಪ್ರವಹವಾಯುವು** ವಾಯುತತ್ತ್ವಕ್ಕೆ ಅಭಿಮಾನಿದೇವತೆಯು.

(೫) ಆಕಾಶತತ್ತ್ವದಲ್ಲಿ **ಅಚ್ಯುತ** ನಾಮಕ ಶ್ರೀ ಪರಮಾತ್ಮನು **ಸುಗಂಧಿ** ನಾಮಕಳಾದ ಇಂದಿರೆಯೊಡಗೂಡಿ, ಆಕಾಶತತ್ವಾಭಿಮಾನಿಯಾದ **ಗಣೇಶ**ನಲ್ಲಿ ಅಂತರ್ಯಾಮಿಯಾಗಿ ಇದ್ದು ತತ್ತ್ವಕಾರ್ಯ ನಡೆಯಿಸುವನು.

(೬) **ಗಂಧವು** ಪೃಥ್ವೀ ತತ್ತ್ವದ ತನ್ಮಾತ್ರಾಗುಣವು. ಗಂಧದಲ್ಲಿ **ನರಹರಿ** ರೂಪಿ ಶ್ರೀ ಪರಮಾತ್ಮನು **ಸುಖಾ** ನಾಮಕಳಾದ ಲಕ್ಷ್ಮೀಸಮೇತನಾಗಿ ಇದ್ದು, ಈ ತತ್ತ್ವದ ಅಭಿಮಾನಿಯಾದ **ಸಮಾನ**ನಲ್ಲಿದ್ದು ಪೃಥ್ವೀಗೆ ಸಂಬಂಧಿಸಿದ ಗಂಧ (ವಾಸನೆ) ಗುಣವನ್ನು ನಾಸಿಕೇಂದ್ರಿಯದ್ವಾರಾ ಅಭಿವ್ಯಕ್ತಿ ಮಾಡುವನು.

(೭) ಅಪ್ ತತ್ತ್ವದ ತನ್ಮಾತ್ರಾಗುಣವಾದ **ರಸದಲ್ಲಿ ಅಧೋಕ್ಷಜ** ನಾಮಕ ಶ್ರೀ ಪರಮಾತ್ಮನು **ಅಸೌಜ್ಞಾ** ನಾಮಕ ರಮಾಸಹಿತನಾಗಿ ಇದ್ದು,

ರಸತತ್ತ್ವಾಭಿಮಾನಿ **ಉದಾನ**ನ ಮೂಲಕ ಷತ್ರುಪಗಳಲ್ಲಿ ರಸಾಕಾರ, ರಸಪದವಾಚ್ಯನಾಗಿದ್ದು, ಆಯಾಯಾ ರಸಗಳ ಅನುಭವವನ್ನು ರಸನೇಂದ್ರಿಯಕ್ಕೆ ತಂದೀಯುವನು.

ಮೇಲಿನ ವಿವರಗಳನ್ನು ಈ ಕೆಳಗಿನ ಪಟ್ಟಿಯಿಂದ ಸುಲಭವಾಗಿ ಗ್ರಹಿಸಬಹುದು.

| ಕ್ರಮ ಸಂಖ್ಯೆ | ತತ್ತ್ವಗಳು | ಭಗವದ್ರೂಪ | ತತ್ತ್ವಾಭಿಮಾನಿ ದೇವತಾ | ಲಕ್ಷ್ಮೀದೇವಿಯರ ಹೆಸರು | ತತ್ತ್ವಕಾರ್ಯ |
|---|---|---|---|---|---|
| ೧ | ಪೃಥಿವೀ | ಶ್ರೀಕೃಷ್ಣ | ಧರಾ-ಶನೈಶ್ಚರ | ಸುಲಕ್ಷಣಾ | ಗಂಧ ಪ್ರಸರಣ |
| ೨ | ಅಪ್ಪು | ಹರಿ | ವರುಣ | ಸುಶೀಲಾ | ರಸಾನುಭವ |
| ೩ | ತೇಜಸ್ಸು | ಉಪೇಂದ್ರ | ಅಗ್ನಿ | ವಿದ್ಯಾ | ರೂಪದರ್ಶನ |
| ೪ | ವಾಯು | ಜನಾರ್ದನ | ಪ್ರವಹವಾಯು | ಸುಂದರೀ | ಸ್ಪರ್ಶಜ್ಞಾನ |
| ೫ | ಆಕಾಶ | ಅಚ್ಯುತ | ಗಣೇಶ | ಸುಗಂಧೀ | ಶಬ್ದಗ್ರಹಣ |
| ೬ | ಗಂಧ | ನರಹರಿ | ಸಮಾನ | ಸುಖಾ | ವಾಸನೆ |
| ೭ | ರಸ | ಅಧೋಕ್ಷಜ | ಉದಾನ | ಅಸೌಜ್ಞಾ | ರುಚಿಯ ಅನುಭವ |

# ಪದ್ಯ (೨೧)

ಮೂಲ :–

ರೂಪ ಪುರುಷೋತ್ತಮನು ಸ್ಪರ್ಶ ।
ವ್ಯಾಪಕನು ಅನಿರುದ್ಧ ಶಬ್ದದಿ ।
ವ್ಯಾಪಿಸಿಹ ಪ್ರದ್ಯುಮ್ನುಪಸ್ಥದಿ ವಾಸುದೇವನಿಹ ॥
ತಾ ಪೊಳೆವ ಪಾಯುಸ್ಥನಾಗಿ ಜ ।
ಯಾಪತಿಯು ಸಂಕರ್ಷಣನು ಸು ।
ಸ್ಥಾಪಕನು ಆಹ ಪಾದದೊಳು ದಾಮೋದರನು ಪೊಳೆವ ॥೨೧॥

ಅವತರಣಿಕೆ :

ಭೂತಪಂಚಕಗಳ ತನ್ಮಾತ್ರಾಗುಣಗಳಲ್ಲಿ ಇರುವ ಭಗವದ್ರೂಪಗಳ ವಿಚಾರವನ್ನು "ರೂಪ"–ಎಂಬ ಪ್ರಸಕ್ತ ಸಂಧಿಗತ ೨೧ ನೆಯ ಈ ಪದ್ಯದಿಂದ ಮುಂದುವರಿಸುತ್ತಾರೆ.

ರೂಪದಲ್ಲಿ ಪುರುಷೋತ್ತಮನೂ, ಸ್ಪರ್ಶಗುಣದಲ್ಲಿ ಅನಿರುದ್ಧವಾಚ್ಯ ಪರಮಾತ್ಮನೂ, ಶಬ್ದತತ್ತ್ವದಲ್ಲಿ ಪ್ರದ್ಯುಮ್ನನೂ, ಇನ್ನು ಕರ್ಮೇಂದ್ರಿಯ ಗಳಾದ ಉಪಸ್ಥತತ್ತ್ವದಲ್ಲಿ ವಾಸುದೇವನೂ, ಪಾಯುತತ್ತ್ವದಲ್ಲಿ ಜಯಾಪತಿ ಸಂಕರ್ಷಣನೂ ಮತ್ತು ಪಾದದ್ವಯಗಳಲ್ಲಿ ದಾಮೋದರನಾಮಕ ಪರ ಮಾತ್ಮನೂ ವಿದ್ಯಮಾನನಾಗಿದ್ದು, ಆಯಾಯಾ ತತ್ತ್ವಪತಿ ದೇವತೆಗಳ ದ್ವಾರಾ, ತತ್ಸಂಬಂಧ ತತ್ತ್ವಕಾರ್ಯಗಳನ್ನು ಮಾಡಿ, ಮಾಡಿಸುತ್ತಾ ಜೀವರಲ್ಲಿ ಕ್ರೀಡಾ ವಿಶಿಷ್ಟನಾಗಿದ್ದಾನೆ ಎಂದು ವಿವರಿಸುತ್ತಾರೆ. ॥೨೧॥

ಪ್ರತಿಪದಾರ್ಥ :–

**ರೂಪ**=ತೇಜಸ್ತತ್ತ್ವದ ಗುಣವಾದ ರೂಪ ತನ್ಮಾತ್ರೆಯಲ್ಲಿ **ಪುರು ಷೋತ್ತಮನು**=ಪುರುಷೋತ್ತಮನಾಮಕ ಶ್ರೀ ಪರಮಾತ್ಮನು ಇರುವನು.

**ಅನಿರುದ್ಧ**=ಅನಿರುದ್ಧನಾಮಕ ಶ್ರೀ ಪರಮಾತ್ಮನು **ಸ್ಪರ್ಶ ಪ್ರಾಪಕನು** =ವಾಯುತತ್ತ್ವದ ತನ್ಮಾತ್ರಾಗುಣವಾದ ಸ್ಪರ್ಶದಲ್ಲಿ ವ್ಯಾಪಿಸಿಕೊಂಡಿದ್ದಾನೆ. (ದೇಹದಲ್ಲಿ ಚರ್ಮವು ಸರ್ವತ್ರವ್ಯಾಪ್ತವಾದದ್ದು) **ಪ್ರದ್ಯುಮ್ನ**= ಪ್ರದ್ಯುಮ್ನರೂಪಿ ಪರಮಾತ್ಮನು **ಶಬ್ದದಿ**=ಆಕಾಶತತ್ತ್ವ ಗುಣವಾದ ಶಬ್ದದಲ್ಲಿ **ವ್ಯಾಪಿಸಿಹ**=ವ್ಯಾಪಿಸಿಕೊಂಡಿರುವವನು. (ಶಬ್ದಪ್ರಕರಣಕಾರ್ಯ ವ್ಯಾಪಕವಾದದ್ದು) **ಉಪಸ್ಥದಿ**=ಕರ್ಮೇಂದ್ರಿಯವಾದ ಉಪಸ್ಥತತ್ತ್ವ ದಲ್ಲಿ (ಮೂತ್ರವಿಸರ್ಜನಾಂಗ) **ವಾಸುದೇವನಿಹ**=ವಾಸುದೇವನಾಮಕ ಶ್ರೀ ಪರಮಾತ್ಮನಿದ್ದಾನೆ **ಜಯಾಪತಿ ಸಂಕರುಷಣನು**=ಜಯನಾಮಕ ಳಾದ ಶ್ರೀ ಲಕ್ಷ್ಮೀಪತಿಯಾದ ಸಂಕರ್ಷಣರೂಪಿಯು **ಪಾಯುಸ್ಥನಾಗಿ** =ಮಲವಿಸರ್ಜನೆ ಕರ್ಮತತ್ತ್ವವಾದ ಪಾಯುತತ್ತ್ವದಲ್ಲಿ **ತಾಪೊಳೆವ** =ತಾನು ಪ್ರಕಾಶಿಸುತ್ತಿರುವವನು. **ಪಾದದೊಳು**=ಎರಡು ಕಾಲುಗಳಲ್ಲಿ **ದಾಮೋದರನು**=ದಾಮೋದರ ನಾಮಕ ಪರಮಾತ್ಮನು **ಸುಸ್ಥಾಪಕನು**=ಪಾದಾಧಾರದಿಂದ ದೇಹವನ್ನು ನಿಲ್ಲುವಂತೆ ಆಧಾರರೂಪನಾಗಿ **ಆಹ**=ವಿದ್ಯಮಾನನಾಗಿದ್ದು **ಪೊಳೆವ**=ಶೋಭಿಸುತ್ತಿರುವನು. ॥೨೦॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

ಇನ್ನೂ ದೇಹತತ್ತ್ವ, ತದ್ಗತ ಭಗವದ್ರೂಪಗಳ ಹೇಳುತ್ತಾರೆ.

ರೂಪ ಪುರುಷೋತ್ತಮನು-ಅಗ್ನಿಗುಣವಾದ ರೂಪದಲ್ಲಿ ಸಮಾನ ವಾಯ್ವಂತರ್ಗತ ಪುರುಷೋತ್ತಮ ನಾಮಕ ಪರಮಾತ್ಮನು ಇದ್ದಾನೆ. ಸ್ಪರ್ಶ ಪ್ರಾಪಕನು-ವಾಯುವಿನ ಗುಣವಾದ ಸ್ಪರ್ಶತತ್ತ್ವದಲ್ಲಿ ಅಪಾನನಾಮಕ ವಾಯ್ವಂತರ್ಗತ. ಅನಿರುದ್ಧ-ಅನಿರುದ್ಧನಾಮಕ ಪರಮಾತ್ಮನು, ಶಬ್ದದಿ ವ್ಯಾಪಿಸಿಹ-ಆಕಾಶಗುಣವಾದ ಶಬ್ದದಲ್ಲಿ ಇರತಕ್ಕವನು ಪ್ರಾಣವಾಯ್ವಂತರ್ಗತ, ಪ್ರದ್ಯುಮ್ನ-ಪ್ರದ್ಯುಮ್ನನಾಮಕ ಪರಮಾತ್ಮನು, ಉಪಸ್ಥದಿ- ಕರ್ಮೇಂದ್ರಿಯವಾದ ಉಪಸ್ಥತತ್ತ್ವ ಎಂದರೆ, ಮೂತ್ರವಿಸರ್ಜನಲಿಂಗ ಎಂತ

ನಾಮ. ಈ ತತ್ತ್ವದಲ್ಲಿ ಸ್ವಾಯಂಭುವ ಮನುವು. ವಾಸುದೇವನು-ಇವನಂತರ್ಗನಾಗಿ ವಾಸುದೇವರೂಪಿ ಪರಮಾತ್ಮ, ತಾಪೊಳಿವ ಪಾಯುಸ್ಥನಾಗಿ-ಪ್ರಕಾಶನಾದ ತಾನು ಮಲವಿಸರ್ಜನೆ ಕರ್ಮಕಾರ್ಯತತ್ತ್ವವಾದ ಪಾಯು ತತ್ತ್ವದಲ್ಲಿ ತದಾಕಾರನಾಗಿ, ಜಯಾಪತಿಯು ಸಂಕರ್ಷಣನು-ಜಯಾನಾಮಕ ಲಕ್ಷ್ಮೀಪತಿಯಾದ ಪರಮಾತ್ಮನು ಮಿತ್ರನಾಮಕ ಸೂರ್ಯಾಂತರ್ಗತನಾಗಿದ್ದಾನೆ ಪಾದದೊಳು-ಪಾದತತ್ತ್ವದಲ್ಲಿ ಇರತಕ್ಕವನು ಜಯಂತ ನಾಮಕ ದೇವತಾ. ಇವನಂತರ್ಗತನಾಗಿ, ದಾಮೋದರನು ಪೊಳಿವ-ದಾಮೋದರ ನಾಮಕ ಪರಮಾತ್ಮ ಪ್ರಕಾಶಮಾನನಾಗಿ ಇದ್ದಾನೆ. ಸಂಸ್ಥಾಪಕನು ಅಹ-ಪಾದಾಧಾರದಿಂದ ದೇಹವನ್ನು ಛಂದಾಗಿ ನಿಲ್ಲುವಂತೆ ಆಧಾರ ಮಾಡುತ್ತಾನೆ. ಈ ಪ್ರಕಾರ ದೇಹಗತ ತತ್ತ್ವಗಳಲ್ಲಿ, ಬಾಹ್ಯ ತತ್ತ್ವಗಳಲ್ಲಿ ತಿಳಿಯಬೇಕು ಎಂತ ತಾತ್ಪರ್ಯ.

**ವಿಶೇಷಾರ್ಥ :**

ಪೊಳಿವ ಎಂತ ಎರಡು ಆವೃತ್ತಿ ಅದೆ. ತತ್ತ್ವಗಳಲ್ಲಿ ಇದ್ದು, ಹೊಳಿಯುತಕ್ಕ ಪರಮಾತ್ಮನ ಅನುಸಂಧಾನ ಮಾಡತಕ್ಕವರ ಮನಸ್ಸಿಗೆ ಪೊಳಿವ ಎಂತ ಎರಡಕ್ಕೂ ಕೃತ್ಯವು. ||೨೦||

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ :-

ರೂಪದಲ್ಲಿ ಪುರುಷೋತ್ತಮನು, ಸ್ಪರ್ಶಗುಣದಲ್ಲಿ ಅನಿರುದ್ಧನು, ಶಬ್ದ ಗುಣದಲ್ಲಿ ಪ್ರದ್ಯುಮ್ನನು ವ್ಯಾಪ್ತನಾಗಿರುವನು. ಉಪಸ್ಥೇಂದ್ರಿಯದಲ್ಲಿ ವಾಸುದೇವನು, ಗುದದಲ್ಲಿ ಸಂಕರ್ಷಣನು, ಪಾದಗಳಲ್ಲಿ ದಾಮೋದರನು ವ್ಯಾಪಿಸಿಕೊಂಡಿರುವನೆಂದು ಭಾವಿಸಬೇಕು. ||೨೦||

## (೩) "ಭಾವದರ್ಪಣಟೀಕಾ" ವ್ಯಾಖ್ಯಾನ:-

ರೂಪದಲ್ಲಿ ಪುರುಷೋತ್ತಮನು, ತ್ವಕ್ಕಿನಲ್ಲಿ ಅನಿರುದ್ಧನು, ಶಬ್ದದಲ್ಲಿ ಪ್ರದ್ಯುಮ್ನನು, ಉಪಸ್ಥದಲ್ಲಿ ವಾಸುದೇವನು, ಇದ್ದಾನೆಂತಲೂ, ಗುದದಲ್ಲಿ

ಸಂಕರ್ಷಣನು, ಪಾದದಲ್ಲಿ ದಾಮೋದರನು ಇದ್ದಾನೆಂತಲೂ ಹೇಳುತ್ತಾರೆ– "ರೂಪೇತಿ" ॥ ॥೨೦॥

## (೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ):–

"ರೂಪ"-ಇತಿ ॥ ಪುರುಷಾಗ್ರ್ಯೋ ರೂಪಗತಃ ಅನಿರುದ್ಧಃ ಸ್ಪರ್ಶ ನಾಯಕಃ ॥ ಪ್ರದ್ಯುಮ್ನಃ ಶಬ್ದಗಃ ಲಿಂಗೇ ವಾಸುದೇವಃ ಜಯಾಪತಿಃ ॥ ಪಾಯುಸ್ಥಃ ಪಾಯುಗೋ ದಾಮೋದರ ಇತ್ಥಂ ವಿಚಿಂತಯೇತ್ ॥ ಇತಿ ಮಹಾತ್ಮ್ಯೇಃ॥ ॥೨೦॥

**ಕನ್ನಡಾರ್ಥ :—**

"ರೂಪದಲ್ಲಿ ಪುರುಷೋತ್ತಮನು. ಸ್ಪರ್ಶದಲ್ಲಿ ಅನಿರುದ್ಧನು. ಶಬ್ದ ದಲ್ಲಿ ಪ್ರದ್ಯುಮ್ನನು. ಲಿಂಗ (ಉಪಸ್ಥ) ದಲ್ಲಿ ಅನಿರುದ್ಧನು. ಪಾಯುವಿ ನಲ್ಲಿ ಸಂಕರ್ಷಣನು. ಪಾದದಲ್ಲಿ ದಾಮೋದರನು. ಹೀಗೆ ಅವಯವಗಳಲ್ಲಿ ಭಗವದ್ರೂಪಗಳನ್ನು ಚಿಂತಿಸಬೇಕು."-ಎಂದು **"ಮಹಾತ್ಮ್ಯೆ"** ವೆಂಬ ಗ್ರಂಥ ದಲ್ಲಿ ಹೇಳಲಾಗಿರುತ್ತದೆ. ॥೨೦॥

## (೫) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ :—

ಕಪ್ಪು, ಕೆಂಪು ಮೊದಲಾದ ರೂಪಗಳಲ್ಲಿ ಪುರುಷೋತ್ತಮನಿರುವನು. ಮೃದು ಕಠಿಣ ಮೊದಲಾದ ಸ್ಪರ್ಶದಲ್ಲಿ ಅನಿರುದ್ಧನೂ, ಮಾತು ಮೊದಲಾದ ಶಬ್ದದಲ್ಲಿ ಪ್ರದ್ಯುಮ್ನನೂ, ಮೂತ್ರ ಬಿಡುವ ಅವಯವದಲ್ಲಿ ವಾಸುದೇವನು ಮಲವಿಸರ್ಜನೆ ಅವಯವದಲ್ಲಿ ಜಯಾಪತಿಯಾದ ಸಂಕರ್ಷಣನು, ಪಾದ ಗಳಲ್ಲಿ ಸುಸ್ಥಾಪಕ, ಎಂದರೆ, ಆಧಾರವಾಗಿ ದಾಮೋದರನು ಇರುವನೆಂದು ಚಿಂತಿಸಬೇಕೆಂದು ನಿರೂಪಿಸುತ್ತಾರೆ. ॥೨೦॥

# ಸರ್ವವ್ಯಾಖ್ಯಾನಸಾರಸಂಗ್ರಹ

ಅವಶಿಷ್ಟ ತನ್ಮಾತ್ರಾಗುಣಗಳಲ್ಲಿ ಮತ್ತು ಕರ್ಮೇಂದ್ರಿಯ ತತ್ತ್ವಗಳಲ್ಲಿ ನಿಯಾಮಕ ಭಗವದ್ರೂಪಗಳ ವಿವರಗಳನ್ನು ತಿಳಿಸುತ್ತಾರೆ ಪ್ರಸಕ್ತ ೨೧ ನೆಯ ಈ ಪದ್ಯದಿಂದ.

(೧) **ರೂಪವು** ತೇಜಸ್ತತ್ತ್ವದ ತನ್ಮಾತ್ರಾಗುಣ. ಆ ತತ್ತ್ವದಲ್ಲಿ **ಪುರುಷೋತ್ತಮ** ನಾಮಕ ಪರಮಾತ್ಮನಿರುವನು. ರೂಪಕ್ಕೆ **ವ್ಯಾನ**ನಾಮಕ ಪ್ರಾಣನು ತತ್ತ್ವಾಭಿಮಾನಿ ದೇವತೆಯು. ಪುರುಷೋತ್ತಮನು **ಆನಂದಿನೀ** ನಾಮಕಳಾದ ರಮಾಸಹಿತನಾಗಿ. ವ್ಯಾನ ದೇವತಾಂರ್ಗತನಾಗಿದ್ದು, ನೇತ್ರಕ್ಕೆ ರೂಪವೆಂಬ ವಿಷಯಸನ್ನಿಕರ್ಷವನ್ನು ಮಾಡಿ ಮಾಡಿಸುತ್ತಿರುವನು.

(೨) ವಾಯುತತ್ತ್ವದ ತನ್ಮಾತ್ರಾಗುಣವು **ಸ್ಪರ್ಶವು.** ಈ ತತ್ತ್ವದಲ್ಲಿ ಚಿಂತಿಸಬೇಕಾದ ಭಗವದ್ರೂಪವು **ಅನಿರುದ್ಧನು.** ಸ್ಪರ್ಶತತ್ತ್ವಾಭಿಮಾನಿಯು **ಅಪಾನ**ನಾಮಕ ಪ್ರಾಣನು. **ನಿತ್ಯಾ**ನಾಮಕಳಾಗಿ ಲಕ್ಷ್ಮೀದೇವಿಯರಿದ್ದಾರೆ. ಅನಿರುದ್ಧರೂಪಿ ಪರಮಾತ್ಮನು ಸ್ಪರ್ಶ ತನ್ಮಾತ್ರಾಗುಣದಲ್ಲಿ ನಿತ್ಯಾನಾಮಕ ಇಂದಿರೆಯ ಸಹಿತ ನಿಯಾಮಕನಾಗಿದ್ದು, ಸ್ಪರ್ಶ ತತ್ವಾಭಿಮಾನಿ ಅಪಾನನದ್ವಾರಾ, ತ್ವಗಿಂದ್ರಿಯಕ್ಕೆ ಸ್ಪರ್ಶವಿಷಯ ಸನ್ನಿಕರ್ಷಮಾಡಿ, ಮಾಡಿಸಿ ವಸ್ತುಗಳ ಕಾಠಿಣ್ಯ, ಮೃದುತ್ವ, ಶೀತೋಷ್ಣಗಳ ಅನುಭವ ಇತ್ಯಾದಿ ಸ್ಪರ್ಶ ಗುಣಸಂಬಂಧ ತತ್ತ್ವಕಾರ್ಯಗಳನ್ನು ಮಾಡಿಸುತ್ತಿರುವನು.

(೩) **ಶಬ್ದವು** ಆಕಾಶತತ್ತ್ವದ ತನ್ಮಾತ್ರಾಗುಣವು. ಈ ತತ್ತ್ವಕ್ಕೆ ಮುಖ್ಯಾಭಿಮಾನಿಯು **ಪ್ರದ್ಯುಮ್ನ**ನಾಮಕ ಪರಮಾತ್ಮನು. **ಪ್ರಾಣ**ನಾಮಕ ಉಪಪ್ರಾಣನು ಶಬ್ದತನ್ಮಾತ್ರಾಭಿಮಾನಿ ದೇವತೆಯು. ಪ್ರದ್ಯುಮ್ನನು ಈ ಶಬ್ದತತ್ತ್ವದಲ್ಲಿ ವ್ಯಾಪಕನಾಗಿ, **ಸತ್ಯಾ** ನಾಮಕಳಾದ ಲಕ್ಷ್ಮೀಸಹಿತನಾಗಿದ್ದು, ಶಬ್ದತತ್ವಾಭಿಮಾನಿ ಪ್ರಾಣನ ಮೂಲಕ, ಶಬ್ದಪ್ರಸರಣಾದಿ ತತ್ತ್ವಕಾರ್ಯಗಳನ್ನು ಮಾಡಿ ಮಾಡಿಸುತ್ತಾ, ತನ್ಮೂಲಕ ಆಕಾಶ ತತ್ತ್ವಗತ ಶ್ರವಣೇಂದ್ರಿಯದಿಂದ ಶ್ರವಣ ಕಾರ್ಯಗಳನ್ನು ಮಾಡಿಸುತ್ತಾನೆ.

(೪) **ಉಪಸ್ಥವು** ಮೂತ್ರವಿಸರ್ಜನ ಮತ್ತು ರೇತೋವಿಸರ್ಜನ ಕಾರ್ಯವನ್ನು ಮಾಡುವ **ಕರ್ಮೇಂದ್ರಿಯವು.** ಇದರಲ್ಲಿ **ವಾಸುದೇವ**ರೂಪಿ ಪರಮಾತ್ಮನು **ಹರಿಣೀ** ಪತಿಯಾಗಿ ನಿಯಾಮಕನಾಗಿದ್ದು, ಉಪಸ್ಥ ತತ್ವಾಭಿಮಾನಿಯಾದ **ಸ್ವಾಯಂಭುವ ಮನು**ವಿನಲ್ಲಿ ಅಂತರ್ಗತನಾಗಿ, ತತ್ತ್ವಕಾರ್ಯವನ್ನು ಮಾಡಿ, ಮಾಡಿಸುತ್ತಿರುವನು.

(೫) **ಪಾಯು** ತತ್ತ್ವವು ಮಲವಿಸರ್ಜನಾಂಗವಾದ ಕರ್ಮೇಂದ್ರಿಯವು. ಈ ತತ್ತ್ವದಲ್ಲಿ ಜಯಾಪತಿ **ಸಂಕರ್ಷಣನು** ನಿಯಾಮಕನಾಗಿದ್ದು, **ಹಿರಣ್ಯ** ನಾಮಕಳಾದ ಇಂದಿರೆಯು ಸಹಿತನಾಗಿದ್ದು, ಪಾಯುತತ್ವಾಭಿಮಾನಿ **ಮಿತ್ರ ನಾಮಕ ಸೂರ್ಯನಲ್ಲಿ** ಅಂತಸ್ಥನಾಗಿ, ಆ ಕರ್ಮೇಂದ್ರಿಯದ್ವಾರಾ ತತ್ತ್ವಕಾರ್ಯಗಳನ್ನು ಮಾಡಿ, ಮಾಡಿಸುತ್ತಿರುವನು.

(೬) **ಪಾದವು** ಗಮನಾಗಮನ ಕಾರ್ಯವನ್ನೆಸಗುವ ಕರ್ಮೇಂದ್ರಿಯವು. ಈ ತತ್ತ್ವದಲ್ಲಿ **ದಾಮೋದರನು** ಇಂದಿರಾ ನಾಮಕಳಾದ ಲಕ್ಷ್ಮೀದೇವಿಯರ ಸಹಿತನಾಗಿದ್ದು, ಪಾದಾಭಿಮಾನಿ **ಜಯಂತನ** ದ್ವಾರಾ, ತತ್ತ್ವಕಾರ್ಯಗಳನ್ನು ಮಾಡಿ, ಮಾಡಿಸುತ್ತಾ. ಇಡೀ ದೇಹವು ಪಾದಗಳ ಆಧಾರದ ಮೇಲೆ ಸುಭದ್ರವಾಗಿ ನಿಲ್ಲುವಂತೆ ಆಧಾರರೂಪನಾಗಿ ಪರಿಶೋಭಿಸುತ್ತಿರುವನು. (ಸುಸ್ಥಾಪಕನು ಎಂದಿದ್ದಾರೆ ದಾಸವರ್ಯರು)

ಪೂರ್ವೋಕ್ತ ತತ್ತ್ವಗಳು, ತತ್ವಾಂತರ್ಗತ ಭಗವದ್ರೂಪಗಳು, ತತ್ವೇಶರು ಮತ್ತು ರಮಾರೂಪಾದಿ ವಿವರಗಳನ್ನು ಮುಂದಿನ ಪಟ್ಟಿಯಲ್ಲಿ ಕೊಟ್ಟಿದೆ-

| ಕ್ರಮ ಸಂಖ್ಯೆ | ತತ್ತ್ವಗಳು | ಭಗವದ್ರೂಪ | ರಮಾರೂಪ | ತತ್ವಾಭಿಮಾನಿಗಳು | ತತ್ತ್ವಕಾರ್ಯ |
|---|---|---|---|---|---|
| ೧ | ರೂಪ | ಪುರುಷೋತ್ತಮ | ಆನಂದನೀ | ವ್ಯಾನ | ನೇತ್ರದ್ವಾರಾ ನೋಡುವಕಾರ್ಯ |
| ೨ | ಸ್ಪರ್ಶ | ಅನಿರುದ್ಧ | ನಿತ್ಯಾ | ಅಪಾನ | ತ್ವಗಿಂದ್ರಿಯದ್ವಾರಾ ಸ್ಪರ್ಶಜ್ಞಾನ |
| ೩ | ಶಬ್ದ | ಪ್ರದ್ಯುಮ್ನ | ಸತ್ಯಾ | ಪ್ರಾಣ | ಕರ್ಣೇಂದ್ರಿಯದ್ವಾರಾ ಶ್ರವಣಕಾರ್ಯ |
| ೪ | ಉಪಸ್ಥ | ವಾಸುದೇವ | ಹರಿಣೀ | ಸ್ವಾಯಂಭುವಮನು | ಮೂತ್ರ ಮತ್ತು ರೇಜಸ್ಸಿನ ವಿಸರ್ಜನಾ ಕ್ರಿಯೆ |
| ೫ | ಪಾಯು | ಸಂಕರ್ಷಣ | ಹಿರಣ್ಯಾ | ಮಿತ್ರನಾಮಕ ಸೂರ್ಯ | ಮಲವಿಸರ್ಜನಾಕ್ರಿಯೆ |
| ೬ | ಪಾದ | ದಾಮೋದರ | ಇಂದಿರಾ | ಜಯಂತ | ಗಮನಾಗಮನಕಾರ್ಯ |

## ಪದ್ಯ (೨೨)

ಮೂಲ :—

ಚತುರವಿಂಶತಿ ತತ್ವದೊಳು ಶ್ರೀ ।
ಪತಿಯು ಅನಿರುದ್ಧಾದಿ ರೂಪದಿ ।
ವಿತತನಾಗಿದ್ದಖಿಳಜೀವರ ಸಂಹನನದೊಳಗೆ ॥
ಪ್ರತತಿಯಂದದಿ ಸುತ್ತಿಸುತ್ತುತ ।
ಪಿತೃಗಳಿಗೆ ತರ್ಪಕನೆನಿಸಿ ಕೊಂ ।
ಡತುಳಮಹಿಮನು ಷಣ್ಣವತಿ ನಾಮದಲಿ ನೆಲಸಿಹನು ॥ ॥೨೨॥

ಅವತರಣಿಕೆ :-

ಈ ಪಾಂಚಭೌತಿಕ ಶರೀರವು ೨೪ ತತ್ತ್ವಗಳಿಂದ ನಿರ್ಮಿತವಾಗಿದೆ. ಈ ತತ್ತ್ವಗಳಲ್ಲಿ ವಿದ್ಯಮಾನನಾಗಿದ್ದು, ಆಯಾಯಾ ತತ್ತ್ವಗಳಿಗೆ ಅಭಿಮಾನಿಗಳಾದ ತತ್ತ್ವೇಶರಲ್ಲಿ ಅಂತರ್ಯಾಮಿ ರೂಪದಿಂದ. ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನು ಅನಿರುದ್ಧ, ಪ್ರದ್ಯುಮ್ನ ಸಂಕರ್ಷಣ ಮತ್ತು ವಾಸುದೇವ ಎಂಬ ನಾಲ್ಕು ರೂಪಗಳಿಂದ ಸಮಸ್ತ ಜೀವರ ಸ್ಥೂಲ ಶರೀರದಲ್ಲಿ ವ್ಯಾಪಿಸಿಕೊಂಡಿರುವನು. ಚಕ್ರಾಕಾರನಾಗಿ ಈ ಶರೀರದಲ್ಲಿ ಸುತ್ತುತ್ತಾ, ತತ್ವಗಳಲ್ಲಿ ಸಂಚರಿಸುತ್ತಾ. ಪಿತೃ, ಪಿತಾಮಹ ಪ್ರಪಿತಾಮಹರೆಂಬ ಮೂರುವರ್ಗದ ಪಿತೃದೇವತೆಗಳಿಗೆ ತೃಪ್ತಿಪಡಿಸುತ್ತಾ (ತರ್ಪಕನೆನಿಸಿ), ೯೬ ರೂಪಗಳಿಂದ **ಷಣ್ಣವತಿ** ನಾಮಕನಾಗಿ, ಅಪಾರಮಹಿಮಾಸಂಪನ್ನನಾದ ಬಿಂಬರೂಪಿ ಪರಮಾತ್ಮನು ಈ ಶರೀರಗತನಾಗಿ ನೆಲಸಿಹನೆಂದು ತಿಳಿಸುತ್ತಾರೆ. **"ಚತುರ ವಿಂಶತಿ"**—ಎಂಬ ಪ್ರಸಕ್ತ ಸಂಧಿಗತ ೨೨ ನೆಯ ಈ ಪದ್ಯದಿಂದ. ೨೪ ತತ್ತ್ವಗಳು × ಅನಿರುದ್ಧಾದಿ ನಾಲ್ಕು ರೂಪಗಳು=೯೬ ರೂಪಗಳು. (ಷಣ್ಣವತಿ ಸಂಖ್ಯಾವಿವರ) ॥೨೨॥

**ಪ್ರತಿಪದಾರ್ಥ :–**

**ಶ್ರೀಪತಿಯು**=ಲಕ್ಷ್ಮೀಪತಿಯಾದ ಪರಮಾತ್ಮನು **ಚತುರವಿಂಶತಿ ತತ್ವದೊಳು**= ಇಪ್ಪತ್ತುನಾಲ್ಕು ತತ್ತ್ವಗಳಲ್ಲಿ **ಅನಿರುದ್ಧಾದಿರೂಪದಿ**= ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವ ಎಂಬ ಈ ನಾಲ್ಕು ರೂಪಗಳಿಂದ **ವಿತತನಾಗಿದ್ದು**=ವ್ಯಾಪ್ತನಾಗಿದ್ದು **ಅಖಿಳ ಜೀವರ**=ಸಮಸ್ತ ಜೀವರ **ಸಂಹನನದೊಳಗೆ**=ದೇಹದೊಳಗೆ (ನಾಶವಾಗುವುದರಿಂದ ಈ ದೇಹಕ್ಕೆ "ಸಂಹನನ"–ಎನ್ನುವರು) **ಪ್ರತತಿಯುಂದದಿ**=ಬಳ್ಳಿಯಂತೆ **ಸುತ್ತಿಸುತ್ತುತ**=ಸುತ್ತಲೂ ಸುತ್ತಿಕೊಂಡು ಸಂಚರಿಸುತ್ತ **ಪಿತೃಗಳಿಗೆ**=ಅವರವರ ಪಿತೃ, ಪಿತಾಮಹ, ಪ್ರಪಿತಾಮಹರೆಂಬ ಪಿತೃಗಳಿಗೆ **ತರ್ಪಕನೆನಿಸಿಕೊಂಡು**=ತೃಪ್ತಿಪಡಿಸುವವನು ಎಂದು ಕರೆಯಿಸಿಕೊಂಡು **ಅತುಳಮಹಿಮನು**=ಅಸದೃಶವಾದ ಮಹಿಮಾ ಸಂಪನ್ನನು **ಷಣ್ಣವತಿನಾಮದಲಿ**=೯೬ ಸಂಖ್ಯಾಕವಾದ ಶ್ರಾದ್ಧಗಳ ಹೆಸರಿನಿಂದ ವಾಚ್ಯನಾಗಿದ್ದು **ನೆಲೆಸಿಹನು**=ವಾಸವಾಗಿದ್ದಾನೆ. ||೨೨||

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :–

ಹಿಂದಿನ ಶ್ಲೋಕದಲ್ಲಿ ದೇಹತತ್ವ ತದಂತರ್ಗತ ರೂಪಗಳು ಹೇಳಲ್ಪಟ್ಟಿತು. ಈ ಶ್ಲೋಕದಲ್ಲಿ ಆಯಾ ತತ್ವಾಂತರ್ಗತ ಪಿತೃಗಳಿಗೆ ತೃಪ್ತಿಗೆ ಕಾರಣವಾದ ರೂಪಗಳು ಎಷ್ಟು, ಆಯಾ ರೂಪಗಳು ದಾವದು, ಆ ರೂಪಗಳಿಗೆ ಆವಾಸ ಎಲ್ಲಿ? ಈ ವಿವರಗಳನ್ನು ಹೇಳುತ್ತಾರೆ.

ಚತುರವಿಂಶತಿ ತತ್ವದೊಳು–ಇಪ್ಪತ್ತು ನಾಲ್ಕು ತತ್ತ್ವದಲ್ಲಿ, ಶ್ರೀಪತಿಯು–ಲಕ್ಷ್ಮೀಪತಿಯಾದ ಪರಮಾತ್ಮನು, ಅನಿರುದ್ಧಾದಿ ರೂಪದಿ-ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವ ಈ ನಾಲ್ಕು ರೂಪದಿಂದ ಪ್ರತ್ಯೇಕವಾಗಿ, ವಿತತವಾಗಿದ್ದು–ವ್ಯಾಪ್ತನಾಗಿದ್ದು, ಅಖಿಳ ಜೀವರ-ಸಮಸ್ತ ಜೀವರ, ಸಂಹನನದೊಳಗೆ–ದೇಹದೊಳಗೆ, ಪ್ರತತಿಯುಂದದಿ–

ಚಿತ್ರದೋಪಾದಿಯಲ್ಲಿ, ಸುತ್ತಿಸುತ್ತುತ–ಸುತ್ತಿಕೊಂಡು ಸಂಚಾರಮಾಡುತಾ ಪಿತೃಗಳಿಗೆ–ತನ್ನ ಪಿತೃಗಳಾದ ಪಿತೃ ಪಿತಾಮಹಾದಿ ಪಿತೃಗಳಿಗೆ, ತರ್ಪಕನೆನಿಸಿ ಕೊಂಡು–ತೃಪ್ತಿಪಡಿಸತಕ್ಕವನೆಂದು ಎನಿಸಿಕೊಂಡು (ಅಂದರೆ, ಈ ಪಾಂಚ ಭೌತಿಕ ಸ್ಥೂಲಶರೀರ ತನ್ನ ಮಾತಾಪಿತೃಗಳ ಅಂಶವಾದ ಪ್ರಯುಕ್ತ, ಈ ಶರೀರದಿಂದ ಮಾಡಲ್ಪಟ್ಟ ಕಾರ್ಯಾಕಾರ್ಯಗಳಲ್ಲಿ ಪಿತೃಗಳಿಗೆ ಭಾಗ ಇರೋ ದಾಗಿ ಅದೆ. ಮಾತಾ ಪಿತೃಗಳ ದೇಹಾಂಶ ಪ್ರಯುಕ್ತರಾಗಿ, ಇದರ ವಿಸ್ತಾರ ಹಿಂದೆ ಹೇಳಿದೆ. ಭೋಜನರಸವಿಭಾಗ ಸಂಧಿಯಾದ ನಾಲ್ಕನೇ ಸಂಧಿಯಲ್ಲಿ ಹೇಳಿದೆ.) ಅತುಳ ಮಹಿಮನು–ಅಸದೃಶ ಮಹಾಮಹಿಮನು. ಷಣ್ಣವತಿ–ನಾಮದಲಿ–ತೊಂಭತ್ತಾರು ನಾಮದಿಂದ, ಅಂದರೆ, ೨೪ ತತ್ತ್ವಗಳಲ್ಲಿ ಒಂದೊಂದರಲ್ಲಿ ಅನಿರುದ್ಧಾದಿ ನಾಲ್ಕು ರೂಪದ ವ್ಯಾರಿಗೆ. ೨೪ ರನ್ನ ೪ ರಿಂದ ಗುಣಿಸಿದರೆ, ೯೬ ಆಗುತ್ತದೆ. ಷಣ್ಣವತಿ ಶ್ರಾದ್ಧಗಳಿಗೆ ದಾವನಾಮವೋ, ಆಯಾನಾಮದಿಂದಲೂ, ಅನಿರುದ್ಧಾದಿನಾಮದಿಂದಲೂ, ನೆಲಸಿಹನು–ಆವಾಸವಾಗಿದ್ದು, ಅವರ ಪಿತೃಗಳಿಗೆ ತೃಪ್ತಿಪಡಿಸತಾನೆ ಎಂತ ತಾತ್ಪರ್ಯ. ||೨೨||

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ :–

ಮೇಲಿನ ಪದ್ಯಗಳಿಂದ ೨೪ ತತ್ತ್ವಗಳಲ್ಲಿ, ಒಂದೊಂದು ತತ್ವದಲ್ಲಿಯೂ ಇರುವ ವಿಶೇಷವಾದ ಭಗವದ್ರೂಪಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಹೇಳಿ, ಈ ಪದ್ಯದಿಂದ ೨೪ ತತ್ವಗಳಲ್ಲಿ ಒಂದೊಂದು ತತ್ವದೊಳು ಅನಿರುದ್ಧಾದಿ ೪ ರೂಪಗಳಂತೆ, ಒಟ್ಟು ೯೬ ರೂಪಗಳಿಂದಿದ್ದು. ಶ್ರೀ ಪರಮಾತ್ಮನು ಪಿತೃಗಳನ್ನು ತೃಪ್ತಿಪಡಿಸುವನೆಂದು ಹೇಳುತ್ತಾರೆ.

ಸಮರಹಿತವಾದ ಮಹಾಮಹಿಮೆಯುಳ್ಳ ಶ್ರೀ ಲಕ್ಷ್ಮೀಪತಿಯೆಂದು ಹೇಳುವರು. ಅತುಳ ಮಹಿಮನೆಂಬ ಪದಕ್ಕೆ ಶ್ರೀಪತಿ ಎಂಬ ವಿಶೇಷಣವು ಹೇತುಗರ್ಭವಾಗಿರುವುದು. ಅಂದರೆ, ಶ್ರೀಪತಿಯು ಲಕ್ಷ್ಮೀಪತಿಯಾದುದ ರಿಂದಲೇ, ಅತುಳಮಹಿಮನೆಂದರ್ಥ. ಹೇಗೆಂದರೆ, **ದ್ವಾದಶಸ್ತೋತ್ರ ೭**

ನೆಯ ಅಧ್ಯಾಯದಲ್ಲಿ ಶ್ರೀಲಕ್ಷ್ಮಿಯ ಮಹಿಮೆಯು ವರ್ಣಿತವಾಗಿದೆ. ಅದರಲ್ಲಿ ಒಂದು ಶ್ಲೋಕವನ್ನು ಜ್ಞಾಪಕಾರ್ಥವಾಗಿ ಸೂಚಿಸುತ್ತೇವೆ : —

**"ಬ್ರಹ್ಮೇಶ ಶಕ್ರ ರವಿ ಧರ್ಮ ಶಶಾಂಕಪೂರ್ವ ಗೀರ್ವಾಣ ಸಂತತಿರಿಯಂಯದಪಾಂಗಲೇಶಮ್ । ಆದಿತ್ಯ ವಿಶ್ವ ವಿಜಯಂ ವಿದಧಾತ್ಯಚಿಂತ್ಯ ಶ್ರೀಯತ್ಕಟಾಕ್ಷಬಲವತ್ಯಜಿತಂ ನಮಾಮಿ" ॥**

–ಎಂದರೆ, "ಬ್ರಹ್ಮ, ರುದ್ರ, ಇಂದ್ರ, ಸೂರ್ಯ, ಯಮ, ಚಂದ್ರ ಮೊದಲಾದ ದೇವತಾಗಣವು ಯಾವ ಶ್ರೀಲಕ್ಷ್ಮಿಯ ಅತ್ಯಲ್ಪವಾದ ಕಡೆಗಣ್ಣ ನೋಟದ ಪ್ರಸಾದದಿಂದಲೇ ಈ ಪ್ರಪಂಚದಲ್ಲಿ ವಿಜಯವನ್ನು ಹೊಂದುತ್ತಿರುವರೋ, ಅಂತಹ ಲಕ್ಷ್ಮಿಯು ಯಾವ ಶ್ರೀ ಪರಮಾತ್ಮನ ಕಟಾಕ್ಷದಿಂದ ಬಲವುಳ್ಳವಳಾಗಿರುವಳೋ,ಅಂತಹ ಅಜಿತನಾಮಕ ಶ್ರೀ ಪರಮಾತ್ಮನನ್ನು ನಮಸ್ಕರಿಸುತ್ತೇನೆ." –ಎಂದು ಶ್ರೀ ಮದಾಚಾರ್ಯರು ಹೇಳಿರುವರು. ಅಲ್ಲದೆ **"ಯಂ ಕಾಮಯೇ ತಂ ತಂ"**–ಎಂಬ **ಶ್ರುತಿ**ಯು ಲಕ್ಷ್ಮೀದೇವಿಯ ಮಹಿಮೆಯನ್ನು ಸಾರುವುದು. ಇಂತಹ ಲಕ್ಷ್ಮಿಯುಪತಿ ಎಂದಮೇಲೆ, ಪರಮಾತ್ಮನಿಗೆ ಸಮವಾದ ಮಹಿಮೆಯುಳ್ಳವರಾರೆಂದು ಹೇಳಬೇಕಾದುದೇನು? ಆದ್ದರಿಂದಲೇ ದಾಸರಾಯರು "ಶ್ರೀಪತಿ" –ಶಬ್ದವನ್ನು "ಅತುಲ ಮಹಿಮ" ನೆಂಬ ಶಬ್ದದಿಂದ ಸ್ಥಿರಪಡಿಸಿದರು. ||೨೨||

## (೪) ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ)

"ಚತುರೇತಿ" || "ಏಕಾದಶಶತಾತ್ಮಾಯಂ ದ್ವಿಪಂಚಾಶತ್ ಸ್ವರೂಪಕಃ॥ ಸಾತ್ವಿಕೇಷ್ವಜಮುಖ್ಯೇಷು"–ಇತಿ ಚ ॥

**ಕನ್ನಡಾರ್ಥ:**

"ಚತುರವಿಂಶತಿ"–ಎಂಬ ಪದ್ಯದಲ್ಲಿ ಹೇಳಿದ ಭಗವಂತನ ೧೧೫೨ ರೂಪಗಳ ವಿಷಯದಲ್ಲಿ ಪ್ರಮಾಣವನ್ನು ಉದಾಹರಿಸುತ್ತಾರೆ. "೧೧೫೨ ರೂಪ

ಗಳಿಂದ ಸಾತ್ವಿಕರಾದ ಅಜ (ಚತುರ್ಮುಖ ಬ್ರಹ್ಮದೇವರು) ಮುಂತಾದವರಲ್ಲಿ ಶ್ರೀಹರಿಯು ಸಂಸ್ಥಿತನಾಗಿರುವನು"-ಎಂದು ಶ್ಲೋಕಾಭಿಪ್ರಾಯ.

**೧೧೫೨ ರೂಪಗಳ ವಿವರ : —**

| | | | |
|---|---|---|---|
| (೧) | ಓಂಕಾರ ಪ್ರತಿಪಾದ್ಯ | = | ೧ ರೂಪ. |
| (೨) | ವಿಶ್ವಾದಿ | = | ೧೦೦೦ ರೂಪ. |
| (೩) | ನಾರಾಯಣಾದಿ | = | ೧೦೦ ರೂಪ. |
| (೪) | ಅಜಾದಿ | = | ೫೧ ರೂಪ. |
| | | ಒಟ್ಟು = | ೧೧೫೨ ರೂಪಗಳು. |

॥೨೨॥

## (೪) "ಗುರುಹೃದಯಪ್ರಕಾಶಿಕೆ" ವ್ಯಾಖ್ಯಾನ :-

ಇಪ್ಪತ್ತುನಾಲ್ಕು ತತ್ತ್ವಗಳಲ್ಲಿ, ಲಕ್ಷ್ಮೀಪತಿ ಅನಿರುದ್ಧಾದಿರೂಪಗಳಿಂದ, ವೃತತಿ-ಎಂಬ ಬಳ್ಳಿಯು ಸುತ್ತಲೂ ವ್ಯಾಪಿಸಿರುವಂತೆ ವ್ಯಾಪಿಸಿ, ಸರ್ವಜೀವರ ಸಂಹನನವೆಂಬ ದೇಹದಲ್ಲಿದ್ದು, **ಷಣ್ಣವತಿ** ಎಂಬ ೯೬ ಹೆಸರುಗಳಿಂದ. ಎಂದರೆ ಅಮಾವಾಸ್ಯಾ ೧೨, ಮನ್ವಾದಿಗಳು ೧೪. ಸಂಕ್ರಮಣ ೧೨, ಕಾರ್ತೀಕ, ಮಾಘ, ಭಾದ್ರಪದ, ವೈಶಾಖ ಈ ನಾಲ್ಕು ತಿಂಗಳಲ್ಲಿ ಹುಟ್ಟಿದ ಯುಗಾದಿಗಳು ೪, ವೈಧೃತಿಗಳು ೧೨, ವ್ಯತೀಪಾತಗಳು ೧೩, ಭಾದ್ರಪದ ಬಹುಳ ಮಹಾಲಯ ೧೬, ಮಾರ್ಗಶಿರ, ಪುಷ್ಯ, ಮಾಘ, ಫಾಲ್ಗುಣ-ಈ ನಾಲ್ಕು ತಿಂಗಳ ಕೃಷ್ಣಸಪ್ತಮಿ, ಅಷ್ಟಮಿ,ನವಮಿ ಹೀಗೆ ಮೂರು ದಿನ ಪ್ರಕಾರ ಬರುವ ೧೨ ತ್ರಿಸ್ರೋಷ್ಟಕಗಳು-ಇವೆಲ್ಲಾ ಒಟ್ಟು ಸೇರಿ ೯೬ (ಷಣ್ಣವತಿ) ಶ್ರಾದ್ಧ ನಾಮಕನಾಗಿದ್ದು, ಪಿತೃದೇವತೆಗಳಿಗೆ ತೃಪ್ತಿಕೊಡುತ್ತಾ ಇರುವನು. ಅಸದೃಶ ಮಹಿಮನು. ॥೨೨॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಈಗ ಸಮಗ್ರರೂಪದಿಂದ ಇಪ್ಪತ್ತುನಾಲ್ಕು ತತ್ತ್ವಗಳಲ್ಲಿ ಅನಿರುದ್ಧಾದಿ ರೂಪಚತುಷ್ಟಯಗಳಿಂದ ಪ್ರವಿಷ್ಟನಾಗಿದ್ದು, ಸಮಸ್ತ ಜೀವರ ಸ್ಥೂಲ ಶರೀರದಲ್ಲಿ ವ್ಯಾಪ್ತನಾಗಿ, ಸಂಚರಿಸುತ್ತಾ ೯೬ ರೂಪಗಳಿಂದ **ಷಣ್ಣವತಿ** ನಾಮಕನಾಗಿ ಶ್ರಾದ್ಧಕರ್ಮ ನಿಯಾಮಕ ಶ್ರೀ ಪರಮಾತ್ಮನು ಪಿತೃದೇವತೆಗಳಿಗೆ ತೃಪ್ತಿಪಡಿಸುವ ವಿವರಗಳನ್ನು ತಿಳಿಸುತ್ತಾರೆ. ಪ್ರಸಕ್ತ ೨೨ ನೆಯ ಈ ಪದ್ಯದಿಂದ.

(೧) ತತ್ತ್ವಗಳ ಸಂಖ್ಯೆ=೨೪.

(೨) ತತ್ವಾಂತರ್ಗತ ಕೇಶವಾದಿ ಭಗವದ್ರೂಪಗಳು=೨೪.

(೩) ಅನಿರುದ್ಧಾದಿರೂಪಚತುಷ್ಟಯಗಳು=೪.

ಪ್ರತಿ ತತ್ತ್ವದಲ್ಲಿಯೂ ನಾಲ್ಕು ರೂಪಗಳಂತೆ, ಗುಣಿಸಿದಾಗ, ೨೪ × ೪ =೯೬ (ತೊಂಭತ್ತಾರು) ಭಗವದ್ರೂಪಗಳಾಗುವುವು.

ಇದೇ ಷಟ್ನವತಿ, ಅಂದರೆ ತೊಂಭತ್ತಾರು ಸಂಖ್ಯಾಕವಾದ **ಷಣ್ಣವತಿ** ಶಬ್ದವಾಚ್ಯ ಭಗವದ್ರೂಪಗಳು.

ಈ ಸ್ಥೂಲ ಶರೀರವು ಪಿಂಡಾಂಡ ರೂಪದಲ್ಲಿದ್ದು, ೨೪ ತತ್ತ್ವಗಳಿಂದ ನಿರ್ಮಿತವಾಗಿದೆ. ಮೂಲರೂಪಿ ಶ್ರೀಮನ್ನಾರಾಯಣನಿಂದ ಪ್ರಕಟವಾದ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವ ಎಂಬ ಸ್ವಾಭಿನ್ನ ರೂಪಚತುಷ್ಟಯಗಳು. ಇಡೀ ಶರೀರದಲ್ಲಿ ಓತಪ್ರೋತವಾಗಿ ವ್ಯಾಪ್ತವಾಗಿದ್ದು, ಆಯಾಯಾ ತತ್ತ್ವಪತಿ ದೇವತೆಗಳ ದ್ವಾರಾ, ತತ್ತ್ವಕಾರ್ಯಗಳೂ ಬಿಂಬಕ್ರಿಯಾದ್ವಾರಾ ನಡೆಯುತ್ತವೆ.

ಇದರಿಂದ ೨೪ ತತ್ತ್ವಗಳು × ಅನಿರುದ್ಧಾದಿ ರೂಪಚತುಷ್ಟಯಗಳು = ತೊಂಭತ್ತಾರು ರೂಪಗಳಿಂದ ಬಿಂಬರೂಪಿ ಶ್ರೀಮನ್ನಾರಾಯಣನು ಷಣ್ಣವತಿ ಎಂಬ ಹೆಸರಿನಿಂದ (ಷಟ್ = ೬, ನವತಿ = ೯೦. ಆಲ್ಲಿಗೆ ಷಣ್ಣವತಿ = ೯೦ + ೬ ೯೬ ಭಗವದ್ರೂಪಗಳು) ಪಿತೃ, ಪಿತಾಮಹ ಮತ್ತು ಪ್ರಪಿತಾಮಹ (ಅಂತೆಯೇ ಮಾತ್ರ ಸಂಬಂಧ) ಪಿತೃದೇವತೆಗಳಿಗೆ ತೃಪ್ತಿಯನ್ನು ಕೊಡುತ್ತಾ ಅಪಾರ ಮಹಿಮಾಸಂಪನ್ನನಾದ ಶ್ರೀ ಪರಮಾಪ್ತನು ಈ ಶರೀರಗತನಾಗಿ, ವ್ಯಾಪ್ತರೂಪದಿಂದಿದ್ದು, ತತ್ತ್ವಗಳಲ್ಲಿ, ಇಂದ್ರಿಯಗಳಲ್ಲಿ, ಇಂದ್ರಿಯಾಭಿಮಾನಿ ದೇವತೆಗಳಲ್ಲಿ ಬಳ್ಳಿಯಂತೆ ಸುತ್ತುತ್ತಾ, ಆವಾಸವಾಗಿದ್ದಾನೆ ಎಂದು ಈ ಪದ್ಯದ ಭಾವಾರ್ಥ.

ನಮ್ಮ ಶರೀರವು ಮಾತಾಪಿತೃಗಳ ಶುಕ್ಲ ಶೋಣಿತ ಸಂಬಂಧದಿಂದ ನಿರ್ಮಿತವಾಗಿದೆ. ಹಿಂದೆ ಪಂಚಾಗ್ನಿಗಳ ವಿವರಗಳಂತೆ, ಪುರುಷಾಗ್ನಿ ಮತ್ತು ಯೋಷಾಗ್ನಿ ಎಂಬ ಕೊನೆಯ ಎರಡು ಅಧಿಷ್ಠಾನಗಳಲ್ಲಿ, ಯಜ್ಞಕ್ರಿಯಾ ವಿಶೇಷಗಳನ್ನು ತಿಳಿಸಿರುತ್ತಾರೆ. ವರ್ಷರೂಪದಲ್ಲಿ ಸುರಿಯುವ ಮಳೆಯ ದ್ವಾರಾ, ಜೀವನನ್ನು ವ್ರೀಹ್ಯಾದಿ ಧಾನ್ಯಗಳಲ್ಲಿ ದೇವತೆಗಳು ಸೇರಿಸುವರು. ಪುರುಷನು (ತಂದೆಯು) ಭೋಜನಮಾಡುವಾಗ, ಅನ್ನದ್ವಾರಾ ಜೀವನು ತಂದೆಯ ರೇತಸ್ಸನ್ನು ಸೇರುವನು. ಅನಂತರ ಪುರುಷ ಸ್ತ್ರೀ ಸಂಬಂಧದಿಂದ ತಂದೆಯ ರೇತೋಗತನಾದ ಜೀವನನ್ನು ಯೋಷಾಗ್ನಿಯಲ್ಲಿ ದೇವತೆಗಳು ಹೋಮಿಸುವರು. ಅದರಿಂದ ಮಾತೃಗರ್ಭವನ್ನು ಸೇರಿ ಶಿಶುವು ಜನಿಸುವುದು. ಇಂತು, ಪಂಚಾಗ್ನಿಗಳ ದ್ವಾರವೇ ಜೀವನ ಸ್ಥೂಲದೇಹದ ಉತ್ಪತ್ತಿ. ಆಗ ಪಾಂಚಭೌತಿಕವಾದ ಈ ಶರೀರದ ನಿರ್ಮಾಣ. ಈ ಭೂತ ಪಂಚಕಗಳಲ್ಲಿ ಸೂಕ್ಷ್ಮರೂಪದಿಂದ ಪಂಚತನ್ಮಾತ್ರಾಗುಣಗಳು, ಪಂಚಕರ್ಮೇಂದ್ರಿಯಗಳು, ಪಂಚಜ್ಞಾನೇಂದ್ರಿಯಗಳು, ಮನಸ್ತತ್ತ್ವ, ಅಹಂಕಾರತತ್ತ್ವ, ಮಹತತ್ತ್ವ ಮತ್ತು ಅವ್ಯಕ್ತತತ್ತ್ವ ಎಂಬ ೨೦ ತತ್ತ್ವಗಳೂ ಸೇರಿ ಒಟ್ಟಿನಲ್ಲಿ ೨೪ ತತ್ತ್ವಗಳಿಂದ ಈ ಸ್ಥೂಲದೇಹವು ನಿರ್ಮಿತವಾಗಿದೆ. ಪ್ರತಿ ತತ್ತ್ವವು ಜಡವಾದುದರಿಂದ ಅದನ್ನು ಕ್ರಿಯಾತ್ಮಕವನ್ನಾಗಿ ಮಾಡಲು ಶ್ರೀ ಪರಮಾತ್ಮನು ೨೪ ತತ್ತ್ವಾಭಿಮಾನಿ ದೇವತೆಗಳನ್ನು ನಿಯಮಿಸಿರುವನು. ಅವರಿಗೆ ಮುಖ್ಯ

ನಿಯಾಮಕರಾಗಿ ಶ್ರೀ ಪ್ರಾಣದೇವರು. ಆ ವಾಯ್ವಂತರ್ಗತನಾಗಿ ರಮಾರಮಣನಾದ ಬಿಂಬರೂಪಿ ಶ್ರೀ ಪರಮಾತ್ಮನು ಅವರಲ್ಲಿದ್ದು, ತತ್ತ್ವಕಾರ್ಯಗಳನ್ನು ಬಿಂಬಕ್ರಿಯಾ ದ್ವಾರಾ ತಾನು ಮಾಡಿ, ತನ್ಮೂಲಕ ತತ್ತ್ವಾಭಿಮಾನಿಗಳ ದ್ವಾರಾಮಾಡಿಸಿ, ಈ ಸ್ಥೂಲದೇಹದಲ್ಲಿ ಪ್ರಕಾಶತೋ ವ್ಯಾಪ್ತನಾದ ಜೀವನಿಗೆ ಅನುಭವರೂಪದಲ್ಲಿ ತಂದುಕೊಡುವನು. ಈ ತತ್ತ್ವಕಾರ್ಯದ ಅನುಭವವು ಜೀವನಿಗೆ ಅವನ ಕರ್ಮಾನುಸಾರವಾಗಿ ನಡೆಯುವುದು. ಇದರಿಂದ ಜೀವನು ಪರಾಧೀನಕರ್ತನು. ಅವನಿಗೆ ಸ್ವತಂತ್ರ ಕರ್ತೃತ್ವವಿಲ್ಲ. ಬಿಂಬಾಧೀನವಾದ ಕರ್ತೃತ್ವ ಜೀವನದು.

ಇಪ್ಪತ್ತುನಾಲ್ಕು ತತ್ತ್ವಗಳು, ಅವುಗಳಿಗೆ ನಿಯಾಮಕರಾದ ದೇವತೆಗಳು, ಆ ದೇವತಾಂತರ್ಗತ ರಮಾರೂಪಗಳು ಮತ್ತು ಕೇಶವಾದಿ ಚತುರ್ವಿಂಶತಿ ಭಗವದ್ರೂಪಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ. ಹಿಂದಿನ ೧೮, ೧೯, ೨೦ ಮತ್ತು ೨೧ ನೆಯ ನಾಲ್ಕು ಪದ್ಯಗಳ ಸಮಗ್ರ ಸಾರಾಂಶವು ಈ ಪಟ್ಟಿಯಲ್ಲಿ ನಿರೂಪಿತವಾಗಿದೆ : —

## (೧) ಸೂಕ್ಷ್ಮತತ್ತ್ವಗಳು

| ಕ್ರಮ ಸಂಖ್ಯೆ | ತತ್ತ್ವಗಳು | ತತ್ತ್ವಾಭಿಮಾನಿಗಳು | ರಮಾ ರೂಪ | ಭಗವದ್ರೂಪ | ತತ್ತ್ವಕಾರ್ಯ |
|---|---|---|---|---|---|
| ೧ | ಅವ್ಯಕ್ತತತ್ತ್ವ | ಲಕ್ಷ್ಮೀ | ಶ್ರೀ | ಕೇಶವ | ತ್ರಿಗುಣಗಳವ್ಯಾಪಾರ (ಲಿಂಗಶರೀರ) |
| ೨ | ಮಹತತ್ತ್ವ | ಬ್ರಹ್ಮ, ವಾಯು, ಸರಸ್ವತೀ, ಭಾರತಿ | ಲಕ್ಷ್ಮೀ | ನಾರಾಯಣ | ಅನಿರುದ್ಧಶರೀರ |
| ೩ | ಅಹಂಕಾರತತ್ತ್ವ | ಗರುಡ, ಶೇಷ, ರುದ್ರ ಮತ್ತು ಅವರ ಪತ್ನಿಯರು | ಕಮಲಾ | ಮಾಧವ | ನಾನು, ನನ್ನದು ಎಂಬ ಬುದ್ಧ್ಯಾದಿ ಪಂಚಪ್ರವೃತ್ತಿಗಳು. |
| ೪ | ಮನಸ್ತತ್ತ್ವ | ಇಂದ್ರ, ಕಾಮ ತತ್ಪತ್ನಿಯರು | ಪದ್ಮಾ | ಗೋವಿಂದ | ಮನಸ್ಸಿನ ಪ್ರವೃತ್ತಿಗಳ ಕಾರ್ಯ |

## (೨) ಪಂಚಜ್ಞಾನೇಂದ್ರಿಯಗಳು

| | | | | | |
|---|---|---|---|---|---|
| ೫ | ಕರ್ಣದ್ವರ್ಯರು | ಚಂದ್ರ (ದಿಗ್ದೇವತೆಗಳು) | ಪದ್ಮಾ | ವಿಷ್ಣು | ಶ್ರವಣಕಾರ್ಯ. |
| ೬ | ನೇತ್ರದ್ವಯಗಳು | ಸೂರ್ಯ | ಕಮಲಾ | ಮಧುಸೂದನ | ದರ್ಶನಕ್ರಿಯೆ |
| ೭ | ತ್ವಗಿಂದ್ರಿಯ | ಅಹಂಕಾರಿಕಪ್ರಾಣ | ರಮಾ | ತ್ರಿವಿಕ್ರಮ | ಸ್ಪರ್ಶಜ್ಞಾನಕಾರ್ಯ |
| ೮ | ನಾಲಿಗೆ | ವರುಣ | ವೃಷಾಕಪಿ | ವಾಮನ | ರುಚಿಯ ಅನುಭವ |
| ೯ | ಮೂಗಿನಹೊಳ್ಳೆಗಳು | ಅಶ್ವಿನೀ ದೇವತೆಗಳು | ಪ್ರಕೃತಿ | ಶ್ರೀಧರ | ವಾಸನೆಯನ್ನು ಗ್ರಹಿಸುವುದು |

## (೩) ಪಂಚಕರ್ಮೇಂದ್ರಿಯಗಳು

| | | | | | |
|---|---|---|---|---|---|
| ೧೦ | ಬಾಯಿ (ವದನ) | ಅಗ್ನಿ | ಬುದ್ಧಿ | ಹೃಷಿಕೇಶ | ವಾಗ್ವ್ಯಾಪಾರ |
| ೧೧ | ಪಾಣಿ (ಕೈಗಳು) | ದಕ್ಷ | ಯಜ್ಞ | ಪದ್ಮನಾಭ | ದಾನ-ಸ್ವೀಕಾರ |
| ೧೨ | ಪಾದ (ಕಾಲುಗಳು) | ಜಯಂತ | ಇಂದಿರಾ | ದಾಮೋದರ | ಗಮನಾಗಮನಕ್ರಿಯೆ |
| ೧೩ | ಪಾಯು(ಮಲ ವಿಸರ್ಜನಾಂಗ) | ಮಿತ್ರನಾಮಕ ಸೂರ್ಯ | ಹಿರಣ್ಯಾ | ಸಂಕರ್ಷಣ | ಮಲವಿಸರ್ಜನಕಾರ್ಯ |
| ೧೪ | ಉಪಸ್ಥ | ಸ್ವಾಯಂ ಭುವಮನು | ಹರಿಣೀ | ವಾಸುದೇವ | ಮೂತ್ರ ಮತ್ತು ರೇತೋವಿಸರ್ಜನಾ ಕಾರ್ಯ |

## (೪) ಪಂಚತನ್ಮಾತ್ರಾಗುಣಗಳು

| | | | | | |
|---|---|---|---|---|---|
| ೧೫ | ಶಬ್ದ | ಪ್ರಾಣ | ಸತ್ಯಾ | ಪ್ರದ್ಯುಮ್ನ | ಕರ್ಣಕ್ಕೆವಿಷಯವು |
| ೧೬ | ಸ್ಪರ್ಶ | ಅಪಾನ | ನಿತ್ಯಾ | ಅನಿರುದ್ಧ | ತ್ವಗಿಂದ್ರಿಯಕ್ಕೆ ವಿಷಯ |
| ೧೭ | ರೂಪ | ವ್ಯಾನ | ಆನಂದಿನೀ | ಪುರುಷೋತ್ತಮ | ನೇತ್ರೇಂದ್ರಿಯಕ್ಕೆವಿಷಯ |
| ೧೮ | ರಸ | ಉದಾನ | ಅಸೌಜ್ಞಾ | ಅಧೋಕ್ಷಜ | ರಸನೇಂದ್ರಿಯಕ್ಕೆವಿಷಯ |
| ೧೯ | ಗಂಧ | ಸಮಾನ | ಸುಖಾ | ನಾರಸಿಂಹ | ನಾಸಿಕೇಂದ್ರಿಯಕ್ಕೆವಿಷಯ |

## (ಜ) ಪಂಚಭೂತಗಳು

| | | | | | |
|---|---|---|---|---|---|
| ೨೦ | ಆಕಾಶ | ಗಣಪತಿ | ಸುಗಂಧಿ | ಅಚ್ಯುತ | ಕರ್ಣದ್ವಾರಾಶಬ್ದಗ್ರಹಣ |
| ೨೧ | ವಾಯು | ಪ್ರವಹವಾಯು | ಸುಂದರೀ | ಜನಾರ್ದನ | ತ್ವಗಿಂದ್ರಿಯದ್ವಾರಾಸ್ಪರ್ಶ |
| ೨೨ | ತೇಜಸ್ಸು | ಅಗ್ನಿ | ವಿದ್ಯಾ | ಉಪೇಂದ್ರ (ಪರಶುರಾಮ) | ನೇತ್ರೇಂದ್ರಿಯದ್ವಾರಾ ದರ್ಶನಕಾರ್ಯ |
| ೨೩ | ಅಪ್ಪು | ವರುಣ | ಸುಶೀಲಾ | ಶ್ರೀಹರಿ | ರಸನೇಂದ್ರಿಯದ್ವಾರಾ ರುಚಿಯ ಅನುಭವ |
| ೨೪ | ಪೃಥ್ವೀ | ಧರಣಿಶನೈಶ್ಚರ | ಸುಲಕ್ಷಣಾ | ಶ್ರೀಕೃಷ್ಣ | ನಾಸಿಕೇಂದ್ರಿಯದ್ವಾರಾ ಗಂಧಾಸ್ವಾದನೆ |

# ಪದ್ಯ (೨೩)

ಮೂಲ :

ಚತುರವಿಂಶತಿ ತತ್ತ್ವದೊಳು ತ ।
ತ್ಪತಿಗಳೆನಿಸುವ ಬ್ರಹ್ಮಮುಖ ದೇ ।
ವತೆಗಳೊಳು ಹನ್ನೊಂದು ನೂರೈವತ್ತೆರಡುರೂಪ ॥
ವಿತತನಾಗಿದ್ದೆಲ್ಲ ಜೀವರ ।
ಜತವ ಮಾಡುವಗೋಸುಗ ಜಗ ।
ತ್ಪತಿಗೆ ಏನಾದರು ಪ್ರಯೋಜನವಿಲ್ಲವಿದರಿಂದ ॥ ॥೨೩॥

ಅವತರಣಿಕೆ :

ಸರ್ವ ನಿಯಾಮಕನಾದ ಶ್ರೀ ಪರಮಾತ್ಮನು ಇಪ್ಪತ್ತುನಾಲ್ಕು ತತ್ತ್ವಗಳಲ್ಲಿಯೂ ಮತ್ತು ಆ ತತ್ತ್ವಗಳಿಗೆ ಅಭಿಮಾನಿಗಳಾದ ತತ್ವೇಶರಲ್ಲಿಯೂ, ತಾನು ೧೧೫೨ ರೂಪಗಳಿಂದ ವ್ಯಾಪಿಸಿದ್ದು ಸಮಸ್ತ ಜೀವರಾಶಿಯನ್ನು ಸಂರಕ್ಷಿತ್ತಿರುವನು. ಇಂತು ಜಗತ್ತಿನ ಸೃಷ್ಟಿ, ರಕ್ಷಣೆ ಮತ್ತು ಲಯಾದಿ ಕಾರ್ಯಗಳನ್ನೂ, ಸೃಷ್ಟವಾದ ಸಮಗ್ರ ಜಗತ್ತು ಮತ್ತು ಸರ್ವಚೇತನರನ್ನೂ ಸಂರಕ್ಷಿಸುತ್ತಿರುವ, ಮಹಾ ವ್ಯಾಪಾರವಿಶೇಷಗಳನ್ನು ನಿರಂತರದಲ್ಲಿಯೂ ಮಾಡಿಸುತ್ತಿರುವ ಸರ್ವಶಕ್ತನಾದ ಆ ಶ್ರೀ ಪರಮಾತ್ಮನಿಗೆ ಇದರಿಂದ ಏನೇನೂ ಪ್ರಯೋಜನವಿಲ್ಲ. ಅವನು ಸ್ವರಮಣನು. ಆಪ್ತಕಾಮನು. ಸ್ವಪ್ರಯೋಜನರಹಿತನು. ಜೀವರ ಉದ್ಧಾರಕ್ಕಾಗಿ ನಿರಾಯಾಸವಾಗಿ ಈ ವ್ಯಾಪಾರಗಳನ್ನು ಮಾಡುತ್ತಿರುವ ಇಂತಹ ಪರಮಾದ್ಭುತಚರಿತನಾದ ಶ್ರೀ ಪರಮಾತ್ಮನು ಅದೆಂತಹ ಕರುಣಾಳು ! ಎಂದು ಕೊಂಡಾಡುತ್ತಾರೆ. **"ಚತುರವಿಂಶತಿ ತತ್ತ್ವದೊಳು"** –ಎಂಬ ಪ್ರಸಕ್ತ ಸಂಧಿಗತ ೨೩ ನೆಯ ಈಪದ್ಯದಿಂದ. ॥೨೩॥

**ಪ್ರತಿಪದಾರ್ಥ :—**

**ಚತುರವಿಂಶತಿ ತತ್ತ್ವದೊಳು** = ಜೀವರ ಸ್ಥೂಲದೇಹಗತ ಇಪ್ಪತ್ತು

ನಾಲ್ಕು ತತ್ತ್ವಗಳಲ್ಲಿ, **ತತ್ಪತಿಗಳೆನಿಸುವ**= ಆಯಾಯಾ ತತ್ತ್ವಗಳಿಗೆ ಅಭಿಮಾನಿಗಳು ಎಂದು ಕರೆಸತಕ್ಕ, **ಬ್ರಹ್ಮಮುಖ**= ಚತುರ್ಮುಖ ಬ್ರಹ್ಮದೇವರೇ ಮೊದಲಾದ, **ದೇವತೆಗಳೊಳು**= ದೇವತೆಗಳಲ್ಲಿ (ಅಂದರೆ ಚತುರ್ವಿಂಶತಿ ತತ್ವಾಭಿಮಾನಿ ದೇವತೆಗಳಲ್ಲಿ), **ಹನ್ನೊಂದು ನೂರೈವತ್ತೆರಡು ರೂಪ**= ೧೧೫೨ ರೂಪಗಳಿಂದ **ವಿತತನಾಗಿದ್ದು**= ವ್ಯಾಪ್ತನಾಗಿದ್ದು, **ಎಲ್ಲ ಜೀವರ**= ಸಕಲ ಜೀವರನ್ನೂ **ಜತನ ಮಾಡುವ ಗೋಸುಗ**= ಸಂರಕ್ಷಣೆ ಮಾಡುವುದೋಸ್ಕರವಾಗಿ, ವಿದ್ಯಮಾನನಾಗಿದ್ದಾನೆ. **ಇದರಿಂದ**= ಇಂತಹ ಸಂರಕ್ಷಣಾ ಕಾರ್ಯದಿಂದ **ಜಗತ್ಪತಿಗೆ**= ಜಗತ್ತಿಗೇ ಏಕೈಕ ಪ್ರಭುವಾದ ಶ್ರೀಪರಮಾತ್ಮನಿಗೆ, **ಏನಾದರೂ**= ಯಾವ ರೀತಿಯಿಂದಲಾದರೂ, **ಪ್ರಯೋಜನವಿಲ್ಲ**= ಸ್ವಪ್ರಯೋಜನವಿಲ್ಲ. ಅಂದರೆ, ಸರ್ವಶ್ರೇಷ್ಠನಾಗಿ, ಸ್ವಸಾಮರ್ಥ್ಯದಿಂದ ಸ್ವಪ್ರಯೋಜನ ರಹಿತನಾಗಿ, ಸ್ವರಮಣನಾಗಿ ಆಪ್ತನಾಗಿದ್ದಾನೆಂದು ತಾತ್ಪರ್ಯ. ॥೨೩॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಹಿಂದಿನ ಶ್ಲೋಕದಲ್ಲಿ ಇಪ್ಪತ್ತುನಾಲ್ಕು ರೂಪದಿಂದ ದೇಹಧಾರಿಗಳಾದವರ, ತೊಂಭತ್ತಾರು ರೂಪಗಳಿಂದ ಪಿತೃಗಳ ರಕ್ಷಣೆ ಮಾಡುತಾನೆಂತ ಹೇಳಲ್ಪಟ್ಟಿತು. ಈ ಶ್ಲೋಕದಲ್ಲಿ ಇಪ್ಪತ್ತುನಾಲಕು ರೂಪದಿಂದಲೇ ದೇಹಧಾರಿಗಳ ಸಂರಕ್ಷಣ. ಅಲ್ಲಿ ಇನ್ನೂ ಅಧಿಕರೂಪಗಳನ್ನು ಧರಿಸಿ ರಕ್ಷಿಸುತ್ತಾನೆ ಎಂತ ಹೇಳುತ್ತಾರೆ. ಈ ರೂಪಗಳು ಎಷ್ಟು ಅಂದರೆ, ಅದರ ವಿವರ : —

ಚತುರವಿಂಶತಿ ತತ್ತ್ವದೊಳು = ಜೀವಸ್ಥೂಲದೇಹಗತ ತತ್ತ್ವಗಳು ಇಪ್ಪತ್ನಾಲ್ಕು. ಈ ೨೪ ತತ್ತ್ವದಲ್ಲಿ ಸಂಸ್ಕೃಷ್ಟ ತತ್ತ್ವಗಳು ೨೪. ವ್ಯಾರಿಗೆ ಆಗತಕ್ಕ ತತ್ತ್ವಗಳು ೨೪ × ೨೪ = ೫೭೬, ಐನೂರ ಎಪ್ಪತ್ತಾರು ತತ್ತ್ವಗಳು. ಅಷ್ಟೇ ಸಂಖ್ಯಾ ಭಗವದ್ರೂಪಗಳು. ತತ್ವತ್ತಿಗಳೆಂದೆನಿಸುವ= ಆಯಾ ತತ್ತ್ವಗಳಿಗೆ ಅಭಿಮಾನಿಗಳು ಎಂತ ಕರೆಸತಕ್ಕ, ಬ್ರಹ್ಮಮುಖ= ಬ್ರಹ್ಮದೇವರೇ ಮೊದಲಾದ, ಚತುರವಿಂಶತಿ ದೇವತೆಗಳೊಳು= ೨೪ ತತ್ವಾಭಿಮಾನಿ ದೇವತೆ

ಗಳಲ್ಲಿ, ಸ್ಥೂಲದೇಹಗಳೊಳು, ಎಂದರೆ, ಒಬ್ಬೊಬ್ಬ ದೇವತೆಯಲ್ಲಿ, ಒಂದೊಂದು ತತ್ತ್ವದಲ್ಲಿ ಸಂಸೃಷ್ಟ ತತ್ತ್ವಗಳು ೨೪ ಮ್ಯಾರಿಗೆ ಆಗತಕ್ಕ ತತ್ತ್ವಗಳು ೫೭೬ ಎಂದು ದೇವತಾ ಶರೀರದಲ್ಲಿ ಅಷ್ಟೇ ಸಂಖ್ಯಾ ಭಗವದ್ರೂಪಗಳು ೫೭೬. ಜೀವಸ್ಥೂಲ ದೇಹಗತ ಭಗವದ್ರೂಪಗಳು ೫೭೬. ಒಟ್ಟು ದೇವತಾ ಶರೀರಗತ ಭಗವದ್ರೂಪಗಳು ೧೧೫೨. ಎಂದರೆ, ಹನ್ನೊಂದು ನೂರರವತ್ತೆರಡು=ಜೀವನಸ್ಥೂಲದೇಹಗತ, ಒಟ್ಟು ದೇವತಾ ಶರೀರಗತ, ಈ ಉಭಯಗತ ಭಗವದ್ರೂಪಗಳ ಸಂಖ್ಯೆ=೫೭೬+೫೭೬=೧೧೫೨ ಆಗುತ್ತದೆ. ಈ ರೀತ್ಯಾ ದೇವತಾ, ಮಾನುಷ ಪ್ರತಿ ಜೀವರಲ್ಲೂನೂ ೫೭೬ ಭಗವದ್ರೂಪಗಳ ಮ್ಯಾರಿಗೆ ತಿಳಿಯಬೇಕು.

ಒಂದೊಂದು ದೇವತೆಯಲ್ಲಿ ೫೭೬ ರ ಮ್ಯಾರಿಗೆ ೨೪ ದೇವತೆಗಳಲ್ಲಿ ಆಗೋ ಭಗವದ್ರೂಪಗಳು=೫೭೬ × ೨೪=೧೩೮೨೪. ಜೀವನ ದೇಹಗತ ಭಗವದ್ರೂಪಗಳು ಅಂತು, ೧೩೮೨೪+೫೭೬=೧೪೪೦೦. ಅಂದರೆ, ಹದಿನಾಲ್ಕು ಸಾವಿರದ ನಾಲ್ಕುನೂರು ಆಗುತ್ತದೆ. ಈ ಪ್ರಕಾರ, ಪ್ರತಿ ಜೀವರಲ್ಲಿ ವ್ಯಾಪ್ತನಾಗಿದ್ದು, ಜತನಮಾಡುವಗೋಸುಗ=ಸಂರಕ್ಷಣ ಮಾಡುವುದಕ್ಕೋಸ್ಕರ, ತತ್ತ್ವಾಭಿಮಾನಿಗಳಾದ ದೇವತೆಗಳ ದೇಹದಲ್ಲಿ ಪ್ರವೇಶಮಾಡಿ ಸೇವನಾಗಿ ಇದ್ದಾನೆ. ದೇವತೆಗಳಿಂದ ಸಹಿತವಾಗಿ ತಾನಿದ್ದು, ಸಂರಕ್ಷಣ ಮಾಡುತ್ತಾನೆ. ಜಗತ್ಪತಿಗೆ –ಈ ಪ್ರಕಾರ ಇರುವ ಪರಮಾತ್ಮಗೆ, ಇದರಿಂದ ಏನಾದರೂ ಈ ಜೀವರ ಸಂರಕ್ಷಣದಿಂದ ಸ್ವಪ್ರಯೋಜ ಏನಾದರೂ ಉಂಟೋ ಎಂದರೆ, ದಾವಮಾತ್ರವಾದರೂ ಪ್ರಯೋಜನವಿಲ್ಲ=ಸರ್ವಶ್ರೇಷ್ಠನಾಗಿ ಸ್ವಸಾಮರ್ಥ್ಯದಿಂದ ಇದ್ದಾನೆ ಎಂತ ತಾತ್ಪರ್ಯ.

**ವಿಶೇಷಾರ್ಥ :**

ಶ್ರೀ ಪರಮಾತ್ಮಗೆ ಸ್ವಪ್ರಯೋಜನವಿಲ್ಲ ಎಂತ ಹೇಳಿತು. ಆದರೆ ಪರಪ್ರಯೋಜನ ಏನಾದರೂ ಉಂಟೋ ಎಂದರೆ, ಜೀವರ ಉದ್ಧಾರ ಮಾಡೋಣವೇ. ಈ ಸೃಷ್ಟ್ಯಾದಿ ವ್ಯಾಪಾರಗಳಿಂದ ಯಾಕೆ ಇಲ್ಲಾ ಎಂದರೆ, ಪೂರ್ಣಕಾಮನಾದ ಪ್ರಯುಕ್ತ ಪ್ರಯೋಜನರಹಿತ ಎಂತ ತಾತ್ಪರ್ಯ. ಚತುರ್ವಿಂ

ಶತಿ ತತ್ತ್ವ ಎಂತ ಪ್ರಯೋಗವದೆ. ರಮಾಭಿಮನ್ಯಮಾನವಾದ ತ್ರಿಗುಣ ತತ್ತ್ವದ ಕೂಡ ಚತುರ್ವಿಂಶತಿ ತತ್ತ್ವಗಳು ಆಗುತ್ತದೆ. ಬ್ರಹ್ಮದೇವರ ದಾರಭ್ಯ ತತ್ತ್ವಾಭಿಮಾನಿಗಳು ಎಂತ ಹೇಳಿ ಇರೋಣದರಿಂದ, ರಮಾಭಿಮನ್ಯ ಮಾನವಾದ ತ್ರಿಗುಣತತ್ತ್ವದ ಕೂಡ ಚತುರ್ವಿಂಶತಿ ತತ್ತ್ವಗಳು ಆಗತದೆ ಬ್ರಹ್ಮದೇವರದಾರಭ್ಯ ತತ್ತ್ವಾಭಿಮಾನಿಗಳು ಎಂತ ಹೇಳಿ ಇರೋಣದರಿಂದ, ರಮಾಭಿಮನ್ಯಮಾನತತ್ತ್ವ ವ್ಯಾವರ್ತವಾಯಿತು. ಲಕ್ಷ್ಮೀ ತತ್ತ್ವ ವ್ಯಾವರ್ತನ ವಾದ ಮೇಲೆ ತತ್ತ್ವಗಳು ಇಪ್ಪತ್ಮೂರೇ ಆಯಿತು. ಬ್ರಹ್ಮನದಾರಭ್ಯ ಇಪ್ಪತ್ನಾಲ್ಕು ತತ್ತ್ವಗಳು ಹ್ಯಾಂಗಾಗುತ್ತದೆ ಎಂದರೆ : —

ತತ್ವನ್ಯಾಸದಲ್ಲಿ : "ಅವ್ಯಕ್ತಸ್ಥಾನೇ ಬ್ರಹ್ಮಾಣಿಭಾರತೀಭ್ಯಾಂ ನಮಃ"

—ಎಂತ ಹೇಳಿ ಇರೋಣದರಿಂದ, ಮಹತ್ತತ್ವದಲ್ಲಿ ವಿಭಾಗವದೆ. ಬ್ರಹ್ಮಾಣೀ ಭಾರತೀ ಅಭಿಮಾನ್ಯಮಾನವಾದ ಅವ್ಯಕ್ತ ತತ್ವ ಸೇರಿಕೊಂಡು ಇಪ್ಪತ್ತನಾಲ್ಕು ತತ್ತ್ವ ಎಂತ ತಾತ್ಪರ್ಯ. ಭಾರತೀರಮಣ ಮುಖ್ಯ ಪ್ರಾಣಾಂತರ್ಗತದವರೆವಿಗೂ ಚತುರ್ವಿಂಶತಿ ತತ್ತ್ವಗಳು,ಲಕ್ಷ್ಯಂತರ್ಗತ ತಿಳಿಯು ಬೇಕಾದರೆ ಪಂಚವಿಂಶತಿ ತತ್ತ್ವಗಳು ಆಗತದೆ. ವಿವಕ್ಷಾಭೇದದಿಂದ ಷಡ್ವಿಂಶತಿ ತತ್ತ್ವಗಳೂ, ಕೂಡ ಆಗುತ್ತದೆ. ಆತ ಏವ, ಸಂಧ್ಯಂತರದಲ್ಲಿ ಚತುರ್ವಿಂಶತಿ ಗಾನೆನಿಸಿ ಪಂಚವಿಂಶತಿಗಾನೆನಿಸಿ ಎಂತ ಹೇಳಿದ್ದಾರೆ. ಇಪ್ಪತ್ತಾರು ಹ್ಯಾಗೆಂದರೆ —ಅಹಂಕಾರತತ್ತ್ವ, ವೈಕಾರಿಕತತ್ತ್ವ, ತೈಜಸ, ತಾಮಸ ಈ ಮೂರೂ ಪ್ರತ್ಯೇಕ, ಪ್ರತ್ಯೇಕ ವಿವಕ್ಷಾದಿಂದ ೨೬ ಆಗುತ್ತದೆ ಎಂತ ತಿಳಿಯಬೇಕು. ೧೧೫೨ ರೂಪದಿಂದ ಜೀವರ ಸಂರಕ್ಷಣೆ ಎಂದು ಅನುಸಂಧಾನ ಮಾಡಬೇಕು. ॥೨೩॥

(೨) "ಭಾವಪ್ರಕಾಶಿಕೆ" ವ್ಯಾಖ್ಯಾನ :—

ಈ ಪದ್ಯದಿಂದ ೨೪ ತತ್ತ್ವಗಳಲ್ಲಿಯೂ, ತತ್ತ್ವಾಭಿಮಾನಿ ದೇವತೆ ಗಳಲ್ಲಿಯೂ ಇರುವ ಒಟ್ಟು ಭಗವದ್ರೂಪಗಳನ್ನು ಹೇಳುತ್ತಾ, ಸ್ವಪ್ರಯೋ ಜನಾಪೇಕ್ಷ ಇಲ್ಲದೇನೇ ಜಗತ್ತನ್ನು ಪಾಲಿಸುವನೆಂದು, ಭಗವಂತನ ಮಹಿಮೆ ಯನ್ನು ಹೇಳುತ್ತಾರೆ. ೨೪ ತತ್ತ್ವಗಳಲ್ಲಿಯೂ, ಆ ತತ್ತ್ವಾಭಿಮಾನಿ ದೇವತೆ

ಗಳಾದ ಬ್ರಹ್ಮ ಮೊದಲಾದ ದೇವತೆಗಳೊಳಗೂ ಒಟ್ಟು ೧೧೫೨ ರೂಪಗಳಿಂದ ಶ್ರೀಹರಿಯು ವ್ಯಾಪ್ತನಾಗಿರುವನು. ಅದು ಹೇಗೆಂದರೆ–ತತ್ತ್ವಗಳು=೨೪. ಮನಸ್ಸು, ಬುದ್ಧಿ ಮೊದಲಾದ ಒಂದೊಂದು ತತ್ತ್ವದಲ್ಲಿಯೂ ಸಂಸೃಷ್ಟ ತತ್ತ್ವಗಳೆಂದು ೨೪ ತತ್ತ್ವಗುಣಗಳು ಸೇರಿರುವುವು. ಇವೆರಡನ್ನೂ ಗುಣಾಕಾರ ಮಾಡಿದರೆ, ೨೪×೨೪=೫೭೬ ಆಗುವುದು. ಇದರಂತೆ, ತತ್ವಾಭಿಮಾನಿ ದೇವತೆಗಳೂ ಸಹ ೨೪ ಒಬ್ಬೊಬ್ಬ ದೇವತೆಯಲ್ಲಿಯೂ ೨೪×೨೪=೫೭೬. ಇವೆರಡನ್ನೂ ಕೂಡಿದರೆ, ೫೭೬+೫೭೬=೧೧೫೨ ಆಗುವುವು. ಇಷ್ಟು ರೂಪಗಳಿಂದ ವ್ಯಾಪ್ತನಾಗಿದ್ದು, ಎಲ್ಲಾ ಜೀವರುಗಳನ್ನೂ ಸಂರಕ್ಷಣೆ ಮಾಡುವನು. ಆದರೆ ಜಗತ್ಪತಿಯಾದ ಶ್ರೀ ಪರಮಾತ್ಮನಿಗೆ ಇದರಿಂದ ಏನಾದರೂ ಪ್ರಯೋಜನ ಉಂಟೇ? ಏನೇನೂ ಇಲ್ಲವೇ ಇಲ್ಲ.

"ದೇವಸ್ಯೈಷ ಸ್ವಭಾವೋಽಯಂ ಆಪ್ತಕಾಮಸ್ಯ ಕಾ ಸ್ಪೃಹಾ"

–ಅಂದರೆ, "ಕ್ರೀಡಾದಿ ಗುಣವಿಶಿಷ್ಟದಾದ ಶ್ರೀ ಪರಮಾತ್ಮನಿಗೆ ಈ ಜಗದ್ರಕ್ಷಣೆಯು ಸ್ವಭಾವವೇ ಹೊರತು, ಪೂರ್ಣಕಾಮನಾದ ಸ್ವಾಮಿಗೆ ಇದರಿಂದಾಗುವುದೇನು?" –ಎಂಬ ಶ್ರುತ್ಯಾದಿಗಳು ಇದಕ್ಕಾಧಾರವಾಗಿರುವುವು. ಈ ವಿಷಯವನ್ನು ಮಂಗಳಾಚರಣ ಸಂಧಿಯಲ್ಲಿ ವಿಸ್ತಾರ ಮಾಡಲಾಗಿದೆ.||೨೩||

(೩) "ಭಾವದರ್ಪಣಟೀಕಾ" ವ್ಯಾಖ್ಯಾನ :–

ಇಪ್ಪತ್ತುನಾಲ್ಕು ತತ್ತ್ವದಲ್ಲಿ ಕೇಶವಾದಿ ಕೃಷ್ಣಾಂತ ರೂಪದಿಂದ ಇದ್ದಾನೆಂತಲೂ, ಈ ತತ್ವಾಧಿಪರಾದ ಬ್ರಹ್ಮಾದಿ ಪುಷ್ಕರಾಂತ ದೇವತೆಗಳಲ್ಲೂ ೧೬೩ ರೂಪದಿಂದಲೂ ಇರುತ್ತಾನೆಂದು ಹೇಳುತ್ತಾರೆ.–"ಚತುರ್ವಿಂಶೇತಿ".

ದೇವತೆಗಳ ಸಂಖ್ಯಾ ವಿವರ ಹೀಗಿದೆ : —

ಬ್ರಹ್ಮ, ವಾಯು=೨, ಸರಸ್ವತೀ, ಭಾರತೀ=೨, ಗರುಡ, ಶೇಷ ರುದ್ರ=೩, ಜಾಂಬವತ್ಯಾದಿ=೬, ಸೌಪರ್ಣ್ಯಾದಿ=೩, ಇಂದ್ರ, ಕಾಮ =೨, ಅಹಂಕಾರಿಕ ಪ್ರಾಣ=೧, ಅನಿರುದ್ಧಾದಿ=೬. ಪ್ರವಹವಾಯು

=೧, ಯಮಧರ್ಮಾದಿ=೪, ವರುಣ=೧, ನಾರದ=೧, ಭೃಗ್ವಾದಿ=೩. ಮರೀಚ್ಯಾದಿ=೯, ಮಿತ್ರಾದಿ=೪, ಶತಸ್ಥರು=೮೫, ಜಯಂತ=೧, ಮನು=೧೧, ಇಂದ್ರರು=೭, ಭಾಗೀರಥ್ಯಾದಿ=೫, ಸ್ವಾಹಾ=೧, ಬುಧ, ಉಷಾ=೨. ಧರಣೀ, ಶನೈಶ್ಚರ=೨.

ಹೀಗೆ ನೂರಾ ಅರವತ್ಮೂರು ಜನರಲ್ಲೂ, ನಾರಾಯಣಾದಿ ೧೦೦ ರೂಪಗಳಿಂದ ವ್ಯಾಪ್ತನಾಗಿದ್ದಾನೆಂತಲೂ,ಅಜಾದಿ ೫೧,ಶಕ್ತ್ಯಾದಿ ೧೨, ರೂಪಗಳಿಂದ ಚತುರ್ವಿಂಶತಿ ತತ್ತ್ವದಲ್ಲೂ ಕೇಶವಾದಿ ಕೃಷ್ಣಾಂತ ೨೪ ರೂಪಗಳಿಂದ ವ್ಯಾಪ್ತನಾಗಿದ್ದಾನೆಂತಲೂ ಮುಖ್ಯಾಶಯ ತಿಳಿಯತಕ್ಕದ್ದು.

ಈ ವಿಷಯದಲ್ಲಿ ಪ್ರಮಾಣ : —

### ಶ್ರೀ ವಿಜಯದಾಸವರ್ಯರ ಸುಳಾದಿ

ಹರುಷಾದಿ ಕೇಶವಾದಿ ಕೃಷ್ಣಾಂತ ತತ್ತ್ವದಲ್ಲಿ ।
ಪರಮನು ಶಕ್ತಿಮುಖ ದ್ವಾದಶರೂಪಗಳು ಅಜಾದಿ
ಐವತ್ತೊಂದು ।
ನಾರಾಯಣಾದಿ ಶತ ಸುರೂಪವ ಧರಿಸುತ್ತ ।
ಸರಸೀಜಭವಮುಖ ಸುರರಲ್ಲಿ ನಿಂತು ತಾನು ।
ಪರಿಪರಿ ಚೇತನರ ವ್ಯಾಪಾರ ತಾನೇ ಮಾಡಿ ಮಾಡಿಸಿ
ಪೊರೆವಾನಯ್ಯಾ ಈತನ ಕ್ರಿಯಾ ತಿಳಿಯಲು
ವಿಜಯವಿಠ್ಠಲರೇಯಾ ಹೃದಯಾದಿ ಪೊಳೆವನು
ನೋಡದಿ ನಿತ್ಯದಲಿ ॥

–ಎಂತ ಇರೋಣದರಿಂದ ಪ್ರಮಾಣಸಿದ್ಧ. ॥೨೩॥

(೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :–

"ಚತುರೇತಿ" ॥ ಏಕಾದಶ ಶತಾತ್ಮಾಯಂ ದ್ವಿಪಂಚಾಶತ್ ಸ್ವರೂಪಕಃ ॥ ಸಾತ್ವಿಕೇಷ್ವೇಜ ಮುಖ್ಯೇಷು –ಇತಿ ಚ ॥೨೩॥

**ಕನ್ನಡಾರ್ಥ :**

"ಚತುರವಿಂಶತಿ"–ಎಂಬ ಪದ್ಯದಲ್ಲಿ ಶ್ರೀ ಪರಮಾತ್ಮನ ೧೧೫೨ ರೂಪಗಳ ವಿಷಯದಲ್ಲಿ (ಏಕಾದಶ ಶತ=೧೧೦೦+ದ್ವಿಪಂಚಾಶತ=೫೨=೧೧೫೨ ರೂಪಗಳು) ಪ್ರಮಾಣವು ಉದಹರಿಸಲ್ಪಟ್ಟಿದೆ. "ಶ್ರೀಹರಿಯು ೧೧೫೨ ಭಗವದ್ರೂಪಗಳಿಂದ ಬ್ರಹ್ಮ ಮೊದಲಾದ ಸಾತ್ವಿಕ ಚೇತನರಲ್ಲಿ ಇದ್ದಾನೆ". –ಎಂಬುದೇ ಪದ್ಯಾಭಿಪ್ರಾಯವು. ||೨೩||

**(೫) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ :—**

ಹಿಂದಿನ ಪದ್ಯದಲ್ಲಿ, ಅನಿರುದ್ಧಾದಿ ನಾಲ್ಕು ರೂಪನಾದ ದೇವರು, ತತ್ವಾಭಿಮಾನಿಗಳಾದ ವಸು, ರುದ್ರ, ಆದಿತ್ಯರೆಂಬ ಹೆಸರುಳ್ಳ ಸರ್ವದೇವ, ಪಿತೃಗಳಲ್ಲಿ ಸದಾ ಪೂಜ್ಯನಾಗಿದ್ದು, ಸರ್ವಜೀವಾಂತರ್ಯಾಮಿ ಚತುರ್ಮೂರ್ತಿಯೇ, ಪೂಜಕನಾಗಿ ಜೀವರಿಂದ ಷಣ್ಣವತ್ಯಾದಿ ಶ್ರಾದ್ಧಕ್ರಿಯಾ ನಡೆಸಿ, ಪಿತೃದೇವತೆಗಳಿಗೆ ತೃಪ್ತಿಕೊಡುವ ರೂಪಗಳನ್ನು ಕೆಲವರು ಉಪಾಸನೆ ಮಾಡುವರೆಂದು ನಿರೂಪಿಸಿ, ಈ ಪದ್ಯದಿಂದ, ಉಕ್ತ ಚತುರ್ವಿಂಶತಿ ತತ್ವಪತಿ ಸ್ವಾಮಿಗೆ ಅಕ್ಷರಸಂಖ್ಯಾಕ ರೂಪಗಳನ್ನು ತಿಳಿಸುತ್ತಾರೆ.

ಇಪ್ಪತ್ತುನಾಲ್ಕು ತತ್ತ್ವಗಳಲ್ಲೂ, ಆ ತತ್ವಾಭಿಮಾನಿ ಬ್ರಹ್ಮ ಮೊದಲಾದ ದೇವತೆಗಳಲ್ಲೂ ಸಹ, ೧೧೫೨ ರೂಪಗಳಿಂದ ವ್ಯಾಪ್ತನಾಗಿದ್ದು, ಎಲ್ಲಾ ಜೀವರ ಜತನ ಮಾಡುವುದಕ್ಕೆ, ಎಂದರೆ ಯತ್ನ ನಡೆಸಿ ರಕ್ಷಿಸುವುದಕ್ಕೆ ಪ್ರಯೋಜನವೆಂಬ ಉಪಯೋಗ ಸೌಖ್ಯವು ಜಗತ್ಪತಿಯಾದ ದೇವರಿಗೆ ಏನೂ ಇಲ್ಲ. ಪೂರ್ಣಾನಂದನಾದುದರಿಂದ ಪರಪ್ರಯೋಜನಾರ್ಥವಾಗಿ ಇರುವನೆಂದರ್ಥ.

೧೧೫೨ ರೂಪಗಳ ಸಂಖ್ಯಾ ಸಾಂಕೇತ ವಿವರ : —

"ತ್ತತ್ವಪತಿ"–ಎಂಬ ಶಬ್ದದಲ್ಲಿ ತ್ತ=ತ+ತ=೧+೧=೨, ತ್ವ= ತ+ವ=೧+೪=೫, ಪ=೧, ಮತ್ತು ತಿ=೧. ಅಂದರೆ, ೨೫೧೧ ಆಗುವುದು. ವಾಮಾಂಕಗತಿಯಿಂದ ೧೧೫೨ ಭಗವದ್ರೂಪಗಳು. ||೨೩||

# ಸರ್ವವ್ಯಾಖ್ಯಾನಸಾರಸಂಗ್ರಹ

ಇಪ್ಪತ್ತಾನ್ನಾಲ್ಕು ತತ್ತ್ವಗಳಲ್ಲಿ ಹಾಗೂ ಆಯಾಯಾ ತತ್ತ್ವಾಭಿಮಾನಿ ದೇವತೆಗಳಲ್ಲಿ ವ್ಯಾಪ್ತನಾಗಿದ್ದು ತನ್ನಿಂದ ಸೃಷ್ಟರಾದ ಸಮಸ್ತ ಜೀವರಾಶಿಗಳನ್ನೂ ಸಂರಕ್ಷಣೆ ಮಾಡಲೋಸುಗ ಜೀವರ ಶರೀರ ರಕ್ಷಣೆಯನ್ನು ಮಾಡುತ್ತಿರುವ ಶ್ರೀ ಪರಮಾತ್ಮನಿಗೆ ಇದರಿಂದ ಯಾವ ಪ್ರಯೋಜನ ಲಾಭವೂ ಇಲ್ಲವೆಂದು ಹೇಳುತ್ತಾರೆ ಪ್ರಸಕ್ತ ೨೩ ನೆಯ ಈ ಪದ್ಯದಿಂದ.

ಈ ಜಗತ್ತು ಸೃಷ್ಟಿಯಾಗಿರುವುದು ಇಪ್ಪತ್ನಾಲ್ಕು ತತ್ತ್ವಗಳಿಂದ, ಶ್ರೀ ಪರಮಾತ್ಮನು ಮೂಲ ಪ್ರಕೃತಿಯನ್ನು ಉಪಾದಾನ ಕಾರಣವನ್ನಾಗಿ ಮಾಡಿಕೊಂಡು, "ಗುಣವೈಷಮ್ಯ" ದಿಂದ ಸೃಷ್ಟಿಕಾರ್ಯವನ್ನು ನಿರಾಯಾಸವಾಗಿ ಮಾಡುತ್ತಿರುವನು.

ಈ ಚತುರ್ವಿಂಶತಿ ತತ್ತ್ವಗಳ ವಿವರ ಇಂತಿದೆ :—

| | | |
|---|---|---|
| (೧) | ಅವ್ಯಕ್ತ ತತ್ತ್ವ | =೧ |
| (೨) | ಮಹತ್ತತ್ತ್ವ | =೧ |
| (೩) | ಅಹಂಕಾರ ತತ್ತ್ವ | =೧ |
| (೪) | ಮನಸ್ತತ್ತ್ವ | =೧ |
| (೫) | ಜ್ಞಾನೇಂದ್ರಿಯಗಳು | =೫ |
| (೬) | ಕರ್ಮೇಂದ್ರಿಯಗಳು | =೫ |
| (೭) | ಭೂತ ಪಂಚಕಗಳು | =೫ |
| (೮) | ತನ್ಮಾತ್ರಾಗುಣಗಳು | =೫ |
| | ಒಟ್ಟು | =೨೪ ತತ್ತ್ವಗಳು (ಚತುರ್ವಿಂಶತಿ) |

ಪ್ರತಿ ತತ್ತ್ವದಲ್ಲಿಯೂ ಉಳಿದ ೨೩ ತತ್ತ್ವಗಳು ಅಡಕವಾಗಿವೆ. ಸೂಕ್ಷ್ಮರೂಪವಾದ ಬೀಜದಲ್ಲಿ ಮಹಾವೃಕ್ಷ ಅಡಕವಾಗಿರುವಂತೆ ಇವೆ. ಇದಕ್ಕೆ **ಸಂಸೃಷ್ಟ** ಎಂದು ಹೆಸರು. ಅದರಂತೆ ಪ್ರತಿತತ್ತ್ವದಲ್ಲಿಯೂ ೨೪

ರಂತೆ ೨೪ ತತ್ತ್ವಗಳಲ್ಲಿ ೨೪ × ೨೪ = ೫೭೬ ಸಂಖ್ಯಾ ಆಗುವುದು. ಈ ಪ್ರತಿ ಅಧಿಷ್ಠಾನದಲ್ಲಿಯೂ ಭಗವದ್ರೂಪಗಳ ಸಂಖ್ಯಾ = ೫೭೬.

ಅಂತೆಯೇ ಈ ತತ್ತ್ವಗಳು ಸ್ವಭಾವತಃ ಜಡವಾದ್ದರಿಂದ, ಅವುಗಳನ್ನು ಕ್ರಿಯಾತ್ಮಕಗೊಳಿಸಲು ೨೪ ದೇವತೆಗಳು ಶ್ರೀ ಪರಮಾತ್ಮನಿಂದ ನಿಯಮಿತರಾಗಿದ್ದಾರೆ. ಇವರಿಗೆ "ತತ್ತ್ವಾಭಿಮಾನಿದೇವತೆ" ಗಳೆಂದು ಹೆಸರು, ಇವರಿಗೆ ನಿಯಾಮಕರಾಗಿ ಮುಖ್ಯಪ್ರಾಣದೇವರು. ಅವರಿಗೆ ಪರಮಮುಖ್ಯ ವೃತ್ತಿಯಿಂದ ನಿಯಾಮಕನಾಗಿ ಬಿಂಬರೂಪಿ ಲಕ್ಷ್ಮೀರಮಣ ಶ್ರೀಮನ್ನಾರಾಯಣನೂ ಇದ್ದು, ತತ್ತ್ವಕಾರ್ಯಗಳು ಈ ಶರೀರದಲ್ಲಿ ನಡೆಯುತ್ತವೆ.

ಪ್ರತಿಯೊಬ್ಬ ತತ್ತ್ವಾಭಿಮಾನಿ ದೇವತೆಗಳ ಶರೀರದಲ್ಲಿ ೨೪ ರೂಪಗಳಂತೆ ಸಂಸೃಷ್ಟ ರೂಪನಾಗಿ ೨೪ × ೨೪ = ೫೭೬ ಭಗವದ್ರೂಪಗಳಿಂದ ಬಿಂಬನು ವಿರಾಜಮಾನನಾಗಿದ್ದಾನೆ.

ಅಲ್ಲಿಗೆ (೧) ೨೪ ತತ್ತ್ವಗಳಲ್ಲಿ = ೫೭೬ ರೂಪಗಳು,
(೨) ೨೪ ತತ್ತ್ವಾಭಿಮಾನಿಗಳಲ್ಲಿ = ೫೭೬ ರೂಪಗಳು.

ಒಟ್ಟು ರೂಪಗಳ ಸಂಖ್ಯೆ = ೧೧೫೨ ಭಗವದ್ರೂಪಗಳು,

ಈ ಸಂಖ್ಯೆಯನ್ನು ದಾಸರಾಯರು–"ಹನ್ನೊಂದು ನೂರೈವತ್ತೆರಡು ರೂಪ" ಎಂದಿದ್ದಾರೆ.

ಅಂದರೆ, ಹನ್ನೊಂದು ನೂರು = ೧೧ × ೧೦೦ = ೧೧೦೦
ಐವತ್ತೆರಡು = ೫೨
ಹನ್ನೊಂದು ನೂರೈವತ್ತೆರಡು = ೧೧೫೨ರೂಪಗಳು

(೨) ಎರಡನೆಯ ಸಂಖ್ಯಾವಿವರ : —

| | | |
|---|---|---|
| (೧) | "ಓಂ" ಕಾರ ಪ್ರಣವಪ್ರತಿಪಾದ್ಯರೂಪ | = ೧ |
| (೨) | ಅಜಾದಿ ವರ್ಣವಾಚ್ಯರೂಪ | = ೫೧ |
| (೩) | ನಾರಾಯಣಾದಿ ಶತರೂಪ | = ೧೦೦ |
| (೪) | ವಿಶ್ವಾದಿ ಸಹಸ್ರರೂಪ | = ೧೦೦೦ |
| | ಒಟ್ಟುಸಂಖ್ಯಾ | = ೧೧೫೨ |

(೩) ಸಂಖ್ಯಾವಾಚಕ ರೂಪದಲ್ಲಿಯೂ ವಿವರಿಸಬಹುದು ;—

**"ತ್ತತ್ವಪತಿ"** ದೇವತೆಗಳಲ್ಲಿ ಎಂಬ ಶಬ್ದಪ್ರಯೋಗದಿಂದ (ಇದರಲ್ಲಿ ತತ್ತ್ವ ಜಡ ಅಧಿಷ್ಠಾನ ಮತ್ತು ಪತಿ ಎಂಬುದರಿಂದ ದೇವತಾಧಿಷ್ಠಾನ)

| | | |
|---|---|---|
| ತ್ತ = ತ + ತ = ೧ + ೧ = ೨. | | (ತವರ್ಗಪಂಚಕ–ಪ್ರಥಮಾಕ್ಷರ) |
| ತ್ವ = ತ + ವ = ೧ + ೪ = ೫. | | (ಸಂಯುಕ್ತಾಕ್ಷರ) |
| ಪ | = ೧. | (ಪ–ವರ್ಗ ಪಂಚಕ–ಪ್ರಥಮಾಕ್ಷರ) |
| ತಿ | = ೧. | (ತ–ವರ್ಗ ಪಂಚಕ–ಪ್ರಥಮಾಕ್ಷರ) |

ಈ ಸಂಖ್ಯೆಗಳ ಜೋಡಣೆಯು ೨೫೧೧ ಆಗುವುದು.

ವಾಮಾಂಕರೀತ್ಯಾ ೧೧೫೨ ಭಗವದ್ರೂಪಗಳಾವುವು.

ಇಂತು, ಬಿಂಬನಾದ ಶ್ರೀ ಪರಮಾತ್ಮನು ೨೪ ಜಡತತ್ತ್ವಗಳಲ್ಲಿಯೂ ಮತ್ತು ೨೪ ತತ್ತ್ವಾಭಿಮಾನಿ ದೇವತೆಗಳ ಶರೀರಗತನಾಗಿಯೂ, ಒಟ್ಟು ೧೧೫೨ ರೂಪಗಳಿಂದ ಬ್ರಹ್ಮದೇವರೇ ಮೊದಲಾದವರಲ್ಲಿ ನಿಯಾಮಕನಾಗಿದ್ದಾನೆ. ೨೪ ತತ್ತ್ವಗಳಿಂದ ನಿರ್ಮಿತವಾಗಿರುವ ಈ ಸ್ಥೂಲಶರೀರದಲ್ಲಿ ಆ ಪಾದ ಮೌಳಿ ಪರ್ಯಂತ ಸಮಗ್ರವಾಗಿ ವ್ಯಾಪಿಸಿದ್ದಾನೆ. ಇಂತಹ ವ್ಯಾಪ್ತರೂಪಗಳಿಂದ ಇದ್ದು, ಸಕಲಜೀವರನ್ನೂ ಮತ್ತು ಅವರ ದೇಹವನ್ನೂ ನಿರಂತರವೂ ಸಂರಕ್ಷಣ ಮಾಡುತ್ತಿರುವನು. ಇದರಿಂದ ಶ್ರೀ ಪರಮಾತ್ಮನಿಗೆ ಯಾವ ಪ್ರಯೋಜನ ಲಾಭವೂ ಇಲ್ಲ. ಅವನು ಪೂರ್ಣಕಾಮನು, ಸ್ವರಮಣನಾದ್ದರಿಂದ ಆಪ್ತಕಾಮನು. ಸ್ವಪ್ರಯೋಜನರಹಿತನಾದ ಶ್ರೀ ಪರಮಾತ್ಮನು

ಕೇವಲ ಜೀವರ ಉದ್ಧಾರಾರ್ಥವಾಗಿ ಈ ಸೃಷ್ಟ್ಯಾದಿ ವ್ಯಾಪಾರವಿಶೇಷಗಳನ್ನು ನಡೆಯಿಸುವನು. ಇದು ಶ್ರೀಹರಿಯ ಸ್ವರೂಪಭೂತವಾದ ಸಹಜಸ್ವಭಾವವಾಗಿದೆ. ಇದರಿಂದ ಆಯಾಸವಾಗಲೀ ಪ್ರಯೋಜನಾಪೇಕ್ಷೆಯಾಗಲೀ ಶ್ರೀ ಪರಮಾತ್ಮನಿಗಿಲ್ಲ. ಪೂರ್ಣಕಾಮನಾದ್ದರಿಂದ ಜಗತ್ಸೃಷ್ಟ್ಯಾದಿ ವ್ಯಾಪಾರ, ಜೀವರ ಪಾಲನೆ ಮತ್ತು ಸಂರಕ್ಷಣಾ ಕಾರ್ಯಗಳನ್ನು ನಿರಾಯಾಸವಾಗಿ ನಿರ್ವಹಿಸುತ್ತಿರುವ ಜಗತ್ಪ್ರಭುವು ಅದೆಂತಹ ಕರುಣಾಶರಧಿ। ॥೨೩॥

## ಪದ್ಯ (೨೪)

**ಮೂಲ :–**

**ಇಂದಿರಾಧವ ಶಕ್ತಿ ಮೊದಲಾ ।**
**ದೊಂದಧಿಕ ದಶರೂಪದಿಂದಲಿ ।**
**ಪೊಂದಿಹನು ಸಕಲೇಂದ್ರಿಯಗಳಲಿ ಪುರುಷನಾಮಕನು ॥**
**ಸುಂದರಪ್ರದ ಪೂರ್ಣಜ್ಞಾನಾ ।**
**ನಂದಮಯ ಚಿದ್ದೇಹದೊಳು ತಾ ।**
**ವಂದರಕ್ಷಣವಗಲದಲೆ ಪರಮಾಪ್ತನಾಗಿಪ್ಪ ॥ ೨೪ ॥**

**ಅವತರಣಿಕೆ :–**

ಲಕ್ಷ್ಮೀರಮಣನಾದ ಶ್ರೀ ಪರಮಾತ್ಮನು ಶಕ್ತಿನಾಮದಿಂದ ಪ್ರಾರಂಭಿಸಿಕೊಂಡು, ಕಾಲನಾಮಕನಾಗಿ, ಮನಸ್ಸು, ಪಂಚಜ್ಞಾನೇಂದ್ರಿಯಗಳು ಮತ್ತು ಪಂಚಕರ್ಮೇಂದ್ರಿಯಗಳು ಎಂಬ ಏಕಾದಶೇಂದ್ರಿಯಗಳಲ್ಲಿ ಭಗವದ್ರೂಪಗಳಿಂದ ವಾಚ್ಯನಾಗಿದ್ದು, ದೇಹಾಕಾರನಾಗಿ ಪುರುಷಶಬ್ದವಾಚ್ಯನಾಗಿ ವಿದ್ಯಮಾನನಾಗಿದ್ದಾನೆ. ಪರಮಮಂಗಳ ಮೂರ್ತಿಯೂ, ದಿವ್ಯಸುಂದರ ಪುರುಷನೂ, ಪೂರ್ಣಾನಂದ ಜ್ಞಾನಮಯನೂ ಆದ ಶ್ರೀ ಪರಮಾತ್ಮನು ಜೀವರ ಸ್ವರೂಪದೇಹದಲ್ಲಿ ಒಂದರಕ್ಷಣವೂ ಜೀವರನ್ನು ಬಿಟ್ಟಗಲದೆ, ಬಿಂಬರೂಪನಾಗಿ ಪರಮಾಪ್ತನೆಂದೆನಿಸಿದ್ದಾನೆ ಎಂದು ತಿಳಿಸುತ್ತಾರೆ. **"ಇಂದಿರಾಧವ"**–ಎಂಬ ಪ್ರಸಕ್ತ ಸಂಧಿಗತ ೨೪ ನೆಯ ಈ ಪದ್ಯದಿಂದ. ॥೨೪॥

**ಪ್ರತಿಪದಾರ್ಥ :–**

**ಇಂದಿರಾಧವ**=ಲಕ್ಷ್ಮೀಪತಿಯಾದ ಪರಮಾತ್ಮನು **ಶಕ್ತಿ ನೊಡ ಲಾದ**=ಶಕ್ತಿ ಎಂತಲೂ, ಪ್ರತಿಷ್ಠಾ ಎಂತಲೂ ಮೊದಲಾದ ಇರುವ **ಒಂದ ಧಿಕ ದಶರೂಪದಿಂದಲಿ**=ಹನ್ನೊಂದು ಭಗವದ್ರೂಪಗಳಿಂದ (ಒಂದಧಿಕ–ಒಂದು ಹೆಚ್ಚಾದ, ದಶ–ಹತ್ತು. ಅಂದರೆ ೧೦+೧=೧೧ ರೂಪಗಳು) **ಸಕಲೇಂದ್ರಿಯಗಳಲಿ**=ಸಮಸ್ತರಾದ ಪ್ರಾಣಿಗಳ ಇಂದ್ರಿಯಗಳಲ್ಲಿ **ಪೊಂದಿಹನು**=ಹೊಂದಿಕೊಂಡಿರುವನು (ಸತತ ವ್ಯಾಪ್ತರೂಪಗಳಿಂದ ಆಶ್ರಯನಾಗಿದ್ದಾನೆ) **ಸುಂದರಪ್ರದ**=ಮನೋಹರ ರೂಪಗಳನ್ನು ಕೊಡಿಸುವ (ತ್ರಿವಿಧ ಜೀವರಿಗೆ ಅವರವರ ಸ್ವರೂಪಕ್ಕೆ ಇಷ್ಟಭೂತವಾದಂಥಾ) **ಪೂರ್ಣ**=ಸಮಸ್ತ ವಿಷಯಗಳಲ್ಲಿಯೂ ಪರಿಪೂರ್ಣನಾದಂಥ **ಜ್ಞಾನ**=ಅಪ್ರಾಕೃತ ಜ್ಞಾನವೇನು **ಆನಂದ**=ಸುಖವೇನು **ಮಯ**=ಇವುಗಳಿಂದ ಪ್ರಚುರವಾದ (ಶ್ರೀ ಪರಮಾತ್ಮನು ಅಪ್ರಾಕೃತವಾದ ಜಗದ್ವಿಲಕ್ಷಣವಾದ ಜ್ಞಾನಾನಂದ ಸ್ವರೂಪನು) **ಪುರುಷನಾಮಕನು**=ಪುರುಷ ವಾಚ್ಯನಾದ ಬಿಂಬರೂಪಿ ಶ್ರೀ ಪರಮಾತ್ಮನು **ಚಿದ್ದೇಹದೊಳು**=ಜೀವರ ಚಿದಾನಂದಾತ್ಮಕವಾದ ಸ್ವರೂಪ ದೇಹಗಳಲ್ಲಿ **ತಾ**=ತಾನು **ಒಂದರಕ್ಷಣ**=ಅರ್ಧಕ್ಷಣವಾದರೂ **ಅಗಲದೆ**=ಜೀವರನ್ನು ಬಿಟ್ಟು ಇರದೆ **ಪರಮಾಪ್ತನಾಗಿಪ್ಪ**=ಜೀವರ ಬಿಂಬನಾಗಿ ಆಪ್ತ ಸಖನಂತೆ ನಿರಂತರವೂ ಪೂರ್ವೋಕ್ತ ೧೧೫೨ ಭಗವದ್ರೂಪಗಳಿಂದ ಅಂತಸ್ಥನಾಗಿದ್ದಾನೆ. ॥೨೪॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಈ ಶ್ಲೋಕದಲ್ಲಿ ಪೂರ್ವೋಕ್ತ ಇಂದ್ರಿಯಗತ ರೂಪಗಳಿಲ್ಲದೆ ಪ್ರತ್ಯೇಕ ರೂಪಗಳ ಹೇಳುತಾರೆ. ದಾವ, ದಾವರೂಪ ಮತ್ತು ದಾವ ದಾವ ಇಂದ್ರಿಯಗಳಲ್ಲಿ ಎಂದರೆ, ವಿವರಗಳು : —

| ಕ್ರಮ ಸಂಖ್ಯೆ | ಇಂದ್ರಿಯಗಳು | ಶ್ರೀ ಪರಮಾತ್ಮನ ನಾಮಗಳು |
|---|---|---|
| ೧ | ಮನಸ್ಸಿನಲ್ಲಿ | ಶಕ್ತಿನಾಮಕ ಪರಮಾತ್ಮ |
| ೨ | ಕರ್ಣದಲ್ಲಿ | ಸಂವಿತ್ ನಾಮಕ ಪರಮಾತ್ಮ |
| ೩ | ನೇತ್ರದಲ್ಲಿ | ಪ್ರತಿಷ್ಠಾ ನಾಮಕ ಪರಮಾತ್ಮ |
| ೪ | ತ್ವಕ್ಕಿನಲ್ಲಿ | ಸ್ಫೂರ್ತಿ ನಾಮಕ ಪರಮಾತ್ಮ |
| ೫ | ಜಿಂಹ್ವೆಯಲ್ಲಿ | ಪ್ರಕೃತಿ ನಾಮಕ ಪರಮಾತ್ಮ |
| ೬ | ನಾಸಿಕದಲ್ಲಿ | ಕಳಾ ನಾಮಕ ಪರಮಾತ್ಮ |
| ೭ | ವದನದಲ್ಲಿ | ವಿದ್ಯಾ ನಾಮಕ ಪರಮಾತ್ಮ |
| ೮ | ಪಾಣಿಯಲ್ಲಿ | ಮತಿ ನಾಮಕ ಪರಮಾತ್ಮ |
| ೯ | ಪಾದದಲ್ಲಿ | ನಿಯತಿ ನಾಮಕ ಪರಮಾತ್ಮ |
| ೧೦ | ಪಾಯುವಿನಲ್ಲಿ | ಮಾಯಾ ನಾಮಕ ಪರಮಾತ್ಮ |
| ೧೧ | ಉಪಸ್ಥದಲ್ಲಿ | ಕಾಲ ನಾಮಕ ಪರಮಾತ್ಮ |
| ೧೨ | ದೇಹಾಕಾರದಲ್ಲಿ | ಪುರುಷ ನಾಮಕ ಪರಮಾತ್ಮ |

ಇಂದಿರಾಧವ–ಲಕ್ಷ್ಮೀಪತಿಯಾದ ಪರಮಾತ್ಮ, ಶಕ್ತಿ ಮೊದಲಾದೊಂಧಿಕ ದಶರೂಪದಿಂದಲಿ-ಶಕ್ತಿ ಎಂತಲೂ, ಪ್ರತಿಷ್ಠಾ ಎಂತಲೂ ಮೊದಲಾಗಿ ಉಳ್ಳ, ಒಂದಧಿಕದಶ ಎಂದರೆ, ಹನ್ನೊಂದು ರೂಪದಿಂದ, ಪೊಂದಿಹನು–ಆಶ್ರಯಮಾಡಿಕೊಂಡು ಇದ್ದಾನೆ. ದಾವದನ್ನು ಎಂದರೆ, ಸಕಲೇಂದ್ರಿಯಗಳಲಿ–ಸಮಸ್ತರಾದ ಪ್ರಾಣಿಗಳ ಏಕಾದಶೇಂದ್ರಿಯಗಳಲ್ಲಿ,ಪೂರ್ವೋಕ್ತ ನಾಮಗಳಿಂದಲೂ, ಪುರುಷನಾಮಕನು–ದೇಹಾಕಾರ ರೂಪದಿಂದಲೂ, ಅಂತು, ಹನ್ನೆರಡು ರೂಪಗಳಿಂದ ಜೀವರ ಸ್ಥೂಲದೇಹದಲ್ಲಿ ತದ್ಗತ ಇಂದ್ರಿಯಗಳಲ್ಲಿ ಇರೋವನಾಗಿದ್ದಾರೆ. (ಇದೇ ಪ್ರಕಾರ, ಸರ್ವಜೀವರ ಸ್ವರೂಪದೇಹದಲ್ಲಿಯೂ ಇದ್ದಾನೆಂತ ತಿಳಿಯಬೇಕು.) ಸುಂದರಪ್ರದ–ತ್ರಿವಿಧ ಜೀವರಿಗೆ

ಮನೋಹರವಾದಂಥಾ ಅಂದರೆ, ಅವರವರ ಸ್ವರೂಪಕ್ಕೆ ಇಷ್ಟಭೂತವಾದಂಥಾ ಜ್ಞಾನವನ್ನು, ಪ್ರದ-ವ್ಯಕ್ತಿ ಮಾಡಿಕೊಡುವ, ಪೂರ್ಣಾನಂದ ಜ್ಞಾನಮಯ-ಪೂರ್ಣ-ಸರ್ವವಿಷಯದಿಂದಲೂ, ಪೂರ್ಣನಾದಂಥಾ ಬಿಂಬ ರೂಪಿ ಪರಮಾತ್ಮ, ಜ್ಞಾನಾನಂದಮಯ-ಜ್ಞಾನವೇನು, ಆನಂದವೇನು, ಇವುಗಳಿಗೆ ಪ್ರಚುರನಾದಂಥಾ (ಪರಮಾತ್ಮ), ಚಿದ್ದೇಹದೊಳು-ಜೀವರ ಚಿದ್ದೇಹಸ್ವರೂಪ ದೇಹಗಳಲ್ಲಿ, ಪೂರ್ವೋಕ್ತಪ್ರಕಾರ ೧೧೫೨ ರೂಪಗಳಿಂದಲೂ, ಶಕ್ತ್ಯಾದಿ ರೂಪಗಳಿಂದಲೂ ಇರೋವನಾಗಿ, ಒಂದರಕ್ಷಣಬಿಡದೆ-ಒಂದರಕ್ಷಣವಾದರೂ, ಅಗಲದೆ-ಜೀವರಬಿಟ್ಟು ಪ್ರತ್ಯೇಕವಾಗದೆ, ಪರಮಾಪ್ತನಾಗಿಪ್ಪ-ಅವರಿಗೆ ಅತ್ಯಂತ ಸ್ನೇಹಿತನಾಗಿ ಇರೋವನಾಗಿದ್ದಾನೆ. ಅಂದರೆ, ಅವರವರ ಇಷ್ಟವನ್ನು ಪೂರ್ತಿಮಾಡುತಾನಾದ ಪ್ರಯುಕ್ತ ಆಪ್ತನೇ ಸರಿ.

ಪೂರ್ವೋಕ್ತ ರೂಪಗಳಿಂದ ಇಂದ್ರಿಯಗಳಲ್ಲಿ ಇದ್ದು, ಸ್ವರೂಪಗಳಿಂದ ಇಂದ್ರಿಯಗಳಲ್ಲಿದ್ದು, ಸ್ವರೂಪ, ಬಾಹ್ಯ ಎರಡರಲಿ, ಸ್ವರೂಪಜ್ಞಾನ ಅಭಿವ್ಯಕ್ತಿ ಮಾಡತಕ್ಕಕಾರ್ಯ ಶಕ್ತ್ಯಾದಿ ರೂಪಗಳದೂ ಎಂತ ತಿಳಿಯಬೇಕು. ಇವನ ವ್ಯತಿರಿಕ್ತ ಜೀವನಸ್ವರೂಪ ದೇಹದಲ್ಲಿ ಬ್ರಹ್ಮ, ವಾಯು ಮೊದಲಾದ ದಾವ ದೇವತೆಗಳೂ ಇಲ್ಲ. ಪರಮಾತ್ಮ ಒಬ್ಬನೇ ಇದ್ದಾನೆ. ಬ್ರಹ್ಮಾದಿಗಳಿಗೆ ಅಲ್ಲಿ ಪ್ರವೇಶವಿಲ್ಲ. ॥೨೪॥

(೨) "ಭಾವಪ್ರಕಾಶಿಕೆ"-ವ್ಯಾಖ್ಯಾನ :-

ಶ್ರೀ ಲಕ್ಷ್ಮೀಪತಿಯಾದ ಪರಮಾತ್ಮನು, ಜೀವರ ಚಕ್ಷು, ಶ್ರೋತ್ರಾದಿ ೧೦ ಇಂದ್ರಿಯಗಳು ಮತ್ತು ಮನಸ್ಸು, ಅಂತು, ೧೧ ಇಂದ್ರಿಯಗಳಲ್ಲಿ ಶಕ್ತಿ, ಪ್ರತಿಷ್ಠಾ, ಸಂವಿತ್, ಸ್ಫೂರ್ತಿ, ಪ್ರಕೃತಿ, ಕಲಾ, ವಿದ್ಯಾಮತಿ, ನಿಯತಿ, ಮಾಯಾ ಮತ್ತು ಕಾಲ ಎಂಬ ೧೧ ರೂಪಗಳಿಂದ ಅಂತರ್ಗತನಾಗಿರುವನು. ಜನರಿಗೆ ಸುಂದರವಾದ ರೂಪಗಳನ್ನು ಅಥವಾ ಮನೋಹರವಾದ ವೈಕುಂಠಾದಿ ಲೋಕಗಳನ್ನು ಅವರವರ ಯೋಗ್ಯತಾನುಸಾರವಾಗಿ ಕೊಡುತ್ತಿರುವ ಪೂರ್ಣಾನಂದ ಜ್ಞಾನಾನಂದಮಯನಾದ ಶ್ರೀಪುರುಷನಾಮಕನು ಜೀವರ ಸ್ವರೂಪ

ದೇಹಗಳಲ್ಲಿ ಅರಕ್ಷಣವಾದರೂ ಜೀವನನ್ನು ಬಿಟ್ಟಗಲದೆ ಜೀವರಿಗೆ ಪರಮಾಪ್ತ ನಾಗಿರುವನು. ॥೨೪॥

(೩) "ಭಾವದರ್ಪಣ ಟೀಕಾ" ವ್ಯಾಖ್ಯಾನ :—

ಪುರುಷರೂಪದಿಂದ ಹೃದಯದಲ್ಲಿ, ಶಕ್ತ್ಯಾದಿ ೧೧ ರೂಪದಿಂದ ಕರಣ ಗಳಲ್ಲಿ ಇದ್ದಾನೆಂದು ಹೇಳುತ್ತಾರೆ ॥"ಇಂದಿರಾಧವೇತಿ" ಮಾನ-ಜ್ಞಾನ ವೆಂದರ್ಥ. ॥೨೪॥

(೪) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :–

ಇಂಧಿರೇತಿ || "ಕಾಲಮಾಯೇ ನಿಯತಿಃ ಮತಿರೇವ ಚ ॥ ವಿದ್ಯಾ ಕಲಾ ಪ್ರವೃತ್ತಿಶ್ಚ" ಇತ್ಯನಂತರಂ "ಸ್ಫೂರ್ತಿ ಪ್ರತಿಷ್ಠಾ ಸಂವಿತ್ ಚ ಶಕ್ತಿರಿತ್ಯ ಪರಾಣಿ ಚ ॥ ಮಹಾಲಕ್ಷ್ಮೀ ಸ್ವರೂಪಾಣಿ ಹ್ಯೇಕಾದಶವಿದೋ ವಿದುಃ || ವಿಷ್ಣೋರಪಿ ಹಿ ರೂಪಾಣಿ ತನ್ನಾಮ್ನ್ಯೇಕಾದಶ್ಯೈವ ತು ||" ಇತಿ ಸಾರ ಸಂಗ್ರಹೇ ॥೨೪॥

ಕನ್ನಡಾರ್ಥ :–

ಇಂದಿರಾರಮಣನಾದ ಶ್ರೀಮನ್ನಾರಾಯಣನು ಪುರುಷನಾಮಕನಾಗಿ ಹನ್ನೊಂದು ರೂಪಗಳಿಂದ ಸಕಲೇಂದ್ರಿಯಗಳಲ್ಲಿ ಹೊಂದಿಕೊಂಡಿರುತ್ತಾನೆ. ಈ ವಿಷಯದಲ್ಲಿ ಪ್ರಮಾಣವನ್ನು ಉದಹರಿಸುತ್ತಾರೆ. (೧) ಕಾಲ. (೨) ಮಾಯಾ, (೩) ನಿಯತಿ, (೪) ಮತಿ, (೫) ವಿದ್ಯಾ, (೬) ಕಲಾ, (೭) ಪ್ರವೃತ್ತಿ, (೮) ಸ್ಫೂರ್ತಿ, (೯) ಪ್ರತಿಷ್ಠಾ, (೧೦) ಸಂವಿತ್, (೧೧) ಶಕ್ತಿ–ಹೀಗೆ ಹನ್ನೊಂದು ಶ್ರೀ ಮಹಾಲಕ್ಷ್ಮಿಯ ರೂಪ ಗಳು. ಇದರಂತೆ ಇವುಗಳಲ್ಲಿ ನಾರಾಯಣನು ತತ್ತಚ್ಛಬ್ದವಾಚ್ಯನಾಗಿ ತದ್ರೂಪಿ ಯಾಗಿದ್ದಾನೆ, ಇವೇ ನಾರಾಯಣ ಶಕ್ತ್ಯಾದಿ ರೂಪಗಳು-ಎಂಬುದೇ ಪ್ರಮಾಣಗಳ ಅರ್ಥ. ॥೨೪॥

(೪) "ಗುರುಹೃದಯಪ್ರಕಾಶಿಕೆ" ವ್ಯಾಖ್ಯಾನ :-

ಶಕ್ತ್ಯಾದಿ ಹನ್ನೊಂದು ರೂಪೋಪಾಸನೆ ನಿರೂಪಿಸುತ್ತಾರೆ :—

ಇಂದಿರಾಧವನೆಂಬ ಲಕ್ಷ್ಮೀಪತಿಯು ಶಕ್ತಿ, ಪ್ರತಿಷ್ಠಾ, ಸಂವಿತ್, ಸ್ಫೂರ್ತಿ, ಪ್ರಕೃತಿ, ಪ್ರವೃತ್ತಿ, ಕಳಾ, ವಿದ್ಯಾ, ನಿಯತಿ, ಕಾಲ ಎಂಬ ಹತ್ತು ರೂಪಗಳಿಂದ ದಶೇಂದ್ರಿಯಗಳಲ್ಲಿರುವನು. ಸೌಂದರ್ಯಪ್ರದ ಪೂರ್ಣಜ್ಞಾನಾನಂದರೂಪ ಪುರುಷನಾಮಕನು, ಜೀವನ ಸ್ವರೂಪದೇಹದಲ್ಲಿ ಒಂದರಕ್ಷಣ ಕಾಲವೂ ಬಿಡದೆ, ಪರಮಾಪ್ತನಾಗಿ ರಕ್ಷಿಸುವನೆಂದು ಭಾವಿಸುವುದೆಂದು ನಿರೂಪಿಸುತ್ತಾರೆ. ॥೨೪॥

# ಸರ್ವವ್ಯಾಖ್ಯಾನಸಾರಸಂಗ್ರಹ

ರಮಾಪತಿಯಾದ ಶ್ರೀ ಪರಮಾತ್ಮನು ಮನಸ್ಸೇ ಮೊದಲಾದ ಏಕಾದಶೇಂದ್ರಿಯಗಳಲ್ಲಿ ಶಕ್ತ್ಯಾದಿ ಹನ್ನೊಂದು ಭಗವದ್ರೂಪಗಳಿಂದ ನಿಯಾಮಕನಾಗಿದ್ದಾನೆ. ಅಂತೆಯೇ ಜೀವರ ಸ್ವರೂಪ ದೇಹದಲ್ಲಿ ಪುರುಷನಾಮಕ ಬಿಂಬರೂಪಿ ಶ್ರೀ ಪರಮಾತ್ಮನು ಜೀವರನ್ನು ಒಂದರಕ್ಷಣ ಬಿಡದೆ ಪರಮಾಪ್ತನಾಗಿ ಸರ್ವದಾ ಸಂರಕ್ಷಣ ಮಾಡುತ್ತಿರುವನು-ಎಂದು ತಿಳಿಸುತ್ತಾರೆ–"ಇಂದಿರಾಧವ"-ಎಂಬ ಪ್ರಸಕ್ತ ೨೪ ನೆಯ ಈ ಪದ್ಯದಿಂದ.

ಸರ್ವಶಕ್ತನಾದ ಶ್ರೀಮನ್ನಾರಾಯಣನು ಮೂಲಪ್ರಕೃತಿಯನ್ನು ಉಪಾದಾನ ಕಾರಣವನ್ನಾಗಿ ಮಾಡಿಕೊಂಡು, ಸೃಷ್ಟ್ಯಾದಿ ವ್ಯಾಪಾರಗಳನ್ನು ಮಾಡುವನು. ಈ ವ್ಯಾಪಾರವು ಶ್ರೀ ಪರಮಾತ್ಮನಿಗೆ ಸ್ವಭಾವಸಿದ್ಧವಾದದ್ದು. ನಿರಪೇಕ್ಷನಾದರೂ, "ಕ್ರೀಡೆಗೋಸುಗ, ಅವರವರ ಗತಿಗಳ ನೀಡಲೋಸುಗ." ಜೀವರ ಉದ್ಧಾರಾರ್ಥವಾಗಿ ಈ ಜಗದ್ವ್ಯಾಪಾರವಿಶೇಷಗಳನ್ನು ನಿರಾಯಾಸವಾಗಿ ಮಾಡುತ್ತಲಿರುವನು. ಮೂಲ ಪ್ರಕೃತಿಗೆ ಅಭಿಮಾನಿಗಳು ಶ್ರೀಲಕ್ಷ್ಮೀದೇವಿಯರು. ಶ್ರೀ ರಮಾಭಿಮನ್ಯಮಾನವಾದ ಮೂಲ ಪ್ರಕೃತಿಯ ಸಹಜ ಧರ್ಮಗಳಾದ ತ್ರಿಗುಣಗಳ ವೈಷಮ್ಯದಿಂದ ಸೃಷ್ಟಿವ್ಯಾಪಾರ. ಗುಣಸಾಮ್ಯದಿಂದ ಲಯಕಾರ್ಯ. ಇದರಿಂದ ಪುರುಷನಾಮಕ ಶ್ರೀಪರಮಾತ್ಮನು ಪ್ರಕೃತಿ

ನಾಮಕರಾದ ಲಕ್ಷ್ಮೀದೇವಿಯರಲ್ಲಿ ಅಂತಸ್ಥಿತವಾಗಿದ್ದ ಈ ಜಗತ್ತಿನ ಸೃಷ್ಟ್ಯಾದಿ ವ್ಯಾಪಾರಗಳನ್ನು ಮಾಡುವುದರಿಂದ, **ಇಂದಿರಾಧವ** ಎಂಬ ಪದಪ್ರಯೋಗ ಅತ್ಯಂತ ಸಮಂಜಸ.

ಇಂತಹ ಲಕ್ಷ್ಮೀಪತಿಯಾದ ಜಗತ್ಸ್ವಾಮಿಯು ಮನಸ್ಸು, ಪಂಚ ಜ್ಞಾನೇಂದ್ರಿಯಗಳು ಮತ್ತು ಪಂಚಕರ್ಮೇಂದ್ರಿಯಗಳೆಂಬ ಹನ್ನೊಂದು ಇಂದ್ರಿಯಗಳಲ್ಲಿ ಶಕ್ತ್ಯಾದಿನಾಮಗಳಿಂದ ವಾಚ್ಯನಾಗಿ, ಇಂದ್ರಿಯಗತ ವ್ಯಾಪಾರಗಳನ್ನು ಮಾಡಿ, ಮಾಡಿಸುತ್ತಿರುವನು. ಆ ಭಗವದ್ರೂಪಗಳ ವಿವರ ಗಳು ಇಂತಿವೆ : —

(೧) ಮನಸ್ಸಿನಲ್ಲಿ ಶಕ್ತಿನಾಮಕ ಪರಮಾತ್ಮನಿದ್ದಾನೆ.
(೨) ಕಿವಿಗಳಲ್ಲಿ ಸಂವಿತ್ ನಾಮಕ ಪರಮಾತ್ಮನಿದ್ದಾನೆ.
(೩) ಕಣ್ಣುಗಳಲ್ಲಿ ಪ್ರತಿಷ್ಠಾ ನಾಮಕ ಪರಮಾತ್ಮನಿದ್ದಾನೆ.
(೪) ಚರ್ಮದಲ್ಲಿ ಸ್ಫೂರ್ತಿನಾಮಕ ಪರಮಾತ್ಮನಿದ್ದಾನೆ.
(೫) ನಾಲಿಗೆಯಲ್ಲಿ(ರಸನೇಂದ್ರಿಯ) ಪ್ರಕೃತಿನಾಮಕ ಪರಮಾತ್ಮ ನಿದ್ದಾನೆ.
(೬) ಮೂಗಿನಲ್ಲಿ ಕಳಾನಾಮಕ ಪರಮಾತ್ಮನಿದ್ದಾನೆ.
(೭) ವದನದಲ್ಲಿ (ವಾಗಿಂದ್ರಿಯ) ವಿದ್ಯಾನಾಮಕ ಪರಮಾತ್ಮ ನಿದ್ದಾನೆ.
(೮) ಕೈಗಳಲ್ಲಿ ಮತಿನಾಮಕ ಪರಮಾತ್ಮನಿದ್ದಾನೆ.
(೯) ಕಾಲುಗಳಲ್ಲಿ ನಿಯತಿನಾಮಕ ಪರಮಾತ್ಮನಿದ್ದಾನೆ.
(೧೦) ಪಾಯುವಿನಲ್ಲಿ (ಗುದೇಂದ್ರಿಯ) ಮಾಯಾನಾಮಕ ಪರ ಮಾತ್ಮನಿದ್ದಾನೆ.
(೧೧) ಉಪಸ್ಥದಲ್ಲಿ ಕಾಲನಾಮಕ ಪರಮಾತ್ಮನಿದ್ದಾನೆ.

ಇಂತು, ಮನಸ್ಸಿನಿಂದ ಪ್ರಾರಂಭಿಸಿಕೊಂಡು, ಕರ್ಮೇಂದ್ರಿಯವಾದ ಉಪಸ್ಥತತ್ತ್ವ ಪರ್ಯಂತ ಶಕ್ತ್ಯಾದಿ ನಾಮವಾಚ್ಯನಾಗಿ ಹನ್ನೊಂದು ರೂಪ ಗಳಿಂದ ವಿದ್ಯಮಾನನಾಗಿದ್ದು, ಆಯಾಯಾ ಇಂದ್ರಿಯಗಳ ವ್ಯಾಪಾರವನ್ನು

ಆಯಾಯಾ ಇಂದ್ರಿಯಾಭಿಮಾನಿಗಳ ದ್ವಾರಾ ಮಾಡಿ, ಮಾಡಿಸುತ್ತಿರುವನು. ಇದನ್ನೇ "ಒಂದಧಿಕ ದಶರೂಪ" ದಿಂದಲಿ ಎಂದು ದಾಸರಾಯರು ಹೇಳಿರುತ್ತಾರೆ. ದಶ=ಹತ್ತು. ಅದಕ್ಕೆ ಒಂದಧಿಕ=ಒಂದು ಹೆಚ್ಚಾಗಿರುವ ಎಂದರೆ, ೧೦+೧=೧೧ ರೂಪಗಳಿಂದ ಎಂತ ತಾತ್ಪರ್ಯ.

ಸಮಸ್ತ ಚೇತನರ ಸ್ವರೂಪದೇಹವು ಚಿದಾನಂದಾತ್ಮಕವಾದದ್ದು. ಅಂದರೆ, ಅಪ್ರಾಕೃತ ಜ್ಞಾನ ಮತ್ತು ಆನಂದಗಳಿಂದ ಯುಕ್ತವಾಗಿದೆ. ಆಯಾಯಾ ಜೀವರ ಸ್ವರೂಪ ಯೋಗ್ಯತೆಗನುಗುಣವಾಗಿ ಜ್ಞಾನಾನಂದಗಳು ತಾರತಮ್ಯತ್ವೇನ ಭಿನ್ನಭಿನ್ನವಾಗಿವೆ. ಸ್ವರೂಪದೇಹಗತ ಜ್ಞಾನಾನಂದಗಳಿಗೆ ಪ್ರೇರಕವಾಗಿ ಬಿಂಬರೂಪಿ ಶ್ರೀ ಪರಮಾತ್ಮನು **ಪುರುಷ** ಶಬ್ದವಾಚ್ಯನಾಗಿ ಸರ್ವಚೇತನರ ಸ್ವರೂಪದೇಹದಲ್ಲಿ ಜೀವಾಂತರ್ಗತ ರೂಪದಿಂದ, ಜೀವಾಕಾರನಾಗಿ ಇದ್ದಾನೆ. ಈ ಬಿಂಬನು ಜೀವರಿಂದ ಅತ್ಯಂತ ಭಿನ್ನನಾಗಿದ್ದಾನೆ, ಜೀವಾಂತರ್ಯಾಮಿಯಾಗಿದ್ದು, ಸ್ವರೂಪಗತ ಗುಣಗಳನ್ನು ಅಭಿವ್ಯಕ್ತಿ ಮಾಡುವನು.

ಆದರೆ ಅಂತಹ ಪುರುಷನಾಮಕ ಬಿಂಬನಾದರೋ ಸುಂದರಪ್ರದನು, ಅಂದರೆ, ಬಾಹ್ಯವಾದ ಸ್ಥೂಲದೇಹಕ್ಕೆ ರೂಪಸೌಂದರ್ಯಪ್ರದನು. ಅಂತೆಯೇ ಸ್ವರೂಪದೇಹಗತ ಗುಣಾಭಿವ್ಯಕ್ತನು. ಪರಿಪೂರ್ಣನಾದ ಅಸದೃಶವಾದ ಜ್ಞಾನ ಮತ್ತು ಆನಂದಮಯವಾದ ಶರೀರ ಉಳ್ಳವನು. ಇಂತಹ ಪೂರ್ಣಾನಂದ ಜ್ಞಾನಮಯನಾದ ಪರಮಾತ್ಮನು ಜೀವರ ಸ್ವರೂಪದೇಹದಲ್ಲಿ ಪುರುಷ ಶಬ್ದವಾಚ್ಯನಾಗಿ, ಒಂದರಕ್ಷಣವೂ ಜೀವರಿಂದ ಅಗಲದೆ, ಪರಮಾಪ್ತನಾಗಿದ್ದಾನೆ. ಪರಮಾತ್ಮನು ಬಿಂಬ ಮತ್ತು ಜೀವರು ಅವನಿಗೆ ಪ್ರತಿಬಿಂಬಭೂತರಾಗಿರುವುದರಿಂದಲೂ ದೇಹದ ನೆರಳು ದೇಹವನ್ನು ಆಶ್ರಯಿಸಿರುವಂತೆ, ಬಿಂಬಾಧೀನನಾಗಿ ಪ್ರತಿಬಿಂಬನಾದ ಜೀವನಿರುವನು. ಹೀಗೆ ಬಿಂಬ–ಪ್ರತಿಬಿಂಬಗಳ ಅಂದರೆ, ಈಶ–ಜೀವರ ಸಂಬಂಧ ಅನಾದಿನಿತ್ಯ ಮತ್ತು ಅನ್ಯೋನ್ಯ. ಬಿಂಬನಿಂದಲೇ ಪ್ರತಿಬಿಂಬದ ಸರ್ವಕ್ರಿಯಾ ಕಲಾಪಗಳು ನಡೆಯುವುವು. ನಮ್ಮ ಸುಖ ದುಃಖಗಳಲ್ಲಿ ಆಪ್ತನಾಗಿರುವವನಿಗೆ "ಸಖ" ನೆಂದು ಹೆಸರು.

ಅಂತಹ ಸುಖ ದುಃಖಗಳಲ್ಲಿ ನಿತ್ಯ ಸುಖರೂಪನಾಗಿರುವ ಬಿಂಬರೂಪಿ ಶ್ರೀ ಪರಮಾತ್ಮನು ಜೀವರನ್ನು ಒಂದರಕ್ಷಣವಾದರೂ ಬಿಡದೆ ಇರುವುದರಿಂದ "ಪರಮಾಪ್ತ"ನು ಎಂತ ಪದ್ಯದ ತಾತ್ಪರ್ಯ. ॥೨೪॥

## ಪದ್ಯ (೨೫)

**ಮೂಲ:–**

**ಆರಧಿಕ ದಶರೂಪದಿಂದಲಿ ।**
**ತೋರುತಿಪ್ಪನು ವಿಶ್ವ ಲಿಂಗ ಶ ।**
**ರೀರದೊಳು ತೈಜಸನು ಪ್ರಾಜ್ಞನು ತುರ್ಯನಾಮಕನು ॥**
**ಮೂರಯಿದು ರೂಪಗಳ ಧರಿಸುತ ।**
**ಲೀರಯಿದು ಕರಣದೊಳು ಮಾತ್ರದಿ ।**
**ಖೇರ ಶಿಖಿ ಜಲ ಭೂಮಿಯೊಳಗಿಹನಾತ್ಮನಾಮದಲಿ ॥ ॥೨೫॥**

**ಅವತರಣಿಕೆ :—**

ಸ್ವರೂಪದೇಹಕ್ಕೆ ಆವರ್ಕವಾಗಿರುವ ತ್ರಿಗುಣಾತ್ಮಕವಾದ ಲಿಂಗಶರೀರವು ಹದಿನಾರು ಕಳೆಗಳಿಂದ ಯುಕ್ತವಾದದ್ದು. ಇಂತಹ ಷೋಡಶಾತ್ಮಕ ಕಳಾಂತರ್ಗತನಾಗಿ ೧೬ ರೂಪಗಳಿಂದ ವಿಶ್ವನಾಮಕ ಪರಮಾತ್ಮನು ಸತ್ವಗುಣಾವರಣದಲ್ಲಿ, ತೈಜಸರೂಪದಿಂದ ರಜೋಗುಣಾವರ್ಕದಲ್ಲಿ ಮತ್ತು ಪ್ರಾಜ್ಞನಾಮಕನಾಗಿ ತೃತೀಯ ಪರಿಚ್ಛೇಧವಾದ ತಮೋ ಆವರಣದಲ್ಲಿ ವಿದ್ಯಮಾನನಾಗಿದ್ದಾನೆ. ತುರ್ಯನಾಮಕ ವಾಸುದೇವನು ಅನಿರುದ್ಧಾದಿ ಪಂಚರೂಪಗಳಿಂದ ಇದ್ದಾನೆ. ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳೆಂಬ ೧೦ ಇಂದ್ರಿಯಗಳಲ್ಲಿ (ಈನ್ಯೆದು ಕರಣದೊಳು), ಮತ್ತು ಆಕಾಶಾದಿ ಪೃಥಿವೀ ಪರ್ಯಂತ ಭೂತಪಂಚಕಗಳಲ್ಲಿ, ಶಬ್ದಾದಿ ಗಂಧ ಪರ್ಯಂತ ತನ್ಮಾತ್ರಾಗುಣಗಳಲ್ಲಿ ಅನಿರುದ್ಧಾದಿ ಪಂಚರೂಪಾತ್ಮಕನಾಗಿದ್ದಾನೆ. ಇಂತು ವಿಶ್ವ, ತೈಜಸ, ಪ್ರಾಜ್ಞ, ತುರ್ಯ, ಆತ್ಮ, ಅಂತರಾತ್ಮ, ಮತ್ತು ಪರಮಾತ್ಮ ಜ್ಞಾನಾತ್ಮ ಎಂಬ ಎಂಟು

ರೂಪಗಳಿಂದ (ಮೂರೈದು ರೂಪಗಳ) ವಿದ್ಯಮಾನನಾಗಿದ್ದು, ಗುಣಕಾರ್ಯ ಗಳನ್ನು ಮಾಡಿ ಮಾಡಿಸುತ್ತಾನೆಂದು "ಆರಧಿಕ"–ಎಂಬ ಪ್ರಸಕ್ತ ಸಂಧಿಗತ ೫ ನೆಯ ಈ ಪದ್ಯದಿಂದ ತಿಳಿಸುತ್ತಾರೆ. ||೨೫||

**ಪ್ರತಿಪದಾರ್ಥ :–**

**ವಿಶ್ವ**＝ವಿಶ್ವನಾಮಕ ಶ್ರೀ ಪರಮಾತ್ಮನು **ಆರಧಿಕ ದಶರೂಪ ದಿಂದಲಿ**＝ಹದಿನಾರು ರೂಪಗಳಿಂದ (ಆರಧಿಕ＝ಆರು ಹೆಚ್ಚಾದ, ದಶರೂಪ ＝ಹತ್ತುರೂಪ, ಅಂದರೆ, ೬+೧೦＝೧೬ ರೂಪಗಳೆಂದು ತಾತ್ಪರ್ಯ.) **ಲಿಂಗ ಶರೀರದೊಳು**＝ಷೋಡಶ ಕಳಾತ್ಮಕವಾದ ಅನಾದಿ ಲಿಂಗದೇಹದಲ್ಲಿ **ತೋರುತಿಪ್ಪನು**＝ವಿದ್ಯಮಾನನಾಗಿದ್ದು ಜ್ಞಾನಿಗಳಿಗೆ ಗೋಚರನಾಗುವನು. ಲಿಂಗಶರೀರದ ಪ್ರಥಮಾವರಣವು ಸತ್ವಗುಣಾತ್ಮಕವಾದದ್ದು. ಇದಕ್ಕೆ ವಿಶ್ವ ನಾಮಕ ಪರಮಾತ್ಮನು ನಿಯಾಮಕ. "ಅ" ಕಾರದಿಂದ ಪ್ರಾರಂಭಿಸಿ, "ಅಃ" –ಅಕ್ಷರದವರೆಗೆ ೧೬ ಸ್ವರವರ್ಣಗಳು. ಈ ಸ್ವರವರ್ಣವಾಚ್ಯನಾಗಿ ಅಜಾದಿ (ಅಂ–ಅಜಾಯನಮಃ) ಅರ್ಧಗರ್ಭ (ಅಃ–ಅರ್ಧಗರ್ಭಾಯನಮಃ) ಪರ್ಯಂತ ೧೬ ಭಗವದ್ರೂಪಗಳಿಂದ ವಿಶ್ವನಾಮಕನಾಗಿದ್ದಾನೆ. **ತೈಜಸನು**＝ಸತ್ವಾ ವರಣದ ಮೇಲೆ ಆವರ್ಕವಾಗಿರುವ ದ್ವಿತೀಯಾವರಣವು ರಜೋಗುಣಾತ್ಮಕ ವಾದದ್ದು. ಈ ರಜೋ ಆವರಣದಲ್ಲಿ **ತೈಜಸ** ನಾಮಕ ಪರಮಾತ್ಮನಿದ್ದಾನೆ, ಉಕಾರವಾಚ್ಯನಾದ ಈ ತೈಜಸನು ಕ–ವರ್ಗ ಪಂಚಕಕ್ಕೆ ಸೇರಿದ ಕ, ಖ, ಗ, ಘ ಮತ್ತು ಙ ಎಂಬ ಪಂಚವರ್ಣವಾಚ್ಯನಾಗಿ ಕಪಿಲಾದಿ ಐದು ರೂಪಗಳಿಂದ ವಿರಾಜಮಾನನಾಗಿದ್ದಾನೆ. **ಪ್ರಾಜ್ಞನು**＝ಪ್ರಾಜ್ಞನಾಮಕ ಪರಮಾತ್ಮನು ರಜೋ ಆವರಣದ ಮೇಲೆ ಆವರ್ಕವಾಗಿರುವ ತೃತೀಯಾವರಣವು ತಮೋ ಗುಣಾತ್ಮಕವಾದದ್ದು. ಇದಕ್ಕೆ ಪ್ರಾಜ್ಞರೂಪಿ ಪರಮಾತ್ಮನು ನಿಯಾಮಕನು. ಮಕಾರ ಪ್ರತಿಪಾದ್ಯ ಪ್ರಾಜ್ಞನಿಂದ ಚ, ಛ, ಜ, ಝ ಮತ್ತು ಞ ಎಂಬ ಚ– ವರ್ಗ ಪಂಚಕ ವರ್ಣವಾಚ್ಯ ಚಾರ್ವಾಂಗಾದಿ, ೫ ರೂಪಗಳು. **ತುರ್ಯ ನಾಮಕನು**＝ತುರ್ಯನಾಮಕ ವಾಸುದೇವನು, ಟ–ವರ್ಗ ಪಂಚಕ ಟ,ಠ, ಡ, ಢ ಮತ್ತು ಣ ಎಂಬ ಪಂಚವರ್ಣವಾಚ್ಯ ಟಂಕ್ಯಾದಿ ಪಂಚರೂಪಗಳಿಂದ

ವಿರಾಜಮಾನನಾಗಿದ್ದಾನೆ. **ಮೂರೆಯಿದು ರೂಪಗಳ ಧರಿಸುತ** = ೩ × ೫ = ೧೫ ಭಗವದ್ರೂಪಗಳನ್ನು ಧರಿಸಿದವನಾಗಿ, ಅಂದರೆ, ಕಪಿಲಾದಿ ಪಂಚರೂಪಗಳು + ಚಾರ್ವಾಂಗಾದಿ ಪಂಚರೂಪಗಳು + ಟಂಕ್ಯಾದಿ ಪಂಚರೂಪಗಳು = ೧೫ ರೂಪಗಳಿಂದ ವಿದ್ಯಮಾನನಾಗಿದ್ದಾನೆ, **ಈರೈದು ಕರಣದೊಳು** = ೨ × ೫ = ೧೦ ಇಂದ್ರಿಯಗಳಲ್ಲಿ, (ಅಂದರೆ, ಪಂಚ ಜ್ಞಾನೇಂದ್ರಿಯಗಳು ಮತ್ತು ಪಂಚ ಕರ್ಮೇಂದ್ರಿಯಗಳು) **ಮಾತ್ರದಿ** = ತನ್ಮಾತ್ರಾ ಗುಣವಾದ ಗಂಧ, ರಸ, ರೂಪ, ಸ್ಪರ್ಶ ಮತ್ತು ಶಬ್ದಗಳಲ್ಲಿ ಇಲ್ಲಿ **ಮೂರೆಯಿದು** ಅಂದರೆ ೩ × ೫ = ೧೫ ರೂಪಗಳನ್ನು ದಶೇಂದ್ರಿಯಗಳು ೧೦ + ಪಂಚತನ್ಮಾತ್ರೆಗಳು ೫ = ೧೫ ಎಂಬುದಾಗಿ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಮತ್ತು ನಾರಾಯಣ–ಎಂಬ ಪಂಚರೂಪಾತ್ಮಕನಾಗಿ, **ಖ** = ಆಕಾಶ **ಈರ** = ವಾಯು, **ಶಿಖಿ** = ಅಗ್ನಿ (ತೇಜಸ್ಸು), **ಜಲ** = ಉದಕ (ಅಪ್ ತತ್ತ್ವ) ಮತ್ತು **ಭೂಮಿ** = ಪೃಥಿವೀ ಎಂಬ ಭೂತಪಂಚಕಗಳಲ್ಲಿ ಬಿಂದು ವಾಚ್ಯನಾಗಿ ತ–ವರ್ಗ ಪಂಚಕದ ವರ್ಣಗಳಾದ ತ, ಥ, ದ, ಧ, ನ ಎಂಬ ತಾರಾದಿ ಪಂಚರೂಪಗಳಿಂದ **ಆತ್ಮನಾಮದಲಿ** = ಆತ್ಮಶಬ್ದವಾಚ್ಯನಾಗಿ **ಇಹ** = ವಿದ್ಯಮಾನನಾಗಿದ್ದಾನೆ.

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :–

ಹಿಂದಿನ ಶ್ಲೋಕದಲ್ಲಿ ಸ್ವರೂಪದೇಹದ ವಿಚಾರ ಹೇಳಿದರು. ಈಗ ಲಿಂಗದೇಹದ ವಿಚಾರ ಹೇಳುತ್ತಾರೆ. ಲಿಂಗದೇಹ ಷೋಡಶಕಳಾತ್ಮಕವಾದದ್ದು. ಷೋಡಶಕಳಾದಾವದೆಂದರೆ, ಅದಕ್ಕೆ ವಿವರ : –

(೧) ಪ್ರಥಮಾವರಣ ಜೀವನಮ್ಯಾಲೆ ಸತ್ವಾವರಣವು. ಇದಕ್ಕೆ ವಿಶ್ವರೂಪಿ ಪರಮಾತ್ಮ. ಇದರಲ್ಲಿ ಇರತಕ್ಕ ವಿಚಾರ : –

೧. ಅವ್ಯಕ್ತತತ್ತ್ವ —ಜ್ಞಾನಾತ್ಮ.
೨. ಮಹತತ್ತ್ವ —ಪರಮಾತ್ಮ.

೩. ಅಹಂಕಾರತತ್ತ್ವ —ಅಂತರಾತ್ಮ.
೪. ಮನಸ್ಸು —ಆತ್ಮರೂಪಿ ಪರಮಾತ್ಮ.

(೨) ಸತ್ವಾವರಣದ ಮೇಲೆ ದ್ವಿತೀಯಾವರಣ, ರಜೋ ಆವರಣದಲ್ಲಿ ತೈಜಸರೂಪಿ ಪರಮಾತ್ಮ. ಇದರ ವಿಚಾರ :–

ಐದು ರೂಪದಿಂದಲಿ ಈರೈದು ಕರಣದಲಿ, ಅಂದರೆ,

ಈರೈದು ಕರಣಗಳು–ದಶೇಂದ್ರಿಯಗಳು.

ಐದುರೂಪಗಳು–ಅನಿರುದ್ಧಾದಿ ಐದುರೂಪಗಳು.

| ಕ್ರ. ಸಂ. | ಜ್ಞಾನೇಂದ್ರಿಯಗಳು | ಭಗವದ್ರೂಪ | ಕರ್ಮೇಂದ್ರಿಯಗಳು |
|---|---|---|---|
| ೧. | ಶ್ರೋತ್ರೇಂದ್ರಿಯ | ಅನಿರುದ್ಧ | ವಾಗಿಂದ್ರಿಯ |
| ೨. | ನೇತ್ರೇಂದ್ರಿಯ | ಪ್ರದ್ಯುಮ್ನ | ಪಾಣೇಂದ್ರಿಯ |
| ೩. | ತ್ವಗಿಂದ್ರಿಯ | ಸಂಕರ್ಷಣ | ಪಾದೇಂದ್ರಿಯ |
| ೪. | ಜಿಹ್ವೇಂದ್ರಿಯ | ವಾಸುದೇವ | ಪಾಯು ಇಂದ್ರಿಯ |
| ೫. | ನಾಸಿಕೇಂದ್ರಿಯ | ನಾರಾಯಣ | ಉಪಸ್ಥೇಂದ್ರಿಯ |

ಇಂತು ಈ ವಿವರಗಳು ದಶೇಂದ್ರಿಯಗಳಲ್ಲಿ ಇವೆ.

(೩) ರಜೋ ಆವರಣದ ಮ್ಯಾಲೆ ತೃತೀಯಾವರಣ. ತಮೋ ಆವರಣ. ಇದಕ್ಕೆ ಪ್ರಾಜ್ಞರೂಪಿ ಪರಮಾತ್ಮ. ಇದರ ವಿಚಾರ :–

ಮಾತ್ರದಿ (ಪಂಚತನ್ಮಾತ್ರಗಳಲ್ಲಿ) ಖ, ಈರ, ಶಿಖಿ, ಜಲ, ಭೂಮಿಯೊಳಗಿಹ, ಎಂದರೆ, ಪಂಚಭೂತಗಳು. ಇವುಗಳಲ್ಲಿ ದಾವರೂಪಗಳು ಎಂದರೆ ಪೂರ್ವೋಕ್ತ ಪ್ರಕಾರ : —

| ಕ್ರಮ ಸಂಖ್ಯೆ | ಭೂತ ಪಂಚಕಗಳು | ಭಗವದ್ರೂಪ | ತನ್ಮಾತ್ರಾ ಗುಣಗಳು |
|---|---|---|---|
| ೧ | ಪೃಥಿವೀ | ಅನಿರುದ್ಧ | ಗಂಧ |
| ೨. | ಅಪ್ಪು | ಪ್ರದ್ಯುಮ್ನ | ರಸ |
| ೩. | ತೇಜ | ಸಂಕರ್ಷಣ | ರೂಪ |
| ೪. | ವಾಯು | ವಾಸುದೇವ | ಸ್ಪರ್ಶ |
| ೫. | ಆಕಾಶ | ನಾರಾಯಣ | ಶಬ್ದ |

ವಿವಕ್ಷಾಭೇದದಿಂದ ತನ್ಮಾತ್ರಗಳು, ಪಂಚಭೂತಗಳು ಸೇರಿ, ಐದು ಸಂಖ್ಯಾವಾಗುತ್ತದೆ. ಪ್ರತ್ಯೇಕ ಪ್ರತ್ಯೇಕ ಸಂಖ್ಯಾದಿಂದ ಹತ್ತು ಆಗುತ್ತದೆ. ಆದ್ದರಿಂದ ಈ ತೃತೀಯು ಪರಿಚ್ಛೇಧದಲ್ಲಿ ಅನಾದಿ ರೂಪವಾದ ಜಡವಾದ ಅವಿದ್ಯಾಕಾಮ್ಯಕರ್ಮಗಳು ಜನ್ಮಕ್ಕೆ ಕಾರಣವಿರೋದಾಗಿ ಅವೆ. ಅಂತು, ತ್ರಿಗುಣಗಳ ವಿಚಾರವಾಯಿತು. ತುರ್ಯನಾಮಕನು = ತುರ್ಯನಾಮಕನಾದ ಪರಮಾತ್ಮನೇ ಪೂರ್ವೋಕ್ತ ಅನಿರುದ್ಧಾದಿ ರೂಪಗಳ ಧರಿಸಿದ್ದಾನೆ ಎಂತ ತಾತ್ಪರ್ಯವು.

ಲಿಂಗಶರೀರ ಷೋಡಶಕಳಾತ್ಮಕ ಎಂಬುದಕ್ಕೆ ವಿವರ : —

೧. ಪ್ರಥಮ ಪರಿಚ್ಛೇದವಾದ ಸತ್ವಪರಿಚ್ಛೇದಗತ **ಮನಸ್ಸು** =೧

೨. ದ್ವಿತೀಯ ಪರಿಚ್ಛೇದವಾದ ರಜಃ ಪರಿಚ್ಛೇದಗತ ದಶೇಂದ್ರಿಯಗಳು =೧೦

೩. ತೃತೀಯ ಪರಿಚ್ಛೇದವಾದ ತಮಃಪರಿಚ್ಛೇದಗತ **ತನ್ಮಾತ್ರಾಸಹಿತಪಂಚಭೂತಗಳು** = ೫

**ಒಟ್ಟು ಹದಿನಾರು ಕಳಿಗಳು =೧೬**

ತುರ್ಯನಾಮಕನು = ತುರ್ಯನೇ ಅನಿರುದ್ಧಾದಿ ಐದುರೂಪಗಳ ಧರಿಸುತ ಎಂತ ತಾತ್ಪರ್ಯ. ಲಿಂಗಶರೀರದೊಳು = ಅನಾದಿ ಲಿಂಗಶರೀರದಲ್ಲಿ ಆರಧಿಕದಶ = ಹದಿನಾರು ಕಳೆಗಳು ಅವೆ. ರೂಪದಿಂದಲಿ = ವಿಶ್ವರೂಪದಿಂದ ಸತ್ವಗುಣದಲ್ಲಿ, ತೈಜಸರೂಪದಿಂದ ರಜೋಗುಣದಲ್ಲಿ, ಪ್ರಾಜ್ಞರೂಪದಿಂದ ತಮೋಗುಣದಲ್ಲಿ, ಈ ಮೂರುರೂಪಗಳಿಂದ, ತೋರುತಿಪ್ಪನು = ದಾವದನ್ನು ತೋರಿಸುತ್ತಾನೆ ಎಂದರೆ, ಜನನ, ಮರಣ ಪಾಲನ ಈ ಮೂರರನ್ನೂ ಪ್ರಾಣಿಗಳಿಗೆ ತೋರಿಸುತ್ತಾ ಇರುತ್ತಾನೆ. (ಎಲ್ಲಿ ಇದ್ದು ಎಂದರೆ), ಲಿಂಗಶರೀರದೋಳು = ತ್ರಿಗುಣಾತ್ಮಕ ಲಿಂಗ ಶರೀರದೊಳಿದ್ದು ತೋರಿಸುತ್ತಾನೆ (ವಿಶ್ವ–ಜನನ, ತೈಜಸ–ಪಾಲನ, ಪ್ರಾಜ್ಞ–ಸಂಹಾರ), ಅವರವರ ಕಾರ್ಯಗಳು ಅಂದರೆ, ವಿಶ್ವಾದಿ ಮೂರು ರೂಪಗಳ ಕಾರ್ಯಗಳು ಎಂತ ತಾತ್ಪರ್ಯ. ತುರ್ಯನಾಮಕನು = ತುರ್ಯನಾಮಕ ವಾಸುದೇವನು, ಐದುರೂಪಗಳಿಂದಲಿ = ಅನಿರುದ್ಧಾದಿ ಐದುರೂಪಗಳ ಧರಿಸಿ, ಆ ಐದು ರೂಪದಿಂದಲಿ, ಈರೈದು ಕರಣದೊಳು = ರಜೋಗತ ದಶೇಂದ್ರಿಯಗಳಲ್ಲಿ, ಐದುರೂಪಗಳಿಂದ = ಐದು ರೂಪಗಳೇ ಅಂಶವಿಶೇಷಗಳಿಂದ, ಹತ್ತಾಗಿ = ಹತ್ತು ಇಂದ್ರಿಯಗಳಲ್ಲಿ ಆವಾಸನಾಗಿದ್ದಾನೆ. ಮಾತ್ರದಿ = ತಮಃಪರಿಚ್ಛಿನ್ನದ ತನ್ಮಾತ್ರಾಗಳಲ್ಲಿ ಖ = ಆಕಾಶದಲ್ಲಿ, ಈರ = ವಾಯುವಿನಲ್ಲಿ, ಶಿಖಿ = ಅಗ್ನಿಯಲ್ಲಿ, ಜಲ = ಉದಕದಲ್ಲಿ, ಭೂಮಿಯೊಳು = ಭೂಮಿಯಲ್ಲಿ ತಮೋಗತ ಪಂಚಭೂತಗಳಲ್ಲಿ, ಅಂತು ಹತ್ತರಲ್ಲಿ, ವಾಸುದೇವನೇ ಅನಿರುದ್ಧಾದಿ ರೂಪಗಳಿಂದ ಅಂಶವಿಶೇಷಗಳಿಂದ ಇದ್ದಾನೆ. ಲಿಂಗಶರೀರದಲ್ಲಿ ಅಖಂಡ ತದಾಕಾರರೂಪದಿಂದ ತುರ್ಯ ಇದ್ದಾನೆ. ;ತುರ್ಯ ಎಂದರೆ, ಅಂತ್ಯ. ಶರೀರದೊಳಗೆ ಲಿಂಗಶರೀರ ಅಂತ್ಯಶರೀರವಾದ್ದರಿಂದ, ಲಿಂಗಶರೀರದಲ್ಲಿ ಅಖಂಡಾಕಾರರೂಪ ತುರ್ಯನೆಂದು ತಾತ್ಪರ್ಯ. ಅಂತು, ಈ ಐದುರೂಪಗಳು ಆಯಿತು. ಮೂರಯಿದು ರೂಪದಿಂದಲಿ = ಎಂಟುರೂಪಗಳಿಂದ ಲಿಂಗಶರೀರದಲ್ಲಿ ಇದ್ದಾನೆ ಎಂತ ತಾತ್ಪರ್ಯ, ಎಂಟುರೂಪಕ್ಕೆ ನಾಲ್ಕುರೂಪ ಲೆಖ್ಖವಾಯಿತು ಇನ್ನು ನಾಲ್ಕುರೂಪದಾವದೆಂದರೆ, (೧) ಆತ್ಮ (೨) ಅಂತರಾತ್ಮ (೩) ಪರಮಾತ್ಮ ಮತ್ತು (೪) ಜ್ಞಾನಾತ್ಮ. ಈನಾಲ್ಕು ರೂಪಗಳು

ಲಿಂಗದಲ್ಲಿ ಎಲ್ಲಿ ಅದೆ ಎಂದು ಹೇಳಿದ್ದಾರೆ. ಮುಂದಿನ ಶ್ಲೋಕದಲ್ಲಿ ಹೇಳಿ ನಿಂತಿದ್ದು ಮೂರು, ಆತ್ಮರೂಪಿ ಪರಮಾತ್ಮ ಮನದಿ ಇದ್ದಾನೆ.

ಆತ್ಮನ್ನ ಮಾತ್ರ ವಿದ್ಯಮಾನ ಶ್ಲೋಕದಲ್ಲಿ ಹೇಳಿ, ಮನಸ್ಸನ್ನು ಮುಂದಿನ ಶ್ಲೋಕದಲ್ಲಿ ಹೇಳಿದ್ದಾರೆ. ಎರಡು ಸೇರಿಸಿ, ಮನದೊಳು ಆತ್ಮ ಎಂತ ತಿಳಿಯಬೇಕು. ॥ ೨೫ ॥

(೨) "ಭಾವಪ್ರಕಾಶಿಕೆ" ವ್ಯಾಖ್ಯಾನ :—

ಈ ಪದ್ಯದಿಂದ ಲಿಂಗಶರೀರದಲ್ಲಿರುವ ಭಗವದ್ರೂಪಗಳನ್ನು ಹೇಳುತ್ತಾರೆ.— ಶ್ರೀ ಪರಮಾತ್ಮನು ಷೋಡಶ (೧೬) ಕಳಾತ್ಮಕವಾದ ಲಿಂಗಶರೀರದಲ್ಲಿ ೧೬ ರೂಪಗಳಿಂದ ವ್ಯಾಪ್ತನಾಗಿರುವನು ಎಂದು ಹೇಳಿದರು. ಅದರ ವಿವರವನ್ನು ಹೇಳುತ್ತಾರೆ :—

ಲಿಂಗಶರೀರವು ಷೋಡಶ ಕಳೆಗಳಿಂದ ಕೂಡಿರುವುದು. ಜ್ಞಾನೇಂದ್ರಿಯಗಳು=೫, ಕರ್ಮೇಂದ್ರಿಯಗಳು=೫, ತನ್ಮಾತ್ರಾಗುಣಗಳಿಂದ ಕೂಡಿದ ಪಂಚಮಹಾಭೂತಗಳು=೫ ಮತ್ತು ಮನಸ್ಸು=೧. ಅಂತು, ೧೬ ಆಯಿತು. ಇವುಗಳಲ್ಲಿ ಪರಮಾತ್ಮನ ೧೬ ರೂಪಗಳು ಯಾವುವೆಂದರೆ– ಮೊದಲು ವಿಶ್ವರೂಪದಿಂದ ಲಿಂಗಶರೀರದಲ್ಲಿರುವನು. ಇದಲ್ಲದೆ ೧೬ ಕಳೆಗಳಲ್ಲಿ ೧೬ ರೂಪಗಳು ಬೇರೆ ಬೇರೆಯಾಗಿರುವುವು. ಅವುಗಳ ವಿವರ : —

ತೈಜಸರೂಪಿಯಾದ ಪರಮಾತ್ಮನು ಅನಿರುದ್ಧಾದಿ ೫ ರೂಪಗಳಿಂದ ಕರ್ಮೇಂದ್ರಿಯಗಳಲ್ಲೂ, ತುರ್ಯನಾಮಕನು ಅನಿರುದ್ಧಾದಿ ೫ ರೂಪಗಳಿಂದ ಪಂಚಮಹಾಭೂತಗಳಲ್ಲಿಯೂ ಇರುವನು. ಶಬ್ದ ಸ್ಪರ್ಶಾದಿ ಮಾತ್ರಾಗುಣಗಳು ಪಂಚಭೂತಗಳ ಗುಣಗಳೇ ಆದುದರಿಂದ, ಬೇರೆಯಾಗಿ ತೆಗೆದುಕೊಳ್ಳಲಿಲ್ಲ. ಇದರಲ್ಲಿ ವಿಶ್ವ, ತೈಜಸ, ಪ್ರಾಜ್ಞ ರೂಪಗಳು ಜೀವರಿಗೆ ಸತ್ವಾದಿಗುಣ ಪ್ರೇರಕರಾಗಿ ಜಾಗ್ರದವಸ್ಥೆ, ಸ್ವಪ್ನ, ಸುಷುಪ್ತಿಗಳನ್ನು ಮಾಡಿಸುವವರು.

ತುರ್ಯನಾಮಕನು ಶರೀರ ರಕ್ಷಕನಾಗಿರುವನೆಂದು ತಾತ್ಪರ್ಯ. ಈ ಪದ್ಯದಲ್ಲಿ ಹದಿನೈದು ಕಲೆಗಳನ್ನು ಮಾತ್ರ ಹೇಳಿರುತ್ತಾರೆ. ಆತ್ಮನಾಮದಲಿ ಎಂಬ ಪದವನ್ನು ಮುಂದಿನ ಪದ್ಯವಾದ "ಮನದೊಳು"–ಎಂಬ ಪದ್ಯಕ್ಕೆ ಸೇರಿಸಿ ಅರ್ಥ ಹೇಳಬೇಕು. || ೨೫ ||

## (೩) "ಭಾವದರ್ಪಣಟೀಕಾ" ವ್ಯಾಖ್ಯಾನ :–

ಷೋಡಶಕಲಾಯುಕ್ತವಾದ ಲಿಂಗದೇಹದಲ್ಲಿ ವಿಶ್ವನು ಇರುತ್ತಾನೆಂತಲೂ, ತೈಜಸ, ಪ್ರಾಜ್ಞ ಮತ್ತು ತುರ್ಯ ರೂಪಗಳು ಕರಣಗಳಲ್ಲಿ ಮತ್ತು ತನ್ಮಾತ್ರದಲ್ಲಿ ಇರುತ್ತವೆಂತಲೂ, ಆತ್ಮಾದಿರೂಪದಿಂದ ಪಂಚಭೂತದಲ್ಲಿ ಇದ್ದಾನೆಂತಲೂ ಹೇಳುತ್ತಾರೆ–"ಆರಧಿಕೇತಿ" || || ೨೫ ||

## (೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :–

"ಆರೇತಿ" || "ಲಿಂಗೇ ಷೋಡಶರೂಪೀ ಚ ವಿಶ್ವಃ ತೈಜಸ ಪ್ರಾಜ್ಞಕೌ || ತುರ್ಯೋ ದಶಸ್ವಿಂದ್ರಿಯೇಷು ಪಂಚ ಪಂಚಾತ್ಮಕಾಃ ಕಿಲ"– ಇತಿ ಚ ವೈಭವೇ || ಭೂತಮಾತ್ರಾಸು ಆತ್ಮಾನಾಮಾ ಅಹಂಕಾರೇ ಚಿತ್ತೇ ಅಂತರಃ–ಇತಿ || ೨೫ ||

**ಕನ್ನಡಾರ್ಥ :**

"ಲಿಂಗಶರೀರದಲ್ಲಿ ೧೬ ರೂಪಗಳಿಂದ ವಿಶ್ವನಿರುತ್ತಾನೆ: ತೈಜಸ, ಪ್ರಾಜ್ಞ ಮತ್ತು ತುರ್ಯರು ೧೫ ರೂಪಗಳಿಂದ ದಶೇಂದ್ರಿಯಗಳಲ್ಲಿ ಇರುತ್ತಾರೆ. ಭೂತ ಹಾಗೂ ತನ್ಮಾತ್ರಗಳಲ್ಲಿ ಇರುತ್ತಾರೆ. ಅಹಂಕಾರ ಚಿತ್ತಗಳಲ್ಲಿ "ಅಂತರಾತ್ಮ"–ಎಂಬ ನಾಮದಿಂದ ಇರುತ್ತಾನೆ. ಆತ್ಮನಾಮದಿಂದ ಮನಸ್ಸಿನಲ್ಲಿ ಇರುತ್ತಾನೆ. || ೨೫ ||

## (೫) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ :—

ಶರೀರ ಚತುಷ್ಟಯಗಳಲ್ಲೂ, ಪಂಚತನ್ಮಾತ್ರಗಳಲ್ಲೂ, ಪ್ರಾಕಾರಾಂತ

ಉಪಾಸಕರ ಉಪಾಸನೆ ನಿರೂಪಿಸುತ್ತಾರೆ, ಹದಿನಾರು ಕಳೆಗಳುಳ್ಳ ಲಿಂಗ ಶರೀರದಲ್ಲಿ ಹದಿನಾರು ರೂಪನಾಗಿ ಪ್ರಾಜ್ಞಮೂರ್ತಿ ಇರುವನು. ಅನಿರುದ್ಧ ಶರೀರದಲ್ಲಿ ತೈಜಸರೂಪ, ಸ್ಥೂಲಶರೀರದಲ್ಲಿ ವಿಶ್ವ, ಜೀವಸ್ವರೂಪದಲ್ಲಿ ತುರ್ಯಮೂರ್ತಿ. ಜ್ಞಾನಕರ್ಮೇಂದ್ರಿಯಗಳು ಹತ್ತರಲ್ಲೂ ಖ–ಎಂಬ ಆಕಾಶ, ಈರ–ಎಂಬ ವಾಯು, ಶಿಖಿ–ಎಂಬ ಅಗ್ನಿ, ಜಲ–ಎಂಬ ನೀರು, ಭೂಮಿ–ಎಂಬ ನೆಲ, ಮಾತ್ರ–ಎಂಬ ಶಬ್ದ ಸ್ಪರ್ಶ ರೂಪ ರಸ ಗಂಧಗಳೆಂಬ ಐದು ವಿಷಯಗಳು–ಹೀಗೆ ಒಟ್ಟು ೧೫ ಅಧಿಷ್ಠಾನಗಳಲ್ಲಿಯೂ, ಹದಿನೈದು ರೂಪಗಳಿಂದ, ತತ್ತ್ವನ್ನಾಮಕನಾಗಿ, ಆತ್ಮನಾಮಕದಿಂದ ಕರೆಸುವನೆಂದರ್ಥ. ||೨೫||

## ಸರ್ವವ್ಯಾಖ್ಯಾನಸಾರಸಂಗ್ರಹ

ಹಿಂದಿನ ಪದ್ಯದಲ್ಲಿ ಸ್ವರೂಪದೇಹಗತ ಭಗವದ್ರೂಪಗಳು ಮತ್ತು ಕ್ರಿಯಾವಿಶೇಷಗಳನ್ನು ತಿಳಿಸಿದರು, ಈಗ ಪ್ರಸಕ್ತ ೨೫ನೆಯ ಈ ಪದ್ಯದಿಂದ ಲಿಂಗಶರೀರಗತ ಭಗವದ್ರೂಪಗಳು ಮತ್ತು ವ್ಯಾಪಾರವಿಶೇಷಗಳನ್ನು ವಿವರಿಸುತ್ತಾರೆ. "ಆರಧಿಕ"–ಎಂದು.

ಸ್ವರೂಪದೇಹಕ್ಕೆ ಹೊರಗೆ ಆವರಣದ ರೂಪದಲ್ಲಿ ಅನಾದಿಕಾಲದಿಂದ ಲಿಂಗದೇಹವೆಂಬ ಆವರ್ಕವಿದೆ. ಈ ಲಿಂಗದೇಹವು ತ್ರಿಗುಣಾತ್ಮಕವಾದದ್ದು ಅಂದರೆ, ಸತ್ವ, ರಜ ಮತ್ತು ತಮ ಎಂಬ ಗುಣತ್ರಯಗಳಿಂದ (ಪ್ರಾಕೃತ) ಯುಕ್ತವಾದದ್ದು. ಇದರ ವಿವರ ಇಂತಿದೆ : –

(೧) ಮುಕ್ತಿಯೋಗ್ಯರಾದ ಸಾತ್ವಿಕ ಜೀವರ ಸ್ವರೂಪದೇಹದ ಮೇಲೆ ಆವರ್ಕ ರೂಪದಲ್ಲಿರುವ ಲಿಂಗಶರೀರಣ ಪ್ರಥಮಾವರಣವು ಸತ್ತ್ವಗುಣಾತ್ಮಕವಾದದ್ದು ಈ ಪರಿಚ್ಛೇದದಲ್ಲಿ ವಿಶ್ವನಾಮಕ ಶ್ರೀಪರಮಾತ್ಮನು ಸತ್ವಾಗುಣಾಭಿಮಾನಿಯಾದ ಶ್ರೀ ನಾಮಕ ಲಕ್ಷ್ಮೀದೇವಿಯರಲ್ಲಿ ಬಿಂಬನಾಗಿದ್ದು, ಸತ್ವ ಗುಣಕ್ಕೆ ಪ್ರೇರಕನಾಗಿದ್ದಾನೆ.

(೨) ದ್ವಿತೀಯಾವರಣವು ರಜೋ ಗುಣಾತ್ಮಕವಾದದ್ದು. ಇದರಲ್ಲಿ

ತೈಜಸ ನಾಮಕ ಶ್ರೀಪರಮಾತ್ಮನು ಭೂ ನಾಮಕ ಲಕ್ಷ್ಮೀದೇವಿಯರ ದ್ವಾರಾ, ರಜೋಗುಣದ ಪ್ರವರ್ತಕನಾಗಿದ್ದಾನೆ.

(೩) ಅದರಮೇಲೆ ಆವರ್ಕವಾಗಿರುವ ತೃತೀಯಾವರಣವು ತಮೋಗುಣಾತ್ಮಕವಾದದ್ದು. ಈ ಪರಿಚ್ಛೇದದಲ್ಲಿ ಪ್ರಾಜ್ಞರೂಪಿ ಶ್ರೀ ಪರಮಾತ್ಮ ತಮೋಗುಣಾಭಿಮಾನಿ **ದುರ್ಗಾ**ನಾಮಕ ರಮಾದ್ವಾರಾ ತಮೋಗುಣ ವ್ಯಾಪಾರವನ್ನು ಮಾಡಿ ಮಾಡಿಸುತ್ತಿರುವನು.

ಇಂತು, ಲಿಂಗಶರೀರವು ಪರಿಚ್ಛೇದತ್ರಯಗಳಿಂದ ಯುಕ್ತವಾದದ್ದು. ಗುಣತ್ರಯಗಳ ಮಿಶ್ರಣವೇ (ವೈಷಮ್ಯ) ಸೃಷ್ಟಿಯು. ಮೂಲಪ್ರಕೃತಿಯು ಸೃಷ್ಟಿಗೆ ಉಪಾದಾನಕಾರಣವು. ಮೂಲ ಪ್ರಕೃತಿಗತ ತ್ರಿಗುಣಗಳಿಂದ ಅವ್ಯಕ್ತ ತತ್ತ್ವದ ಸೃಷ್ಟಿ. ಇದಕ್ಕೆ ಅಭಿಮಾನಿಗಳು ಶ್ರೀ ಲಕ್ಷ್ಮೀದೇವಿಯರು. ಲಿಂಗಶರೀರವೇ ಅನಾದಿ ಕರ್ಮಬೀಜಕ್ಕೆ ಆಶ್ರಯವು,

ಇಂತಹ ಲಿಂಗಶರೀರವು ಹದಿನಾರು ಕಳೆಗಳಿಂದ ಯುಕ್ತವಾಗಿದೆ. ಲಿಂಗ ದೇಹಗತ ಷೋಡಶ ಕಳೆಗಳ ವಿವರ :—

(೧) ಪ್ರಥಮಾವರಣಗತ ಸತ್ವಪರಿಚ್ಛೇದದಲ್ಲಿ ಮನಸ್ಸು = ೧
(೨) ದ್ವಿತೀಯಾವರಣಗತ ರಜಃ ಪರಿಚ್ಛೇದದಲ್ಲಿ ದಶೇಂದ್ರಿಯಗಳು = ೧೦
(೩) ತೃತೀಯಾವರಣಗತ ತಮಃ ಪರಿಚ್ಛೇದದಲ್ಲಿ ತನ್ಮಾತ್ರಾ ಸಹಿತ ಭೂತಪಂಚಕಗಳು = ೫

ಷೋಡಶಕಳೆಗಳು = ೧೬

ಈ ಸಂಖ್ಯೆಯನ್ನೇ ದಾಸರಾಯರು ಪ್ರಸಕ್ತ ಪದ್ಯದಲ್ಲಿ "ಆರಧಿಕ ದಶ ರೂಪದಿಂದಲಿ"—ಎಂದಿದ್ದಾರೆ. ಅಂದರೆ, ಆರಧಿಕ = ಆರು ಹೆಚ್ಚಾದ, ದಶ ರೂಪಗಳು = ಹತ್ತು ರೂಪಗಳು. ಅಂದರೆ, ೬ + ೧೦ = ೧೬ ರೂಪಗಳೆಂದರ್ಥ.

ಲಿಂಗದೇಹಗತ ಷೋಡಶಕಳೆಗಳಿಗೆ ಷೋಡಶ ಭಗವದ್ರೂಪಗಳು, ಅದರ ವಿವರ ಈ ಪ್ರಕಾರ : —

(೧) ಲಿಂಗಶರೀರಗತ ಭಗವದ್ರೂಪವು ವಿಶ್ವನಾಮಕ ಶ್ರೀ ಪರಮಾತ್ಮ= ೧

(೨) ಪಂಚ ಜ್ಞಾನೇಂದ್ರಿಯಗಳಲ್ಲಿ ಅನಿರುದ್ಧಾದಿ ಪಂಚರೂಪಾತ್ಮಕ
ನಾಗಿ ತೈಜಸ ನಾಮಕ ಶ್ರೀ ಪರಮಾತ್ಮ= ೫

(೩) ಪಂಚಕರ್ಮೇಂದ್ರಿಯಗಳಲ್ಲಿ ಅನಿರುದ್ಧಾದಿ ಪಂಚರೂಪಾತ್ಮಕ
ನಾಗಿ ಪ್ರಾಜ್ಞನಾಮಕ ಶ್ರೀಪರಮಾತ್ಮ= ೫

(೪) ಪಂಚತನ್ಮಾತ್ರಾಸಹಿತ ಅನಿರುದ್ಧಾದಿ ಪಂಚರೂಪಗಳಿಂದ
ತುರ್ಯನಾಮಕ ಶ್ರೀ ಪರಮಾತ್ಮ= ೫

**ಒಟ್ಟು ಭಗವದ್ರೂಪಗಳು=೧೬**

ಮೇಲಿನ ವಿವರಗಳನ್ನು ಈ ಕೆಳಗಿನ ಪಟ್ಟಿಯಿಂದ ಸುಲಭವಾಗಿ ತಿಳಿಯಬಹುದು : –

| ಕ್ರ.ಸಂ. | ಆವರಣ | ಗುಣ | ಇಂದ್ರಿಯಗಳು | ಭಗವದ್ರೂಪ | ಸಂಖ್ಯೆ |
|---|---|---|---|---|---|
| ೧ | ಪ್ರಥಮ ಪರಿಚ್ಛೇದ | ಸತ್ವಾವರಣ | ಮನಸ್ಸು | ವಿಶ್ವ | ೧ |
| ೨ | ದ್ವಿತೀಯಾವರಣ | ರಜೋವರಣ | ಜ್ಞಾನೇಂದ್ರಿಯಗಳು | ತೈಜಸ | ೫ |
| | | | ಕರ್ಮೇಂದ್ರಿಯಗಳು | ಪ್ರಾಜ್ಞ | ೫ |
| ೩ | ತೃತೀಯಾವರಣ | ತಮೋವರಣ | ತನ್ಮಾತ್ರಾಸಹಿತ ಪಂಚಭೂತಗಳು | ತುರ್ಯ | ೫ |
| | | | ಒಟ್ಟು ಷೋಡಶ ಕಳಾಗತ ಭಗವದ್ರೂಪಗಳು | | ೧೬ |

ಅನಿರುದ್ಧಾದಿ ಪಂಚರೂಪಗಳಿಂದ ತೈಜಸ, ಪ್ರಾಜ್ಞ ಮತ್ತು ತುರ್ಯ ನಾಮಕನಾಗಿ ೫ × ೩ = ೧೫ ರೂಪಗಳಿಂದ ಇದ್ದಾನೆ. ಇದನ್ನೇ ದಾಸರಾಯರು "ಮೂರರಯಿದು"–ಎಂದಿದ್ದಾರೆ. ಅಂದರೆ, ಮೂರು × ಐದು = ಹದಿನೈದು ರೂಪಗಳೆಂದು ತಾತ್ಪರ್ಯ.

ಪಂಚಜ್ಞಾನೇಂದ್ರಿಯಗಳಲ್ಲಿ, ಪಂಚಕರ್ಮೇಂದ್ರಿಯಗಳಲ್ಲಿ ಮತ್ತು ತನ್ಮಾತ್ರಾಸಹಿತ ಭೂತಪಂಚಕಗಳಲ್ಲಿ ಪ್ರಾಚುರ್ಯವಾಗಿರುವ ಅನಿರುದ್ಧಾದಿ ಪಂಚರೂಪಾತ್ಮಕನಾದ ತೈಜಸ, ಪ್ರಾಜ್ಞ ಮತ್ತು ತುರ್ಯರೂಪಗಳ ವಿವರಗಳ ಇಂತಿವೆ : — (ಪಟ್ಟಿ ೧ ನೋಡಿ)

ಲಿಂಗಶರೀರದಲ್ಲಿ ಜ್ಞಾನೇಂದ್ರಿಯಗಳು ದ್ವಿತೀಯ ಪರಿಚ್ಛೇದಗತ ರಜೋ ಆವರಣದಲ್ಲಿ ಸೂಕ್ಷ್ಮರೂಪದಲ್ಲಿ ವಿದ್ಯಮಾನವಾಗಿವೆ. ಅಲ್ಲಿಂದ ವ್ಯಾಪಾರಗಳು ಪ್ರವರ್ತಿತವಾಗಿ ಸ್ಥೂಲದೇಹಗತ ಜ್ಞಾನೇಂದ್ರಿಯಗಳ ದ್ವಾರಾ ಅಭಿವ್ಯಕ್ತವಾಗುವುವು. ಸ್ಥೂಲಶರೀರವು ಪಾಂಚಭೌತಿಕವಾದ ಮೇಲಿನ ಕವಚ. ಅದಕ್ಕೆ ಬೀಜರೂಪವಾಗಿ ಲಿಂಗಶರೀರಗತ ಷೋಡಶಕಳೆಗಳು ತೈಜಸರೂಪಿ ಪರಮಾತ್ಮನಿಂದ ಪ್ರವರ್ತಿತವಾಗುವುವು. (ಪಟ್ಟಿ ೨ ನೋಡಿ)

ಜ್ಞಾನೇಂದ್ರಿಯಗಳ ಮತ್ತು ಕರ್ಮೇಂದ್ರಿಯಗಳ ವ್ಯಾಪಾರವು ಸ್ಥೂಲದೇಹದಲ್ಲಿ ನಡೆಯುವುವು. ಆದರೆ ಆ ಕ್ರಿಯೆಗಳಿಗೆ ಮೂಲವಾಗಿ ಬೀಜರೂಪದಲ್ಲಿ ಸೂಕ್ಷ್ಮವಾಗಿ ಪ್ರೇರಕಶಕ್ತಿಯ ಕೇಂದ್ರವು ತ್ರಿಗುಣಾತ್ಮಕವಾದ, ಅನಾದಿ ಕರ್ಮ ಬೀಜಭೂತವಾದ ಲಿಂಗಶರೀರವು. ಸ್ಥೂಲದೇಹಗತ ಸಮಸ್ತ ಕಾರ್ಯಗಳೂ ಆಯಾಯಾ ಇಂದ್ರಿಯಗಳ ದ್ವಾರಾ. ಅನಾದಿ ಕರ್ಮಾನುಸಾರವಾಗಿ ನಡೆಯಿಸುತ್ತಿರುವುವು. ಇದಕ್ಕೆ ಮೂಲಸ್ಥಾನ ಲಿಂಗಶರೀರವೇ.

ಲಿಂಗದೇಹದ ತೃತೀಯ ಪರಿಚ್ಛೇದವು ತಮೋಗುಣಾತ್ಮಕವಾದದ್ದು. ಇದರಲ್ಲಿ ತನ್ಮಾತ್ರಾಸಹಿತ ಭೂತಪಂಚಕಗಳು ಸೂಕ್ಷ್ಮರೂಪದಲ್ಲಿ ವಿದ್ಯಮಾನವಾಗಿವೆ. ಇವುಗಳಲ್ಲಿ ತುರ್ಯನಾಮಕ ಶ್ರೀ ಪರಮಾತ್ಮನು ಅನಿರುದ್ಧಾದಿ ಪಂಚರೂಪಗಳಿಂದ ಪ್ರವರ್ತಕನಾಗಿದ್ದಾನೆ. (ಪಟ್ಟಿ ೩ ನೋಡಿ)

## ಪಟ್ಟಿ ೧

| ಕ್ರ.ಸಂ. | ಇಂದ್ರಿಯಗಳು | ಪಂಚರೂಪಗಳು | ಭಗವದ್ರೂಪ | ವ್ಯಾಪಾರವಿಶೇಷ |
|---|---|---|---|---|
| ೧ | ಶ್ರೋತ್ರೇಂದ್ರಿಯ | ಅನಿರುದ್ಧ | | ಶ್ರವಣಕ್ರಿಯಾಪ್ರವರ್ತಕ |
| ೨ | ನೇತ್ರೇಂದ್ರಿಯ | ಪ್ರದ್ಯುಮ್ನ | | ದೃಕ್ರಿಯಾ ಪ್ರವರ್ತಕ |
| ೩ | ತ್ವಗಿಂದ್ರಿಯ | ಸಂಕರ್ಷಣ | ತೈಜಸನಾಮಕ ಶ್ರೀ ಪರಮಾತ್ಮ | ಸ್ಪರ್ಶಜ್ಞಾನಪ್ರವರ್ತಕ |
| ೪ | ಜಿಹ್ವೇಂದ್ರಿಯ | ವಾಸುದೇವ | | ರಸನೇಂದ್ರಿಯ ವ್ಯಾಪಾರ |
| ೫ | ನಾಸಿಕೇಂದ್ರಿಯ | ನಾರಾಯಣ | | ಗಂಧಸ್ವೀಕಾರಕ್ರಿಯಾ |

## ಲಿಂಗಶರೀರಗತ ಪಂಚಕರ್ಮೇಂದ್ರಿಯಗಳ ವಿವರ : — ಪಟ್ಟಿ ೨

| ಕ್ರ. ಸಂ. | ಕರ್ಮೇಂದ್ರಿಯಗಳು | ಪಂಚರೂಪಗಳು | ಭಗವದ್ರೂಪ | ವ್ಯಾಪಾರವಿಶೇಷ |
|---|---|---|---|---|
| ೧ | ವಾಗಿಂದ್ರಿಯ | ಅನಿರುದ್ಧ | ಪ್ರಾಜ್ಞ ರೂಪಿ ಪರಮಾತ್ಮ | ವಾಗ್ವ್ಯಾಪಾರ |
| ೨ | ಪಾಣೀಂದ್ರಿಯ | ಪ್ರದ್ಯುಮ್ನ | | ದಾನ ಸ್ವೀಕಾರ |
| ೩ | ಪಾದೇಂದ್ರಿಯ | ಸಂಕರ್ಷಣ | | ಗಮನಾಗಮನಕ್ರಿಯ |
| ೪ | ಪಾಯು ಇಂದ್ರಿಯ | ವಾಸುದೇವ | | ಮಲ ವಿಸರ್ಜನೆ |
| ೫ | ಉಪಸ್ಥ | ನಾರಾಯಣ | | ಮೂತ್ರ, ರೇತೋ ವಿಸರ್ಜನೆ |

## ಪಟ್ಟಿ ೩

| ಕ್ರ.ಸಂ. | ತನ್ಮಾತ್ರಾಗುಣ | ಭೂತಪಂಚಕ | ಪಂಚರೂಪಗಳು | ಭಗವದ್ರೂಪ | ವ್ಯಾಪಾರವಿಶೇಷ |
|---|---|---|---|---|---|
| ೧ | ಗಂಧ | ಪೃಥಿವೀ | ಅನಿರುದ್ಧ | | ಪೃಥಿವೀಗತ ಗಂಧ ಸ್ವೀಕಾರ ನಾಸಿಕೇಂದ್ರಿಯದಿಂದ |
| ೨ | ರಸ | ಅಪ್ಪು | ಪ್ರದ್ಯುಮ್ನ | | ಅಪ್‌ತತ್ತ್ವಗತ ರಸಾಸ್ವಾದನೆ ರಸನೇಂದ್ರಿಯದಿಂದ |
| ೩ | ರೂಪ | ತೇಜಸ್ಸು | ಸಂಕರ್ಷಣ | ತುರ್ಯ ನಾಮಕ ಶ್ರೀ ಪರಮಾತ್ಮ | ತೇಜೋಗತ ರೂಪ ವಿಷಯ ಗ್ರಹಣ ನೇತ್ರೇಂದ್ರಿಯದಿಂದ |
| ೪ | ಸ್ಪರ್ಶ | ವಾಯು | ವಾಸುದೇವ | | ವಾಯುತತ್ತ್ವಗತ ಸ್ಪರ್ಶಜ್ಞಾನ ತ್ವಗಿಂದ್ರಿಯದಿಂದ |
| ೫ | ಶಬ್ದ | ಆಕಾಶ | ನಾರಾಯಣ | | ಆಕಾಶಗತ ಗುಣ ಶಬ್ದಜ್ಞಾನ ಶ್ರೋತ್ರೇಂದ್ರಿಯದಿಂದ |

ಇಂತು, ಅನಿರುದ್ಧಾದಿ ಪಂಚರೂಪಾತ್ಮಕನಾಗಿ **ತೈಜಸನು** ಲಿಂಗಶರೀರ ಗತ ಜ್ಞಾನೇಂದ್ರಿಯಗಳಲ್ಲಿ ೫ ರೂಪಗಳಿಂದಲೂ, **ಪ್ರಾಜ್ಞನು** ಕರ್ಮೇಂದ್ರಿಯ ಗಳಲ್ಲಿ ೫ ರೂಪಗಳಿಂದಲೂ ಮತ್ತು **ತುರ್ಯನು** ತನ್ಮಾತ್ರಾಸಹಿತನಾದ ಭೂತಪಂಚಕಗಳಲ್ಲಿ ೫ ರೂಪಗಳಿಂದಲೂ, ಅಂದರೆ ೫ × ೩ = ೧೫ ರೂಪ ಗಳಿಂದ ವಿದ್ಯಮಾನನಾಗಿದ್ದಾನೆ. **ವಿಶ್ವನು** ಲಿಂಗಶರೀರಗತ ಮನಸ್ಸಿನಲ್ಲಿ ಇದ್ದಾನೆ. ಅಲ್ಲಿಗೆ ೧೬ ರೂಪಗಳಿಂದ ಷೋಡಶಕಳಾತ್ಮಕವಾದ ಲಿಂಗಶರೀರ ದಲ್ಲಿ ಇದ್ದಾನೆ ಎಂಬ ವಿವರ ಸ್ಪಷ್ಟವಾಯಿತು.

ಈ ವಿಷಯವನ್ನೇ ದಾಸರಾಯರು "ಮೂರಯಿದು ರೂಪಗಳ" ಅಂದರೆ ಮೂರು × ಐದು = ಹದಿನೈದು ರೂಪಗಳ ಧರಿಸುತ, "ಈರೈದು ಕರಣದಿ" ಅಂದರೆ, ಎರಡು × ಐದು = ಹತ್ತು ಇಂದ್ರಿಯಗಳಲ್ಲಿ (ಪಂಚಜ್ಞಾನೇಂದ್ರಿಯ ಮತ್ತು ಪಂಚಕರ್ಮೇಂದ್ರಿಯ) "ಮಾತ್ರದಿ"–ಎಂಬ ಶಬ್ದ ಪ್ರಯೋಗದಿಂದ ತನ್ಮಾತ್ರಾಸಹಿತವಾದ ಪಂಚಭೂತಗಳಲ್ಲಿ ಅನಿರುದ್ಧಾದಿ ಪಂಚರೂಪಾತ್ಮಕನಾಗಿ **ತುರ್ಯ**ನಾಮಕ ಶ್ರೀ ಪರಮಾತ್ಮನು ವಿದ್ಯಮಾನನಾಗಿದ್ದಾನೆ. ಇದನ್ನು "ಖೀರ ಶಿಖಿ ಜಲ ಭೂಮಿಯೊಳಗಿಹ" ಎಂದು ತಿಳಿಸಿದ್ದಾರೆ. ಖೀರ ಅಂದರೆ ಖ + ಈರ ಎಂದು ವಿಭಾಗಿಸಿದರೆ "ಖ" ಎಂದರೆ ಆಕಾಶ ಮತ್ತು "ಈರ" ಎಂದರೆ, ವಾಯು ಎಂದರ್ಥವಾಗುವುದು. "ಶಿಖಿ" ಎಂದರೆ ಅಗ್ನಿ (ತೇಜಸ್ಸು) "ಜಲ" ಎಂದರೆ ಅಪ್ ತತ್ತ್ವ ಮತ್ತು "ಭೂಮಿ" ಎಂದರೆ ಪೃಥಿವೀ ಎಂದು ಭೂತಪಂಚಕಗಳೆಂದು ತಾತ್ಪರ್ಯ.

ಮುಂದಿನ ಪದ್ಯದಲ್ಲಿ "ಆತ್ಮನಾಮದಲಿ" ಎಂದು ಉಳಿದ ಆತ್ಮ, ಅಂತ ರಾತ್ಮ, ಜ್ಞಾನಾತ್ಮ ಮತ್ತು ಪರಮಾತ್ಮ ಎಂಬ ರೂಪ ಚತುಷ್ಟಯಗಳ ವಿಚಾರ ವನ್ನು ಹೇಳುತ್ತಾರೆ.

"ಗುರುಹೃದಯ ಪ್ರಕಾಶಿಕೆ" ಯ ವ್ಯಾಖ್ಯಾನಕಾರರು.

(೧) ಜೀವಸ್ವರೂಪಶರೀರದಲ್ಲಿ **ತುರ್ಯ**.

(೨) ಲಿಂಗಶರೀರದಲ್ಲಿ ಷೋಡಶಕಳಾತ್ಮಕ ರೂಪಗಳಿಂದ **ಪ್ರಾಜ್ಞ**.

(೩) ಅನಿರುದ್ಧಶರೀರದಲ್ಲಿ ತೈಜಸ ಮತ್ತು

(೪) ಸ್ಥೂಲಶರೀರದಲ್ಲಿ ವಿಶ್ವನಾಮಕ ಎಂಬುದಾಗಿ ಹೇಳಿರುತ್ತಾರೆ.

ಪ್ರಸಕ್ತ ಪದ್ಯದಲ್ಲಿ ಲಿಂಗಶರೀರದ ವಿಚಾರದ ಪ್ರಸ್ತಾಪವಿರುವುದರಿಂದ, ತನು ಚತುಷ್ಟಯಗತ ಭಗವದ್ರೂಪಗಳನ್ನು ಸಮಷ್ಟಿದೃಷ್ಟಿಯಿಂದ ಪರಿಗಣಿಸ ಬಹುದು. ||೨೫||

## ಪದ್ಯ (೨೬)

**ಮೂಲ :**

**ಮನದೊಳಹಂಕಾರದಲಿ ಚಿಂ ।**
**ತನೆಯು ಮಾಳ್ಪುದು ಅಂತರಾತ್ಮನ ।**
**ಘನಸುತತ್ವದಿ ಪರಮನವ್ಯಕ್ತದಲಿ ಜ್ಞಾನಾತ್ಮಾ ॥**
**ಇನಿತು ಪಂಚಾಶದ್ವರಣವೇ ।**
**ದ್ಯನ ಅಜಾದ್ಯೈವತ್ತು ಮೂರ್ತಿಗ ।**
**ಳನು ಸದಾ ಸರ್ವತ್ರ ದೇಹಗಳಲಿ ಪೂಜಿಪುದು ||೨೬||**

**ಅವತರಣಿಕೆ :**

ಲಿಂಗಶರೀರಗತ ಮನಸ್ಸಿನಲ್ಲಿ ಆತ್ಮನಾಮಕನಾದ ಶ್ರೀ ಪರಮಾತ್ಮನೂ, ಅಹಂಕಾರ ತತ್ತ್ವದಲ್ಲಿ ಅಂತರಾತ್ಮರೂಪಿಯೂ, ಮಹತತ್ತ್ವದಲ್ಲಿ ಪರಮಾತ್ಮ ನಾಮಕನೂ ಮತ್ತು ಅವ್ಯಕ್ತ ತತ್ತ್ವದಲ್ಲಿ ಜ್ಞಾನಾತ್ಮನಾಮಕನೂ ಇದ್ದಾರೆ. ಈ ರೀತಿಯಲ್ಲಿ ವಿಶ್ವಾದಿ ಅಷ್ಟ ಭಗವದ್ರೂಪಗಳನ್ನು ಲಿಂಗಶರೀರಗತ ತತ್ತ್ವ ಗಳಲ್ಲಿ ಚಿಂತಿಸಬೇಕು. "ಅ" ಕಾರದಿಂದ ಪ್ರಾರಂಭಿಸಿ, "ಕ್ಷ" ಕಾರದವರೆಗೆ ವರ್ಣಮಾಲೆಯಲ್ಲಿ ಐವತ್ತೊಂದು ಅಕ್ಷರಗಳಿವೆ. ಅಕಾರವರ್ಣ ಪ್ರತಿಪಾದ್ಯ ನಾದ ಅಜಾದಿ ಭಗವದ್ರೂಪದಿಂದ ಆರಂಭಿಸಿ, ಕ್ಷಕಾರ ಪ್ರತಿಪಾದ್ಯ ಶ್ರೀಲಕ್ಷ್ಮೀ ನರಸಿಂಹ ಭಗವದ್ರೂಪದವರೆಗೆ ವರ್ಣವಾಚ್ಯ ಐವತ್ತೊಂದು ಭಗವದ್ರೂಪ

ಗಳನ್ನು ನಿರಂತರದಲ್ಲಿಯೂ ಸ್ವರೂಪದೇಹದಿಂದ ಪ್ರಾರಂಭಿಸಿ, ಸ್ಥೂಲದೇಹದ ವರೆಗೂ ಸರ್ವ ತನುಚತುಷ್ಟಯಗಳಲ್ಲಿ ಚಿಂತಿಸಿ, ಪೂಜಿಸಬೇಕೆಂದು ಹೇಳುತ್ತಾರೆ **"ಮನದೊಳಹಂಕಾರದಲಿ"**-ಎಂಬ ಪ್ರಸಕ್ತ ಸಂಧಿಗತ ೨೬ ನೆಯ ಈ ಪದ್ಯ ದಿಂದ. ||೨೬||

**ಪ್ರತಿಪದಾರ್ಥ :—**

**ಮನದೊಳು**=ಲಿಂಗಶರೀರಗತ ಮನಸ್ಸಿನಲ್ಲಿ **ಆತ್ಮನಾಮದಲಿ**=ಆತ್ಮನಾಮಕನಾಗಿ (ಪೂರ್ವೋಕ್ತ ಪದ್ಯದಂತೆ) ಇದ್ದಾನೆ **ಅಹಂಕಾರದಲಿ**=ಅಹಂಕಾರ ತತ್ತ್ವದಲ್ಲಿ **ಅಂತರಾತ್ಮನ**=ಅಂತರಾತ್ಮ ರೂಪವನ್ನು **ಘನಸುತತ್ವದಿ**=ಮಹತತ್ತ್ವದಲ್ಲಿ (ಅಸುರಾವೇಶಾದಿ ದೋಷ ರಹಿತನಾದ ಬ್ರಹ್ಮದೇವರ ಸಮೀಚೀನವಾದ ತತ್ತ್ವವು-ಮಹತತ್ತ್ವವು, ಇದೇ ಘನಸುತತ್ತ್ವ) **ಪರಮನ**=ಪರಮಾತ್ಮನಾಮಕ ರೂಪವನ್ನು **ಅವ್ಯಕ್ತದಲಿ**=ಅವ್ಯಕ್ತ ತತ್ತ್ವದಲ್ಲಿ **ಜ್ಞಾನಾತ್ಮಾ**=ಜ್ಞಾನಾತ್ಮನಾಮಕ ಭಗವದ್ರೂಪವನ್ನು **ಚಿಂತನೆಯುಮಾಳ್ಪುದು**=ಚಿಂತನಾಪೂರ್ವಕ ಅನುಸಂಧಾನ ಮಾಡತಕ್ಕದ್ದು **ಇನಿತು**=ಈ ಪ್ರಕಾರವಾಗಿ **ಪಂಚಾಶದ್ವರಣವೇದ್ಯನ**=ಅಕಾರಾದಿ ಐವತ್ತು ಅಕ್ಷರಗಳಿಂದ ತಿಳಿಸಿಕೊಳ್ಳಲ್ಪಡುವವನ **ಅಜಾದಿ**=ಅಜ ಆನಂದಾದಿ **ಐವತ್ತು ಮೂರ್ತಿಗಳನು**=ಅಕ್ಷರ ಪ್ರತಿಪಾದ್ಯವಾದ ಐವತ್ತು ಭಗವನ್ಮೂರ್ತಿಗಳನ್ನು **ಸದಾ**=ನಿರಂತರದಲ್ಲಿಯೂ **ಸರ್ವದೇಹಗಳಲಿ**=ಸ್ವರೂಪದೇಹ ಪ್ರಾರಂಭಿಸಿ ಸ್ಥೂಲದೇಹದವರೆಗೂ **ಪೂಜಿಪುದು**=ಪೂಜಿಸಬೇಕು. ||೨೬||

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಅವಶಿಷ್ಟ ಲಿಂಗದೇಹದ ವಿಚಾರ ಹೇಳುತ್ತಾರೆ.

ಮನದೊಳು=ಲಿಂಗಗತ ಮನದೊಳು ಪೂರ್ವಶ್ಲೋಕೋಕ್ತ ಆತ್ಮರೂಪನು, ಅಹಂಕಾರದಲಿ ಅಂತರಾತ್ಮನ=ಅಹಂಕಾರತತ್ತ್ವದಲ್ಲಿ ಅಂತ

ರಾತ್ಮನು, ಘನಸುತತ್ವದಿ=ಅಸುರಾವೇಶಾದಿ ದೋಷರಹಿತನಾದ ಬ್ರಹ್ಮನ ಸಮೀಚೀನವಾದ ತತ್ತ್ವ ಎಂದರೆ, ಮಹತ್ತತ್ವದಲ್ಲಿ, ಪರಮನು ಪರಮಾತ್ಮನು, ಅವ್ಯಕ್ತದಲಿ ಜ್ಞಾನಾತ್ಮಾ=ಅವ್ಯಕ್ತತತ್ತ್ವದಲ್ಲಿ ಜ್ಞಾನಾತ್ಮನು, ಇನಿತು=ಈ ಪ್ರಕಾರ, ಲಿಂಗಗತ ಚತುರ್ವಿಂಶತಿ ತತ್ತ್ವಗಳಲ್ಲಿ ಎಂಟುರೂಪಗಳ, ಚಿಂತನೆಯ ಮಾಳ್ಪುದು=ಅನುಸಂಧಾನ ಮಾಡಬೇಕು ಲಿಂಗದೇಹ ಗುಣಾತ್ರಯಾತ್ಮಕವಾದದ್ದು. ಮೂರು ಗುಣಗಳು ಮೂರು ಆವರಣಗಳಾಗಿ ಅದೆ. ಪ್ರಥಮಾವರಣ ಜೀವನ ಮೇಲೆ. ಇದರಲ್ಲಿ (೧) ಅವ್ಯಕ್ತತತ್ತ್ವ, (೨) ಮಹತ್ತತ್ವ. (೩) ಅಹಂಕಾರ ತತ್ತ್ವ, (೪) ಮನಸ್ಸು, (೫) ಅರಿಷಡ್ವರ್ಗಗಳು (೬) ಅಹಂಮಮಕಾರಗಳು ಎಂತ ಆರು ಅದೆ. ಇದು ಸತ್ವಾವರಣ ಎಂತ ನಾಮ.

ದ್ವಿತೀಯಾವರಣ ರಜೋ ಆವರಣ. ಇದರಲ್ಲಿ ದಶೇಂದ್ರಿಯಗಳು. ತೃತೀಯಾವರಣ ತಮೋ ಆವರಣ. ಇದರಲ್ಲಿ ಪಂಚಭೂತ, ಪಂಚತನ್ಮಾತ್ರ, ಪಂಚ ಅವಿದ್ಯಾ, ಕಾಮ, ಅನಾದಿಕರ್ಮ ಈ ಪ್ರಕಾರ ಇರೋದಾಗಿ ಅದೆ. (ಜೀವನ ಅನಾದಿ ಕರ್ಮವು. ಆ ಜೀವನ ಲಿಂಗದೇಹದ ಮೇಲೆ ಆಚ್ಛಾದಿತವಾಗಿರುವ ಮೂರು ಪರಿಚ್ಛೇದ ಅಂದರೆ, ಆವರಣಗಳ ಪೈಕಿ ಅಂದರೆ, ಸತ್ವ ಪರಿಚ್ಛೇದ, ರಜಃಪರಿಚ್ಛೇದ, ಮತ್ತು ತಮಃಪರಿಚ್ಛೇದ. ಇವುಗಳ ಪೈಕಿ ಮೂರನೆಯದಾದ ತಮಃಪರಿಚ್ಛೇದದಲ್ಲಿ ಶಕ್ತ್ಯಾತ್ಮಕವಾಗಿ ಇದೆ. ಇದು ನನ್ನ ಸ್ವಂತ ತಿಳಿವಳಿಕೆಗಾಗಿ ಬರೆದುಕೊಂಡಿರುವುದು.)

ಪಂಚಾಶದ್ವರಣವೇದ್ಯನ=ಐವತ್ತು ಅಕ್ಷರದಿಂದ ತಿಳಿಸಿಕೊಡತಕ್ಕ ಶ್ರೀ ಪರಮಾತ್ಮನ, ಅಜಾದಿ ಐವತ್ತು ಮೂರ್ತಿಗಳನು="ಅಂ" ಅಜಾಯ ನಮಃ ಆರಂಭಮಾಡಿ, "ಕ್ಷಂ" ಶ್ರೀಲಕ್ಷ್ಮೀನರಸಿಂಹಾಯನಮಃ-ಎಂತ ಐವತ್ತು ಭಗವದ್ರೂಪಗಳ, ಸದಾ=ನಿರಂತರದಲ್ಲಿಯೂ, ಸರ್ವತ್ರ, ದೇಹಗಳಲ್ಲಿ =ಚರಾಚರ ಸರ್ವತ್ರ ಸ್ವರೂಪದೇಹ ಆರಂಭಮಾಡಿ ಸ್ಥೂಲದೇಹ ಪರಿಯಂತ ದೇಹಗಳಲ್ಲಿ ಸ್ವರೂಪಲಿಂಗ ಅವ್ಯಕ್ತಸಂಕೇತ, ಮಹತ್ತತ್ವ ಅನಿರುದ

ಧ

ಸಂಕೇತ, ಅಹಂಕಾರ ಅನಾದಿ ಲಿಂಗಶರೀರದ ಮೇಲೆ ವೈಷಯಿಕ ಸಂಕೇತ ಶರೀರ ಸ್ಥೂಲಶರೀರ ಇತ್ಯಾದಿ ದೇಹಗಳಲ್ಲಿ, ಪೂಜಿಪುದು= ಐವತ್ತು ರೂಪಗಳ ಚಿಂತಿಸಿ ಪೂಜಾ ಮಾಡಬೇಕು. ಈ ಐವತ್ತು ರೂಪಗಳಿಗೆ ಸ್ಥಾನಗಳು ದಾವ ವೆಂದರೆ, ಮಾತೃಕಾಮಂತ್ರದಲ್ಲಿ ಸ್ಥಾನ ಹೇಳಿದ್ದಾರೆ. ಆದ್ದರಿಂದ ಆಯಾ ಸ್ಥಾನಗಳಲ್ಲಿ ಪೂಜಿಸಬೇಕು. ಚರಾಚರಗಳಿಗೆ ನಾಮಗಳು ಅಕ್ಷರದಿಂದ ಯುಕ್ತ ವಾಗಿ ಅವೆ. ಆಯಾ ಭಗವದ್ರೂಪಗಳು ಸ್ಥಾವರ ಜಂಗಮಗಳಲ್ಲಿ ಅನು ಸಂಧಾನದಿಂದ ಪೂಜಿಸಬೇಕು. ಲಿಂಗದಾರಭ್ಯ ಅನಿರುದ್ಧ ಶರೀರದವರೆಗೂ ಜೀವಾಕಾರ ಸ್ಥೂಲದೇಹ ತದ್ಭಿನ್ನ ಕರ್ಮವಶಾತ್ ನಾನಾ ದೇಹಗಳು ಬರುತ್ತಾ ಇರುತ್ತವೆ. ಇದರ ವಿಚಾರ ಪ್ರಕಾಶಸಂಹಿತೆಯಲ್ಲಿ ವಿಸ್ತಾರವದೆ. ೨೫ ನೇ ಶ್ಲೋಕದಾರಭ್ಯ ಲಿಂಗಶರೀರದ ವಿಚಾರ ಎರಡರಲ್ಲಿ ವಾಯುಪ್ರಸಕ್ತಿ ಇಲ್ಲ. ೨೪ ನೇ ಶ್ಲೋಕದಲ್ಲಿ ಜೀವಸ್ವರೂಪವಿಚಾರ ಬ್ರಹ್ಮಾದಿ ದೇವತೆಗಳು ಆವಾಸಸ್ಥಾನ ಸಂಧ್ಯಂತರದಲ್ಲಿ ಹೇಳುತ್ತಾರೆ. ॥೨೬॥

(೨) "ಭಾವಪ್ರಕಾಶಿಕೆ" ವ್ಯಾಖ್ಯಾನ :–

ಪೂರ್ವ ಪದ್ಯದಲ್ಲಿ ಷೋಡಶಕಲಾತ್ಮಕ ಲಿಂಗಶರೀರವೆಂದು ಹೇಳಿ, ೧೫ ಕಲೆಗಳ ಭಗವದ್ರೂಪಗಳನ್ನು ಹೇಳಿದರು. ಈಗ ಉಳಿದ ಮನಸ್ತತ್ವವನ್ನೂ ಮತ್ತು ಇತರ ತತ್ತ್ವಗಳನ್ನೂ ಪ್ರಕಾರಾಂತವಾಗಿಯೂ ದೇಹಗಳಲ್ಲಿ ಭಗವ ದ್ರೂಪಗಳನ್ನು ಪೂಜಿಸಬೇಕೆಂಬ ವಿಷಯವನ್ನು ಹೇಳುತ್ತಾರೆ. ಮನಸ್ತತ್ವದಲ್ಲಿ ಆತ್ಮರೂಪವನ್ನು, ಅಹಂಕಾರತತ್ತ್ವದಲ್ಲಿ ಅಂತರಾತ್ಮರೂಪವನ್ನೂ, ಮಹತ್ತತ್ವ ದಲ್ಲಿ ಪರಮಾತ್ಮರೂಪವನ್ನೂ, ಅವ್ಯಕ್ತ ತತ್ತ್ವದಲ್ಲಿ ಜ್ಞಾನಾತ್ಮರೂಪವನೂ ಚಿಂತಿಸಬೇಕು. ಅಲ್ಲದೆ, "ಅ" ಕಾರ ಮೊದಲು "ಕ್ಷ"ವರೆಗೂ ಅಕ್ಷರಗಳು ೫೧ ಆಗುವುವು. ಈ ಅಕ್ಷರ ಪ್ರತಿಪಾದ್ಯ ರೂಪಗಳು ತಂತ್ರಸಾರದಲ್ಲಿ ಹೇಳಿರು ವರು. ಮಾತೃಕಾನ್ಯಾಸದಲ್ಲಿಯೂ ಬರುವುದು. ಅಜ, ಆನಂದ. ಇಂದ್ರ, ಈಶಾನ-ಮೊದಲಾದ ೫೧ ರೂಪಗಳಿರುವುವು. ಆದರೆ ಇಲ್ಲಿ ದಾಸರಾಯರು ೫೦ ಅಕ್ಷರಗಳು, ೫೦ ರೂಪಗಳೆಂದು ಹೇಳಿರುವರು. **"ಏಕಪಂಚಾಶ ದ್ವರ್ಣಾನಾಂ"** ಇತ್ಯಾದಿ ಆಚಾರ್ಯರ ವಾಕ್ಯದಿಂದ ೫೧ ಆಗುವುವು. ಇದರ ಅರ್ಥವೇನೆಂದರೆ–"ಅ"ಕಾರ ಮೊದಲು "ಳ"ಕಾರದವರೆಗೂ ಇರುವ ಅಕ್ಷರಗಳ

ಅ–ಅಜ, ಆ–ಆನಂದ, ಇ-ಇಂದ್ರ, ಉ–ಉಗ್ರ, ಊ–ಊರ್ಜ, ಋ–ಋತಂಭರ–ಎಂದು ಅಕ್ಷರಗಳೇ ಆಯಾ ರೂಪಗಳನ್ನು ತೋರಿಸುವುವು. "ಕ್ಷ" –ಎಂಬ ಅಕ್ಷರಕ್ಕೆ ಮಾತ್ರ ಅಕ್ಷರರೂಪವನ್ನು ತೋರಿಸದೆ, ನರಸಿಂಹ ದೇವರು ಆ ಅಕ್ಷರ ಪ್ರತಿಪಾದ್ಯರಾಗಿರುವರು. ಆದ್ದರಿಂದ ದಾಸರಾಯರು ಪಂಚಾಶದ್ವರ್ಣವೇದ್ಯನೆಂತ ಹೇಳಿದರು. "ಕ್ಷಂ"–ನರಸಿಂಹಾಯನಮಃ– ಎಂಬುದಾಗಿ ಹೇಳಿರುವರು. ಇದರಿಂದ ತಿಳಿದುಬರುವ ಅಂಶವೇನೆಂದರೆ : –

"ಪಂಚಾಶದ್ವರ್ಣವೇದ್ಯನು"–ಎಂಬ ದಾಸರಾಯರ ವಾಕ್ಯದಿಂದ ೫೦ ಅಕ್ಷರಗಳಿಂದ ತಿಳಿಸಿಕೊಳ್ಳಲ್ಪಡುವನೆಂದು ಅರ್ಥವಾಗುವುದು. ಇದರಿಂದ "ಅ" ಕಾರ ಮೊದಲು "ಳ" ಕಾರದವರೆಗೆ ಆಗುವ ೫೦ ಅಕ್ಷರ ಪ್ರತಿಪಾದ್ಯ ನಾಮುಗಳು "ಕ್ಷ" ಕಾರ ಪ್ರತಿಪಾದ್ಯ ನರಸಿಂಹನಾಮಕನಾದ ಶ್ರೀಪರಮಾತ್ಮನ ಗುಣಗಳನ್ನು ಹೇಳುವವೆಂಬ ಭಾವ. ಹೇಗೆಂದರೆ, ಅಜ=ಉತ್ಪತ್ತಿಶೂನ್ಯ, ಆ=ಆನಂದಸ್ವರೂಪ, ಇಂದ್ರ=ಪರಮೈಶ್ವರ್ಯಪ್ರದನು–ಇತ್ಯಾದಿ ಭಗವ ದ್ರೂಪಗಳನ್ನು ಪ್ರಕಟಮಾಡುವ ರೂಪಗಳು ೫೦. "ಕ್ಷ" ಕಾರ ಪ್ರತಿ ಪಾದ್ಯ ವೇದ್ಯನು=ತಿಳಿದುಕೊಳ್ಳಲ್ಪಡಲು ಯೋಗ್ಯನು. ಸ್ತೋತ್ರ ಮಾಡು ವವನೂ, ಮಾಡಿಸಿಕೊಳ್ಳಲ್ಪಡುವವನೂ, ಅವನೇ ಒಂದು ರೂಪದಿಂದ ತನ್ನ ಮಹಿಮೆಯನ್ನು ಉಪದೇಶಮಾಡುತ್ತಾ, ಮತ್ತೊಂದು ರೂಪದಿಂದ ಹೊಗಳಿಸಿ ಕೊಳ್ಳುತ್ತಾ ಇರುವವನು ಪರಮಾತ್ಮನೇ ಆದುದರಿಂದ, ವೇದ್ಯರೂಪವಾದ ಕ್ಷ ಕಾರ ಪ್ರತಿಪಾದ್ಯ ನರಸಿಂಹರೂಪವನ್ನು ಬೇರೆಯಾಗಿ ತೆಗೆದುಕೊಂಡಿರೆಂಬು ವುದರಿಂದ, ಆಚಾರ್ಯರ ಮತಕ್ಕೂ ದಾಸರಾಯರ ಅಭಿಪ್ರಾಯಕ್ಕೂ ಭೇದವಿಲ್ಲ ಕ್ಷ ಕಾರ ಪ್ರತಿಪಾದ್ಯ ನರಸಿಂಹ ಶಬ್ದಕ್ಕೆ ಪುರುಷೋತ್ತಮನೆಂದರ್ಥ. ಪುರುಷ ರೂಪಗಳೇ ಅವತಾರಗಳಿಗೆ ಮೂಲಭೂತವಾದ ಬ್ರಹ್ಮಾದಿಗಳನ್ನು ಸೃಷ್ಟಿ ಮಾಡುವುದಕ್ಕಾಗಿ ತೆಗೆದುಕೊಂಡ ರೂಪವು.

ಭಾಗವತ ಪ್ರಥಮ ಸ್ಕಂಧದಲ್ಲಿ :—

> "ಜಗೃಹೇ ಪೌರುಷಂ ರೂಪಂ ಭಗವನ್ಮಾಹದಾದಿಭಿಃ ।
> ಸಂಭೂತಂ ಷೋಡಶಕಲಮಾದಾ ಲೋಕಸಿಸೃಕ್ಷಯಾ ।

ಯಸ್ಯಾಂಭ ಸಿ ಶಯಾನಸ್ಯ ಯೋಗನಿದ್ರಾಂ ವಿತನ್ವತಃ ।
ನಾಭಿಹ್ರದಾಂಬುಜಾದಸೀದ್ಬ್ರಹ್ಮಾ ವಿಶ್ವಸ್ಯಜಾಂಪತಿಃ" ||

—ಎಂದರೆ, ಶ್ರೀ ಪರಮಾತ್ಮನು ಮೊಟ್ಟಮೊದಲು ಜಗತ್ತನ್ನು ಸೃಷ್ಟಿ ಮಾಡುವ ಉದ್ದೇಶ್ಯ ಮಹತತ್ವಾಂಹಕಾರತತ್ವ ಪಂಚಭೂತಗಳಿಂದ ಸಹಿತವಾದ ಷೋಡಶಕಲೆಗಳುಳ್ಳ ಪುರುಷ ರೂಪವನ್ನು ಸ್ವೀಕರಿಸಿದನು. ಅಂದರೆ, ಪ್ರಳಯಕಾಲದಲ್ಲಿ ಶಯನಮಾಡಿರುವ ರೂಪವನ್ನೇ ಪುರುಷರೂಪದಿಂದ ವ್ಯಕ್ತಪಡಿಸಿದನು. ಯಾವ ಪರಮಾತ್ಮನು ಪ್ರಳಯೋದಕದ ಮೇಲೆ ಮಲಗಿ, ಯೋಗನಿದ್ರೆಯನ್ನು ಪ್ರಕಟಿಸುತ್ತಿದ್ದನೋ, ಆ ಪರಮಾತ್ಮನೇ ಪರಮಪುರುಷ ರೂಪವನ್ನು ಪ್ರಕಟಣೆ ಮಾಡಿದನು. ಆ ಪರಮ ಪುರುಷರೂಪಿಯಾದ ಪರಮಾತ್ಮನ ನಾಭಿ ಕಮಲದಿಂದಲೇ ಬ್ರಹ್ಮದೇವರು ಜನಿಸಿದರೆಂದು ಹೇಳಿರುವರು. ಆದ್ದರಿಂದ ಪರಮಪುರುಷರೂಪವೇ ಸೃಷ್ಟಿಕಾರಣವಾದ ಪ್ರಥಮರೂಪವು. ಪರಮಪುರುಷನೆಂಬ ವಾಕ್ಯವು ಪುರುಷ ಶ್ರೇಷ್ಠನೆಂಬಂಥ ಅರ್ಥವನ್ನು ಸೂಚಿಸುವುದು. ಅದರಂತೆ "ಕ್ಷ" ಕಾರ ಪ್ರತಿಪಾದ್ಯ ನರಸಿಂಹ ಶಬ್ದಾರ್ಥವು—ನರ= ಪುರುಷ, ಸಿಂಹ=ಶ್ರೇಷ್ಠ ಎಂದರ್ಥ. ಈ ರೀತಿ ೫೦ ಅಕ್ಷರಗಳಿಂದ ವೇದ್ಯನು ನರಸಿಂಹನೆಂದು ದಾಸರಾಯರ ವಾಕ್ಯಕ್ಕೆ ವೇದರೂಪ ೫೦, ವೇದ್ಯ ರೂಪ ೧. ಅಂತು, ೫೧ ಎಂದರ್ಥವೆಂದು ತಿಳಿಯಬೇಕು. ಹೀಗೆ ೫೧ ಅಕ್ಷರ ಪ್ರತಿಪಾದ್ಯ ಭಗವದ್ರೂಪಗಳನ್ನು ಅಜಾಯನಮಃ—ಮುಖೇ, ಆನಂದಾಯ ನಮಃ—ಶಿರಸಿ-ಎಂಬ ಮಾತೃಕಾನ್ಯಾಸ ಕ್ರಮದಿಂದ ದೇಹದ ಸರ್ವಪ್ರದೇಶಗಳಲ್ಲಿ ಸರ್ವದಾ ಪೂಜಿಸಬೇಕೆಂದು ತಾತ್ಪರ್ಯ. ||೨೬||

(೩) "ಭಾವದರ್ಪಣಟೀಕಾ" ವ್ಯಾಖ್ಯಾನ :—

ಮನದಲ್ಲಿ, ಅಹಂಕಾರದಲ್ಲಿ ಅಂತರಾತ್ಮನು, ಘನಸುತತ್ತ್ವದಲ್ಲಿ, ಎಂದರೆ ಮಹತ್ತತ್ವ ಎಂದರ್ಥ. ಅದರಲ್ಲಿ ಪರಮಾತ್ಮನು, ಅವ್ಯಕ್ತದಲ್ಲಿ ಜ್ಞಾನಾತ್ಮನು

ಸರ್ವರ ದೇಹದಲ್ಲಿ ಅಜಾದ್ಯೈವತ್ತು ಮೂರ್ತಿಗಳು ಚಿಂತನಮಾಡಿ ಪೂಜಿಸೆಂದು ಸೂಚಿಸುತ್ತಾರೆ–"ಮನೇತಿ". ॥೨೬॥

## (೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ):–

ಮನ ಇತಿ ॥ "ಪರಮಾತ್ಮಾ ಶೈವಗೇಹೇ ತತ್ರಾವ್ಯಕ್ತೇ ಪರಾತ್ಮಕಃ"॥ ಇತಿ ಚ ॥ ಅಜಾದಿ ಶಬ್ದ ವೃತ್ತಿಸ್ತು–ಜ್ಞೇಯಾರ್ಣೇಷು ತು ಪೂಜಕೈಃ ॥ ಅನುತ್ಪತ್ತಿ ಸುಖೈಶ್ವರ್ಯಾತ್ ಅಜ ಆನಂದ ಇಂದ್ರಕಃ ॥ ರಮಾಯಾಃ ಶಾಸನಾತ್ ರುದ್ರಗ್ರಾಸಕತ್ವಾತ್ ಹರಿಃ ಮತಃ ॥ ಈಶ ಉಗ್ರೋ ಬಲಂ ಚೇಷ್ಟಾ ಯಂದಂಗಂ ಹ್ಯೂರ್ಜ ಇತ್ಯಪಿ ॥ ಋತುಂಭರಃ ಸತ್ಯ ಜಗದ್ಧಾರಣಾತ್ ಪುತ್ರ ಹತ್ಯಯಾ ॥ ಋಂದನುಂ ಘಾತಯತ್ಯೇವ ಋಘಃ ಕ್ಲೇಶಂ ಪ್ರಯಚ್ಛತಿ ॥ ಆದಿತೇಃ ಸುಖದಾತೃತ್ವಾತ್ ಲೃಶಃ ಶ್ರೀಶಃ ಹರಿಃ ಮತಃ॥ ಸುತಹತ್ಯಾದಿತಿಂ ನೇತಾ ಲೃಜಿರೀಶೋ ಮಹಾಸಯಮ್ ॥ ಏಕಾತ್ಮಾ ಶ್ರೇಷ್ಠ ಸ್ವಾಮಿತ್ವಾತ್ ಹರರಂತ್ಯೈರ ಇತ್ಯಪಿ ॥ ಸಾಮರ್ಥ್ಯ ಧಾರಣಾತ್ ಓಜೋ ಭೃದೀಶೋಜ ಸುತೋ ಯತಃ ॥ ಔರಸಃ ನಾಶಕಶ್ಚಾಂ ತ್ಯೋರ್ಧಾಗರ್ಭೇ ಯಸ್ಯತದ್ವಚಃ ॥ ಸುಖಾದಾತೃತ್ವಾತ್ ಪಾಲಿಕತ್ವಾತ್ ಕಪಿಲಃ ಲಾಲನಾತ್ ಹರಿಃ ॥ ಇಂದ್ರಿಯೇಶಃ ತು ಖಪತಿಃ ಶತ್ರೂಣಾಂ ಅಂತಕೃತ್ ಯತಃ ॥ ಘರ್ಮಃ ವಿಷಯಸಾರತ್ವಾತ್ ಜೀ ಜಸಾರಃ ಸುಂದರೋ ಯತಃ ॥ ಚಾರ್ವಂಗೋ ವೇದಗಮ್ಯತ್ವಾತ್ ಜನಾರ್ದತ್ವಾತ್ ಜನಾರ್ದನಃ ॥ ಜನನ ಸ್ಯಾರ್ದನಾತ್ ಝಟಿತಾರಿಃ ದ್ರಾವಿತ ಶತ್ರುಕಃ ॥ ಞವೋ ಮಾನಯತಿ ಶ್ರೀಶಃ ವೇದಾದ್ಯೈರ್ಞಾತ್ಮ ಗಾಯಕಮ್ ॥ ಟಂಕೀ ಟಂಕ ಕರತ್ವಾತ್ ಸಃ ಮಹೇಶೇಂದ್ರ ಸುಖಪ್ರದಃ ॥ ಠಲಿತಃ ಕೃಷ್ಣವರ್ತೇಂದ್ವೋಃ ವಿಶೇಷಾತ್ ಶಾಂತಿದಾಯಕಃ ॥ ಡರಕೋ ಮುತ್ತರಮತೋ ಬ್ರಹ್ಮಾಸೇವೇತ್ಯತೋ ಢರೀ ॥ ಣಾತ್ಮಾ ಸುಖಾತ್ಮಕಃ ಯಸ್ಮಾತ್ ಅನಿಷ್ಟಾತ್ ತಾರಯೇತ್ ಯತಃ ॥ ತಾರಃ ಅದ್ರಿ ಧರಣಾತ್ ಧಂಭಃ ದಂಡೀ ಗೋ ಕ್ರೀಡನಾತ್ ಹರಿಃ ॥ ಧನ್ವೀ ನಮ್ಯತ್ವತೋ ನಮ್ಯಃ ಪೂರ್ಣತ್ವಾತ್ ಪರ ಇತ್ಯಪಿ ॥ ಫಲೀ ಫಲ ಪ್ರದೋ ದೇವಃ ಬಲಿಷ್ಠತ್ವಾತ್ ಬಲೀ ಹರಿಃ ॥ ಭಗಃ ಷಡ್ಗುಣ

ಪೂರ್ಣತ್ವಾತ್ ಬೋಧಪೂರ್ತೇರ್ಮನುಸ್ತಥಾ ॥ ಸರ್ವಪೂಜ್ಯೋ ಯಜ್ಞ ನಾಮಾsಪರಿಚ್ಛಿನ್ನೋ ರಮೋ ಯತಃ ॥ ರಾಮಃ ಭಕ್ತವೃತೇಃ ಶ್ರೀಶಃ ವರೋ ಹರಿಃ ॥ ಸುಖರೂಪಾತ್ಮಧೀಯುಕ್ತಃ ಶಾಂತಸಂವಿತ್ ಮಧುಂ ಹರಃ ಷಡೈಶ್ವರ್ಯೋತ್ಕೃಷ್ಟ ಗಾತ್ರಃ ಸಾರಾತ್ಮಾ ಜಗದೀಶಿತಾ॥ ಸರ್ವಜ್ಞ ಸಾರೋ ಹಂಸಾಖ್ಯೋ ಮುಕ್ತೌ ಬ್ರಹ್ಮೇಂದ್ರಯೋಃ ಸುಖಮ್ ॥ ಯಸ್ಮಾತ್ ಲಾಲುಕನಾಮಾಸೌ ಪಂಚಾಶನ್ನಾಮಭಿಃ ಶ್ರುತಃ ॥ ನೃಸಿಂಹ ಇತಿ ॥೨೬॥

**ಕನ್ನಡಾರ್ಥ:**

"ಮಹತ್ತತ್ವದಲ್ಲಿ ಪರಮಾತ್ಮ ರೂಪದಿಂದಲೂ ಮತ್ತು ಅವ್ಯಕ್ತ ತತ್ತ್ವದಲ್ಲಿ ಜ್ಞಾನಾತ್ಮರೂಪದಿಂದಲೂ, ಹೀಗೆ ಎಂಟು ರೂಪಗಳಿಂದ ವಿರಾಜಮಾನನಾಗಿದ್ದಾನೆ" ಎಂದು ತಿಳಿಯಬೇಕು. ಇದು **ಶ್ರೀ ಮಧ್ವಾಚಾರ್ಯರ** ವಚನ.

ಶ್ರೀ ಪರಮಾತ್ಮನು ಅಜಾದಿ ವರ್ಣವಾಚ್ಯರೂಪಗಳಿಂದ ೫೧ ವರ್ಣಗಳಲ್ಲಿ ಪ್ರತಿಪಾದ್ಯನಾಗಿದ್ದಾನೆ. ಆ ಶಬ್ದಗಳ ಅರ್ಥವನ್ನು ತಿಳಿಯುವುದು ಉಪಾಸನೆಗೆ ಅತ್ಯಗತ್ಯ :— **೧೬ ಸ್ವರಾಕ್ಷರಗಳು :—**

೧. "ಅ" ಅಜ = ಜನನವಿಲ್ಲದಿರುವವನು (ಉತ್ಪತ್ತಿ ನಾಶ ಶೂನ್ಯ)
೨. "ಆ" ಆನಂದ = ಆನಂದರೂಪನು.
೩. "ಇ" ಇಂದ್ರ = ಪರಮೈಶ್ವರ್ಯವಂತನು.
೪. "ಈ" ಈಶ = ಮಹಾಲಕ್ಷ್ಮಿಗೂ ನಿಯಾಮಕನು.
೫. "ಉ" ಉಗ್ರ = ರುದ್ರನನ್ನು ಸಂಹರಿಸುವವನು, ಪಾಪಿಗಳಿಗೆ ಕ್ರೂರನು.
೬. "ಊ" ಊರ್ಜ = ನಿಸ್ಸೀಮನಾದ ಬಲ, ಕ್ರಿಯಾಶಕ್ತಿಯುಳ್ಳವನು.
೭. "ಋ" ಋತಂಭರ = ಸತ್ಯಜಗತ್ತನ್ನು ಧರಿಸುವವನು (ಪೋಷಕ).
೮. "ೠ" ೠಘ = ಮಕ್ಕಳನ್ನು ಸಂಹರಿಸುವುದರಿಂದ, ದನುವಿಗೆ (ದಾನವರ ತಾಯಿಗೆ) ಕ್ಲೇಶವನ್ನುಂಟುಮಾಡುವವನು.

೯. "ಲೃ" ಲೃಶಃ = ದೇವಮಾತೆಯಾದ ಅದಿತಿಗೆ ಸುಖಪಡಿಸುವವನು.

೧೦. "ಲೄ" ಲೄಶ = ದಿತಿದೇವಿಯನ್ನು ವಿಷಾದಪಡಿಸುವವನು.

೧೧. "ಏ" ಏಕಾತ್ಮ = ಮುಖ್ಯಸ್ವಾಮಿಯು.

೧೨. "ಐ" ಐರ = ರುದ್ರನನ್ನು ಸಂತೋಷಗೊಳಿಸುವವನು.

೧೩. "ಓ" ಓಜೋಭೃತ್ = ನಿರತಿಶಯವಾದ ಸಾಮರ್ಥ್ಯವುಳ್ಳವನು.

೧೪. "ಔ" ಔರಸ = ಬ್ರಹ್ಮನೇ ಮಗನಾಗಿ ಉಳ್ಳವನು.

೧೫. "ಅಂ" ಅಂತ = ಪ್ರಳಯ ಕಾಲದಲ್ಲಿ ಸರ್ವಜಗತ್ತನ್ನೂ ಸಂಹರಿಸುವವನು.

೧೬. "ಅಃ" ಅರ್ಧಗರ್ಭ = ಬ್ರಹ್ಮಾದಿಗಳನ್ನು ಉದರದಲ್ಲಿ ಧರಿಸಿರುವವನು.

**ವ್ಯಂಜನಾಕ್ಷರಗಳು– ಕ–ವರ್ಗಪಂಚಕದಿಂದ ಪ–ವರ್ಗ ಪಂಚಕದವರೆಗೆ :**

೧೭. "ಕ" ಕಪಿಲ = ಸುಖರೂಪನು (ಸರ್ವಸಾರಭೋಕ್ತ) ಜಗತ್ಪಾಲಕನು. ಅಂತ್ಯದಲ್ಲಿ ಸಂಹಾರಕನು.

೧೮. "ಖ" ಖಪತಿ = ಇಂದ್ರಿಯಗಳಿಗೆ ನಿಯಾಮಕನು–ಪ್ರೇರಕನು.

೧೯. "ಗ" ಗರುಡ = ಗರುಡನ ಮೇಲೆ ಕುಳಿತಿರುವವನು.

೨೦. "ಘ" ಘರ್ಮ = ಶತ್ರು ಸಂಹಾರಕ.

೨೧. "ಙ" ಙಸಾರ = ವಿಷಯಗಳಲ್ಲಿ ಸಾರರೂಪದಿಂದ ಇರುವವನು.

೨೨. "ಚ" ಚಾರ್ವಾಂಗ = ಸುಂದರವಾದ ಅವಯವವುಳ್ಳವನು.

೨೩. "ಛ" ಛಂದೋಗಮ್ಯ = ವೇದಗಳಿಂದ ತಿಳಿಸಲ್ಪಡುವವನು.

೨೪. "ಜ" ಜನಾರ್ದನ = ಜನನರಹಿತ ಹಾಗೂ ಸಂಸಾರನಾಶಕನು.

೨೫. "ಝ" ಝೂಟತಾರಿ = ಶತ್ರುಗಳನ್ನು ಪರಾಭವಗೊಳಿಸುವವನು.

೨೬. "ಞ" ಞಮಃ = ವೇದಾದಿಗಳಿಂದ ತನ್ನನ್ನು ಸ್ತೋತ್ರಮಾಡುವವರಿಗೆ ಮೋಕ್ಷಾದಿಗಳನ್ನಿತ್ತು ಸನ್ಮಾನಗೊಳಿಸುವವನು.

೨೭. "ಟ" ಟಂಕೀ=ಟಂಕವೆಂಬ ಆಯುಧವನ್ನು ಧರಿಸಿರುವವನು (ಕಲ್ಲನ್ನು ಸೀಳುವ ಆಯುಧ)

೨೮. "ಠ" ಠಲಕ=ರುದ್ರ ಮತ್ತು ಇಂದ್ರರಿಗೆ ಸುಖಪ್ರದನು.

೨೯. "ಡ" ಡರಕ=ಚಂದ್ರ, ಅಗ್ನಿ ಇವರಿಗೆ ವಿಶೇಷಕಾಂತಿದಾಯಕನು.

೩೦. "ಢ" ಢರೀ=ಮುಕ್ತರಿಗೆ ಅನಂದಪ್ರದನಾದ ಬ್ರಹ್ಮನನ್ನೇ ಪುತ್ರನಾಗಿ ಉಳ್ಳವನು.

೩೧. "ಣ" ಣಾತ್ಮಾ=ಸುಖಸ್ವರೂಪನು.

೩೨. "ತ" ತಾರ=ಸಂಸಾರದಿಂದ ತರಿಸುವವನು (ದಾಟಿಸುವವನು).

೩೩. "ಥ" ಥಭ=ಗೋವರ್ಧನ ಪರ್ವತವನ್ನು ಧರಿಸಿದವನು.

೩೪. "ದ" ದಂಡೀ=ಗೋವುಗಳನ್ನು ಆಡಿಸಲಿಕ್ಕೆ ಕೋಲನ್ನು ಹಿಡಿದವನು.

೩೫. "ಧ" ಧನ್ವೀ=ಶಾರ್ಙವೆಂಬ ಧನಸ್ಸನ್ನು ಹಿಡಿದಿರುವವನು.

೩೬. "ನ" ನಮ್ಯ=ಸರ್ವರಿಂದಲೂ ವಂದನೀಯನು.

೩೭. "ಪ" ಪರಃ=ಗುಣಪೂರ್ಣನು ಸರ್ವೋತ್ತಮನು.

೩೮. "ಫ" ಫಲೀ=ಫಲದಾಯಕನು.

೩೯. "ಬ" ಬಲೀ=ಅಮಿತ ಬಲವುಳ್ಳವನು.

೪೦. "ಭ" ಭಗ=ಪೂರ್ಣಜ್ಞಾನಾದಿ ಷಡ್ಗುಣೈಶ್ವರ್ಯ ಸಂಪನ್ನನು.

೪೧. "ಮ" ಮನ=ಪೂರ್ಣಜ್ಞಾನರೂಪಿಯು.

ಅವರ್ಗೀಯ ವ್ಯಂಜನಾಕ್ಷರಗಳು

೪೨, "ಯ" ಯಜ್ಞ=ಎಲ್ಲರಿಂದಲೂ ಪೂಜಿಸಲ್ಪಡುವವನು.

೪೩. "ರ" ರಾಮ=ಅಪರಿಮಿತವಾದ ರಮಣ. (ಸುಖ) ಉಳ್ಳವನು ಭಕ್ತರಿಗೆ ಸುಖಪ್ರದಾಯಕ.

೪೪. "ಲ" ಲಕ್ಷ್ಮೀಪತಿ=ಶ್ರೀಲಕ್ಷ್ಮೀರಮಣನು.

೪೫. "ವ" ವರ=ಎಲ್ಲರಿಂದಲೂ ಮೋಕ್ಷಕ್ಕಾಗಿ ವರಿಸಲ್ಪಡುವವನು.

೪೬. "ಶ" ಶಾಂತಸಂವಿತ್ = ಸುಖರೂಪವಾದ ಬುದ್ಧಿಯುಳ್ಳವನು.

೪೭. "ಷ" ಷಡ್ಗುಣಾತ್ಮಾ = ಷಡ್ಗುಣೈಶ್ವರ್ಯ ಸಂಪನ್ನನಾದ ಭಗವಂತನು.

೪೮. "ಸ" ಸಾರಾತ್ಮಾ = ಅಪ್ರಾಕೃತ ಚಿದಾನಂದಮಯ ದೇಹವುಳ್ಳವನು

೪೯. "ಹ" ಹಂಸ = ಪ್ರಳಯಕಾಲದಲ್ಲಿ ಸರ್ವರನ್ನೂ ಸಂಹರಿಸುವವನು ಸರ್ವಜ್ಞನು,

೫೦. "ಳ" ಳಾಳುಕ = ಮುಕ್ತರಿಗೂ, ಬ್ರಹ್ಮರುದ್ರರಿಗೂ ಸುಖವನ್ನು ಉಂಟುಮಾಡುವವನು.

೫೧. "ಕ್ಷಂ" ಕ್ಷ–ಕಾರ ವಾಚ್ಯನಾದ ಲಕ್ಷ್ಮೀನರಸಿಂಹದೇವರು (ಮುಕ್ತಿ ಪ್ರದಾಯಕ ರೂಪ.)

ಇಂತು, ಪುರುಷೋತ್ತಮನಾದ ನಾರಾಯಣನು ಅಜಾದಿ ೫೦ ವರ್ಣಗಳಿಂದ ವಾಚ್ಯನಾಗಿದ್ದಾನೆ. ||೨೬||

## (೪) "ಗುರುಹೃದಯಪ್ರಕಾಶಿಕೆ" ವ್ಯಾಖ್ಯಾನ :–

ಪಂಚಭೂತಾದಿಗಳಲ್ಲಿ ಆತ್ಮರೂಪಭಾವನೆ ಹೇಳಿ, ಅಂತರಾತ್ಮಾದಿ ರೂಪ ತ್ರಯ ಸ್ಥಾನವನ್ನು, ಅಜಾದಿ ಪಂಚಾಶದ್ರೂಪ ಸಹಾ ಚಿಂತಿಸುವರೆಂದು ತಿಳಿಸುತ್ತಾರೆ : —

ಮನಸ್ಸು, ಅಹಂಕಾರತತ್ತ್ವದಲ್ಲಿ ಸಹಾ ಅಂತರಾತ್ಮರೂಪ, ಘನ ಸುತತ್ತ್ವವೆಂಬ ಮಹತ್ತತ್ತ್ವದಲ್ಲಿ ಪರಮಾತ್ಮ ರೂಪ, ಅವ್ಯಕ್ತತತ್ತ್ವದಲ್ಲಿ ವಿಜ್ಞಾನಾತ್ಮರೂಪ, ಅಂ–ಅಜಾಯ ನಮಃ ಮೊದಲು ಕ್ಷಂ–ನೃಸಿಂಹಾಯನಮಃ ಎಂಬುದೇ ಕೊನೆಯಾಗಿರುವ ಐವತ್ತು ರೂಪಗಳನ್ನೂ, ಇನಿತು ದೇಹಗಳಲ್ಲಿ, ಎಂದರೆ, ಮಂತ್ರೋಕ್ತಪ್ರಕಾರ ತತ್ತ್ವಸ್ಥಾನಗಳಲ್ಲಿ ಸದಾ ಪೂಜಿಸುವುದೆಂದರ್ಥ. ||೨೬||

# ಸರ್ವವ್ಯಾಖ್ಯಾನಸಾರಸಂಗ್ರಹ

ಹಿಂದಿನ ಪದ್ಯದಲ್ಲಿ ಮೂಲರೂಪಿ ಶ್ರೀಮನ್ನಾರಾಯಣನ ವಿಶ್ವ, ತೈಜಸ ಪ್ರಾಜ್ಞ ಮತ್ತು ತುರ್ಯ ಎಂಬ ನಾಲ್ಕುರೂಪಗಳ ವಿವರಗಳನ್ನು ತಿಳಿಸಿ, ಪ್ರಸಕ್ತ ಪದ್ಯದಿಂದ ಉಳಿದ ಆತ್ಮ, ಅಂತರಾತ್ಮ, ಪರಮಾತ್ಮ ಮತ್ತು ಜ್ಞಾನಾತ್ಮ ಎಂಬ ರೂಪ ಚತುಷ್ಟಯಗಳ ವಿಚಾರ ವಿವರಿಸುತ್ತಾರೆ.

**"ಓಂ ನಮೋ ನಾರಾಯಣಾಯ"**–ಎಂಬ ಮಂತ್ರವು ಎಂಟು ಅಕ್ಷರಗಳಿಂದ ಯುಕ್ತವಾದದ್ದು. ಅಂದರೆ, ಇದು ಅಷ್ಟಾಕ್ಷರೀಮಂತ್ರವೆಂದು ತಾತ್ಪರ್ಯ. ಮೂಲರೂಪಿ ಶ್ರೀಮನ್ನಾರಾಯಣನು ಪ್ರಣವ ಪ್ರತಿಪಾದ್ಯನು. ಅಂದರೆ, ಓಂಕಾರ ಶಬ್ದವಾಚ್ಯನು. ಈ ಪ್ರಣವ ಮಂತ್ರದಲ್ಲಿ (೧) ಅ–ಕಾರ, (೨) ಉ–ಕಾರ, (೩) ಮ–ಕಾರಗಳು ಸೇರಿವೆ. ಇವುಗಳಿಗೆ ಸೇರಿದಂತೆ (೪) ನಾದ, (೫) ಬಿಂದು, (೬) ಘೋಷ (೭) ಶಾಂತ ಮತ್ತು (೮) ಅಂತಿ ಶಾಂತವೆಂದು ಐದು ದಳಗಳಿವೆ. ಇವುಗಳಿಂದ ಪ್ರತಿಪಾದ್ಯನಾಗಿ ಓಂಕಾರ ಸ್ವರೂಪನಾದ ಮೂಲರೂಪಿ ಶ್ರೀಮನ್ನಾರಾಯಣನು ಕ್ರಮವಾಗಿ (೧) ವಿಶ್ವ, (೨) ತೈಜಸ, (೩) ಪ್ರಾಜ್ಞ, (೪) ತುರ್ಯ, (೫) ಆತ್ಮ, (೬) ಅಂತರಾತ್ಮ, (೭) ಪರಮಾತ್ಮ ಮತ್ತು (೮) ಜ್ಞಾನಾತ್ಮ ಎಂಬ ಅಷ್ಟರೂಪಗಳಿಂದ ಪ್ರಣವ ಪ್ರತಿಪಾದ್ಯನಾಗಿ ವಿದ್ಯಮಾನನಾಗಿದ್ದು, ಹೃತ್ಕಮಲದ ಅಷ್ಟದಳಗಳಲ್ಲಿ ಸಂಚರಿಸುತ್ತಿದ್ದಾನೆ.

ಜೀವರ ಸ್ವರೂಪದೇಹದ ಮೇಲೆ ಆವರ್ಕವಾಗಿರುವ ಅನಾದಿ ಲಿಂಗ ಶರೀರದಲ್ಲಿ (೧) ವಿಶ್ವನಾಮಕ ಪರಮಾತ್ಮನು ಲಿಂಗಶರೀರದಲ್ಲಿ ಅಖಂಡ ರೂಪದಿಂದ ವ್ಯಾಪ್ತನಾಗಿದ್ದಾನೆ. ಪ್ರಥಮ ಪರಿಚ್ಛೇದಗತ ಮನಸ್ಸಿನಲ್ಲಿ ಇದ್ದಾನೆ ಎಂದು ಹಿಂದಿನ ಪದ್ಯದಲ್ಲಿ ತಿಳಿಸಲಾಗಿದೆ. (೨) ದ್ವಿತೀಯ ಪರಿಚ್ಛೇದಗತ ಪಂಚಜ್ಞಾನೇಂದ್ರಿಯಗಳಲ್ಲಿ **ತೈಜಸನೂ** (೩) ಪಂಚ ಕರ್ಮೇಂದ್ರಿಯಗಳಲ್ಲಿ **ಪ್ರಾಜ್ಞನೂ** ಮತ್ತು (೪) ತೃತೀಯ ಪರಿಚ್ಛೇ

ಗತ ತನ್ಮಾತ್ರಾಸಹಿತ ಭೂತಪಂಚಕಗಳಲ್ಲಿ **ತುರ್ಯ**ನಾಮಕ ಶ್ರೀಪರಮಾತ್ಮನು ಇದ್ದಾನೆ ಎಂದು ತಿಳಿಸಿರುವರು.

ಪ್ರಸಕ್ತ ಪದ್ಯದಲ್ಲಿ (೧) ಆತ್ಮ ನಾಮಕ ಪರಮಾತ್ಮನು ಮನಸ್ಸಿನಲ್ಲಿದ್ದಾನೆ. (ಹಿಂದಿನ ಪದ್ಯದಿಂದ ಮುಂದುವರಿದ ವಿವರ) ಆದರೆ ಹಿಂದಿನ ಪದ್ಯದಲ್ಲಿ ವಿಶ್ವನು ಲಿಂಗಶರೀರಗತ ಪ್ರಥಮ ಪರಿಚ್ಛೇದದಲ್ಲಿ ಮನಸ್ಸಿನಲ್ಲಿ ಇದ್ದಾನೆ ಎಂದು ಹೇಳಿದೆ. ಪುನರುಕ್ತಿಯಾಗುತ್ತದೆಯಲ್ಲಾ ?–ಎಂದರೆ, ಅ–ಕಾರ ಮಂತ್ರ ಪ್ರತಿಪಾದ್ಯನಾದ ವಿಶ್ವನು ಲಿಂಗಶರೀರದಲ್ಲಿ ಸಮಗ್ರರೂಪದಿಂದ (ಅಖಂಡರೂಪ) ಇದ್ದು ಮನಸ್ಸಿಗೆ ನಿಯಾಮಕನಾಗಿದ್ದಾನೆ ಎಂದು ತಾತ್ಪರ್ಯ ಲಿಂಗಶರೀರಗತ ಮನಸ್ಸಿನಲ್ಲಿ ಆತ್ಮ ನಾಮಕ ಶ್ರೀ ಪರಮಾತ್ಮನು ಪ್ರವರ್ತಕ ನಾಗಿದ್ದಾನೆ. ಅದೇ ವಿಶ್ವನೇ ಆತ್ಮರೂಪಾತ್ಮಕನಾಗಿ ಮನಸ್ತತ್ವ ಕಾರ್ಯವನ್ನು ಪ್ರವರ್ತಿಸುವವನು ಎಂದು ಅಭಿಪ್ರಾಯವೆಂದು ತಿಳಿಯಬೇಕು,

(೨) ಅಹಂಕಾರ ತತ್ತ್ವದಲ್ಲಿ **ಅಂತರಾತ್ಮ** ನಾಮಕ ಶ್ರೀಪರಮಾತ್ಮನು ವಿದ್ಯಮಾನನಾಗಿದ್ದು ಆ ತತ್ತ್ವದ ಗುಣಕಾರ್ಯಗಳಿಗೆ ಪ್ರೇರಕನಾಗಿದ್ದಾನೆ.

(೩) ಕಲಿದೋಷರಹಿತವಾದ (ಕಲಿಯ ಪ್ರವೇಶಕ್ಕೆ ಅವಕಾಶ ಇಲ್ಲದ) ಸತ್ತ್ವಗುಣ ಪ್ರಚುರವಾದ ಮಹತ್ತತ್ವಕ್ಕೆ **ಘನಸುತತ್ವ** ಎಂದು ದಾಸರಾಯರು ಪ್ರಸಕ್ತ ಪದ್ಯದಲ್ಲಿ ಹೇಳಿರುತ್ತಾರೆ. ಇಂತಹ ಘನ (ಸಮೀಚೀನವಾದ ಸತ್ತ್ವ ಪ್ರಚುರವಾದ) ಸುತತ್ವವಾದ ಮಹತ್ತತ್ವಕ್ಕೆ ಬ್ರಹ್ಮದೇವರು ಅಭಿಮಾನಿಗಳು. ಇಂತಹ ಬ್ರಹ್ಮಾಭಿಮನ್ಯಮಾನವಾದ ಮಹತ್ತತ್ವದಲ್ಲಿ **ಪರಮಾತ್ಮ** ನಾಮಕ ಶ್ರೀ ಪರಮಾತ್ಮನು ವಿದ್ಯಮಾನನಾಗಿದ್ದಾನೆ. ಈ ರೂಪವನ್ನು ದಾಸರಾಯರು **ಪರಮ** ಎಂದು ಕರೆದಿರುತ್ತಾರೆ. ಪರ=ಅಕ್ಷರ ನಾಮಕಳಾದ ಲಕ್ಷ್ಮೀದೇವಿಯರಿಗೆ ಮ=ಜ್ಞಾನಪ್ರದನು ಎಂದು ಈ ಪದದ ಶಬ್ದಾರ್ಥವು. ಅಂತೆಯೇ "ಪರ" ನಾಮಕನಾದ ತ್ರಿಗುಣಾಭಿಮಾನಿಗಳಾದ ಮೂಲಪ್ರಕೃತಿಗೆ ಅಭಿಮಾನಿಯಾದ ಶ್ರೀ ಲಕ್ಷ್ಮೀದೇವಿಯರಿಗಿಂತ ಅನಂತ **ಕೋಟಿ ಗುಣದಿಂದ ಅಧಿಕನು ಎಂದರ್ಥ.**

ತ್ರಿಗುಣಾತ್ಮಕವಾದ ಅವ್ಯಕ್ತತತ್ತ್ವಕ್ಕೆ ಶ್ರೀ ರಮಾದೇವಿಯರು ಅಭಿಮಾನಿಗಳು. ಇಂತಹ ರಮಾಭಿಮನ್ಯಮಾನವಾದ ಅವ್ಯಕ್ತತತ್ತ್ವದಲ್ಲಿ ಜ್ಞಾನಾತ್ಮ ರೂಪಿ ಶ್ರೀ ಪರಮಾತ್ಮನು ವಿದ್ಯಮಾನನಾಗಿದ್ದು, ಆ ತತ್ತ್ವಕಾರ್ಯ ಪ್ರವರ್ತಕನಾಗಿದ್ದಾನೆ.

ಸಂಸ್ಕೃತ ವರ್ಣಮಾಲೆಯಲ್ಲಿ "ಅ" ಅಕ್ಷರದಿಂದ ಪ್ರಾರಂಭವಾಗಿ "ಕ್ಷ" ಅಕ್ಷರ ಪರ್ಯಂತ ೫೧ ಅಕ್ಷರಗಳಿವೆ. ಈ ಅಕ್ಷರಗಳ ಸಮೂಹಕ್ಕೆ **ಏಕ ಪಂಚಾಶದ್ವರ್ಣ**–ಎಂದು ಹೆಸರು. ಈ ವರ್ಣಗಳ ವಿಂಗಡಣೆ ಹೀಗಿದೆ : –

| | | |
|---|---|---|
| (೧) | "ಅ" ಯಿಂದ ಪ್ರಾರಂಭಿಸಿ "ಅಃ" ವರೆಗೆ **ಸ್ವರಾಕ್ಷರಗಳು** | =೧೬ |
| (೨) | **ವರ್ಗೀಯ ವ್ಯಂಜನಾಕ್ಷರಗಳು** | =೨೫ |
| (೩) | **ಅವರ್ಗೀಯ ವ್ಯಂಜನಾಕ್ಷರಗಳು** | = ೯ |
| (೪) | **ಅಂತ್ಯಾಕ್ಷರವಾದ "ಕ್ಷ" ಕಾರ** | = ೧ |
| | **ಒಟ್ಟು ವರ್ಣಗಳು** | **=೫೧** |

ಪ್ರತಿ ವರ್ಣಕ್ಕೂ ಸ್ವತ ಏವ ಪ್ರವೃತ್ತಿ ಶಕ್ತಿ ಇಲ್ಲ. ಶ್ರೀ ಪರಮಾತ್ಮನು ಅಕ್ಷರೇಢ್ಯನಾಗಿ ಪ್ರತಿವರ್ಣಕ್ಕೂ ಅಭಿವ್ಯಂಜಕ ಶಕ್ತಿಯನ್ನು ಕೊಡುವುದರಿಂದ ಉಚ್ಚಾರಣಾ ಕ್ರಿಯಾದ್ವಾರಾ ಶಬ್ದರೂಪವಾಗಿ ಹೊರಬೀಳುವುವು. ಅಕ್ಷರಗಳ ಕ್ರಮಬದ್ಧವಾದ ಜೋಡಣೆಯಿಂದ ಪದಗಳು. ಪದಸಮುಚ್ಚಯದಿಂದ ವಾಕ್ಯಗಳ ಉತ್ಪತ್ತಿ. ಅದರಿಂದ ಅರ್ಥ. ಈ ಕ್ರಮದಲ್ಲಿ ಸುವ್ಯವಸ್ಥಿತವಾಗಿ ಶಬ್ದಗಳ ಅರ್ಥವಾಗಬೇಕಾದರೆ, ವರ್ಣಪ್ರತಿಪಾದ್ಯನಾದ ಅಜಾದಿ ಲಕ್ಷ್ಮೀನರಸಿಂಹ ಪರ್ಯಂತ ಆಯಾಯಾ ವರ್ಣವ್ಯಾಪ್ತ ಭಗವದ್ರೂಪಗಳೇ ಮುಖ್ಯ ಕಾರಣವು.

ಈ ತತ್ತ್ವವನ್ನೇ ದಾಸರಾಯರು **"ಪಂಚಾಶದ್ವರಣವೇದ್ಯನ ಅಜಾದ್ಯೈವತ್ತು ಮೂರ್ತಿಗಳನು"**–ಎಂದು ಹೇಳಿದ್ದಾರೆ. "ಪಂಚಾಶದ್ವರ್ಣ" ಎಂದರೆ ೫೦ ವರ್ಣಗಳು ಎಂದರ್ಥ. ಅಂತ್ಯ ಅಕ್ಷರವಾದ ೫೧ ನೆಯ

"ಕ್ಷ" ಕಾರ ಪ್ರತಿಪಾದ್ಯ ಭಗವದ್ರೂಪವು "ಲಕ್ಷ್ಮೀನರಸಿಂಹನು". ಉಳಿದ ೫೦ ಅಕ್ಷರಗಳೆಲ್ಲವೂ "ಕ್ಷ" ಕಾರ ಒಂದರಲ್ಲಿ ಸಮಾವೇಶವಾಗಿರುವುದರಿಂದ, ೫೦ ವರ್ಣಗಳು ಎಂದು ಅವಶಿಷ್ಟ ಸಂಖ್ಯೆಯನ್ನು ಮಾತ್ರ ತಿಳಿಸಿರುತ್ತಾರೆ.

ಈಗ ವಿಶ್ವಾದಿ ಅಷ್ಟರೂಪಗಳು ಈ ಪಂಚಾಶದ್ವರ್ಣಗಳಲ್ಲಿ ಹೇಗೆ ವ್ಯಾಪ್ತವಾಗಿವೆ ಎಂಬ ವಿವರವನ್ನು ಪರಿಶೀಲಿಸೋಣ.

(ಪಟ್ಟಿ ೧ ನೋಡಿ)

ಇಂತು ವಿಶ್ವ, ತೈಜಸ, ಪ್ರಾಜ್ಞ, ತುರ್ಯ, ಆತ್ಮ, ಅಂತರಾತ್ಮ, ಪರಮಾತ್ಮ ಮತ್ತು ಜ್ಞಾನಾತ್ಮ ಎಂಬ ಅಷ್ಟರೂಪಿ ಶ್ರೀ ಮನ್ನಾರಾಯಣನು, ಅ-ಕಾರ, ಉ-ಕಾರ, ಮ-ಕಾರ, ನಾದ, ಬಿಂದು, ಘೋಷ, ಶಾಂತ ಮತ್ತು ಅತಿಶಾಂತ ಎಂಬ ಅಷ್ಟಾಧಿಷ್ಠಾನವಾಚ್ಯನಾಗಿದ್ದು, ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ ವಾಸುದೇವ ಮತ್ತು ನಾರಾಯಣಾದಿ ಪಂಚರೂಪಾತ್ಮಕನಾಗಿ ಅಕಾರಾದಿ ಕ್ಷಕಾರ ಪರ್ಯಂತ ಏಕಪಂಚಾಶದ್ವರ್ಣ ಪ್ರತಿಪಾದ್ಯನಾಗಿ, ಸ್ವರೂಪ, ಲಿಂಗದೇಹ, ಅನಿರುದ್ಧಶರೀರ ಮತ್ತು ಸ್ಥೂಲಶರೀರವೆಂಬ ತನುಚತುಷ್ಟಯಸ್ಥಿತನಾಗಿದ್ದು, ಸಾಧನಶರೀರವಾದ ಈ ಸ್ಥೂಲದೇಹದಲ್ಲಿ ಆಪಾದಮೌಳಿ ಪರ್ಯಂತ ವ್ಯಾಪಿಸಿರುವ ಆ ಬಿಂಬರೂಪಿ ಶ್ರೀ ಪರಮಾತ್ಮನ ಅಜಾದಿ ೫೧ ಭಗವದ್ರೂಪಗಳು, ಈ ಸ್ಥೂಲದೇಹದಲ್ಲಿ ಆ ರೂಪಗಳನ್ನು ಚಿಂತಿಸಬೇಕಾದ ಸ್ಥಾನವಿಶೇಷಗಳು, ಆ ಭಗವದ್ರೂಪಗಳ ಶಬ್ದಾರ್ಥ ಮತ್ತು ಕಾರ್ಯವಿಶೇಷಗಳ ಜ್ಞಾನ ಅತ್ಯಗತ್ಯ. ಇವುಗಳ ವಿವರವು ತಂತ್ರಸಾರೋಕ್ತವಾದ ಮಾತೃಕಾನ್ಯಾಸ ದಲ್ಲಿ ಕೊಟ್ಟಿದೆ. ಈ ಭಗವದ್ರೂಪಗಳನ್ನು ಜ್ಞಾನಾನುಸಂಧಾನಕ್ರಮದಿಂದ ಅರಿತು, ದೇಹಗತ ಆಯಾಯಾ ಸ್ಥಾನಗಳಲ್ಲಿ ಮಾತೃಕಾನ್ಯಾಸ ಪ್ರಕಾರ ಸರ್ವತ್ರ ಮತ್ತು ನಿರಂತರದಲ್ಲಿಯೂ (ದೇಶ ಮತ್ತು ಕಾಲಗಳಲ್ಲಿ) ಪೂಜಿಸಬೇಕೆಂದು ತಿಳಿಸುತ್ತಾರೆ. ಇವುಗಳ ಸಮಗ್ರ ರೂಪವಾದ ವಿವರಣೆಯನ್ನು ಈ ಕೆಳಗಿನ ಪಟ್ಟಿಯಿಂದ ತಿಳಿದು, ಧ್ಯಾನೋಪಾಸನೆಮಾಡಬೇಕು.

## ಪಟ್ಟಿ ೧

| ಕ್ರ.ಸಂ. | ಅಷ್ಟರೂಪಗಳು | ವಾಚ್ಯ | ಅಧಿಷ್ಠಾನ | ವರ್ಣಗಳು | ವರ್ಣಸಂಖ್ಯೆ |
|---|---|---|---|---|---|
| ೧ | ವಿಶ್ವ | ಅ–ಕಾರವಾಚ್ಯ | ಲಿಂಗಶರೀರದಲ್ಲಿ | "ಅ" ಪ್ರಾರಂಭಿಸಿ "ಅಃ"ವರೆಗೆ ಸ್ವರಾಕ್ಷರಗಳು | ೧೬ |
| ೨ | ತೈಜಸ | ಉ–ಕಾರವಾಚ್ಯ | ಪಂಚಜ್ಞಾನೇಂದ್ರಿಯಗಳಲ್ಲಿ | ಕ–ವರ್ಗ ಪಂಚಕ | ೫ |
| ೩ | ಪ್ರಾಜ್ಞ | ಮ–ಕಾರವಾಚ್ಯ | ಪಂಚಕರ್ಮೇಂದ್ರಿಯಗಳಲ್ಲಿ | ಚ-ವರ್ಗ ಪಂಚಕ | ೫ |
| ೪ | ತುರ್ಯ | ಬಿಂದು | ತನ್ಮಾತ್ರಾಸಹಿತ ಭೂತಪಂಚಕಗಳು | ತ–ವರ್ಗ ಪಂಚಕ | ೫ |
| ೫ | ಆತ್ಮ | ನಾದ | ಮನಸ್ಸತ್ತ್ವದಲ್ಲಿ | ಟ-ವರ್ಗ ಪಂಚಕ | ೫ |
| ೬ | ಅಂತರಾತ್ಮ | ಘೋಷ | ಅಹಂಕಾರ ತತ್ತ್ವದಲ್ಲಿ | ಪ–ವರ್ಗ ಪಂಚಕ | ೫ |
| ೭ | ಪರಮಾತ್ಮ | ಶಾಂತ | ಮಹತ್ತತ್ವದಲ್ಲಿ | "ಯ" ಕಾರದಿಂದ ಪಾರಂಭಿಸಿ "ಳ" ವರೆಗೆ ಅವರ್ಗೀಯ ವ್ಯಂಜನಾಕ್ಷರಗಳು | ೯ |
| ೮ | ಜ್ಞಾನಾತ್ಮ | ಅತಿಶಾಂತ | ಅವ್ಯಕ್ತತತ್ತ್ವದಲ್ಲಿ | "ಕ್ಷ" ಕಾರವಾಚ್ಯ: (ಶ್ರೀ ಲಕ್ಷ್ಮೀ ನರಸಿಂಹ ರೂಪ) | ೧ |

ಒಟ್ಟು ರೂಪಗಳು = ೫೧

| ಕ್ರ ಸಂ. | ವರ್ಣ | ಭಗವದ್ರೂಪ | ಶಬ್ದಾರ್ಥ ವಿವರಣೆ | ಶರೀರಗತ ಸ್ಥಾನ | ವಿಶ್ವಾದಿ ರೂಪಗಳು | ವಿವರಣೆಗಳು |
| --- | --- | --- | --- | --- | --- | --- |
| ೧ | ಅ | ಅಜ | ಜನನರಹಿತನು | ಶಿರಸ್ಸು | ಅ–ಕಾರವಾಚ್ಯ ವಿಶ್ವರೂಪಿ ಪರಮಾತ್ಮ | ಅಕಾರಾದಿ ಅಃ ಪರ್ಯಂತ ೧೬ ಸ್ವರಾಕ್ಷರ ಪ್ರತಿಪಾದ್ಯನಾಗಿ ವಿಶ್ವನಾಮಕ ಪರಮಾತ್ಮನು ಅನಿರುದ್ಧ ರೂಪಿಯಾಗಿ ಲಿಂಗ ಶರೀರದಲ್ಲಿರುವನು. ಅದರಿಂದ ಅನಿರುದ್ಧ ಮತ್ತು ಸ್ಥೂಲ ಶರೀರಗಳು ವ್ಯಾಪ್ತಕ್ರಮದಿಂದ ಗ್ರಾಹ್ಯ. |
| ೨ | ಆ | ಆನಂದ | ಆನಂದರೂಪನು | ಮುಖ | | |
| ೩ | ಇ | ಇಂದ್ರ | ಪರಮೈಶ್ವರ್ಯ ಸಂಪನ್ನನು | ಬಲಗಣ್ಣು | | |
| ೪ | ಈ | ಈಶ | ಮಹಾಲಕ್ಷ್ಮೀಗೂ ಮುಖ್ಯ ನಿಯಾಮಕನು | ಎಡಗಣ್ಣು | | |
| ೫ | ಉ | ಉಗ್ರ | ರುದ್ರಸಂಹಾರಕ. ಪಾಪಿಗಳಿಗೆ ಕ್ರೂರನು | ಬಲಗಿವಿ | | |
| ೬ | ಊ | ಊರ್ಜ | ನಿಸ್ಸೀಮನಾದಬಲ, ಕ್ರಿಯಾಶಕ್ತಿವಂತನು | ಎಡಗಿವಿ | | |
| ೭ | ಋ | ಋತಂಬರ | ಸತ್ಯಜಗದಾಧಾರ(ಹಾಗೂ ಪೋಷಕ) | ಬಲಮೂಗಿನ ಹೊಳ್ಳೆ | | |
| ೮ | ೠ | ೠಘ | ದಾನವರಿಗೆ ಕ್ಲೇಶಕಾರಕ | ಎಡಮೂಗಿನ ಹೊಳ್ಳೆ | | |
| ೯ | ಌ | ಌಶಃ | ದೇವಮಾತೆಯಾದ ಅದಿತಿಗೆ ಸುಖಪ್ರದನು | ಬಲಗೆನ್ನೆ | | |
| ೧೦ | ೡ | ೡಶ | ದಿತಿದೇವಿಯನ್ನು ವಿಷಾದಪಡಿಸುವವನು | ಎಡಗೆನ್ನೆ | | |

| | | | | | | |
|---|---|---|---|---|---|---|
| ೧೧ | ಏ | ಏಕಾತ್ಮ | ಮುಖ್ಯಪ್ರಭುವು | ಮೇಲ್ತುಟಿ | ವಿಶ್ವನಾಮಕ ಪರಮಾತ್ಮ | ೧೬ ಸರ್ವವರ್ಣ ಪ್ರತಿಪಾದ್ಯನು ವಿಶ್ವನಾಮಕ ಅನಿರುದ್ಧರೂಪಿ ಶ್ರೀಪರಮಾತ್ಮನು ಸಂಖ್ಯೆ = ೧೬ |
| ೧೨ | ಐ | ಐರ | ರುದ್ರನಿಗೆ ಸುಖಪ್ರದನು | ಕೆಳತುಟಿ | | |
| ೧೩ | ಓ | ಓಜೋಭೃತ್ | ನಿರತಿಶಯವಾದ ಸಾಮರ್ಥ್ಯವುಳ್ಳವನು | ಮೇಲಿನ ದಂತಪಂಕ್ತಿ | | |
| ೧೪ | ಔ | ಔರಸ | ಬ್ರಹ್ಮನೇ ಜೇಷ್ಠಪುತ್ರನಾಗಿ ಉಳ್ಳವನು | ಕೆಳಗಿನ ದಂತಪಂಕ್ತಿ | | |
| ೧೫ | ಅಂ | ಅಂತ | ಪ್ರಳಯಕಾಲದಲ್ಲಿ ಸರ್ವಜಗತ್ತನ್ನೂ ಸಂಹರಿಸುವವನು | ತಲೆಯ ಮೇಲ್ಭಾಗ | | |
| ೧೬ | ಅಃ | ಅರ್ಧಗರ್ಭ | ಬ್ರಹ್ಮಾಂಡಗಳನ್ನು ಉದರದಲ್ಲಿ ಧರಿಸುವವನು | ನಾಲಿಗೆ | | |
| ೧೭ | ಕ | ಕಪಿಲ | ಸುಖರೂಪನು (ಸರ್ವ ಸಾರ ಭೋಕ್ತ) | ಬಲಗೈಯಿನ ಕಂಕಳು | ಉ–ಕಾರವಾಚ್ಯ ತೈಜಸ ನಾಮಕ ನಾಗಿ ಪ್ರದ್ಯುಮ್ನ ರೂಪದಿಂದ | ವರ್ಗೀಯ ವ್ಯಂಜನಾಕ್ಷರ ಶ್ರೇಣಿಯಲ್ಲಿ ಕ–ವರ್ಗ |
| ೧೮ | ಖ | ಖಪತಿ | ಇಂದ್ರಿಯಗಳಿಗೆ ನಿಯಾಮಕ ಹಾಗೂ ಪ್ರೇರಕನು | ಬಲಗೈಯಿನ ಕೈಗಂಟು | | |

| | | | | | | |
|---|---|---|---|---|---|---|
| ೧೯ | ಗ | ಗರುಡಾಸನ | ಗರುಡನಮೇಲೆ ಕುಳಿತಿರುವವನು | ಬಲಗೈಯಿನ ಮಣಿಗಂಟು | | ಪಂಚಕಗತ ವರ್ಣಪ್ರತಿಪಾದ್ಯ ರೂಪಗಳು=೫ |
| ೨೦ | ಘ | ಘರ್ಮ | ಶತ್ರುಸಂಹಾರಕ | ಬಲಗೈಯಿನ ಬೆರಳುಗಂಟು | | |
| ೨೧ | ಙ | ಙಸಾರ | ವಿಷಯಗಳಲ್ಲಿ ಸಾರರೂಪ ದಿಂದ ಇರುವವನು | ಬಲಗೈಯಿನ ಬೆರಳು ತುದಿ | | |
| ೨೨ | ಚ | ಚಾರ್ವಾಂಗ | ಸುಂದರವಾದ ಅವಯುವ ಯುಳ್ಳವನು | ಎಡಗೈಯಿನ ಕಂಕಳು | ಮಕಾರ ವಾಚ್ಯ ಪ್ರಾಜ್ಞ ನಾಮಕನಾಗಿ ಸಂಕರ್ಷಣ | ವರ್ಗೀಯ ವ್ಯಂಜನಾಕ್ಷರ ಶ್ರೇಣಿಯಲ್ಲಿ ಚ–ವರ್ಗ ಪಂಚಕಗತ ವರ್ಣಪ್ರತಿ ಪಾದ್ಯರೂಪಗಳು =೫ |
| ೨೩ | ಛ | ಛಂದೋಗಮ್ಯ | ವೇದಗಳಿಂದ ತಿಳಿಸಲ್ಪಡುವವನು | ಎಡಗೈಯಿನ ಕೈಗಂಟು | | |
| ೨೪ | ಜ | ಜನಾರ್ದನ | ಜನನರಹಿತನು ಮತ್ತು ಸಂಸಾರದಿಂದ ದಾಟಿಸುವವನು | ಎಡಗೈಯಿನ ಮಣಿಗಂಟು | | |
| ೨೫ | ಝ | ಝೂಟತಾರಿ | ಶತ್ರುಗಳನ್ನು ಪರಾಭವ ಗೊಳಿಸುವವನು | ಎಡಗೈಯಿನ ಬೆರಳುಗಂಟು | | |
| ೨೬ | ಞ | ಞಮ | ವೇದಾದಿಗಳಿಂದ ಸ್ತೋತ್ರ ಮಾಡುವವರಿಗೆ ಮೋಕ್ಷಪ್ರದನು. | ಎಡಗೈಯಿನ ಬೆರಳುತುದಿ | | |

| | | | | | | |
|---|---|---|---|---|---|---|
| ೨೭ | ಟ | ಟಂಕೀ | ಟಂಕವೆಂಬ ಆಯುಧವನ್ನು ಧರಿಸಿರುವವನು | ಬಲಗಾಲಿನ ತೊಡೆಸಂಧಿ | ನಾದವಾಚ್ಯನಾದ ಆತ್ಮನಾಮಕ ಶ್ರೀಹರಿಯು | ವರ್ಗೀಯ ವ್ಯಂಜನಾಕ್ಷರ ಶ್ರೇಣಿಯಲ್ಲಿ ಟ–ವರ್ಗ ಪಂಚಕ ಗತ ವರ್ಣಪ್ರತಿಪಾದ್ಯ ಭಗವದ್ರೂಪಗಳು=೫ |
| ೨೮ | ಠ | ಠಲಕ | ರುದ್ರ ಮತ್ತು ಇಂದ್ರರಿಗೆ ಸುಖಪ್ರದನು | ಬಲಗಾಲಿನ ಕಾಲುಗಂಟು | | |
| ೨೯ | ಡ | ಡರಕ | ಚಂದ್ರ, ಅಗ್ನಿ ಇವರಿಗೆ ವಿಶೇಶ ಕಾಂತಿ ದಾಯಕನು | ಬಲಗಾಲಿನ ಮಣಿಗಂಟು | | |
| ೩೦ | ಢ | ಢರೀ | ಮುಕ್ತರಿಗೆ ಆನಂದಪ್ರದನಾದ ಬ್ರಹ್ಮನನ್ನೇ ಪುತ್ರನನ್ನಾಗಿಉಳ್ಳವನು | ಬಲಗಾಲಿನ ಬೆರಳುಗಳು | | |
| ೩೧ | ಣ | ಣಾತ್ಮ | ಸುಖಸ್ವರೂಪನು | ಬಲಗಾಲಿನ ಬೆರಳುಗಳತುದಿ | | |
| ೩೨ | ತ | ತಾರ | ಸಂಸಾರದಿಂದ ತಾರಣ ಮಾಡಿಸುವವನು | ಎಡಗಾಲಿನ ತೊಡೆಸಂಧಿ | ಬಿಂದುವಾಚ್ಯ ನಾದ ತುರ್ಯ ನಾಮಕ | ವರ್ಗೀಯ ವ್ಯಂಜನಾಕ್ಷರ ಶ್ರೇಣಿಯಲ್ಲಿ |
| ೩೩ | ಥ | ಥಬ | ಗೋವರ್ಧನ ಪರ್ವತಧಾರೀ | ಎಡಗಾಲಿನ ಕಾಲುಗಂಟು | | |

| | | | | | |
|---|---|---|---|---|---|
| ೩೪ | ದ | ದಂಡೀ | ಗೋವುಗಳನ್ನು ಆಡಿಸಲಿಕ್ಕೆ ಕೋಲನ್ನು ಹಿಡಿದಿರುವವನು | ಎಡಗಾಲಿನ ಮಣಿಗಂಟು | ಶ್ರೀ ಹರಿಯು ವಾಸುದೇವ ರೂಪಿಯು | ತ-ವರ್ಗ ಪಂಚಕ ಗತ ವರ್ಣಪ್ರತಿ ಪಾದ್ಯಭಗವ ದ್ರೂಪಗಳು=೫ |
| ೩೫ | ಧ | ಧನ್ವೀ | ಶಾರ್ಙವೆಂಬ ಧನುಸ್ಸನ್ನು ಹಿಡಿದಿರುವವನು | ಎಡಗಾಲಿನ ಬೆರಳುಗಳು | | |
| ೩೬ | ನ | ನಮ್ಯ | ಸರ್ವರಿಂದಲೂ ವಂದನೀಯನು | ಎಡಗಾಲಿನ ಬೆರಳುಗಳ ತುದಿ | | |
| ೩೭ | ಪ | ಪರಃ | ಗುಣಪೂರ್ಣನು ಸರ್ವೋತ್ತಮನು | ಬಲಹೊಟ್ಟೆ (ಪಾರ್ಶ್ವ) | ಘೋಷವಾಚ್ಯ | ವರ್ಗೀಯ ವ್ಯಂಜ ನಾಕ್ಷರ ಶ್ರೇಣಿಯಲ್ಲಿ ಪ-ವರ್ಗ ಪಂಚಕದ ವರ್ಣಪ್ರತಿಪಾದ್ಯ ಭಗವದ್ರೂಪಗಳು =೫ |
| ೩೮ | ಫ | ಫಲೀ | ಫಲದಾಯಕನು | ಎಡಹೊಟ್ಟೆ (ಪಾರ್ಶ್ವ) | | |
| ೩೯ | ಬ | ಬಲೀ | ಅಮಿತ ಬಲವುಳ್ಳವನು | ಪೃಷ್ಠ | ಅಂತರಾತ್ಮ ನಾಮಕನು | |
| ೪೦ | ಭ | ಭಗ | ಪೂರ್ಣಜ್ಞಾನಾನಂದ ಷಡ್ಗುಣೈಶ್ವರ್ಯ ಸಂಪನ್ನನು | ಗುಹ್ಯ | | |
| ೪೧ | ಮ | ಮನ | ಪೂರ್ಣಜ್ಞಾನರೂಪಿಯು | ಹೊಟ್ಟೆಯತಲ. | | |

| | | | | | | |
|---|---|---|---|---|---|---|
| ೪೨ | ಯ | ಯಜ್ಞ | ಎಲ್ಲರಿಂದಲೂ ಪೂಜ್ಯನು | ಹೃದಯ (ಎದೆ) | | |
| ೪೩ | ರ | ರಾಮ | ಅಮಿತವಾದ ರಮಣ (ಕ್ರೀಡಾ ಸುಖ)ವುಳ್ಳವನು. ಭಕ್ತರಿಗೆ ಸುಖಪ್ರದಾಯಕ | ತ್ವಗಿಂದ್ರಿಯ | | |
| ೪೪ | ಲ | ಲಕ್ಷ್ಮೀಪತಿ | ಶ್ರೀ ಲಕ್ಷ್ಮೀರಮಣನು | ಚರ್ಮ | | ಅವರ್ಗೀಯವ್ಯಂಜ |
| ೪೫ | ವ | ವರ | ಸರ್ವರಿಂದಲೂ ಮೋಕ್ಷಕ್ಕಾಗಿ ವರಿಸಲ್ಪಡುವವನು | ಮಾಂಸ | ಶಾಂತವಾಚ್ಯನಾದ | ನಾಕ್ಷರ ಶ್ರೇಣಿ |
| ೪೬ | ಶ | ಶಾಂತ ಸಂವಿತ್ | ಸುಖರೂಪವಾದ ಬುದ್ಧಿಯುಳ್ಳವನು | ರಕ್ತ | ಪರಮಾತ್ಮ ನಾಮಕನು | ಯಲ್ಲಿ ಈ ನವ ವರ್ಣ ಪ್ರತಿಪಾದ್ಯ |
| ೪೭ | ಷ | ಷಡ್ಗುಣಾತ್ಮಾ | ಷಡ್ಗುಣೈಶ್ವರ್ಯಸಂಪನ್ನನಾದ ಭಗವಂತನು | ಮೇದಸ್ಸು | | ಭಗವದ್ರೂಪಗಳು ॥೯ |
| ೪೮ | ಸ | ಸಾರಾತ್ಮ | ಅಪ್ರಾಕೃತ ಚಿದಾನಂದಮಹಾದೇಹವುಳ್ಳವನು | ಮಜ್ಜಾ | | |
| ೪೯ | ಹ | ಹಂಸ | ಪ್ರಳಯಕಾಲದಲ್ಲಿ ಸರ್ವರನ್ನೂ ಸಂಹರಿಸುವವನು. ಸರ್ವಜ್ಞನು. | ಅಸ್ಥಿ ಸಂಧಿಗಳಲ್ಲಿ | | |
| ೫೦ | ಳ | ಳಾಳುಕ | ಮುಕ್ತರಿಗೂ,ಬ್ರಹ್ಮ, ರುದ್ರರಿಗೂ ಸುಖಪ್ರದನು | ಪ್ರಾಣ | | |

| | | | | | | |
|---|---|---|---|---|---|---|
| ೫೧ | ಕ್ಷಂ | ಲಕ್ಷ್ಮೀನರಸಿಂಹ | ಸುಷುಮ್ನಾನಾಡೀಸ್ಥಿತ ಲಕ್ಷ್ಮೀ ನರಸಿಂಹ ದೇವರು | ಜೀವನಲ್ಲಿ | ಅತಿಶಾಂತವಾಚ್ಯ ಜ್ಞಾನಾತ್ಮ ನಾಮಕನು | ಕ್ಷ ಕಾರವಾಚ್ಯ ಬಿಂಬ ರೂಪಿ ಶ್ರೀ ಮನ್ನಾರಾಯಣನು =೧ |

ಇಂತು ಮಾತೃಕಾನ್ಯಾಸ ಕ್ರಮದಿಂದ ನಮ್ಮ ಸ್ಥೂಲದೇಹಗತ ಸರ್ವ ಸ್ಥಾನಗಳಲ್ಲಿ ಅಜಾದಿ ಕ್ಷ–ಕಾರ ವಾಚ್ಯ ಪರ್ಯಂತ ಪಂಚಾಶದ್ವರ್ಣ ಪ್ರತಿಪಾದ್ಯ ಭಗವದ್ರೂಪಗಳನ್ನು ಚಿಂತಿಸುತ್ತಾ, ಧ್ಯಾನಕ್ಕೆ ವಿಷಯವನ್ನಾಗಿ ಮಾಡಿ, ಉಪಾಸನೆ ಮಾಡುತ್ತಿರಬೇಕೆಂದು ತಾತ್ಪರ್ಯ. ಈ ಉಪಾಸನಾ ಕ್ರಮವೇ ಭಗವತ್ಪೂಜೆಯು. ॥೨೬॥

# ಪದ್ಯ (೨೭)

**ಮೂಲ :**

**ಚತುರವಿಂಶತಿ ತತ್ವದೊಳು ತ ।**
**ತ್ಪತಿಗಳೆನಿಸುವ ಬ್ರಹ್ಮಮುಖ ದೇ ।**
**ವತೆಗಳೊಳು ಹದಿಮೂರು ಸಾವಿರದೆಂಟು ನೂರಧಿಕ ॥**
**ಚತುರವಿಂಶತಿ ರೂಪದಿಂದಲಿ ।**
**ವಿತತನಾಗಿದೆಲ್ಲರೊಳು ಪ್ರಾ ।**
**ಕೃತ ಪುರುಷನಂದದಲಿ ಪಂಚಾತ್ಮಕನು ರಮಿಸುವನು ॥ ॥೨೭॥**

**ಅವತರಣಿಕೆ :**

ಅವ್ಯಕ್ತಾದಿ ಇಪ್ಪತ್ತುನಾಲ್ಕು ತತ್ತ್ವಗಳಲ್ಲಿ, ತತ್ವಾಭಿಮಾನಿ ದೇವತೆಗಳಾದ ಬ್ರಹ್ಮಾದಿ ದೇವತಾವರ್ಗದಲ್ಲಿ ಶ್ರೀ ಪರಮಾತ್ಮನು ೧೩೮೨೪ (ಹದಿಮೂರುಸಾವಿರದ ಎಂಟನೂರ ಇಪ್ಪತ್ನಾಲ್ಕು) ರೂಪಗಳಿಂದ ಸರ್ವರಲ್ಲಿಯೂ ವ್ಯಾಪ್ತನಾಗಿದ್ದು, ಪ್ರಕೃತಿಸಂಬಂಧವಾದ ಪುರುಷನಂತೆ ಅನಿರುದ್ಧಾದಿ ಪಂಚರೂಪಗಳಿಂದ ವಿದ್ಯಮಾನನಾಗಿದ್ದು, ಕ್ರೀಡಾವಿಶಿಷ್ಟನಾಗಿ ವಿಹಾರಮಾಡುತ್ತಾನೆ ಎಂದು ವಿವರಿಸುತ್ತಾರೆ–"**ಚತುರವಿಂಶತಿ**"–ಎಂಬ ಪ್ರಸಕ್ತಸಂಧಿಗತ ೨೭ ನೆಯ ಈ ಪದ್ಯದಿಂದ. ॥೨೭॥

**ಪ್ರತಿಪದಾರ್ಥ :—**

**ಚತುರವಿಂಶತಿ ತತ್ವದೊಳು**=ಇಪ್ಪತ್ತುನಾಲ್ಕು ತತ್ತ್ವಗಳಲ್ಲಿ, **ತತ್ಪತಿಗಳೆನಿಸುವ**=ಆಯಾಯಾ ತತ್ವಗಳಿಗೆ ಅಭಿಮಾನಿಗಳೆಂದು ಪ್ರಸಿದ್ಧರಾದ **ಬ್ರಹ್ಮಮುಖ ದೇವತೆಗಳೊಳು**=ಚತುರ್ಮುಖ ಬ್ರಹ್ಮದೇವರೇ ಆದಿಯಾಗಿ ದೇವತೆಗಳಲ್ಲಿ **ಹದಿಮೂರು ಸಾವಿರದ**=೧೩೦೦೦ **ಎಂಟನೂರ ಅಧಿಕ**=೮೦೦ ಹೆಚ್ಚಾದ, ಅಂದರೆ, ೧೩೦೦೦+೮೦೦=೧೩,೮೦೦ **ಚತುರ**

**ವಿಂಶತಿ**=೨೪ ಅಲ್ಲಿಗೆ ೧೩,೮೦೦+೨೪=೧೩೮೨೪, **ರೂಪದಿಂದಲಿ** =ಹದಿಮೂರು ಸಾವಿರದ ಎಂಟನೂರ ಇಪ್ಪತ್ತನಾಲಕು ರೂಪಗಳಿಂದ **ಎಲ್ಲರೊಳು**=ಸರ್ವಜೀವರಲ್ಲಿಯೂ **ವಿತತನಾಗಿದ್ದು**=ವ್ಯಾಪ್ತ ನಾಗಿದ್ದು **ಪ್ರಾಕೃತ ಪುರುಷನಿಂದಲಿ**=ಸಾಮಾನ್ಯರಾದ ಪ್ರಾಕೃತ ದೇಹಸಂಬಂಧಿಗಳಾದ ಮನುಷ್ಯರಂತೆ **ಪಂಚಾತ್ಮಕನು**=ಅನಿರುದ್ಧಾದಿ ಪಂಚರೂಪಗಳಿಂದ ವಿದ್ಯಮಾನನಾಗಿದ್ದು **ರಮಿಸುವನು**=ಆಯಾಯಾ ಜೀವರ ಯೋಗ್ಯತಾನುಸಾರ ಕರ್ಮಗಳನ್ನು ಮಾಡಿ, ಮಾಡಿಸುತ್ತಾ ತದ್ಗತ ಸೌಖ್ಯದಿಂದ ತಾನು ರಮಿಸಿ, ಆ ಜೀವರ ದೇಹಗಳಲ್ಲಿ ಕ್ರೀಡಾವಿಶಿಷ್ಟನಾಗಿದ್ದು ವಿಹಾರಮಾಡುವನು. ॥೨೭॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಲಿಂಗದೇಹಾನಂತರ ಸ್ಥೂಲಶರೀರ ವಿಚಾರ ಹೇಳುತ್ತಾರೆ : —

ಲಿಂಗದೇಹ ಚತುರ್ವಿಂಶತಿ ತತ್ತ್ವದಿಂದ ಯುಕ್ತವಾದದ್ದು. ಸ್ಥೂಲ ಶರೀರವೂ ಚತುರ್ವಿಂಶತಿ ತತ್ತ್ವದಿಂದ ಯುಕ್ತವಾದದ್ದೇ, ಲಿಂಗಶರೀರಗತ ಚತುರ್ವಿಂಶತಿ ತತ್ತ್ವಗಳಲ್ಲಿ ಭಗವದ್ರೂಪಗಳ ಅಭಿಮಾನತ್ವ ಹೇಳಿದರೂ, ಅಲ್ಲಿ ಬ್ರಹ್ಮವಾಯ್ವಾದಿ ದೇವತೆಗಳು ಅಭಿಮಾನಿಗಳು ಎಂತ ಹೇಳತಕ್ಕ ಪ್ರಮಾಣಕ್ಕೆ ಪ್ರಯೋಜನವಿಲ್ಲೆಂದರೂ ಸ್ಥೂಲದೇಹದಲ್ಲಿ ಪ್ರಯೋಜನವು. ಲಿಂಗದೇಹದ ದಾವದಾವ ಗುಣದಲ್ಲಿ ದಾವದಾವ ತತ್ತ್ವಗಳಿವೆ ಎಂತ ಹಿಂದೆ ಹೇಳಲ್ಪಟ್ಟಿ ದೆಯೋ, ಅದರಂತೆ ಸ್ಥೂಲದೇಹಗತ ಚತುರ್ವಿಂಶತಿ ತತ್ತ್ವಗಳಿಗೆ ಅಭಿಮಾನಿ ದೇವತೆಗಳು ಹೇಳುತ್ತೇವೆ. ಈ ದೇವತಾಂತರ್ಗತ ಭಗವದ್ರೂಪಗಳ ಹಿಂದೆ ಹೇಳಿ ಅದೆ. ಆದರೂ ತಿಳಿಯೋ ನಿಮಿತ್ತ ಕ್ರೋಢೀಕಾರ ಮಾಡಲ್ಪಡುತ್ತದೆ.

ಚತುರ್ವಿಂಶತಿ ತತ್ತ್ವದೊಳು=ಅನಾದಿ ಲಿಂಗಶರೀರದ ಮೇಲೆ ಸೃಷ್ಟಿ ಪ್ರಾರಂಭದಲ್ಲಿ ಲಿಂಗೋಪಾದಾನದಿಂದ ಸೃಷ್ಟವಾಗಿ ಲಿಂಗದಮೇಲೆ ಪ್ರಥಮಾ

ವರಣವಾದ (ವೈಷಯಿಕಲಿಂಗ, ಅಂದರೆ, ವೈಷಯಿಕ ಶರೀರದಾರಭ್ಯ ಸ್ಥೂಲ ಶರೀರದವರೆಗೂ ಇರತಕ್ಕ ಶರೀರಗಳಲ್ಲಿ ವಿದ್ಯಮಾನವಾದ ಇಪ್ಪತ್ತುನಾಲ್ಕು ತತ್ತ್ವದೊಳು) ತತ್ಪತಿಗಳೆನಿಸುವ = ಆಯಾ ತತ್ತ್ವಗಳಿಗೆ ಅಭಿಮಾನಿಗಳು ಎನಿಸತಕ್ಕ, ಎಂದರೆ, ೧೭ ನೆಯ ಶ್ಲೋಕದಾರಭ್ಯ ಹೇಳಿದ ಮೇರೆಗೆ ಅಭಿಮಾನಿಗಳೆಂದು ಕರಿಸತಕ್ಕ, ಬ್ರಹ್ಮಮುಖ ದೇವತೆಗಳೊಳು = ವೈಷಯಿಕ ಶರೀರದಮೇಲೆ ವಿದ್ಯಮಾನವಾದ ಚತುರ್ವಿಂಶತಿ ತತ್ತ್ವಗಳಲ್ಲಿ ಬ್ರಹ್ಮ, ವಾಯು ಸರಸ್ವತಿ, ಭಾರತಿ ಈ ನಾಲ್ಕುಮಂದಿ ಅಭಿಮಾನಗಳು ರುದ್ರಾದಿ ನಾಮಗಳಿಂದ ಇದ್ದಾರೆ. ಅನಿರುದ್ಧದೇಹ ಆರಂಭಮಾಡಿ ಸ್ಥೂಲದೇಹಪರ್ಯಂತ ಆಯಾ ದೇಹಗತ ಚತುರ್ವಿಂಶತಿ ತತ್ತ್ವಗಳಲ್ಲಿ ಬ್ರಹ್ಮದೇವರೇ ಮೊದಲಾದ ಯಾವತ್ತು ದೇವತೆಗಳು ಆಯಾ ತತ್ತ್ವಕ್ಕೆ ಅವರವರು ಅಭಿಮಾನಿಗಳಾಗಿದ್ದಾರೆ. ಇದರ ವಿಚಾರ ವಿಸ್ತಾರವಾಗಿ **ಪ್ರಕಾಶಸಂಹಿತಾ** ದಲ್ಲಿ ಅದೆ. ಇಂಥಾ ಶಬ್ದಾದಿ ತತ್ತ್ವದೇವತೆಗಳಲ್ಲಿ ಹದಿಮೂರುಸಾವಿರದ ಎಂಟನೂರಧಿಕ ಚತುರವಿಂಶತಿ ರೂಪದಲ್ಲಿ ಇದ್ದಾನೆಂದು ಹೇಳಲ್ಪಟ್ಟಿದೆ. ಆ ರೂಪಗಳು ದಾವದೆಂದರೆ, ಅವಕ್ಕೆ ವಿವರ : —

ಇಪ್ಪತ್ತೈದನೇ ಶ್ಲೋಕ ಮತ್ತು ಇಪ್ಪತ್ತಾರನೇ ಶ್ಲೋಕ ಎರಡರಲ್ಲಿ ಹೇಳಿದ ಭಗವದ್ರೂಪಗಳು ಮತ್ತು ಇದರ ವಿವರ ಕೆಳಗೆ ಮಾಡಲ್ಪಡುತ್ತದೆ. ಲಿಂಗದೇಹಗತ ಚತುರ್ವಿಂಶತಿ ತತ್ವಾಂತರ್ಗತ ಭಗವದ್ರೂಪಗಳು ಈ ಕೆಳಗೆ ವಿವರ ಮಾಡಲ್ಪಡುತ್ತದೆ.

| | | |
|---|---|---|
| ೧. | ಲಕ್ಷ್ಮೀ ಅಭಿಮನ್ಯಮಾನ ಅವ್ಯಕ್ತತತ್ತ್ವದಲ್ಲಿ ಜ್ಞಾನಾತ್ಮ | = ೧ |
| ೨. | ದಶೇಂದ್ರಿಯಗಳಲ್ಲಿ ಅನಿರುದ್ಧಾದಿ ರೂಪಗಳು ಹತ್ತು | = ೧೦ |
| ೩. | ತನ್ಮಾತ್ರಗಳು, ಇದರಲ್ಲಿ ಅನಿರುದ್ಧಾದಿ ರೂಪಗಳು ಐದು | = ೫ |
| ೪. | ಮನದೊಳು ಆತ್ಮರೂಪ ಒಂದು | = ೧ |
| ೫. | ಅಹಂಕಾರತತ್ತ್ವದಲ್ಲಿ ಅಂತರಾತ್ಮರೂಪ ಒಂದು | = ೧ |
| ೬. | ಮಹತ್ತತ್ತ್ವದಲ್ಲಿ ಪರಮಾತ್ಮರೂಪ ಒಂದು | = ೧ |
| ೭. | ಪಂಚಭೂತಗಳಲ್ಲಿ ಅನಿರುದ್ಧಾದಿ ರೂಪಗಳು ಐದು | = ೫ |

ಅಂತು, ಒಟ್ಟು ರೂಪಗಳ ಸಂಖ್ಯೆ = ೨೪

ಲಿಂಗದೇಹಗತ ೨೪ ತತ್ತ್ವಗಳಲ್ಲಿ ಆತ್ಮಾದಿ ನಾಲ್ಕು, ಅನಿರುದ್ಧಾದಿ ೫, ಅಂತು ೯ ರೂಪಗಳು ೨೪ ರೂಪಗಳಿಂದ ಇದ್ದಾರೆ. ಇದೇ ರೂಪಗಳೇ ಸ್ಥೂಲ ದೇಹಗತ ೨೪ ತತ್ತ್ವಗಳಲ್ಲಿ ೧೩೮೨೪ ರೂಪಗಳಿಂದ ಆಯಾತತ್ತ್ವನಾಮಗಳ ಧರಿಸಿದವನಾಗಿದ್ದಾರೆ. ಆಯಾ ತತ್ತ್ವನಾಮಗಳ ಅಕ್ಷರಸಾಂಕೇತದಿಂದ ಆಗ ತಕ್ಕ ಭಗವದ್ರೂಪಗಳು ೨೫೧. ಅವ್ಯಕ್ತ ಜ್ಞಾನಾತ್ಮನಾದ ಪರಮಾತ್ಮನ ರೂಪಗಳು ಸ್ಥೂಲದೇಹಗತ ಬ್ರಹ್ಮಾಣೀ, ಭಾರತೀ ಅಭಿಮನ್ಯಮಾನವಾದ ಮಹತ್ತತ್ವದಲ್ಲಿ ವಿಭಾಗವಾದ ಅವ್ಯಕ್ತತತ್ತ್ವದಲ್ಲಿ ಇವೆ. ಜ್ಞಾನಾತ್ಮ ಅವ್ಯಕ್ತ ಶಬ್ದವಾಚ್ಯನಾಗಿ"ಅವ್ಯಕ್ತ"ಎನತಕ್ಕ ಅಕ್ಷರದಿಂದ ಆಗತಕ್ಕ ಸಂಖ್ಯಾರೂಪದಿಂದ ಅವ್ಯಕ್ತಾಭಿಮಾನಿಗಳಾದ ಬ್ರಹ್ಮಾಣಿ, ಭಾರತೀ ದೇವೇರಲ್ಲಿ ಇದ್ದಾನೆ. ಲಿಂಗ ದಲ್ಲಿ ಜ್ಞಾನಾತ್ಮ ಅಭಿಮಾನಿ. ಸ್ಥೂಲದೇಹದಲ್ಲಿ ವಾಣಿ ಭಾರತಿಗಳು ಅಭಿಮಾನಿ ಗಳು. ಇದರಲ್ಲಿ ಲಿಂಗದೇಹಗತ ಅವ್ಯಕ್ತ ತತ್ವಾಭಿಮಾನಿ ಜ್ಞಾನಾತ್ಮ ಪ್ರವೇಶ ನಾಗಿನ್ದಾನೆ. ೨೫೧ ರೂಪದಿಂದ ಇದೇ ಕ್ರಮಕ್ಕೆ ಮುಂದೆ ಹೇಳೋದರಲ್ಲಿ ತಿಳಿಯಬೇಕು. ಪರಮಾತ್ಮ ಲಿಂಗದೇಹಗತ ಮಹತ್ತತ್ವದಲ್ಲಿ "ಮಹತ್" ಎಂತ ಕರೆಸಿ, ಅಕ್ಷರಸಂಖ್ಯಾರೂಪದಿಂದ ೧೮೫ ರೂಪಗಳಿಂದ ಬ್ರಹ್ಮನಲ್ಲಿ ಇದ್ದಾನೆ.

ತಾಮಸ ೭೫೧ ಅಂತರಾತ್ಮ. ತಾಮಸ ಎಂದರೆ, ತಾಮಸ ಅಹಂಕಾರ ತತ್ವಾಭಿಮಾನಿ ರುದ್ರದೇವರಲ್ಲಿ ೭೫೧ ರೂಪದಿಂದ ಇದ್ದಾನೆ. ಮನಸ್ಸು ೭೫೫ ಆತ್ಮರೂಪಿ ಪರಮಾತ್ಮ ಮನೋಭಿಮಾನಿಗಳಾದ ಇಂದ್ರ ಕಾಮರು ರುದ್ರದೇವರಲ್ಲಿ ೭೫೫ ರೂಪದಿಂದ ಇದ್ದಾರೆ. ೨೩೪೩ ದಶಇಂದ್ರಿಯಗತ ರೂಪಗಳು ಅಕ್ಷರಸಂಖ್ಯಾದಿಂದ ಆಗತಕ್ಕರೂಪಗಳು. ವಿವರ ೧೧ ನೇ ಶ್ಲೋಕ ದಲ್ಲಿ ಅದೆ. ಅನಿರುದ್ಧಾದಿರೂಪಗಳು-ದಶೇಂದ್ರಿಯಾಭಿಮಾನಿ ದೇವತೆಗಳಲ್ಲಿ ೨೩೪೩ ರೂಪದಿಂದ ಇದ್ದಾನೆ. ೧೧ ನೇ ಶ್ಲೋಕದಲ್ಲಿ ಮನಸ್ಸಿಗೆ ಅಗತಕ್ಕ ಸಂಖ್ಯಾಸಹಿತ ಸೇರಿಸಿ ಆದ ಮನಸ್ಸಿಗೆ ಸಂಖ್ಯಾ ೭೫೫ ತೆಗೆದುಹಾಕಿದರೆ, ದಶೇಂದ್ರಿಯಗಳಲ್ಲಿ ಇರತಕ್ಕ ಭಗವದ್ರೂಪಗಳ ಸಂಖ್ಯಾ ೨೩೪೩ ಆಗುತ್ತದೆ. ೧೦೦೧ ಅನಿರುದ್ಧಾದಿ ರೂಪಗಳು, ಪಂಚಭೂತಾಭಿಮಾನಿ ದೇವತೆಗಳಲ್ಲಿ ೧೦೦೧ ರೂಪದಿಂದ ಇದ್ದಾನೆ. ೧೧ ನೇ ಶ್ಲೋಕದಲ್ಲಿ ವಿವರವದೆ. ೧೦೮೦

ಪಂಚತನ್ಮಾತ್ರಗತ ಅನಿರುದ್ಧಾದಿ ರೂಪಗಳು, ಇದಕ್ಕೆ ವಿವರ ೧೧ ನೇ ಶ್ಲೋಕದಲ್ಲಿ ಅದೆ. ಅಂತು, ೬೩೬೬ ರೂಪಗಳು–೪೩೨೬ ಅಧಿಭೂತ, ಅಧಿದೈವ, ಅಧ್ಯಾತ್ಮಗತ ರೂಪಗಳು, ೧೧ ನೇ ಶ್ಲೋಕದಲ್ಲಿ ವಿವರವದೆ. ಅಚ್ಯುತ, ಅನಂತ, ಗೋವಿಂದ ಎಂಬ ಅಕ್ಷರಸಂಖ್ಯಾರೂಪಗಳು ೪೩೨೬ ಆಗುತ್ತದೆ. ೧೭೧೧ ಇದಕ್ಕೆ ಸೂಚನಾ ೨೬ ನೇ ಶ್ಲೋಕದಲ್ಲಿ ಅದೆ. ಅಂತು, ಹೃದಯಾಕಾಶರೂಪಗಳು, ಹೃದಿಸ್ಥರೂಪಗಳು ಸೇರಿ ೮೨೧, ಅಂತು, ೧೧೭೯೨. ಇದಕ್ಕೆ ವಿವರ ೧೧ನೇ ಶ್ಲೋಕದಲ್ಲಿ ಅದೆ. ಆಕಾಶ ಎಂದರೆ, ೧೧೫೧೩ ರೂಪಗಳು. ೬೦೦ ಇದರ ವಿವರ ಹತ್ತನೇ ಶ್ಲೋಕದಲ್ಲಿ ಚಿಂತಿಪುದು ಎಂತ ಹೇಳಿದ್ದಾರೆ. ಅದಕ್ಕೆ ವಿವರ ಅಕ್ಷರ ೫೧. ೨೪ ತತ್ತ್ವಗಳಲ್ಲಿ ಒಂದೊಂದು ತತ್ತ್ವದಲ್ಲಿ ೫೧. ೫೧ ಅಕ್ಷರದ ಮೇರೆಗೆ ೨೪ ತತ್ತ್ವಗತ ಅಕ್ಷರಸಂಖ್ಯಾದಿಂದ ಆಗುವ ೧೨೨೪ ಭಗವದ್ರೂಪಗಳು. ಅಜಾದಿ ರೂಪಗಳ ಸಂಖ್ಯಾ ೪೨೦. ಅ, ಆ ಆರಂಭಮಾಡಿ ಅಂ, ಆಃ ವರೆಗೆ ೧೬ ಅಕ್ಷರಗಳು ಹೋಗುತಾ ಉಳಿದಿರುವ ಅಕ್ಷರಗಳು ಮೂವತ್ತೈದು. ಈ ಒಂದೊಂದು ಅಕ್ಷರಕ್ಕೆ ಕ, ಕಾ, ಕಿ, ಕೀ ಆರಂಭಮಾಡಿ ಕಂ, ಕಃ ವರೆಗೆ ಹನ್ನೆರಡು ಅಕ್ಷರಗಳು ಆಗುತ್ತದೆ. ೩೫ ಅಕ್ಷರಗಳನ್ನು ಈ ಹನ್ನೆರಡು ಅಕ್ಷರದಿಂದ ಗುಣಿಸಿದರೆ ೪೨೦ ಅಕ್ಷರಗಳು ಆಗುತ್ತದೆ. ೫೧ ಅಕ್ಷರಕ್ಕೆ ಪೂರ್ವಾಕ್ಷರ ಮತ್ತು ಉತ್ತರಾಕ್ಷರಕ್ಕೆ ಮಧ್ಯೆ ಸಂಧಿಗಳು ಐವತ್ತೊಂದು. ೧೧ ಇಂದ್ರಿಯಗಳಲ್ಲಿ ಶಕ್ತಿ ಪ್ರತಿಷ್ಠಾದಿ ಭಗವದ್ರೂಪಗಳು ೨೪ ನೇ ಶ್ಲೋಕದಲ್ಲಿ ಹೇಳಿದ್ದು ೧೧. ಐದು ಅವಿದ್ಯಾಗತ ಕೃದ್ಧೋಲ್ಕಾದಿ ಭಗವದ್ರೂಪಗಳು. ೧೩ ನೇ ಶ್ಲೋಕದಲ್ಲಿ ಹೇಳಿರುವುದು ಐದು ರೂಪಗಳು. ಅಂತು, ೧೭೧೧ ರೂಪಗಳು. ೧೩೮೨೪–ಹದಿಮೂರು ಸಾವಿರದ ಎಂಟನೂರ ಇಪ್ಪತ್ತುನಾಲ್ಕು, ಚತುರವಿಂಶತಿ ತತ್ವದೊಳು = ಇಪ್ಪತ್ತುನಾಲ್ಕು ತತ್ತ್ವಗಳಲ್ಲಿ, ತತ್ವಪತಿಗಳೆನಿಸುವ = ಆಯಾ ತತ್ತ್ವಗಳಿಗೆ ಅಭಿಮಾನಿಗಳು ಎಂತ ಕರೆಸುವಂಥಾ ಬ್ರಹ್ಮದೇವರೇ ಮೊದಲಾದ ದೇವತೆಗಳಲ್ಲಿ ಹದಿಮೂರು ಸಾವಿರದ ಎಂಟನೂರ ಇಪ್ಪತ್ತುನಾಲ್ಕು ರೂಪಗಳಿಂದಲಿ, ವಿತತನಾಗಿ = ವ್ಯಾಪ್ತನಾಗಿ, ಎಲ್ಲರೊಳು = ಯಾವತ್ತು ಜೀವರೊಳು (ಇಷ್ಟು ರೂಪದಿಂದ ಇದ್ದು), ಪಂಚಾತ್ಮಕ = ವ್ಯೂಹರೂಪ

ಗಳಿಂದ ಅನಿರುದ್ಧ, ಸಂಕರ್ಷಣ, ಪ್ರದ್ಯುಮ್ನ, ವಾಸುದೇವ, ನಾರಾಯಣ ಈ ಐದು ರೂಪಗಳಿಂದ ಪೂರ್ವೋಕ್ತ ರೂಪಗಳ ಧರಿಸಿ, ಪ್ರಾಕೃತ ಪುರುಷನಂದದಲಿ=ಪ್ರಕೃತಿ ಸಂಬಂಧವಾದ ಪ್ರಾಣಿಗಳೋಪಾದಿಯಲ್ಲಿ, ಅವರವರ ಯೋಗ್ಯತಾನುಸಾರ, ರಮಿಸುವನು=ಆಯಾ ಜೀವರಲ್ಲಿ ಕರ್ಮಗಳ ಮಾಡಿಸುತ್ತ ತದ್ರೂಪವಾದ ಆಟಗಳ ಆಡೋವನಾಗಿ ವಿಹಾರಮಾಡುವನು. ತದ್ಗತ ತನ್ನ ಸ್ವಾಖ್ಯದಿಂದ ತಾನು ರಮಿಸಿ, ವಿಹಾರಮಾಡುವನು–ಎಂತ ತಾತ್ಪರ್ಯ.

**ಚತುರ್ವಿಂಶತಿ ತತ್ತ್ವಗಳ, ತತ್ವಾಭಿಮಾನಿಗಳ, ಭಗವದ್ರೂಪಗಳ ಮತ್ತು ಭಗವದ್ರೂಪಗಳ ಪತ್ನಿಯರ ವಿವರಗಳು**

| ಕ್ರ.ಸಂ. | ಚತುರ್ವಿಂಶತಿ ತತ್ತ್ವಗಳು | ತತ್ವಾಭಿಮಾನಿಗಳು | ಭಗವದ್ರೂಪಗಳು | ಭಗವದ್ರೂಪಗಳ ಪತ್ನಿಯರಹೆಸರು |
|---|---|---|---|---|
| ೧ | ಅವ್ಯಕ್ತತತ್ತ್ವ | ಲಕ್ಷ್ಮೀ | ಕೇಶವ | ಶ್ರೀ |
| ೨ | ಮಹತ್ತತ್ವ | ಬ್ರಹ್ಮ–ವಾಯು | ನಾರಾಯಣ | ಲಕ್ಷ್ಮೀ |
| ೩ | ಅಹಂಕಾರತತ್ತ್ವ | ರುದ್ರಾದಿಗಳು | ಮಾಧವ | ಕಮಲಾ |
| ೪ | ಮನಸ್ತತ್ವ | ಇಂದ್ರ, ಕಾಮ ಗರುಡಾದಿಗಳು | ಗೋವಿಂದ | ಪದ್ಮಾ |
| ೫ | ಕರ್ಣಕ್ಕೆ | ಚಂದ್ರ | ವಿಷ್ಣು | ಪದ್ಮಾ |
| ೬ | ನೇತ್ರಕ್ಕೆ | ಸೂರ್ಯ | ಮಧುಸೂದನ | ಕಮಲಾ |
| ೭ | ತ್ವಗಿಂದ್ರಿಯ | ಅಹಂಕಾರಿಕ ಪ್ರಾಣ | ತ್ರಿವಿಕ್ರಮ | ರಮಾ |

| | | | | |
|---|---|---|---|---|
| ೮ | ಜಿಂಹ್ವೆಗೆ | ವರುಣ | ವಾಮನ | ವೃಷಾಕಪಿ |
| ೯ | ನಾಸಿಕ | ಅಶ್ವಿನೀದೇವತೆಗಳು | ಶ್ರೀಧರ | ಪ್ರಕೃತಿ |
| ೧೦ | ವದನಕ್ಕೆ | ವಹ್ನಿ | ಹೃಷೀಕೇಶ | ಬುದ್ಧಿ |
| ೧೧ | ವಾಣಿ | ದಕ್ಷ | ಪದ್ಮನಾಭ | ಯಜ್ಞಾ |
| ೧೨ | ಪಾದ | ಜಯಂತ | ದಾಮೋದರ | ಇಂದಿರಾ |
| ೧೩ | ಪಾಯು | ಮಿತ್ರ | ಸಂಕರ್ಷಣ | ಹಿರಣ್ಯಾ |
| ೧೪ | ಉಪಸ್ಥ | ಮನು | ವಾಸುದೇವ | ಹರಿಣೀ |
| ೧೫ | ಶಬ್ದ | ಪ್ರಾಣ | ಪ್ರದ್ಯುಮ್ನ | ಸತ್ಯಾ |
| ೧೬ | ಸ್ಪರ್ಶ | ಅಪಾನ | ಅನಿರುದ್ಧ | ನಿತ್ಯಾ |
| ೧೭ | ರೂಪ | ವ್ಯಾನ | ಪುರುಷೋತ್ತಮ | ಆನಂದಿನೀ |
| ೧೮ | ರಸ | ಉದಾನ | ಅಧೋಕ್ಷಜ | ಅಸೌಜ್ಞಾ |
| ೧೯ | ಗಂಧ | ಸಮಾನ | ನರಹರಿ | ಸುಖಾ |
| ೨೦ | ಆಕಾಶ | ಗಣಪತಿ | ಅಚ್ಯುತ | ಸುಗಂಧಿ |
| ೨೧ | ವಾಯು | ಪ್ರವಹವಾಯು | ಜನಾರ್ದನ | ಸುಂದರೀ |
| ೨೨ | ತೇಜಸ್ಸು | ಪಾವಕ | ಉಪೇಂದ್ರ ಮತ್ತು ಪರಶುರಾಮ | ವಿದ್ಯಾ |
| ೨೩ | ಅಪ್ಪು | ವರುಣ | ಹರಿ | ಸುಶೀಲಾ |
| ೨೪ | ಪೃಥಿವೀ | ಧರಾ–ಶನಿ | ಶ್ರೀಕೃಷ್ಣ | ಸುಲಕ್ಷಣಾ |

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ :-

ಈ ಪದ್ಯದಿಂದ ಸ್ಥೂಲಶರೀರದಲ್ಲಿ ವ್ಯಾಪಿಸಿಕೊಂಡಿರುವ (ಈ ಸಂಧಿಯಲ್ಲಿ ಈವರೆವಿಗೂ ತೋರಿಸಿರುವ) ಒಟ್ಟು ಭಗವದ್ರೂಪಗಳ ಸಂಖ್ಯೆಯನ್ನು ಚಿಂತನೆಗೋಸ್ಕರ ಕ್ರೋಢೀಕರಿಸಿ ಹೇಳುತ್ತಾರೆ. ಒಟ್ಟು ೧೩೮೨೪ ರೂಪಗಳು ಅಕ್ಷರ ಸಂಖ್ಯೆಯಿಂದಲೇ ಇದರ ವಿವರವನ್ನು ತಿಳಿಯಬೇಕು :—

| ಕ್ರ.ಸಂ. | ವಿವರಗಳು | ಭಗವದ್ರೂಪಗಳ ಸಂಖ್ಯೆ |
|---|---|---|
| ೧ | ಅವ್ಯಕ್ತತತ್ತ್ವ | ೨೫೧ |
| ೨ | ಮಹತ್ತತ್ತ್ವ | ೧೮೫ |
| ೩ | ತಾಮಸ | ೭೫೧ |
| ೪ | ಮನಸ್ಸು | ೭೫೫ |
| ೫ | ದಶೇಂದ್ರಿಯಗಳ ಒಟ್ಟು ಅಕ್ಷರಸಂಖ್ಯೆ | ೨೩೪೩ |
| ೬ | ಪಂಚಭೂತಗಳ ಒಟ್ಟು ಅಕ್ಷರಸಂಖ್ಯೆ | ೧೦೦೦ |
| ೭ | ಪಂಚತನ್ಮಾತ್ರಾ ಒಟ್ಟು ಅಕ್ಷರಸಂಖ್ಯೆ | ೧೦೮೦ |
| ೮ | ಅಧ್ಯಾತ್ಮ, ಅಧಿದೈವ ಅಧಿಭೂತಗಳ ಒಟ್ಟು ಸಂಖ್ಯೆ | ೪೩೨೬ |
| ೯ | ದಶೇಂದ್ರಿಯಗಳ ಗೋಳಕದಲ್ಲಿ ಚಕ್ಷುಸ್ ಮೊದಲಾದ ಒಂದೊಂದು ಗೋಳಕದಲ್ಲಿ ಅನಿರುದ್ಧಾದಿ ೫ ರೂಪಗಳಂತೆ ೩೦ ರೂಪಗಳನ್ನೂ ಹೀಗೆ ಹತ್ತು ಇಂದ್ರಿಯಗಳಲ್ಲಿ ೧೦ × ೩೦ರೂಪಗಳು | ೩೦೦ |
| ೧೦ | ಇದರಂತೆ ದಶಪ್ರಾಣರಲ್ಲಿ ೩೦ × ೧೦ | ೩೦೦ |
| ೧೧ | ೨೪ ತತ್ತ್ವಗಳಲ್ಲಿ ಒಂದೊಂದರಲ್ಲಿ ೫೧ ಆಕ್ಷರಗಳಂತೆ ೨೪ × ೫೧ = | ೧೨೨೪ |

| | | |
|---|---|---|
| ೧೨ | ಕ, ಕಾ, ಕಿ, ಕೀ ಹೀಗೆ ಕಂ, ಕಃ ವರೆಗೂ ೧೨. | |
| | ಈ ೧೨ × ೩೫ವ್ಯಂಜನಾಕ್ಷರಗಳು | ೪೨೦ |
| ೧೩ | ಅಜಾದಿ ಏಕಪಂಚಾಶದ್ವರ್ಣವಾಚ್ಯ ರೂಪಗಳು | ೫೧ |
| ೧೪ | ಶಕ್ತಿ ಪ್ರತಿಷ್ಠಾದಿ ರೂಪಗಳು | ೧೨ |
| ೧೫ | ಸರ್ವದೇಹಸ್ಥ ಅನಿರುದ್ಧಾದಿ ಪಂಚರೂಪಗಳು | ೫ |
| | ಒಟ್ಟು ಭಗವದ್ರೂಪಗಳಸಂಖ್ಯೆ=೧೩೮೨೪ | |

ಶ್ರೀ ಪರಮಾತ್ಮನು ಮೇಲೆ ವಿವರಿಸಿದಂತೆ, ೨೪ ತತ್ತ್ವಗಳೊಳಗೂ, ತತ್ತ್ವಾಭಿಮಾನಿದೇವತೆಗಳಾದ ಬ್ರಹ್ಮಾದಿಗಳೊಳಗೂ, ದೇಹದ ಸರ್ವತ್ರ ದಲ್ಲಿಯೂ ಸಹ ಅನಿರುದ್ಧಾದಿ ಪಂಚಾತ್ಮನಾಗಿ ಒಟ್ಟು ೧೩೮೨೪ ರೂಪಗಳಿಂದ ಎಲ್ಲರೊಳಗೂ ವ್ಯಾಪ್ತನಾಗಿದ್ದು, ಪ್ರಾಕೃತಪುರುಷನಂತೆ ಕ್ರೀಡಿಸುವನು.

೧೩೮೨೪ ಸಂಖ್ಯೆಯನ್ನು ಪ್ರಕಾರಾಂತರವಾಗಿಯೂ ಹೇಳಬಹುದು :—

ತತ್ತ್ವಗಳಸಂಖ್ಯೆ=೨೪. ಒಂದೊಂದು ತತ್ತ್ವದಲ್ಲೂ ಸಂಸೃಷ್ಟಿ ತತ್ತ್ವಗಳು ೨೪. ಅಲ್ಲಿಗೆ ೨೪ × ೨೪=೫೭೬ ರೂಪಗಳಾಯಿತು. ತತ್ತ್ವ ಪತಿ ದೇವತೆಗಳ ಸಂಖ್ಯೆ=೨೪, ಒಬ್ಬೊಬ್ಬ ದೇವತೆಯಲ್ಲೂ, ಮೇಲೆ ಹೇಳಿದಪ್ರಕಾರ ಸಂಸೃಷ್ಟ ತತ್ತ್ವಗಳಿಂದ ಕೂಡಿದ ತತ್ತ್ವಗಳು ೨೪ × ೨೪= ೫೭೬. ಇಂತು, ಸಂಸೃಷ್ಟ ೫೭೬ ತತ್ತ್ವಗಳು ಮತ್ತು ೫೭೬ ತತ್ತ್ವಾಭಿಮಾನಿ ದೇವತೆಗಳಿಗೂ ಸೇರಿ, ೫೭೬ × ೫೭೬=೧೩,೮೨೪ ಆಗುತ್ತದೆ. ಇಷ್ಟು ರೂಪಗಳಿಂದ ಎಲ್ಲರೊಳಗೂ ಇದ್ದು, ಅನಿರುದ್ಧಾದಿ ರೂಪಗಳಿಂದ ಪ್ರಾಕೃತ ಪುರುಷನಂತೆ ರಮಿಸುವನು.

(೩) "ಭಾವದರ್ಪಣ ಟೀಕಾ" ವ್ಯಾಖ್ಯಾನ :—

ಹದಿಮೂರುಸಾವಿರದ ಎಂಟನೂರು ಇಪ್ಪತ್ತುನಾಲ್ಕು ರೂಪದಿಂದ ಬ್ರಹ್ಮಾದಿಗಳಲ್ಲಿ, ತತ್ತ್ವಗಳಲ್ಲಿ ಸಹ ಪಂಚರೂಪಾತ್ಮಕ ಹರಿಯು ವ್ಯಾಪ್ತ ನಾಗಿಹನೆಂದು ಸೂಚಿಸುತ್ತಾರೆ–"ಚತುರವಿಂಶತೀತಿ" ॥೨೭॥

(೪) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :–

"ಚತುರೇತಿ" ॥ "ತ್ರಯೋದಶ ಸಹಸ್ರಾಷ್ಟ ಶತರೂಪೈಶ್ಚ ತತ್ವಗಃ । ಚತುರ್ವಿಂಶತಿ ರೂಪಾತ್ಮಾ ತಾತ್ವಿಕೇಷು"–ಇತಿ ತತ್ವರಹಸ್ಯೇ ॥೨೭॥

**ಕನ್ನಡಾರ್ಥ :**

ತತ್ವಾಭಿಮಾನಿ ದೇವತೆಗಳಲ್ಲಿಯೂ ಮತ್ತು ಚತುರ್ವಿಂಶತಿ ತತ್ತ್ವಗಳಲ್ಲಿಯೂ ಇರುವ ಪಂಚರೂಪಾತ್ಮಕ ಶ್ರೀ ಪರಮಾತ್ಮನ ರೂಪಗಳ ಸಂಖ್ಯೆಯ ವಿವರಗಳು **"ತತ್ವರಹಸ್ಯ"**ವೆಂಬ ಪ್ರಮಾಣ ಗ್ರಂಥದಲ್ಲಿ ಉಲ್ಲೇಖಿತವಾಗಿವೆ. "೧೩೮೨೪ ರೂಪಗಳು" –ಎಂದು ಶ್ಲೋಕಾರ್ಥವು.

(೫) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ :—

ತತ್ತ್ವನಿಯಾಮಕ ಮುಖ್ಯಾಂಕ ಅಕ್ಷರ ರೀತ್ಯಾ, ರೂಪಸ್ಮರಣೆಯನ್ನು ನಿರೂಪಿಸುತ್ತಾರೆ :–

ಇಪ್ಪತ್ತು ನಾಲ್ಕು ತತ್ತ್ವಗಳಲ್ಲೂ ಆ ತತ್ವಾಧಿಪತಿ ಬ್ರಹ್ಮಾದಿ ದೇವತೆಗಳಲ್ಲೂ,೧೩೮೨೪ ರೂಪಗಳಿಂದ ವ್ಯಾಪ್ತನಾಗಿದ್ದು, ಅನಿರುದ್ಧಾದಿ ನಾರಾಯಣಾಂತ ಪಂಚರೂಪನು, ಪ್ರಕೃತಿ ಜೀವನಂತೆ, ಅಜ್ಞರಿಗೆ ತೋರುವವನಾಗಿ ಸ್ವಾನಂದ ಕ್ರೀಡೆಯಾಡುವನು. ಬ್ರಂ=೧೩, ಹ=೮. ರೂ=೨, ಪ=೪. ಈ ರೀತಿ ೧೩೮೨೪ ರೂಪಗಳು. ॥ ೨೭ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಸಾಧನ ಶರೀರವಾದ ಸ್ಥೂಲದೇಹಗತ ೨೪ ತತ್ತ್ವಗಳಲ್ಲಿ ಮತ್ತು ಆಯಾಯಾ ತತ್ವಾಭಿಮಾನಿಗಳಾದ ಬ್ರಹ್ಮಾದಿ ದೇವತೆಗಳಲ್ಲಿ ೧೩೮೨೪ ರೂಪಗಳಿಂದ ಶರೀರಾದ್ಯಂತ ವ್ಯಾಪ್ತನಾಗಿದ್ದು, ಅನಿರುದ್ಧಾದಿ ಪಂಚರೂಪಾತ್ಮಕನಾಗಿ ಶ್ರೀ ಪರಮಾತ್ಮನು ಆಯಾಯಾ ತತ್ತ್ವಗತ ಹಾಗೂ ಅಭಿಮಾನಿ

ದೇವತಾಗತ ಸ್ವಾಭಿನ್ನ ರೂಪಗಳಲ್ಲಿ ಕ್ರೀಡಿಸುತ್ತಾ, ತತ್ತ್ವಕಾರ್ಯಗಳನ್ನು ತತ್ವಪತಿ ದೇವತೆಗಳ ದ್ವಾರಾ ಮಾಡಿ ಮಾಡಿಸುತ್ತಾ ವಿಹರಿಸುತ್ತಿರುವನು ಎಂದು ತಿಳಿಸುತ್ತಾರೆ–ಪ್ರಸಕ್ತ ೨೭ನೆಯ ಪದ್ಯದಿಂದ.

೧೩೮೨೪ ಭಗವದ್ರೂಪಗಳ ವಿವರಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ :–

| ಕ್ರಮ ಸಂಖ್ಯೆ | ಅಧಿಷ್ಠಾನ | ಅಕ್ಷರ | ವಿವರ | ಅಕ್ಷರ ಸ್ಥಾನ | ಸಂಖ್ಯೆ | ವಾಮಾಂಕ ರೀತ್ಯಾ | ಅಕ್ಷರ ಸಾಂಕೇತಿಕ ಭಗವದ್ರೂಪಗಳು |
|---|---|---|---|---|---|---|---|
| ೧ | ಅವ್ಯಕ್ತ ತತ್ತ್ವದಲ್ಲಿ | ಅ | ಸ್ವರಾಕ್ಷರ | ೧ | | | |
| | | ವ್ಯ | ವ+ಯ=೪+೧ | ೫ | | | |
| | | ಕ್ತ | ಕ+ತ=೧+೧ | ೨ | ೧೫೨ | ೨೫೧ | **೨೫೧** |
| ೨ | ಮಹತತ್ತ್ವದಲ್ಲಿ | ಮ | ಪ–ವರ್ಗ ಪಂಚಕ | ೫ | | | |
| | | ಹ | ಅವರ್ಗೀಯ ವ್ಯಂಜನಾಕ್ಷರ | ೮ | | | |
| | | ತ್ | ತ–ವರ್ಗ ಪಂಚಕ | ೧ | ೫೮೧ | ೧೮೫ | **೧೮೫** |

| | | | | | | | |
|---|---|---|---|---|---|---|---|
| ೩ | ತಾಮಸ | ತಾ | ತ–ವರ್ಗ ಪಂಚಕ | ೧ | | | |
| | (ಅಹಂಕಾರ | ಮ | ಪ–ವರ್ಗ ಪಂಚಕ | ೫ | | | |
| | ತತ್ತ್ವದಲ್ಲಿ) | ಸ | ಅವರ್ಗೀಯ ವ್ಯಂಜನಾಕ್ಷರ | ೭ | ೧೫೭ | ೭೫೧ | **೭೫೧** |
| ೪ | ಮನಸ್ತತ್ತ್ವ | ಮ | ಪ–ವರ್ಗ ಪಂಚಕ | ೫ | | | |
| | ದಲ್ಲಿ | ನ | ತ–ವರ್ಗ ಪಂಚಕ | ೫ | | | |
| | | ಸ್ | ಅವರ್ಗೀಯ ವ್ಯಂಜನಾಕ್ಷರ | ೭ | ೫೫೭ | ೭೫೫ | **೭೫೫** |
| ೫ | **ದಶೇಂದ್ರಿಯಗಳು** | | **ಪಂಚಜ್ಞಾನೇಂದ್ರಿಯಗಳು** | | | | |
| | (೧) ಶ್ರೋತ್ರ | ಶ್ರೋ | ಶ+ರ=೫+೨ | ೭ | | | |
| | | ತ್ರ | ತ+ರ=೧+೨ | ೩ | ೭೩ | ೩೭ | |
| | (೨) ತ್ವಕ್ | ತ್ವ | ತ+ವ=೧+೪ | ೫ | | | |
| | | ಕ್ | ಕ–ವರ್ಗ ಪಂಚಕ | ೧ | ೫೧ | ೧೫ | |

| | | | | | |
|---|---|---|---|---|---|
| (೩) ಚಕ್ಷು | ಚ | ಚ–ವರ್ಗ ಪಂಚಕ | ೧ | | |
| | ಕ್ಷು | ಅವರ್ಗೀಯ ವ್ಯಂಜನಾಕ್ಷರ | ೧೦ | ೧೦೧ | ೧೦೧ |
| (೪) ಜಿಂಹ್ವಾ | ಜಿ | ಚ–ವರ್ಗ ಪಂಚಕ | ೩ | | |
| | ಂ | ಅನುಸ್ವಾರ | ೦ | | |
| | ಹ್ವಾ | ಹ+ವ=೮+೪ | ೧೨ | ೩೦೧೨ | ೧೨೦೩ |
| (೫) ಘ್ರಾಣ | ಘ್ರಾ | ಘ+ರ=೪+೨ | ೬ | | |
| | ಣ | ಟ–ವರ್ಗ ಪಂಚಕ | ೫ | ೬೫ | ೫೬ |

**ಪಂಚಕರ್ಮೇಂದ್ರಿಯಗಳು**

| | | | | | |
|---|---|---|---|---|---|
| (೬) ಪಾಣಿ | ಪಾ | ಪ–ವರ್ಗ ಪಂಚಕ | ೧ | | |
| | ಣಿ | ಟ–ವರ್ಗ ಪಂಚಕ | ೫ | ೧೫ | ೫೧ |

| | | | | | |
|---|---|---|---|---|---|
| (೭) ಪಾದ | ಪಾ | ಪ–ವರ್ಗ ಪಂಚಕ | ೧ | | |
| | ದ | ತ–ವರ್ಗ ಪಂಚಕ | ೩ | ೧೩ | ೩೧ |
| (೮) ವಾಕ್ಕು | ವಾ | ಅವರ್ಗೀಯ ವ್ಯಂಜನ | ೪ | | |
| | ಕ್ಕು | ಕ+ಕ=೧+೧ | ೨ | ೪೨ | ೨೪ |
| (೯) ಪಾಯು | ಪಾ | ಪ–ವರ್ಗ ಪಂಚಕ | ೧ | | |
| | ಯು | ಅವರ್ಗೀಯ ವ್ಯಂಜನ | ೧ | ೧೧ | ೧೧ |
| (೧೦) ಉಪಸ್ಥ | ಉ | ಸ್ವರಾಕ್ಷರ | ೪ | | |
| | ಪ | ಪ–ವರ್ಗ ಪಂಚಕ | ೧ | | |
| | ಸ್ಥ | ಸ+ಥ=೭+೧ | ೮ | ೪೧೮ | ೮೧೪ |

ದಶೇಂದ್ರಿಯಗಳಲ್ಲಿ ಒಟ್ಟು ೨೩೪೭

## ೬ ಭೂತಪಂಚಕಗಳು

| | | | | | | |
|---|---|---|---|---|---|---|
| (೧) | ಆಕಾಶ | ಆ | ಸ್ವರಾಕ್ಷರ | ೧ | | |
| | | ಕಾ | ಕ–ವರ್ಗ ಪಂಚಕ | ೧ | | |
| | | ಶ | ಅವರ್ಗೀಯ ವ್ಯಂಜನಾಕ್ಷರ | ೫ | ೧೧೫ | ೫೧೧ |
| (೨) | ವಾಯು | ವಾ | ಅವರ್ಗೀಯ ವ್ಯಂಜನಾಕ್ಷರ | ೪ | | |
| | | ಯು | ಅವರ್ಗೀಯ ವ್ಯಂಜನಾಕ್ಷರ | ೧ | ೪೧ | ೧೪ |
| (೩) | ತೇಜ | ತೇ | ತ–ವರ್ಗ ಪಂಚಕ | ೧ | | |
| | | ಜ | ಚ–ವರ್ಗ ಪಂಚಕ | ೩ | ೧೩ | ೩೧ |
| (೪) | ಅಪ್ಪು | ಅ | ಸ್ವರಾಕ್ಷರ | ೧ | | |
| | | ಪ್ಪು | ಪ+ಪ=೧+೧ | ೨ | ೧೨ | ೨೧ |
| (೫) | ಪೃಥಿವಿ | ಪೃ | ಪ+ರ=೧+೨ | ೩ | | |
| | | ಥಿ | ತ–ವರ್ಗ ಪಂಚಕ | ೨ | | |
| | | ವಿ | ಅವರ್ಗೀಯ ವ್ಯಂಜನಾಕ್ಷರ | ೪ | ೩೨೪ | ೪೨೩ |

**ಪಂಚಭೂತಗಳಲ್ಲಿ ಭಗವದ್ರೂಪಗಳ ಸಂಖ್ಯೆ = ೧೦೦೦**

೭ **ಪಂಚತನ್ಮಾತ್ರಗಳು**

| | | | | | | |
|---|---|---|---|---|---|---|
| (೧) | **ಶಬ್ದ** | ಶ | ಅವರ್ಗೀಯ ವ್ಯಂಜನಾಕ್ಷರ | ೫ | | |
| | | ಬ್ದ | ಬ+ದ=೩+೩ | ೬ | ೫೬ | ೬೫ |
| (೨) | **ಸ್ಪರಿಶ** | ಸ್ಪ | ಸ+ಪ=೭+೧ | ೮ | | |
| | | ರಿ | ಅವರ್ಗೀಯ ವ್ಯಂಜನಾಕ್ಷರ | ೨ | | |
| | | ಶ | ಅವರ್ಗೀಯ ವ್ಯಂಜನಾಕ್ಷರ | ೫ | ೮೨೫ | ೫೨೮ |
| (೩) | **ರೂಪ** | ರೂ | ಅವರ್ಗೀಯ ವ್ಯಂಜನಾಕ್ಷರ | ೨ | | |
| | | ಪ | ಪ–ವರ್ಗ ಪಂಚಕ | ೧ | ೨೧ | ೧೨ |
| (೪) | **ರಸ** | ರ | ಅವರ್ಗೀಯ ವ್ಯಂಜನಾಕ್ಷರ | ೨ | | |
| | | ಸ | ಅವರ್ಗೀಯ ವ್ಯಂಜನಾಕ್ಷರ | ೭ | ೨೭ | ೭೨ |
| (೫) | **ಗಂಧ** | ಗ | ಕ–ವರ್ಗ ಪಂಚಕ | ೩ | | |
| | | ಂ | ಅನುಸ್ವಾರ | ೦ | | |
| | | ಧ | ತ–ವರ್ಗ ಪಂಚಕ | ೪ | ೩೦೪ | ೪೦೩ |

**ಪಂಚತನ್ಮಾತ್ರಗಳಲ್ಲಿ ಭಗವದ್ರೂಪಗಳು** = ೧೦೮೦

(೮) ಆಧಿಭೂತಗತ

| | | | | |
|---|---|---|---|---|
| (೧) ಅಚ್ಯುತರೂಪ | ಅ | ಸ್ವರಾಕ್ಷರ | ೧ | |
| | ಚ್ಯು | ಚ+ಚ+ಯ=೧+೧+೧ | ೩ | |
| | ತ | ತ–ವರ್ಗ ಪಂಚ | ೧ | ೧೩೧ |
| (೨) ಆದಿದೈವಗತ ಗೋವಿಂದ | ಗೋ | ಕ–ವರ್ಗ ಪಂಚಕ | ೩ | |
| | ವಿ | ಅವರ್ಗೀಯ ವ್ಯಂಜನಾಕ್ಷರ | ೪ | |
| | ಂ | ಅನುಸ್ವಾರ | ೦ | |
| | ದ | ತ–ವರ್ಗ ಪಂಚ | ೩ | ೩೦೪೩ |
| (೩) ಅಧ್ಯಾತಗತ ಅನಂತ | ಅ | ಸ್ವರಾಕ್ಷರ | ೧ | |
| | ನ | ತ–ವರ್ಗ ಪಂಚಕ | ೫ | |
| | ಂ | ಅನುಸ್ವಾರ | ೦ | |
| | ತ | ತ–ವರ್ಗ ಪಂಚಕ | ೧ | ೧೦೫೧ |
| (೪) ಹೃದಯ ಸ್ಥಾನಗತ ಆತ್ಮ | ಆ | ಸ್ವರಾಕ್ಷರ | ೨ | |
| | ತ್ಮ | ತ+ಮ=೧+೫ | ೬ | ೬೨ |

ಅಚ್ಯುತಾದಿ ರೂಪಗಳು= ೪೨೮೬

| | | | | |
|---|---|---|---|---|
| (೯) ಹೃದಯಾಕಾಶ | ಹೃ | ಹ+ರ=೮+೨ | ೧೦ | |
| | ಡಿ | ತ-ವರ್ಗ ಪಂಚಕ | ೩ | ೩೧೦ |
| | ಆ | ಸ್ವರಾಕ್ಷರ | ೨ | |
| | ಕಾ | ಕ-ವರ್ಗ ಪಂಚಕ | ೧ | |
| | ಶ | ಅವರ್ಗೀಯ ವ್ಯಂಜನ | ೫ | ೫೧೨ |
| | | ಹೃದಯಾಕಾಶ | = | ೮೨೨ |

೧೦ ಒಂದೊಂದು ಅಗ್ನಿಯಲ್ಲಿ ಆರು ರೂಪಗಳಂತೆ ಪಂಚಾಗ್ನಿಗಳು × ೬ ರೂಪಗಳು = ೫ × ೬ = ೩೦

೧೧ ಗುಣತ್ರಯಾದಿಗತ ವಿಶ್ವಾದಿ ರೂಪಗಳು ೩

೧೨ ಕೃದ್ಧೋಲ್ಕಾದಿ ಪಂಚರೂಪಗಳು ೫

೧೩ ದಶೇಂದ್ರಿಯ ಗೋಳಕಗಳಲ್ಲಿ ಅನಿರುದ್ಧಾದಿ ೩೦ ಸಮಷ್ಟಿ ರೂಪಗಳಂತೆ(೬ × ೫ = ೩೦) = ೧೦ × ೩೦ = ೩೦೦

೧೪ ಪ್ರಾಣಾದಿ ಪಂಚರೂಪಗಳು + ನಾಗಾದಿ ಪಂಚ ರೂಪಗಳು = ದಶಪ್ರಾಣಗತ ರೂಪಗಳು
ಒಂದೊಂದರಲ್ಲಿ ೩೦ ರೂಪಗಳಂತೆ ೧೦ × ೩೦ = ೩೦೦

| | | |
|---|---|---|
| ೧೫ | ೨೪ ತತ್ತ್ವಗಳು × ೫೧ ವರ್ಣಗಳು. ಅಂದರೆ ತತ್ತ್ವಾಂತರ್ಗತ ವರ್ಣವಾಚ್ಯ ರೂಪಗಳು | ೧೨೨೪ |
| ೧೬ | ಕ, ಕಾ, ಕಿ, ಕೀ, ಹೀಗೆ ಕಂ, ಕಃ ಪರ್ಯಂತ ಗುಣಿತಾಕ್ಷರಗಳು = ೧೨. ವ್ಯಂಜನಾಕ್ಷರಗಳು = ೩೫<br>ಅದರಂತೆ ಗುಣಿತಾಕ್ಷರಗತ ವ್ಯಂಜನಾಕ್ಷರ ಪ್ರತಿಪಾದ್ಯ ರೂಪಗಳು = ೧೨ × ೩೫ = | ೪೨೦ |
| ೧೭ | ಅಜಾದಿ ಕ್ಷ–ಕಾರ ಪರ್ಯಂತ (ಲಕ್ಷ್ಮೀನರಸಿಂಹ) ಏಕಪಂಚಾಶದ್ವರ್ಣವಾಚ್ಯ ರೂಪಗಳು | ೫೧ |
| ೧೮ | ಶಕ್ತಿ ಪ್ರತಿಷ್ಠಾದಿ ರೂಪಗಳು | ೧೨ |
| ೧೯ | ಸರ್ವದೇಹಸ್ಥ ಪಂಚಕೋಶಗತ ಅನಿರುದ್ಧಾದಿ ಪಂಚರೂಪಗಳು | ೫ |
| | **ಕ್ರಮ ಸಂಖ್ಯೆ ೧ ರಿಂದ ೧೯ರವರೆಗೆ ಒಟ್ಟು =** | **೧೩೮೨೪** |

ಈ ಸಂಖ್ಯೆಯನ್ನು ದಾಸರಾಯರು– **"ಹದಿಮೂರು ಸಾವಿರದೆಂಟು ನೂರಧಿಕ ಚತುರ್ವಿಂಶತಿ ರೂಪದಿಂದಲಿ"**ಎಂದು ಹೇಳಿರುತ್ತಾರೆ.

| | | |
|---|---|---|
| ಅಂದರೆ, | ಹದಿಮೂರು ಸಾವಿರ | ೧೩,೦೦೦ |
| | ಎಂಟುನೂರಧಿಕ | ೮೦೦ |
| | ಚತುರ್ವಿಂಶತಿ | ೨೪ |
| | ಒಟ್ಟು ಸಂಖ್ಯೆ = | ೧೩,೮೨೪ |

ಇಂತು, ಬಿಂಬರೂಪಿ ಶ್ರೀ ಪರಮಾತ್ಮನು ಈ ಸ್ಥೂಲ ದೇಹಗತ ೨೪ ತತ್ತ್ವಗಳು ಹಾಗೂ ತತ್ತ್ವಾಭಿಮಾನಿ ದೇವತೆಗಳಲ್ಲಿಯೂ, ಹದಿಮೂರು ಸಾವಿರದ ಎಂಟುನೂರ ಇಪ್ಪತ್ತುನಾಲ್ಕು ರೂಪಗಳಿಂದ ವಿದ್ಯಮಾನನಾಗಿದ್ದು, ಶರೀರಾದ್ಯಂತ ವ್ಯಾಪಿಸಿಕೊಂಡು, ಪ್ರಕೃತಿಸಂಬಂಧವಾದ ಸಾಮಾನ್ಯ ಮಾನವ ರಂತೆ ಕ್ರೀಡಿಸುತ್ತಿರುವನು. ಅಪ್ರಾಕೃತ ಆನಂದಉದ್ರಿಕ್ತವಸ್ತುವಾದ ಲೋಕದಿಂದ ಅತ್ಯಂತ ಭಿನ್ನನಾದ ಆ ಪುರುಷೋತ್ತಮನು ತನ್ನ ಇರವನ್ನು ತೋರಗೊಡದೆ ಲೀಲಾವಿಲಾಸ್ಪದನಾಗಿದ್ದಾನೆ.

ಮೇಲಿನ ೧೩,೮೨೪ ಎಂಬ ಭಗವದ್ರೂಪಗಳ ಸಂಖ್ಯೆಯ ಕ್ರಮವನ್ನು ಇನ್ನೊಂದು ರೀತಿಯಲ್ಲಿಯೂ ವಿವರಿಸಬಹುದು.

(೧) ತತ್ತ್ವಗಳ ಸಂಖ್ಯೆ = ೨೪.

(೨) ಪ್ರತಿ ತತ್ತ್ವದಲ್ಲಿಯೂ ಆ ತತ್ವವೂ ಸೇರಿದಂತೆ ೨೪ ತತ್ತ್ವಗಳು ಸಂಸೃಷ್ಟಗಳಾಗಿವೆ.

(೩) ಇದರಿಂದ ಒಟ್ಟು ಸಂಸೃಷ್ಟ ತತ್ತ್ವಗಳ ಸಂಖ್ಯೆ =
೨೪ × ೨೪ = ೫೭೬.

(೪) ಅಂತೆಯೇ ತತ್ತ್ವಾಭಿಮಾನಿ ದೇವತೆಗಳ ಸಂಖ್ಯೆ = ೨೪.

(೫) ಸಂಸೃಷ್ಟ ತತ್ತ್ವಗಳು × ತತ್ವಪತಿಗಳು =
೫೭೬ × ೨೪ = ೧೩,೮೨೪ ॥೭೨॥

## ಪದ್ಯ (೨೮)

**ಮೂಲ :**

**ಕೇಶವಾದಿ ಸುಮೂರ್ತಿ ದ್ವಾದಶ**
**ಮಾಸ ಪುಂಡ್ರಗಳಲ್ಲಿ ನೆಲಸಿಹ ।**
**ವ್ಯಾಸ ಅನಿರುದ್ಧಾದಿ ರೂಪಗಳಾರು ಋತುಗಳಲಿ॥**
**ವಾಸವಾಗಿಹನೆಂದು ತ್ರಿಂಶತಿ ।**
**ವಾಸರದಿ ಸತ್ಕರ್ಮ ಧರ್ಮ ನಿ ।**
**ರಾಶೆಯಿಂದಲಿ ಮಾಡು ಕರುಣವ ಬೇಡು ಕೊಂಡಾಡು ॥೨೮॥**

**ಅವತರಣಿಕೆ :**

ಇನ್ನು ಮಾಸಾಂತರ್ಗತ, ಋತ್ವಂತರ್ಗತ ಭಗವದ್ರೂಪಗಳ ವಿವರಗಳನ್ನು ತಿಳಿಸುತ್ತಾರೆ– **"ಕೇಶವಾದಿ"** ಎಂಬ ಪ್ರಸಕ್ತ ಸಂಧಿಗತ ೨೮ನೆಯ ಈ ಪದ್ಯದಿಂದ.

ಚೈತ್ರಾದಿ ಫಾಲ್ಗುಣ ಪರ್ಯಂತ ೧೨ ಮಾಸಗಳಲ್ಲಿ ಶುಕ್ಲ ಹಾಗೂ ಕೃಷ್ಣಪಕ್ಷಗಳಲ್ಲಿ ಕೇಶವಾದಿ ಚತುರ್ವಿಂಶತಿ ನಾಮಗಳನ್ನು ಚಿಂತಿಸಬೇಕು. ಆಯಾಯಾ ಮಾಸಗಳಲ್ಲಿ ತದಭಿಮಾನಿ ಭಗವದ್ರೂಪಗಳ ಚಿಂತನೆ ಮಾಡಬೇಕು. ಅಂತೆಯೇ, ಸಾಧನ ಶರೀರದಮೇಲೆ ಧಾರಣ ಮಾಡುವ ದ್ವಾದಶ ನಾಮಗಳಲ್ಲಿ ಕೇಶವಾದಿ ದಾಮೋದರ ಪರ್ಯಂತ ೧೨ ಭಗವದ್ರೂಪಗಳನ್ನು ಚಿಂತಿಸಬೇಕು, ವಸಂತಾದಿ ಶಿಶಿರಋತು ಪರ್ಯಂತ ಆರು ಋತುಗಳಲ್ಲಿ ವೇದವ್ಯಾಸಾದಿ ನಾರಾಯಣಾಂತ ೬ ರೂಪಗಳನ್ನು ಧ್ಯಾನಿಸಬೇಕು. ಇಂತು ಮಾಸದ ಮೂವತ್ತು ದಿವಸಗಳಲ್ಲಿಯೂ ಆಯಾಯ ದಿವಸಾಭಿಮಾನಿ ತದಂತರ್ಗತ ಕಾಲನಿಯಾಮಕ ಭಗವದ್ರೂಪಗಳನ್ನು ನಿರಂತರದಲ್ಲಿಯೂ ಚಿಂತನೆಮಾಡುತ್ತಾ, ನಿಷ್ಕಾಮನೆಯಿಂದ ಫಲಪ್ರಾಪ್ತಿಗಾಗಿ ಆಶೆಪಡದೆ, ಭಗವತ್ಸೇವೆ ಎಂಬ ಉತ್ತಮ ಜ್ಞಾನಾನುಸಂಧಾನದಿಂದ ಸತ್ಕರ್ಮ ಮತ್ತು ಆಯಾಯಾ ಮಾಸಧರ್ಮಗಳನ್ನು ಆಚರಿಸುತ್ತಾ, ಆ ಕರುಣಾಸಮುದ್ರನಾದ ಭಗವಂತನ ಪರಮಾನುಗ್ರಹವನ್ನು ಬೇಡು

ಮತ್ತು ಶ್ರೀ ಪರಮಾತ್ಮನ ಗುಣಾತಿಶಯಗಳನ್ನು ಕೊಂಡಾಡುತ್ತಿರು ಎಂದು ತಿಳಿಸುತ್ತಾರೆ ಪ್ರಸಕ್ತ ಪದ್ಯದಿಂದ. ||೨೮||

**ಪ್ರತಿಪದಾರ್ಥ :—**

**ದ್ವಾದಶಮಾಸ**= ಚೈತ್ರಮಾಸ ಪ್ರಾರಂಭ ಮಾಡಿಕೊಂಡು ಫಾಲ್ಗುಣ ಮಾಸದವರೆಗೆ ೧೨ ತಿಂಗಳುಗಳಲ್ಲಿ **ಕೇಶವಾದಿ**= ಕೇಶವನಾಮಕ ಭಗವದ್ರೂಪದಿಂದ ಆದಿಯಾಗಿ ದಾಮೋದರ ಪರ್ಯಂತ **ಸುಮೂರ್ತಿ**= ಸಮೀಚೀನವಾದ ಭಗವನ್ಮೂರ್ತಿಗಳನ್ನು ಚಿಂತಿಸಬೇಕು. **ದ್ವಾದಶಪುಂಡ್ರಗಳಲ್ಲಿ**= ಅಂತೆಯೇ ದೇಹದಲ್ಲಿ ಧಾರಣ ಮಾಡತಕ್ಕ ದ್ವಾದಶ ಊರ್ಧ್ವಪುಂಡ್ರಗಳಲ್ಲಿ ಲಲಾಟ ಪ್ರಾರಂಭ ಮಾಡಿಕೊಂಡು, ಕಂಠದ ಹಿಂದಿನವರೆಗೂ ಕೇಶವಾದಿ ದಾಮೋದರಾಂತ ಭಗವನ್ಮೂರ್ತಿಗಳನ್ನು ಚಿಂತಿಸಬೇಕು. **ಆರು ಋತುಗಳಲಿ**= ವಸಂತಾದಿ ಶಿಶಿರಋತು ಪರ್ಯಂತ ಷಡ್ರುತುಗಳಲ್ಲಿ ವೇದವ್ಯಾಸಾದಿ ನಾರಾಯಣಾಂತ ೬ ಭಗವನ್ಮೂರ್ತಿಗಳನ್ನು ಕಾಲಾಂತರ್ಗತನಾಗಿದ್ದಾನೆಂದು ಚಿಂತಿಸಬೇಕು. **ವಾಸವಾಗಿಹನೆಂದು**= ಇಂತು, ೧೨ ಮಾಸಗಳಲ್ಲಿ ಮಾಸಾಭಿಮಾನಿಯಾಗಿ. ದ್ವಾದಶ ಪುಂಡ್ರಗಳಲ್ಲಿ ಪೂರ್ವೋಕ್ತಪ್ರಕಾರ ವಿದ್ಯಮಾನನಾಗಿ, ೬ ಋತುಗಳಲ್ಲಿ ಋತ್ವಂತರ್ಗತನಾಗಿ ಋತು ನಿಯಾಮಕನಾಗಿದ್ದಾನೆಂದು ಉತ್ತಮ ಜ್ಞಾನಾನುಸಂಧಾನದಿಂದ ತಿಳಿದು, **ತ್ರಿಂಶತಿವಾಸರದಿ**= ಮಾಸದ ೩೦ ತಿಥಿಗಳಲ್ಲಿಯೂ (ಪ್ರತಿ ದಿವಸದಲ್ಲಿಯೂ) ಕಾಲಾಭಿಮಾನಿಯಾಗಿದ್ದಾನೆಂದು ತಿಳಿದು, **ಸತ್ಕರ್ಮ**= ಆಯಾಯ ಮಾಸಗಳಲ್ಲಿ ಮಾಡತಕ್ಕ ಸಮೀಚೀನವಾದ, ವಿದ್ಯುಕ್ತ ವಿಹಿತ ಕರ್ಮಗಳನ್ನೂ **ಧರ್ಮ**= ಮಾಸ ಧರ್ಮಗಳನ್ನು **ನಿರಾಶೆಯಿಂದಲಿ**= ಫಲಾಪೇಕ್ಷರಹಿತನಾಗಿ, ಅಂದರೆ ನಿಷ್ಕಾಮುಕನಾಗಿ **ಮಾಡು**= ಆಚರಿಸು **ಕರುಣವಬೇಡು**= ಆ ಭಗವಂತ ಕೃಪೆಯನ್ನು ಮಾತ್ರ (ಇದು ಸಕಾಮುಕವಲ್ಲ. ಜೀವನ ಸಹಜ ಕರ್ತವ್ಯ) ಪ್ರಾರ್ಥಿಸು. **ಕೊಂಡಾಡು**= ಅನಂತ ಕಲ್ಯಾಣಗುಣಾಕರನಾದ ಆ ಪರಮಾತ್ಮನ ಮಹಿಮಾತಿಶಯವನ್ನು ಸ್ತೋತ್ರ ಮಾಡುತ್ತಿರು. ||೨೮||

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಮಾಸಾಭಿಮಾನಿ, ಋತುಗಳ ಅಭಿಮಾನಿಗಳು ಹೇಳುತ್ತಾರೆ. ದಾವದಾವ ಕಾಲದಲ್ಲಿ ದಾವದಾವ ಕರ್ಮ ಮಾಡತಾನೋ, ಆ ಕಾಲಾಂತರ್ಗತ, ಋತು ಅಂತರ್ಗತ, ಕರ್ಮಾಂತರ್ಗತ ಭಗವದ್ರೂಪಗಳ ಐಕ್ಯ ಚಿಂತನ ಮಾಡಬೇಕು ಎಂತ ಹೇಳುತಾರೆ.

ದ್ವಾದಶಮಾಸ=ಚೈತ್ರಾದಿ ೧೨ ತಿಂಗಳುಗಳಲ್ಲಿ ೧೨ ಸಂಖ್ಯಾಕವಾದ, ಸುಮೂರ್ತಿ=ಸಮೀಚೀನವಾದ ಭಗವನ್ಮೂರ್ತಿಗಳ ಚಿಂತನ ಮಾಡಬೇಕು. ಇದಕ್ಕೆ ವಿವರ :

| ಕ್ರ.ಸಂ. | ಮಾಸಗಳು | ಭಗವದ್ರೂಪ | ಭಗವದ್ರೂಪ |
|---|---|---|---|
| ೧ | ಚೈತ್ರಕ್ಕೆ | ಕೇಶವ | ಪುರುಷೋತ್ತಮ |
| ೨ | ವೈಶಾಖಕ್ಕೆ | ನಾರಾಯಣ | ಅಧೋಕ್ಷಜ |
| ೩ | ಜ್ಯೇಷ್ಠಕ್ಕೆ | ಮಾಧವ | ನಾರಸಿಂಹ |
| ೪ | ಆಷಾಢಕ್ಕೆ | ಗೋವಿಂದ | ಅಚ್ಯುತ |
| ೫ | ಶ್ರಾವಣಕ್ಕೆ | ವಿಷ್ಣು | ಜನಾರ್ದನ |
| ೬ | ಭಾದ್ರಪದಕ್ಕೆ | ಮಧುಸೂದನ | ಉಪೇಂದ್ರ |
| ೭ | ಅಶ್ವಯುಜಕ್ಕೆ | ತ್ರಿವಿಕ್ರಮ | ಹರಿ |
| ೮ | ಕಾರ್ತೀಕಕ್ಕೆ | ವಾಮನ | ದಾಮೋದರ |
| ೯ | ಮಾರ್ಗಶಿರಕ್ಕೆ | ಶ್ರೀಧರ | ಸಂಕರ್ಷಣ |
| ೧೦ | ಪುಷ್ಯಕ್ಕೆ | ಹೃಷೀಕೇಶ | ವಾಸುದೇವ |
| ೧೧ | ಮಾಘಕ್ಕೆ | ಪದ್ಮನಾಭ | ಪ್ರದ್ಯುಮ್ನ |
| ೧೨ | ಫಾಲ್ಗುಣಕ್ಕೆ | ದಾಮೋದರ | ಅನಿರುದ್ಧ |

ಈ ರೀತ್ಯಾ ಉಭಯಪ್ರಕಾರವಾಗಿ ಭಗವದ್ರೂಪಗಳು ಚಿಂತನೆ ಮಾಡಬೇಕು. ದ್ವಾದಶಪುಂಡ್ರಗಳಲಿ= ದೇಹದಲ್ಲಿ ಧಾರಣ ಮಾಡತಕ್ಕ ೧೨ ಊರ್ಧ್ವ ಪುಂಡ್ರಗಳಲ್ಲಿ ಮೇಲೆಹೇಳಿದ ಪ್ರಕಾರ ಭಗವನ್ಮೂರ್ತಿಗಳ ಅನುಸಂಧಾನ ಮಾಡಬೇಕು. ಇದಕ್ಕೆ ದಾವ ದಾವ ಸ್ಥಳಗಳಲ್ಲಿ ಅಂದರೆ, ಲಲಾಟದಲ್ಲಿ ಕೇಶವ, ಉದರದಲ್ಲಿ ನಾರಾಯಣ,ಹೃದಯದಲ್ಲಿ ಮಾಧವ,ಕಂಠಕೂಬರದಲ್ಲಿ ಗೋವಿಂದ, ಉದರ ದಕ್ಷಿಣ ಪಾರ್ಶ್ವದಲ್ಲಿ ವಿಷ್ಣು, ದಕ್ಷಿಣಬಾಹುಮೂಲದಲ್ಲಿ ಮಧುಸೂದನ ಕರ್ಣಮೂಲದಲ್ಲಿ ತ್ರಿವಿಕ್ರಮ, ವಾಮಕುಕ್ಷಿಯಲ್ಲಿ ವಾಮನ,ವಾಮಬಾಹುವಿನಲ್ಲಿ ಶ್ರೀಧರ, ಕಂಧರದಲ್ಲಿ ಹೃಷೀಕೇಶ, ಪೃಷ್ಠದಲ್ಲಿ ಪದ್ಮನಾಭ, ಕಂಠದ ಹಿಂದೆ ದಾಮೋದರ. ಆರು ಋತುಗಳಲಿ= ವಸಂತಾದಿ ಆರು ಋತುಗಳಲ್ಲಿ (೧) ವಸಂತ ಋತು–ಚೈತ್ರ ವೈಶಾಖ–ವೇದವ್ಯಾಸ ದೇವರು. (೨) ಗ್ರೀಷ್ಮ ಋತು–ಜ್ಯೇಷ್ಠ ಆಷಾಢ-ಅನಿರುದ್ಧ ದೇವರು. (೩) ವರ್ಷಋತು–ಶ್ರಾವಣ ಭಾದ್ರಪದ–ಪ್ರದ್ಯುಮ್ನ ದೇವರು. (೪) ಶರದೃತು-ಆಶ್ವಯುಜ ಕಾರ್ತೀಕ ಸಂಕರ್ಷಣ ದೇವರು. (೫) ಹೇಮಂತ ಋತು–ಮಾರ್ಗಶಿರ ಪುಷ್ಯ–ವಾಸುದೇವ. (೬) ಶಿಶಿರಋತು-ಮಾಘ ಪಾಲ್ಗುಣ–ನಾರಾಯಣ ದೇವರು.

ವೇದವ್ಯಾಸಾನಿರುದ್ಧಾದಿ ರೂಪಗಳ= ವೇದವ್ಯಾಸ ರೂಪ ಒಂದು, ಅನಿರುದ್ಧಾದಿ ನಾರಾಯಣಾಂತ ಐದು, ಅಂತು, ಆರು ರೂಪಗಳು. ವಾಸವಾಗಿಹವೆಂದು= ವಾಸವಾಗಿದ್ದಾರೆ ಎಂತ, ತ್ರಿಶಂತಿ ವಾಸರದಿ= ಮೂವತ್ತು ದಿನಗಳಲ್ಲಿ-ಪ್ರತಿ ಪ್ರತಿ ದಿನದಲ್ಲೂ ನಿರಾಶೆಯಿಂದಲಿ= ಫಲ ಆಶಾರಹಿತನಾಗಿ, ನಿಷ್ಕಾಮುಕನಾಗಿ, ಸತ್ಕರ್ಮಧರ್ಮ= ಸಮೀಚೀನಗಳಾದ ಸತ್ಕರ್ಮಗಳೇನು, ದಾನಧರ್ಮಾದಿಗಳೇನು, ಮಾಡಿ= ಮಾಡುವವನಾಗಿ, ಕರುಣವ ಬೇಡು= ಶ್ರೀ ಪರಮಾತ್ಮನ (ಬೇಡೋದು ಸಕಾಮುಕವಲ್ಲ) ಬೇಡು ಕೊಂಡಾಡು= ಅವನ ಮಹಿಮಾವನ್ನು ಸದಾ ಉಚ್ಚಾರ ಮಾಡುತಾ ಇರಬೇಕು ಎಂತ ತಾತ್ಪರ್ಯ. ||೨೮||

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ:—

ನಾವು ಧಾರಣ ಮಾಡುವ ೧೨ ಪುಂಡ್ರಗಳಲ್ಲಿಯೂ, ೧೨ ತಿಂಗಳ

ನಲ್ಲಿಯೂ, ಋತುಗಳಲ್ಲಿಯೂ, ತಿಥಿಗಳಲ್ಲಿಯೂ ಚಿಂತಿಸಬೇಕಾದ ಭಗವದ್ರೂಪಗಳನ್ನು ಹೇಳುತ್ತಾರೆ :–

ಮಾರ್ಗಶಿರ ಮೊದಲು ಕಾರ್ತೀಕ ಮಾಸದವರೆಗೂ ಕೇಶವಾದಿ ದಾಮೋದರಾಂತ ೧೨ ಮೂರ್ತಿಗಳನ್ನು ಚಿಂತಿಸಿ, ಪೂಜಾದಿಗಳನ್ನು ಮಾಡಬೇಕು. ನಿತ್ಯ ಸ್ನಾನಾದಿ ಸಂಕಲ್ಪದಲ್ಲಿ ಈಗ ವಾಡಿಕೆಯಲ್ಲಿ ವೈಶಾಖ ಮಧುಸೂದನ, ಕಾರ್ತೀಕ ದಾಮೋದರ ಇತ್ಯಾದಿ ವ್ಯವಹಾರ ಇದ್ದೇ ಇರುವುದು. ದ್ವಾದಶ ಪುಂಡ್ರಗಳಲ್ಲಿ– **"ಲಲಾಟೇ ಕೇಶವಂ ಧ್ಯಾಯೇನ್ನಾರಾಯಣಂ ಅಥೋದರೆ"**- ಇತ್ಯಾದಿ ವಾಕ್ಯಗಳಂತೆ ಕೇಶವಾದಿ ೧೨ ಮೂರ್ತಿಗಳನ್ನು ಚಿಂತಿಸಬೇಕು. ವಸಂತಾದಿ ೬ ಋತುಗಳಲ್ಲಿ, ವೇದವ್ಯಾಸ, ಅನಿರುದ್ಧಾದಿ ನಾರಾಯಣಾಂತ ೫, ಅಂತು ೬ ರೂಪಗಳನ್ನು, ಪಾಡ್ಯ ಮೊದಲು ಪಂಚಮೀವರೆವಿಗೂ ಆಗುವ ನಂದಾದಿ ತಿಥಿಗಳಲ್ಲಿ ಅನಿರುದ್ಧಾದಿ ೫ ರೂಪಗಳನ್ನು ಚಿಂತಿಸಬೇಕು. ನಂದಾದಿ ತಿಥಿಗಳು ೬ ಸಲ ತಿರುಗಿ ಬರುವುವು. ಅದರಂತೆ ಅನಿರುದ್ಧಾದಿ ರೂಪಗಳನ್ನು ೬ ಸಲ ಚಿಂತಿಸಬೇಕು. ಹೀಗೆ ದ್ವಾದಶ ಮಾಸಗಳಲ್ಲಿಯೂ, ೬ ಋತುಗಳಲ್ಲಿಯೂ, ೩೦ ತಿಥಿಗಳಲ್ಲಿಯೂ ಸಹ ಭಗವದ್ರೂಪಗಳನ್ನು ಚಿಂತಿಸಿ, ಫಲದ ಆಶೆಯನ್ನು ಬಿಟ್ಟು, ಸತ್ಕರ್ಮಗಳಾದ ಸಂಧ್ಯಾದಿ ಕರ್ಮಗಳನ್ನು, ಮುಕ್ತಿಸಾಧನವಾದ ಧರ್ಮಗಳನ್ನೂ, ವ್ರತ ನಿಯಮಾದಿಗಳನ್ನು ಮಾಡುತ್ತಾ, ಪರಮಾತ್ಮನಿಗೆ ಸಮರ್ಪಿಸುತ್ತಾ, ಪರಮಾತ್ಮನ ಕರುಣವನ್ನು ಮಾತ್ರವೇ ಯಾವಜ್ಜೀವನವೂ ಬೇಡುತ್ತಾ, ಪರಮಾತ್ಮನನ್ನು ಸ್ತೋತ್ರ ಮಾಡುತ್ತಿರಬೇಕೆಂದು ತಾತ್ಪರ್ಯವು. ॥೨೮॥

(೩) **"ಭಾವದರ್ಪಣ ಟೀಕಾ" ವ್ಯಾಖ್ಯಾನ :—**

ಕೇಶವಾದಿ ೨೪ ಭಗದ್ರೂಪಗಳು ದ್ವಾದಶ ಮಾಸಗಳಲ್ಲಿ ಊರ್ಧ್ವಪುಂಡ್ರಗಳಲ್ಲಿ ತಿಳೀಬೇಕೆಂತಲೂ ವ್ಯಾಸಮೂರ್ತಿ ೧, ಅನಿರುದ್ಧಾದಿ ಪಂಚಮೂರ್ತಿ ಷಡ್ರುತುಗಳಲ್ಲಿ ಅವೇ ಎಂತಲೂ, ಇದೇ ರೂಪಗಳೇ ತ್ರಿಂಶತಿ ದಿನಗಳಲ್ಲಿ ತಿಳೀಬೇಕೆಂದು ಹೇಳುತ್ತಾರೆ– "ಕೇಶವೇತಿ"

ಉಕ್ತಂಚ **ಪುರಂದರದಾಸರಾಜ್ಞೈ** :

**ಉಗಾಭೋಗ :**

**ಕೇಶವಮುಖ ಶಿರಿ ಕೃಷ್ಣಾಂತರೂಪ ದ್ವಾ ।**
**ದಶ ಮಾಸದಲ್ಲಿ ಅರಿತು ವರ್ತಿಪುದಯ್ಯಾ ।**
**ಲೇಸಾಗಿ ಧರಿಸುವ ಊರ್ಧ್ವಪುಂಡ್ರದಲ್ಲಿ ।**
**ವಾಸವಾಗಿಹರೆಂದು ತದ್ರೂಪಗಳನೆ ತಿಳಿಯೋ ।**
**ವ್ಯಾಸಾನಿರುದ್ಧ ಪಂಚ ಷಡೃತುವಿಲಿ ತಿಳಿದು ।**
**ವಾಸರ ತ್ರಿಂಶತಿದೊಳಗೆ ಚಿಂತಿಸುವಂಗೆ ।**
**ಮೋಸವಿಲ್ಲನೆ ಶಿರಿ ಪುರಂದರವಿಠ್ಠಲಾಸು**
**ಕೂಸಿನ ತೆರ ಪೊರೆವನೆಂದು ॥**

ಎಂಬ ಉಗಾಭೋಗ ಹೇಳಿರೋಣದರಿಂದ ಪದ್ಯಾರ್ಥ ಸಿದ್ಧ. ॥೨೮॥

**(೪) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :–**

ಕೇಶವೇತಿ॥ ಪ್ರದ್ಯುಮ್ನಾದ್ಯಾಸ್ತು ಚತ್ವಾರಃ ದ್ವಿಷಣ್ಮಾಸೇಷು ಸಂಸ್ಥಿತಾಃ॥ ಚಿತ್ರಾದಿ ಯೋಗದಾತೃತ್ವಾತ್ ಮಾಸನಾಮಾ ಸ್ವಯಂ ಹರಿಃ॥ ತ್ರಿಶಃ ತ್ರಿಶಃ ಕೇಶವಾದ್ಯಾಃ ವಸಂತಾದಿಷು ಪಂಚಮಃ ಇತಿ **ಛಾಂದೋಗ್ಯ ಭಾಷ್ಯೇ॥** ವ್ಯಾಸ ಜ ವಸುಸಹಸ್ರೇಣೇವ ಮಹಂತೇ ಶತಾನೀಕಾ ಹೇತಯೋ ಅಸ್ಯ ದಷ್ಟ್ರಕಾ ಇಂದ್ರಸ್ಯ ಸಮಿಷೇ ಮಹೀಃ ಗಿರಿರ್ನಭುಜ್ಮಾ ॥೦೦॥ ಭುಕ್ತ್ವಾ ಭೀಷ್ಟಾನಿ ವಿಸ್ತಾರಯತಿ ಇತಿ ವ್ಯಾಸಃ ॥೨೮॥

**ಕನ್ನಡಾರ್ಥ :**

ಚೈತ್ರಾದಿ ಹನ್ನೆರಡು ಮಾಸಗಳಲ್ಲಿ ಪ್ರದ್ಯುಮ್ನಾದಿ ನಾಲ್ಕುರೂಪಗಳಿಂದ ಇರುವನು. ಚಿತ್ರಾದಿ ಯೋಗ ಸಾಮರ್ಥ್ಯವನ್ನು ಕೊಡುವವನಾದ್ದರಿಂದ, ಬಿಂಬನೂಪಿಯಾದ ಶ್ರೀ ಹರಿಯು ಚೈತ್ರಾದಿ ೧೨ ಮಾಸ ನಿಯಾಮಕನಾಗಿ ಆಯಾಯಾ ಮಾಸನಾಮಕನಾಗಿ ಇರುವನು. ವಸಂತಾದಿ ೬ ಋತುಗಳಲ್ಲಿ ಅನಿರುದ್ಧಾದಿ ರೂಪಗಳು=೫ ಮತ್ತು ವೇದವ್ಯಾಸರೂಪ=೧. ಹೀಗೆ ರೂಪಗಳಿಂದ ಇದ್ದಾನೆ, ತ್ರಿಂಶತಿ ದಿವಸಗಳಲ್ಲಿ (ತಿಂಗಳಿನ ೩೦ ದಿನಗಳಲ್ಲಿ) ಈ

ಅನಿರುದ್ಧಾದಿ ೬ ರೂಪಗಳು+೨೪ ಕೇಶವಾದಿ ರೂಪಗಳನ್ನು ಚಿಂತಿಸಬೇಕು. ಈ ವಿವರವು **ಛಾಂದೋಗ್ಯೋಭಾಷ್ಯ**ದಲ್ಲಿ ಉಕ್ತವಾಗಿದೆ. ಭಕ್ತರ ಅಭೀಷ್ಟಗಳನ್ನು ವಿಸ್ತರಿಸುವನಾದುದರಿಂದ ಶ್ರೀ ಪರಮಾತ್ಮನಿಗೆ "ವ್ಯಾಸ" ಎಂದು ಹೆಸರು. ‖೨೮‖

**(೫) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ :—**

ದ್ವಾದಶಮಾಸ ಪುಂಡ್ರಗಳಲ್ಲೂ, ನಂದಾದಿ ಮೂವತ್ತು ದಿನಗಳಲ್ಲೂ, ದೇವರ ರೂಪೋಪಾಸನೆ ತಿಳಿಸುತ್ತಾರೆ :—

ಕೇಶವಾದಿ ದಾಮೋದರಾಂತ ೧೨ ರೂಪಗಳು, ದ್ವಾದಶ ಮಾಸಗಳಲ್ಲೂ ದ್ವಾದಶ ಪುಂಡ್ರಗಳಲ್ಲೂ ತಿಳಿಯುವುದು. ವೇದವ್ಯಾಸ ರೂಪವೂ, ಅನಿರುದ್ಧಾದಿ ನಾರಾಯಣಾಂತ ಆರು ರೂಪಗಳೂ, ನಂದ, ಭದ್ರ, ರಿಕ್ತ, ಜಯಾ, ಪೂರ್ಣ ಎಂದು ಹೆಸರುಳ್ಳ ಪಾಡ್ಯದಿಂದ ಪಂಚಮೀವರೆಗೆ ಇರುವ ದಿನಗಳ ಹೆಸರನ್ನೇ, ಷಷ್ಠಿಯಿಂದ ಪುನಃ ಪುನಃ ಎಣಿಸಿದರೆ ಆಗುವ ಮೂವತ್ತು ದಿವಸಗಳಲ್ಲಿ, ಆ ಆರು ರೂಪಗಳಿರುವುವೆಂದು ತಿಳಿದು, ಸತ್ಕರ್ಮರೂಪ ಸಂಧ್ಯಾದಿಗಳನ್ನೂ, ಪರೋಪಕಾರ ರೂಪಗಳನ್ನೂ ಸಹ, ನಿರಾಶೆಯಿಂದ ಎಂದರೆ,ಧರ್ಮಕಾಮಾರ್ಥ ಫಲಾಪೇಕ್ಷೆಯಿಲ್ಲದೆ, ದೇವರ ಕೃಪೆಯನ್ನು ಪ್ರಾರ್ಥಿಸುತ್ತಾ, ಸ್ತುತಿಸುತ್ತಾ ಇರಬೇಕೆಂದರ್ಥ ‖೨೮‖

## ಸರ್ವವ್ಯಾಖ್ಯಾನಸಾರಸಂಗ್ರಹ

ಕಾಲಾಂತರ್ಗತ ಭಗವದ್ರೂಗಳು. ಆ ಭಗವನ್ಮೂರ್ತಿಗಳ ಚಿಂತನಾ ಕ್ರಮವನ್ನು ವಿವರಿಸುತ್ತಾರೆ—**"ಕೇಶವಾದಿ"** ಎಂಬ ಪ್ರಸಕ್ತ ಪದ್ಯದಿಂದ.

(೧) ಚೈತ್ರ ಮಾಸದಿಂದ ಪ್ರಾರಂಭಿಸಿಕೊಂಡು, ಫಾಲ್ಗುಣಮಾಸದವರೆಗೆ ೧೨ ತಿಂಗಳುಗಳಿವೆ. ಈ ದ್ವಾದಶ ಮಾಸಾದಿಗಳಲ್ಲಿ ಕೇಶವಾದಿ ದಾಮೋದರ ಪರ್ಯಂತ ದ್ವಾದಶ ಭಗವನ್ಮೂರ್ತಿಗಳನ್ನು ಚಿಂತಿಸಿ, ಆಯಾಯಾ ಮಾಸ

ನಿಯಾಮಕನಾದ ಭಗವದ್ರೂಪಗಳನ್ನು ಉಪಾಸಿಸಬೇಕು. (ಮಾರ್ಗಶಿರದಿಂದ ಕಾರ್ತೀಕ ಮಾಸದವರೆಗೆ)

| ಕ್ರಮ ಸಂಖ್ಯೆ | ಮಾಸಗಳು | ಮಾಸನಿಯಾಮಕ ರೂಪಗಳು |
|---|---|---|
| ೧ | ಮಾರ್ಗಶಿರಮಾಸ | ಕೇಶವ |
| ೨ | ಮಾಘಮಾಸ | ನಾರಾಯಣ |
| ೩ | ಫಾಲ್ಗುಣಮಾಸ | ಮಾಧವ |
| ೪ | ಆಷಾಢಮಾಸ | ಗೋವಿಂದ |
| ೫ | ಶ್ರಾವಣಮಾಸ | ವಿಷ್ಣು |
| ೬ | ಭಾದ್ರಪದಮಾಸ | ಮಧುಸೂದನ |
| ೭ | ಆಶ್ವಯುಜಮಾಸ | ತ್ರಿವಿಕ್ರಮ |
| ೮ | ಕಾರ್ತೀಕಮಾಸ | ವಾಮನ |
| ೯ | ಮಾರ್ಗಶಿರಮಾಸ | ಶ್ರೀಧರ |
| ೧೦ | ಪುಷ್ಯಮಾಸ | ಹೃಷಿಕೇಶ |
| ೧೧ | ಮಾಘಮಾಸ | ಪದ್ಮನಾಭ |
| ೧೨ | ಫಾಲ್ಗುಣಮಾಸ | ದಾಮೋದರ |

(೨) ದೇಹದಲ್ಲಿ ಧಾರಣ ಮಾಡತಕ್ಕ ದ್ವಾದಶಪುಂಡ್ರಗಳಲ್ಲಿ ಭಗವನ್ಮೂರ್ತಿಗಳ ಚಿಂತನಾ ವಿವರವನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ :

| ಕ್ರ.ಸಂ. | ಸ್ಥಾನ | ಆಕಾರ | ಪ್ರಮಾಣ | ಭಗವದ್ರೂಪ ಚಿಂತನೆ |
|---|---|---|---|---|
| ೧ | ಲಲಾಟದಲ್ಲಿ | ದಂಡಾಕಾರ | ನಾಸಾದಿ ಕೇಶಪರ್ಯಂತ | ಕೇಶವಾಯ ನಮಃ |
| ೨ | ಉದರ ಮಧ್ಯದಲ್ಲಿ | ದೀಪಾಕಾರ | ೧೦ ಅಂಗುಲ | ನಾರಾಯಣಾಯ ನಮಃ |
| ೩ | ಎದೆಯ ಮೇಲೆ | ಪದ್ಮಾಕಾರ | ೭ ಅಂಗುಲ | ಮಾಧವಾಯ ನಮಃ |
| ೪ | ಎದೆಯಮೇಲಿನ ಕಂಠ | ದೀಪಾಕಾರ | ೪ ಅಂಗುಲ | ಗೋವಿಂದಾಯನಮಃ |
| ೫ | ಉದರದ ಬಲಪಾರ್ಶ್ವ | ದೀಪಾಕಾರ | ೧೦ ಅಂಗುಲ | ವಿಷ್ಣವೇನಮಃ |
| ೬ | ಬಲದ ಭುಜ | ವೇಣುಪತ್ರಾಕಾರ | ೮ ಅಂಗುಲ | ಮಧುಸೂದನಾಯ ನಮಃ |
| ೭ | ಕಂಠದ ಬಲಪಾರ್ಶ್ವ | ದೀಪಾಕಾರ | ೪ ಅಂಗುಲ | ತ್ರಿವಿಕ್ರಮಾಯ ನಮಃ |
| ೮ | ಉದರದ ಎಡಪಾರ್ಶ್ವ | ದೀಪಾಕಾರ | ೧೦ ಅಂಗುಲ | ವಾಮನಾಯನಮಃ |
| ೯ | ಎಡದ ಭುಜ | ವೇಣುಪತ್ರಾಕಾರ | ೮ ಅಂಗುಲ | ಶ್ರೀಧರಾಯನಮಃ |
| ೧೦ | ಕಂಠದ ಎಡಪಾರ್ಶ್ವ | ದೀಪಾಕಾರ | ೪ ಅಂಗುಲ | ಹೃಷೀಕೇಶಾಯನಮಃ |
| ೧೧ | ಬೆನ್ನಿನ ಕೆಳಭಾಗ | ದೀಪಾಕಾರ | ೨ ಅಂಗುಲ | ಪದ್ಮನಾಭಾಯ ನಮಃ |
| ೧೨ | ಕಂಠದ ಹಿಂಬದಿ | ದೀಪಾಕಾರ | ೨ ಅಂಗುಲ | ದಾಮೋದರಾಯನಮಃ |

ಕೃಷ್ಣಪಕ್ಷದಲ್ಲಿ ಸಂಕರ್ಷಣಾದಿ ಹರಿಪರ್ಯಂತ ದ್ವಾದಶನಾಮಗಳಿಂದ ಪುಂಡ್ರಗಳನ್ನು ಧರಿಸಬೇಕು.

(೩) ವಸಂತಋತುವಿನಿಂದ ಆರಂಭಿಸಿ ಶಿಶಿರಋತು ಪರ್ಯಂತ ೬ ಋತುಗಳಲ್ಲಿ ಆಯಾಯ ಋತುನಿಯಾಮಕ ಭಗವದ್ರೂಪಗಳ ವಿವರ :–

| ಕ್ರಮ ಸಂಖ್ಯೆ | ಋತುಗಳು | ಮಾಸದ್ವಯಗಳು | ಋತುನಿಯಾಮಕ ಭಗವದ್ರೂಪಗಳು |
|---|---|---|---|
| ೧ | ವಸಂತಋತು | ಚೈತ್ರ–ವೈಶಾಖ | ವೇದವ್ಯಾಸರು |
| ೨ | ಗ್ರೀಷ್ಮಋತು | ಜ್ಯೇಷ್ಠ-ಆಷಾಢ | ಅನಿರುದ್ಧ |
| ೩ | ವರ್ಷಋತು | ಶ್ರಾವಣ–ಭಾದ್ರಪದ | ಪ್ರದ್ಯುಮ್ನ |
| ೪ | ಶರದೃತು | ಆಶ್ವಯುಜ–ಕಾರ್ತೀಕ | ಸಂಕರ್ಷಣ |
| ೫ | ಹೇಮಂತಋತು | ಮಾರ್ಗಶಿರ–ಪುಷ್ಯ | ವಾಸುದೇವ |
| ೬ | ಶಿಶಿರಋತು | ಮಾಘ–ಫಾಲ್ಗುಣ | ನಾರಾಯಣ |

(೪) ಒಂದು ಮಾಸದಲ್ಲಿ ಮೂವತ್ತು ದಿನಗಳು ಬರುವುವು. ಇದನ್ನೇ ದಾಸರಾಯರು **ತ್ರಿಂಶತಿ ವಾಸರದಿ** ಎಂದು ಹೇಳಿರುತ್ತಾರೆ. ಈ ೩೦ ದಿವಸ ನಿಯಾಮಕ ಭಗವದ್ರೂಪಗಳನ್ನು ಎರಡು ರೀತಿಗಳಲ್ಲಿ ಚಿಂತಿಸಬಹುದು.

| | | |
|---|---|---|
| (೧) | ವೇದವ್ಯಾಸ, ಅನಿರುದ್ಧಾದಿ ರೂಪಗಳು = ೧ + ೫ = | ೬ |
| (೨) | ಕೇಶವಾದಿ ಹರಿಪರ್ಯಂತ ರೂಪಗಳು = | ೨೪ |
| | ಒಟ್ಟು ಚಿಂತನಾಕ್ರಮ = | ೩೦ ರೂಪಗಳು |

**(ಇದು ಜಂಬುಖಂಡಿ ಶ್ರೀ ವಾದಿಚಾರ್ಯಕೃತ ವ್ಯಾಸದಾಸ ಸಿದ್ಧಾಂತ ಕೌಮುದೀ ವ್ಯಾಖ್ಯಾನದ ಪ್ರಕಾರ).**

ಪ್ರತಿ ಶುಕ್ಲಪಕ್ಷ ಮತ್ತು ಕೃಷ್ಣಪಕ್ಷಗಳಲ್ಲಿ ಪ್ರತಿಪದದಿಂದ ಪಂಚಮೀ ತಿಥಿಯವರೆಗೆ ಈ ಕೆಳಗಿನ ಪಂಚರೂಪ ನಾಮಗಳನ್ನು ಚಿಂತನೆ ಮಾಡಬೇಕು.

(೧) ನಂದ, ಭದ್ರ, ರಿಕ್ತ, ಜಯಾ ಮತ್ತು ಪೂರ್ಣ–ಎಂಬ ಈ ಪಂಚನಾಮಗಳಿಂದ ಆಯಾಯಾ ತಿಥಿಶಬ್ದ ವಾಚ್ಯನಾಗಿದ್ದಾನೆ.

ಈ ರೀತಿ ಪ್ರತಿಪದದಿಂದ ಪಂಚಮಿಯವರೆಗೆ ಒಂದು ಘಟಕ, ಷಷ್ಠಿ ಯಿಂದ ದಶಮಿಯವರೆಗೆ ದ್ವಿತೀಯ ಘಟಕ ಮತ್ತು ಏಕಾದಶಿಯಿಂದ ಪೂರ್ಣಿಮಾವರೆಗೆ ತೃತೀಯ ಘಟಕ. ಇದೇ ರೀತಿಯಲ್ಲಿ ಕೃಷ್ಣ ಪಕ್ಷದಲ್ಲಿ ಪ್ರತಿಪದದಿಂದ ಅಮಾವಾಸ್ಯೆ ಪರ್ಯಂತ ಮೂರು ಘಟಕಗಳು. ಇಂತು ಮಾಸದ ೩೦ ದಿವಸಗಳಲ್ಲಿ ೬ ಆವರ್ತನ ಕಾಲಾಂತರ್ಗತ ಭಗವನ್ಮೂರ್ತಿಗಳನ್ನು ಚಿಂತಿಸಬೇಕು.

ಇಂತು ಮಾಸದ ಪ್ರತಿದಿವಸದಲ್ಲಿಯೂ, ವರ್ಷಾವಧಿಯ ೧೨ ಮಾಸ ಗಳಲ್ಲಿ ೬ ಋತುಗಳಲ್ಲಿ ಕಾಲಾಂತರ್ಗತನಾಗಿ, ಕಾಲನಿಯಾಮಕನಾಗಿ, ಆಯಾಯಾ ವಾಸರ, ಮಾಸ, ಋತು ನಿಯಾಮಕನಾಗಿರುವ ಭಗವನ್ಮೂರ್ತಿ ಗಳನ್ನು ಆಯುಷ್ಯವಿಡೀ ಚಿಂತಿಸುತ್ತಾ, ಆಯಾಯಾ ಮಾಸ ಮತ್ತು ಋತುಗಳಿ ಗನುಗುಣವಾದ ಶಾಸ್ತ್ರೋಕ್ತವಾದ ಏಕಾದಶೀ, ತಿಥಿತ್ರಯ, ಚಾತುರ್ಮಾಸ್ಯಾದಿ ವ್ರತನಿಯಮಗಳನ್ನು ಮಾಡುತ್ತಿರಬೇಕು. ಆಯಾಯಾ ಮಾಸಧರ್ಮಗಳನ್ನು ಆಚರಿಸುತ್ತಿರಬೇಕು. ಈ ಸತ್ಕರ್ಮ ಮತ್ತು ಧರ್ಮರೂಪವಾದ ಸಕಲ ಕ್ರಿಯಾ ವಿಶೇಷಗಳನ್ನು ಬಿಂಬರೂಪಿ ಶ್ರೀ ಪರಮಾತ್ಮನೇ ಮಾಡಿ ಮಾಡಿಸು ತ್ತಿರುವನೆಂಬ ಉತ್ತಮ ಜ್ಞಾನಾನುಸಂಧಾನವಿರಬೇಕು. **"ನಾಹಂ ಕರ್ತಾ ಹರಿಃ ಕರ್ತಾ"**–ಎಂಬುದು ನಮ್ಮ ಜೀವನದ ಮಂತ್ರವಾಗಿರಬೇಕು. ಆ ಸತ್ಕರ್ಮ ಮತ್ತು ಧರ್ಮಗಳಿಂದ ಪ್ರಾಪ್ತವಾಗುವ ಯಾವ ವಿಧವಾದ ಫಲ ಗಳಲ್ಲಿಯೂ ಮನಸ್ಸನ್ನು ಇಡದೆ, ಫಲಾಪೇಕ್ಷರಹಿತನಾಗಿ, ಕೇವಲ ನಿಷ್ಕಾಮನಾ ಭಾವನೆಯಿಂದ ಕರ್ಮ ಧರ್ಮಗಳನ್ನು ಆಚರಿಸಬೇಕು. ಅನಂತ ಕಲ್ಯಾಣಗುಣ

ರತ್ನಾಕರನಾದ ಆ ಪರಾತ್ಪರ ವಸ್ತುವಿನ ಮಹಿಮಾತಿಶಯಗಳನ್ನು ಭಕ್ತ್ಯು ದ್ರೇಕದಿಂದ ಕೊಂಡಾಡುತ್ತಾ, ಆ ಭಗವಂತನ ಕರುಣಾರೂಪವಾದ ಅನುಗ್ರಹ ವನ್ನು ಬೇಡಬೇಕು (ಇದು ಕಾಮ್ಯ ಕರ್ಮವಲ್ಲ) ಎಂಬುದೇ ಪ್ರಸಕ್ತ ಪದ್ಯದ ತಾತ್ಪರ್ಯಾರ್ಥವು ॥೨೮॥

## ಪದ್ಯ (೨೯)

**ಮೂಲ :**

**ಲೋಷ್ಟ ಕಾಂಚನ ಲೋಹ ಶೈಲಜ ।**
**ಕಾಷ್ಠ ಮೊದಲಾದಖಿಳ ಜಡ ಪರ ।**
**ಮೇಷ್ಠಿ ಮೊದಲಾದೆಲ್ಲ ಚೇತನರೊಳಗೆ ಅನುದಿನವು ॥**
**ಚೇಷ್ಟೆಗಳ ಮಾಡಿಸುತ ತಿಳಿಸದೆ ।**
**ಪ್ರೇಷ್ಟನಾಗಿದ್ದೆಲ್ಲರಿಗೆ ಸ ।**
**ರ್ವೇಷ್ಟದಾಯಕ ಸಂತಯಿಸುವನು ಸರ್ವಜೀವರನು ॥೨೯॥**

**ಅವತರಣಿಕೆ :–**

ಹೆಂಚು, ಭಂಗಾರ, ಕಬ್ಬಿಣ, ಕಲ್ಲು, ಕಟ್ಟಿಗೆ ಮುಂತಾದ ಸಮಸ್ತ ಜಡ ವಸ್ತುಗಳಲ್ಲಿಯೂ, ಚತುರ್ಮುಖ ಬ್ರಹ್ಮದೇವರೇ ಮೊದಲಾಗಿ ತೃಣಾಂತ ಸಮಸ್ತ ಚೇತನರಲ್ಲಿಯೂ ಪರಿಪೂರ್ಣನಾಗಿ ವ್ಯಾಪ್ತನಾಗಿದ್ದು, ನಿರಂತರದಲ್ಲೂ ಆಯಾಯಾ ಜಡವಸ್ತು ಸಂಬಂಧವಾದ ಧರ್ಮಗಳನ್ನು ಅಭಿವ್ಯಕ್ತಗೊಳಿ ಸುತ್ತಾ, ಚೇತನರಲ್ಲಿ ಅಂತರ್ಯಾಮಿತ್ವೇನ ಬಿಂಬಕ್ರಿಯಾದ್ವಾರಾ. ಸಕಲ ವ್ಯಾಪಾರ ವಿಶೇಷಗಳನ್ನು ಮಾಡಿ ಮಾಡಿಸುತ್ತಿರುವನು. ಆದರೆ ಸರ್ವ ಪ್ರೇರಕ ನಾಗಿದ್ದಾಗ್ಯೂ, ಸಕಲ ಚೇಷ್ಟಾಪ್ರವರ್ತಕನಾಗಿದ್ದಾಗ್ಯೂ ತನ್ನ ಮಹಿಮಾತಿ ಶಯಗಳನ್ನು ಮತ್ತು ಇರವನ್ನೂ ಸಂಪೂರ್ಣವಾಗಿ ತಿಳಿಸದೆ, ಆಯಾಯಾ ಜೀವರ ಸ್ವರೂಪ ಯೋಗ್ಯತಾನುಸಾರ ಆಪ್ತನಾಗಿದ್ದು, ಸಮಸ್ತ ಜೀವ ವರ್ಗ ವನ್ನು ಸಂರಕ್ಷಿಸುವನು ಎಂದು ತಿಳಿಸುತ್ತಾರೆ–**"ಲೋಷ್ಟ ಕಾಂಚನ"**–ಎಂಬ ಪ್ರಸಕ್ತ ಸಂಧಿಗತ ೨೯ನೆಯ ಈ ಪದ್ಯದಿಂದ ॥೨೯॥

**ಪ್ರತಿಪದಾರ್ಥ :**

**ಲೋಷ್ಟ**=ಹೆಂಚು (ಮಣ್ಣು), **ಕಾಂಚನ**=ಭಂಗಾರ, **ಲೋಹ**=ಕಬ್ಬಿಣ, **ಶೈಲಜ**=ಪರ್ವತದಲ್ಲಿರುವ ಕಲ್ಲು, **ಕಾಷ್ಟ**=ಕಟ್ಟಿಗೆ **ಮೊದಲಾದ**=ಇವೇ ಮುಂತಾದ **ಅಖಿಳ**=ಸಮಸ್ತವಾದ **ಜಡ**=ಜಡವಸ್ತುಗಳಲ್ಲಿ **ಪರಮೇಷ್ಠಿ**=ಚತುರ್ಮುಖ ಬ್ರಹ್ಮದೇವರು **ಮೊದಲಾದ**=ಅವರನ್ನು ಮೊದಲು ಮಾಡಿಕೊಂಡು **ಎಲ್ಲ ಚೇತನರೊಳಗೆ**=ತೃಣಾಂತ ಸಮಸ್ತ ಜೀವರಲ್ಲಿ **ಅನದಿನವು**=ಪ್ರತಿದಿನದಲ್ಲೂ (ನಿರಂತರವೂ) **ಚೇಷ್ಟೆಗಳ**=ವ್ಯಾಪಾರಗಳನ್ನು (ಕ್ರಿಯೆಗಳನ್ನು) **ಮಾಡಿಸುತ**=ಬಿಂಬಕ್ರಿಯಾದ್ವಾರಾ ತಾನು ಮಾಡಿ,ಪ್ರತಿಬಿಂಬರಾದ ಜೀವರ ದ್ವಾರಾ ಮಾಡಿಸುತ **ತಿಳಿಸದೆ**=ತಾನೇ ಆ ಕ್ರಿಯಾಗಳನ್ನು ಮಾಡಿಸುತ್ತಿರುವೆನೆಂಬ ವಿಷಯುವನ್ನು ವ್ಯಕ್ತ ಮಾಡದೆ (ಹರಿಯೇ ಸರ್ವಕರ್ತನೆಂಬ ಅರಿವನ್ನು ಜೀವರಿಗೆ ಕೊಡದೆ) **ಎಲ್ಲರಿಗೆ**=ಸರ್ವ ಪ್ರಾಣಿಗಳಿಗೆ **ಪ್ರೇಷ್ಟನಾಗಿದ್ದು**=ಆಯಾ ಜೀವರ ಸ್ವರೂಪ ಯೋಗ್ಯತಾನುಸಾರ ಪ್ರಿಯನಾಗಿದ್ದು (ಆಪ್ತನಾಗಿದ್ದು), **ಸರ್ವೇಷ್ಟದಾಯಕ**=ಜೀವರ ಸರ್ವಾಭಿಲಾಷೆಗಳನ್ನೂ ಪೂರೈಸುವವನಾಗಿ, **ಸರ್ವ ಜೀವರನು**=ಎಲ್ಲಾ ಜೀವರನ್ನೂ **ಸಂತಯಿಸುವನು**=ಸಂರಕ್ಷಣಾದ್ವಾರ ಸಂತೋಷಪಡಿಸುವನು ॥೨೮॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :–

ಈ ಶ್ಲೋಕದಲ್ಲಿ ಪೂರ್ವೋಕ್ತ ಪ್ರಕಾರ ಅನುಸಂಧಾನ ಮಾಡಿ, ನಿಷ್ಕಾಮುಕ ಕರ್ಮ ಮಾಡಿದವರ ರಕ್ಷಿಸುತಾನೆ ಎಂತ ಹೇಳುತ್ತಾರೆ.

ಲೋಷ್ಟ=ಹೆಂಚು, ಕಾಂಚನ=ಭಂಗಾರ, ಲೋಹ=ಕಬ್ಬಿಣ, ಶೈಲಜ=ಪರ್ವತ ಜನಿತಶಿಲಾ, ಕಾಷ್ಠ=ಕಟ್ಟಿಗೆ, ಮುಂತಾದ ಅಖಿಳಜಡ=ಇವೇ ಮೊದಲಾದ ಸಮಸ್ತ ಜಡಗಳಲ್ಲಿ (ಸಮಚಿತ್ತನಾಗಿರಬೇಕು. ಅಂದರೆ, ಹೆಂಚನ್ನು ದಾನ ರೀತ್ಯಾ ನೋಡಿ ನಿಸ್ಪೃಹನಾಗತಾನೋ, ತದ್ವತು ಸ್ವರ್ಣ

ರಜತಗಳಲ್ಲಿ ಸ್ಪೃಹಾ ಇರದೆ ಸಮಚಿತ್ತನಾಗಬೇಕು. ನಿಷ್ಕಾಮಕನಾಗಬೇಕು ಎಂತ ಅರ್ಥ). ಈ ಪ್ರಕಾರ ಇರತಕ್ಕವರ ದೇಹಗತ ತತ್ತ್ವ ದೇವತೆಗಳಾದ, ಪರಮೇಷ್ಠಿ ಮೊದಲಾದ=ಬ್ರಹ್ಮದೇವರೇ ಮೊದಲಾದ, ಎಲ್ಲ ಚೇತನರೊಳಗೆ =ಸಮಸ್ತ ಚೇತನರಾದ ತತ್ತ್ವದೇವತೆಗಳ ಒಳಗೆ ಪರಿಪೂರ್ಣನಾಗಿದ್ದು, ಅನುದಿನವು=ಪ್ರತಿದಿನದಲ್ಲ್ಯೂ, ಚೇಷ್ಟೆಗಳ ಮಾಡಿಸುತ=ವ್ಯಾಪಾರಗಳ ಮಾಡಿಸುತ, ತಿಳಿಸದೆ=ತನ್ನ ಮಹಿಮಾ ಆ ಅಧಿಕಾರಿಗಳಿಗೆ ಸಂಪೂರ್ಣವಾಗಿ ತಿಳಿಸದೆ, ಅಂದರೆ, ಯೋಗ್ಯತಾನುಸಾರ ತಿಳಿಸಿ, ಪ್ರೇಷ್ಟನಾಗಿದ್ದು=ಆಯಾ ಜೀವರ ಸ್ವರೂಪ ಯೋಗ್ಯತಾನುಸಾರ ಆಪ್ತನಾಗಿ ಅಥವಾ ಇಷ್ಟನಾಗಿದ್ದು, ಎಲ್ಲರಿಗೆ=ಯಾವತ್ತೂ ಜೀವರಿಗೆ (ಸ್ವಭಕ್ತರಿಗೆ) ಸರ್ವೇಷ್ಟದಾಯಕ= ಸ್ವರೂಪಯೋಗ್ಯತಾಕ್ಕೆ ಅನುಸರಿಸಿದ ಇಷ್ಟಗಳ ಲಿಂಗಭಂಗಾನಂತರ ಕೊಡತಕ್ಕವನಾಗಿ, ಸರ್ವಜೀವರನು=ಸಮಸ್ತ ಪ್ರಾಣಿಗಳನ್ನು, ಸಂತಯಿಸುವನು= ಸಮಸ್ತರನ್ನ, ಅವರ ಯೋಗ್ಯತಾಸ್ಥಾನದಲ್ಲಿ ಇಟ್ಟು, ದಾರದಾರನ್ನು ಯಾವ ರೀತ್ಯಾ ಸಂರಕ್ಷಿಸಬೇಕೋ ಆ ರೀತ್ಯಾ ಪಾಲಿಸುತ್ತಾನೆ.

ಪೂರ್ವೋಕ್ತ ಪ್ರಕಾರ ಪರಮಾತ್ಮನ ಮಹಿಮಾ ಅನುಸಂಧಾನ ಮಾಡಿ, ತಿಳಿದು, ಸದ್ಗತಿ ಐದಬೇಕು ಎಂತ ತಾತ್ಪರ್ಯ. ॥೨೯॥

(೨) "ಭಾವಪ್ರಕಾಶಿಕೆ" ವ್ಯಾಖ್ಯಾನ :-

ಜಡಚೇತನಾದಿ ಸಕಲ ವಸ್ತುಗಳ ಕ್ರಿಯಾದಿಗಳು ಶ್ರೀಪರಮಾತ್ಮನಿಂದಲೇ ಆಗುವುದೆಂದು ಚಿಂತಿಸಬೇಕೆಂದು ಹೇಳುತ್ತಾರೆ.

ಹೆಂಚು, ಭಂಗಾರ, ಕಬ್ಬಿಣ, ಪರ್ವತ, ಕಲ್ಲುಗಳು, ಕಾಷ್ಟಗಳು ಮೊದಲಾದ ಎಲ್ಲಾ ಜಡವಸ್ತುವಿನಲ್ಲಿಯೂ, ಬ್ರಹ್ಮಾದಿ ಸಕಲ ಚೇತನರಲ್ಲಿ ಇದ್ದು, ಪ್ರತಿದಿವಸ, ಅವರಿಗೆ ತಿಳಿಸದೇನೇ, ಸಕಲ ಕ್ರಿಯಾದಿಗಳನ್ನು ನಡೆಯಿಸುತ್ತಾ, ಎಲ್ಲರಿಗೂ ಪ್ರಿಯಕರನಾಗಿ, ಅವರವರ ಮನೋಭೀಷ್ಟವನ್ನು ಪೂರೈಸುತ್ತಾ, ಸಕಲ ಜೀವರನ್ನು ರಕ್ಷಿಸುವನು. ॥೨೯॥

## (೩) "ಭಾವದರ್ಪಣಟೀಕಾ" ವ್ಯಾಖ್ಯಾನ:-

ಜಡ ಚೇತನಗಳಲ್ಲೂ ಕೂಡ ವ್ಯಾಪ್ತನಾಗಿ, ಅತ್ಯಂತ ಇಷ್ಟದಿಂದ ಸಂರಕ್ಷಿಸುತ್ತಾನೆಂದು ಹೇಳುತ್ತಾರೆ- "ಲೋಷ್ಟೇತಿ" ।

ಲೋಷ್ಟ = ಹೆಂಟೆ. ಕಾಂಚನ = ಭಂಗಾರ. ಕಾಷ್ಠ = ಕಟ್ಟಿಗೆ ॥೨೯॥

## (೩) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :-

"ಲೋಷ್ಠ"-ಇತಿ॥ "ಶಿಲಾದ್ಯೇಷು ಸ್ಥಿತಃ ವಿಷ್ಣುಃ ಭಾರ ದಾರ್ಢ್ಯಾದಿ ಕಾರಣಮ್॥ ನೈವ ಚಿತ್ತಾಧಿಕಸ್ಯಾತೋ ವೃಕ್ಷಾದ್ಯಾಃ ಉತ್ತಮಾಃ ಮತಾಃ॥ ವೃಕ್ಷೇಭ್ಯಃ ಅಧಿಕಂ ವಿಷ್ಣುಃ ಜಂಗಮೇಷು ಪ್ರಕಾಶಿತಃ|| ತತೋಪಿ ಪುರುಷೇ ವಿಷ್ಣುಃ ಗುಣಾಧಿಕ್ಯ ಪ್ರಕಾಶಮ್॥ ಇತಿ **ಐತರೇಯೇ॥** ॥೨೯॥

**ಕನ್ನಡಾನುವಾದ :**

"ಹೆಂಚು, ಭಂಗಾರ ಮೊದಲಾದ ಸಮಸ್ತ ಪದಾರ್ಥಗಳಲ್ಲಿ ಶ್ರೀ ಪರಮಾತ್ಮನು ಇರುವನು. ಆದರೆ ತನ್ನ ಇರವನ್ನು ಮಾತ್ರ ತಿಳಿಯಗೊಡನು"-ಎಂದು ದಾಸವರೇಣ್ಯರು ತಿಳಿಸುತ್ತಾರೆ. **ಐತರೇಯ** ಭಾಷ್ಯದಲ್ಲಿ-"ಶಿಲೆ ಮುಂತಾದ ವಸ್ತುಗಳಲ್ಲಿ ಪರಮಾತ್ಮನಿದ್ದು, ಅವುಗಳ ಸಹಜಗುಣಗಳಾದ ಭಾರ ಮತ್ತು ದೃಢತೆಗಳಿಗೆ ಕಾರಣನಾಗಿ ಆಯಾಯಾ ವಸ್ತುಗತ ಧರ್ಮಗಳನ್ನು ಅಭಿವ್ಯಕ್ತ ಮಾಡುತ್ತಾನೆ. ಚಿತ್ತ ಮುಂತಾದವುಗಳ ಕ್ರಿಯಾ ವಿಶೇಷಗಳಿಗೆ ಕಾರಣನಾಗಿ ಆ ಜಡವಸ್ತುಗಳಲ್ಲಿ ಹರಿಯು ಇರುವುದಿಲ್ಲ. ಈ ಕಾರಣದಿಂದ ಕಲ್ಲು ಮುಂತಾದ ಜಡವಸ್ತುಗಳಿಗಿಂತಲೂ ವೃಕ್ಷಾದಿ ಸಚೇತನ ವಸ್ತುಗಳು ಶ್ರೇಷ್ಠವೆನಿಸುತ್ತವೆ. ವೃಕ್ಷಾದಿಗಳಿಗಿಂತಲೂ ಚರಪ್ರಾಣಿಗಳಲ್ಲಿ ಪರಮಾತ್ಮನು ತನ್ನ ಗುಣಾಧಿಕ್ಯದಿಂದ ಪ್ರಕಾಶಿತನಾಗುತ್ತಾನೆ. ಎಲ್ಲ ಚರಪ್ರಾಣಿಗಳ ವರ್ಗದಲ್ಲಿ ಪುರುಷನಲ್ಲಿ ತನ್ನ ಗುಣಗಳನ್ನು ಅತ್ಯಧಿಕವಾಗಿ ಅಭಿವ್ಯಕ್ತಿಪಡಿಸುತ್ತಾನೆ. ಈ ಕಾರಣದಿಂದಲೇ ಪುರುಷನು ಹೆಚ್ಚಿನ ಗುಣವಂತನೆಂದು ಪ್ರಸಿದ್ಧನಾಗಿರುತ್ತಾನೆ"-ಎಂದು **ಶ್ರೀ ಮಧ್ವಾಚಾರ್ಯರು** ತಮ್ಮ ಐತರೇಯ ಭಾಷ್ಯದಲ್ಲಿ ನಿರೂಪಿಸಿರುತ್ತಾರೆ. ॥೨೯॥

(೫) **"ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ :—**

ಜಡ, ಚೇತನಗಳಲ್ಲಿ ಚತುರ್ಮೂರ್ತಿ ಉಪಾಸನೆ ತಿಳಿಸುತ್ತಾರೆ–ಲೋಷ್ಟ ವೆಂಬ ಹೆಂಚು, ಕಾಂಚನವೆಂಬ ಸ್ವರ್ಣ, ಮೊದಲಾದ ಲೋಹ, ಶೈಲಜವೆಂಬ ಬೆಟ್ಟದ ಸಂಬಂಧದಿಂದ ಹುಟ್ಟಿದ ಅರಿದಾಳ ಮುಂತಾದ ಧಾತುಗಳು, ಕಾಷ್ಠ ವೆಂಬ ಮರಗಳ ಸಂಬಂಧ ವಸ್ತು, ಸಹ ನಾಲ್ಕು ಬಗೆಯಾದ ಜಡವಸ್ತುಗಳಲ್ಲಿ ಅನಿರುದ್ಧಾದಿ ನಾಲ್ಕುರೂಪವಿರುವುವು. ಪರಮೇಷ್ಠಿ ಎಂಬ ಬ್ರಹ್ಮ ಮೊದ ಲಾದ ಚೇತನರಲ್ಲಿ ಚೇಷ್ಟೆ ಎಂಬ ಅವರವರ ಕ್ರಿಯೆಗಳನ್ನು ಮಾಡಿಸುತ್ತಾ, ತಿಳಿ ಸದೆ, ಎಂದರೆ, ತನ್ನ ಸ್ವಾತಂತ್ರ್ಯ ಅಜ್ಞರಿಗೆ ಗೊತ್ತಾಗದಂತೆ, ಸರ್ವರಿಗೂ ಬಾಹ್ಯಸುಖಪ್ರದನಾಗಿ, ಎಲ್ಲಾ ಜೀವರಿಗೂ ಸಂತೋಷಕೊಡುವನು. ಸಮಾ ಧಾನ ಪಡಿಸುವನು. ॥೨೯॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಇನ್ನು ಸಕಲ ಜಡವಸ್ತುಗಳಲ್ಲಿ ಮತ್ತು ಸಮಸ್ತ ಜೀವವರ್ಗಗಳಲ್ಲಿ ಶ್ರೀ ಪರಮಾತ್ಮನು ವ್ಯಾಪ್ತನಾಗಿದ್ದು, ತನ್ನ ಇರವನ್ನು ತೋರಗೊಡದೆ ಸಕಲ ಚೇಷ್ಟಾಪ್ರವರ್ತಕನಾಗಿ, ವ್ಯಾಪಾರ ವಿಶೇಷಗಳನ್ನು ನಡೆಯಿಸುತ್ತಾ, ಸರ್ವೇಷ್ಟದಾಯಕನು ಸರ್ವಜೀವರನ್ನು ಸಂರಕ್ಷಿಸುತ್ತಾನೆ–ಎಂದು ತಿಳಿಸುತ್ತಾರೆ- **"ಲೋಷ್ಟ ಕಾಂಚನ"**–ಎಂಬ ಪ್ರಸಕ್ತ ೨೯ನೆಯ ಈ ಪದ್ಯದಿಂದ.

(೧) ಲೋಷ್ಟವೆಂದರೆ ಹೆಂಚು ಎಂದರ್ಥ. ಇದರ ನಿರ್ಮಾಣ ಮಣ್ಣಿನಿಂದ. ಭೂ ಸಂಬಂಧವಾದ ಜಡ ಪದಾರ್ಥ. ಬೆಲೆ ಇಲ್ಲದ ಅಲ್ಪ ವಸ್ತುವೆಂದು ಪರಿಗಣಿಸಲ್ಪಡುವುದು.

(೨) ಭಂಗಾರವು ಅತ್ಯಮೂಲ್ಯವಾದ ವಸ್ತು. ಭೂಗರ್ಭದಲ್ಲಿ ದೊರೆಯುವ ಖನಿಜ ಪದಾರ್ಥವು.

(೩) ಲೋಹ ಪದಾರ್ಥಗಳಲ್ಲಿ ಕಬ್ಬಿಣವು ಕನಿಷ್ಠ ವಸ್ತುವೆನಿಸುವುದು. ಇದೂ ಸಹ ಖನಿಜ ಸಂಬಂಧವಾದ ವಸ್ತುವೇ.

(೪) ಶೈಲ ಎಂದರೆ ಪರ್ವತ. ಶೈಲಜ ಎಂದರೆ ತಜ್ಜನ್ಯವಾದದ್ದು ಅಂದರೆ ಶಿಲಾ ವಿಶೇಷಗಳು. ಅದರಲ್ಲಿ ದೊರೆಯುವ ಗೈರಿಕಾದಿ ಧಾತುಗಳನ್ನೂ ಸಹ ಪರಿಗಣಿಸಬಹುದು.

ಮೇಲಿನ ನಾಲ್ಕು ಪದಾರ್ಥಗಳೂ ಶುದ್ಧ ಜಡವಸ್ತುಗಳು, ಅವುಗಳಿಗೆ ಸ್ವತಃ ಪ್ರವೃತ್ತಿ ಶಕ್ತಿ ಇಲ್ಲ.

(೫) ಕಾಷ್ಠ ಎಂದರೆ, ಕಟ್ಟಿಗೆ. ವೃಕ್ಷ ಸಂಬಂಧವಾದದ್ದು. ವೃಕ್ಷವು ಚೇತನ ವರ್ಗದಲ್ಲಿ ಸ್ಥಾವರ ಗುಂಪಿಗೆ ಸೇರಿದ್ದು, ಇದರಲ್ಲಿ ಶ್ರೀ ಪರಮಾತ್ಮನು ಇತರ ಜಡವಸ್ತುಗಳಿಗಿಂತಲೂ ಹೆಚ್ಚು ಆಧಿಕ್ಯದಿಂದ ಪ್ರಕಾಶಿತನಾಗಿರುವನು.

ಇನ್ನು ಜೀವರಾಶಿಗಳಲ್ಲಿ ಕ್ರಿಮಿ, ಕೀಟ, ಪಶು, ಪಕ್ಷಿ ಇತ್ಯಾದಿ ಚೇತನಗಳಿಗಿಂತ ಪುರುಷರಲ್ಲಿ ತಾರತಮ್ಯಾನುಸಾರ ಗುಣೋತ್ಕರ್ಷದಿಂದ ವಿರಾಜಮಾನನಾಗಿರುವನು. ಜೀವೋತ್ತಮರಾದ ಚತುರ್ಮುಖ ಬ್ರಹ್ಮದೇವರಿಂದ ಮೊದಲು ಸಮಸ್ತ ಜೀವರಾಶಿಗಳಲ್ಲಿಯೂ ಶ್ರೀ ಪರಮಾತ್ಮನು ಅಂತರ್ಯಾಮಿತ್ವೇನ, ತಾನು ಬಿಂಬನಾಗಿದ್ದು, ಪ್ರತಿದಿನದಲ್ಲೂ (ಅನುದಿನವು) ಚೇಷ್ಟಾಪ್ರವರ್ತಕನಾಗಿ ಬಿಂಬಕ್ರಿಯಾದ್ವಾರಾ ಆಯಾಯಾ ಚೇತನರ ಸ್ವರೂಪ ಯೋಗ್ಯತಾನುಸಾರ, ಅವರ ಅನಾದಿಕರ್ಮಪ್ರವಾಹಕ್ಕನುಗುಣವಾಗಿ ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಿರುವನು. ಅನಂತ ಕಲ್ಯಾಣಗುಣಾಕರನಾದ ಆ ಶ್ರೀಹರಿಯ ಮಹಿಮಾತಿಶಯಗಳನ್ನು ರಮಾ ಬ್ರಹ್ಮಾದಿಗಳಂತಹ ಅಧಿಕಾರಿಗಳೂ ಸಹ ಸಾಕಲ್ಯೇನ ತಿಳಿಯಲಾರರು. ಇಂತು ಸರ್ವಜೀವರ ಬಿಂಬನಾಗಿ, ಅವರ ಪರಮಾಪ್ತನಾಗಿ, ಅತ್ಯಂತ ಪ್ರಿಯವಸ್ತುವೆಂದೆನಿಸಿ (ಪ್ರೇಷ್ಟನಾಗಿದ್ದು), ಪುಣ್ಯ, ಪಾಪ, ಮಿಶ್ರ ಕರ್ಮ ಮುಂತಾದ ಸಮಸ್ತ ಕ್ರಿಯಾವಿಶೇಷಗಳನ್ನೂ ತಾನೇ ನಡೆಯಿಸುತ್ತಿದ್ದರೂ, ತನ್ನ ಇರವನ್ನು ಆ ಜೀವರಿಗೆ ತಿಳಿಸಗೊಡದೆ, ತನ್ನ ಬಿಂಬಕ್ರಿಯಾರೂಪವಾದ ವ್ಯಾಪಾರಗಳ ಸುಳಿವನ್ನು ಕೊಡದೆ, ಜೀವರು ಸಮಸ್ತ ಕಾರ್ಯಗಳನ್ನೂ ತಾವೇ ಮಾಡುತ್ತಿದ್ದಾರೆಂದು ಮೋಹ ಹುಟ್ಟಿಸುವನು. **"ನಾಹಂ ಕರ್ತಾ ಹರಿಃ ಕರ್ತಾ"**–ಎಂಬ ಉತ್ತಮ ಜ್ಞಾನಾನುಸಂಧಾನವುಳ್ಳವರಿಗೆ ಸರ್ವೇಷ್ಟದಾಯಕನಾಗಿದ್ದು, ಅವರ

ಸಮಸ್ತ ಮನೋಭೀಷ್ಟಗಳನ್ನು ಸಲ್ಲಿಸುತ್ತಾ, ಅವರನ್ನು ನಿರಂತರದಲ್ಲಿಯೂ ಸಂರಕ್ಷಿಸುತ್ತಿರುವನು. ಜೀವರು ಶ್ರೀ ಪರಮಾತ್ಮನ ಸ್ವಾತಂತ್ರ್ಯ, ಬಿಂಬ ಕ್ರಿಯಾ ವಿಶೇಷಗಳನ್ನು ತಿಳಿಯಲಿ, ತಿಳಿಯದಿರಲಿ, ಸಮಸ್ತರನ್ನು ಸಂತೈಸಿ ರಕ್ಷಕನಾಗಿದ್ದಾನೆಂದು ಪ್ರಸಕ್ತ ಪದ್ಯದ ಅಭಿಪ್ರಾಯವು. ಅವನ ಕ್ರಿಯಾ ವಿಶೇಷಗಳನ್ನು ತಿಳಿದವರಿಗೆ ಭಗವದನುಗ್ರಹ ಪ್ರಾಪ್ತಿ. ಆ ಪರಮ ಮಹಿಮಾ ಸಂಪನ್ನನಾದ ಶ್ರೀ ಹರಿಯ ಲೀಲಾವಿಶೇಷಗಳನ್ನು ಪಾಮರರಾದ ನಾವು ಅಜ್ಞಾನದಿಂದ ಮರೆತಿದ್ದರೂ, ನಮ್ಮನ್ನೆಲ್ಲಾ ಸರ್ವದಾ ರಕ್ಷಿಸುತ್ತಿರುವ ಆ ಪರಮಾತ್ಮನೆಂತಹ ಕರುಣಾಸಾಗರನು. ॥೨೯॥

## ಪದ್ಯ (೩೦)

**ಮೂಲ :–**

**ವಾಸುದೇವಾನಿರುದ್ಧ ರೂಪದಿ ।**
**ಪುಂ ಶರೀರದೊಳಿಹನು ಸರ್ವದ ।**
**ಸ್ತ್ರೀ ಶರೀರದೊಳಿಹನು ಸಂಕರುಷಣನು ಪ್ರದ್ಯುಮ್ನ ॥**
**ದ್ವಾಸುಪರ್ಣಶ್ರುತಿ ವಿನುತ ಸ ।**
**ವರ್ಣ ಸುನಿಲಯ ನಾರಾಯಣನ ಸದು ।**
**ಪಾಸನೆಯ ಗೈವರು ಜೀವನ್ಮುಕ್ತರೆನಿಸುವರು ॥ ॥೩೦॥**

**ಅವತರಣಿಕೆ :–**

ಸ್ತ್ರೀ ಮತ್ತು ಪುರುಷ ದೇಹಗತ ಭಗವದ್ರೂಪಗಳ ವಿಚಾರವನ್ನು ತಿಳಿಸುತ್ತಾರೆ– "ವಾಸುದೇವಾನಿರುದ್ಧ"–ಎಂಬ ಪ್ರಸಕ್ತ ಸಂಧಿಗತ ೩೦ನೆಯ ಈ ಪದ್ಯದಿಂದ.

ಪುರುಷರ ಶರೀರದಲ್ಲಿ ವಾಸುದೇವ ಮತ್ತು ಅನಿರುದ್ಧ ಎಂಬ ರೂಪಗಳಿಂದ ವ್ಯಾಪ್ತನಾಗಿ ದೇಹಗತ ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಾನೆ. ಅಂತೆಯೇ ಸ್ತ್ರೀಯರ ದೇಹದಲ್ಲಿ ಸಂಕರ್ಷಣ ಮತ್ತು ಪ್ರದ್ಯುಮ್ನ ರೂಪ

ಗಳಿಂದ ವಿದ್ಯಮಾನನಾಗಿದ್ದಾನೆ. ದೇಹವೆಂಬ ಈ ವೃಕ್ಷದಲ್ಲಿ ಎರಡು ಹಕ್ಕಿಗಳಿವೆ. ಒಂದು ಜೀವಾಖ್ಯಪಕ್ಷಿ ಮತ್ತೊಂದು ಈಶಾಖ್ಯಪಕ್ಷಿ. ಜೀವಾಖ್ಯ ಪಕ್ಷಿಯು ಕರ್ಮಫಲವನ್ನು ಉಣ್ಣುತ್ತಿದ್ದರೂ ದುರ್ಬಲವಾಗಿಯೇ ಇದೆ. ಈಶಾಖ್ಯ ಪಕ್ಷಿಯಾದರೋ ಏನನ್ನೂ ಸೇವಿಸದೆ ಪುಷ್ಟವಾಗಿದೆ. ಇಂತಹ ಜೀವಾಖ್ಯ ಮತ್ತು ಈಶಾಖ್ಯ ಪಕ್ಷಿಗಳಿಗೆ ಅತ್ಯಂತ ಬೇಧವಿದೆ ಎಂದು ಹೇಳುವ **ದ್ವಾಸುಪರ್ಣಶ್ರುತಿ** ಎಂಬ ವೇದವಾಕ್ಯದಿಂದ ಪ್ರತಿಪಾದ್ಯನಾದ ದೇಹಾದ್ಯಂತ ಸರ್ವತ್ರ ವ್ಯಾಪಿಸಿರುವ ಮೂಲರೂಪಿ ಶ್ರೀಮನ್ನಾರಾಯಣನ ಸಮೀಚೀನವಾದ ಉಪಾಸನೆ ಮಾಡುವ ಭಾಗವತೋತ್ತಮರು ಪರಿಪಕ್ವ ದಶಾವನ್ನು ಹೊಂದಿ, ಜನನ ಮರಣ ದೂರರಾಗಿ, ಜನ್ಮರಹಿತರಾಗಿರುವ ಜೀವನ್ಮುಕ್ತರು ಎಂದೆನಿಸುವರು. ॥೩೦॥

**ಪ್ರತಿಪದಾರ್ಥ** :–

**ವಾಸುದೇವಾನಿರುದ್ಧರೂಪದಿ**= ವಾಸುದೇವ ಮತ್ತು ಅನಿರುದ್ಧ ಎಂಬ ಎರಡು ರೂಪಗಳಿಂದ **ಪುಂ ಶರೀರದೊಳಗೆ**= ಪುರುಷರ ಶರೀರದಲ್ಲಿ **ಇಹನು**= ವ್ಯಾಪ್ತನಾಗಿದ್ದಾನೆ. **ಸ್ತ್ರೀಶರೀರದೊಳು**= ಸ್ತ್ರೀಯರ ದೇಹದಲ್ಲಿ **ಸಂಕರುಷಣನು ಪ್ರದ್ಯುಮ್ನ**= ಸಂಕರ್ಷಣ ಮತ್ತು ಪ್ರದ್ಯುಮ್ನ ಎಂಬ ಎರಡು ರೂಪಗಳಿಂದ **ಸರ್ವದಾ**= ಸರ್ವಕಾಲಗಳಲ್ಲಿ **ಇಹನು**= ವಿದ್ಯಮಾನನಾಗಿದ್ದಾನೆ. **ದ್ವಾಸುಪರ್ಣಶ್ರುತಿವಿನುತ**= "ದ್ವಾಸುಪರ್ಣಾ ಎಂಬ ಶ್ರುತಿಯಿಂದ ಪ್ರತಿಪಾದ್ಯನಾದ **ಸರ್ವಾಸುನಿಲಯ**=ಸರ್ವ ಪ್ರಾಣಿಗಳ ಶರೀರಾದ್ಯಂತ ವಾಸವಾಗಿರುವ (ದೇಹ ಮತ್ತು ಜೀವರಿಗೆ ಆಶ್ರಯಭೂತನಾದ) **ನಾರಾಯಣನ**= ಮೂಲರೂಪಿ ಶ್ರೀಮನ್ನಾರಾಯಣನನ್ನು **ಸದುಪಾಸನೆಯ**= ಸರ್ವೋತ್ತಮನೆಂದು ತಿಳಿದು ತಾರತಮ್ಯ ಪಂಚಭೇದಜ್ಞಾನದಿಂದ ಸ್ವಾಮಿಭೃತ್ಯನ್ಯಾಯದಿಂದ ಸಮೀಚಿನ ಜ್ಞಾನಾನುಸಂಧಾನದಿಂದ ಉಪಾಸನೆಯನ್ನು **ಗೈವವರು**= ಮಾಡುತ್ತಿರುವ ಭಾಗವತೋತ್ತಮರಾದ ಅಧಿಕಾರಿಗಳು **ಜೀವನ್ಮುಕ್ತರೆನಿಸುವರು**= ಪಕ್ವಯೋಗಿಗಳಾಗಿ, ಲಿಂಗಭಂಗಪೂರ್ವದಲ್ಲಿ ಜನನ ಮರಣಾರಹಿತರಾಗಿ ಮಹ

ರಾದಿ ಸತ್ಯಾಂತ ಲೋಕಗಳಿದ್ದು "ಜೀವನ್ಮುಕ್ತರು" ಎಂದು ಕರೆಯಿಸುವರಾಗುತ್ತಾರೆ. ॥೩೦॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

ಸ್ತ್ರೀ ಪುರುಷ ಭಗವದ್ರೂಪಗಳ ಹೇಳುತ್ತಾರೆ. ಲಿಂಗಭಂಗಾಖ್ಯ ಮುಕ್ತಿಗೆ ಪೂರ್ವ ಜೀವನ್ಮುಕ್ತರಾಗುತ್ತಾರೆ. ಮುಕ್ತಿಯೋಗ್ಯ ಜೀವರೆಂದು ಹೇಳುತ್ತಾರೆ.

ವಾಸುದೇವಾನಿರುದ್ಧರೂಪದಿ=ವಾಸುದೇವ ಅನಿರುದ್ಧ ಈ ಎರಡು ರೂಪದಿಂದ, ಪುಂಶರೀರದೊಳಿಹನು=ಪುರುಷಶರೀರದೊಳಗೆ ಇದ್ದಾನೆ. ಸಂಕರ್ಷಣ ಪ್ರದ್ಯುಮ್ನ=ಸಂಕರ್ಷಣ, ಪ್ರದ್ಯುಮ್ನ ಈ ಎರಡು ರೂಪಗಳಿಂದ ಸ್ತ್ರೀ ಶರೀರದೊಳಿಹನು=ಸ್ತ್ರೀಯರ ಶರೀರಗಳಲ್ಲಿ ಇದ್ದಾನೆ. ಸರ್ವದಾ= ಸರ್ವಕಾಲಗಳಲ್ಲಿ ಈ ಪ್ರಕಾರ ಇದ್ದಾನೆ. ಸ್ವರೂಪ ಬಾಹ್ಯದಲಿ ಎಂತ ಅರ್ಥ (ಮತ್ತು ಪ್ರತಿ ದೇಹದಲ್ಲೂ ಎಡಭಾಗವು ಪುರುಷಗೆ ಸ್ತ್ರೀಭಾಗ ಎಂತಲೂ, ಬಲಭಾಗವು ಪುರುಷ ಭಾಗವು ಎಂತಲೂ ಶಾಸ್ತ್ರಸಿದ್ಧ. ಸ್ತ್ರೀಯರಿಗೆ ಬಲಭಾಗ ಪುರುಷಭಾಗ ಎಂತಲೂ, ಎಡಭಾಗ ಸ್ತ್ರೀಭಾಗ ಎಂತಲೂ ಅದೆ. ಪುರುಷಗೆ ಬಲಭಾಗದಲ್ಲಿ ವಾಸದೇವ, ಅನಿರುದ್ಧ, ಎಡಭಾಗದಲ್ಲಿ ಸಂಕರ್ವಣ, ಪ್ರದ್ಯುಮ್ನ. ಸ್ತ್ರೀಯರುಗಳಿಗೆ ಬಲಭಾಗದಲ್ಲಿ ಸಂಕರ್ಷಣ, ಪ್ರದ್ಯುಮ್ನ. ಎಡಭಾಗದಲ್ಲಿ ವಾಸುದೇವ ಅನಿರುದ್ಧ-ಈ ಪ್ರಕಾರ ಸರ್ವದಾ ಇದ್ದಾನೆ) ದ್ವಾಸುಪರ್ಣ ಶ್ರುತಿವಿನುತ=ಎರಡು ಪಕ್ಷಿಗಳು ಎಂತ ಹೇಳತಕ್ಕ ವೇದಶ್ರುತಿಯಿಂದ ಸ್ತುತ್ಯನಾದವನು. (ಎಂದರೆ, ದೇಹಾಖ್ಯವೃಕ್ಷದಲ್ಲಿ ಅಪೂರ್ಣವಾದ ಜೀವಾಖ್ಯ ಪಕ್ಷಿ ಎಂದು, ಕರ್ಮಫಲಭೋಗ ಮಾಡತಕ್ಕದ್ದು ಜೀವಾಖ್ಯ ಪಕ್ಷಿ. ತನ್ನ ಸ್ವಾಖ್ಯ ಫಲಭೋಗ ಮಾಡತಕ್ಕದ್ದು ಪರಮಾತ್ಮನೆಂಬ ಪಕ್ಷಿ. ಇವರುಗಳಿಗೆ ಪರಿಸ್ಪರ ಭೇದ ಎಂತಲೂ, ಜೀವಾಖ್ಯ ಪಕ್ಷಿ ಈಶಾಧೀನ ಎಂತಲೂ ಹೇಳತಕ್ಕ ಶ್ರುತಿ.) ಸರ್ವ=ಅನಿರುದ್ಧಾದಿ ನಾಲ್ಕು ರೂಪಗಳಿಗೆ, ಹಾಂಗೆ ಅನಂತಾನಂತ ರೂಪಗಳಿಗೆ, ಸರ್ವರೂಪಗಳಿಗೆ ಸುನಿಲಯ=ಸಮೀಚಿನ

ವಾದ ಆಶ್ರಯಭೂತನಾದವ, ಅಂಶರೂಪನಾದ, ನಾರಾಯಣನ = ಮೂಲ ರೂಪಿಯಾದ ನಾರಾಯಣನ, ಸದುಪಾಸನೆಯಗೈವವರು = ಸರ್ವೋತ್ತಮನೆಂದು ತಾರತಮ್ಯ ಪಂಚಭೇದಜ್ಞಾನದಿಂದ, ಸ್ವಾಮಿಭೃತ್ಯನ್ಯಾಯದಿಂದ ಉಪಾಸನಾ ಮಾಡತಕ್ಕವರು ನಾರಾಯಣನ ಅಂಶರೂಪಗಳಿಂದ ಸರ್ವರೂಪಗಳ ಉಪಾಸನಾ ಮಾಡಿದವರು ಆಗುತಾರೆ. ಬೇರಿಗೆ ನೀರು ಹಾಕಿದರೆ, ಯಾವತ್ತೂ ಶಾಖೆಗಳಿಗೆ ಸೇರುವಂತೆ, ಅನಂತಾನಂತ ರೂಪಗಳಿಗೆ ಮೂಲ ಸ್ಥಾನಾಪನ್ನನಾದ ನಾರಾಯಣದೇವರ, ಉಕ್ತ = ಅನುಸಂಧಾನ ರೀತ್ಯಾ ಉಪಾಸನಾ ಮಾಡಿದವರೆಂದು ಕರೆಸಿದವರಾಗಿ ಈ ಅಧಿಕಾರಿಗಳು ಜೀವನ್ಮುಕ್ತರೆನಿಸುವರು = ಪಕ್ವ ಯೋಗಿಗಳಾಗಿ, ಲಿಂಗಭಂಗ ಇಲ್ಲದ, ಜನನ ಮರಣಾದಿಗಳು ಇಲ್ಲದ ಮಹರಾದಿ ಸತ್ಯಾಂತಲೋಕಗಳಲ್ಲಿ ಇದ್ದು, ಜೀವನ್ಮುಕ್ತರೆಂತ ಕರೆಸಿ ಬ್ರಹ್ಮಣಾಸಹ ಲಿಂಗಭಂಗ ಐದತಾರೆ ಎಂತ ತಾತ್ಪರ್ಯ ॥೩೦॥

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ :–

ಸ್ತ್ರೀ ಪುರುಷರ ಶರೀರದಲ್ಲಿ ವಾಸುದೇವಾದಿ ಪಂಚರೂಪಗಳ ಉಪಾಸನಾ ಕ್ರಮವನ್ನು ಹೇಳುತ್ತಾರೆ:–

ವಾಸುದೇವ, ಅನಿರುದ್ಧ ಎಂಬ ಎರಡು ರೂಪಗಳಿಂದ ಪುರುಷರ ಶರೀರಗಳಲ್ಲಿ ಇರುತ್ತಿರುವನು. ಸ್ತ್ರೀ ಶರೀರಗಳಲ್ಲಿ ಸಂಕರ್ಷಣ, ಪ್ರದ್ಯುಮ್ನ ಎಂಬೆರಡು ರೂಪಗಳಿಂದ ವಾಸಮಾಡುವನು. ಇಂತಹ ಪರಮಾತ್ಮನನ್ನು ಸದುಪಾಸನೆ ಎಂದರೆ–ಜೀವ ಪರಮಾತ್ಮರಿಗೆ ಬೇಧಜ್ಞಾನವು. ಪರಮಾತ್ಮನ ದಾಸನು ತಾನೆಂದು ಉಪಾಸನೆ ಮಾಡುವುದು. ಜೀವಪರಮಾತ್ಮರಿಗೆ ಪರಸ್ಪರ ಭೇಧವನ್ನು ಸೂಚಿಸುವ

"ದ್ವಾಸುಪರ್ಣಾ ಸಮುಜಾ ಸಖಾಯಾಂ ಸಮಾನಂ ವೃಕ್ಷಂ
ಪರಿಷಸ್ವಜಾತೇ ।
ತಯೋರನ್ಯಃ ಪಿಪ್ಪಲಂ ಸತ್ವದ್ವತ್ತಿ ಅನಶ್ನನನ್ಯೋ
ಅಭಿಜಾತಶೀತ"॥

–ಎಂಬ ಶ್ರುತಿಯಿಂದ ಸ್ತುತ್ಯನೆಂದು ದಾಸರಾಯರು ಹೇಳಿರುತ್ತಾರೆ. ಈ ಶೃತಿಯು ಸ್ಪಷ್ಟವಾಗಿ ಜೀವಪರಮಾತ್ಮರ ಭೇದವನ್ನೂ, ತಾರತಮ್ಯವನ್ನೂ ತೋರಿಸುವುದೆಂಬ ವಿಷಯದಲ್ಲಿ–ಭಾಗವತ **ದಶಮಸ್ಕಂಧ 11ನೆಯ** ಅಧ್ಯಾಯದಲ್ಲಿ–

**"ಅಥ ಬದ್ಧಸ್ಯ ಮುಕ್ತಸ್ಯ ಲಕ್ಷಣಂ ವದಾಮಿತೇ ।**
**ವಿರುದ್ಧಲ್ಪರ್ಮಿಣೋಸ್ತಾತ ಸ್ಥಿತಯೋರೇಕ ಧರ್ಮಿಣಿ ॥**

–ಎಂಬ ಪುರಾಣೋಕ್ತ ಪ್ರಮಾಣಾನುಸಾರ, ಇಲ್ಲಿರುವ ಬದ್ಧ ಮತ್ತು ಮುಕ್ತ ಎಂಬ ಪದಗಳಿಗೆ ಬದ್ಧನೆಂದರೆ, **ಜೀವವೆಂತಲೂ**, ಮುಕ್ತನೆಂದರೆ, **ವಿಷ್ಣು** ಎಂತಲೂ, **ವಿಜಯಧ್ವಜೀಯದಲ್ಲಿ** ವ್ಯಾಖ್ಯಾನ ಮಾಡಿ, ಅದಕ್ಕೆ ಆಧಾರ ವಾಗಿ **ಭಾಗವತ ತಾತ್ಪರ್ಯದ ಶ್ರೀಮದಾಚಾರ್ಯರ** ವಾಕ್ಯವನ್ನು ಉದಾಹರಿ ಸಿರುವರು. ಆ ಪ್ರಮಾಣವು–

**"ಬದ್ಧಾ ಜೀವಾ ಇಮೇ ಸರ್ವೇ ಪೂರ್ವಬಂಧ ಸಮನ್ವಯಾತ್ ।**
**ನಿತ್ಯಮುಕ್ತಸ್ತಮೋ ವಿಷ್ಣುರ್ಮುಕ್ತಾ ನಾಮಾಸದೋದಿತಃ ॥**
**ಅಬದ್ಧತ್ವಾದ ಮೋಕ್ಷೋಪಿ ದೀಪ್ಯತೇ ಸೌರವೀರ್ಯಥಾ"॥**

–ಅಂದರೆ ಜೀವರು ಮುಕ್ತಿಗೆ ಪೂರ್ವದಲ್ಲಿ ಬದ್ಧರಾಗಿದ್ದು, ತದನಂತರ ಭಗವ ತ್ಪ್ರಸಾದದಿಂದ ಮುಕ್ತರಾಗುವರು. ಪೂರ್ವದಲ್ಲಿ ಜೀವರು ಬದ್ಧರಾಗಿರುವುದ ರಿಂದ "ಬದ್ಧ"ರೆಂದು ಜೀವರಿಗೆ ಹೆಸರು.

**"ಸಮೋಮೋಕ್ಷೋ ನ ಬಂಧನಮ್"**–ಎಂದು ಭಗವದ್ವಾಕ್ಯಾನುಸಾರ ವಾಗಿ ಮುಕ್ತಿಪದಕ್ಕೆ ಬಂಧನದಿಂದ ಮುಕ್ತಿ ಎಂದು ಅರ್ಥವಾಗುವುದು. ಯಾರು ಬದ್ಧರೋ ಅವರೇ ಮುಕ್ತರಾಗುವರು. ಪರಮಾತ್ಮನಿಗೆ ಬಂಧನ ವಿಲ್ಲ. ಮುಕ್ತಿ ಎಲ್ಲಿಂದ ಬಂತು? ಎಂದರೆ– ಸೂರ್ಯನಿಗೆ ಕೆಲವು ಕಾಲ ಪ್ರಕಾಶ ಉಂಟು, ಕೆಲವು ಕಾಲ ಇಲ್ಲ ಎಂಬುದಿಲ್ಲ. ಹೇಗೆ ಸದಾ ಪ್ರಕಾಶಿಸು ತ್ತಿರುವನೋ, ಹಾಗೆ ಪರಮಾತ್ಮನು ನಿತ್ಯಮುಕ್ತನಾಗಿರುವುದರಿಂದ "ಮುಕ್ತ"

ನೆಂದು ಪರಮಾತ್ಮನಿಗೆ ಹೆಸರು ಮಾತ್ರವೇ ಹೊರತು "ಬಂಧನದಿಂದ"ಮುಕ್ತಿ" ಎಂದರ್ಥವಲ್ಲ.

ಸೂರ್ಯನ ದೃಷ್ಟಾಂತದಿಂದ ಸೂರ್ಯನು ಸದಾ ಪ್ರಕಾಶವಂತನಾದರೂ ದೇಶ ಕಾಲವನ್ನನುಸರಿಸಿ ಕೆಲವು ದೇಶಗಳಲ್ಲಿ ಅಧಿಕ ತಾಪ, ಕೆಲವು ದೇಶಗಳಲ್ಲಿ ಪ್ರಕಾಶ ಕಮ್ಮಿಯಾಗಿ ಕಾಣುವನು. ಅಂದರೆ, ಜನರಿಗೆ ಉಷ್ಣ ಅಧಿಕ, ಸಮೋಷ್ಣ, ಶೀತ ಇವು ಕಾಣುವುವು. ಕೆಲವು ದೇಶದಲ್ಲಿ ಸೂರ್ಯ ರಶ್ಮಿಯೇ ಇಲ್ಲ. ಸೂರ್ಯಾಸ್ತಮಕಾಲದಲ್ಲಿ ಪ್ರಕಾಶವಿಲ್ಲದಿರುವುದು. ಉದಯದಲ್ಲಿ ಪ್ರಕಾಶ ಕಮ್ಮಿ. ಮಧ್ಯಾಹ್ನದಲ್ಲಿ ಪ್ರಕಾಶಾಧಿಕ ಮೊದಲಾದ ವೈಲಕ್ಷಣ್ಯವು ದೇಶಕಾಲಾದಿ ಉಪಾಧಿಕೃತವೇ ಹೊರತು ಸೂರ್ಯನ ಪ್ರಕಾಶನದಲ್ಲಿ ಯಾವಾಗಲೂ ನ್ಯೂನಾತಿರಿಕ್ತವಿಲ್ಲ. ಹೀಗೆ ಪರಮಾತ್ಮನು ರಾಮಕೃಷ್ಣಾದ್ಯವತಾರಗಳಲ್ಲಿ

"ವಿದ್ವಾನ್ಮುಗ್ಧವಚ್ಚೈವ ಕೇಶವೋ ವೇದನಾರ್ತವತ್"

–ಎಂಬ ನಿರ್ಣಯವಾಕ್ಯ ಪ್ರಕಾರ, ಏಟು ತಿಂದವನಂತೆಯೂ, ತಾನು ತಿಳಿಯದವನಂತೆಯೂ ತೋರಿಸುವುದು ಲೋಕಮೋಹಕ್ಕಾಗಿ ಎಂದು ಸ್ಪಷ್ಟವಾಗುವುದು. ಹೀಗೆ ತೋರಿಸುವವನೇ ಹೊರತು, ನಿಜವಾಗಿ ಎಂದಿಗೂ ಪರಮಾತ್ಮನು ಬದ್ಧನಲ್ಲ. ಬಂಧನದಿಂದ ಮುಕ್ತಿಯೂ ಇಲ್ಲ. ನಿತ್ಯಮುಕ್ತನಾದುದರಿಂದ, "ಮುಕ್ತ"ನೆಂದು ಹೆಸರು ಮಾತ್ರ. ಹೀಗೆ ಬದ್ಧನೆಂತಲೂ ಮುಕ್ತನೆಂತಲೂ ಹೆಸರುಳ್ಳ ಜೀವ ಮತ್ತು ಪರಮಾತ್ಮರು ಸಮಾನ ಧರ್ಮಿಗಳಾಗಿ, ಪರಸ್ಪರ ವಿರುದ್ಧ ಧರ್ಮಗಳೆಂದು ಹೇಳಬೇಕಾದರೆ ಪರಸ್ಪರ ವೈಲಕ್ಷಣ್ಯವಿರಲೇಬೇಕಾಯಿತು. ಅದಾವುದೆಂದರೆ– "ಎಲೈ ಉದ್ಧವನೆ, ಜೀವ ಪರಮಾತ್ಮರ ವೈಲಕ್ಷಣ್ಯವನ್ನು ಹೇಳುವೆನು, ಕೇಳು (ಎಂದು ಕೃಷ್ಣನ ವಾಕ್ಯ)

"ಸುಪರ್ಣಾವೇತೌ ಸದೃಶೌ ಸಖಾಯೌ ಯದೃಚ್ಛಯೈತೌ
ಕೃತನೀಡೌ ಚ ವೃಕ್ಷೇ ||
ಏಕಸ್ತಯೋಃ ಖಾದತಿ ಪಿಪ್ಪಲಾನ್ನಮನ್ಯೋನಿರನ್ನೋಽಪಿ
ಬಲೇನ ಭೂಯಾನ್" ||

ಸ್ಥಿತೋರೇಕಧರ್ಮಿಣಿ.

ಇಬ್ಬರು ಒಂದೇ ಧರ್ಮ ಉಳ್ಳವರು ಎಂದರೆ, ಸಮಾನ ಧರ್ಮಗಳೆಂದು ಹೇಳಿದುದನ್ನು ಮೊದಲು ವಿಸ್ತರಿಸುತ್ತಾರೆ. ಈ ದೇಹವೆಂಬ ವೃಕ್ಷದಲ್ಲಿ ಆಕಾಶದಲ್ಲಿ ಸಮರಾಗಿಯೂ, ಪರಸ್ಪರ ಸಖರಾಗಿಯೂ, ಅನಾದ್ಯಂತ ಕಾಲವೂ ಚಿತ್ಸ್ವರೂಪಿಗಳಾಗಿ ಇರುವ ವಿಷಯದಲ್ಲಿ ಸಮಾನ ಧರ್ಮಗಳಾಗಿರುವರು. ವಿರುದ್ಧ ಧರ್ಮಗಳಾವುದೆಂದರೆ:– ಇವರಿಬ್ಬರೂ **"ಸುಪರ್ಣೌ"** ಎಂದರೆ, ಒಳ್ಳೆ ರೆಕ್ಕೆಗಳುಳ್ಳ ಪಕ್ಷಿಗಳೆಂದು ಹೇಳಿದಂತಾಯಿತು. "ಸುಪರ್ಣ"–ಶಬ್ದಕ್ಕೆ ಸು=ಚೆನ್ನಾಗಿ, ಪರ್ಣ=**"ಪೃಪಾಲನ ಪೂರ್ಣಯೋಃ"**– ಎಂಬ ಧಾತುವಿನಿಂದ ಜೀವರನ್ನು ಪಾಲಿಸುವುದರಿಂದಲೂ. ಪೂರ್ಣನಾದುದರಿಂದಲೂ, ಪರಮಾತ್ಮನಿಗೆ **ಸುಪೂರ್ಣ**ನೆಂದು ಹೆಸರು. ಪರಮಾತ್ಮನಿಂದ ಪಾಲ್ಯನಾದುದರಿಂದಲೂ, ಅಪೂರ್ಣನಾದುದರಿಂದಲೂ "ಸುಪರ್ಣ"ನೆಂದು ಜೀವನಿಗೂ ಹೆಸರು. ಆದರೆ, ಈ ಅರ್ಥದಿಂದ ಸುಪರ್ಣ ಶಬ್ದವೇ ಜೀವ ಪರಮಾತ್ಮರ ಅದೃಷ್ಟ ಪ್ರೇರಕ ದೈವೇಚ್ಛೆಯಿಂದ ದೇಹದ ಹೃದಯಾಕಾಶವನ್ನು ವಾಸಸ್ಥಾನವನ್ನಾಗಿ ಮಾಡಿಕೊಂಡು, ವಾಸಮಾಡುತ್ತಿರುವರು. ಇವರಲ್ಲಿ ಒಬ್ಬನಾದ ಈಶನು **"ಪಿಪ್ಪಲಾನ್ನಂ"** ಆ ದೇಹ ಸಂಬಂಧದಿಂದುಂಟಾಗುವ ಕರ್ಮಫಲವನ್ನು ಭುಂಜಿಸದಿದ್ದರೂ, ಜೀವನಿಗಿಂತ ಸ್ವಯಂ ಬಲಾಢ್ಯನಾಗಿರುವನು.

**"ಅತ್ಮಾ ನಮನ್ಯಂಚ ಸರ್ವೇದವಿದ್ವಾನಪಿಪ್ಪಲಾದೋನತು ಪಿಪ್ಪಲಾಪಃ ||**
**ಯೋ ವಿದ್ಯಯಾಂಥಃ ಸ ತು ನಿತ್ಯಮುಕ್ತವ್ ||**

–ಕರ್ಮಫಲವನ್ನು (ಪಿಪ್ಪಲವನ್ನು) ಭುಂಜಿಸದಿರುವ ಪರಮಾತ್ಮನು ತನ್ನನ್ನೂ ಹಾಗೂ ಜೀವನ ಸ್ವರೂಪವನ್ನೂ ಸಹ ತಿಳಿದಿರುವನು. ಪಿಪ್ಪಲಾದನಾದ, ಅಂದರೆ, ಕರ್ಮಫಲವನ್ನು ಭುಂಜಿಸುವ ಜೀವನು ತನ್ನನು ತಾನೇ ಅರಿಯನು. ಇನ್ನು ಪರಮಾತ್ಮನನ್ನು ಅರಿಯುವುದೆಂತು ? ಜೀವನು ಅವಿದ್ಯೆ ಎಂಬ ಮಾಯೆಯಿಂದ ಮೋಹಿತನಾಗಿ ಪರಮಾತ್ಮನನ್ನು ಅರಿಯನು. ಆದುದರಿಂದ ನಿತ್ಯಬದ್ಧನಾಗಿರುವನು. ಅಂದರೆ, ಪರಮಾತ್ಮನ ವಶದಲ್ಲಿ ಇರುವನು. ಪರಮಾತ್ಮನು ವಿದ್ಯಾಮಯನು, ನಿತ್ಯಮುಕ್ತನು ಎಂಬುವೇ ಮೊದಲಾದ

ವಿರುದ್ಧ ಧರ್ಮಗಳು ಜೀವ ಪರಮಾತ್ಮರಲ್ಲಿ ಇರುವುದೆಂದು ಉದ್ಧವನಿಗೆ ಶ್ರೀ ಕೃಷ್ಣನು ಜೀವ ಪರಮಾತ್ಮರ ವೈಲಕ್ಷಣ್ಯವನ್ನು ಉಪದೇಶಮಾಡಿ ಜೀವ ಪರ ಮಾತ್ಮರ ತಾರತಮ್ಯ ಭೇದಜ್ಞಾನವನ್ನು ಸ್ಪಷ್ಟಮಾಡಿರುವನು. "ದ್ವಾಸು ಪರ್ಣಾ"–ಎಂಬ ಶ್ರುತ್ಯರ್ಥವನ್ನೇ ಈ ಶ್ಲೋಕದಲ್ಲಿ ಹೇಳಿರುವುದರಿಂಡ, ಶ್ರುತ್ಯರ್ಥ ಬೇರೆಯಾಗಿ ಬರೆಯಲಿಲ್ಲ. ದಾಸರಾಯರು ಸದುಪಾಸನೆ ಮಾಡ ಬೇಕೆಂದು ಹೇಳಿದುದು, ಮೇಲೆ ಹೇಳಿದಂತೆ ಭೇದ ತಾರತಮ್ಯಜ್ಞಾನಗಳಿಂದಲೇ ಉಪಾಸನಾ ಮಾಡಬೇಕೆಂಬುದೇ ಅರ್ಥವೆಂದು ತಾತ್ಪರ್ಯವು. ಹೀಗೆ ಸದು ಪಾಸನೆಯನ್ನು ಮಾಡುವವರು ಮುಕ್ತರಾಗುವ ಕಾಲಕ್ಕೆ ಪೂರ್ವದಲ್ಲಿಯೇ ಸತ್ಯ ಲೋಕ ಮೊದಲಾದ ಸ್ಥಾನವನ್ನು ಹೊಂದಿ, ಪುನರ್ಜನ್ಮರಹಿತರಾಗಿದ್ದು, ಬ್ರಹ್ಮಣಾ ಸಹ ಮುಕ್ತರಾಗುವರು. ಅಮುಕ್ತರಾಗಿ ಸತ್ಯಾದಿಲೋಕಗಳಲ್ಲಿ ದ್ದರೂ ಮುಕ್ತರಂತೆ ಇರುವುದರಿಂದ "ಜೀವನ್ಮುಕ್ತ"ರೆಂದರ್ಥ. ಅಥವಾ ಈ ಲೋಕದಲ್ಲಿಯೇ ದೇಹಾಭಿಮಾನವನ್ನು ಬಿಟ್ಟು, ಶ್ವಾನ ಚಂಡಾಲಾದಿಗಳಲ್ಲಿರುವ ಮತ್ತು ತನ್ನೊಳಗಿರುವ ಭಗವದ್ರೂಪಗಳೊಳಗೆ ಪರಸ್ಪರ ಭೇದವಿಲ್ಲವೆಂದು ತಿಳಿದು, ವ್ಯಾಪ್ತೋಪಾಸನೆಯನ್ನು ಮಾಡುವವರನ್ನು ಈ ಸಂಸಾರ ಬಂಧನವು ಏನು ಮಾಡೀತು? ಸಂಸಾರದಲ್ಲಿದ್ದರೂ, ಮುಕ್ತರಂತೆ ಇರುವುದರಿಂದ ಅವ ರಿಗೂ ಜೀವನ್ಮುಕ್ತರೆಂದು ಹೆಸರು. ಆದ್ದರಿಂದ ದಾಸರಾಯರು ಅವರಿಗೂ ಜೀವನ್ಮುಕ್ತರೆಂದು ಹೇಳಿದರು,

ಲೋಕನಿಂದ್ಯವಾದ ಕಾರ್ಯಗಳನ್ನು ಮಾಡಿ, ಎಲ್ಲರಿಂದಲೂ ನಿಂದಿತನಾ ಗಿರುವ ಪಾಪಿಯು ಬದುಕಿದ್ದರೂ, ಅವನನ್ನು "ಜೀವನ್ಮೃತ" ಎನ್ನುವುದು ಹೇಗೆ ಸಹಜವೋ, ಹಾಗೆ ದೇಹಗೇಹಾದಿಗಳ ಅಭಿಮಾನವನ್ನು ಬಿಟ್ಟು, ಸರ್ವದಾ ಭಗವಂತನ ವ್ಯಾಪ್ತೋಪಾಸನೆ ಮಾಡುವವರನ್ನು "ಜೀವನ್ಮುಕ್ತ" ರೆಂದು ಹೇಳುವುದು ಸಹಜವೆಂದು ಭಾವಿಸಬೇಕು ॥೩೦॥

### (೩) "ಭಾವದರ್ಪಣಟೀಕಾ" ವ್ಯಾಖ್ಯಾನ :–

ಪುಂಶರೀರದಲ್ಲಿ ವಾಸುದೇವನನ್ನು, ಸ್ತ್ರೀ ಶರೀರದಲ್ಲಿ ಸಂಕರ್ಷಣನನ್ನು

ತಿಳಿದು ದ್ವಾಸುಪರ್ಣಶ್ರುತಿಯಿಂದ ಪ್ರತಿಪಾದಿತ ಶ್ರೀಮನ್ನಾರಾಯಣನನ್ನು ಭಜಿಸತಕ್ಕವರೇ ಜೀವನ್ಮುಕ್ತರೆಂದು ಹೇಳುತ್ತಾರೆ– "ವಾಸುದೇವೇತಿ" ॥೩೦॥

## (ಳ) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ):

"ವಾಸುದೇವ ಇತಿ"॥ ಭೋಗ್ಯ ಭೋಕ್ತ್ರಾತ್ಮ ಸ್ಥಿತಿಃ ಉದಾಹೃತತೈತ್ತಿರೀಯ ವಚನ ಸಿದ್ಧಾ॥ "ಸರ್ವಾಸುನಿಲಯಃ"– ಓಂ, ಸಹಸ್ರಂ ಮಹಿಷಾ ಮಘಃ ಆದಿತ್ತ ಇಂದ್ರಿಯಂ ಮಹಿ ಪ್ರವಾವೃದ್ಧೇ ಇಂದ್ರಃ ಸೂರ್ಯಾಸ್ಯ ರಶ್ಮಿಭಿಃ ನ್ಯರ್ಶಸಾನಮೋಕ್ಷಧಿತಿ ಓಂ" ||

"ಓಂ ಸರ್ವೇಷಾಂ ಬ್ರಹ್ಮಾದೀನಾಂ ಅಸವಃ ಪ್ರಾಣಾಃ ಇಂದ್ರಿಯಾಣಿ ನೀಲೀಯಂತೇ ಭಗವದಿಂದ್ರಿಯೇಷು ಅಂತರ್ಗತಾಃ ಭವಂತಿ ಇತಿ ಸತಥೋಕ್ತಃ"॥ ಯದ್ವಾ–ಸರ್ವೇಸವಃ ಪ್ರಾಣಮಾತ್ರ ಪೋಷಕಾಃ ಸರ್ವಾಸುರ ಜನಾಃ। ತೇ ನಿತರಾಂ ಲೀಯಂತೇ ಕ್ಷೀಯಂತೇ ಇತಿ ವಾ ತಥೋಕ್ತಃ॥ ಗೈವರು = ಮಾಡುವವರು ॥೩೦॥

ಕನ್ನಡಾರ್ಥ:

"ಭೋಜನಯೋಗ್ಯ ಪದಾರ್ಥಗಳು (ಭೋಗ್ಯ) ಮತ್ತು ಭೋಜನ ಮಾಡುವವರಲ್ಲಿ (ಭೋಕ್ತೃ) ಶ್ರೀ ಪರಮಾತ್ಮನು ನಾಲ್ಕು ರೂಪಗಳಿಂದ ಇರುತ್ತಾನೆ"–ಈ ತತ್ತ್ವವು ತೈತ್ತಿರೀಯ ಭಾಷ್ಯ ವಚನಗಳಿಂದ ಸಿದ್ಧವಾಗಿದೆ.

"ಸರ್ವಾಸುನಿಲಯ"–ಎಂಬ ಶಬ್ದವು ಶ್ರೀಮದ್ವಿಷ್ಣುಸಹಸ್ರನಾಮಗಳಲ್ಲಿ ಘಟಕವಾಗಿದೆ. ಇದರ ಅರ್ಥವು "ಸಹಸ್ರಂ" ಎಂಬ ಬೃಹತೀ ಮಂತ್ರದಿಂದ ನಿರೂಪಿತವಾಗಿದೆ. (೧) ಬ್ರಹ್ಮಾದಿಯಾಗಿ ಸರ್ವ ಜೀವರ ಪ್ರಾಣಗಳು ಭಗವಂತನ ಇಂದ್ರಿಯಗಳಲ್ಲಿ ಲಯ ಹೊಂದುವುವು. (ಸರ್ವ = ಸಮಸ್ತ ಜೀವರ ಅಸವಃ = ಪ್ರಾಣಗಳು. ನಿಲಯ = ಆಶ್ರಯ. ಇದರಿಂದ "ಸರ್ವಾಸುನಿಲಯನು") (೨) ಸರ್ವ = ಸಕಲರಾದ ಅಸುರರನ್ನೂ ನಾಶಗೊಳಿಸುವವನು. ಗೈವರು = ಮಾಡುವವರು ॥೩೦॥

(೪) **"ಗುರುಹೃದಯಪ್ರಕಾಶಿಕೆ" ವ್ಯಾಖ್ಯಾನ :–**

ಮೇಲೆ ಹೇಳಿದ ಬ್ರಹ್ಮಾದಿ ಚೇತನರಲ್ಲಿ ಚತುರ್ಮೂರ್ತಿ ಉಪಾಸನೆ ವಿವರ ತಿಳಿಸುತ್ತಾರೆ :–

ವಾಸುದೇವ, ಅನಿರುದ್ಧನೆಂಬ ಎರಡು ರೂಪಗಳಿಂದ ಸದಾ ಪುರುಷರ ಶರೀರಗಳಲ್ಲಿ ಇರುವನು. ಸಂಕರ್ಷಣ, ಪ್ರದ್ಯುಮ್ನನೆಂಬ ಎರಡು ರೂಪ ಗಳಿಂದ ಸದಾ ಸ್ತ್ರೀಯರ ಶರೀರಗಳಲ್ಲಿರುವನು.

**"ದ್ವಾಸುಪರ್ಣಾ ಸಯುಜಾ ಸಖಾಯಾ"**–ಎಂದು ವೇದಪ್ರತಿ ಪಾದ್ಯನಾದ, ಸರ್ವಪ್ರಾಣಿಗಳಲ್ಲಿ ನಿವಾಸಿಯಾದ ನಾರಾಯಣನ ನಿರ್ದೋಷ ಜ್ಞಾನಾನಂದಾದಿ ಗುಣರೂಪಗಳನ್ನು, ಉಪಾಸನೆ ಮಾಡುವವರು ದೇಹ ಸಹಿತ ರಾಗಿದ್ದರೂ, ನಿರಭಿಮಾನಿಗಳಾದ್ದರಿಂದ, ಜೀವನ್ಮುಕ್ತರೆನಿಸುವರು. ಜಡದಲ್ಲಿ ನಿರಶನರೂಪ, ಚೇತನರಲ್ಲಿ ಸಾಶನರೂಪ, ಉಪಾಸನೆ ಮಾಡುವರೆಂದು ಅಭಿ ಪ್ರಾಯ. ॥೩೦॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪುರುಷರ ಮತ್ತು ಸ್ತ್ರೀಯರ ದೇಹಗತ ಭಗವದ್ರೂಪಗಳ ವಿವರವನ್ನು ತಿಳಿಸುತ್ತಾರೆ– **"ವಾಸುದೇವಾನಿರುದ್ಧ ರೂಪದಿ"**– ಎಂಬ ಪ್ರಸಕ್ತ ಪದ್ಯ ದಿಂದ.

(೧) ಸರ್ವ ಪುರುಷರ ಸ್ಥೂಲಶರೀರದಲ್ಲಿ **ವಾಸುದೇವ ಮತ್ತು ಅನಿರುದ್ಧ** ಎಂಬ ಎರಡು ರೂಪಗಳನ್ನು ಚಿಂತಿಸಬೇಕು.

(೨) ಸಕಲ ಸ್ತ್ರೀಯರ ದೇಹದಲ್ಲಿ **ಸಂಕರ್ಷಣ ಮತ್ತು ಪ್ರದ್ಯುಮ್ನ** ಎಂಬ ಎರಡು ರೂಪಗಳನ್ನು ಧ್ಯಾನಿಸಬೇಕು.

(೩) ಪ್ರತಿಯೊಬ್ಬ ಮಾನವರ (ಪುರುಷರಾಗಲೀ ಅಥವಾ ಸ್ತ್ರೀಯ ರಾಗಲೀ) ದೇಹದ ಬಲ ಮತ್ತು ಎಡ ಪಾರ್ಶ್ವಗಳಲ್ಲಿ ಚತುರ್ಮೂರ್ತ್ಯಾತ್ಮಕ ಭಗವಚ್ಚಿಂತನಾಕ್ರಮವನ್ನು ತಿಳಿಸುತ್ತಾರೆ,

(೪) ಪುರುಷರಿಗೆ ಬಲಭಾಗವು ಪುರುಷಭಾಗವೆಂತಲೂ, ಎಡಪಾರ್ಶ್ವವು ಸ್ತ್ರೀ ಭಾಗವೆಂತಲೂ ಶಾಸ್ತ್ರಸಿದ್ಧವು.

(೫) ಅಂತೆಯೇ, ಸ್ತ್ರೀಯರಿಗೆ ಎಡಭಾಗವು ಪುರುಷಭಾಗವು ಮತ್ತು ಬಲಭಾಗವು ಸ್ತ್ರೀಭಾಗವೆಂತಲೂ ತಿಳಿಯಬೇಕು.

(೬) ಈ ಸ್ಥಾನವಿಶೇಷಾನುಸಾರ, ಪುರುಷರ ಬಲಭಾಗದಲ್ಲಿ **ವಾಸುದೇವ ಮತ್ತು ಅನಿರುದ್ಧ** ರೂಪಗಳನ್ನೂ ಮತ್ತು ಎಡಪಾರ್ಶ್ವದಲ್ಲಿ **ಸಂಕರ್ಷಣ ಮತ್ತು ಪ್ರದ್ಯುಮ್ನ** ರೂಪಗಳನ್ನು ಧ್ಯಾನಿಸಬೇಕು,

(೭) ಅಂತೆಯೇ, ಸ್ತ್ರೀಯರ ಬಲಪಾರ್ಶ್ವದಲ್ಲಿ **ಸಂಕರ್ಷಣ ಮತ್ತು ಪ್ರದ್ಯುಮ್ನ** ರೂಪಗಳನ್ನು ಮತ್ತು ಎಡಪಾರ್ಶ್ವದಲ್ಲಿ **ವಾಸುದೇವ ಮತ್ತು ಅನಿರುದ್ಧ** ರೂಪಗಳನ್ನು ಉಪಾಸನೆ ಮಾಡಬೇಕು.

(೮) ಮೂಲರೂಪಿ ಶ್ರೀಮನ್ನಾರಾಯಣನು ಸಮಸ್ತ ಜೀವರಲ್ಲಿ ಪ್ರಾಣಗಳಲ್ಲಿ ವಾಸವಾಗಿರುವನು. ಈ ಅಭಿಪ್ರಾಯವನ್ನು ದಾಸರಾಯರು **"ಸರ್ವಾಸುನಿಲಯ"** ಎಂಬ ಶಬ್ದದಿಂದ ನಿರೂಪಿಸಿರುವರು. ಅಂದರೆ ಸರ್ವ = ಸಮಸ್ತ ಜೀವರ, ಅಸು = ಪ್ರಾಣಗಳಲ್ಲಿ, ನಿಲಯ = ಆವಾಸನಾಗಿರುವನು.

"ಸರ್ವಾಸುನಿಲಯ"– ಎಂಬ ಪದಕ್ಕೆ ಬೇರೆ ರೀತಿಯಲ್ಲಿಯೂ ಅರ್ಥ ವಿವರಣೆ ಕೊಡಬಹುದು :

(1) ಬ್ರಹ್ಮಾದಿ ಜೀವರ ಸಮಸ್ತ ಪ್ರಾಣಗಳು ಲಯಕರ್ತನಾದ ಆ ಪರಮಾತ್ಮನ ಇಂದ್ರಿಯಗಳಲ್ಲಿ ಲಯಹೊಂದುವುವು. ಪರಮಾತ್ಮನ ಅಂಗ

ಗಳಿಂದ ಸೃಷ್ಟರಾದ ಜೀವರು ಆಯಾಯಾ ಸ್ಥಾನಗಳಲ್ಲಿಯೇ ಲಯ ಹೊಂದು ವರು.

(2) ಸಕಲ ಅಸುರರನ್ನು ಸಂಹಾರ ಮಾಡುವವನಾದ್ದರಿಂದ ಪರಮಾತ್ಮನಿಗೆ "ಸರ್ವಾಸುನಿಲಯ" ಎಂದು ಹೆಸರು. ಇದು **ಶ್ರೀಮದ್ವಿಷ್ಣು ಸಹಸ್ರನಾಮಗಳಲ್ಲಿ** ಘಟಕವಾಗಿದೆ.

ಮೇಲಿನ ಎರಡು ವಿಶೇಷ ಅರ್ಥಗಳನ್ನು ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ ವ್ಯಾಖ್ಯಾನಕಾರರು ಕೊಟ್ಟಿರುತ್ತಾರೆ.

(೯) ಅಂತಹ ಸರ್ವಾಸುನಿಲಯನಾದ ಮೂಲರೂಪಿ ಶ್ರೀಮನ್ನಾರಾಯಣನು ದೇಹಾದ್ಯಂತ ಸಮಗ್ರವಾಗಿ ಅಂತರ್ಬಹಿಶ್ಚ ವ್ಯಾಪ್ತನಾಗಿದ್ದು **ದ್ವಾಸುಪರ್ಣ ಶ್ರುತಿಪ್ರತಿಪಾದ್ಯನಾ**ಗಿದ್ದಾನೆ.

(೧೦) **ದ್ವಾಸುಪರ್ಣ ಶ್ರುತಿ** :–

**"ದ್ವಾಸುಪರ್ಣಾ ಸಯುಜಾ ಸಖಾಯಾ ಸಮಾನಂ**
**ವೃಕ್ಷಂ ಪರಿಷಸ್ವಜಾತೇ ।**
**ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನ್ಯೋ**
**ಅಭಿಚಾಕಶೀತಿ ॥**

ಮೇಲಿನ ಶ್ರುತಿವಾಕ್ಯವು **ಅಥರ್ವಣೋಪನಿಷತ್ತಿನ ಮಂತ್ರವು**. ಈ ಮಂತ್ರದ ಪ್ರತಿಪದಾರ್ಥ ಹೀಗಿದೆ :

**ಸಯುಜಾ**=ಸರ್ವದಾ ಜೊತೆಯಲ್ಲಿರುವ (ವಿಯೋಗ ರಹಿತರಾದ) **ಸಖಾಯಾ**=ಮಿತ್ರರಾಗಿರುವ (ಉಪಕಾರ್ಯ ಉಪಕರ್ತೃಭಾವೇನ ಪರಸ್ಪರ ಮನೋನುಕೂಲರಾದ) **ದ್ವಾಸುಪರ್ಣಾ** (ದ್ವೌ ಸುಪರ್ಣೌ)=ಎರಡು ಪಕ್ಷಿಗಳು (ಜೀವ ಮತ್ತು ಈಶ) **ಸಮಾನಂ ವೃಕ್ಷಂ**=ದೇಹವೆಂಬ ಒಂದೇ ವೃಕ್ಷ (ಅಶ್ವತ್ಥ)ವನ್ನು **ಪರಿಷಸ್ವಜಾತೇ**=ಆಲಿಂಗಿಸಿಕೊಂಡಿವೆ. **ತಯೋಃ**=ಅವೆರಡರಲ್ಲಿ **ಅನ್ಯಃ**=ಜೀವವೆಂಬ ಪಕ್ಷಿಯು **ಪಿಪ್ಪಲಂ**=ಅಶ್ವತ್ಥಫಲ

ವನ್ನು (ಅಂದರೆ ದೇಹನಿಮಿತ್ತ ಹುಟ್ಟಿದ ಕರ್ಮಫಲವನ್ನು) **ಸ್ವಾದು**= ರುಚಿಯಾಗಿದೆ ಎಂದು ತಿಳಿದು **ಅತ್ತಿ**=ತಿನ್ನುತ್ತದೆ. **ಅನ್ಯಃ**=ಈಶಾಖ್ಯ ಪಕ್ಷಿಯು **ಅನಶ್ನನ್**=ತಿನ್ನದೆಯೇ (ಜೀವಾಖ್ಯ ಪಕ್ಷಿಯಿಂದ ತಿನ್ನಲ್ಪಡುವ ಕರ್ಮಫಲವನ್ನು) **ಅಭಿಚಾಕಶೀತಿ**=ಪ್ರಕಾಶಿಸುತ್ತದೆ.

**ವಿವರಣೆ :**

ಮೇಲ್ಕಂಡ ಮಂತ್ರದ ಅರ್ಥವನ್ನು ಹೀಗೆ ವಿವರಿಸಬಹುದು:-

(1) ದೇಹವೆಂಬುದೇ ಒಂದು ಅಶ್ವತ್ಥವೃಕ್ಷವು (ಜಗದಾಖ್ಯವೃಕ್ಷ)

(2) ಈ ದೇಹಾಖ್ಯವೃಕ್ಷದಲ್ಲಿ ಎರಡು ಪಕ್ಷಿಗಳು ವಾಸವಾಗಿವೆ. ಇದರಿಂದಲೇ **ದ್ವಾಸುಪರ್ಣಾಶ್ರುತಿ** ಎಂದು ಹೆಸರು.

(3) ಜೀವಾಖ್ಯ ಪಕ್ಷಿಯು ದೇಹಗತ ಕರ್ಮಗಳಿಂದ ಉತ್ಪನ್ನವಾದ ಕರ್ಮಫಲವನ್ನು ತಿನ್ನುತ್ತದೆ.

(4) ಈಶಾಖ್ಯ ಪಕ್ಷಿಯು ಏನನ್ನೂ ತಿನ್ನದೇ ಸಾಕ್ಷಿಭೂತವಾಗಿದೆ.

(5) ಜೀವಾಖ್ಯ ಪಕ್ಷಿಯು ಫಲವನ್ನು ತಿಂದರೂ ದುರ್ಬಲವಾಗಿದೆ.

(6) ಈಶಾಖ್ಯ ಪಕ್ಷಿಯು ಏನನ್ನು ತಿನ್ನದಿದ್ದರೂ ಪುಷ್ಟವಾಗಿ ಪ್ರಕಾಶಿಸುತ್ತಿದೆ.

(7) ಈ ಶ್ರುತಿಯಿಂದ ಜೀವ ಪರಮಾತ್ಮರಿಗೆ ಅತ್ಯಂತ ಭಿನ್ನತೆ ಇದೆ ಎಂದು ಅನುಮೇಯಿಸಬಹುದು. ಅಂದರೆ, ಈ ಶ್ರುತಿಯು ಜೀವೇಶ್ವರ ಭೇದವನ್ನು ಸ್ಪಷ್ಟವಾಗಿ ಪ್ರತಿಪಾದಿಸುವುದು.

(೧೧) ಇಂತು, ದ್ವಾಸುಪರ್ಣಶ್ರುತಿಯಿಂದ ಪ್ರತಿಪಾದ್ಯನಾದ ಶ್ರೀಮನ್ನಾರಾಯಣನು ಸರ್ವಾಸುನಿಲಯನಾಗಿ ದೇಹದಲ್ಲಿ ಆವಾಸನಾಗಿದ್ದಾನೆ.

(೧೨) ಅಂತಹ ಬಿಂಬರೂಪಿ ಶ್ರೀಮನ್ನಾರಾಯಣನನ್ನು ಸದುಪಾಸನೆಯ ಮಾಡುವವರೇ ಜೀವನ್ಮುಕ್ತರೆನಿಸುವರು.

(೧೩) ಸತ್+ಉಪಾಸನೆ=ಸದುಪಾಸನೆ ಎಂದು. ಸಂಧಿ ಬಿಡಿಸಿದರೆ, **"ಸತ್"** ಎಂದರೆ, ಸಮೀಚಿನವಾದ, **"ಉಪಾಸನೆ"** ಎಂದರೆ, ಧ್ಯಾನ್ಯ ರೂಪನಾದ ಚಿಂತನೆ ಮಾಡುವವರು ಎಂದರ್ಥ.

**ಸದುಪಾಸನೆಯ ಲಕ್ಷಣಗಳು:–**

(1) ದೇಹಾಖ್ಯ ವೃಕ್ಷದಲ್ಲಿ ವಾಸಮಾಡುತ್ತಿರುವ ಜೀವಾಖ್ಯ ಮತ್ತು ಈಶಾಖ್ಯ ಪಕ್ಷಿಗಳೆರಡೂ ಸಮಾನ ಧರ್ಮಿಗಳು. ಅಂದರೆ, ಒಂದೇ ವೃಕ್ಷದಲ್ಲಿ ಇಬ್ಬರೂ ಆವಾಸರಾಗಿದ್ದಾರೆ. ಇಬ್ಬರೂ ಅನಾದಿನಿತ್ಯರು.

(2) ಸಮಾನ ಧರ್ಮವುಳ್ಳವರಾದರೂ ಅತ್ಯಂತ ಭಿನ್ನರು.

(3) ಈ ಶ್ರುತಿಯು ಜೀವೇಶ್ವರೈಕ್ಯವನ್ನು ಸರ್ವಥಾ ಹೇಳುವುದಿಲ್ಲ.

(4) ಶ್ರುತಿಯಲ್ಲಿ ಪ್ರಯೋಗವಾಗಿರುವ "**ಅನ್ಯ**" ಶಬ್ದವು ಭೇದ ಪರವಾಗಿದೆ. ಅನ್ಯೋನ್ಯಾಭಾವವೆಂಬ ಭೇದ ಶಬ್ದಾರ್ಥವೇ "ಅನ್ಯ" ಪದವು. ಇದು ಆತ್ಯಂತಿಕ ಭೇದವನ್ನೇ ಪ್ರತಿಪಾದಿಸುವುದು.

(5) ಅಂತಹ ಈಶನು ಸರ್ವರ ಬಿಂಬನು. ಸರ್ವತಂತ್ರಸ್ವತಂತ್ರನು, ಸರ್ವಪ್ರೇರಕನು. ಸರ್ವನಿಯಾಮಕನು.

(6) ಆದರೆ ಜೀವನಾದರೋ ಪ್ರತಿಬಿಂಬನು. ಪರಾಧೀನನು. ಪ್ರೇರ್ಯ ಮತ್ತು ನಿಯಮ್ಯನು.

ಈ ರೀತಿ ಈಶ–ದಾಸ ಭಾವವನ್ನರಿತು, ಪಂಚಭೇದ, ತಾರತಮ್ಯಜ್ಞಾನ ಯುಕ್ತರಾಗಿ, ಜೀವರ ಸಕಲ ವ್ಯಾಪಾರಗಳಿಗೂ ಪರಮಾತ್ಮನೇ ಮುಖ್ಯ ಪ್ರೇರಕನು ಎಂಬ ಉತ್ತಮ ಜ್ಞಾನಾನುಸಂಧಾನವೇ **ಸದುಪಾಸನೆ** ಎನಿಸುವದು.

(೧೪) ಇಂತಹ ಸದುಪಾಸನೆ ಮಾಡುವವರೇ **ಜೀವನ್ಮುಕ್ತರು.**

ಅಂದರೆ ಅಪರೋಕ್ಷಿಕೃತಶ್ರೀಶರಾಗಿ, ಸತ್ಸಾಧನೆಯ ಮಾರ್ಗದಲ್ಲಿ ಪ್ರಗತಿಯ ಪಾರಮ್ಯವನ್ನು ಹೊಂದಿ, ಪರಿಪಕ್ವದೆಶೆಯನ್ನು ಮುಟ್ಟಿ, ಜನ್ನನ

ಮರಣ ರಹಿತವಾದ ಸ್ಥಿತಿಯನ್ನು ಹೊಂದಿ, ಪುನರ್ಜನ್ಮವಿಲ್ಲದ ಮಹರಾದಿ ಲೋಕಗಳಲ್ಲಿರುವವರೇ ಜೀವನ್ಮುಕ್ತರು. ಅವರಿಗೆ ಲಿಂಗ ಭಂಗವಾಗಿಲ್ಲದಿದ್ದರೂ ತಜ್ಜನ್ಯವಾದ ಕರ್ಮಲೇಪವಿಲ್ಲ. ದ್ವಂದ್ವಾತೀತರಾಗಿ ಕೇವಲ ನಿರ್ಗುಣೋಪಾಸನೆಯ ದೆಶೆಯನ್ನು ಮುಟ್ಟಿರುತ್ತಾರೆ. ಮೋಹ, ಅಭಿಮಾನ, ಮಮಕಾರಗಳಿಂದ ರಹಿತರಾಗಿರುವರು.

ಭೂಲೋಕದಲ್ಲಿದ್ದರೂ ಸಹ, ನಿರಭಿಮಾನಿಗಳಾಗಿ ತ್ರಿಗುಣಾತೀತರಾದ ಅಂದರೆ, ಗುಣತ್ರಯಗಳಿಂದ ಜನ್ಯವಾದ ಕರ್ಮಗಳಿಂದ ನಿರ್ಗುಣೋಪಸಕರಾಗಿರುವವರು ಮೇಲೆ ವಿವರಿಸಿದ ಸದುಪಾಸನೆಯನ್ನು ನಿರಂತರದಲ್ಲಿಯೂ ಮಾಡುತ್ತಿರುವುದರಿಂದಲೇ ಜೀವನ್ಮುಕ್ತರೆಂದು ಕರೆಯಿಸುತ್ತಾರೆ ಎಂಬುದೇ ಪ್ರಸಕ್ತ ಪದ್ಯದ ತಾತ್ಪರ್ಯ. ॥೩೦॥

## ಪದ್ಯ (೩೧)

**ಮೂಲ :–**

**ತನ್ನನಂತಾನಂತ ರೂಪ ಹಿ ।**
**ರಣ್ಯ ಗರ್ಭಾದಿಗಳೊಳಗೆ ಕಾ ।**
**ರುಣ್ಯಸಾಗರ ಹರಹಿ ಅವರವರಖಿಳ ವ್ಯಾಪಾರ ॥**
**ಬನ್ನ ಬಡದಲೆ ಮಾಡಿ ಮಾಡಿಸಿ ।**
**ಧನ್ಯರೆನಿಸಿ ಸಮಸ್ತ ದಿವಿಜರ ।**
**ಪುಣ್ಯಕರ್ಮವ ಸ್ವೀಕರಿಸಿ ಫಲವಿತ್ತು ಪಾಲಿಸುವ ॥೩೧॥**

**ಅವತರಣಿಕೆ :**

ಮೂಲರೂಪಿ ಶ್ರೀಮನ್ನಾರಾಯಣನು ಬ್ರಹ್ಮಾದಿ ದೇವತೆಗಳಲ್ಲಿ ಅಂತರ್ಯಾಮಿತ್ವೇನ ಬಿಂಬನಾಗಿದ್ದು, ಅನಂತಾನಂತರೂಪ ವಿಶಿಷ್ಟನಾಗಿ, ಅಖಿಳ ವ್ಯಾಪಾರಗಳನ್ನು ಬಿಂಬಕ್ರಿಯಾದ್ವಾರಾ ಮಾಡಿ ಮಾಡಿಸಿ, ಅವರಿಂದ ಪುಣ್ಯ

ಕರ್ಮಗಳನ್ನು ಸ್ವೀಕರಿಸಿ, ತದನುಸಾರಿಯಾಗಿ ಅವರವರಿಗೆ ತಜ್ಜನ್ಯವಾದ ಫಲ ವಿಶೇಷಗಳನ್ನು ಇತ್ತು, ಸಂರಕ್ಷಿಸುವನು, ಎಂದು ನಿರೂಪಿಸುತ್ತಾರೆ–**"ತನ್ನನಂತಾನಂತರೂಪ"**–ಎಂಬ ಪ್ರಸಕ್ತ ಸಂಧಿಗತ ೩೧ನೆಯ ಈ ಪದ್ಯದಿಂದ ॥೩೧॥

**ಪ್ರತಿಪದಾರ್ಥ :–**

**ಕಾರುಣ್ಯಸಾಗರ**=ದಯಾ ಸಮುದ್ರನಾದ ಶ್ರೀಪರಮಾತ್ಮನು **ತನ್ನ ಅನಂತಾನಂತರೂಪವ**=ಅನಂತಾನಂತವಾದ ತನ್ನ ರೂಪಗಳನ್ನು **ಹಿರಣ್ಯ ಗರ್ಭಾದಿಗಳೊಳಗೆ**=ಚತುರ್ಮುಖ ಬ್ರಹ್ಮದೇವರೇ ಮೊದಲಾದ ಯಾವತ್ತೂ ದೇವತೆಗಳಲ್ಲಿ **ಹರಹಿ**=ವಿಸ್ತರಿಸಿದವನಾಗಿ **ಅವರವರ**=ಆಯಾಯಾ ದೇವತೆಗಳ **ಅಖಿಳ**=ಸಮಸ್ತವಾದ (ಸಕಲ ವಿಧವಾದ) **ವ್ಯಾಪಾರ**=ಕಾರ್ಯ ವಿಶೇಷಗಳನ್ನು (ಕರ್ಮಗಳನ್ನು) **ಬನ್ನಬಡದಲೆ**=ಲೇಶವಾದರೂ ಆಯಾಸವಿಲ್ಲದಂತೆ, ಅಂದರೆ ನಿರಾಯಾಸವಾಗಿ **ಮಾಡಿ**=ಬಿಂಬಕ್ರಿಯಾದ್ವಾರಾ ತಾನೇ ಮಾಡಿ **ಮಾಡಿಸಿ**=ಆಯಾಯಾ ದೇವತೆಗಳ ದ್ವಾರ ಮಾಡಿಸಿ **ಧನ್ಯರೆನಿಸಿ**=ಅವರನ್ನು ಪುಣ್ಯವಂತರೆಂದೆನಿಸಿ **ಸಮಸ್ತ ದಿವಿಜರ**=ಬ್ರಹ್ಮಾದಿ ದೇವ ಗಂಧರ್ವ ಪರ್ಯಂತ ಸಕಲ ದೇವತೆಗಳ **ಪುಣ್ಯ ಕರ್ಮವ**=ಸ್ವಾಮಿಭೃತ್ಯನ್ಯಾಯದಿಂದ ಭಗವತ್ಪ್ರೇರಿತರಾಗಿ ಮಾಡಿದ ಪುಣ್ಯ ಸಾಧನ ರೂಪವಾದ ಕರ್ಮಗಳನ್ನು **ಸ್ವೀಕರಿಸಿ**=ಅವರ ದ್ವಾರಾ ತಾನೇ ತೆಗೆದುಕೊಂಡವನಾಗಿ **ಫಲವಿತ್ತು**=ಆ ಪುಣ್ಯಕರ್ಮಜನ್ಯವಾದ ಫಲ ಗಳನ್ನು ಕೊಟ್ಟು, ಅಂದರೆ, ಸಂದರ್ಶನ ಭಾಗ್ಯ ರೂಪವಾದ ಫಲವನ್ನು ಕೊಟ್ಟು **ಪಾಲಿಸುವ**=ಸಂರಕ್ಷಿಸುವನು. ॥೩೧॥

## ವ್ಯಾಖ್ಯಾನಗಳು

**(೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—**

ಮೂಲರೂಪಿ ಶ್ರೀಮನ್ನಾರಾಯಣ ರೂಪದಿಂದ ಅಭಿವ್ಯಕ್ತವಾದ ಅನಂತಾನಂತ ರೂಪಗಳಿಂದ ಏನು ವ್ಯಾಪಾರ ಮಾಡುತಾನೆಂದು ಹೇಳುತಾರೆ.

ಕಾರುಣ್ಯಸಾಗರ = ಕರುಣಾಸಮುದ್ರನಾದ ಶ್ರೀನಾರಾಯಣ ದೇವರು, ತನ್ನನಂತಾನಂತ ರೂಪ = ತನ್ನ ಅನಂತಾನಂತ ರೂಪವನ್ನು, ಅಂದರೆ, ರೂಪಗಳನ್ನು ಹಿರಣ್ಯ ಗರ್ಭಾದಿಗಳೊಳಗೆ = ಬ್ರಹ್ಮದೇವರೇ ಮೊದಲಾದ ಯಾವತ್ತು ದೇವತೆಗಳ ಒಳಗೆ, ಹರಹಿ = ನೆರೆದವನಾಗಿ, ಅವರವರ = ಆಯಾ ದೇವತೆಗಳ, ಅಖಿಳ = ಸಮಸ್ತವಾದ, ವ್ಯಾಪಾರ = ಕರ್ಮಗಳ, ಬನ್ನಬಡದಲೆ = ಆಯಾಸ ಪಡದೆಲೆ, ಮಾಡಿ ಮಾಡಿಸಿ = ಅವರವರ ದೇಹಗತ ಅವರಿಗಿಂತಲೂ ಸ್ವೋತ್ತಮರಾದ ತತ್ತ್ವ ನಿಯಾಮಕರಾದ ದೇವತೆಗಳಿಂದ ಬಿಂಬ ಕ್ರಿಯಾ ದ್ವಾರಾ ಮಾಡಿ, ತದ್ವಾರಾ ತತ್ತ್ವ ದೇವತೆಗಳ ದ್ವಾರಾ ದೇಹ ಧಾರಿಯಾದ ಜೀವನಿಂದ ಮಾಡಿಸಿದವನಾಗಿ, ಧನ್ಯರೆನಿಸಿ = ಅವರನ್ನು ಪುಣ್ಯವಂತರು ಎಂತ ಎನಿಸಿ, ಸಮಸ್ತ ದಿವಿಜರ = ಬ್ರಹ್ಮಾದಿ ದೇವಗಂಧರ್ವಾನಂತ, ಸಮಸ್ತ ದೇವತೆಗಳ, ಪುಣ್ಯ ಕರ್ಮವ ಸ್ವೀಕರಿಸಿ = ಸ್ವಾಮಿಭೃತ್ಯನ್ಯಾಯದಿಂದ ತನ್ನ ಪ್ರೇರಣೆಯಿಂದ ಮಾಡಲ್ಪಟ್ಟ ಪುಣ್ಯ ಕರ್ಮಗಳ ಪುನಶ್ಚ ತನ್ನ ಪ್ರೇರಣೆಯಿಂದ ಅವರ ದ್ವಾರಾ ಸ್ವೀಕಾರ ಮಾಡಿದವನಾಗಿ ಅವರಿಗೆ, ಫಲವಿತ್ತು = ತನ್ನ ಸಂದರ್ಶನ ರೂಪವಾದ ಫಲವನ್ನು ಕೊಟ್ಟು, ಪಾಲಿಸುವ = ಸಂರಕ್ಷಣೆಯನ್ನು ಮಾಡತಾನೆ.

**ತಾತ್ಪರ್ಯ :**

ನಿರಂಶರಿಗೆ ಸಾಂಶರ ದ್ವಾರಾ ನಿಯಾಮಕನಾಗಿ ಪುಣ್ಯ ಕರ್ಮಗಳ ಮಾಡಿಸಿ, ಅವುಗಳನ್ನು ಸ್ವೀಕರಿಸಿ, ಫಲಕೊಡುವೋಪಾದಿಯಲಿ ದೇವತೆಗಳಿಗೆ ಸ್ವೋತ್ತಮ ದೇವತೆ ತತ್ತ್ವನಿಯಾಮಕರ ಮಾಡಿ, ತದ್ವಾರಾ ಪುಣ್ಯ ಕರ್ಮಗಳನ್ನು ಮಾಡಿಸಿ, ಅವುಗಳನ್ನು ತಾನು ಸ್ವೀಕರಿಸಿ ಫಲಕೊಡತಾನೆ. ಬಿಂಬ ಕ್ರಿಯಾ ಪ್ರತಿಬಿಂಬಕ್ರಿಯಾ–ಎಂದರೆ, ದೇಹದ ನೆರಳು ದೃಷ್ಟಾಂತವೆಂದು ತಾತ್ಪರ್ಯ.

ವಿಶೇಷಾರ್ಥ :

ತ್ರಿವಿಧಜೀವರ ಯೋಗ್ಯತಾನುಸಾರ ಅನಂತಾನಂತ ರೂಪಗಳಿಂದ ಸ್ವರೂಪದಲಿ, ಬಾಹ್ಯದಲಿ ಇದ್ದು, ಸಾಧನ ಮಾಡಿ ಮಾಡಿಸಿ, ಸ್ವರೂಪ ಅಭಿವ್ಯಕ್ತರೂಪವಾದ ಫಲವಿತ್ತು ಪಾಲಿಸುತ್ತಾನೆ. ಅವರವರ ಅನಾದಿ ಯೋಗ್ಯತಾ ಅನುಸರಿಸಿ, ಕರ್ಮಗಳು ಮಾಡಿಸಿ, ಅದರನ್ನು ತೆಗೆದುಕೊಂಡು, ಅದಕ್ಕೆ ದಾವ ಫಲಕೊಡಬೇಕೋ ಅದರನ್ನ ಕೊಡುತಾನೇ ಹೊರತು ನಿಮಿತ್ತವಿಲ್ಲದೇ ಫಲಕೊಡೋದಿಲ್ಲ ಎಂತ ತಾತ್ಪರ್ಯ. ||೩೦||

(೨) "ಭಾವಪ್ರಕಾಶಿಕೆ" ವ್ಯಾಖ್ಯಾನ :–

ಶ್ರೀಪರಮಾತ್ಮನು ಭಕ್ತಜನರಲ್ಲಿ ಪರಮಪ್ರೀತಿಯನ್ನು ಮಾಡುವನು ಎಂಬುದನ್ನು ವಿಶದ ಮಾಡುವುದಕ್ಕಾಗಿ ಭಕ್ತಿಯೋಗಿಗಳೆಂದೆನಿಸಿ. ಭಕ್ತಾಗ್ರೇಸರಾದ ಬ್ರಹ್ಮಾದಿ ದೇವತೆಗಳಲ್ಲಿ ಕರುಣಾಸಮುದ್ರನಾದ ಶ್ರೀಪರಮಾತ್ಮನ ಕಾರುಣ್ಯವನ್ನು ಈ ಪದ್ಯದಿಂದ ಹೇಳುತ್ತಾರೆ.

ಕರುಣಾಸಮುದ್ರನಾದ ಶ್ರೀಪರಮಾತ್ಮನು ತನ್ನ ಅನಂತಾನಂತರೂಪಗಳನ್ನು ತತ್ವಾಭಿಮಾನಿಗಳಾದ ಬ್ರಹ್ಮಾದಿ ದೇವತೆಗಳಲ್ಲಿ, ಹರವಿ ಅಂದರೆ: ಮೇಲೆ ಹೇಳಿದ ಪ್ರಕಾರ ಅನಂತ ರೂಪಗಳಿಂದ ಸಕಲ ತತ್ತ್ವ ಪತಿಗಳಾದ ಬ್ರಹ್ಮಾದಿಗಳಲ್ಲಿದ್ದು, ೨೪ ತತ್ತ್ವಗಳಲ್ಲಿ ತತ್ಪತಿಗಳಾಗಿದ್ದು, ಚಕ್ಷು, ಶ್ರೋತ್ರಾದಿಗಳಿಂದ ಸಕಲ ಪ್ರಾಣಿಗಳು ಮಾಡಬೇಕಾದ ಕೃತ್ಯಗಳನ್ನು ಬ್ರಹ್ಮಾದಿ ತತ್ಪತಿ ದೇವತೆಗಳೊಳಗಿದ್ದು, ತಾನು ಮಾಡಿಸಿ, ಅವರಿಂದ ಮಾಡಿಸುವನು ಎಂದು ಒಂದರ್ಥ. ಸತ್ಯಲೋಕ, ಸ್ವರ್ಗಲೋಕಾದಿಗಳಲ್ಲಿ ವಾಸಮಾಡುತ್ತಿರುವ ಬ್ರಹ್ಮ ರುದ್ರೇಂದ್ರಾದಿ ಸಕಲ ದೇವತೆಗಳಲ್ಲಿ ತತ್ತದಾಕಾರನಾಗಿ ತಚ್ಛಬ್ದ ವಾಚ್ಯನಾಗಿ ಅನಂತಾನಂತ ರೂಪಗಳಿಂದ ಅವರಲ್ಲಿರುವನು. ಹೇಗೆಂದರೆ, ಬ್ರಹ್ಮದೇವರಲ್ಲಿ "ಬ್ರಹ್ಮ" ಎಂಬ ಪದವನ್ನು ಅಕ್ಷರ ಸಂಖ್ಯಾ ಮಾಡಿದರೆ, ಬ್ರ = ಬ + ರ = ೩ + ೨ = ೫, ಹ್ಮ = ಹ + ಮ = ೮ + ೫ = ೧೩. ಇದನ್ನು ವಾಮಾಂಕ ಮಾಡಿದರೆ, ೩೧೫ ರೂಪಗಳಾಗುವುವು. ಬ್ರಹ್ಮಾಂತರ್ಗತ ವಾಸುದೇವಮೂರ್ತಿ.

ಇದರ ಅಕ್ಷರ ಸಂಖ್ಯಾ ವಾ=೪, ಸು=೭, ದೇ=೩ ಮತ್ತು ವ=೪. ವಾಮಾಂಕರೀತ್ಯಾ ೪೩೭೪ ಆದವು. ಇತರ ಬೇರೆ ಬ್ರಹ್ಮಾದಿಗಳ ಪಂಚಭೌತಿಕ ದೇಹದಲ್ಲೂ, ೨೪ ತತ್ತ್ವಗಳು, ತತ್ಪತಿದೇವತೆಗಳು, ಅವರುಗಳಲ್ಲಿ ಮೇಲೆ ಹೇಳಿದ ಪ್ರಕಾರ ೧೩೮೨೪ ರೂಪಗಳು. ಇದರಂತೆ ಅವರೊಳಗೆ ಇರುವ ತತ್ವಾಭಿಮಾನಿ ದೇವತೆಗಳಲ್ಲಿ ಒಬ್ಬೊಬ್ಬ ದೇವತೆಯಲ್ಲಿಯೂ ಯಥಾಪ್ರಕಾರ ರೂಪಗಳು. ಹೀಗೆ ತತ್ವಾಭಿಮಾನಿ ದೇವತೆಗಳಿಗೂ ಅನಂತರೂಪಗಳನ್ನು ಕೊಟ್ಟು, ತಾನು ರುದ್ರಾದಿ ಒಬ್ಬೊಬ್ಬರಲ್ಲೂ ಅನಂತಾನಂತರೂಪದಿಂದಿದ್ದು, ಅವರು ಮಾಡಬೇಕಾದ ಕಾರ್ಯಗಳನ್ನು ತಾನೇ ಮಾಡುವನು. ಅಂದರೆ, ತತ್ವಾಭಿಮಾನಿಗಳಲ್ಲಿದ್ದು, ತತ್ತ್ವಕಾರ್ಯಗಳನ್ನು ಮಾಡಿಸುವನು. ಬ್ರಹ್ಮದೇವರೊಳಗಿದ್ದು ಸೃಷ್ಟಿ ಮಾಡುವನು. ರುದ್ರ ದೇವರೊಳಗಿದ್ದು ಸಂಹಾರ ಮಾಡುವನು. ಇಂದ್ರ ದೇವರಲ್ಲಿದ್ದು ಸ್ವರ್ಗವನ್ನು ಪಾಲಿಸುತ್ತಾ, ದುಷ್ಟನಿಗ್ರಹ ಮಾಡಿ, ಶತಾಶ್ವಮೇಧವನ್ನು ಮಾಡುವನು. ಈ ಕಾರ್ಯಗಳನ್ನು ಅಂತರ್ಯಾಮಿಯಾಗಿ ತಾನು ಮಾಡಿ, ಅವರಿಂದಲೂ ಮಾಡಿಸಿ, ಸೃಷ್ಟಿಕರ್ತ ಬ್ರಹ್ಮ, ಸಂಹಾರಕರ್ತ ರುದ್ರ, ವೃತ್ರಾಸುರನನ್ನು ಇಂದ್ರನು ಸಂಹರಿಸಿದನು. ೧೦೦ ಅಶ್ವಮೇಧಗಳನ್ನು ಮಾಡಿದನು. ರುದ್ರದೇವರು ತ್ರಿಪುರಾಸುರನನ್ನು ಸಂಹರಿಸಿದರೆಂದು–ಇವೇ ಮೊದಲಾದ ಕೀರ್ತಿಯನ್ನು ಅವರಿಗೆ ಕೊಡಿಸಿ, ಅವರಿಂದ ಮಾಡಿಸಿದ ಪುಣ್ಯಕರ್ಮಗಳನ್ನು ತಾನು ಸ್ವೀಕರಿಸಿ, ಇಹದಲ್ಲಿ ಅವರವರ ಯೋಗ್ಯತಾನುಸಾರವಾಗಿ ಫಲಗಳನ್ನು ಕೊಟ್ಟು, ಮುಕ್ತಿಯಲ್ಲಿಯೂ ತಾರತಮ್ಯ ಪ್ರಕಾರ ಬ್ರಹ್ಮಾದಿಗಳಿಗೆ ಆನಂದವನ್ನುಂಟುಮಾಡಿಸುವನು. ಆನಂದವನ್ನೂ ಕೊಡಿಸುವುದರಿಂದಲೇ– "ಕಾರುಣ್ಯಸಾಗರ"ನೆಂದರು. ಇಷ್ಟುಮಾಡಿದರೂ, "ಅಕರ್ತ"ನೆಂದು ಪರಮಾತ್ಮನಿಗೆ ಹೆಸರು. ಅದೇಕೆಂದರೆ–"ಅಕರ್ತಾಕ್ಲಿಷ್ಟಕಾರಿತ್ವಾತ್" ಅಂದರೆ, ಎಷ್ಟು ಕಾರ್ಯವನ್ನು ಮಾಡುತ್ತಿದ್ದರೂ, ಲೇಶವಾದ ಕಾರ್ಯಪ್ರಯುಕ್ತವಾದ ಆಯಾಸವಿಲ್ಲದೇ ಇರುವುದರಿಂದಲೇ, "ಅಕರ್ತ" ನಾಮಕನು. ಇದನ್ನೇ ದಾಸರಾಯರು "ಬನ್ನಪಡದೆಲೆ"–ಎಂಬ ಪದದಿಂದ ತಿಳಿಸಿರುವರು. ಶ್ರಮವಿಲ್ಲದೆ ಕಾರ್ಯಗಳನ್ನು ಮಾಡಿ ಮಾಡಿಸುವನೆಂದರ್ಥ ॥೩೦॥

## (೩) ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ)

"ತನ್ನ"–ಇತಿ. ಹರಹಿ=ಹರವಿ. "ನಾನಾರೂಪಧರೋಽಹಂ ವೈ ನಾನಾ ದೇವೇಷು ಸಂಸ್ಥಿತಃ॥ ಯದಾ ದೇವಾಃ ಮಹಾ ಯಜ್ಞಾನ್ ವಿತನ್ವಂತಿ ಸಹಸ್ರಶಃ ॥ ತದಾಽಹಮೇವ ಸರ್ವೇಷಾಂ ಯಜ್ಞಭೋಕ್ತಾ ಭವಾಮಿ ವೈ ॥ ಅಹಮಗ್ನಿರಹಂ ಭಾನುಃ ಅಹಂ ಸೋಮೋ ಬೃಹಸ್ಪತಿಃ॥ ಬ್ರಹ್ಮಾವಾಯುಃ ತತೋ ರುದ್ರಃ ವರಣೋ ಮಿತ್ರ ಏವಚ॥ ಇಂದ್ರೋಽಶ್ವಿನೌ ಚ ವಸವೋ ವಿಶ್ವೇದೇವಾ ಅಹಮೇವತಃ ॥ ಯಜಮಾನೋ ಹವಿಸ್ಸ್ತೋಽಹಂ ಸರ್ವಂ ಸರ್ವಸ್ಥಿತಾ ಯತಃ"॥ ಇತಿ **ದ್ವಾದಶಾಧ್ಯಾಯ ವಿಷ್ಣು ರಹಸ್ಯೇಃ** ||೩೦||

**ಕನ್ನಡಾರ್ಥ :—**

ಅಗಮ್ಯಮಹಿಮನಾದ ಶ್ರೀ ಪರಮಾತ್ಮನು ತನ್ನ ಅನಂತಾನಂತ ರೂಪಗಳನ್ನು ವಿಸ್ತರಿಸಿ, ಹಿರಣ್ಯಗರ್ಭ ಮುಂತಾದ ದೇವತೆಗಳಲ್ಲಿ ವ್ಯಾಪ್ತರೂಪದಿಂದ ಇದ್ದು, ಅವರ ದ್ವಾರಾ ಅವರವರಿಗೆ ನಿಯತವಾದ ಸಮಸ್ತ ಕ್ರಿಯಾ ವಿಶೇಷಗಳನ್ನೂ ತಾನೇ ಮಾಡಿ, ಅವರ ಮೂಲಕ ಮಾಡಿಸುತ್ತಿರುವನು. ಇದರಿಂದ ಅವನಿಗೆ ಲವಲೇಶವಾದರೂ ಶ್ರಮವಾಗಲೀ, ಕ್ಲೇಶವಾಗಲೀ ಇಲ್ಲವೇ ಇಲ್ಲ. ಆಯಾ ವ್ಯಾಪಾರಗತ ಸಾರಭಾಗವನ್ನು(ಸ್ವಾಖ್ಯರಸ) ತಾನು ಸ್ವೀಕರಿಸಿ, ಆಯಾ ದೇವತೆಗಳಿಗೆ ಫಲವಿತ್ತು ಸಂರಕ್ಷಿಸುವನು,

ಶ್ರೀ ಪರಮಾತ್ಮನು ಅನಂತಾನಂತರೂಪಧರನು. ತತ್ತನ್ನಾಮಕನಾಗಿ ತತ್ತಶ್ಚಬ್ದವಾಚ್ಯನಾಗಿದ್ದುಕೊಂಡು, ಅಖಿಳ ವ್ಯಾಪಾರಗಳನ್ನೂ ಮಾಡಿ ಮಾಡಿಸುವನು. ಇದಕ್ಕೆ **ವಿಷ್ಣುರಹಸ್ಯದ** ಹನ್ನೆರಡನೆಯ ಅಧ್ಯಾಯಗತ ಹರಿಯ ವಾಕ್ಯಗಳೇ ಪ್ರಮಾಣವು.

"ನಾನಾ ರೂಪಗಳನ್ನು ಧರಿಸಿ, ಸಮಸ್ತ ದೇವತಾವರ್ಗದಲ್ಲಿ ನಾನಿರುತ್ತೇನೆ. ಬಹು ಸಂಖ್ಯಾಕವಾದ ಮಹಾಯಜ್ಞಗಳನ್ನು ಆ ದೇವತೆಗಳು ಮಾಡುತ್ತಿರುವಾಗ, ಅವರ ಯಜ್ಞ ಫಲವೆಲ್ಲವನ್ನೂ ನಾನೇ ಸ್ವೀಕರಿಸತಕ್ಕ

ವನು. ನಾನೇ ಪರಮಮುಖ್ಯವೃತ್ತಿಯಿಂದ, ಅಗ್ನಿ, ಸೂರ್ಯ, ಚಂದ್ರ, ಬೃಹಸ್ಪತಿ, ಬ್ರಹ್ಮ, ವಾಯು, ರುದ್ರ, ವರುಣ, ಮಿತ್ರ, ಇಂದ್ರ, ಅಶ್ವಿನೀ ದೇವತೆಗಳು, ವಸು, ವಿಶ್ವೇದೇವಾ, ಯಜಮಾನ ಇತ್ಯಾದಿ ಶಬ್ದಗಳಿಂದ ವಾಚ್ಯ ನಾಗಿದ್ದೇನೆ. ನಾನು ನಿಖಿಳ ಪ್ರಾಣಿಸ್ಥಿತನಾಗಿರುವುದರಿಂದಲೇ ಸರ್ವನಾಮ ಗಳಿಂದ ವಾಚ್ಯನು"-ಇದೇ ಶ್ರೀಹರಿಯ ವಚನರೂಪನಾದ ಪ್ರಮಾಣ ॥೩೦॥

(೪) **"ಗುರುಹೃದಯಪ್ರಕಾಶಿಕೆ"-ವ್ಯಾಖ್ಯಾನ :-**

ಕರುಣಾಸಮುದ್ರನಾದ ದೇವರು ತನ್ನ ಅನಂತಾನಂತ ರೂಪಗಳನ್ನು ಬ್ರಹ್ಮ ಮೊದಲಾದ ಸರ್ವಜೀವರಲ್ಲೂ, ಜಡದಲ್ಲೂ ಸಹ ಹರಹಿ, ಎಂದರೆ ವ್ಯಾಪ್ತವಾಗಿರಿಸಿ, ಆಯಾಯ ಜೀವರ ಸರ್ವ ಕ್ರಿಯೆಗಳನ್ನೂ, ಬನ್ನಪಡದಲೆ-ಅಂದರೆ ಶ್ರಮ ವಿಕಾರ ಹೊಂದದೆ, ಪ್ರೇರಣೆ ಮಾಡಿಸಿ, ಸಮಸ್ತರನ್ನೂ ಕೃತ ಕೃತ್ಯರೆನ್ನಿಸಿ, ಪುಣ್ಯಕರ್ಮ ತತ್ಫಲಸಹಾ ಸ್ವೀಕರಿಸಿ, ತತ್ತದ್ಯೋಗ್ಯಸ್ವೋಚ್ಛಿಷ್ಟ ಕೊಟ್ಟು ಪಾಲಿಸುವನೆಂದರ್ಥ ॥೩೦॥

# ಸರ್ವವ್ಯಾಖ್ಯಾನಸಾರಸಂಗ್ರಹ

(೧) ಮೂಲರೂಪಿ ಶ್ರೀಮನ್ನಾರಾಯಣನು ಅನಂತ ಕಲ್ಯಾಣಗುಣ ಗಣ ಪೂರ್ಣನು. ಅಗಮ್ಯ ಮಹಿಮನಾದ ಆ ಪುರುಷೋತ್ತಮನು ಸ್ವಾಭಿನ್ನ ಗಳಾದ ಅನಂತಾನಂತ ರೂಪಧರನು. ಭಗವದ್ವ್ಯಾಪರಗಳನ್ನು ನಿರ್ವಹಿಸ ಲೋಸುಗ ಸಮಸ್ತ ಚೇತನ ವಸ್ತುಗಳಲ್ಲಿ ತನ್ನ ಅನಂತಾನಂತ ರೂಪಗಳಿಂದ ವ್ಯಾಪ್ತನಾಗಿರುವನು.

(೨) ಚತುರ್ಮುಖ ಬ್ರಹ್ಮಾದಿ ದೇವತೆಗಳಿಂದ ಪ್ರಾರಂಭಿಸಿ ನಿಖಿಳ ದೇವತಾ ವರ್ಗದಲ್ಲಿ ಸರ್ವತ್ರ ವ್ಯಾಪ್ತನಾಗಿ ಅವರಲ್ಲಿ ಅನಂತಾನಂತ ರೂಪ ಗಳನ್ನು ವಿಸ್ತರಿಸಿ (ಬಿತ್ತರಿಸಿ) ವಿದ್ಯಮಾನನಾಗಿರುವನು.

(೩) ಆ ದೇವತಾ ಸಮೂಹದಲ್ಲಿ ತತ್ತನ್ನಾಮಕನಾಗಿ, ತತ್ತಶ್ಶಬ್ದ ವಾಚ್ಯನಾಗಿ ತದಾಕಾರ, ತದ್ರೂಪಿಯಾಗಿ, ಅಂತಸ್ಥಿತನಾಗಿ ಇದ್ದುಕೊಂಡು, ಬಿಂಬರೂಪದಿಂದ, ಆಯಾಯ ದೇವತೆಗಳ ನಿಯತವಾದ ಸಮಸ್ತ ವ್ಯಾಪಾರ ಗಳನ್ನೂ ತಾನೇ ಬಿಂಬಕ್ರಿಯಾದ್ವಾರ ಮಾಡಿ, ಆ ದೇವತೆಗಳ ದ್ವಾರಾ ಮಾಡಿ ಸುವನು. ತತ್ತ್ವಾಭಿಮಾನಿ ದೇವತೆಗಳಲ್ಲಿ ಬಿಂಬನಾಗಿ ಆಯಾಯ ತತ್ತ್ವ ಕಾರ್ಯಗಳನ್ನು ಮಾಡಿ ಮಾಡಿಸುತ್ತಿರುವನು.

(೪) ಸರ್ವಚೇಷ್ಟಾಪ್ರವರ್ತಕನಾದ, ಸರ್ವಪ್ರೇರಕನಾದ ಆ ಪರ ಮಾತ್ಮನಿಗೆ ಇಷ್ಟು ವ್ಯಾಪಾರ ವಿಶೇಷಗಳನ್ನು ಅನಂತಾನಂತ ರೂಪಗಳಿಂದ ಅಂತರ್ಬಹಿಶ್ಚ ವ್ಯಾಪ್ತನಾಗಿ ತಾನೇ ಮುಖ್ಯ ಪ್ರವರ್ತಕನಾಗಿ ಮಾಡಿಸುತ್ತಿ ದ್ದರೂ, ತತ್ಸಂಬಂಧವಾದ ಶ್ರಮವಾಗಲೀ ವಿಕಾರಾದಿಗಳಾಗಲೀ ಲವಲೇಶ ವಾದರೂ ಇಲ್ಲ. ಇಂತು, ನಿರಾಯಾಸವಾಗಿ, ನಿರ್ವಿಕಾರನಾಗಿ ಜಗದ್ವ್ಯಾಪಾರ ಗಳನ್ನು ಲೀಲಾಜಾಲವಾಗಿ ನಡೆಯಿಸುತ್ತಿರುವ ಆ ಸರ್ವನಿಯಾಮಕನಾದ ಶ್ರೀ ಪರಮಾತ್ಮನಿಗೆ **"ಅಕರ್ತಾ"** ಎಂದು ಹೆಸರು. **"ಅಕರ್ತಾಕ್ಲಿಷ್ಟಕಾರಿ ತ್ವಾತ್"**–ಎಂಬ ಪ್ರಮಾಣಾನುಸಾರವಾಗಿ, ಅಕ್ಲಿಷ್ಟ=ಯಾವ ಕಷ್ಟ, ಅಂದರೆ ಶ್ರಮವೂ ಇಲ್ಲದೇ, ಕಾರಿತ್ವಾತ್=ಕಾರ್ಯ ನಿರ್ವಹಣೆ ಮಾಡುವುದರಿಂದ, "ಅಕರ್ತಾ"–ಎಂದು ಹೆಸರು. ಇತರರಿಗೆ ಒಂದು ಕೆಲಸ ಮಾಡುತ್ತಿರುವಾಗ ದೈಹಿಕ, ಮಾನಸಿಕ, ಬೌದ್ಧಿಕ ಇತ್ಯಾದಿ ಆಯಾಸಗಳು ಉಂಟಾಗುವುವು. ಇದು ಸಹಜ. ಆದರೆ ನಿರಾಯಾಸವಾಗಿ ಜಗದ್ವ್ಯಾಪಾರಗಳನ್ನು ನಿರ್ವಹಿಸುವ ಅಚಿಂತ್ಯಾದ್ಭುತ ಶಕ್ತಿಯು ಶ್ರೀ ಪರಮಾತ್ಮನ ಸ್ವಾಭಾವಿಕ ಲಕ್ಷಣವಾಗಿದೆ. ಇದರಿಂದ ಬಿಂಬರೂಪಿಯಾದ ಶ್ರೀ ಪರಮಾತ್ಮನು ಸಮಸ್ತ ಜಡಜೀವರಾಶಿ ಗಳಿಂದ ಅತ್ಯಂತ ಭಿನ್ನನಾಗಿದ್ದಾನೆ.

(೫) ಒಂದೊಂದು ರೂಪದಲ್ಲಿ ಅನಂತರೂಪಗಳು, ಒಂದೊಂದು ಗುಣ ದಲ್ಲಿ ಅನಂತಾನಂತ ಗುಣಗಳು, ಒಂದೊಂದು ಕ್ರಿಯೆಯಲ್ಲಿ ಅನಂತ ಕ್ರಿಯಾ ವಿಶೇಷಗಳು. ಇಂತು ಅನಂತಾನಂತ ರೂಪ, ಗುಣ, ಕ್ರಿಯಾವಿಶಿಷ್ಟನಾಗಿ, ಪ್ರತಿರೂಪ, ಗುಣ, ಕ್ರಿಯಾದಿಗಳಲ್ಲಿ ಪರಿಪೂರ್ಣನಾಗಿರುವ ಆ ಅಗಮ್ಯ

ಮಹಿಮೋಪೇತನಾದ ಜಗತ್ಪ್ರಭುವು ಸಮಸ್ತ ದೇವತೆಗಳಲ್ಲೂ ವ್ಯಾಪ್ತರೂಪನಾಗಿದ್ದುಕೊಂಡು, ನಿರಾಯಾಸವಾಗಿ (ಬನ್ನಬಡದೆಲೆ) ಕಾರ್ಯಗಳನ್ನು ಮಾಡಿ, ಮಾಡಿಸಿ, ತಜ್ಜನ್ಯವಾದ ಪುಣ್ಯಕರ್ಮಗಳಲ್ಲಿ ಫಲಪ್ರದನಾಗಿ ತಾನಿದ್ದು, ಸ್ವಾಖ್ಯರೂಪವಾದ ಆ ಕರ್ಮಗತ ಭಗವದ್ರೂಪಗಳಲ್ಲಿ ಸ್ವರಮಣನಾಗಿದ್ದು, ಕ್ರೀಡಿಸುತ್ತಾನೆ. ಇದರಿಂದಲೇ "ಸಮಸ್ತ ದಿವಿಜರ ಪುಣ್ಯ ಕರ್ಮವ ಸ್ವೀಕರಿಸಿ"– ಎಂದು ದಾಸರಾಯರು ಹೇಳಿರುತ್ತಾರೆ. ಆ ಕರ್ಮಲೇಪವಾಗಲೀ, ಆ ಕರ್ಮಫಲಗಳ ಭೋಗವಾಗಲೀ ಆಯಾಯ ಅಧಿಷ್ಠಾನಗತರಾದ ಜೀವರಿಗೇ ಹೊರತು ಬಿಂಬಕ್ರಿಯಾದ್ವಾರಾ ಆ ಕರ್ಮಗಳನ್ನು ಮಾಡುತ್ತಿರುವ ಶ್ರೀ ಪರಮಾತ್ಮನಿಗೆ ಲವಲೇಶವೂ ಇಲ್ಲ. ಅದರ ಆಯಾಯಾ ಕರ್ಮಗಳಲ್ಲಿ, ಕರ್ಮಫಲಗಳಲ್ಲಿ ಅಂತರ್ಗತವಾಗಿರುವ ಸ್ವಾಭಿನ್ನರೂಪಗಳಲ್ಲಿ ಕ್ರೀಡೆಯಾಡುವುದರಿಂದ, "ಸ್ವೀಕರಿಸುವನು"–ಎಂದು ತಾತ್ಪರ್ಯ. ಇಂತು, ಆ ಸಮಸ್ತ ದೇವತಾ ಸಮೂಹದಲ್ಲಿ ಅನಂತಾನಂತ ರೂಪಗಳಿಂದ ವ್ಯಾಪ್ತನಾಗಿದ್ದು, ಸಮಸ್ತ ಪುಣ್ಯಕರ್ಮಗಳನ್ನು ಮಾಡಿ, ಮಾಡಿಸಿ, ತಜ್ಜನ್ಯ ಪುಣ್ಯಫಲಗಳನ್ನು ಆ ದೇವತೆಗಳಿಗೆ ಕೊಟ್ಟು, ಅವರನ್ನು ಪುಣ್ಯವಂತರನ್ನಾಗಿ ಮಾಡಿ, ಸಂರಕ್ಷಿಸುತ್ತಿರುವನು. ||೩೦||

## ಪದ್ಯ (೩೨)

ಮೂಲ :

ಸಾಗರದೊಳಿಹ ನದಿಯು ಜಲಭೇ |
ದಾಗಸದೊಳಿಪ್ಪಬ್ಧ ಬಲ್ಲವು |
ಕಾಗೆಗುಬ್ಬಿಗಳರಿಯಬಲ್ಲದೆ ನದಿಯು ಜಲಸ್ಥಿತಿಯ ||
ಭೋಗಿವರ ಪರಿಯಂಕಶಯನನೊ |
ಳೀ ಗುಣತ್ರಯಬದ್ಧ ಜಗವಿಹ |
ದಾಗಮಜ್ಞರು ತಿಳಿವರಜ್ಞಾನಿಗಳಿಗಳವಡದು|| ||೩೨||

**ಅವತರಣಿಕೆ :**

ಅನೇಕ ನದಿಗಳು ಹರಿಯುತ್ತಾ ಕೊನೆಯಲ್ಲಿ ಸಮುದ್ರವನ್ನು ಸೇರುವುವು. ಅಗಾಧವಾದ ಆ ಜಲರಾಶಿಯನ್ನು ಸೇರಿದರೂ, ನದಿಗಳು ತಮ್ಮ ಪ್ರತ್ಯೇಕತೆಯನ್ನು ಕಳೆದುಕೊಳ್ಳದೇ ಭಿನ್ನ ಭಿನ್ನಗಳಾಗಿಯೇ ಇರುವುವು. ಈ ರಹಸ್ಯವನ್ನು ಆಕಾಶ ಪಥದಲ್ಲಿ ಚಲಿಸುವ ಮೇಘಗಳು ಮಾತ್ರ ಬಲ್ಲವು. ಮೇಘಗಳಿಂದ ಧಾರಾಕಾರವಾಗಿ ಸುರಿಯಲ್ಪಟ್ಟ ಮಳೆಯ ನೀರು ನದಿಯನ್ನು ಸೇರಿ, ಆ ನದಿಗಳೆಲ್ಲವೂ ಸಾಗರವನ್ನು ಸೇರುವುವು. ಈ ವಿಷಯವನ್ನು ಅದೇ ಆಕಾಶದಲ್ಲಿ ಸಂಚರಿಸುವ ಕಾಗೆ ಗುಬ್ಬಿಗಳು ತಿಳಿಯಬಲ್ಲವೇ ? ಎಂದೆಂದಿಗೂ ಇಲ್ಲ. ಅಂತೆಯೇ ಮೂಲಪ್ರಕೃತಿಯ ತ್ರಿಗುಣಗಳಿಂದ ಜನ್ಯವಾದ ಈ ಸಮಸ್ತ ಜಗತ್ತು, ಶೇಷಪರ್ಯಂಕಶಯನನಾದ ಆ ಪರಮಾತ್ಮನನ್ನು ಸೇರಿದರೂ, ಅವನಲ್ಲಿ ಭಿನ್ನಭಿನ್ನವಾಗಿಯೇ ಇರುವುದು. ಇದರಿಂದ ಶ್ರೀ ಪರಮಾತ್ಮನು ಸಕಲ ಚರಾಚರಕ್ಕೆ ಮುಖ್ಯ ಆಶ್ರಯನಾಗಿದ್ದರೂ, ಜಡಜೀವಗಳಿಂದ ಅತ್ಯಂತ ಭಿನ್ನನಾಗಿದ್ದಾನೆ. ಈ ತತ್ತ್ವರಹಸ್ಯವನ್ನು ಶಾಸ್ತ್ರಜ್ಞರಾದ ಕೋವಿದರು ತಿಳಿಯುವರೇ ಹೊರತು, ಭೇದಜ್ಞಾನರಹಿತರಾದ, ತಮೋಯೋಗ್ಯರಾದ ಅಜ್ಞಾನಿಗಳು ಎಂದೆಂದೂ ತಿಳಿಯುವುದಿಲ್ಲ ಎಂದು ವಿವರಿಸುತ್ತಾರೆ–**"ಸಾಗರದೊಳಿಹ"** ಎಂಬ ಪ್ರಸಕ್ತ ಸಂಧಿಗತ ೩೨ನೆಯ ಈ ಪದ್ಯದಿಂದ. ॥೩೨॥

**ಪ್ರತಿಪದಾರ್ಥ :**

**ಸಾಗರದೊಳು**=ಸಮುದ್ರದಲ್ಲಿ **ಇಹ**=ಕಲೆತು ಇರುವ **ನದಿಯ ಜಲ**=ಪ್ರತ್ಯೇಕವಾದ ನದಿಗಳ ನೀರಿನ **ಭೇದ**=ಸಮುದ್ರೋದಕದಲ್ಲಿ ಕಲೆತು ಲವಣ ಜಲವಾಗದೇ ಭಿನ್ನಭಿನ್ನಗಳಾಗಿ ಇರತಕ್ಕ ವೈಲಕ್ಷಣ್ಯವನ್ನು (ಭೇದವನ್ನು) **ಆಗಸದೊಳು**=ಆಕಾಶದಲ್ಲಿ **ಇಪ್ಪ**=ಸಂಚರಿಸುತ್ತಿರುವ **ಅಬ್ಧ**=ಮೇಘಗಳು (ಅಪ್=ನೀರನ್ನು, ದ=ಕೊಡತಕ್ಕದ್ದು) **ಬಲ್ಲವು**=ಅರಿಯಬಲ್ಲವು. **ಕಾಗೆ ಗುಬ್ಬಿಗಳು**=ಅದೇ ಆಕಾಶದಲ್ಲಿ ಸಂಚರಿಸತಕ್ಕ ಕಾಗೆ, ಗುಬ್ಬಿ ಇತ್ಯಾದಿ ಪಕ್ಷಿಗಳು **ನದಿಯ ಜಲಸ್ಥಿತಿಯ**=

ಸಮುದ್ರದಲ್ಲಿ ಕೂಡಿರುವ ನದಿಯ ಸಿಹಿನೀರನ್ನು **ಅರಿಯಬಲ್ಲದೆ**= ತಿಳಿಯಬಲ್ಲವೇ ? ಎಂದೆಂದಿಗೂ ಇಲ್ಲವೆಂದು ತಾತ್ಪರ್ಯ. **ಭೋಗಿವರ**= ಸರ್ಪಶ್ರೇಷ್ಠನಾದ ಶೇಷದೇವರನ್ನೇ **ಪರ್ಯಂಕ**=ಮಂಚವನ್ನಾಗಿ ಮಾಡಿಕೊಂಡು (ಹಾಸಿಗೆಯ ರೂಪ) **ಶಯನನೊಳು**=ಮಲಗಿರುವ ಶ್ರೀ ಪರಮಾತ್ಮನಲ್ಲಿ **ಗುಣತ್ರಯಬದ್ಧ**=ಸತ್ತ್ವ, ರಜಸ್ತಮೋಗುಣ ಗಳಿಂದ ಬದ್ಧವಾದ **ಈ ಜಗವಿಹುದು**=ಈ ಪ್ರಪಂಚವು ಇರುವುದೆಂಬ ವಿಷಯವನ್ನು **ಆಗಮಜ್ಞರು**=ಸಚ್ಛಾಸ್ತ್ರ ಓದಿದ ಜ್ಞಾನಿಗಳು (ಪಂಚ ಭೇದ, ತಾರತಮ್ಯ ಜ್ಞಾನವನ್ನು ಶಾಸ್ತ್ರಗಳ ದ್ವಾರಾ ಅರಿತ ಕೋವಿದರು) **ತಿಳಿವರು**=ತಿಳಿಯುತ್ತಾರೆ. **ಅಜ್ಞಾನಿಗಳಿಗೆ**=ಭೇದಜ್ಞಾನರಹಿತರಾದ ತಮೋಯೋಗ್ಯರಾದ ಅಜ್ಞಾನಿಗಳಿಗೆ **ಅಳವಡದು**=ಸರ್ವಥಾ ತಿಳಿಯ ಲಾರದು. ॥೩೨॥

## ವ್ಯಾಖ್ಯಾನಗಳು

### (೨) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಸರ್ವ ಚರಾಚರಗಳಲ್ಲಿ ಪರಮಾತ್ಮ ಭಿನ್ನಭಿನ್ನವಾಗಿ ವ್ಯಾಪ್ತನಾಗಿ ಇದ್ದಾನೆ ಎಂಬುದು ಜ್ಞಾನಿಗಳು ತಿಳಿಯುತ್ತಾರೆ. ಅಜ್ಞಾನಿಗಳು ತಿಳಿಯ ಲಾರರು ಎಂತ ಹೇಳುತಾರೆ.

ಸಾಗರದೊಳಿಹ=ಸಮುದ್ರದಲ್ಲಿ ಕಲೆತು ಇರುವ, ನದಿಯ ಜಲ= ನದಿ ಉದಕದ, ಭೇದ=ಸಮುದ್ರೋದಕದಲ್ಲಿ ಕಲೆತು ಲವಣ ಜಲವಾಗದೇ ಭಿನ್ನ ಭಿನ್ನಗಳಾಗಿ ಇರತಕ್ಕ ಭೇದವನ್ನು, ಆಗಸದೊಳಿಪ್ಪ=ಆಕಾಶದಲ್ಲಿ ಸಂಚಾರವಮಾಡುವ, ಅಬ್ಧ ಬಲ್ಲವು=ಮೇಘಗಳು ಅರಿಯಬಲ್ಲವು (ಅಪ್= ನೀರು, ದ=ಕೊಡತಕ್ಕದ್ದು) ನದಿಯ ಜಲಸ್ಥಿತಿಯ=ಸದ್ಯುದಕ ಲವಣ ಸಮುದ್ರದಲ್ಲಿ ಕಲೆತರೂ, ಅದರ ರುಚಿ ಏಕಪ್ರಕಾರವಾಗಿ ಇರುತ್ತದೆ_ ಎಂಬುದು, ಕಾಗೆ ಗುಬ್ಬಿಗಳರಿಯಬಲ್ಲವೆ=ಆಕಾಶದಲ್ಲಿ ಸಂಚಾರ ಮಾಡತಕ್ಕ ಕಾಗೆ, ಗುಬ್ಬಿ ಇತ್ಯಾದಿ ಪಕ್ಷಿಗಳು ತಿಳಿಯಲಾಪವೇ ? ತಿಳಿಯಲಾರವು ಎಂತ

ಅರ್ಥ. ಭೋಗಿವರ=ಸರ್ಪಶ್ರೇಷ್ಠನಾದ ಶೇಷದೇವರ, ಪರಿಯಂಕ ಶಯನದೊಳು=ಮಂಚವನ್ನು ಮಾಡಿಕೊಂಡು, ಶಯನ ಮಾಡುವ ಸಮುದ್ರಕ್ಕೆ ಸಮನಾದ ಶ್ರೀ ಪರಮಾತ್ಮನೊಳು, ನದಿಗಳಿಗೆ ಸಮನಾದ ಪ್ರಾಕೃತಾಪ್ರಾಕೃತ ಗುಣತ್ರಯಗಳು, ಇನ್ನೂ ಯಾವತ್ತು ಸ್ಥಾವರ ಜಂಗಮಗಳು ಇದ್ದ ಕಾಲಕ್ಕೂ, ಈ ಗುಣತ್ರಯ ಬದ್ಧ ಜಗ=ಗುಣತ್ರಯ ಅನಾದಿಯಿಂದ ಗುಣತ್ರಯಾತ್ಮಕ ಲಿಂಗದೇಹದಿಂದ ಬದ್ಧ=ಬದ್ಧನಾಗಿ, ಆ ಕಾರಣವನ್ನು ಹಿಡದು. ಈ ಜಗವು ವರ್ತಮಾನ ಸೃಷ್ಟಿಯಲ್ಲಿ ಕಾರ್ಯಾತ್ಮನಾ ಪರಿಣಮಿಸಿ, ಸಾತ್ವಿಕಾದಿ ಗುಣತ್ರಯದಿಂದ ಸಂಬಂಧಿಸಿ ಅಲ್ಲದೆ, ಜ=ಜನಿಸಲ್ಪಟ್ಟ, ಗ=ಗುಣತ್ರಯ ಸ್ಥೂಲದೇಹದಿಂದ ಜನಿಸಲ್ಪಟ್ಟ ಜೀವಗೆ ಗುಣತ್ರಯಜನಿತ ಸುಖ ದುಃಖಾದಿಗಳು, ಇಹದು=ಇರೋದಾಗಿ ಅದೆ. ಪರಮಾತ್ಮಗೆ ಪ್ರಾಕೃತ ಗುಣತ್ರಯ ಸಂಬಂಧ ಇಲ್ಲ ಎಂತಲೂ, ಜೀವ ಪರಮಾತ್ಮರಿಗೆ ಭೇದ ಎಂತಲೂ, ಅಗಮಜ್ಞರು=ಶಾಸ್ತ್ರ ಓದಿದ ಜ್ಞಾನಿಗಳು, ತಿಳಿವರು=ತಿಳಿಯೋವರಾಗುತಾರೆ. ಅಜ್ಞಾನಿಗಳಿಗಳವಡದು=ಭೇದ ಜ್ಞಾನಹೀನರಾದ ತಮೋಯೋಗ್ಯರಿಗೆ, ಅಳವಡದು=ತಿಳಿಯಲಾರದು.

**ವಿಶೇಷಾರ್ಥ :**

ಕಾಗೆ ಗುಬ್ಬಿಗಳು ಅರಿಯದಿದ್ದರೇ ಸಮುದ್ರದಲ್ಲಿ ನದಿಯ ಜಲ ಭೇದ ರೂಪದಿಂದ ಪ್ರತ್ಯೇಕ ಇಲ್ಲ ಎಂದು ಹೇಳಲಾದೀತೇ ? ಅತ ಏವ ಭೇದ ಸತ್ಯವೂ ತಿಳಿದವರಿಗೆ ಗೋಚರವೇ ಸರಿ. ತಿಳಿಯದವರಿಗೆ ಕ್ಷಾರೋದಕವೇ. ಅಂದರೆ ದುಃಖವೇ ಪ್ರಾಪ್ತಿ ಎಂತ ತಾತ್ಪರ್ಯ. ಶ್ರೀ ಪರಮಾತ್ಮನೊಳಗೆ ಚರಾಚರ ಪ್ರಪಂಚ ಇರೋದಾಗಿ ಅದೆ. ಈ ಚರಾಚರ ಪ್ರಪಂಚದಲ್ಲಿ ಅಂತರ್ಗತನಾಗಿ ಪರಮಾತ್ಮ ಇದ್ದಾನೆ. ಇದರ ಭೇದ ಸ್ವರೂಪ ಅಜ್ಞಾನಿಗಳಾದ ಮಿಥ್ಯಾವಾದಿಗಳು ತಿಳಿಯಲಾರರು. ಸಮುದ್ರ ಸದೃಶನಾದ ಪರಮಾತ್ಮನೇ ಬಲ್ಲ. ನದೀ ಸದೃಶರಾದ ತಮೋಯೋಗ್ಯರು ಅರಿಯರು.

ನದಿಯ ಜಲವೂ ಸಮುದ್ರೋದಕವೂ ಉದಕ ರೂಪದಿಂದಲೇ ಏಕತ್ರ ಇದ್ದ ಕಾಲಕ್ಕೂ ಭಿನ್ನಗಳು ಹ್ಯಾಂಗೋ, ತದ್ವತ್ ಸರ್ವಾಧಿಷ್ಠಾನದಲ್ಲೂ ಪರಮಾತ್ಮ ಮಿಳಿತನಾಗಿ ಇದ್ದ ಕಾಲಕ್ಕೂ ಅಧಿಷ್ಠಾನವೇ ಪರಮಾತ್ಮನಲ್ಲ, ತದ್ಭಿನ್ನ ಎಂತ ತಿಳಿಯತಕ್ಕದ್ದು. ಜೀವನೂ ಭಿನ್ನನೇ, ಅಂದರೆ, ಗುಣತ್ರಯ ಸಂಬಂಧ ದಿಂದ ಸುಖ ದುಃಖಭೋಗ ಜೀವಗೆ ಉಂಟು. ಪರಮಾತ್ಮಗೆ ಇಲ್ಲ. ಏಕೆಂದರೆ ಜೀವ ಸ್ವತಂತ್ರನಲ್ಲ. ಅಪೂರ್ಣ. ಅನಾದಿಯಿಂದ ಗುಣಬದ್ಧ. ಪರಮಾತ್ಮ ಸ್ವತಂತ್ರ. ಪರಿಪೂರ್ಣ. ಪ್ರಾಕೃತಬದ್ಧನಲ್ಲವಾದ ಕಡಿಯಿಂದ ಪರಮಾತ್ಮಗೆ ಗುಣಸಂಬಂಧ ಸುಖ ದುಃಖಾದಿಗಳು ಲೇಪವಿಲ್ಲ. ಜೀವಗೆ ಉಂಟು ಎಂತ ತಾತ್ಪರ್ಯ. ಈ ಪ್ರಕಾರ ಸರ್ವಗತ ಪರಮಾತ್ಮನ ತಿಳಿಯಬೇಕು. ॥೩೨॥

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ :-

ದ್ವೈತ ಮತ ಸಿದ್ಧಾಂತವನ್ನು ಚೆನ್ನಾಗಿ ಬಲ್ಲವರಿಗೆ ಮಾತ್ರವೇ ಮೇಲೆ ಹೇಳಿದ ಭೇದಜ್ಞಾನವು ಸಾಧ್ಯವೇ ಹೊರತು,ಇತರರಿಗೆ ಸಾಧ್ಯವಿಲ್ಲವೆಂಬ ಸದೃಷ್ಟಾಂತವಾಗಿ ನಿರೂಪಣ ಮಾಡುತ್ತಾರೆ. ಸಮುದ್ರದಲ್ಲಿ ಗಂಗಾದಿ ನದಿಗಳು ಕೂಡಿರಲು, ಅಂತರಿಕ್ಷದಲ್ಲಿ ಸಂಚರಿಸುತ್ತಿರುವ ಮೇಘವೃಂದಗಳು ಮಾತ್ರ ನದೀಜಲವನ್ನು ಬೇರ್ಪಡಿಸಿ ಪಾನಮಾಡಬಲ್ಲವಲ್ಲದೆ, ಕಾಗೆ ಗುಬ್ಬಿ ಮೊದಲಾದವು ಸಮುದ್ರದಲ್ಲಿ ಕೂಡಿದ ನದೀಜಲದ ಪರಿಸ್ಥಿತಿಯನ್ನು ಕಾಣಬಲ್ಲವೇ ? ಅದರಂತೆ, ಸಾತ್ವಿಕ, ರಾಜಸ, ತಾಮಸರಾದ ದೇವ, ಮಾನವ, ದಾನವಾದಿಗಳಿಂದಲೂ, ತ್ರಿಗುಣಮಯವಾದ ವಸ್ತುಗಳಿಂದಲೂ ಪೂರ್ಣವಾದ ಈ ಜಗತ್ತು ಶೇಷಪರ್ಯಂಕ ಶಯನನಾದ ಪರಮಾತ್ಮನೊಳಗೆ ಅಡಗಿದ್ದು, ಪರಮಾತ್ಮನಿಂದ ಭಿನ್ನವಾಗಿವೆ ಎಂಬ ವಿಷಯವನ್ನು ತಿಳಿಯಬೇಕಾದರೆ, ಮಧ್ವಮತ ಸಿದ್ಧಾಂತ ಶಾಸ್ತ್ರಗಳನ್ನು ಚೆನ್ನಾಗಿ ತಿಳಿದವರಿಗಲ್ಲದೆ, ಇತರ ಅಜ್ಞಾನಿಗಳಿಗೆ ಗೋಚರವಾಗುವುದೇ ? ಎಂದೆಂದಿಗೂ ತಿಳಿಯಲಾರರೆಂದು ತಾತ್ಪರ್ಯ. ॥೩೨॥

## (೩) "ಭಾವದರ್ಪಣಟೀಕಾ" ವ್ಯಾಖ್ಯಾನ:-

ಪರಮಾತ್ಮನುದರದಲ್ಲಿ ಗುಣತ್ರಯದಿಂದ ಬದ್ಧವಾದ ಜಗತ್ತು ಇರೋದು ಶಾಸ್ತ್ರಜ್ಞರೇ ಬಲ್ಲರು. ಇತರರು ಅರಿಯರೆಂದು ಹೇಳುತ್ತಾರೆ- "ಸಾಗರೇತಿ"॥ ॥೩೨॥

## (೩)´ ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :-

"ಸಾಗರೇತಿ"॥ ಆಗಸ-ಅಕಾಶ. "ಸ್ವಕೀಯಮುದಕಂ ನದ್ಯಃ ಸಮುದ್ರೇ ನೈವ ಜಾಯತೇ॥ ವಾಯುಸ್ತು ತತ್ ಪೃಥಕ್ ಜ್ಞಾತ್ವಾ ಮೇಘೇಕೃತ್ವಾ ಪ್ರವರ್ಷತಿ ಇತ್ಯುಕ್ತೇಃ ನ ತದ್ ಭೇದಜ್ಞಾನಂ ತತ್ತ್ರದೇವಾಧಮುಮೋಷಾ ನಾಮ್"॥ ಇಹದು = ಇರುವುದು. ಅಳವಡದು = ತಿಳಿಯದು ॥೩೨॥

## ಕನ್ನಡಾನುವಾದ :

ನದಿಗಳ ಜಲವೆಲ್ಲವೂ ಸಮುದ್ರದಲ್ಲಿ ಆಶ್ರಯ ಹೊಂದುವುವು. ಅಂತೆಯೇ ತ್ರಿಗುಣಾತ್ಮಕವಾದ ಈ ಜಗತ್ತು ನಾರಾಯಣನಲ್ಲಿ ಆಶ್ರಯಿಸಿದೆ. ಸ್ವಾಭಾವಿಕವಾಗಿ ಆ ನದಿಗಳು ಸಮುದ್ರದಲ್ಲಿ ಬೇರೆಬೇರೆಯಾಗಿ ಇರುವುವು. ಹಾಗೆಯೇ ನಾರಾಯಣನಲ್ಲಿ ಆಶ್ರಯವನ್ನು ಹೊಂದುವ ವಿಶ್ವವು ಈಶನಿಂದ ಭಿನ್ನವಾಗಿಯೇ ಇರುವುದೆಂಬ ವಿಷಯವನ್ನು ಬಲ್ಲ ಜ್ಞಾನಿಗಳು ಬಲ್ಲರೇ ಹೊರತು, ಅಜ್ಞರು ತಿಳಿಯಲಾರರು ಎಂಬುದನ್ನು ಸಾಗರವನ್ನು ಸೇರುವ ನದಿಗಳ ದೃಷ್ಟಾಂತದಿಂದ ವಿಶದೀಕರಿಸುತ್ತಾರೆ.

ಸಮುದ್ರದಲ್ಲಿ ಸೇರಿರುವ ನದಿಗಳು ತಮ್ಮ ನೀರನ್ನು ಬೇರ್ಪಡಿಸಲಾರವು ಆದರೆ ಅಕಾಶಗತ ವಾಯುವು ಆ ನದಿಗಳ ನೀರನ್ನು ಪೃಥಕ್ಕರಿಸಿ, ಮೇಘಗಳಲ್ಲಿಟ್ಟು, ಮಳೆಯ ರೂಪದಿಂದ ಅದೇ ನೀರನ್ನು ಸುರಿಸುತ್ತದೆ. ಇದರಂತೆ, ಅಧಮ ಬುದ್ಧಿಯುಳ್ಳವರಿಗೆ ಜಡ-ಜೀವ-ಪರಮಾತ್ಮರ ಪರಸ್ಪರ ಭೇದ ಜ್ಞಾನವು ಹಿಡಿಸುವುದಿಲ್ಲ. ಜ್ಞಾನಿಗಳು ಮಾತ್ರ ಈ ವಿಷಯವನ್ನು ತಿಳಿಯ ಬಲ್ಲರು-ಎಂತ ತಾತ್ಪರ್ಯ ॥೩೨॥

(೪) "ಗುರುಹೃದಯಪ್ರಕಾಶಿಕೆ"–ವ್ಯಾಖ್ಯಾನ :-

ದೇವರೊಳಗೆ ಈ ಜಗತ್ತು ಪೃಥಕ್ಕಾಗಿರುವ ವಿವರ, ವೇದಶಾಸ್ತ್ರ ತಿಳಿಯದವರಿಗೆ ಗೊತ್ತಾಗುವುದಿಲ್ಲವೆಂದು ದೃಷ್ಟಾಂತ ಸಹ ಬೋಧಿಸುತ್ತಾರೆ. ಸಮುದ್ರದಲ್ಲಿ ನದಿಗಳ ಜಲ ಬೇರೆಬೇರೆಯಾಗಿರುವ ಬಗೆ, ಎಂದರೆ ವಿಧಾನವನ್ನು ಆಗಸವೆಂಬ ಆಕಾಶದಲ್ಲಿರುವ ಅಬ್ದವೆಂಬ ಮೇಘಗಳು ಬಲ್ಲಿವು. ಕಾಗೆ, ಗುಬ್ಬಿ ಮುಂತಾದ ಪಕ್ಷಿಗಳು ಆಕಾಶದಲ್ಲಿದ್ದರೂ ಅರಿಯವು. ಅದರಂತೆ, ಭೋಗಿಗಳೆಂಬ ಸರ್ಪಗಳಿಗೆ ವರ–ಶ್ರೇಷ್ಠನಾದ ಶೇಷದೇವರೇ ಮಂಚವಾಗಿರುವ ದೇವರಲ್ಲಿ, ತ್ರಿಗುಣಬದ್ಧವಾಗಿರುವ ಜಗತ್ತನ್ನು ಪೃಥಕ್ಕಾಗಿ ಆಗಮಜ್ಞರೆಂಬ ವೇದಶಾಸ್ತ್ರ ತಿಳಿದವರು ಬಲ್ಲರು. ಅಜ್ಞರಿಗೆ ತಿಳಿಯಲು ಶಕ್ಯವಲ್ಲವೆಂದು ನಿರೂಪಿಸುತ್ತಾರೆ. ನೀರು ಬಿಟ್ಟು ಹಾಲು ಮಾತ್ರ ಸೇವಿಸುವ ಹಂಸದಂತೆಯೂ, ಉಪ್ಪು ನೀರು ಬಿಟ್ಟು ಸಿಹಿನೀರು ಮಾತ್ರ ಹೀರುವ ಮೇಘದಂತೆಯೂ, ದೇವರಲ್ಲಿ ಬೇರೆಯಾಗಿಯೇ ಇರುವ ಜಗತ್ತಿನ ಜ್ಞಾನ ಮಧ್ವಾಗಮ ಬಲ್ಲವರಿಗೆ ಅಲ್ಲದೆ ಇತರರಿಗಿಲ್ಲವೆಂದು ತಾತ್ಪರ್ಯ. ||೩೨||

# ಸರ್ವವ್ಯಾಖ್ಯಾನಸಾರಸಂಗ್ರಹ

(೧) ಸಮಸ್ತ ಜೀವರಾಶಿಗಳಿಗೂ ಮತ್ತು ಪಂಚಭೇದ ಯುಕ್ತವಾದ ಈ ಬ್ರಹ್ಮಾಂಡರೂಪವಾದ ಜಗತ್ತಿಗೂ ಶ್ರೀ ಪರಮಾತ್ಮನೇ ಮುಖ್ಯ ಆಶ್ರಯನು. ಈ ಜಗತ್ತಿನ ಸೃಷ್ಟಿಗೆ ಉಪಾದಾನಕಾರಣವಾದ ಮೂಲಪ್ರಕೃತಿಯ ತ್ರಿಗುಣಗಳ ವೈಷಮ್ಯದಿಂದ ಈ ಬ್ರಹ್ಮಾಂಡದ ಉತ್ಪತ್ತಿ. ಪ್ರಳಯ ಕಾಲದಲ್ಲಿ ಚತುರ್ವಿಂಶತಿ ತತ್ತ್ವಗಳಲ್ಲಿ ಜನ್ಯ ತತ್ತ್ವಗಳು ಆಯಾಯ ಜನಕ ತತ್ತ್ವಗಳಲ್ಲಿ ಕ್ರಮವಾಗಿ ಲಯಹೊಂದಿ, ಕೊನೆಯಲ್ಲಿ ಸೂಕ್ಷ್ಮರೂಪದಲ್ಲಿ ಶ್ರೀ ಪರಮಾತ್ಮನಲ್ಲಿ ಆಶ್ರಯ ಹೊಂದುವುದು.

(೨) ಸಮಸ್ತ ಜೀವರೂ ಅನಾದಿಕಾಲದಿಂದ ಲಿಂಗದೇಹದಿಂದ ಬದ್ಧರಾಗಿದ್ದಾರೆ. ಈ ಲಿಂಗದೇಹವು ತ್ರಿಗುಣಾತ್ಮಕವಾದದ್ದು. ಷೋಡಶಕಳಾಯುಕ್ತವಾದದ್ದು. ಈ ಪ್ರಾಕೃತ ಸತ್ತ್ವ, ರಜಸ್ತಮೋಗುಣಗಳೆಂಬ ಗುಣ

ತ್ರಯಗಳ ಸಂಬಂಧವಿರುವುದರಿಂದಲೇ ಜೀವನು ಜನನಮರಣಾಖ್ಯವಾದ ಈ ಸಂಸಾರವೆಂಬ ಬಂಧನದಲ್ಲಿ ಸಿಲುಕಿರುವನು. ಅನಾದಿಕರ್ಮ ಬೀಜಭೂತವಾದ ಲಿಂಗದೇಹಗತ ತ್ರಿಗುಣಗಳ ಭವಣೆಯೇ ಸಂಸಾರಕ್ಕೆ ಕಾರಣವು. ಚರಾಚರಾತ್ಮಕವಾದ ಈ ಜಗತ್ತಿನಲ್ಲಿ ಸ್ವತ ಏವ ಪ್ರವೃತ್ತಿ ಶಕ್ತಿಯಿಲ್ಲದ ಜಡವಸ್ತುಗಳೂ, ಸ್ಥಾವರ ಜಂಗಮ ರೂಪದಲ್ಲಿರುವ ಚೇತನವಸ್ತುಗಳೂ ಇವೆ. ಪ್ರಾಕೃತ ಗುಣಗಳ ವೈಷಮ್ಯದಿಂದ ಸೃಷ್ಟವಾದ ಈ ಜಗತ್ತು ಮತ್ತು ಲಿಂಗದೇಹಗತ ಗುಣತ್ರಯಗಳಿಂದ ಅನಾದಿ ಕರ್ಮಪ್ರವಾಹದಲ್ಲಿ ಬದ್ಧನಾದ ಜೀವರಾಶಿಗಳೂ ಪರಮಾತ್ಮನಲ್ಲಿ ಆಶ್ರಯ ಹೊಂದಿದ್ದಾರೆ. ಆದರೂ ಜಗದ್ವಿಲಕ್ಷಣನಾದ ಪರಮಾತ್ಮನಿಂದ ಜೀವರಾಶಿಗಳು ಹಾಗೂ ಜಡಾತ್ಮಕವಾದ ಪ್ರಪಂಚ ಅತ್ಯಂತ ಭಿನ್ನವಾಗಿಯೇ ಇವೆ.

(೩) ಈ ತತ್ತ್ವ ವಿಷಯವನ್ನು ದಾಸರಾಯರು ಅತ್ಯಂತ ಸಮಂಜಸವಾದ ದೃಷ್ಟಾಂತದಿಂದ ಹೃದಯಂಗಮವಾಗಿ ನಿರೂಪಿಸಿರುತ್ತಾರೆ.

ನದಿಗಳು ಪರ್ವತ ಪ್ರದೇಶಗಳಲ್ಲಿ ಹುಟ್ಟಿ, ವಿಶಾಲವಾದ ಮೈದಾನ ಪ್ರದೇಶದಲ್ಲಿ ಹರಿದು, ಕೊನೆಯಲ್ಲಿ ಮಹಾಸಮುದ್ರವನ್ನು ಸೇರುವುವು. ಎಲ್ಲಾ ನದಿಗಳ ಸಂಗಮ ಸ್ಥಾನವು ಮಹಾಸಾಗರವೇ ಆಗಿದೆ. ಸಮುದ್ರದ ಕ್ಷಾರೋದಕದಲ್ಲಿ ನದಿಗಳ ನೀರು ಕಲೆತರೂ, ಪ್ರುಥಕ್ ಪೃಥಕ್ಕಾಗಿಯೇ ಇರುವುವು. ನದಿಯ ನೀರು ತನ್ನ ಮೂಲ ಸ್ವಭಾವವನ್ನು ಕಳೆದುಕೊಳ್ಳುವುದಿಲ್ಲ. ಆದರೆ ನೋಡುವವರಿಗೆ ನದಿಗಳೆಲ್ಲಾ ಕಲೆತು ಸಮುದ್ರದ ನೀರಾಗುವುದು ಎಂದು ತೋರುವುದು. ಈ ರಹಸ್ಯವನ್ನು ಆಕಾಶದಲ್ಲಿ ಸಂಚರಿಸುವ ಮೇಘಪಂಕ್ತಿಗಳು ಬಲ್ಲವು. ಹೇಗೆಂದರೆ, ಸೂರ್ಯನ ಶಾಖದಿಂದ ಸಮುದ್ರದಲ್ಲಿ ಕಲೆತಿರುವ ನದಿಯ ನೀರು ಆವಿಯಾಗಿ ಹಗುರವಾಗಿ ಮೇಲಕ್ಕೆ ಏರಿ, ಘನೀಭೂತವಾಗಿ ಮೋಡಗಳಾಗಿ ಪರಿಣಮಿಸುವುದು. ಇಂತಹ ಮೇಘಮಾಲೆಗಳು ವಾಯುವಿನಿಂದ ಆಕಾಶದಲ್ಲಿ ಸಂಚರಿಸುತ್ತಿರುವುವು, ಆ ಮೇಘಗಳೇ ಮಳೆಯ ರೂಪದಲ್ಲಿ ನೀರನ್ನು ಭೂಮಿಗೆ ಸುರಿಸುವುವು. ಮಳೆಯ ನೀರು ಸಮುದ್ರದ ನೀರಿನಂತೆ ಕ್ಷಾರೋದಕವಲ್ಲ. ಅತ್ಯಂತ ಶುದ್ಧ ರೂಪದಲ್ಲಿರುವ ಉದಕವು. ಸಮುದ್ರಗತ ನೀರೇ ಆವಿಯಾಗಿ ಮೇಘಗಳಿಂದ ವರ್ಷರೂಪದಲ್ಲಿ ಪುನಃ ಮಳೆ

ಯಾಗಿ ಬೀಳುವುದು. ಇಂತು, ಸಮುದ್ರದಲ್ಲಿ ಕಲೆತಿರುವ ನಾನಾ ನದಿಗಳ ನೀರಿನ ಪೃಥಕ್ಕರಣವನ್ನು ಆಕಾಶದಲ್ಲಿ ಸಂಚರಿಸುವ ಮೇಘಗಳು ಬದಿವು. ಈ ಮೇಘಗಳನ್ನೇ ದಾಸರಾಯರು ಪ್ರಸಕ್ತ ಪದ್ಯದಲ್ಲಿ "ಅಬ್ದ ಬಲ್ಲವು ನದಿಯ ಜಲಸ್ಥಿತಿಯ"–ಎಂದಿದ್ದಾರೆ. ಅಪ್+ದ, ಅಂದರೆ ಅಪ್=ನೀರನ್ನು, ದ =ಕೊಡುವುದು. ಅದೇ ಮೇಘಗಳು ಎಂದು ಅರ್ಥ. ಅದರೆ ಈ ರಹಸ್ಯ ವನ್ನು ಅದೇ ಆಕಾಶದಲ್ಲಿ ಸಂಚರಿಸುತ್ತಿರುವ ಕಾಗೆ, ಗುಬ್ಬಿ, ಮೊದಲಾದ ಸಾಮಾನ್ಯ ಪಕ್ಷಿಗಳು ತಿಳಿಯಬಲ್ಲವೇ ? ಎಂದೆಂದಿಗೂ ಇಲ್ಲ.

(೪) ಮೇಲಿನ ದೃಷ್ಟಾಂತದ ಪ್ರಕಾರ, ಸರ್ವ ಜಗತ್ತಿಗೂ ಆಶ್ರಯ ನಾದ ಶ್ರೀ ಪರಮಾತ್ಮನು ಸಾಗರ ಸದೃಶನು. ಪರಮಾತ್ಮನ ಉದರದಲ್ಲಿಯೇ ಇದ್ದು, ಅವನಿಂದಲೇ ಸೃಷ್ಟರಾಗಿ, ಕೊನೆಯಲ್ಲಿ ಅವನನ್ನೇ ಸೇರುವ ಸಮಸ್ತ ಜಗತ್ತು ಮತ್ತು ಸಕಲ ಜೀವರಾಶಿಗಳೂ ಸಮುದ್ರವನ್ನು ಸೇರುವ ನದಿಗಳಿ ದ್ದಂತೆ. ಸಮುದ್ರವನ್ನು ಸೇರಿ, ಸಮುದ್ರದ ನೀರಿನಲ್ಲಿ ಕಲೆತರೂ ತಮ್ಮ ನೈಜಸ್ಥಿತಿಯನ್ನು ಕಳೆದುಕೊಳ್ಳದೆ, ಬೇರೆ ಬೇರೆಯಾಗಿಯೇ ಇರುವಂತೆ ಜಡ ಮತ್ತು ಜೀವರೆಲ್ಲರೂ ಏಕತ್ರ ಸೇರಿದರೂ, ತಮ್ಮ ತಮ್ಮ ಪ್ರತ್ಯೇಕತೆಯನ್ನು ಕಳೆದುಕೊಳ್ಳದೇ ನಿಜಸ್ಥಿತಿಯನ್ನು ಹೊಂದಿ, ಆ ಪರಮಾತ್ಮನಿಂದ ಭಿನ್ನ ರಾಗಿಯೇ ಇರುತ್ತಾರೆಯೇ ಹೊರತು ಅವನಿಗೆ ಸಮನಾಗಿ ಆಗಲೀ ಅಥವಾ ಪರಮಾತ್ಮನೇ ಆಗಿ ಐಕ್ಯವನ್ನು ಎಂದೆಂದಿಗೂ ಹೊಂದುವುದಿಲ್ಲ. ಈ ತತ್ತ್ವ ರಹಸ್ಯವನ್ನು "ಆಗಮಜ್ಞರು" ಎಂದರೆ ವೇದಶಾಸ್ತ್ರಗಳನ್ನು ಸರಿಯಾಗಿ ತಿಳಿದು ಕೊಂಡ ಕೋವಿದರು, ಅಂದರೆ, ತಾರತಮ್ಯ ಪಂಚಭೇದ ಜ್ಞಾನಯುಕ್ತರಾದ ಶ್ರೀಮನ್ಮಧ್ವಮತ ಸಿದ್ಧಾಂತಾಭಿಜ್ಞರು ಮಾತ್ರ ಅರಿಯಬಲ್ಲರೇ ಹೊರತು, ಕಾಗೆ, ಗುಬ್ಬಿ ಇತ್ಯಾದಿ ಕ್ಷುದ್ರ ಚೇತನ ಸದೃಶರಾದ ಮಿಥ್ಯಾವಾದಿಗಳು ಎಂದೆಂದಿಗೂ ತಿಳಿಯಲಾರರು ಎಂತ ಪ್ರಸಕ್ತ ಪದ್ಯದ ತಾತ್ಪರ್ಯ. ॥೩೨॥

# ಪದ್ಯ (೩೩)

**ಮೂಲ :–**

**ಕರಣಗುಣಭೂತಗಳೊಳಗೆ ತ ।**
**ದ್ವರರೆನಿಪ ಬ್ರಹ್ಮಾದಿ ದಿವಿಜರೊ ।**
**ಳರಿತು ರೂಪಚತುಷ್ಟಯಗಳನುದಿನದಿ ಸರ್ವತ್ರ ॥**
**ಸ್ಮರಿಸುತನುವೋದಿಸುತ ಹಿಗ್ಗುತ ।**
**ಪರವಶದಿ ಪಾಡುವವರಿಗೆ ತ ।**
**ನ್ನಿರವ ತೋರಿಸಿ ಭವವಿಮುಕ್ತರ ಮಾಡಿ ಪೋಷಿಸುವ॥ ॥೩೩॥**

**ಅವತರಣಿಕೆ :**

ಪಂಚಜ್ಞಾನೇಂದ್ರಿಯಗಳು ಮತ್ತು ಪಂಚಕರ್ಮೇಂದ್ರಿಯಗಳು ಎನಿಪ ದಶೇಂದ್ರಿಯಗಳಲ್ಲಿ, ಸತ್ವ, ರಜಸ್ತಮಾದಿ ಗುಣತ್ರಯಗಳಲ್ಲಿ, ಪೃಥಿವ್ಯಾದಿ ಭೂತ ಪಂಚಕಗಳಲ್ಲಿ ಹಾಗೂ ಆ ತತ್ತ್ವಗಳಿಗೆ ಅಭಿಮಾನಿಗಳಾದ ಬ್ರಹ್ಮಾದಿ ಚತುರ್ವಿಂಶತಿ ತತ್ತ್ವಪತಿಗಳಲ್ಲಿ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವ ಎಂಬ ರೂಪಚತುಷ್ಟಯಗಳನ್ನು ಪ್ರತಿದಿವಸದಲ್ಲಿಯೂ ಎಲ್ಲಾ ಕಡೆಗಳಲ್ಲಿಯೂ ಚಿಂತನೆ ಮಾಡುತ್ತಾ, ಅವುಗಳನ್ನು ಧ್ಯಾನೋಪಾಸನೆ ಮಾಡುತ್ತಾ, ಸಂಭ್ರಮದಿಂದ ಹಿಗ್ಗುತ್ತಾ, ಪರವಶನಾಗಿ (ತನ್ನ ದೇಹವನ್ನು ಮರೆತು) ಕೊಂಡಾಡುತ್ತಿರುವ ಭಗವದ್ಭಕ್ತರಿಗೆ ತನ್ನ ದರ್ಶನ ಭಾಗ್ಯವನ್ನಿತ್ತು, ಈ ಜನನ ಮರಣಾಖ್ಯವಾದ ಸಂಸಾರದಿಂದ ಮುಕ್ತರನ್ನಾಗಿಸಿ, ಅವರನ್ನು ಸಂರಕ್ಷಿಸುತ್ತಾನೆ ಎಂದು ನಿರೂಪಿಸುತ್ತಾರೆ. **"ಕರಣಗುಣಭೂತ"** ಎಂಬ ಪ್ರಸಕ್ತ ಸಂಧಿಗತ ಈ ೩೩ನೆಯ ಪದ್ಯದಿಂದ. ॥೩೩॥

**ಪ್ರತಿಪದಾರ್ಥ :–**

ಕರಣ = ಪಂಚಜ್ಞಾನೇಂದ್ರಿಯಗಳು ಮತ್ತು ಪಂಚಕರ್ಮೇಂದ್ರಿಯಗಳು

ಹಾಗೂ ಪಂಚಮನೋವೃತ್ತಿಗಳೆಂಬ ಇಂದ್ರಿಯಗಳಲ್ಲಿಯೂ **ಗುಣ**= ಸತ್ವ, ರಜಸ್ತಮೋಗುಣಗಳೆಂಬ ಗುಣತ್ರಯಗಳಲ್ಲಿ (ಅಥವಾ ಪಂಚಮಹಾ ಭೂತಗಳ ಗುಣಗಳಾದ ಗಂಧಾದಿ ತನ್ಮಾತ್ರಗಳಲ್ಲಿ) **ಭೂತಗಳು**= ಆಕಾಶ, ವಾಯು, ತೇಜ, ಅಪ್ಪು ಮತ್ತು ಪೃಥಿವೀ ಎಂಬ ಭೂತಪಂಚಕಗಳು **ಒಳಗೆ**= ಇವುಗಳಲ್ಲಿ ಅಂತಸ್ಥಿತನಾಗಿರುವ **ತದ್ವರರೆನಿಪ**= ಅವುಗಳಿಗೆ ಅಧಿಪತಿಗಳೆನಿಸುವ (ವರ ಎಂದರೆ ಶ್ರೇಷ್ಠ ಎಂದರ್ಥ. ಅಂದರೆ ಆ ತತ್ತ್ವ ಗಳಿಗೆ ಅಧಿಪತಿಗಳಾದ ತತ್ವಾಭಿಮಾನಿಗಳು) **ಬ್ರಹ್ಮಾದಿ**= ಮಹತ್ತತ್ವಾಭಿ ಮಾನಿಗಳಾದ ಶ್ರೀ ಚತುರ್ಮುಖ ಬ್ರಹ್ಮದೇವರಿಂದ ಪ್ರಾರಂಭಿಸಿ, ಪೃಥಿವೀ ಅಭಿಮಾನಿ ಭೂದೇವಿ, ಶನೈಶ್ಚರ ಪರ್ಯಂತ **ದಿವಿಜರೊಳು**= ದೇವತೆಗಳಲ್ಲಿ **ರೂಪಚತುಷ್ಟಯಗಳನು**= ಮೂಲರೂಪಿ ಶ್ರೀಮನ್ನಾರಾಯಣನ ಪ್ರಾದು ರ್ಭಾವ ರೂಪಗಳಾದ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿ ರುದ್ಧ ಎಂಬ ನಾಲ್ಕು ರೂಪಗಳನ್ನು **ಅರಿತು**= ಶಾಸ್ತ್ರದ್ವಾರಾ ಜ್ಞಾನಾನು ಸಂಧಾನದಿಂದ ತಿಳಿದು **ಅನುದಿನದಿ**= ಪ್ರತಿದಿವಸದಲ್ಲೂ **ಸರ್ವತ್ರ**= ಎಲ್ಲೆಲ್ಲಿಯೂ(ಸರ್ವಪ್ರಾಣಿಗಳಲ್ಲಿ ಹಾಗೂ ಪೂರ್ವೋಕ್ತ ಸರ್ವಾಧಿಷ್ಠಾನಗಳಲ್ಲಿ) **ಸ್ಮರಿಸುತ**= ಮನಸ್ಸಿನಲ್ಲಿ ಚಿಂತನೆ ಮಾಡುತ್ತಾ **ಅನುಮೋದಿಸುತ**= ಶಾಸ್ತ್ರದಲ್ಲಿ ಉಕ್ತವಾಗಿರುವ ವಿಷಯಗಳನ್ನು ತ್ರಿಕರಣಶುದ್ಧಾತ್ಮನಾಗಿ ಒಪ್ಪುತ್ತಾ, (ಬರೇ ಜ್ಞಾನವಿದ್ದರೆ ಸಾಲದು; ಅದನ್ನು ಅನುಭವಕ್ಕೆ ತಂದು ಕೊಳ್ಳಬೇಕು) **ಹಿಗ್ಗುತ**= ಸಂತೋಷಪಡುತ್ತಾ **ಪರವಶದಿ**= ಮೈ ಮರೆತು ಅಂದರೆ, ಏಕಾಗ್ರಚಿತ್ತತೆಯಿಂದ **ಪಾಡುವವರಿಗೆ**= ಭಗವನ್ಮಾ ಹಾತ್ಮ್ಯೆಯನ್ನು ಗಾನರೂಪದಿಂದ ಕೊಂಡಾಡುವರಿಗೆ **ತನ್ನಿರವ**= ತನ್ನ ದರ್ಶನಭಾಗ್ಯವನ್ನು **ತೋರಿಸಿ**= ಕೊಟ್ಟು(ಅಭಿವ್ಯಕ್ತಿ ಮಾಡಿ) ಅಂದರೆ ಭಗವದಪರೋಕ್ಷಭಾಗ್ಯವನ್ನು ಕರುಣಿಸಿ **ಭವವಿಮುಕ್ತರ**= ಜನನ ಮರಣಾಖ್ಯವಾದ ಭವಬಂಧನವೆಂಬ ಈ ಸಂಸಾರ ದೆಶೆಯಿಂದ ಬಿಡುಗಡೆ **ಮಾಡಿ**= ಮಾಡಿದಂಥವನಾಗಿ **ಪೋಷಿಸುವ**= ಸ್ವಧಾಮಗಳಾದ ವೈಕುಂಠಾದಿ ಲೋಕಗಳನ್ನಿಟ್ಟು ಸಂರಕ್ಷಿಸುವನು. ॥೩೩॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :–

ಪೂರ್ವೋಕ್ತ ಪ್ರಕಾರ ಅನುಸಂಧಾನ ಮಾಡಿದವರಿಗೆ ಭವವಿಮುಕ್ತರನ್ನು ಮಾಡಿ, ಅವರಿಗೆ ಪ್ರತ್ಯಕ್ಷನಾಗುತಾನೆ ಎಂತ ಹೇಳತಾರೆ.

ಕರಣ=ಪಂಚಜ್ಞಾನೇಂದ್ರಿಯುಗಳು, ಪಂಚಕರ್ಮೇಂದ್ರಿಯಗಳು, ಪಂಚ ಮನೋವೃತ್ತಿಗಳು, ಭೂತ=ಪೃಥಿವ್ಯಾದಿ ಪಂಚಭೂತಗಳಲ್ಲಿ ಐದು ರೂಪ ಗಳು, ಗುಣ ಸತ್ವಾದಿ ಗುಣರೂಪಗಳು ಮೂರು. ಇದರಿಂದ ಜನ್ಯಗಳಾದ ಮಹತ್ತತ್ವ ಎರಡು, ಅಂತು ಗುಣತ್ರಯದ ಕೂಡ ಐದರಲ್ಲಿ ಐದು ರೂಪಗಳು, ಜೀವರು ಐದು ವಿಧ. ದೇವ, ಋಷಿ, ಪಿತೃ, ಪ ಅಂದರೆ ಅರಸರು, ಗಂಧ ರ್ವರು. ಇವರಲ್ಲಿ ಐದು ರೂಪಗಳು. ಈ ಐದು ರೂಪಗಳು ದಾವವೆಂದರೆ ರೂಪಚತುಷ್ಟಯಗಳು=ರೂಪ ಎಂದರೆ ಅವತಾರ. ರೂಪಗಳಿಗೆ ಮೂಲ ರೂಪವಾದ ನಾರಾಯಣರೂಪ ಒಂದು, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ. ಅನಿರುದ್ಧ ಅಂತು ಐದು ರೂಪಗಳು, ಅನುದಿನ=ಪ್ರತಿದಿನ ದಲ್ಲೂ, ಸರ್ವತ್ರ=ಪೂರ್ವೋಕ್ತ ಸರ್ವಾಧಿಷ್ಠಾನಗಳಲ್ಲಿ, ಸ್ಮರಿಸುತ ಅನು ಮೋದಿಸುತ=ಶಾಸ್ತ್ರೋಕ್ತ ಪ್ರಕಾರ ಚಿತ್ತದಲ್ಲಿ ಸ್ಮರಿಸುತ್ತಾ, ಅನು ಎಂದರೆ, ಪರಮಾತ್ಮನೇವೇ ಅನುಸರಿಸಿ, ಅನ್ಯ ವಿಷಯಗಳ ಅನುಸರಿಸದೆ ಮೋದ ಪಡುತ್ತಾ, ಹಿಗ್ಗುತಾ=ಆನಂದೋದ್ರೇಕನಾಗುತ್ತಾ, ಪರವಶದಿ=ಮನ ಸ್ಸನ್ನು ಪರಮಾತ್ಮನಲ್ಲಿ ವಶಮಾಡಿದವನಾಗಿ, ಮೈ ಮರೆದು=ದೇಹಭಾವ ಮರೆತು, ಪಾಡುವವರಿಗೆ=ಕೊಂಡಾಡುವವರಿಗೆ, ತನ್ನಿರವ ತೋರಿಸಿ= ದೇಹದಲ್ಲಿ ತಾನು (ಪರಮಾತ್ಮ) ಇರತಕ್ಕ ಸ್ಥಾನವನ್ನು ತೋರಿಸಿ, ತನ್ನ ದರ್ಶನ ಕೊಟ್ಟು, ಭವವಿಮುಕ್ತರ ಮಾಡಿ=ಜನನ ಮರಣಾಖ್ಯ ಸಂಸಾರ ದಿಂದ ಛಂದಾಗಿ ರಹಿತರನ್ನಾಗಿ ಮಾಡಿ, ಪೋಷಿಸುವ=ತನ್ನ ವೈಕುಂಠ ಲೋಕದಲ್ಲಿಟ್ಟು ಸಂರಕ್ಷಿಸುವನು. ಹ್ಯಾಂಗೆ ನೆನೆದವರಿಗೆ ಎಂದರೆ, ಅಭಿಮಾನಿ ಗಳಾದ, ಬ್ರಹ್ಮಾದಿ ದಿವಿಜರ=ಬ್ರಹ್ಮನೇ ಆದಿಯಾಗಿ ಚತುರ್ವಿಂಶತಿ ತತ್ವಾಭಿ ಮಾನಿ ದೇವತೆಗಳಲ್ಲಿ, ರೂಪಚತುಷ್ಟಯಗಳ ಅನುದಿನದಿ ನೆನೆವರಿಗೆ, ಇನ್ನೂ

ಸರ್ವತ್ರ=ಚರಾಚರ ಸರ್ವತ್ರದಲ್ಲಿ ಈ ಪ್ರಕಾರ ನೆನೆವವರಿಗೆ ಎಂತ ತಾತ್ಪರ್ಯ ಆದ್ದರಿಂದ ಭೇದಜ್ಞಾನದಿಂದ ಸರ್ವತ್ರ ಉಪಾಸನಾ ಮಾಡೋವರಾಗಬೇಕು. ॥೩೩॥

(೨) "ಭಾವಪ್ರಕಾಶಿಕೆ" ವ್ಯಾಖ್ಯಾನ :–

ತತ್ತ್ವಗಳೊಳಗೂ, ಅಭಿಮಾನಿ ದೇವತೆಗಳಲ್ಲಿಯೂ ಅನಂತಾನಂತ ರೂಪಗಳನ್ನು ಚಿಂತಿಸಬೇಕೆಂದು ಮೇಲಿನ ಪದ್ಯಗಳಲ್ಲಿ ಹೇಳಿದ್ದರು. ಆ ರೂಪ ಗಳನ್ನು ಕ್ರೋಢೀಕರಿಸಿ ಸುಲಭೋಪಾಯಗಳಿಂದ ಉಪಾಸನಾ ಮಾಡುವ ಕ್ರಮವನ್ನು ಅದರ ಫಲವನ್ನೂ ಸಹ ಹೇಳುತ್ತಾರೆ:–

ಜ್ಞಾನೇಂದ್ರಿಯಗಳು–೫, ಕರ್ಮೇಂದ್ರಿಯಗಳು-೫, ಮನಸ್ಸು ಇವು ಗಳಲ್ಲಿ ಅನಿರುದ್ಧ ರೂಪವನ್ನೂ, ತನ್ಮಾತ್ರಾಗುಣಗಳಲ್ಲಿ ಅಥವಾ ಸತ್ವಾದಿ ಗುಣಗಳಲ್ಲಿ ಪ್ರದ್ಯುಮ್ನ ರೂಪವನ್ನೂ, ಪಂಚಮಹಾಭೂತಗಳಲ್ಲಿ ಸಂಕರ್ಷಣ ರೂಪವನ್ನೂ, ತತ್ವಾಭಿಮಾನಿಗಳಾದ ಬ್ರಹ್ಮಾದಿಗಳಲ್ಲಿ ವಾಸುದೇವ ರೂಪ ವನ್ನೂ, ಈ ಪ್ರಕಾರ ನಾಲ್ಕು ಸ್ಥಾನಗಳಲ್ಲಿ ರೂಪ ಚತುಷ್ಟಯಗಳನ್ನೂ ಪ್ರತಿ ದಿವಸವೂ ಸರ್ವಪ್ರಾಣಿಗಳ ದೇಹದಲ್ಲಿ ಚಿಂತಿಸುತ್ತಾ, ಸ್ಮರಿಸುತ್ತಾ, ಸಂತೋಷ ಪಡುತ್ತಾ, ಪರವಶರಾಗಿ ಭಗವತ್ಪರವಾದ ಪದ ಪದ್ಯಗಳನ್ನು ಗಾನ ಮಾಡುತ್ತಾ ಇರುವವರಿಗೆ ತನ್ನ ಅಪರೋಕ್ಷವನ್ನಿತ್ತು, ಸಂಸಾರದಿಂದ ಮುಕ್ತ ರನ್ನಾಗಿ ಮಾಡಿ ರಕ್ಷಿಸುವನು. ವಿಷ್ಣು ಸಹಸ್ರನಾಮಾದಿಗಳಲ್ಲಿ ವಿಸ್ತಾರವಾಗಿ ಭಗವನ್ನಾಮಗಳನ್ನು ಅವುಗಳ ಪಠಣಕ್ಕೆ ಮಹಾಮಹಿಮೆಗಳನ್ನು ಹೇಳಿರುವರು. ಒಂದುವೇಳೆ ಈ ಸಹಸ್ರನಾಮ ಪಠಣ ಮಾಡಲು ಅವಕಾಶವಿಲ್ಲದಿದ್ದರೆ, ಕೊನೆಯ ಒಂದು ಶ್ಲೋಕವನ್ನಾದರೂ ಪಠಣ ಮಾಡಿದರೆ, ಸಹಸ್ರನಾಮ ಪಠಣ ಮಾಡಿದ ಫಲವು ಬರುವುದೆಂದು **"ನಮೋಽಸ್ತ್ವನಂತಾಯ ಸಹಸ್ರ ಮೂರ್ತಯೇ"**–ಎಂಬ ಶ್ಲೋಕದಲ್ಲಿ ಉಕ್ತವಾಗಿದೆ. ಇದರಂತೆಯೇ ಪಠಣ ಮಾಡಬೇಕಾದ ಗ್ರಂಥಗಳು ಬಹಳವಾಗಿ, ಮಾಡುವುದು ಕಷ್ಟಸಾಧ್ಯವೆಂದು ತಿಳಿದು, ಅಧಿಕಾರ ಭೇದದಿಂದ ಉಪಾಸನಾ ಮಾಡುವುದಕ್ಕಾಗಿ ಅಧ್ಯಾಯದ

ಕೊನೆಯ ಭಾಗದ ೧, ೨ನೇ ಶ್ಲೋಕಗಳಲ್ಲಿ ಸಂಗ್ರಹಿಸುವ ಸಂಪ್ರದಾಯ ವುಂಟು. **"ಸಂಕೋಚ ವಿಸ್ತಾರಾಭ್ಯಾಂ ಚ ಕಥಯಂತಿ ಮುನೀಷಣಃ"**- ಎಂತ ಜ್ಞಾನಿಗಳು ವಿಷಯಗಳನ್ನೂ ಅಧಿಕಾರಿಗಳನ್ನೂ ಅನುಸರಿಸಿ, ಸಂಕೋಚ ವಾಗಿಯೂ, ವಿಸ್ತಾರವಾಗಿಯೂ ಹೇಳುವಂತೆ, ದಾಸರಾಯರು ಒಬ್ಬೊಬ್ಬರ ದೇಹದಲ್ಲಿ ಅನಂತಾನಂತ ರೂಪಗಳನ್ನು ಚಿಂತಿಸಲು ಸಾಧ್ಯವಿಲ್ಲದ ಅಧಿಕಾರಿ ಗಳು ಸಕಲ ಪ್ರಾಣಿಗಳ ತತ್ತ್ವಗಳಲ್ಲಿ, ತದಭಿಮಾನಿ ದೇವತೆಗಳಲ್ಲಿ ನಾಲ್ಕು ರೂಪಗಳನ್ನಾದರೂ ಚಿಂತಿಸಿ ಕೃತಾರ್ಥರಾಗಲೆಂದು ಉಪಾಸನಾಕ್ರಮವನ್ನು ಸಂಗ್ರಹಿಸುವರು. ॥೩೩॥

## (೩) "ಭಾವದರ್ಪಣಟೀಕಾ" ವ್ಯಾಖ್ಯಾನ :-

ದಶೇಂದ್ರಿಯ ತ್ರಿಗುಣ ಪಂಚಭೂತ ಇವುಗಳಿಗೆ ಪತಿಯಾದ ಬ್ರಹ್ಮಾದಿ ಗಳಲ್ಲಿ ಅನಿರುದ್ಧಾದಿ ನಾಲ್ಕು ರೂಪಗಳನ್ನು ತಿಳಿದು ಪಾಡುವವರನ್ನು ಸಂಸಾರ ದಿಂದ ಮುಕ್ತ ಮಾಡುವನೆಂದು ಹೇಳುತ್ತಾರೆ. "ಕರಣೇತಿ" ॥೩೩॥

## (೪) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ :—

ಕರಣಗಳೆಂಬ ಐದು ಜ್ಞಾನೇಂದ್ರಿಯಗಳೂ, ಐದು ಕರ್ಮೇಂದ್ರಿಯ ಗಳೂ ಸೇರಿ, ಹತ್ತು ಇಂದ್ರಿಯಗಳೆಂಬ ಕರಣಗಳಲ್ಲೂ, ಪಂಚ ಮಹಾಭೂತ ಗಳಲ್ಲೂ, ಈ ಕರಣ ಭೂತಗಳಿಗೆ ಸಹ ಕಾರಣವಾದ ಸತ್ವಾದಿಗುಣಗಳಲ್ಲೂ, ಇವುಗಳಿಗೆ ಅಭಿಮಾನಿಗಳಾದ ದೇವತೆಗಳಲ್ಲೂ ಸೇರಿ ಒಟ್ಟು ನಾಲ್ಕು ಸ್ಥಾನ ವಿಶೇಷಗಳಲ್ಲಿ, ಅನಿರುದ್ಧಾದಿ ವಾಸುದೇವಾಂತ ರೂಪಚತುಷ್ಟಯವನ್ನರಿತು ಸರ್ವತ್ರ ಸ್ಮರಿಸುತ್ತಾ, ಉಪಾಸನೆ ಮಾಡುತ್ತಾ, ಮನಸ್ಸು ಒಪ್ಪುವ ಸಮ್ಮತಿ ಯನ್ನು ಹೊಂದಿ, ಸಂತೋಷದಿಂದ ಭಕ್ತಿಯಿಂದ ಪರವಶರಾಗಿ ಪಾಡುವವರಿಗೆ ಎಂದರೆ, ವರ್ಣಿಸುವವರಿಗೆ, ತನ್ನಿರವ ತೋರಿಸಿ ಎಂದರೆ, ದೇವರು ತನ್ನ ಯಥಾಸ್ಥಿತಿರೂಪವನ್ನು ದರ್ಶನಕೊಟ್ಟು, ಮುಕ್ತರನ್ನಾಗಿ ಮಾಡಿ, ರಕ್ಷಿಸುವ ನೆಂದರ್ಥ. ॥೩೩॥

# ಸರ್ವವ್ಯಾಖ್ಯಾನಸಾರಸಂಗ್ರಹ

ಸಮಸ್ತ ಚೇತನರ ದೇಹಗತ ಭಗವದ್ರೂಪಗಳ ವಿವರ ಹಾಗೂ ಅವುಗಳ ಉಪಾಸನಾ ಕ್ರಮವನ್ನು ಇದುವರೆವಿಗೂ ಪೂರ್ವೋಕ್ತ ಪದ್ಯಗಳಿಂದ ತಿಳಿಸಿ, ಈಗ ಪ್ರಸಕ್ತ ಪದ್ಯದಿಂದ ದಶೇಂದ್ರಿಯಗಳು, ಗುಣತ್ರಯಗಳು, ಪಂಚಭೂತಗಳು ಮತ್ತು ಆಯಾಯಾ ತತ್ತ್ವಾಭಿಮಾನಿ ದೇವತಾರ್ಗತವಾದ ಅನಿರುದ್ಧಾದಿ ರೂಪಚತುಷ್ಟಯಗಳ ಚಿಂತನಾಕ್ರಮ. ಅದರಿಂದ ಜೀವರಿಗೆ ಫಲಪ್ರಾಪ್ತಿ ಈ ವಿವರಗಳನ್ನು ತಿಳಿಸುತ್ತಾರೆ.

(೧) ಪಂಚಜ್ಞಾನೇಂದ್ರಿಯಗಳು ಮತ್ತು ಪಂಚಕರ್ಮೇಂದ್ರಿಯಗಳೆಂಬ ದಶೇಂದ್ರಿಯಗಳಿಗೆ–"ಕರಣ" ಎಂದು ಹೆಸರು. ಈ ದಶೇಂದ್ರಿಯಗಳನ್ನು ನಿಯಂತ್ರಿಸುವ ಮನಸ್ಸು ಮತ್ತು ಪಂಚಮನೋವೃತ್ತಿಗಳೂ ಈ ವರ್ಗಕ್ಕೆ ಸೇರಿವೆ. ಈ ಏಕಾದಶೇಂದ್ರಿಯಗಳಲ್ಲಿ **ಅನಿರುದ್ಧ** ರೂಪವನ್ನೂ ಮತ್ತು ಆ ರೂಪದಿಂದ ಶ್ರೀ ಪರಮಾತ್ಮನು ಮಾಡಿ ಮಾಡಿಸುತ್ತಿರುವ ಇಂದ್ರಿಯಗತ ವ್ಯಾಪಾರ ವಿಶೇಷಗಳನ್ನು ಚಿಂತಿಸಿ, ಉಪಾ ಸನಾ ಮಾಡಬೇಕು

(೨) ಸತ್ವ, ರಜ ಮತ್ತು ತಮ ಎಂಬ ಗುಣತ್ರಯಗಳು. ಪ್ರಾಕೃತ ತ್ರಿಗುಣಗಳು ಅನಾದಿ ಲಿಂಗದೇಹಗತವಾಗಿವೆ. ಜೀವನ ಸ್ವರೂಪ ಭೂತವಾದ ಅಪ್ರಾಕೃತ ತ್ರಿಗುಣಗಳು ಚೇತನಗತವಾಗಿವೆ. ಅನಾದಿಕಾಲದಿಂದ ಜೀವನ ಸ್ವರೂಪ ದೇಹವು ಈ ತ್ರಿಗುಣಾತ್ಮಕವಾದ ಲಿಂಗ ಶರೀರದಿಂದ ಆವರ್ಕವಾವಾಗಿದೆ. ಮೂಲಪ್ರಕೃತಿಯ ಸಹಜ ಧರ್ಮಗಳಾದ ಈ ಗುಣತ್ರಯಗಳ ವೈಷಮ್ಯದಿಂದಲೇ ಜಗತ್ತಿನ ಸೃಷ್ಟಿ. ಅಂತೆಯೇ ಲಿಂಗಶರೀರಗತ ಪ್ರಾಕೃತ ತ್ರಿಗುಣಗಳ ಸಂಬಂಧದಿಂದ ಅಪ್ರಾಕೃತನೂ, ನಿತ್ಯನೂ, ಚಿದಾನಂದಾತ್ಮಕನೂ ಆದ ಜೀವನಿಗೆ ಜನನ ಮರಣಾಖ್ಯರೂಪವಾದ ಸಂಸಾರವೆಂಬ ಬಂಧನ. ಇವೆಲ್ಲವೂ ಅಗಮ್ಯಮಹಿಮಾಸಂಪನ್ನನಾದ ಆ ಜಗನ್ನಾಟಕ ಸೂತ್ರಧಾರಿ ಶ್ರೀ ಪರಮಾತ್ಮನ ಇಚ್ಛೆ ಮತ್ತು ಅವನ ಲೀಲಾವಿನೋದ. ಇಂತಹ ಸತ್ವಾದಿ ತ್ರಿಗುಣಗಳಲ್ಲಿ **ಪ್ರದ್ಯುಮ್ನ**ನಾಮಕ ಶ್ರೀ ಪರಮಾತ್ಮನ ಕ್ರಿಯಾವಿಶೇಷಗಳು.

ಅಂದರೆ ಗುಣಕಾರ್ಯಗಳು. ಇದರಿಂದ ಗುಣತ್ರಯಗಳಲ್ಲಿ **ಪ್ರದ್ಯುಮ್ನ**ರೂಪೋಪಾಸನೆ ಮಾಡಬೇಕು.

ಕೆಲವು ವ್ಯಾಖ್ಯಾನಗಳಲ್ಲಿ (ಭಾವಪ್ರಕಾಶಿಕಾ ವ್ಯಾಖ್ಯಾನ) ಗುಣಗಳಿಗೆ "ತನ್ಮಾತ್ರ ಗುಣ"ಗಳೆಂದು ಹೇಳಿರುತ್ತಾರೆ. ಆದರೆ ಮುಂದಿನ ವಿಭಾಗದಲ್ಲಿ "ಭೂತ"ಗಳೊಳಗೆ ಎಂದು ನಿರೂಪಿತವಾಗಿದೆ. ಇದರಿಂದ ಭೂತಪಂಚಕಗಳು ಮತ್ತು ಅವುಗಳ ಗುಣಗಳಾದ ತನ್ಮಾತ್ರಗಳು ಅದರಲ್ಲಿಯೇ ಸಮಾವೇಶವಾಗಿವೆ. ಇದರಿಂದ "ಗುಣ" ಎಂಬ ಶಬ್ದಕ್ಕೆ ಸತ್ವಾದಿ ಗುಣತ್ರಯಗಳು ಎಂದು ಅರ್ಥಮಾಡುವುದು ಸಮಂಜಸ.

(೩) ಪೃಥಿವಿ, ಅಪ್, ತೇಜ, ವಾಯು ಮತ್ತು ಆಕಾಶ ಎಂಬ ಪಂಚ ಮಹಾಭೂತಗಳು. ಅವುಗಳ ಸಹಜ ಧರ್ಮಗಳಾದ ಗಂಧ, ರಸ, ರೂಪ, ಸ್ಪರ್ಶ ಮತ್ತು ಶಬ್ದ ಎಂಬ ತನ್ಮಾತ್ರಪಂಚಕಗಳು. ಗುಣ ಮತ್ತು ಗುಣಿಗಳಿಗೆ ಪರಸ್ಪರ ಅವಿಯೋಗ ಸಂಬಂಧ. ಈ ಸಂಬಂಧ ವಿಶಿಷ್ಟ ರೀತಿಯಲ್ಲಿದೆ. ಪಂಚಮಹಾಭೂತಗಳಲ್ಲಿ ಮತ್ತು ತನ್ಮಾತ್ರ ಗುಣಗಳಲ್ಲಿ **ಸಂಕರ್ಷಣ** ರೂಪವನ್ನು ಉಪಾಸನೆ ಮಾಡಬೇಕು. ಭೂತಗತ ಮತ್ತು ತನ್ಮಾತ್ರಾಗತ ಕ್ರಿಯಾವಿಶೇಷಗಳನ್ನು ಸಂಕರ್ಷಣರೂಪಿ ಶ್ರೀ ಪರಮಾತ್ಮನಿಂದಲೇ ಪ್ರವರ್ತಿತವಾಗುತ್ತಿರುವುವು ಎಂದು ಅನುಸಂಧಾನಿಸಬೇಕು.

(೪) ಇಂತು ಚತುರ್ವಿಂಶತಿ ತತ್ತ್ವಗಳಿಗೆ ಅಭಿಮಾನಿಗಳಾದ ಬ್ರಹ್ಮಾದಿ ತತ್ತ್ವಪತಿ ದೇವತೆಗಳಲ್ಲಿ **ವಾಸುದೇವ** ರೂಪವನ್ನು ಉಪಾಸನೆ ಮಾಡಬೇಕು. ಇಂತು ವಾಸುದೇವನಾಮಕ ಶ್ರೀ ಪರಮಾತ್ಮನು ತತ್ವಾಭಿಮಾನಿ ದೇವತೆಗಳಲ್ಲಿ ಅಂತರ್ಗತನಾಗಿದ್ದುಕೊಂಡು, ತತ್ತ್ವಕಾರ್ಯಗಳನ್ನು ಬಿಂಬಕ್ರಿಯಾದ್ವಾರಾ ತಾನೇ ಮಾಡಿ, ಆ ದೇವತೆಗಳ ದ್ವಾರಾ ಮಾಡಿಸುತ್ತಿರುವನು ಎಂದು ಜ್ಞಾನಾನುಸಂಧಾನ ಉಳ್ಳವರಾಗಬೇಕೆಂದು ತಾತ್ಪರ್ಯ.

ಇದನ್ನೇ **"ತದ್ವರರೆನಿಪ"**—ಎಂದು ಹೇಳಿದ್ದಾರೆ. "ವರ" ಎಂಬ ಶಬ್ದಕ್ಕೆ "ಶ್ರೇಷ್ಠ" ಅಥವಾ "ಯಜಮಾನ" ಎಂದು ಹೆಸರು. ಅಂದರೆ,

ತತ್ = ಆಯಾಯಾ ತತ್ತ್ವಗಳಿಗೆ ವರ = ಅಧಿಪತಿಗಳು ಅಥವಾ ಅಭಿಮಾನಿಗಳು ಎಂದೆನಿಸುವ, ತತ್ವಾಭಿಮಾನಿ ದೇವತೆಗಳು ಎಂದರ್ಥ.

(೫) ಇಂತು, ದಶೇಂದ್ರಿಯಗಳಲ್ಲಿ, ಗುಣತ್ರಯಗಳಲ್ಲಿ, ಪಂಚಭೂತಗಳಲ್ಲಿ ಮತ್ತು ತತ್ವಪತಿ ದೇವತೆಗಳಲ್ಲಿ ಕ್ರಮವಾಗಿ ಅನಿರುದ್ಧ, ಪ್ರದ್ಯುಮ್ನ ಸಂಕರ್ಷಣ ಮತ್ತು ವಾಸುದೇವ ಎಂಬ ರೂಪಚತುಷ್ಟಯಗಳನ್ನು ಉಪಾಸಿಸಬೇಕು. ಈ ರೂಪಚತುಷ್ಟಯಗಳು ಮೂಲರೂಪಿ ಶ್ರೀಮನ್ನಾರಾಯಣನ ಸ್ವಗತಭೇದ ವಿವರ್ಜಿತ ರೂಪಗಳೇ ಆಗಿವೆ.

(೬) "ತ್ರಿಗುಣಗಳು" ಎಂದು ಹೇಳಿರುವುದರಿಂದ,ಅವುಗಳ ವೈಷಮ್ಯದಿಂದ ಜನ್ಯವಾದ ಅವ್ಯಕ್ತ, ಮಹತ್ತತ್ವ, ಅಹಂಕಾರತತ್ತ್ವ ಮತ್ತು ಮನಸ್ತತ್ವ ಎಂಬ ನಾಲ್ಕು ಸೂಕ್ಷ್ಮ ತತ್ತ್ವಗಳು ಬಂದಂತಾಯಿತು.

"ಕರಣ"–ಎಂಬ ಶಬ್ದಪ್ರಯೋಗದಿಂದ ದಶೇಂದ್ರಿಯಗಳನ್ನು ಹೇಳಿದಂತಾಯಿತು. ಮನಸ್ಸನ್ನು ಇಲ್ಲಿಯೇ ಸೇರಿಸಿಕೊಂಡರೆ, ದಶೇಂದ್ರಿಯಗಳಾಗುವುವು. ಆದರೆ ದಶೇಂದ್ರಿಯಗಳಿಗೆ "ಕರಣ" ಎಂದು ಹೇಳುವುದು ರೂಢಿ.

"ಭೂತಗಳೊಳಗೆ"–ಎಂದಿರುವುದರಿಂದ, ಭೂತಪಂಚಕಗಳು ಮತ್ತು ಪಂಚತನ್ಮಾತ್ರಗಳು ಬಂದಂತಾಯಿತು.

ಅಲ್ಲಿಗೆ ಚತುರ್ವಿಂಶತಿ ತತ್ತ್ವಗಳನ್ನು ಹೇಳಿದಂತಾಯಿತು.

(೭) ಈ ರೀತಿಯಲ್ಲಿ ಅನಿರುದ್ಧಾದಿ ರೂಪಚತುಷ್ಟಯಗಳನ್ನು ಪೂರ್ವೋಕ್ತ ನಾಲ್ಕು ಅಧಿಷ್ಠಾನಗಳಲ್ಲಿ ನಿತ್ಯವೂ ಎಡಬಿಡದೆ, ಸರ್ವಕಾಲ, ದೇಶ ಮತ್ತು ಅವಸ್ಥೆಗಳಲ್ಲಿ ಸ್ಮರಿಸುತ್ತಾ, ಶಾಸ್ತ್ರಗಳಲ್ಲಿ ಹೇಳಿರುವಂತೆ ಅನುಮೋದಿಸುತ್ತಾ, ಆ ಭಗವದ್ರೂಪಗಳ ಚಿಂತನೆಯಿಂದ ಪರವಶನಾಗಿ, ಮೈಮರೆತು, ಆನಂದೋದ್ರೇಕದಿಂದ ಹಿಗ್ಗುತ್ತಾ, ಆ ಅಚಿಂತ್ಯಾದ್ಭುತಶಕ್ತನಾದ ಶ್ರೀ ಪರಮಾತ್ಮನ ಗುಣಾತಿಶಯಗಳನ್ನು ಗಾನದಿಂದ ಪಾಡುತ್ತಿರುವವರೇ ಪರಮ ಭಗವದ್ಭಕ್ತರು. ಅಂತಹ ಅಂತರಂಗಭಕ್ತರನ್ನು ಕರುಣಾಮೂರ್ತಿಯಾದ ಶ್ರೀ ಪರಮಾತ್ಮನು ಪರಮಾನುಗ್ರಹದಿಂದ ಸ್ವೀಕರಿಸುತ್ತಾನೆ. ಅವರಿಗೆ

ಅಪರೋಕ್ಷ ಜ್ಞಾನರೂಪವಾದ ತನ್ನ ದರ್ಶನ ಭಾಗ್ಯವನ್ನಿತ್ತು (ಬಿಂಬದರ್ಶನ ಮಾಡಿಸಿ) ಅನಾದಿಕರ್ಮ ಭವಣೆಯಿಂದ ಬಂಧಿತವಾಗಿರುವ ಅಂತಹ ಸ್ವಭಕ್ತ ರನ್ನು ಜನನಮರಣಾಖ್ಯವಾದ ಆ ಕರ್ಮಬಂಧನವೆಂಬ ಸಂಸಾರದಿಂದ ಬಿಡು ಗಡೆ ಮಾಡಿ, ಸಂರಕ್ಷಿಸುವನು ಎಂದು ತಿಳಿಸುತ್ತಾರೆ.

| ಕ್ರ. ಸಂ. | ಅಧಿಷ್ಠಾನಗಳು | ರೂಪಚತುಷ್ಟಯ ಗಳು | ಕಾರ್ಯ |
|---|---|---|---|
| ೧ | ದಶೇಂದ್ರಿಯಗಳು ಪಂಚಜ್ಞಾನೇಂದ್ರಿಯಗಳು ಪಂಚಕರ್ಮೇಂದ್ರಿಯಗಳು | ಅನಿರುದ್ಧ | ಆಯಾಯಾ ಇಂದ್ರಿಯ ಗತ ವ್ಯಾಪಾರಗಳು. |
| ೨ | ಸತ್ವ, ರಜಸ್ತಮೋಗುಣ ಗಳೆಂಬ ಗುಣತ್ರಯಗಳು | ಪ್ರದ್ಯುಮ್ನ | ಗುಣಕಾರ್ಯಗಳು ತಜ್ಜ ನಿತ ಕರ್ಮಪ್ರವಾಹದ ಕ್ರಿಯಾವಿಶೇಷಗಳು |
| ೩ | ಪೃಥಿವಿ, ಅಪ್, ತೇಜ, ವಾಯು ಮತ್ತು ಆಕಾಶ ಎಂಬ ಭೂತಪಂಚಕ ಗಳು (ತನ್ಮಾತ್ರಾಸಹಿತ) | ಸಂಕರ್ಷಣ | ಪಂಚಭೂತಗತ ವ್ಯಾಪಾರಗಳಾದ ಗಂಧ, ರಸ, ರೂಪ, ಸ್ಪರ್ಶ ಮತ್ತು ಶಬ್ದ ಗುಣಗಳ ಕಾರ್ಯವಿಶೇಷಗಳು |
| ೪ | ಬ್ರಹ್ಮಾದಿ ತತ್ವಾಭಿಮಾನಿ ದೇವತೆಗಳು | ವಾಸುದೇವ | ಚತುರ್ವಿಂಶತಿ ತತ್ತ್ವಗತ ವ್ಯಾಪಾರಗಳು |

ಬಿಂಬರೂಪಿ ಶ್ರೀಮನ್ನಾರಾಯಣನೇ ಪೂರ್ವೋಕ್ತ ಸ್ವಾಭಿನ್ನಗಳಾದ ಅನಿರುದ್ಧಾದಿ ವಾಸುದೇವಾಂತ ರೂಪಚತುಷ್ಟಯಗಳಿಂದ ದೇಹಗತ ಸಮಸ್ತ ವ್ಯಾಪಾರಗಳನ್ನೂ ಮಾಡಿ ಮಾಡಿಸುತ್ತಿರುವನು ಎಂಬುದೇ ಪದ್ಯದ ತಾತ್ಪರ್ಯ. ॥೩೩॥

## ಪದ್ಯ (೩೪)

ಮೂಲ :

ಮೂಲರೂಪನು ಮನದೊಳಿಹ ಶ್ರವ ।
ಣಾಲಿಯೊಳಗಿಹ ಮತ್ಸ್ಯ ಕೂರ್ಮನು ।
ಕೋಲರೂಪನು ತ್ವಗ್ರಸದೊಳಗಿಪ್ಪ ನರಸಿಂಹ ॥
ಬಾಲವಟು ವಾಮನನು ನಾಸಿಕ ।
ನಾಳದೊಳು ವದನದಲಿ ಭಾರ್ಗವ ।
ವಾಲಿಭಂಜನ ಹಸ್ತದೊಳು ಪಾದದಲಿ ಶ್ರೀ ಕೃಷ್ಣ ॥ ॥೩೪॥

ಅವತರಣಿಕೆ :

ಮತ್ಸ್ಯಾದಿ ಕಲ್ಕಿಪರ್ಯಂತ ದಶಾವತಾರ ರೂಪಿಯಾದ ಪರಮಾತ್ಮನು ದೇಹಗತ ದಶೇಂದ್ರಿಯಗಳಲ್ಲಿ ಇರುವ ವಿವರಗಳನ್ನು ತಿಳಿಸುತ್ತಾರೆ–"**ಮೂಲ ರೂಪನು**"–ಎಂಬ ಪ್ರಸಕ್ತ ಸಂಧಿಗತ ಈ ೩೪ನೆಯ ಪದ್ಯ ಮತ್ತು ಕೊನೆಯ ಪದ್ಯಗಳಿಂದ.

ಮೂಲರೂಪಿ ನಾರಾಯಣನು ಮನಸ್ಸಿನಲ್ಲಿಯೂ, ಕಿವಿಯಲ್ಲಿ ಮತ್ಸ್ಯ ರೂಪಿಯೂ, ಕೂರ್ಮರೂಪಿಯು ಕಣ್ಣಿನಲ್ಲಿಯೂ,ವರಾಹರೂಪಿ ತ್ವಗಿಂದ್ರಿಯ ದಲ್ಲಿಯೂ, ನರಸಿಂಹನಾಮಕ ಶ್ರೀ ಪರಮಾತ್ಮನು ನಾಲಿಗೆಯಲ್ಲಿಯೂ, ಬಾಲ ವಟು ವಾಮನ ದೇವರು ಮೂಗಿನ ದ್ವಾರಗಳಲ್ಲಿಯೂ, ಭಾರ್ಗವನಾಮಕ ಶ್ರೀ ಪರಶುರಾಮ ವಾಗಿಂದ್ರಿಯದಲ್ಲಿ, ವಾಲಿಭಂಜನನಾದ ಶ್ರೀ ರಾಮದೇವರು ಕೈಗಳಲ್ಲಿಯೂ ಮತ್ತು ಶ್ರೀ ಕೃಷ್ಣಾವತಾರಿ ಶ್ರೀ ಹರಿಯು ಪಾದದ್ವಯ ಗಳಲ್ಲಿಯೂ ಇದ್ದಾನೆ ಎಂದು ನಿರೂಪಿಸುತ್ತಾರೆ. ॥೩೪॥

ಪ್ರತಿಪದಾರ್ಥ :

**ಮೂಲರೂಪನು** = ಮೂಲರೂಪಿ ಶ್ರೀಮನ್ನಾರಾಯಣನು ಮನ

**ದೊಳಿಹ** = ಮನಸ್ಸಿನಲ್ಲಿ ಇದ್ದಾನೆ **ಶ್ರವಣ** = ಕಿವಿಗಳಲ್ಲಿ **ಮತ್ಸ್ಯ** = ಮತ್ಸ್ಯರೂಪಿ ಶ್ರೀ ಪರಮಾತ್ಮನು **ಆಲಿಯೊಳಗೆ** = ಕಣ್ಣುಗಳಲ್ಲಿ **ಕೂರ್ಮನು** = ಕೂರ್ಮಾವತಾರಿಯು **ಇಹ** = ಇದ್ದಾನೆ **ಕೋಲ ರೂಪನು** = ವರಾಹರೂಪಿ ಪರಮಾತ್ಮನು **ತ್ವಕ್** = ತ್ವಗಿಂದ್ರಿಯದಲ್ಲಿರುವನು. **ರಸನದೊಳು** = ಜಿಹ್ವೇಂದ್ರಿಯದಲ್ಲಿ **ನರಸಿಂಹ** = ನರಸಿಂಹ ನಾಮಕ ಪರಮಾತ್ಮನು **ಇಪ್ಪ** = ಇರುವನು **ಬಾಲವಟು** = ಬಾಲ ಬ್ರಹ್ಮಚಾರಿಯಾದ **ವಾಮನನು** = ವಾಮನರೂಪಿ ಶ್ರೀ ಪರಮಾತ್ಮನು **ನಾಸಿಕನಾಳದೊಳು** = ಮೂಗಿನ ದ್ವಾರಗಳಲ್ಲಿ **ವದನದಲಿ** = ಬಾಯಿಯಲ್ಲಿ ಅಂದರೆ. ವಾಗಿಂದ್ರಿಯದಲ್ಲಿ **ಭಾರ್ಗವ** = ಪರಶುರಾಮದೇವರು **ವಾಲಿಭಂಜಕ** = ವಾಲಿಯನ್ನು ಸಂಹಾರ ಮಾಡಿದ ಶ್ರೀರಾಮದೇವರು **ಹಸ್ತದೊಳು** = ಎರಡು ಕೈಗಳಲ್ಲಿ **ಪಾದದಲಿ** = ಎರಡು ಕಾಲುಗಳಲ್ಲಿ **ಶ್ರೀ ಕೃಷ್ಣ** = ಕೃಷ್ಣರೂಪಿ ಶ್ರೀ ಪರಮಾತ್ಮನು ವಿದ್ಯಮಾನನಾಗಿರುವನು॥೩೪॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಮತ್ಸ್ಯಾದಿರೂಪಗಳು ಇಂದ್ರಿಯಗಳಲ್ಲಿ ಇರತಕ್ಕ ವಿಚಾರ ಹೇಳತಾರೆ.

ಮೂಲರೂಪನು = ಮೂಲರೂಪಿ ನಾರಾಯಣ, ಮನದೊಳಿಹ = ಮನಸ್ಸಿನಲ್ಲಿ ಇದ್ದಾನೆ. ಶ್ರವಣಾಲಯದೊಳಿಹ ಮತ್ಸ್ಯ = ಶಬ್ದಗಳ ಕೇಳೋದರ ಆಲಯಭೂತವಾದ ಕಿವಿಗಳಲ್ಲಿ ಮತ್ಸ್ಯರೂಪಿ ಪರಮಾತ್ಮ ಇದ್ದಾನೆ. ಕೂರ್ಮನು = ಕೂರ್ಮರೂಪಿ ಪರಮಾತ್ಮನು ತ್ವಕ್ = ತ್ವಗಿಂದ್ರಿಯದಲ್ಲಿ ಇದ್ದಾನೆ. ರಸನದೊಳಗಿಪ್ಪ = ಜಿಂಹ್ವೆಯಲ್ಲಿ, ಕೋಲರೂಪನು = ವರಾಹ ರೂಪಿ ಪರಮಾತ್ಮ ಇದ್ದಾನೆ. ನಾಸಿಕದೊಳು = ನಾಸಿಕಾದ್ವಾರಗಳಲ್ಲಿ, ನರ ಸಿಂಹ = ನರಸಿಂಹರೂಪಿ ಪರಮಾತ್ಮ ಇದ್ದಾನೆ. ಬಾಲವಟು ವಾಮನನು = ಬಾಲಬ್ರಹ್ಮಚಾರಿಯಾದ ವಾಮನರೂಪಿ ಪರಮಾತ್ಮ, ವದನದಲ್ಲಿ = ಬಾಯಿ

ಯಲ್ಲಿ ಇದ್ದಾನೆ. ಭಾರ್ಗವ=ಪರಶುರಾಮ ದೇವರು, ಹಸ್ತದಲಿ=ಕೈಗಳಲ್ಲಿ ಇದ್ದಾರೆ. ವಾಲಿಭಂಜನ=ವಾಲಿಯನ್ನು ಸಂಹಾರಮಾಡಿದ ಶ್ರೀರಾಮಚಂದ್ರಮೂರ್ತಿ, ಪಾದದಲಿ=ಪಾದಗಳಲ್ಲಿ ಇದ್ದಾನೆ. ಶ್ರೀ ಕೃಷ್ಣ ನೇತ್ರೇಂದ್ರಿಯದಲ್ಲಿ ಇದ್ದಾನೆ. (ಇದು ಮುಂದಿನ ಶ್ಲೋಕದಲ್ಲಿ ಬರುತ್ತದೆ)

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ:—

ಸಂಧಿಯನ್ನು ಮುಗಿಸುತ್ತಾ, ದಾಸರಾಯರು ಪ್ರಕಾರಾಂತರ ಮನಸಾಸಹ ೧೧ ಇಂದ್ರಿಯಗಳಲ್ಲಿ ಮೂಲರೂಪದ ದಶಾವತಾರಗಳನ್ನು ಚಿಂತಿಸಲು ಭಗವತ್ಪ್ರಸಾದವಾಗುವುದೆಂದು ಕಡೆಯ ಎರಡು ಪದ್ಯಗಳಿಂದ ಹೇಳುತ್ತಾರೆ.

ಮೂಲರೂಪಿಯಾದ ಶ್ರೀಮನ್ನಾರಾಯಣನು ಮನಸ್ಸಿನಲ್ಲಿರುವನು. ಶ್ರವಣೇಂದ್ರಿಯಗಳಲ್ಲಿ ಮತ್ಸ್ಯರೂಪಿಯೂ, ನೇತ್ರೇಂದ್ರಿಯಗಳಲ್ಲಿ ಕೂರ್ಮರೂಪಿಯೂ ಇರುತ್ತಿರುವರು. ತ್ವಗಿಂದ್ರಿಯಗಳಲ್ಲಿ ವರಾಹರೂಪದಿ ಇರುವನು. ನರಸಿಂಹರೂಪದಿಂದ ರಸನೇಂದ್ರಿಯದಲ್ಲಿರುವನು. ಬಾಲಬ್ರಹ್ಮಚಾರಿಯಾದ ವಾಮನನು ನಾಸಿಕೇಂದ್ರಿಯದೊಳಗೆ ಇರುವನು. ವದನದಲ್ಲಿ ಪರಶುರಾಮನು ಇರುವನು. ವಾಲಿಸಂಹಾರಕನಾದ ಶ್ರೀ ರಾಮನು ಹಸ್ತದಲ್ಲಿಯೂ, ಪಾದದಲ್ಲಿ ಶ್ರೀ ಕೃಷ್ಣನೂ ಇರುವನು. ॥೩೪॥

## (೩) "ಭಾವದರ್ಪಣ ಟೀಕಾ" ವ್ಯಾಖ್ಯಾನ :—

ನಾರಾಯಣನು ಮನಸ್ಸಿನಲ್ಲಿ, ಕರ್ಣದಲ್ಲಿ ಮತ್ಸ್ಯಕೂರ್ಮರು, ತ್ವಚೆಯಲಿ ವರಾಹನು, ಜಿಂಹ್ವೆಯಲ್ಲಿ ನರಸಿಂಹನು, ನಾಸಿಕದಲ್ಲಿ ವಾಮನನು, ವದನದಲ್ಲಿ ಭಾರ್ಗವನು, ಹಸ್ತದಲ್ಲಿ ಶ್ರೀ ರಾಮನು, ಪಾದದಲ್ಲಿ ಶ್ರೀ ಕೃಷ್ಣನ ಇದ್ದಾನೆಂದು ಹೇಳುತ್ತಾರೆ॥ ॥ಮೂಲೇತಿ॥ ॥೩೪॥

## (೪) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :–

"ಮೂಲೇತಿ"–ನಾರಾಯಣೋ ಮನಸಿ ಶೋತ್ರಗತೌ ಸುಮೀನ ಕೂರ್ಮೌ ಧೃತಾಚ್ಛವರ ಕೋಲಹರಿ ತ್ವಚಿಸ್ಥಃ॥ ಜಿಹ್ವಾಗತೋನೃಹರಿಃ

ದೇವವರೋ ನಸಿಸ್ಥಃ ಇಂದ್ರಾನುಜೋ ವದನಗಃ ಖಲು ಭಾರ್ಗವೋಽಜಃ ॥ ಹಸ್ತಗೋ ರಾಘವಃ ಕೃಷ್ಣಃ ಪಾದಗೋ ಮಧ್ವವಲ್ಲಭಃ॥ ಇತಿ ದೇಹ ಸಂಸ್ಥಾನೇ ॥ ॥೩೪॥

**ಕನ್ನಡಾರ್ಥ :—**

"ಮೂಲರೂಪನು ಮನದೊಳಿಹ"-ಎಂಬ ಪ್ರಸಕ್ತಪದ್ಯದಲ್ಲಿ ನಾರಾಯಣನ ರೂಪಗಳ ವಿವರಗಳನ್ನು ತಿಳಿಸುತ್ತಾರೆ. ಮನಸ್ಸಿನಲ್ಲಿ ಮೂಲರೂಪಿ ನಾರಾಯಣನು, ಎರಡು ಕಿವಿ ಮತ್ತು ಕಣ್ಣುಗಳಲ್ಲಿ ಮೀನ ಮತ್ತು ಕೂರ್ಮ ರೂಪಗಳು, ತ್ವಚದಲ್ಲಿ ವರಾಹನು, ಜಿಂಹ್ವೆಯಲ್ಲಿ ನರಸಿಂಹನು, ಮೂಗಿನಲ್ಲಿ ಇಂದ್ರಾನುಜನಾದ ಉಪೇಂದ್ರನಾಮಕ ವಾಮನನು, ಮುಖದಲ್ಲಿ ಭಾರ್ಗವ ರಾಮನು (ಪರಶುರಾಮ), ಕೈಗಳಲ್ಲಿ ರಘುರಾಮನು, ಮತ್ತು ಪಾದಗಳಲ್ಲಿ ಮಧ್ವಪತಿ ಶ್ರೀಕೃಷ್ಣನು ಈ ಪ್ರಕಾರ ದಶಾವತಾರರೂಪಿ ಶ್ರೀಹರಿಯು ಆಯಾಯಾ ಅವಯವಗಳಲ್ಲಿದ್ದಾನೆ. ಈ ವಿಷಯವು **"ದೇಹ ಸಂಸ್ಥಾನ"**-ಎಂಬ ಪ್ರಮಾಣದ ವಚನವು. ॥೩೪॥

**(ಆ) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ :—**

ಮನಸ್ಸು ಸಹ ಹನ್ನೊಂದು ಕರಣಗಳಲ್ಲಿ ದೇವರ ಮತ್ಸ್ಯಾದಿರೂಪಗಳನ್ನು ಉಪಾಸನೆ ಮಾಡುವ ವಿವರವನ್ನು ಹೇಳುತ್ತಾರೆ;-

ಮನಸ್ಸಿನಲ್ಲಿ ಮೂಲರೂಪಿ ನಾರಾಯಣನು ಇರುವನು: ಶ್ರವಣವೆಂಬ ಕಿವಿಗಳಲ್ಲಿ ಕೂರ್ಮರೂಪ, ಆಲಿ ಎಂಬ ಕಣ್ಣಿನಲ್ಲಿ ಮತ್ಸ್ಯರೂಪ, ತ್ವಕ್ಕೆಂಬ ಚರ್ಮದಲ್ಲಿ ಕೋಲನೆಂಬ ವರಾಹರೂಪ, ರಸನ ಎಂಬ ನಾಲಿಗೆಯಲ್ಲಿ ಶ್ರೀ ನೃಸಿಂಹರೂಪ, ನಾಸಿಕನಾಳವೆಂಬ ಮೂಗಿನಲ್ಲಿ ಬಾಲವಟುವಾದ ವಾಮನರೂಪ, ವದನವೆಂಬ ಬಾಯಲ್ಲಿ ಭಾರ್ಗವನೆಂಬ ಪರಶುರಾಮರೂಪ, ಹಸ್ತಗಳಲ್ಲಿ ವಾಲಿಭಂಜನನಾದ ಶ್ರೀ ರಾಮರೂಪ, ಪಾದಗಳಲ್ಲಿ ಶ್ರೀ ಕೃಷ್ಣರೂಪ ಈ ರೀತಿ ಚಿಂತಿಸಬೇಕೆಂದು ನಿರೂಪಿಸುತ್ತಾರೆ॥ ॥೩೪॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಪ್ರಸಕ್ತ ಸಂಧಿಯನ್ನು ಉಪಸಂಹಾರ ಮಾಡುತ್ತಾ, ಅವರೋಕ್ಷೀಕೃತ ಶ್ರೀಶರಾದ ದಾಸರಾಯರು ಕೊನೆಯ ಎರಡು ಪದ್ಯಗಳಿಂದ ಶ್ರೀ ಪರಮಾತ್ಮನ ದಶಾವತಾರ ರೂಪಗಳನ್ನೂ ಮತ್ತು ಸ್ಥೂಲದೇಹಗತ ಯಾವಯಾವ ಅಿಂ ಯವಗಳಲ್ಲಿ ಆ ದಶಾವತಾರರೂಪಗಳನ್ನು ಚಿಂತಿಸಬೇಕು—ಎಂಬ ವಿವರಗಳನ್ನು ತಿಳಿಸುತ್ತಾರೆ.

(೧) ಮೂಲರೂಪಿ ಶ್ರೀಮನ್ನಾರಾಯಣನು **ಮನಸ್ಸಿ**ನಲ್ಲಿ ಇದ್ದು, ಮನಸ್ಸಿಗೆ ಸಂಬಂಧಿಸಿದ ಪಂಚಮನೋವೃತ್ತಿಗಳಿಗೆ ಪ್ರೇರಕನಾಗಿದ್ದಾನೆ.

(೨) ಶ್ರವಣವೆಂಬ ಕಿವಿಗಳಲ್ಲಿ **ಮತ್ಸ್ಯ**ರೂಪಿಯು ಇದ್ದು, ಶಬ್ದ ಗುಣಗ್ರಾಹಕನಾಗಿ, ಆಕಾಶ ತತ್ತ್ವಕಾರ್ಯ ಪ್ರವರ್ತಕನಾಗಿ, ಶ್ರವಣ ಕಾರ್ಯ ವನ್ನು ಮಾಡಿ ಮಾಡಿಸುತ್ತಿರುವನು.

(೩) ಆಲಿಗಳೆಂಬ ನೇತ್ರೇಂದ್ರಿಯಗಳಲ್ಲಿ **ಕೂರ್ಮಾವತಾರಿ** ಶ್ರೀ ಹರಿಯು ಇರುವನು. ತೇಜ ತತ್ತ್ವದ ತನ್ಮಾತ್ರಗುಣವಾದ ರೂಪ ಗುಣ ಗ್ರಾಹಕನಾಗಿದ್ದು, ನೇತ್ರೇಂದ್ರಿಯ ವ್ಯಾಪಾರ ಪ್ರವರ್ತಕನಾಗಿರುವನು.

(೪) ಕೋಲರೂಪಿ ಶ್ರೀ ವರಹಾವತಾರಿ ಶ್ರೀ ಹರಿಯು ತ್ವಕ ಎಂಬ ಸ್ಪರ್ಶೇಂದ್ರಿಯದಲ್ಲಿದ್ದಾನೆ. ಸ್ಪರ್ಶಗುಣಗ್ರಾಹಕನಾಗಿ, ವಾಯುತತ್ತ್ವ ಗತ ಕಾರ್ಯಪ್ರವರ್ತಕನಾಗಿ ತ್ವಗಿಂದ್ರಿಯ ವ್ಯಾಪಾರವನ್ನು ನಡೆಯಿಸುವನು.

(೫) ನರಸಿಂಹರೂಪಿ ಶ್ರೀ ಪರಮಾತ್ಮನು ರಸನೇಂದ್ರಿಯವೆನಿಪ ಜಿಂಹ್ವೆಯಲ್ಲಿದ್ದು, ಅಪ್‌ತತ್ತ್ವಗತ ರಸಗುಣಪ್ರವರ್ತಕನಾಗಿ, ರಸಾನುಭವ ವನ್ನು (ಪದಾರ್ಥಗಳ ರುಚಿ) ಜೀವರಿಗೆ ತಂದೀಯುವನು. ಈ ಕಾರಣ ದಿಂದಲೇ ಸುಭೋಜನ ವಸ್ತುಗಳನ್ನು ಪರಮಾತ್ಮನಿಗೆ ನೈವೇದ್ಯ ರೂಪದಲ್ಲಿ ಸಮರ್ಪಿಸುವ ಕಾಲದಲ್ಲಿ ಈ ಅನುಸಂಧಾನವನ್ನು ಮಾಡುತ್ತೇವೆ.

(೬) ಬಾಲಬ್ರಹ್ಮಚಾರಿಯಾದ ವಾಮನದೇವರು (ವಾಸವಾನುಜ

ಉಪ್ರೇಂದ್ರನಾಮಕ ಶ್ರೀ ಹರಿಯು) ನಾಸಿಕನಾಳವೆಂಬ, ಮೂಗಿನ ದ್ವಾರಗಳಲ್ಲಿರುವನು. ನಾಸಿಕವು ಘ್ರಾಣೇಂದ್ರಿಯವು. ಪೃಥ್ವೀತತ್ತ್ವ ಗುಣವಾದ ಗಂಧವನ್ನು ಸ್ವೀಕರಿಸಿ, ಗಂಧಾನುಭವವನ್ನು ನಾಸಿಕೇಂದ್ರಿಯ ದ್ವಾರಾ ವಾಮನ ರೂಪಿ ಶ್ರೀ ಪರಮಾತ್ಮನು ಕೊಡುವನು.

(೭) ವದನವೆಂಬ ಬಾಯಿಯಲ್ಲಿ, ಅಂದರೆ ವಾಗಿಂದ್ರಿಯದಲ್ಲಿ ಭೃಗು ಕುಲೋತ್ಪನ್ನನಾದ ಭಾರ್ಗವನಾಮಕ ಶ್ರೀ ಪರಶುರಾಮದೇವರು ಸ್ಥಿತರಾಗಿದ್ದಾರೆ. ವಾಗಿಂದ್ರಿಯವು ಪಂಚಕರ್ಮೇಂದ್ರಿಯಗಳಲ್ಲಿ ಒಂದು. ಇದರ ದ್ವಾರಾ ಸಂಭಾಷಣೆ, ಉಚ್ಚಾರಣೆ ಇತ್ಯಾದಿ ವಾಗ್ವ್ಯಾಪಾರರೂಪವಾದ ಕ್ರಿಯಾ ವಿಶೇಷಗಳನ್ನು ಪರಶುರಾಮರೂಪಿ ಶ್ರೀ ಹರಿಯು ವಾಗಿಂದ್ರಿಯ ದ್ವಾರಾ ಮಾಡಿ ಮಾಡಿಸುತ್ತಿರುವನು.

(೮) ವಾಲಿಯನ್ನು ಸಂಹರಿಸಿದ ಶ್ರೀ ರಾಮಾವತಾರಿ ಹರಿಯು ಎರಡು ಹಸ್ತಗಳಲ್ಲಿದ್ದು, ದಾನಾದಾನ ವ್ಯಾಪಾರಗಳನ್ನು ಹಸ್ತೇಂದ್ರಿಯ ದ್ವಾರಾ ನಡೆಯಿಸುವನು.

(೯) ಪಾದದ್ವಯಗಳಲ್ಲಿ ಕೃಷ್ಣರೂಪಿ ಶ್ರೀ ಪರಮಾತ್ಮನಿದ್ದು, ಗಮನಾಗಮನ ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಿರುವನು.

**ವಿಚಾರಾಂಶ**

ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿ **"ಶ್ರವಣಾಲಯದೊಳಗಿಹ"** ಎಂಬ ಶಬ್ದ ಪ್ರಯೋಗವಿದೆ. ಇತರ ಎಲ್ಲಾ ವ್ಯಾಖ್ಯಾನಗಳಲ್ಲಿಯೂ **"ಶ್ರವಣಾಲಿಯದೊಳಗಿಹ"**–ಎಂದಿದೆ.

ಶ್ರವಣಾಲಯ = ಶ್ರವಣವೆಂಬ ಆಲಯ ಅಂದರೆ ಕಿವಿಗಳಲ್ಲಿ ಎಂದು ಮಾತ್ರ ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿದೆ.

ಪಂಚಜ್ಞಾನೇಂದ್ರಿಯಗಳು ೫, ಪಂಚಕರ್ಮೇಂದ್ರಿಯಗಳು ೫ ಮತ್ತು ಮನಸ್ಸು ೧. ಎಲ್ಲಾ ಸೇರಿ ೧೧ ಇಂದ್ರಿಯಗಳಾಗುವುವು (ಏಕಾದಶೇಂದ್ರಿಯ

ಗಳು). ಇದರಂತೆ ಮೂಲರೂಪ ನಾರಾಯಣ ಒಂದು+ಮತ್ಸ್ಯಾದಿ ದಶ ರೂಪಗಳು=೧೧ರೂಪಗಳು. ಇದರ ಪ್ರಕಾರವೇ ಪ್ರಸಕ್ತ ಪದ್ಯದ ವಿವರಣೆಯನ್ನು ಸಮನ್ವಯ ಮಾಡಬೇಕು. ಈ ಕಾರಣದಿಂದ, "ಶ್ರವಣ+ಆಲಿ= ಶ್ರವಣಾಲಿಯೊಳಗೆ" ಎಂದು ಪರಿಗಣಿಸಿದರೆ, ಆಗ ಶ್ರವಣ=ಶ್ರವಣೇಂದ್ರಿಯದಲ್ಲಿ ಮತ್ಸ್ಯ ಮತ್ತು ಆಲಿ=ಕಣ್ಣುಗಳೆಂಬ ನೇತ್ರೇಂದ್ರಿಯದಲ್ಲಿ ಕೂರ್ಮರೂಪ ಎಂದು ಪೂರ್ವೋಕ್ತ ೧೧ ರೂಪಗಳು ಸರಿಹೊಂದುವುವು. ||೩೪||

## ಪದ್ಯ (೩೫)

**ಮೂಲ :–**

**ಜಿನ ವಿಮೋಹಕ ಬುದ್ಧ ಪಾಯುಗ।**
**ದನುಜಮರ್ದನ ಕಲ್ಕಿ ಮೇಢ್ರದಿ।**
**ಇನಿತು ದಶರೂಪಗಳ ದಶಕರಣಂಗಳಲಿ ತಿಳಿದು॥**
**ಅನುಭವಿಪ ವಿಷಯುಗಳ ಕೃಷ್ಣಾ।**
**ರ್ಪಣವೆನಲು ಕೈಗೊಂಬ ವೃಜಿನಾ।**
**ರ್ದನ ವರ ಜಗನ್ನಾಥವಿಠ್ಠಲ ವಿಶ್ವವ್ಯಾಪಕನು॥** ||೩೫||

**ಅವತರಣಿಕೆ :–**

ಜ್ಞಾನಿವರ್ಯರಾದ ಶ್ರೀ ಜಗನ್ನಾಥದಾಸವರೇಣ್ಯರು "ಜಿನವಿಮೋಹಕ" ಎಂಬ ಕೊನೆಯ ಈ ಪದ್ಯದಿಂದ ಪ್ರಸಕ್ತಸಂಧಿ **ಪಂಚಮಹಾಯಜ್ಞ ಸಂಧಿಯನ್ನು** ಉಪಸಂಹಾರ ಮಾಡುತ್ತಾರೆ.

ಅಸುರರ ಮೋಹನಾರ್ಥವಾಗಿ ಬುದ್ಧನಾಗಿ ಅವತರಿಸಿದ ಶ್ರೀ ಪರಮಾತ್ಮನು ಪಾಯುವೆಂಬ ಮಲವಿಸರ್ಜನಾಂಗದಲ್ಲಿಯೂ, ದಾನವ ಸಂಹಾರಕನೂ, ದುರುಳಜನ ಶಿಕ್ಷಕನೂ ಆದ ಕಲ್ಕ್ಯವತಾರಿ ಹರಿಯು ಮೇಢ್ರವೆಂಬ ಮೂತ್ರವಿಸರ್ಜನಾಂಗದಲ್ಲಿಯೂ ಇದ್ದು, ಆಯಾಯಾ ಇಂದ್ರಿಯಗತ ವ್ಯಾಪಾರ ವಿಶೇಷಗಳನ್ನು ಬಿಂಬಕ್ರಿಯಾದ್ವಾರಾ ತಾನೇ ಮಾಡಿ, ಆಯಾಯಾ ಇಂದ್ರಿಯಾಭಿಮಾನಿ ದೇವತೆಗಳ ದ್ವಾರಾ ಮಾಡಿಸುತ್ತಿರುವನು. ಇಂತು,

ದಶೇಂದ್ರಿಯಗಳಲ್ಲಿ ಶ್ರೀ ಪರಮಾತ್ಮನ ಮತ್ಸ್ಯಾದಿ ಕಲ್ಕಿಪರ್ಯಂತ ದಶರೂಪಗಳನ್ನು ಜ್ಞಾನಾನುಸಂಧಾನದಿಂದ ಅರಿತು, ಆಯಾಯಾ ಇಂದ್ರಿಯಗತ ಕಾರ್ಯಗಳ ಪ್ರವರ್ತಕನು ಶ್ರೀ ಪರಮಾತ್ಮನೆಂದರಿತು, ಕೃಷ್ಣಾರ್ಪಣ ಬುದ್ಧಿಯಿಂದ ಅರ್ಪಿಸಿದರೆ, ಸರ್ವೋತ್ತಮನಾದ ಜಗನ್ನಾಥವಿಠ್ಠಲಾಂಕಿತ ಶ್ರೀ ಪರಮಾತ್ಮನು ಅಂತಹ ಸರ್ವಕರ್ಮಸಮರ್ಪಣಾರೂಪವಾದ ಸೇವೆಯನ್ನು ಸ್ವೀಕರಿಸಿ ಪರಮಾನುಗ್ರಹಮಾಡುವನು ಎಂಬುದೇ ಪ್ರಸಕ್ತ ೩೫ನೆಯ ಹಾಗೂ ಸಂಧಿಗತ ಕೊನೆಯದಾದ ಈ ಪದ್ಯದ ಮುಖ್ಯಾಭಿಪ್ರಾಯವು॥ ॥೩೫॥

**ಪ್ರತಿಪದಾರ್ಥ :**

**ಜಿನವಿಮೋಹಕ**= ಜೈನಕುಲದಲ್ಲಿ ಉತ್ಪನ್ನನಾಗಿ, ಜೈನಮತೀಯರನ್ನು ತನ್ನ ಮನಮೋಹಕ ಬಾಲಕ ರೂಪದಿಂದ ಮೋಹಪರವಶರನ್ನಾಗಿ ಮಾಡಿ, ಮೋಹಗೊಳಿಸಿದ (ಜಿನನೆಂಬೋ ದೈತ್ಯನಿಗೆ, ಅವನ ಸ್ವರೂಪಕ್ಕೆ ಅಯೋಗ್ಯವಾದ ಜ್ಞಾನವಾಗಿರಲು, ಶ್ರೀ ಹರಿಯು ಬುದ್ಧರೂಪವನ್ನು ತಾಳಿ, ಅವನಿಗೆ ತಕ್ಕ ಅಜ್ಞಾನವನ್ನು ಕೊಟ್ಟು ಮೋಹಗೊಳಿಸಿದನು) **ಬುದ್ಧ**= ಬುದ್ಧರೂಪಿ ಶ್ರೀ ಪರಮಾತ್ಮನು **ಪಾಯುಗ**= ಪಾಯುವೆಂಬ ಗುದೇಂದ್ರಿಯದಲ್ಲಿದ್ದಾನೆ **ದನುಜಮರ್ದನ**= ದೈತ್ಯರನ್ನು ಸಂಹರಿಸುವ **ಕಲ್ಕಿ**= ಕಲ್ಕ್ಯವತಾರಿ ಶ್ರೀ ಹರಿಯು **ಮೇಢ್ರದಿ**= ಉಪಸ್ಥೇಂದ್ರಿಯದಲ್ಲಿದ್ದಾನೆ **ಇನಿತು**= ಈ ಪ್ರಕಾರವಾಗಿ **ದಶರೂಪಗಳ**= ಮತ್ಸ್ಯಾದಿ ಹತ್ತು ರೂಪಗಳನ್ನು **ದಶಕರಣಂಗಳಲಿ**= ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳೆಂಬ ಹತ್ತು ಇಂದ್ರಿಯಗಳಲ್ಲಿ **ತಿಳಿದು**= ಅನುಸಂಧಾನ ಪೂರ್ವಕ ತಿಳಿದುಕೊಂಡು **ಅನುಭವಿಪ**= ಭೋಗ ಮಾಡತಕ್ಕ **ವಿಷಯಗಳ**= ಶಬ್ದಾದಿ ವಿಷಯಗಳನ್ನು **ಕೃಷ್ಣಾರ್ಪಣವೆನಲು**= ಆಯಾಯಾ ಇಂದ್ರಿಯಗತ, ಇಂದ್ರಿಯಾಭಿಮಾನಿಗತ ಭಗವದ್ರೂಪಗಳಿಗೂ ವಿಷಯಾಂತರ್ಗತ ಭಗವದ್ರೂಪಗಳಿಗೂ, ಪರಸ್ಪರ ಐಕ್ಯಚಿಂತನಾರೂಪವಾದ ಅರ್ಪಣೆ ಮಾಡಿ, ಕೃಷ್ಣಾರ್ಪಣ ಬುದ್ಧಿಯಿಂದ ಇಂದ್ರಿಯಗತ ವ್ಯಾಪಾರಗಳೆಲ್ಲವನ್ನೂ ಮೂಲೇಶನಾಮಕ ಬಿಂಬರೂಪನಾದ ಶ್ರೀ ಪರಮಾತ್ಮನೇ ಮಾಡಿ ಮಾಡಿಸು೩

ದ್ದಾನೆಂದು ಅರಿತು, ಅರ್ಪಿಸಲು **ವೃಜಿನಾರ್ದನ**=ಸಕಲ ಪಾಪಗಳನ್ನು ಪರಿಹಾರ ಮಾಡುವ **ವರ**=ಶ್ರೇಷ್ಠನಾದ (ಸರ್ವೋತ್ತಮ) **ಜಗನ್ನಾಥವಿಠ್ಠಲ**=ದಾಸರಾಯರ ಬಿಂಬರೂಪಿಯಾದ ಜಗನ್ನಾಥವಿಠ್ಠಲಾಂಕಿತನಾದ ಜಗತ್ಪ್ರಭುವು **ವಿಶ್ವವ್ಯಾಪಕನು**=ಚರಾಚರಾತ್ಮಕವಾದ ಸಮಗ್ರ ಜಗತ್ತಿನಲ್ಲಿ ಸರ್ವತ್ರ ವ್ಯಾಪ್ತನಾಗಿರುವ ಪರಮಾತ್ಮನು **ಕೈಕೊಂಬ**= ಸ್ವೀಕರಿಸುವನು. ॥೩೫॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

ಅವಶಿಷ್ಟ ಹೇಳುತಾರೆ.

ಜಿನವಿಮೋಹಕ=ಜೈನರಲ್ಲಿ ಉತ್ಪನ್ನನಾಗಿ, ಅವರ ನೇತ್ರಕ್ಕೆ ಬಾಲಕ ಎಂತ ಮೋಹಗೊಳಿಸಿದ ಮತ್ತು ಅವರಿಗೆ ಪೂರ್ವದಲ್ಲಿ ಇರತಕ್ಕ ಜ್ಞಾನವನ್ನು ಮೋಹಗೊಳಿಸಿದ ಎಂಬೋಣದರಿಂದ ನೇತ್ರದಿಂದ ಮೋಹಪಟ್ಟದ್ದರಿಂದ ಮೋಹದಿಂದ ಯುಕ್ತರಾದ ನೇತ್ರಗಳಿಗೆ ಶ್ರೀ ಕೃಷ್ಣ ಎಂತ ವ್ಯಾಲಿನ ಶ್ಲೋಕ ದಿಂದ ಅರ್ಥಮಾಡಿಕೋಬೇಕು. ಬುದ್ಧ=ಬುದ್ಧರೂಪಿ ಪರಮಾತ್ಮ, ಪಾಯುಗ=ಪಾಯುತತ್ತ್ವದಲ್ಲಿ ಇದ್ದಾನೆ. ದನುಜಮರ್ದನ=ದೈತ್ಯರ ಸಂಹಾರ ಮಾಡತಕ್ಕ, ಕಲ್ಕಿ ಮೇಢ್ರದಿ=ಕಲ್ಕಿರೂಪಿ ಪರಮಾತ್ಮ ಮೂತ್ರ ಸ್ಥಾನದಲ್ಲಿ ಇದ್ದಾನೆ. ಮೂಲರೂಪಿ ನಾರಾಯಣರೂಪ ಒಂದು. ಮತ್ಸ್ಯಾದಿ ರೂಪಗಳು ಹತ್ತು. ಅಂತು ಹನ್ನೊಂದು. ಇನಿತು ದಶರೂಪಗಳು= ಪೂರ್ವೋಕ್ತ ಹತ್ತು ರೂಪಗಳ, ದಶಕರಣಂಗಳಲಿ=ದಶೇಂದ್ರಿಯಗಳಲ್ಲಿಯೂ ಮನದಲಿ ಒಂದು ರೂಪ, ಅಂತು ಹನ್ನೊಂದು ರೂಪಗಳ, ತಿಳಿದು=ಆಯಾ ಇಂದ್ರಿಯಗಳಲ್ಲಿ ತಿಳಿದು ಆಯಾ ರೂಪಗಳ ದ್ವಾರಾ, ಅನುಭವಿಪ ವಿಷಯ ಗಳೇ=ಭೋಗಮಾಡತಕ್ಕ ವಿಷಯಗಳೇ ಕೃಷ್ಣಾರ್ಪಣವೆನಲು=ಕೃಷ್ಣನಿಗೆ ಅರ್ಪಿತ ಎಂದರೆ, ಪರಸ್ಪರ ಐಕ್ಯಚಿಂತನಾರೂಪವಾದ ಅರ್ಪಿತ ಮಾಡಿದರೆ, ವೃಜಿನಾರ್ದನ=ಪಾಪಗಳನ್ನು ಸಂಹರಿಸತಕ್ಕ ಜನಾರ್ದನರೂಪಿ ಪರಮಾತ್ಮ, ಈ ಅನುಸಂಧಾನಮಾಡಿದವರ ದೋಷದೂರರನ್ನಾಗಿ ಮಾಡುವಂಥಾ ವರ=

ಸರ್ವೋತ್ತಮನಾದಂಥಾ, ಜಗನ್ನಾಥವಿಠ್ಠಲ ವಿಶ್ವವ್ಯಾಪಕನು=ಸರ್ವ ಚರಾಚರಗಳಲ್ಲಿ ವ್ಯಾಪಕನಾದಂಥಾ ಪರಮಾತ್ಮ ತಾರತಮ್ಯ ಪಂಚಭೇದ ಜ್ಞಾನದಿಂದ ದಾರಾದರೆ ನಂಬಿ ಸದ್ಗತಿ ಪಡೆಯುವುದಕ್ಕೆ ಅರ್ಪಿತ ಮಾಡಿದ್ದರನ್ನ, ಕೈಕೊಂಬ =ಸ್ವೀಕರಿಸುವ.

## ವಿಶೇಷಾರ್ಥ

ಮತ್ಸ್ಯಾದಿರೂಪಗಳು ಭೋಗ ಮಾಡತಕ್ಕ ರೂಪಗಳು ಎಂತ ತಿಳಿಯಬೇಕು.

| ಕ್ರ.ಸಂ. | ದಶಾವತಾರೂಪಗಳು | ರಮಾರೂಪಗಳು |
|---|---|---|
| ೧ | ಮತ್ಸ್ಯ | ವೇದಾ |
| ೨ | ಕೂರ್ಮ | ವೇದವತಿ |
| ೩ | ವರಾಹ | ಧಾತ್ರೀ |
| ೪ | ನೃಸಿಂಹ | ಮಹಾಲಕ್ಷ್ಮೀ |
| ೫ | ವಾಮನ | ಸುಖಾ |
| ೬ | ಭಾರ್ಗವ | ಹರಿಣೀ |
| ೭ | ರಾಮ | ಸೀತಾ |
| ೮ | ಕೃಷ್ಣ | ರುಕ್ಮಿಣಿ |
| ೯ | ಬುದ್ಧ | ದೇವಕೀ |
| ೧೦ | ಕಲ್ಕಿ | ಪ್ರಭಾ |

ಈ ಆರನೆಯ ಸಂಧಿಯಲ್ಲಿ ವಿವರಿಸಲ್ಪಟ್ಟ ಮುಖ್ಯ ಅಂಶಗಳು :

೭ನೇ ಶ್ಲೋಕ–ಶಿಶುಪಾಲನ ಉದರಲ್ಲಿ ಧರಿಸಿದ ವಿಚಾರ.

೧೩ನೇ ಶ್ಲೋಕ–ಅವಿದ್ಯಾಕ್ಕೆ ಕೃದ್ಧೋಲ್ಕಾದಿಗಳು. ಲಿಂಗದಲ್ಲಿ ವಾಯು ದೇವರಿಲ್ಲ.

೧೪ನೇ ಶ್ಲೋಕ–ಹಿಂಕಾರಾದಿ ಸಪ್ತಕಾಲೋಪಾಸನೆ.
೨೫ನೇ ಶ್ಲೋಕ–ಲಿಂಗಶರೀರ ವಿಚಾರ.

**॥ಶ್ರೀ ಮತ್ಸತ್ಯಪರಾಯಣತೀರ್ಥ ಕರಕಮಲಸಂಜಾತ ಶ್ರೀಮತ್ಸಂಕರ್ಷಣ ತೀರ್ಥ ವಿರಚಿತಾಯಾಂ ಶ್ರೀಮದ್ಧರಿಕಥಾಮೃತಸಾರ ಕನ್ನಡಭಾಷಾ ಟೀಕಾಯಾಂ ಪಂಚಮಹಾಯಜ್ಞ ಸಂಧಿ ವ್ಯಾಖ್ಯಾನಂ ಸಂಪೂರ್ಣಮ್ ॥**

॥ ಶ್ರೀ ಕೃಷ್ಣಾರ್ಪಣಮಸ್ತು ॥

## (೨) "ಭಾವಪ್ರಕಾಶಿಕೆ"–ವ್ಯಾಖ್ಯಾನ :–

ಜಿನಮೋಹಕ ಬುದ್ಧ = ಜೈನಮತೀಯರನ್ನು ಮೋಹನಗೊಳಿಸಿದ ಬುದ್ಧನು, ಪಾಯುಗ = ಪಾಯುವಿನಲ್ಲಿ (ಗುದದಲ್ಲಿ)ಯೂ, ದನುಜ ಮರ್ದನ = ದೈತ್ಯಾಂತಕನಾದ ಕಲ್ಕಿಯು, ಮೇಢ್ರದಿ = ಶಿಶ್ನೇಂದ್ರಿಯದಲ್ಲಿಯೂ, ಇನಿತು = ಈ ಪ್ರಕಾರವಾಗಿ, ದಶರೂಪಗಳ = ದಶಾವತಾರ ರೂಪಗಳನ್ನು, ದಶಕರಣಂಗಳಲಿ = ದಶೇಂದ್ರಿಯಗಳಲ್ಲಿ ತಿಳಿದು, ಅನುಭವಿಪ = ತಾನು ಅನುಭವಿಸುವ, ವಿಷಯಗಳೇ = ವಿಷಯ ಸುಖಗಳನ್ನು, ಕೃಷ್ಣಾರ್ಪಣವೆನಲು, ವೃಜಿನಾರ್ದನ = ಪಾಪನಾಶಕನಾದ, ವರ = ಸರ್ವೋತ್ತಮನಾದ, ಅಥವಾ ವೃಜಿನಾರ್ದನವರ = ಕಷ್ಟಗಳನ್ನು ಪರಿಹರಿಸುವುದರಲ್ಲಿ ಶ್ರೇಷ್ಠನಾದ ನಮ್ಮ ಬಿಂಬರೂಪಿಯಾದ ಶ್ರೀ ಜಗನ್ನಾಥವಿಠ್ಠಲನೆಂಬ, ವಿಶ್ವವ್ಯಾಪಕನು = ಪ್ರಪಂಚವನ್ನೆಲ್ಲಾ ವ್ಯಾಪಿಸಿಕೊಂಡಿರುವ ಶ್ರೀ ಪರಮಾತ್ಮನು, ಕೈಕೊಂಬ = ಸ್ವೀಕರಿಸುವನು. ॥೩೫॥

**॥ ಇಂತು ಶ್ರೀ ಪದ್ಮನಾಭದಾಸಕೃತ "ಭಾವಪ್ರಕಾಶಿಕಾ" ವ್ಯಾಖ್ಯಾನಾಂ ಪಂಚಮಹಾಯಜ್ಞಸಂಧಿ ವ್ಯಾಖ್ಯಾನಂ ಸಂಪೂರ್ಣಂ ॥**

॥ ಶ್ರೀ ಕೃಷ್ಣಾರ್ಪಣಮಸ್ತು ॥

(೩) "ಭಾವದರ್ಪಣಟೀಕಾ" ವ್ಯಾಖ್ಯಾನ :–

ಗುದದಲ್ಲಿ ಬುದ್ಧನು, ಮೇಢ್ರದಲ್ಲಿ ಕಲ್ಕಿಯು–ಹೀಂಗೆ ಏಕಾದಶರೂಪಗಳನ್ನು ಏಕಾದಶೇಂದ್ರಿಯಗಳಲ್ಲಿ ಚಿಂತಿಸಿ, ಪೂಜಿಸಿ, ಕೃಷ್ಣಾರ್ಪಣವೆಂದರೆ, ಸ್ವೀಕಾರ ಮಾಡುತ್ತಾನೆಂದು ಹೇಳುತ್ತಾರೆ॥ ಜಿನೇತಿ॥ ॥೩೫॥

**॥ ಇತಿ ಶ್ರೀ ಮದ್ಧರಿಕಥಾಮೃತಸಾರಸ್ಯ ಭಾವದರ್ಪಣಟೀಕಾಯಾಂ ಕಮಲಾಪತಿದಾಸ ಹೃದ್ಗತೇನ ಶ್ರೀ ಹರಿಣಾಕೃತಾಯಾಂ ಪಂಚಮಹಾಯಜ್ಞ ಸಂಧಿಃ ಪರ್ಯವಸಿತಃ ॥**

॥ ಶ್ರೀ ಕೃಷ್ಣಾರ್ಪಣಮಸ್ತು ॥

(೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ):

ಉಪಸಂಹರತಿ– "ಜಿನೇತಿ"॥ ಬುದ್ಧಃ ಪಾಯುಗ ದೇವೋऽತ್ರ ಕಲ್ಕೀ ಮೇಢ್ರಗತೋ ಹರಿಃ ॥ ಇನಿತು–ಹೀಗೆ.

**॥ಇತಿ ಶ್ರೀ ಮದ್ಧರಿಕಥಾಮೃತಸಾರ ಟೀಕಾಯಾಂ ವ್ಯಾಸದಾಸ ಸಿದ್ಧಾಂತ ಕೌಮುದ್ಯಾಂ ಶ್ರೀ ವಿದ್ಯಾಧೀಶತೀರ್ಥವಿನೇಯ ಜಂಬುಖಂಡ್ಯುಪಪದ ವಾದಿರಾಜಾಚಾರ್ಯ ವಿರಚಿತಾಯಾಂ ಪಂಚಮಹಾ ಯಜ್ಞ ಸಂಧಿಃ ಸಮಾಪ್ತಃ ॥**

॥ ಶ್ರೀ ಮಧ್ವೇಶಾರ್ಪಣಮಸ್ತು ॥

**ಕನ್ನಡಾರ್ಥ:**

ದಶೇಂದ್ರಿಯಗತ ತಿಳಿಯಬೇಕಾದ ದಶಾವತಾರ ಭಗವದ್ರೂಪಗಳನ್ನು ವಿವರಿಸುತ್ತಾ, ಪ್ರಸಕ್ತ ಸಂಧಿಯನ್ನು ಉಪಸಂಹರಿಸುತ್ತಾರೆ–"ಜಿನ"–ಎಂಬ ಕೊನೆಯ ಈ ಪದ್ಯದಿಂದ. ಬುದ್ಧರೂಪಿ ಶ್ರೀ ಹರಿಯು ಪಾಯುತತ್ತ್ವದಲ್ಲಿದ್ದಾನೆ. ಕಲ್ಕಿಯು ಉಪಸ್ಥ ತತ್ತ್ವದಲ್ಲಿ (ಮೇಢ್ರ) ಇದ್ದಾನೆ. ಇನಿತು ಶ್ರೀ

ಪರಮಾತ್ಮನ ದೇಹ ಇಂದ್ರಿಯಗತ ದಶರೂಪಗಳನ್ನು ತಿಳಿಯಬೇಕೆಂದು ಪದ್ಯಾರ್ಥ. ॥೩೫॥

**॥ಇಂತು ಪಂಚಮಹಾಯಜ್ಞ ಸಂಧಿಯು ವ್ಯಾಖ್ಯಾನವು ಮುಗಿಯಿತು॥**

॥ ಶ್ರೀ ಕೃಷ್ಣಾರ್ಪಣಮಸ್ತು ॥

**(೪) "ಗುರುಹೃದಯಪ್ರಕಾಶಿಕೆ" ವ್ಯಾಖ್ಯಾನ :–**

ಪಾಯುವೆಂಬ ಮಲವಿಸರ್ಜನೇಂದ್ರಿಯದಲ್ಲಿ, ಜಿನಾದಿ ದೈತ್ಯ ಮೋಹಕ ರೂಪವು, ಮೇಢ್ರವೆಂಬ ಮೂತ್ರವಿಸರ್ಜನೇಂದ್ರಿಯದಲ್ಲಿ ಕಲ್ಕಿರೂಪ, ಇನಿತೆಂದರೆ, ಇಷ್ಟು ವಿಧ ದಶರೂಪಗಳನ್ನು ದಶಕರಣಗಳಲಿ ತಿಳಿದು, ಎಂದರೆ. ಮತ್ಸ್ಯಾದಿರೂಪಗಳು, ಕರಣ, ತದಭಿಮಾನಿಗಳಿಗೂ ಸಹ ಕಾರ್ಯಪ್ರವರ್ತಕಗಳೆಂದೂ, ಮಾನಸಿಕ ಕಾರ್ಯ, ತದಭಿಮಾನಿ ಕಾರ್ಯ ಸಹ, ನಾರಾಯಣ ಪ್ರೇರಿತವೆಂದೂ ಚಿಂತಿಸಿ, ಅನುಭವಿಪ ವಿಷಯಗಳ ಎಂದರೆ, ವಿಷಯಾನುಭವ ಸುಖವನ್ನೂ ಸಹ, ಕೃಷ್ಣಾರ್ಪಣವೆನಲು, ಎಂದರೆ, ಸರ್ವವೂ ದೇವರ ಅಧೀನವೆಂದು ಒಪ್ಪಿದರೆ, ಒಪ್ಪಿಸಿದರೆ, ವೃಜಿನಾರ್ದನ, ಎಂದರೆ, ಪಾಪಪರಿಹಾರಕನಾದ ಉತ್ಕೃಷ್ಟ ಜಗತ್ಸ್ವಾಮಿಯು, ಕೈಕೊಂಬ ಎಂದರೆ, ಅಂಗೀಕರಿಸಿ ರಕ್ಷಿಸುವನೆಂದರ್ಥ.

**"ಸುಖಸ್ಯ ದುಃಖಸ್ಯ ಚ ರಾಜಸಿಂಹ ।**
**ಕರ್ತಾನಾನ್ಯೋ ವಾಸುದೇವಾದಿತಿಸ್ಮ ॥"**

**–ಎಂಬ ನಿರ್ಣಯಾರ್ಥವು** ಹೇಳಲ್ಪಟ್ಟಿತು.

**ಸಂಧಿಯ ಸಾರಾಂಶ:–**

ಈ ಸಂಧಿಯಲ್ಲಿ**"ಪಂಚಮಹಾಯಜ್ಞ"**ವೆಂಬ ಅತ್ಯುತ್ಕೃಷ್ಟ ಪ್ರಮೇಯವನ್ನೂ, **ಛಾಂದೋಗ್ಯೋಪನಿಷತ್ತಿನಲ್ಲಿ** ವರ್ಣಿಸಿರುವ **ಸರ್ವಸೃಷ್ಟಿಕ್ರಮ**ವೆಂಬ ಪರಮಾತ್ಮನ ಮಹಾಮಹಿಮೆಯನ್ನೂ ಹೇಳಿರುತ್ತಾರೆ. ಈ ವಿಷಯ

ದಲ್ಲಿ ಛಾಂದೋಗ್ಯೋಭಾಷ್ಯದಲ್ಲಿ **ಶ್ರೀಮದಾಚಾರ್ಯರು** ಪ್ರತಿಪಾದಿಸಿರುವ ಮಹಾಪ್ರಮೇಯಗಳನ್ನೆಲ್ಲಾ ವ್ಯಾಖ್ಯಾನಕಾರರು ಅತ್ಯುತ್ಕೃಷ್ಟ ರೀತಿಯಿಂದ ಬರೆದಿರುತ್ತಾರೆ. **"ಷೋಡಶಿ"**–ಎಂಬ ಗ್ರಂಥದಲ್ಲಿ ಬರೆದಿರುವ ಇಡೀ ವಿಚಾರದ ಪ್ರಮೇಯಗಳನ್ನೆಲ್ಲಾ ಈ ಸಂಧಿಯಲ್ಲಿ ತೋರಿಸಿರುತ್ತಾರೆ. ಶ್ರೀ ಪರಮಾತ್ಮನು ಒಬ್ಬನೇ ಆದಾಗ್ಯೂ, ನಾನಾ ರೂಪಗಳನ್ನೂ, ನಾನಾ ನಾಮಗಳನ್ನೂ ಧರಿಸಿ, ತನ್ನ ವಿಚಿತ್ರ ಮಹಿಮೆಯನ್ನು ಪರಿಪರಿಯಾಗಿ ತೋರಿಸುತ್ತಿರುವ ಮಹಿಮೆಗಳನ್ನೂ, **"ಪಂಚನಂರೀತುರಗದಂಡದಿ"**–ಎಂಬುದೇ ಮೊದಲಾದ ಪದ್ಯಗಳಲ್ಲಿ ವರ್ಣಿಸಿರುತ್ತಾರೆ.

ಶರೀರದ ಎಲ್ಲಾ ಭಾಗಗಳಲ್ಲಿ ನಿಂತು ವ್ಯಾಪಾರ ಮಾಡಿಸುವ ರೂಪಗಳನ್ನೂ, ಇಪ್ಪತ್ತುನಾಲ್ಕು ತತ್ತ್ವಗಳಲ್ಲಿರುವ ತತ್ವೇಶರುಗಳನ್ನೂ, ತನ್ನಿಯಾಮಕ ರೂಪಗಳನ್ನೂ, ಕಾಲನಿಯಾಮಕ ರೂಪಗಳು, ದ್ವಾದಶಪುಂಡ್ರಗತ ರೂಪಗಳು, ಮೊದಲಾದ ಬಹು ಪ್ರಮೇಯಗಳನ್ನು ಈ ಸಂಧಿಯಲ್ಲಿ ವಿವರಿಸುತ್ತಾರೆ. ॥೩೫॥

**॥ ಇಂತು, "ಗುರುಹೃದಯ ಪ್ರಕಾಶಿಕೆ"–ಎಂಬ ವಾಕ್ಯವಿವರಣ ಸಮೇತ ಶ್ರೀಮದ್ಧರಿಕಥಾಮೃತಸಾರ ಗ್ರಂಥದಲ್ಲಿ ಪಂಚಮಹಾಯಜ್ಞ ಸಂಧಿ ಎಂಬ ಆರನೆಯ ಸಂಧಿಗೆ ಮಂಗಳಂ ॥**

॥ ಶ್ರೀ ಕೃಷ್ಣಾರ್ಪಣಮಸ್ತು ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತ ಸಂಧಿಗತ ಕೊನೆಯ ಪದ್ಯವಾದ ಈ ೩೫ನೆಯ ಪದ್ಯದಿಂದ **ಶ್ರೀ ಮದ್ಧರಿಕಥಾಮೃತಸಾರ ಗ್ರಂಥರತ್ನದಲ್ಲಿ** ಷಷ್ಠಸಂಧಿಯಾದ **"ಪಂಚ ಮಹಾಯಜ್ಞ ಸಂಧಿ"**ಯನ್ನು ಉಪಸಂಹರಿಸುತ್ತಾರೆ ಜ್ಞಾನಿವರೇಣ್ಯರಾದ ಜಗನ್ನಾಥದಾಸರಾಯರು.

ಮನಸ್ಸಿನಲ್ಲಿ ಮೂಲರೂಪಿ ಶ್ರೀಮನ್ನಾರಾಯಣನೂ, ಆ ಮನಸ್ಸಿನ ನಿಯಂತ್ರಣಕ್ಕೆ ಒಳಪಟ್ಟು ಕೆಲಸಮಾಡುವ ಪಂಚಜ್ಞಾನೇಂದ್ರಿಯಗಳು ಮತ್ತು

ಪಂಚಕರ್ಮೇಂದ್ರಿಯಗಳು ಈ ದಶಕರಣಗಳಲ್ಲಿ ಮತ್ಸ್ಯಾದಿ ಕಲ್ಕಿ ಪರ್ಯಂತ ಶ್ರೀ ಪರಮಾತ್ಮನ ಸ್ವಾಭಿನ್ನಗಳಾದ ದಶಾವತಾರ ಭಗವದ್ರೂಪಗಳು ವಿದ್ಯಮಾನವಾಗಿದ್ದು, ಆಯಾಯ ಇಂದ್ರಿಯಾಭಿಮಾನಿ ದೇವತೆಗಳ ದ್ವಾರಾ. ಆಯಾಯಾ ಕರಣಗತ ತತ್ತ್ವವ್ಯಾಪಾರಗಳನ್ನು ಮೂಲರೂಪಿ ಶ್ರೀಮನ್ನಾರಾಯಣನೇ. ತಾನು ಬಿಂಬ ಕ್ರಿಯಾ ದ್ವಾರಾ ಮಾಡಿ ಮಾಡಿಸುತ್ತಿರುವನು ಎಂಬ ತತ್ತ್ವ ರಹಸ್ಯವನ್ನು ತಿಳಿಸುತ್ತಾರೆ.

ಇಂತು ಜಡವಾದ ಇಂದ್ರಿಯ ಗೋಳಕಗಳಲ್ಲಿಯೂ ಮತ್ತು ಆ ಗೋಳಕ ಗತ ಇಂದ್ರಿಯಗಳಲ್ಲಿ ಪರಮಾತ್ಮನು ಸ್ಥಿತನಾಗಿದ್ದಾನೆ. ಆಯಾಯಾ ಇಂದ್ರಿಯಾಭಿಮಾನಿ ದೇವತೆಗಳಲ್ಲಿ ಅಂತರ್ಯಾಮಿಯಾಗಿ ವಿದ್ಯಮಾನನಾಗಿದ್ದಾನೆ. ಅದೇ ಶ್ರೀ ಪರಮಾತ್ಮನು ಶಬ್ದ, ಸ್ಪರ್ಶ, ರೂಪ, ರಸ, ಗಂಧ ಮುಂತಾದ ವಿಷಯಗಳಲ್ಲಿ ಸ್ಥಿತನಾಗಿದ್ದಾನೆ. ಇಂದ್ರಿಯಗಳಿಗೆ ವಿಷಯಸನ್ನಿಕರ್ಷವನ್ನುಂಟುಮಾಡುವ ಅಗಮ್ಯಮಹಿಮನೂ ಆತನೇ. ಆ ವಿಷಯ ಸನ್ನಿಕರ್ಷಣದಿಂದ ಜನ್ಯವಾದ ವಿಷಯೋಪಭೋಗ ಸುಖಗಳನ್ನು ಈ ದೇಹವೆಂಬ ದೇವಮಂದಿರದಲ್ಲಿ ಆ ವಾಸವಾಗಿರುವ ಜೀವನ ಅನುಭವಕ್ಕೆ ತಂದುಕೊಡುವುದು ಜೀವಾಂತರ್ಯಾಮಿಯಾದ ಬಿಂಬರೂಪಿ ಆ ಪರಮಾತ್ಮನ ವ್ಯಾಪಾರವೇ! ಹೀಗೆ, ಇಂದ್ರಿಯಗೋಳಕಾಂತರ್ಗತ ಭಗವದ್ರೂಪಗಳಿಗೂ, ಕರಣಾಂತರ್ಗತ ಭಗವದ್ರೂಪಗಳಿಗೂ, ವಿಷಯ ಪ್ರೇರಕ ಭಗವದ್ರೂಪಗಳಿಗೂ ಆಯಾಯಾ ಇಂದ್ರಿಯಗಳಿಗೆ ವಿಷಯಸನ್ನಿಕರ್ಷವನ್ನುಂಟುಮಾಡುವ ಯೋಗ ಘಟಕನಾದ ಆ ಪರಮಾತ್ಮನ ಭಗವದ್ರೂಪಗಳಿಗೂ, ಇಂದ್ರಿಯಾಭಿಮಾನಿ ದೇವತಾಂತರ್ಗತ ಭಗವದ್ರೂಪಗಳಿಗೂ, ತತ್ತ್ವಾಂತರ್ಗತ ಭಗವದ್ರೂಪಗಳಿಗೂ ಸ್ವಬಿಂಬನಾದ ಮೂಲೇಶನಾಮಕ ಆ ಪರಮಾತ್ಮನಲ್ಲಿ ಐಕ್ಯಚಿಂತನಾ ಮಾಡುವ ಉಪಾಸನಾ ಕ್ರಮವನ್ನೇ ದಾಸರಾಯರು "ಕೃಷ್ಣಾರ್ಪಣವೆನಲು" ಎಂದು ತಿಳಿಸಿದ್ದಾರೆ. ಹೀಗೆ ಕೃಷ್ಣಾರ್ಪಣಬುದ್ಧಿಯಿಂದ ಅತ್ಯುತ್ತಮ ಜ್ಞಾನಾನುಸಂಧಾನಕ್ರಮದಿಂದ, ನಾವು ಇಂದ್ರಿಯಗಳ ದ್ವಾರಾ ನಿತ್ಯವೂ ಅನುಭವಿಸುತ್ತಿರುವ ವಿಷಯಸುಖಗಳನ್ನು ಸರ್ವನಿಯಾಮಕನಾದ ಆ ಬಿಂಬನ ಪಾದಾರವಿಂದಗಳಿಗೆ ಅರ್ಪಿಸಿದರೆ, ಆ ಸೇವೆಯನ್ನು ಕರುಣಾನಿಧಿಯಾದ ಪರ

ಮಾತ್ಮನು ಸ್ವೀಕರಿಸುವನು. ಸರ್ವಪಾಪಪರಿಹಾರಕನಾದ, ಚರಾಚರಾತ್ಮಕವಾದ ಈ ಜಗತ್ತಿನಲ್ಲಿ ಓತಪ್ರೋತವಾಗಿ ಸರ್ವತ್ರ ವ್ಯಾಪ್ತನಾಗಿರುವ ಆ ವಿಶ್ವವ್ಯಾಪಿಯಾದ ಸರ್ವೋತ್ತಮನಾದ ಜಗತ್ಸ್ವಾಮಿಯು (ಜಗನ್ನಾಥವಿಠ್ಠಲಾತ್ಮಕನು) ಸೇವೆಯನ್ನು ಸ್ವೀಕರಿಸಿ, ಜೀವರ ಸಮಸ್ತ ಪಾಪಗಳನ್ನೂ ಕ್ಷಾಳನಗೈದು ಸಂರಕ್ಷಿಸುವನು ಎಂಬದೇ ಈ ಪದ್ಯದ ಮುಖ್ಯಾಭಿಪ್ರಾಯವು.

ಏಕಾದಶೇಂದ್ರಿಯಗತ ಭಗವದ್ರೂಪಗಳ ಮತ್ತು ತತ್ತ್ವಕಾರ್ಯಗಳ ವಿವರಣೆಯನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ.

| ಕ್ರಮ ಸಂಖ್ಯೆ | ಏಕಾದಶೇಂದ್ರಿಯಗಳು | ಇಂದ್ರಿಯಗತ ಭಗವದ್ರೂಪ | ರಮಾರೂಪಗಳು | ತತ್ತ್ವಕಾರ್ಯ |
|---|---|---|---|---|
| ೧ | ಮನಸ್ಸು | ಮೂಲರೂಪಿ ಶ್ರೀಮನ್ನಾರಾಯಣ | ಶ್ರೀ ಲಕ್ಷ್ಮೀ | ಪಂಚಮನೋವೃತ್ತಿಗಳ ಕಾರ್ಯ |
| ೨ | ಶ್ರವಣೇಂದ್ರಿಯ | ಮತ್ಸ್ಯ | ವೇದಾ | ಶಬ್ದಗ್ರಹಣಕಾರ್ಯ |
| ೩ | ಆಲಿಗಳೆಂಬ ನೇತ್ರೇಂದ್ರಿಯ | ಕೂರ್ಮ | ವೇದವತೀ | ರೂಪಗ್ರಹಣ ವ್ಯಾಪಾರ |
| ೪ | ತ್ವಗಿಂದ್ರಿಯ | ವರಾಹ | ಧಾತ್ರೀ | ಸ್ಪರ್ಶಜ್ಞಾನಕಾರ್ಯ |
| ೫ | ರಸನೇಂದ್ರಿಯ | ನರಸಿಂಹ | ಮಹಾಲಕ್ಷ್ಮೀ | ಪದಾರ್ಥಗಳ ರುಚಿಯ ಅನುಭವ |
| ೬ | ನಾಸಿಕ ದ್ವಾರಗಳಲ್ಲಿ | ಬಾಲವಟು ವಾಮನ | ಸುಖಾ | ಗಂಧಗ್ರಹಣ ಕಾರ್ಯ |
| ೭ | ಬಾಯಿಯಲ್ಲಿ | ಪರಶುರಾಮ | ಹರಿಣೀ | ವಾಗ್ವ್ಯಾಪಾರ |
| ೮ | ಹಸ್ತದಲ್ಲಿ | ಶ್ರೀರಾಮ | ಸೀತಾ | ದಾನ–ಸ್ವೀಕಾರ ಕಾರ್ಯ |
| ೯ | ಪಾದದಲ್ಲಿ | ಶ್ರೀಕೃಷ್ಣ | ರುಕ್ಮಿಣೀ | ಗಮನಾಗಮನ ವ್ಯಾಪಾರ |

| | | | | |
|---|---|---|---|---|
| ೧೦ | ಪಾಯುತತ್ತ್ವದಲ್ಲಿ (ಗುದೇಂದ್ರಿಯ) | ಬುದ್ಧ | ದೇವಕೀ | ಮಲವಿಸರ್ಜನಾಕ್ರಿಯೆ |
| ೧೧ | ಉಪಸ್ಥತತ್ತ್ವದಲ್ಲಿ (ಮೇಢ್ರ) | ಕಲ್ಕಿ | ಪ್ರಭಾ | ಮೂತ್ರ ಹಾಗೂ ರೇತೋ ವಿಸರ್ಜನಾ ಕಾರ್ಯ |

ಇಂತು, ಏಕಾದಶೇಂದ್ರಿಯಗತ ಭಗದ್ರೂಪಗಳು.✱ ತತ್ತ್ವಕಾರ್ಯದ ವಿವರಣೆಗಳನ್ನು ಗುರೂಪದೇಶ ದ್ವಾರಾ ತಿಳಿದು, ನಿತ್ಯೋಪಾಸನೆ ಮಾಡುತ್ತಿರುವ ಭಾಗವತೋತ್ತಮರ ಸಕಲ ದುರಿತಗಳನ್ನೂ ಪರಿಹರಿಸಿ, ಆ **ಜಗನ್ನಾಥವಿಠ್ಠಲ** ಸ್ವಾಮಿಯು ನಿರಂತರದಲ್ಲಿಯೂ ಅವರ ಬೆಂಬಲಿಗನಾಗಿದ್ದು, ಸಂರಕ್ಷಿಸುವನು. ॥೩೫॥

**॥ ಇಂತು ಪಂಚಮಹಾಯಜ್ಞ ಸಂಧಿಯ ವ್ಯಾಖ್ಯಾನಗಳ ಸಾರರೂಪವಾದ "ಸರ್ವವ್ಯಾಖ್ಯಾನಸಾರ ಸಂಗ್ರಹ"ವು ಪರಿಸಮಾಪ್ತಿಯಾಯಿತು ॥**

**॥ ಶ್ರೀ ಜಗನ್ನಾಥವಿಠ್ಠಲಾರ್ಪಣಮಸ್ತು ॥**

**ಮುಂದಿನ ಪ್ರಕಟಣೆ :**

**ಸಂಪುಟ (೭) ಪಂಚತನ್ಮಾತ್ರಸಂಧಿ (೭ನೆಯ ಸಂಧಿ)**